ಈ ದಾರಿಯಲ್ಲಿ ನಾನು ಸಿರುಮಭೂಪಾಲನನ್ನು ಕುರಿತು ಶೋಧಿಸಿ, ಪರಿಷ್ಕರಿಸಿ ಆಗಾಗ ಪ್ರಕಟಿಸಿದ ಮೂರು ಕೃತಿಗಳನ್ನು (ಸಿರುಮಣ ನಾಯಕನ ಸಾಂಗತ್ಯ, ಸಿರುಮನ ಚರಿತೆ, ಗೊಲ್ಲಸಿರುಮನ ಚರಿತೆ)ಇಲ್ಲಿ ಸಮಗ್ರ ಸಂಪುಟವಾಗಿ ಬೆಳಕಿಗೆ ತರುತ್ತಲಿದ್ದೇನೆ. ಕರ್ನಾಟಕದಲ್ಲಿ ಒಂದು ರಾಜಮನೆತನವನ್ನು ಕುರಿತು ಕುಮಾರರಾಮನನ್ನು ಬಿಟ್ಟರೆ ಹೆಚ್ಚು ಅಂದರೆ ಮೂರು ಕೃತಿಗಳು ಹುಟ್ಟಿದುದು ಸಿರುಮನನ್ನು ಕುರಿತು. ಇದು, ಇವನ ಯುದ್ಧ ಆ ಪ್ರದೇಶದ ಮೇಲೆ ಬೀರಿದ ಪ್ರಭಾವದ ದ್ಯೋತಕವಾಗಿದೆ. ಸ್ವಾಭಿಮಾನ ಕಾರಣವಾಗಿ ಚಕ್ರವರ್ತಿ ಮನೆತನದೊಂದಿಗೆ ಹೋರಾಡಿ ಮಡಿದ, ಯುದ್ಧದ ಕೊನೆಯ ಘಟ್ಟದಲ್ಲಿ ಸೋಲು ನಿಶ್ಚಯವೆನಿಸಲು, ಅರಮನೆಗೆ ಬೆಂಕಿಹಚ್ಚಿ, ಹೆಂಡಿರುಮಕ್ಕಳನ್ನು ಕೊಂದು ಅದರಲ್ಲಿ ಹಾಕಿ, ಆಮೇಲೆ ತಾನೂ ಬೆಂಕಿಗೆ ಆಹುತಿಯಾದ ಘಟನೆಯನ್ನೊಳಗೊಂಡಿದೆ, ಈ ಕೃತಿ. ಈ ಪಾಳೆಯಗಾರ ಮನೆತನದ ಚರಿತ್ರೆ ಕೇವಲ ನಮ್ಮ ರಾಜಕೀಯ ಇತಿಹಾಸದ ಭಾಗವಾಗಿ ಉಳಿಯದೆ, ಸಂಸ್ಕೃತಿ ಭಾಗವಾಗಿಯೂ ಬೆಳೆದಿದೆ. ಆ ಕಾಲದ ರಾಜಕೀಯ ಚಟುವಟಿಕೆಗಳ, ಕೋಟೆ–ಕೊತ್ತಳ–ಯುದ್ಧ ಇತ್ಯಾದಿ ವಿಷಯಗಳ, ಸತಿಪದ್ಧತಿ–ವೇಳವಾಳಿಮರಣ ಮೊದಲಾದವುಗಳ ಬಗೆಗಿನ ಈ ವರೆಗಿನ ನಮ್ಮ ತಿಳಿವಳಿಕೆಯನ್ನು ಇದು ವಿಸ್ತಾರಗೊಳಿಸುತ್ತದೆ. ಒಟ್ಟಾರೆ, ರಾಜಕೀಯಕ್ಕೆ ರಾಜಕೀಯ, ಸಂಸ್ಕೃತಿಗೆ ಸಂಸ್ಕೃತಿಯಾಗಿರುವ ಈ ಮೂರು ಕೃತಿಗಳ ಸಂಯುಕ್ತ ಸಂಪುಟವಾಗಿರುವ 'ಸಿರುಮನ ಸಾಂಗತ್ಯಗಳು' ಸಿರುಮನ ಅಭ್ಯಾಸಿಗಳಿಗೆ ಏಕಕಾಲಕ್ಕೆ ಅಪಾರ ಪ್ರಮಾಣದ ಆಕರ ಒದಗಿಸುವುದೆಂದು ಬೇರೆ ಹೇಳಬೇಕಿಲ್ಲ.

ನನ್ನ ಇಂಥ ಕೃತಿಗಳ ಪ್ರಕಟಣೆಗೆ ಆಶ್ರಯವಾಗಿರುವ ಬೆಂಗಳೂರಿನ ಸಪ್ನ ಬುಕ್‌ಹೌಸ್ ಈಗ ಈ ಕೃತಿಯನ್ನೂ ಪ್ರಕಟಿಸುತ್ತಿದೆ. ಈ ಸಂಸ್ಥೆಯ ಒಡೆಯರಾದ ಶ್ರೀ ನಿತಿನ್ ಶಹಾ ಮತ್ತು ಅಲ್ಲಿಯ ಕನ್ನಡ ವಿಭಾಗದ ಸಂಚಾಲಕರಾದ ಶ್ರೀ ದೊಡ್ಡೇಗೌಡ ಅವರ ಪ್ರೀತಿ, ವಿಶ್ವಾಸ, ಅಭಿಮಾನಗಳಿಗೆ ಕೃತಜ್ಞನಾಗಿದ್ದೇನೆ. ಈ ಪುಸ್ತಕ ರೂಪಗೊಳ್ಳುವಲ್ಲಿ ನೆರವಾದ ಡಾ। ಹನುಮಂತ ಮೇಲಿನಮನಿ ಅವರಿಗೂ ಧನ್ಯವಾದಗಳು.

ಧಾರವಾಡ

–ಎಂ. ಎಂ. ಕಲಬುರ್ಗಿ

❖❖

ಸಮಗ್ರ ವೀರಶೈವ ಅಪ್ರಕಟಿತ ಪ್ರಾಚೀನ ಸಾಹಿತ್ಯ ಪ್ರಕಟನಾ ಮಾಲೆ : ೬

ಸಿದ್ಧಕವಿ ವಿರಚಿತ

ಸಿರುಮಣನಾಯಕನ ಸಾಂಗತ್ಯ

ಸಂಪಾದಕರು

ಡಾ. ಎಂ. ಎಂ. ಕಲಬುರ್ಗಿ

ವೀರಶೈವ ಅಧ್ಯಯನಸಂಸ್ಥೆ

ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ

೧೯೮೩



ಕುಮಾರಮಲ್ಲಯ್ಯನ ಕಟ್ಟಿಗೆ ವಿಗ್ರಹ



ಶ್ರೀ ರಾಮಪುರದ ಐತಿಹಾಸಿಕತೆಯನ್ನು ಸಾರುವ ಒಂದು ಕೊತ್ತಳ



ಶ್ರೀರಾಮಪುರದ ಕುಮಾರರಾಮಯ್ಯನ ಗುಡಿ



ಕುಮಾರರಾಮಯ್ಯನ ಗುಡಿಯಲ್ಲಿ ಸ್ಥಾಪಿತವಾದ ವೀರಗಲ್ಲುಗಳು

ಪ್ರಸ್ತಾವನೆ

ಪ್ರಾಚೀನ ಕನ್ನಡ ಕೃತಿಗಳ ಪ್ರಕಟಣ-ಅಧ್ಯಯನಕಾರ್ಯ ಮತ್ತು ರಮ್ಯ ಸಾಹಿತ್ಯದ ಸೃಷ್ಟಿ-ಪ್ರಸಾರಕಾರ್ಯಗಳು ನಮ್ಮ ನಾಡಿನಲ್ಲಿ ಏಕಕಾಲಕ್ಕೆ (೨೦ನೆಯ ಶತಮಾನ) ಪ್ರಾರಂಭವಾದವು. ಈ ರಮ್ಯ ಮನೋಭಾವದಿಂದಾಗಿ, ಪ್ರಾಚೀನ ರಸವತ್ತಾದ ಕೃತಿಗಳನ್ನು ಪ್ರಕಟಿಸುವ, ಅವುಗಳನ್ನು ರಸದೃಷ್ಟಿಯಿಂದ ಅಭ್ಯಸಿಸುವ ಒಲವು ನಮ್ಮಲ್ಲಿ ಬೆಳೆದು, ಚಾರಿತ್ರಿಕ ಕೃತಿಗಳನ್ನು ಪ್ರಕಟಿಸುವ, ಅವುಗಳನ್ನು ಶುದ್ಧ ಚಾರಿತ್ರಿಕ ದೃಷ್ಟಿಯಿಂದ ಅಭ್ಯಸಿಸುವ ಒಲವುಗಳು ಕುಂಠಿತವಾದವು. ಪ್ರಕಟವಾದ ಒಂದೆರಡು ಚರಿತ್ರೆಗಳನ್ನು ರಸದೃಷ್ಟಿಯಿಂದ ಅಭ್ಯಸಿಸುವಲ್ಲಿ, ಚಾರಿತ್ರಿಕ ಅಧ್ಯಯನ ಮತ್ತೂ ಅಲಕ್ಷಿತವಾಯಿತು. ಈ ಕೊರತೆಯನ್ನು ಇಂದು ನಾವು ತುಂಬಿಕೊಳ್ಳಬೇಕಾಗಿದೆ.

ಹತ್ತು ವರ್ಷಗಳ ಹಿಂದೆ ಕರ್ನಾಟಕ ಕವಿಚರಿತೆ ಮತ್ತು ಕನ್ನಡ ಹಸ್ತಪ್ರತಿಸೂಚಿಗಳನ್ನು ಓದುತ್ತಿರುವಾಗ, ನಮ್ಮ ಕಾವ್ಯಗಳನ್ನು ಸಾಹಿತ್ಯೇತರ ದೃಷ್ಟಿಯಿಂದ ಅಭ್ಯಸಿಸುವುದು ಮತ್ತು ಸಾಹಿತ್ಯೇತರ ಕೃತಿಗಳನ್ನು ಅದರಲ್ಲಿಯೂ ಚಾರಿತ್ರಿಕ ಕೃತಿಗಳನ್ನು ಪ್ರಕಟಿಸುವುದು ತೀರ ಅವಶ್ಯವೆನಿಸಿತು. ಈ ವಿಚಾರಗಳಿಂದ ಪ್ರೇರಿತನಾಗಿ "ಕರ್ನಾಟಕದ ಕೈಫಿಯತ್ತುಗಳ ಶೋಧ ಮತ್ತು ಪ್ರಕಟನ ಯೋಜನೆ"ಯನ್ನು ಕೈಗೆತ್ತಿಕೊಳ್ಳುವುದರ ಜೊತೆಗೆ "ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ", "ನಿಂಬ ಸಾಮಂತಚರಿತೆ"ಗಳನ್ನು ಪ್ರಟಿಸಿದ ಬಳಿಕ ಪಾಳೆಯಗಾರ ಸಿರುಮನನ್ನು ಕುರಿತ ಪ್ರಾಚೀನ ಕೃತಿಗಳನ್ನು ಪ್ರಕಟಿಸುವ ಹಂಬಲ ಮೂಡಿತು. ಇದರ ಫಲ "ಸಿರುಮಣನಾಯಕನ ಸಾಂಗತ್ಯ".

ಸಿರುಮನನ್ನು ಕುರಿತ ಕೃತಿಗಳು

ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ಕುಮಾರರಾಮನನ್ನು ಕುರಿತು ಹಲವು ಕಾವ್ಯಗಳು ಹುಟ್ಟಿಕೊಂಡಿವೆ. ಇಂತಹ ಇನ್ನೊಂದು ಅಪೂರ್ವ ಉದಾಹರಣೆ, ಸಿರುಮನನ್ನು ಕುರಿತ ಕಾವ್ಯಸಮೂಹ. ನಮಗೆ ತಿಳಿದ ಮಟ್ಟಿಗೆ ಈ ವರೆಗೆ ಸಿರುಮನನ್ನು ಕುರಿತು -

೧. ಸಿರುಮಣನಾಯಕನ ಸಾಂಗತ್ಯ- ಸಿದ್ಧಕವಿ-ಸಂಧಿ ೫, ಪದ್ಯ ೬೨೬.

೨. ಸಿರುಮನ ಚರಿತೆ-ಕೆಂಚಿಶೆಟ್ಟಿ ಸುತ ರಾಮ-ಸಂಧಿ ೧೩, ಪದ್ಯ ೧೦೬೫

೩. ಗೊಲ್ಲ ಸಿರುಮನ ಚರಿತೆ - ಮಲ್ಲಕವಿ-ಸಂಧಿ ೬, ಪದ್ಯ ೧೦೫೩.

ಹೀಗೆ ಮೂರು ಕೃತಿಗಳು ಸಿಗುತ್ತಿದ್ದು, ಅವುಗಳ ವಿವರ ಹೀಗಿದೆ:

ಮೊದಲನೆಯ ಕೃತಿಯ ತಾಳೆಗರಿ ಪ್ರತಿ ಮದ್ರಾಸ ಓರಿಯೆಂಟಲ್ ಮ್ಯಾನುಸ್ಕ್ರಿಪ್ಟ್ ಲೈಬ್ರರಿಯಲ್ಲಿದೆ. ೧೯೩೬ರಲ್ಲಿ ಸಿದ್ಧಪಡಿಸಿದ ಇದರ ನಕಲು ಕಾಗದಪ್ರತಿ ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿಭಾಂಡಾರದಲ್ಲಿದೆ. ಕವಿಚರಿತೆಕಾರರೂ ಈ ಕೃತಿಯನ್ನು ಉಲ್ಲೇಖಿಸಿದ್ದಾರೆ.

ಎರಡನೆಯ ಕೃತಿಯ ಕಾಗದಪ್ರತಿ (?) ಶೇಕದಾರ ಶ್ರೀ. ಜಿ. ಎಂ. ಬಸವರಾಜಯ್ಯನವರ ಸಹಾಯದಿಂದ ಶ್ರೀ ಹುಲ್ಲೂರ ಶ್ರೀನಿವಾಸ ಜೋಯಿಸರಿಗೆ ಲಭಿಸಿದ್ದಿತು. ಇವರು ಸಾಹಿತ್ಯ ಪರಿಷತ್ತಿನ ಮೂಲಕ ಇದರ ಗದ್ಯಾನುವಾದವನ್ನು ಪ್ರಕಟಿಸಿದ್ದಾರೆ(೧೯೫೧). ಆದರೆ ಗದ್ಯಾನುವಾದ ಮಾಡಿದ ಬಳಿಕ ಅದರ ಒಡೆಯರಿಗೆ ಹಿಂದಿರುಗಿಸಿದ ಮೂಲ ಹಸ್ತಪ್ರತಿ ಇಂದು ಲಭ್ಯವಿಲ್ಲ.

ಮೂರನೆಯ ಕೃತಿಯ ತಾಳೆಯಪ್ರತಿ ಶ್ರೀ. ಎಸ್. ಶಿವಣ್ಣ(ಬೆಂಗಳೂರು) ಅವರ ವಶದಲ್ಲಿದೆ. ಇದರ ಇನ್ನೊಂದು ತಾಳೆಪ್ರತಿ ಉಸ್ಮಾನಿಯಾ ವಿಶ್ವವಿದ್ಯಾಲಯದ ಹಸ್ತಪ್ರತಿ ಭಾಂಡಾರದಲ್ಲಿದೆ.

ಸಿರುಮನನ್ನು ಕುರಿತ ಕೃತಿನಾಮಗಳು-ಕವಿನಾಮಗಳು

ಸಿರುಮನನ್ನು ಕುರಿತ ಈ ಮೂರು ಕೃತಿಗಳಿಗೆ ಆಯಾ ಕವಿಗಳು ಇಟ್ಟ ಹೆಸರುಗಳಾವವು? ಎಂಬುದು ಸಂದೇಹ. ಕೃತಿಗಳ ಒಡಲಲ್ಲಿ ಇದಕ್ಕೆ ಗಟ್ಟಿ ಆಧಾರಗಳಿಲ್ಲ. ಒಂದನೆಯ ಕೃತಿಯ ವಸ್ತು-ಪ್ರಕಾರಗಳನ್ನಾಧರಿಸಿ, ಕವಿಚರಿತೆಕಾರರು ಇದನ್ನು 'ಸಿರುಮನ ಸಾಂಗತ್ಯ' ಎಂದು ಕರೆದಿದ್ದಾರೆ.[೧] ಆದರೆ ಹಸ್ತಪ್ರತಿಯ ಪ್ರಾರಂಭದಲ್ಲಿ ಲಿಪಿಕಾರನು ಬರೆದ 'ಸಿರುಮಣನಾಯಕನ ಸಾಂಗತ್ಯ' ಎಂಬುದನ್ನೇ ನಾವು ಸ್ವೀಕರಿಸಿದ್ದೇವೆ. ಎರಡನೆಯ ಕೃತಿಯ ನಿಜನಾಮ ಅದು ಸಿಗುವ ವರೆಗೆ ಸಂದೇಹ. ಮೂರನೆಯ ಕೃತಿಗೂ ಕವಿ ನಿರ್ದಿಷ್ಟ ಹೆಸರು ಬಳಸಿಲ್ಲವಾದುದರಿಂದ, ಲಿಪಿಕಾರ ಹಸ್ತಪ್ರತಿಯ ಆರಂಭದಲ್ಲಿ ಬಳಸಿದ "ಗೊಲ್ಲಸಿರುಮನ ಚರಿತೆ"[೨] ಎಂಬುದನ್ನೇ ಗ್ರಹಿಸುವುದು ಅನಿವಾರ್ಯವಾಗಿದೆ.

ಸಿರುಮನನ್ನು ಕುರಿತು ಈ ವರೆಗೆ ಲಭಿಸಿದ ಮೂರು ಕೃತಿಗಳ ಕವಿ ವಿವೇಚನೆ ಇಲ್ಲಿ ಅವಶ್ಯವೆನಿಸಿದೆ. ಹುಲ್ಲೂರ ಅವರಿಗೆ ಲಭಿಸಿದ 'ಸಿರುಮನ ಚರಿತೆ'ಯ ಕರ್ತೃ "ಪಂಚಮಕುಲದ ಕೆಂಚಿಸೆಟ್ಟಿಯ ಸುತ ರಾಮ"ನೆಂದು ವ್ಯಕ್ತವಾಗಿಯೇ ಹೇಳಲಾಗಿದೆ. ಆದರೆ 'ಸಿರುಮಣನಾಯಕನ ಸಾಂಗತ್ಯ'ದ ಅಂತ್ಯದಲ್ಲಿ ಮತ್ತು 'ಗೊಲ್ಲ ಸಿರುಮನ ಚರಿತೆ'ಯ ಆದಿಯಲ್ಲಿ

ಉಸಿರೊಗ್ಗಿನ ಶಿವಶರಣರೆಲ್ಲರ ಶಿಶು।
ಕುಶಲ ಶಿವಲೀಲೆ ವೀರಯ್ಯನ।
ರಸಿಕನ ಮಗ ಮಲ್ಲನಿಂತು ಪೇಳಿದನಿದ।
ಹೊಸತಾಗಿ ಸಿರುಮನ ಕೃತಿಯು॥

---

೧. ಮದ್ರಾಸ ಪ್ರಾಚ್ಯವಿದ್ಯಾಸಂಸ್ಥೆಯ ಹಸ್ತಪ್ರತಿ ಸೂಚಿ ಮತ್ತು ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಸೂಚಿಗಳಲ್ಲಿಯೂ "ಸಿರುಮನ ಸಾಂಗತ್ಯ" ಎಂದೇ ಕರೆಯಲಾಗಿದೆ.

೨. ಶಿವಣ್ಣನವರ ವಶದಲ್ಲಿಯ ಹಸ್ತಪ್ರತಿಯ ಅಂತ್ಯದಲ್ಲಿ ಲಿಪಿಕಾರ 'ಗೊಲ್ಲ ಸಿರುಮ ಸಾಂಗತ್ಯ' ಎಂದು ಕರೆದಿದ್ದಾನೆ. 'ಹೈ' ಪ್ರತಿಯ ಆದಿಯಲ್ಲಿ "ಯಲಹಂಕ(?) ಬೂದಿಹಾಳ ಸಿರುಮಣನಾಯಕ ಸಾಂಗತ್ಯ" ಎಂದು ಕರೆಯಲಾಗಿದೆ.

ಎಂಬ ಪದ್ಯ ಕಂಡು ಬರುತ್ತದೆ. ಹೀಗಾಗಿ ಈ ಎರಡೂ ಗ್ರಂಥಗಳನ್ನು ಒಬ್ಬನೇ ಬರೆದನೋ, ಒಂದರಲ್ಲಿ ಇದು ಪ್ರಕ್ಷಿಪ್ತ ಪದ್ಯವಾಗಿ ಸೇರಿಕೊಂಡಿತೋ ಎಂಬ ಸಂದೇಹ ಹುಟ್ಟುತ್ತದೆ. ಆದರೆ ಸಿರುಮಣನಾಯಕನ ಸಾಂಗತ್ಯದ ಅಂತ್ಯದಲ್ಲಿ ಈ ಪದ್ಯವಿದ್ದರೆ ಆದಿಯಲ್ಲಿ "ಭುವನವರಿಯೆ ಗೊಲ್ಲ ಸಿರುಮನ ಕೃತಿಯನು ಪವಣಿಸಿ ಸಿದ್ಧನೊರೆದನು" ಎನ್ನುತ್ತ ಕರ್ತೃನಾಮವನ್ನು 'ಸಿದ್ಧ' ಎಂದು ಸ್ಪಷ್ಟಪಡಿಸಲಾಗಿದೆ. "ಗೊಲ್ಲ ಸಿರುಮನ ಚರಿತೆ"ಯಲ್ಲಿ ಮೇಲಿನ ಪದ್ಯವಲ್ಲದೆ, 'ಶಿವಲೀಲೆ ವೀರನ ಮಗ ಮಲ್ಲೇಶ' ಎಂಬ ಉಲ್ಲೇಖವೂ ಇದೆ. ಹೀಗಾಗಿ ೧ನೆಯ ಕೃತಿಯ ಕರ್ತೃ 'ಸಿದ್ಧಕವಿ'ಯೆಂದೂ, ೨ನೆಯ ಕೃತಿಯ ಕರ್ತೃ 'ಮಲ್ಲಕವಿ'ಯೆಂದೂ ಇಟ್ಟುಕೊಳ್ಳಬಹುದು.

ಸಿದ್ಧಕವಿ

ಸಿದ್ಧಕವಿಯ ಚರಿತ್ರೆಗೆ ಸಂಬಂಧಿಸಿದ ಅಂಶಗಳು ಈ ಕೃತಿಯಲ್ಲಾಗಲೀ, ಬೇರೆ ಕೃತಿಯಲ್ಲಾಗಲೀ ಸಿಗುವುದಿಲ್ಲ. ಬಹುಶಃ ಬೂದಿಹಾಳದ ನಿರಾಸೆಮಠ, ವೀರೇಶ ದೇವಾಲಯ, ಬಸವ ದೇವಾಲಯ, ಕೋಟೆ-ಕೊತ್ತಳಗಳನ್ನು ಸೂಚಿಸುವುದರಿಂದ ಈತ ಈ ಗ್ರಾಮದವನಾಗಿರಬೇಕು. ಕವಿಚರಿತೆಕಾರರ ಹೇಳಿಕೆಯಂತೆ ಈತನ ಕಾಲ ಸು. ೧೭೦೦ ಎಂದು ಈಗಿನ ಮಟ್ಟಿಗೆ ಇಟ್ಟುಕೊಳ್ಳಬಹುದು. 'ಶಿವಕವಿಗಳ ಭೃತ್ಯ' ಎಂದು ಕರೆದುಕೊಂಡಿರುವ ಈತ ವೀರಶೈವನೆಂಬುದು ಸತ್ಯ.

ಸಿದ್ಧಕವಿಯ ಸಿರುಮಣನಾಯಕನ ಸಾಂಗತ್ಯ

'ಸಿರುಮಣನಾಯಕನ ಸಾಂಗತ್ಯ' ಹೆಸರೇ ಸೂಚಿಸುವಂತೆ ಸಿರುಮ ಹೆಸರಿನ ಪಾಳೆಗಾರನ ಯುದ್ಧ ಘಟನೆಯನ್ನೊಳಗೊಂಡಿದೆ. ವಿಜಯನಗರದ ಸಂಗಮ ಮನೆತನದ ವಿರೂಪಾಕ್ಷನ ಮಗ ಪ್ರೌಢರಾಯನಲ್ಲಿ ಸಾಳುವ ಮನೆತನದ ಗುಂಡ ಸೇನಾಪತಿಯಾಗಿದ್ದನು; ಗೊಲ್ಲ ಜಾತಿಯ ಕಾಚ ದ್ವಾರಪಾಲಕನಾಗಿದ್ದನು. ಒಂದುದಿನ ಕಾಚನಿಗೆ ಬಾಗಿಲು ಕಾಯಲು ಹೇಳಿ, ಪ್ರೌಢರಾಯ ಅರಮನೆಯಲ್ಲಿ ವಿಶ್ರಾಂತಿ ಪಡೆಯುತ್ತಲಿದ್ದ. ಆ ಸಮಯಕ್ಕೆ ಆಗಮಿಸಿದ ಗುಂಡನನ್ನು ಕಾಚ ಕೈಯಲ್ಲಿಯ ಕೋಲನ್ನು ಚಾಚಿ ತಡೆದ. ಇದರಿಂದ ಕ್ರೋಧತಪ್ತನಾದ ಗುಂಡ "ಕೈ ತೆಗೆಯದಿದ್ದರೆ ಅದನ್ನು ಕಡಿದು ಹಾಕುವೆ" ಎಂದ. "ಈ ಉದ್ಧಟಮಾತುಗಳನ್ನಾಡಿದರೆ ಬಾಯ ಹಲ್ಲು ಕಳೆವೆ" ಎಂದು ಉತ್ತರಿಸಿದ, ಕಾಚ. ಇಬ್ಬರಿಗೂ ಕಲಹ ಪ್ರಾರಂಭವಾಯಿತು. ಈ ಕಲಹ ಕೋಲಾಹಲದಿಂದ ಎಚ್ಚತ್ತ ಪ್ರೌಢರಾಯ ಹೊರಗೆ ಬಂದು ಅವರಿಬ್ಬರ ಪ್ರತಿಜ್ಞಾವಾಕ್ಯಗಳಿಗೆ ತಲೆದೂಗಿದ. "ಬಯಲಲ್ಲಿ ಅಲ್ಲ, ನೆಲದಲ್ಲಿ ತೋಡಿದ ಹಗೆಯಲ್ಲಿ ಇಳಿದು ಎದುರಾಳಿಯನ್ನು ಎದುರಿಸುವೆ" ಎಂದು ನುಡಿದ ಕಾಚನ ಸೂಚನೆಗೆ ಕೌತುಕಪಟ್ಟು, ಅವರಿಬ್ಬರನ್ನೂ ಹಗೆಯಲ್ಲಿ ಇಳಿಸಿದ. ಹೋರಾಟ ನಡೆದು ಕೊನೆಗೆ ಗುಂಡರಾಜನ ಹಲ್ಲುಗಳನ್ನು ಕಾಚ ಕಿತ್ತಿದ. ಕಾಚನ ಈ ಪರಾಕ್ರಮಕ್ಕೆ ಸಂತುಷ್ಟನಾದ ಅರಸು ಬೇಕಾದ ವರವನ್ನು ಕೇಳೆನಲು "ನಾನು ಕಿತ್ತಿದ ಹಲ್ಲುಗಳನ್ನು ಮಾತ್ರ ಕೊಡು" ಎಂದು ಕಾಚ ಬೇಡಿಕೊಂಡ. ಅರಸ ಇನ್ನೂ ಸಂತುಷ್ಟನಾಗಿ ಆ ಹಲ್ಲುಗಳ ಜೊತೆಗೆ ಸೂಜಿಗಲ್ಲು ಹೆಸರಿನ ದುರ್ಗವನ್ನು, ಆ ಪರಿಸರದ ಪ್ರದೇಶವನ್ನು ನೀಡಿದ. ಕಾಚನಾಯಕ ಈ ದುರ್ಗಕ್ಕೆ ಅಧಿಪತಿಯಾಗಿ ರಾಜ್ಯಾಧಿಪತ್ಯವನ್ನು ನಡೆಸಿದ. ಪಡೆದು ತಂದ ಹಲ್ಲನ್ನು ತಾನು ಮೆಟ್ಟುತ್ತಲಿದ್ದ ಕೆರವಿನಲ್ಲಿಟ್ಟು ಸಂಚರಿಸುತ್ತಲಿದ್ದ.

ಗಂಡು ಸಂತಾನವಿಲ್ಲದ ಪ್ರೌಢರಾಯ ಗುಂಡರಾಜನ ಪುತ್ರ ನರಸಿಂಹನನ್ನು ಮಗನಂತೆ ಸಲುಹಿ ತನ್ನ ತರುವಾಯ ವಿಜಯನಗರ ಸಿಂಹಾಸನಕ್ಕೆ ಪಟ್ಟಗಟ್ಟಿಸಿದ. ಪೆನುಗೊಂಡೆಯಿಂದ ರಾಜ್ಯವಾಳುತ್ತಲಿದ್ದ ನರಸಿಂಹನ ಕೈಕೆಳಗೆ ಪಾಳೆಯಗಾರನಾಗಿ ಕಾಚನ ಮಗ ಸಿರುಮ ಬೂದಿಹಾಳು ಕೋಟೆ ಕಟ್ಟಿಸಿ, ಆ ರಾಜಧಾನಿಯಿಂದ ರಾಜ್ಯವಾಳುತ್ತಲಿದ್ದ. ತಂದೆ ಮೆಟ್ಟಿದ ಕೆರವನ್ನು ತಾನು ಮೆಟ್ಟಬಾರದೆಂದು ಸಿರುಮ ಅದರಲ್ಲಿಯ ಹಲ್ಲುಗಳನ್ನು ಪೀಕದಾನಿಯಲ್ಲಿಟ್ಟು ಉಗುಳುತ್ತಲಿದ್ದ.

ಒಂದು ದಿನ ಸಿರುಮ ಮಿಡಿಗೇಶಿ ಪಟ್ಟಣದ ಗಂಗಯ್ಯನಿಗೆ ಕಾಣಿಕೆ ಕೇಳಿ ದೂತನನ್ನು ಅಟ್ಟಿದ. ಇದರಿಂದ ಗಂಗಯ್ಯ ಸಿಟ್ಟಿಗೆದ್ದು ಹಿರಿಯೂರ ಕಸವಿನಾಯಕನೊಂದಿಗೆ ಪೆನುಗೊಂಡೆಗೆ ಹೋಗಿ, ಅರಸು ನರಸಿಂಹನ ಮುಂದೆ ಬೂದಿಹಾಳ ಸಿರುಮ ಮತ್ತು ಬಾಗೂರ ಗೋವಿಂದ ಇವರ ಬಗ್ಗೆ ಚಾಡಿ ಹೇಳಿದ. ಇದರಿಂದ ಸಿಟ್ಟಿಗೆದ್ದ ನರಸಿಂಗರಾಯ ಸಿರುಮನ ಮೇಲೆ ಯುದ್ಧ ಸಾರಿದ.

ಇದು ಸಿರುಮನ ಪೂರ್ವಜರ ಚರಿತ್ರೆ ಮತ್ತು ಯುದ್ಧಕ್ಕೆ ಕಾರಣವಾದ ಹಿನ್ನೆಲೆ. ಪ್ರಸ್ತುತ ಕಾವ್ಯದಲ್ಲಿಲ್ಲದ ಈ ವಿಷಯ ಮೇಲೆ ಸೂಚಿಸಿರುವ 'ಗೊಲ್ಲ ಸಿರುಮನ ಚರಿತ್ರೆ' ಎಂಬ ಬೇರೊಂದು ಸಾಂಗತ್ಯ ಕೃತಿಯಲ್ಲಿ ಕಂಡುಬರುತ್ತದೆ. ಇಲ್ಲಿಂದ ಮುಂದಿನ ಯುದ್ಧ ಚಟುವಟಿಕೆ ಮಾತ್ರ 'ಸಿರುಮಣನಾಯಕನ ಸಾಂಗತ್ಯ'ದ ವಸ್ತುವಾಗಿದ್ದು ಅದನ್ನು ಕೆಳಗಿನ ಕಥಾಸಾರದಿಂದ ಅರಿಯಬಹುದು.

ಕಥಾಸಾರ

I. ನರಸಿಂಗರಾಯನ ಸೈನ್ಯ ಪ್ರಯಾಣ:

ಸರಸ್ವತಿಯನ್ನು ಬಲಗೊಂಡು ಈ ಕೃತಿಯನ್ನು ಹೇಳುತ್ತೇನೆ (೭). ಗೊಲ್ಲ ಸಿರುಮನ ಕೃತಿಯನ್ನು ಸಿದ್ಧನು ರಚಿಸಿದ (೮). ಬೂದಿಹಾಳಪಟ್ಟಣ ಪ್ರಥಮ ಕಲ್ಯಾಣವೆನಿಸಿದೆ. ಇಲ್ಲಿ ನಿರಾಸೆಯ ಮಠ, ವೀರೇಶ, ಬಸವೇಶ್ವರ ದೇವಾಲಯಗಳಿವೆ (೯, ೧೦). ಕಪ್ಪರಿವೀರನ ಬಲಕ್ಕೆ ರಣಕೊತ್ತಳ, ಭೈರವನ ಕೊತ್ತಳಗಳಿವೆ (೧೬). ಸಿರುಮನ ಮಕ್ಕಳಲ್ಲಿ ಕುಮಾರಮಲ್ಲಯ್ಯ ಸುಪ್ರಸಿದ್ಧ ವ್ಯಕ್ತಿ (೨೩). ಕಾಚನಾಯಕ, ವೀರಭದ್ರ, ಹಿರಿಯ ಸೋಮ, ಕುಮಾರಮಲ್ಲ ಇವರು ಸಿರುಮನ ಮಕ್ಕಳು* (೨೪). ಸಿರುಮನ ವೈಭವಕ್ಕೆ ಅಸೂಯೆಪಟ್ಟು ಎಕ್ಕಟಿ ಗಂಗಯ್ಯ ದ್ವೇಷ ತಾಳಿದ (೨೫). ಗೊಲ್ಲ ಸಿರುಮನ ಬಲವನ್ನು ಮುರಿಯಲು ನರಸಿಂಗರಾಯ, ಮಂತ್ರಿ ಈಶ್ವರನಾಯಕನೊಂದಿಗೆ ಸಮಾಲೋಚಿಸಿದ (೨೬, ೨೭). ಚಂದ್ರಗಿರಿಯ ನರಸಿಂಗರಾಯ ತಿರುಮಲಗಿರಿಗೆ ಬಂದು, ದೇವತಾಪೂಜೆಗೈದು ವೇದರಾಜ, ಬಾಗೂರ ಗೋವಿಂದ, ಬೂದಿಹಾಳಿನ ಗೊಲ್ಲಸಿರುಮ ಇವರು ಕೈವಶವಾಗುವಂತೆ ಬೇಡಿಕೊಂಡು ಮರಳಿದ (೨೮-೩೧).

ನರಸಿಂಗರಾಯ, ಮಂತ್ರಿ ಈಶ್ವರನಾಯಕನ ನೇತೃತ್ವದಲ್ಲಿ ದಂಡು ಕೂಡಿಸಿದ. (ಚಂದ್ರಗಿರಿಯಿಂದ ಸೈನ್ಯ ಮುನ್ನಡೆಯಿತು) ಡೆಂಕಣಿಕೋಟೆ, ಕೋಳುಗೋಟೆ, ಅರಗುಂಡೆ, ಮುಳಬಾಗಿಲು,

---

* ಇನ್ನೊಬ್ಬ ಮಗ ನಂಬಿಯಣ್ಣನೆಂದು ಸಿರುಮನ ಚರಿತೆ ತಿಳಿಸುತ್ತದೆ.

ಸಾವಂದಿಗೆಗಳು ಕೈವಶವಾದವು (೩೭-೪೦). ಕುದುರೆನಾಯಕ, ಸಾಳುವಪ್ಪರಾಜ, ಕೋಟೆಯ ತಿಮ್ಮರಾಜ, ಗುಬ್ಬಿಯ ಸೋಮ, ತೆರೆಯೂರ ಕರಿಯಣ್ಣಗೌಡ, ಮುದಿಗೆರೆಯ ಸೋಮಣ್ಣ, ಹೊಸವೂರಿನವರು ಬಂದು ಅರಸನ ಸೈನ್ಯ ಸೇರಿದರು (೪೩). ಅರಸನು ಪೆನುಗೊಂಡೆಯಲ್ಲಿ ಬೀಡುಬಿಟ್ಟನು (೪೪).

ನರಸಿಂಗರಾಯನು ಕೊನೇರಿರಾಯನಿಂದ ಕಾಣಿಕೆ ಪಡೆದ (೪೫-೪೭). ಯರಮಂಚಿ ಗುಬ್ಬಿ ಆಗುರಿಕೆಗಳಿಗೆ ದಂಡು ಸಾಗಿತು. ಸಾಳುವ ತಿಮ್ಮಯ್ಯ, ಬೋಳುಕ ನಾಗಯ್ಯ, ಏಳುಹಳೆಯದ ರಾಮಯ್ಯ, ದವಸವದಣ್ಣಿನಾಯಕ, ಅಮ್ಮರಸ, ತೊಂಡೂರ ಪೊಮ್ಮರಸ, ತಿಮ್ಮರಸ, ತಿಪ್ಪರಸ, ತಮ್ಮರಸ, ರಾಮರಸ, ಅಪ್ಪರಪಿಳ್ಳೆ, ಕುಪ್ಪರಪಿಳ್ಳೆ, ಮನ್ನೇರಪಿಳ್ಳೆ, ಚಳ್ಳಪಿಳ್ಳೆ, ನಾಗೆನಾಯಕ, ತುಳವರ ತೇಗೆನಾಯಕ, ರೋಗದ ತೇಗೆ ನಾಯಕರನ್ನು ನರಸಿಂಗರಾಯ ಕರೆಯಿಸಿದನು (೪೮-೫೨). ಯರಮಂಚಿ ಬಾಗಿಲದ ಬಡಗಣ ಬಯಲಲ್ಲಿ ಪೌಜು ಸಿದ್ಧವಾಯಿತು (೫೪).

ನರಸಿಂಗನು ಪೌಜು ಸಿದ್ಧಪಡಿಸಿದ ಸುದ್ದಿ ಸಿರುಮನಿಗೆ ತಿಳಿಯಿತು. "ಸೋಮಯ್ಯನೇ ಬಲ್ಲ" ಎಂದು ನುಡಿದು, ಮಂತ್ರಿ ಕಲ್ಲರಸ, ಮಲ್ಲಣ್ಣ, ಭೈರನಾಯಕ, ಕಾಚನಾಯಕ, ಗುಜ್ಜಲೋಬ, ಗೊಂಡ ಇವರನ್ನು ಕರೆಸಿ ಸಮಾಲೋಚಿಸಿದ (೫೭). ಬೇಹುದಾರರಾದ ಹಾರುವ ಬಸವರಾಯ, ಗಡೆಯ ಪೋಟ, ತಮ್ಮಡಿ ಕಳವೀರ ಇವರನ್ನು ಪೆನುಗೊಂಡೆಗೆ ಕಳಿಸಿದ (೭೨). ಈ ಬೇಹುಗಾರರು ಸೀರ್ಯಕ್ಕೆ ಬಂದು ಪೆನುಗೊಂಡೆಯನ್ನು ಪ್ರವೇಶಿದರು. ನರಸಿಂಗರಾಯ ಪೆನುಗೊಂಡೆಯಿಂದ ಸೈನ್ಯವನ್ನು ಮುನ್ನಡೆಸಿದ (೭೪). ಸೈನ್ಯ ನಲ್ಲಿಯೋಬನ ಕಲ್ಲದುರ್ಗ, ಕಲ್ಲಜರಿಯ ಮಲೆಗಳಲ್ಲಿ ಸಾಗಿತು (೭೯). ೧೦ ದಿನಗಳ ತರುವಾಯ ರತ್ನಗಿರಿಯ ಕಲ್ಲುದುರ್ಗದ ಓಬಯ್ಯನ ಮಗ ಸೆರೆಸಿಕ್ಕ (೮೦-೮೧). ಕೊನೆಗೆ ರತ್ನಗಿರಿಯನ್ನು ಒಪ್ಪಿಸಿಕೊಂಡು ಕಾಣಿಕೆ ಪಡೆಯಲಾಯಿತು (೮೨). ನಿಡುಗಲ್ಲ ಅಣ್ಣಾನಾಯಕನ ರಾಜ್ಯ, ಮಿಡಿಗೇಸಿದುರ್ಗಗಳು ದಾಳಿಗೆ ಪುಡಿಪುಡಿಯಾದವು (೮೩). ಗೊಬ್ಬರ ಕಣಿವೆಯಲ್ಲಿ (ಹಿರಿಯೂರ) ಕಸವಯ್ಯ ಬಂದು ಕೂಡಿದನು(೮೫). ನರಸಿಂಗನ ದಂಡು ಹಿರಿಯೂರಲ್ಲಿ ಬೀಡುಬಿಟ್ಟಿತು (೮೬).

ಬೇಹುಗಾರರು ಬಂದು, ದಂಡು ಸಿರುಮನ ಮೇಲೆಯೇ ಬರುತ್ತಿರುವುದನ್ನು ನಿವೇದಿಸಿದರು (೮೭). ಸಿರುಮ ತನ್ನ ಕೋಟೆ ಕೊತ್ತಳಗಳನ್ನು ಸಜ್ಜುಗೊಳಿಸಿದನು (೮೯). ಹೆಗ್ಗೆರೆ ಬೂದಿಹಾಳಿನ ಕೋಟೆಗಳನ್ನು ಸಂವರಿಸಲು ನಾಗಿಗೊಂಡನಿಗೆ ಹೇಳಿದನು (೯೦). ಎದ್ದುಲ ಭೈರನನ್ನು ಕರೆಸಿ ಅರಸನ ಕುದುರೆಗಳನ್ನು ಕದ್ದುತರಲು ಸಿರುಮ ಸೂಚಿಸಿದ (೯೨).

ಹಿರಿವೂರಿನಲ್ಲಿ ಗಂಗಯ್ಯ ಬಂದು ಅರಸನಿಗೆ ಸೇರಿದ. ಕೃತ್ರಿಮ ದುಃಖವನ್ನು ವ್ಯಕ್ತಪಡಿಸಿ ಸಿರುಮನ ಬಗೆಗೆ ಅರಸನ ಮನಸ್ಸನ್ನು ಕೆಡಸಿದ (೯೯). ಕೆರೆಸಂತೆ, ದೇವನೂರು, ಹಳೆಯ ಬೀಡುಗಳನ್ನು ಸಿರುಮ ಆಳುವುದನ್ನು ನಿವೇದಿಸಿಕೊಂಡ (೧೦೦). ಬಾಗೂರು ಚಿಕ್ಕವಿಜಯನಗರದಂತಿದೆ (೧೦೩). ಈ ಬಾಗೂರಿನಲ್ಲಿ ಆಳುವ ಗೋವಿಂದನಿಗೂ ಸಿರುಮನಿಗೂ ಸಖ್ಯ ಬಹಳ (೧೦೪). ದುಮ್ಮಿ, ಹೊಳಲಕೆರೆ, ಬಾಗೂರುಗಳು ಮೂಲ ಕೈವಳಿತಗಳು. ಈಗ ನನ್ನ ಕೈಮೀರಿವೆ (೧೦೫) ಎಂದು ಬಿನ್ನವಿಸಿಕೊಳ್ಳಲು ಅರಸು ಸಂತೈಸಿದ (೧೦೬). ಅಷ್ಟರಲ್ಲಿ ಅರಸನ ೧೧ ಕುದುರೆಗಳು ಕಳುವಾದವು (೧೦೭). ಇದರಿಂದ ಸಿಟ್ಟಿಗೆದ್ದ ಅರಸು ಕುದುರೆಗಳನ್ನು ಮರಳಿ ತರಿಸಲು ಕಸವಯ್ಯನಿಗೆ ಆಜ್ಞಾಪಿಸಿದನು (೧೧೧). ದಂಡು ಹರಿವೆ ಕಣಿವೆಯಲ್ಲಿ ನಡೆಯಿತು (೧೧೪). ಅಲ್ಲಿ ಕಾಚನಾಯಕ ಬಂದು ತಾಗಿದನು (೧೧೫). ನರಸಿಂಗ ಚೆನ್ನಕಲ್ಲಿಗೆ ದಂಡನ್ನು ಮುನ್ನಡೆಸಿದನು (೧೧೮). ಮಧುರೆಯಲ್ಲಿ ಅಶ್ವಗಾಳಗವಾಯಿತು (೧೨೩).

ಗೋವಿಂದನಾಯಕನ ಭಟರ ಕುದುರೆಗಳನ್ನು ಉರುಳಿಸಿದರು (೧೨೪). ನಿಡುಗಟ್ಟದವರು ಏರಿಬಂದರು (೧೨೫). ಗುಂಡೇರ ಹನುಮನಾಯಕ, ಸಿಂಗಟಗೆರೆಯ ಬಿಲ್ಲಾಳು, ಗೋವಿಂದನ ಬಂಟರು ಕಾದಿದರು (೧೨೯). ಸೈನ್ಯ ಬೆನ್ನು ತಿರುವಿ ಬಾಗೂರು ಕೋಟೆಯನ್ನು ಹೊಕ್ಕಿತು (೧೩೪). ಅರಸನ ಸೈನ್ಯ ಬಾಗೂರನ್ನು ಮುತ್ತಿತು (೧೪೧).

II. ಬಾಗೂರ ಯುದ್ಧ-ಕಾಚಯ್ಯನ ಸಾಹಸ:

ಗೋವಿಂದ ತನ್ನ ಪರಿವಾರವನ್ನು ಕೂಡಿಸಿದನು (೧೧). ಶಿವಣ್ಣನಾಯಕನಿಗೆ ಕೊತ್ತಳಗಳತ್ತ ಎಚ್ಚರವಹಿಸ ಹೇಳಿದನು (೧೪). ನರಸಿಂಗರಾಯ ಬಾಗೂರು ಮುತ್ತಿದುದನ್ನು ಕೇಳಿ, ಮಂತ್ರಿ ಕಲ್ಲರಸನೊಂದಿಗೆ ಸಿರುಮ ಸಮಾಲೋಚಿಸಿದ (೧೭). ಗೋವಿಂದನ ಸ್ಥಿತಿಗೆ ತಳಮಳಿಸಿದ (೧೮). ಮಗ ಕಾಚಯ್ಯನನ್ನು ಸಹಾಯಕ್ಕಾಗಿ ಹೋಗಲು ಹೇಳಿದ (೨೦). ಕಾಚನಾಯಕನು ಬೋಗಾರಮಲ್ಲ, ಎದ್ದುಲಭೈರ, ಗುಜ್ಜಲೋಬ, ಪೋತಗುಳಿಯ ಜುಂಜರಾಯ, ಹೊನ್ನವಳ್ಳಿಯ ವೀರ, ರಾಮಗಡೆಯ ಪೊತ್ತ, ಗಿಡ್ಡದಿಮ್ಮ, ಕೆಂಚದ ಬಸವ, ಹಂಪಸೋಮ, ದೊಡ್ಡೆಯ ಬೈಚ, ನಾವಿಂದರ ದೆತುಗ, ಚಿಪ್ಪಿಗ ಕಸವ, ನಂದಿಯಾಲದ ಓಬಯ್ಯ, ನೀರಗುಂದದ ಸಿದ್ಧ, ಚಂದ್ರಗಿರಿಯ ಮಲ್ಲರೆಡ್ಡಿ, ಬೆಳುಗೆರೆ ಸಿಡಿದಿಮ್ಮಣ, ಉಪ್ಪಲಿಕರ ಹೊನ್ನಕಳಸ, ತೊಳಚ, ಚೌಡೆನಾಯಕ, ಬರಿದೆಲೆ ತಿಮ್ಮ, ಜಂಪ, ಗಿರಿಯಣ್ಣ, ಉಜುವದ ನಿಂಬೆನಾಯಕ, ಅಗಸೆಗುಂದಿಯ ತಿಮ್ಮಯ್ಯ, ಕೆಂಚ, ಪೆಟಲ ಭೈರ, ಚೋಟತಿಪ್ಪ, ಆಸಂದಿಯ ಚಿಕ್ಕಮಲ್ಲ, ಹಂಪಸೋಮುಗ ಇವರಿಗೆ ಕಾಣಿಕೆಯಿತ್ತು ಸನ್ಮಾನಿಸಿದ (೩೪). ಕಾಚನಿಗೆ ಶಾಲು ಹೊದಿಸಿದ (೩೮). ಕಾಚಣ್ಣ ಸೈನ್ಯದೊಡನೆ ಬಾಗೂರಿಗೆ ಪ್ರಯಾಣ ಮಾಡಿದ (೪೧). ಎದ್ದುಲೋಬ ಕಳವೀರ, ಕುದುರೆಯ ಕಾಮ ಇವರ ಜೊತೆ ಕಾಚಯ್ಯ ಯುದ್ಧದ ಬಗೆಗೆ ವಿಚಾರಿಸಿದ (೪೨). ಕೊಂಡಕ್ಕೆ ವೀರರು ನಡೆವಂತೆ ತನ್ನ ಜೊತೆಗೆ ಬರಲು ಕಲಿಗಳನ್ನು ಕರೆದ (೪೫). ಉಪ್ಪಿನ ಮಾಳೆಯನ್ನು ಎಡಕ್ಕೆ ಮಾಡಿಕೊಂಡು ದಿಬ್ಬದ ಕಪ್ಪರಿಗೆಗೆ ಬಂದು ಸೇರಿದ (೪೬). ಕಾಚಯ್ಯ ವೈರಿಗಳು ನಿರ್ಮಿಸಿದ್ದ ತಳಿಗೋಟೆಯನ್ನು ಕಿತ್ತು, ಕಹಳೆ ಹಿಡಿಸಿ, ಬಾಗೂರ ಪ್ರವೇಶಿಸಿದ (೪೯). ಕಾಚನನ್ನು ಬಾಗಿಲು ತೆರೆದು ಒಳಗೆ ಬರಮಾಡಿಕೊಂಡು ತೆಗೆದಪ್ಪಿ, "ನೀನು ಹೀಗೆ ಬಂದು ಬಂಧನಕ್ಕೆ ಒಳಗಾಗುವುದೇ" ಎಂದು ಗೋವಿಂದ ನೊಂದು ನುಡಿದ (೫೬). ನರಸಿಂಗರಾಯನ ಸೈನ್ಯ ಕೊತ್ತಳದ ಒಂದು ಭಾಗವನ್ನು ಕೆಡವಿತು (೭೪). ಆ ಭಾಗದಲ್ಲಿ ನಿಂತು ಗೋವಿಂದ ಹೋರಾಡತೊಡಗಿದ (೭೬). ಈಗ ಬಾಗೂರಿನ ಮಂತ್ರಿ ಸೆಟ್ಟಿ ಶಿವಣ್ಣನಾಯಕ ಮೊದಲಾದವರು ಗೋವಿಂದನಿಗೆ ಪಟ್ಟಣ ಹಾಳಾಗುವುದನ್ನು ತಪ್ಪಿಸಲು ಕೇಳಿಕೊಂಡರು (೭೯). ಮಂತ್ರಿ ಶಿವಣ್ಣನಾಯಕ ಮತ್ತು ಗೋವಿಂದರು ನರಸಿಂಗರಾಯನ ಮಂತ್ರಿ ಈಶ್ವರ ನಾಯಕಗೆ ತಮ್ಮ ಶರಣಾಗತಿಯನ್ನುಸೂಚಿಸಿದರು (೮೦). ಗಾಣಿಗ ಹದಿಯ, ನೀರಗುಂದದ ವಿರುಪಣ್ಣ, ಸೂಳೆ ಬೆನಕಿ, ಸಮಗಾರ ಮಲ್ಲ, ಬೇಡಗ ನಾಗಯ್ಯ ಈ ಸಿರಿವಂತರಿಂದ ಬೇಗೂರು ಸಂಪತ್ತಿನಿಂದ ಕೂಡಿದೆ. ಹಣದ ಕಾಣಿಕೆಯ ಜೊತೆ ಕಾಚಯ್ಯನನ್ನು ಒಪ್ಪಿಸಲು ಕರಾರು ಹಾಕಲು ಗಂಗಯ್ಯ ಅರಸನಿಗೆ ಸೂಚಿಸಿದ (೮೯). ಇದನ್ನು ಕೇಳಿ ಗೋವಿಂದ ತಳಮಳಿಸಿದ (೯೧). "ಕಾಚನನ್ನು ನನ್ನ ಊರಿಂದ ಹೊರಗೆ ಕಳಿಸುವೆ" ಎಂದು ಮಾತ್ರ ದುಃಖದಿಂದ ಒಪ್ಪಿದ (೯೨). ಕಾಚನಾಯಕ ರಾತ್ರಿ ನೆಲಗನ್ನದಿಂದ ಪ್ರಯಾಣ ಬೆಳೆಸಿದ (೯೬). ಮಾರರಾವುತ, ಮಲ್ಲರಾವುತರ ದ್ರೋಹವನ್ನು ಕಾಚಯ್ಯ ಹೀಯಾಳಿಸಿದ (೯೭). ಯುದ್ಧದಲ್ಲಿ ಕರಿಯ ವಿರುಪ ಮಾಡಿದ (೧೦೬). ಕಾಚನಾಯಕ ಕಲ್ಲಹಳ್ಳಿಗೆ ಕಿಚ್ಚುಹಾಕಿ ಮುನ್ನಡೆದ (೧೧೧).

ನೇರಿಲಕೆರೆಗೆ ಕಾಚ ಬರುವಲ್ಲಿ ಸಿರುಮ ಪಾರಾದೆನೆಂದು ಹಿಗ್ಗಿದ (೧೧೨). ಮಗ ಕಾಚಯ್ಯನನ್ನು ತಂದೆ ಸಿರುಮ ಬಿಗಿದಪ್ಪಿದ (೧೧೩). ಅತ್ತ ಬಾಗೂರಿನ ಮುತ್ತಿಗೆಗೆ ಅರಸು ಆಜ್ಞೆ ಮಾಡಲು, ಪ್ರಜೆಗಳು ತಮ್ಮ ಅರಸು ಗೋವಿಂದಗೆ ಕೈಮುಗಿದರು (೧೧೭). ೩ ಲಕ್ಷ ಹೊನ್ನು ಕೊಡುವೆವು, ಮುತ್ತಿಗೆ ತೆಗೆಯಬೇಕೆಂದು ಮಂತ್ರಿ ಈಶ್ವರನಿಗೆ ಬಿನ್ನವಿಸಿಕೊಳ್ಳಲಾಯಿತು (೧೧೮). ಕಾಣಿಕೆ ಸ್ವೀಕರಿಸಿ ನರಸಿಂಗರಾಯನ ದಂಡು ಬೂದಿಹಾಳಿನತ್ತ ನಡೆಯಿತು (೧೨೫).

III. ಬೂದಿಹಾಳ ಯುದ್ಧ-ವೀರಣ್ಣನ ವೀರಮರಣ:

ನರಸಿಂಗರಾಯನು ಮಂತ್ರಿಯನ್ನು ಕರೆದು, ಬೂದಿಹಾಳು ಪ್ರವೇಶಿಸುವ ರೀತಿಯನ್ನು ಗಂಗಯ್ಯನಿಂದ ತಿಳಿದುಕೊಳ್ಳಲು ಹೇಳಿದನು (೩). ಎರಡು ಕಡೆಗೆ ಅಶ್ವಗಳು ಪ್ರಯಾಣಿಸಲು ಬುರುಡಕುಂಟೆಯ ತಿಮ್ಮರಾಜ ಸೂಚಿಸಿದ (೧೨). ಹಿರಿಯೂರ ಕಸವರಾಜನು ಸಿರುಮನನ್ನು ಯುದ್ಧದಲ್ಲಿ ಸೆರೆಹಿಡಿಯುವೆನೆಂದು ಸಾರಿದ (೧೩). ತಿಗುಳದೇಶದ ಪಿಳ್ಳೆ ಮನ್ನೇರು ಧ್ವಜವೆತ್ತಿ ನಡೆದರು (೧೪). ರುದ್ರರಾಜ, ವೇದರಾಜರ ಸೈನ್ಯ ಮುಂದುಗಡೆಯಲ್ಲಿ ನಡೆದವು (೧೫). ಬಸವರಾಜ, ತಿಪ್ಪರಾಜ, ವಲ್ಲಭರಾಜ, ರಾಮರಾಜ, ಗೊರಟೆಯ ತಿಪ್ಪರಾಜ, ಕಟ್ಟಿಗೆ ಕಸವೆನಾಯಕ, ನಾಗೆನಾಯಕ, ತಗರೆ ನಾಯಕರೊಂದಿಗೆ ನರಸಿಂಹ ಮುನ್ನಡೆದ (೧೮). ವೇದಾವತಿ ಹೊಳೆಯನ್ನು ಸೈನ್ಯ ದಾಟಿತು (೨೧). ಕಳವೀರನು ನರಸಿಂಗನ ದಂಡು ಬರುವುದನ್ನು ಸಿರುಮನಿಗೆ ಓಡಿ ಬಂದು ಹೇಳಿದ (೨೨). ಕಲ್ಲಚಾವಡಿಯಲ್ಲಿ ಕುಳಿತು ಸಿರುಮ ಎಲ್ಲ ಮಕ್ಕಳನ್ನೂ ಕಲ್ಲರಸಯ್ಯ, ಮಲ್ಲಣ್ಣ, ಭೈರಯ್ಯರನ್ನೂ ಕರೆಸಿದನು (೨೪). ಹಿಂದೆ ಸೈನ್ಯದಲ್ಲಿ ಬರುವವ ರುದ್ರರಾಜನೆಂದು ಕಳವೀರ ಹೇಳಿದ (೨೫). ಮಾವನಾದ ರುದ್ರರಾಜನಿಗೆ ಈ ದ್ರೋಹ ಸಲ್ಲದೆಂದು ಸಿರುಮ ನುಡಿದು "ಸೋಮಯಲಿಂಗ" ಬಲ್ಲನೆಂದು ನಕ್ಕು (೨೬), ಕಪ್ಪರಿ ವೀರನ ಪಾದವನ್ನು ಪೂಜಿಸಿದ (೨೯). ಸಿರುಮ ಒಡ್ಡಿದ ವಿಷಗೂಳನ್ನು ತಿಂದು ನರಸಿಂಗರಾಯನ ಸಾವಿರಾರು ಸೈನಿಕರು ಮಡಿದರು (೩೯). ಸಿರುಮನು ಕಲ್ಲರಸಯ್ಯ, ಮಲ್ಲಣ್ಣ, ಭೈರಯ್ಯರೊಡನೆ ಕೋಟೆ ವ್ಯವಸ್ಥೆ ನೋಡಿದ (೪೧), ಮೂಡಣಕೋಟೆಯಲ್ಲಿ ಕಲ್ಲರಾಶಿ ಹಾಕಿಸಿದ (೪೧). ಮಲ್ಲಣ್ಣನ ಕೋಟೆಯಲ್ಲಿ ಬಾಣ ಚಿಮ್ಮುತ, ಡೆಂಕಣಿಗಳನ್ನು ಒಟ್ಟಿಸಿದನು (೪೨). ಬೆಲಗೂರ ಭೈರನ ಕೊತ್ತಳಲದಲ್ಲಿ ಅಲಗಿನ ಹೊರೆ ಹಾಕಿದರು (೪೭). ಕಲಿವೀರಭದ್ರನ ಕೋಟೆಯಲ್ಲಿ ತೊಲೆಗುಂಡು ಒಟ್ಟಿಸಿದನು (೪೩). ಗಂಡಾಳು ಮಲ್ಲನ ಕೊತ್ತಳದಲ್ಲಿ ಖಂಡೆಯ ಲೌಡಿ, ಕಾಚಯ್ಯನ ಕೊತ್ತಳದಲ್ಲಿ ಸಬಳ ದಸಿ ಪೆಟಲು ಹಾಕಿಸಿದನು (೪೪). 'ವೀರಭದ್ರನಿಗೆ ಶರಣು' ಎನ್ನುತ್ತ ಅರಮನೆಯನ್ನು ಪ್ರವೇಶಿಸಿದ (೪೮), ಬೂದಿಹಾಳಿನ ಸುತ್ತ ತಿರುಗಿದ ನರಸಿಂಗನ ಸೈನ್ಯ ತೆಂಕಣ ದಿಕ್ಕಿನಲ್ಲಿ ಬೀಡುಬಿಟ್ಟಿತು (೫೩). ಮಡದಿ ಚಿಕ್ಕಾಯಿಯೊಂದಿಗೆ ಉಪ್ಪರಿಗೆ ಏರಿ ಸಿರುಮ, ಅರಸನ ದಂಡು ನೋಡಿದ (೬೧). ನರಸಿಂಗರಾಯನು ವೇದರಾಜ ಗೋವಿಂದ ರುದ್ರರಾಜರನ್ನು ಕರೆಯಿಸಿ ಸಿರುಮನನ್ನು ಮನವೊಲಿಸಲು ಪ್ರಯತ್ನಿಸಬೇಕೆಂದು ಹೇಳಿದ (೬೫). ರುದ್ರರಾಜ ಒಪ್ಪಿಕೊಂಡು ಬಂದು ಸಿರುಮನನ್ನು ಒಪ್ಪಂದಕ್ಕೆ ಕರೆಸಿದ (೬೭). 'ಮಲ್ಲಣ್ಣನನ್ನು ಪರಿವಾರದೊಂದಿಗೆ ಮಾತುಕತೆಗೆ ಕಳಿಸು ನಾನು ಬಗೆಹರಿಸುವೆ' (೭೦) ಎಂದು ಮಾವನಾದ ರುದ್ರರಾಜ ಹೇಳಿದ ಮಾತನ್ನು ಸ್ವಾಭಿಮಾನಿ ಸಿರುಮ ಒಪ್ಪಲಿಲ್ಲ (೭೯). ರುದ್ರರಾಜ ದುಃಖದಿಂದ ಮರಳಿದ (೮೦). ಇದನ್ನು ಕೇಳಿ ಸಿಟ್ಟಾದ ನರಸಿಂಗರಾಯ ಬೂದಿಹಾಳಕೋಟೆ ನೋಡಲು ಹೊರಟ (೮೪). ತನ್ನ ಸೈನಿಕರಿಗೆ ಕೋಟೆಯನ್ನು ಅಳೆದು ಹಂಚಿದ (೮೮). ಮಲ್ಲಣ್ಣ, ಕಾಚನಾಯಕ,

ಭೈರಣ್ಣರನ್ನು ಕೋಟೆ ಕಾವಲಿಗೆ ಕಳಿಸಿ, ಸಿರುಮ ಕಲ್ಲಚಾವಡಿಯಲ್ಲಿ ಕುಳಿತ (೯೨). ಮುಂಜಾನೆ ನರಸಿಂಗ ಸಭೆ ಕರೆದ (೯೬), ತುಳುವರ ತೇಗೆನಾಯಕನು ವೀಳ್ಯ ಹಿಡಿದ (೯೮). ಮಿಕ್ಕ ಕೆಲವರೂ ವೀಳ್ಯ ಹಿಡಿದರು (೧೦೦). ಯುದ್ಧ ನಿಕರವಾಯಿತು (೧೦೪-೧೧೦). ತುಳು ಸೈನ್ಯವನ್ನು ಉಡುವದ ನಿಂಬೆನಾಯಕ ಹಾಳು ಮಾಡಿದನು (೧೧೧). ಬೋಗಾರಮಲ್ಲ, ಕೆಂಡದ ಬಸವ, ರಣಗುಂಡಿಯ ತಿಮ್ಮ, ಬರಿದಲೆ ತಿಪ್ಪ, ನೀರಗುಂದದ ಸಿದ್ಧ, ಆಸಂದಿಯ ಕರಿಯಮಲ್ಲ, ಹಂಪಸೋಮ, ನಂದಿಯಾಲದ ಓಬಯ್ಯ, ಚಂದ್ರಗಿರಿಯ ಮಲ್ಲರಡ್ಡಿ, ಗಿರಿಯ, ಉಪ್ಪಿನಹಳ್ಳಿಯ ಚೋರ, ಗುಜ್ಜಲೋಬರು ನರಸಿಂಗನ ಸೈನ್ಯವನ್ನು ಸವರಿದರು (೧೨೪). ಉತ್ಸಾಹದಿಂದ ಬೂದಿಹಾಳಿಗೆ ಹಿಂದಿರುಗಿದರು (೧೨೪). ನರಸಿಂಗ ತುಂಬ ಚಿಂತೆಗೀಡಾಗಿ ತಳಿಯಕೋಟೆ ಕಟ್ಟಿಸಿದ (೧೩೩). ಗಡೆಯ ತರಗ, ತುಳುವರ ತೇಗೆ ನಾಯಕರು ವೀಳ್ಯವೆತ್ತಿದರು (೧೩೪). ಯುದ್ಧ ಪ್ರಾರಂಭವಾಗಿ ಸಿರುಮನ ಮಗ ಕುಮಾರ ವೀರಣ್ಣ ಹೋರಾಟಕ್ಕಿಳಿದ (೧೪೨). ನರಸಿಂಗನು ಡೆಂಕಣಿಯ ತಿಪ್ಪನನ್ನು ಕರೆಸಿ, ವೀರಣ್ಣನನ್ನು ಗುರಿಯಿಟ್ಟು ಕೊಂದರೆ ಕಾಣಿಕೆ ಕೊಡುವುದಾಗಿ ಹುರಿದುಂಬಿಸಿದ (೧೪೪). ಈ ಡೆಂಕಣಿಗುಂಡು ಬಡಿದು ವೀರಣ್ಣ ವೀರಸ್ವರ್ಗವೇರಿದ (೧೫೧). ಭಟರು ತಂದ ವೀರಣ್ಣನ ಶವವನ್ನು ನೆತ್ತವಾಡುತ್ತ ಕುಳಿತಿದ್ದ ಸಿರುಮ ಕಂಡು ಶೋಕಿಸಿದ (೧೫೩). ವೀರಣ್ಣನ ಬಾಯಿಯಲ್ಲಿ ಪಚ್ಚಗರ್ಪೂರ ತುಂಬಿ, ಒಳ್ಳೆಯ ಬಟ್ಟೆ ತೊಡಿಸಿದರು (೧೫೫). ರಣಕ್ಕೆ ವೀರಣ್ಣ ಧೂಳುಗಾಯಾದ ಎಂದು ಕೊಮಾರ ಮಲ್ಲಯ್ಯ ನಗುತ್ತಲೇ ನುಡಿದ (೧೫೬). ತಾಯಿ ಚಿಕ್ಕಾಯಿ ಮತ್ತು ವೀರಣ್ಣನ ಹೆಂಡಿರು ಶೋಕಿಸಿದರು (೧೫೯-೧೬೫). ವೀರಣ್ಣನ ರಾಣಿವಾಸ ಶೃಂಗರಿಸಿಕೊಂಡು ಬಂದು ಗಂಡನ ಪಾದಕ್ಕೆ ನಮಸ್ಕರಿಸಿದರು (೧೬೯). ತರುವಾಯ ಸೋಮೇಶ್ವರನ ಪಾದಕ್ಕೆ, ಗುರುಹಿರಿಯರ ಪಾದಕ್ಕೆ ವಂದಿಸಿದರು (೧೭೧). ವೀರೇಶಲಿಂಗನಾಲಯದಲ್ಲಿ ಸಮಾಧಿಸಿದ್ಧವಾಯಿತು (೧೭೨). ಕುದುರೆಯ ಮೇಲೆ ಕುಳಿತು ಕೈಯಲ್ಲಿ ಕನ್ನಡಿ ಹಿಡಿದು ಹೊರಟ ಸತಿಯರು, ಬಾಗಿನವನ್ನು ಕೊಟ್ಟು ಬಂದು, ಸಮಾಧಿಯಲ್ಲಿ ಕುಳಿತರು. ಸಮಾಧಿಕ್ರಿಯೆ ಮುಗಿಯಿತು (೧೭೫).

IV. ಕಾಕೀಶನ ಮರಣ-ಬೆಳಗೂರ ಭೈರನ ಪಕ್ಷಾಂತರ:

ನರಸಿಂಗರಾಯನ ಪರವಾಗಿ ಕಾಕೀಶ ಬೂದಿಹಾಳು ಕೋಟೆಯನ್ನು ಮುತ್ತಿದನು (೮). ಚೊಕ್ಕತಿಪ್ಪ ಚಿಕ್ಕಭೈರರು ತಲೆಗಳ ಚಿಪ್ಪ ಹಾರಿಸಿದರು (೯). ನರಸಿಂಗನಿಗೆ ಸರಿದೊರೆಯಾದ ಕಾಕೀಶನನ್ನು ಗುರಿಯಿಟ್ಟು ಡೆಂಕಣಿ ಹೊಡೆಯಲು ಸಿರುಮ ಆಜ್ಞಾಪಿಸಿದ (೧೨). ಕೆಂಚನ ಗುಂಡು ಕಾಕೀಶನನ್ನು ಕೆಡವಿತು (೧೪). ಅವನ ಶವವನ್ನು ದಹಿಸಲಾಯಿತು (೧೯). ಮೈದುನನಾದ ಬೆಲಗೂರ ಭೈರ ಸಿರುಮನ ಪರವಾಗಿ ಹೋರಾಡತೊಡಗಿದ (೨೭). ಸಿರುಮನ ಮಗ ಚಿಕ್ಕಮಲ್ಲಣ್ಣ ರೋಷಾವೇಶದಿಂದ ವೈರಿಗಳನ್ನು ತರಿದ (೩೧). ಮನ್ನೇರ ಪಿಳ್ಳೆ ಕಂಚಿಯ ನಂಬಿಯರ ಸೈನ್ಯ ಮಣ್ಣುಗೂಡಿತು (೪೪). ಮಲ್ಲಣ್ಣ ಗೆಲುವಿನ ಕಹಳೆಯೊಂದಿಗೆ ಕಪ್ಪರಿ ವೀರನಿಗೆ ಕೈಮುಗಿದ (೪೬). ಆದಿತ್ಯವಾರದಂದು ಬೂದಿಹಾಳಕೋಟೆ ಮುತ್ತಲು ನರಸಿಂಗ ತನ್ನ ಪರಿವಾರಕ್ಕೆ ಸಾರಿದ (೫೨). ಸೈನ್ಯ ಬೆಲಗೂರ ಭೈರನ ಕೊತ್ತಳವನ್ನು ಮುತ್ತಿತು (೫೫). ಕಾಚಣ್ಣ ಹೋರಾಟಕ್ಕಿಳಿದ (೫೯). ಹೀಗೆ ೧೨ ದಿನ ಕಳೆಯಿತು. ಕನ್ನ ತೋಡಿಸುವ ವಿಚಾರ ನರಸಿಂಹ ಮಾಡಿದನು (೬೬). ಕನ್ನ ತೋಡುವುದು ಪ್ರಾರಂಭವಾಯಿತು. ಸಿರುಮನ ಜನರು ಕನ್ನವನ್ನು ಮುಚ್ಚಿ, ತೋಡುವವರನ್ನು ಉಸಿರುಗಟ್ಟಿಸಿ ಕೊಂದರು (೭೭). ಹೀಗೆಯೇ ಅವಸರದಣ್ಣಯ್ಯ, ವಲ್ಲಭರಾಜ

(೮೮) ಬಸವರಾಜ, ರಾಮರಾಜ (೯೫) ಮೊದಲಾದವರು ಹೋರಾಡಿದರು. ಇಷ್ಟರಲ್ಲಿ ಬೆಲಗೂರ ಭೈರಯ್ಯ ಸ್ವಾಮಿದ್ರೋಹವನ್ನು ಯೋಚಿಸಿದ (೧೧೦). ನರಸಿಂಗರಾಯನ ಪರಿವಾರದ ರುದ್ರರಾಜನಿಗೆ ಕೈಬೀಸಿ ತಾನು ಬರುವ ಸೂಚನೆ ಕೊಟ್ಟ (೧೧೨). ಕಲ್ಲಚಾವಡಿಯಲ್ಲಿ ಕುಳಿತ ಸಿರುಮಯ್ಯನನ್ನು ಬೆಲಗೂರು ಭೈರಯ್ಯ ಕಂಡ (೧೨೨). "ಏಳು ತಿಂಗಳು ಕಾದಿದರೂ ನರಸಿಂಗರಾಯ ಮುತ್ತಿಗೆ ತೆಗೆಯಲೊಲ್ಲ." ನಮ್ಮದು ವ್ಯರ್ಥ ಹೋರಾಟ ಎಂದು ನುಡಿದ (೧೨೪). "ಪಟ್ಟದರಾಣಿಯ ಸೋದರನಾದ ನಿನಗೆ ಈ ನುಡಿಸಲ್ಲದು" ಎಂದು ಮಲ್ಲಯ್ಯ ಗರ್ಜಿಸಿದ (೧೨೬). ಇಬ್ಬರಿಗೂ ಮಾತಿನಿಂದ ವಿರಸ ಏರ್ಪಟ್ಟಿತು (೧೨೭). ಸಿರುಮನನ್ನು ಬಿಟ್ಟು ಬಂದು ರುದ್ರರಾಜನನ್ನು ಕಂಡ (೧೩೩). ನರಸಿಂಹನು ಭೈರನ ಸ್ವಾಮಿದ್ರೋಹ ಕಾರ್ಯವನ್ನು ಎತ್ತಿ ನುಡಿದ (೧೪೨). ಈ ಸುದ್ದಿ ಸಿರುಮಗೆ ಗೊತ್ತಾಯಿತು (೧೪೬). ಚಿಕ್ಕಾಯಿ ಭೈರನಿಗೆ ಶಪಿಸಿದಳು (೧೫೫), ಸಿರುಮ "ದೈವವಿದ್ದಂತಾಗಲಿ" ಎಂದು ನಿಶ್ಚಯಿಸಿದ (೧೫೯).

V. ಬೂದಿಹಾಳು ಪತನ:

ಅತಿ ವೀರರಾದ ನೂರೈವರು ಬಂಟರು ಸಿರುಮನ ಜೊತೆ ನಿಂತರು (೪). "ಹಡಪದ ಹಲಗ, ಬೋಗಾರ ಮಲ್ಲಣ್ಣ, ಗೂಳನ ತಿಮ್ಮಯ್ಯ, ಕಸವ ದೇವಣ್ಣ, ಗುಂಡಿಯ ತಿಮ್ಮಣ್ಣ, ಎದ್ದುಲ ಬೈರ, ಗಡೆಯ ಪೋತಿರಾಮಯ್ಯ, ಕೆಂಡದ ಬಸವಣ್ಣ, ವೀರಣ್ಣ, ಬೈಚ ಮೊದಲಾದ ನೀವೆಲ್ಲ ನನ್ನ ಬಿಟ್ಟು ಹೋಗಿ ಬದುಕಿರಿ" ಎಂದು ಸಿರುಮ ನುಡಿದರೆ, ಅವರು ಸಮ್ಮತಿಸದೆ ಬೆಂಗಾವಲಿಗೆ ನಿಂತರು (೧೦). ಅರಮನೆಯ ನಗ ನಾಣ್ಯವನ್ನೆಲ್ಲ ಚಾವಡಿಗೆ ಸಿರುಮ ತರಿಸಿದ (೧೨). ಪುರದೊಳಗಣ ಒಡೆಯರು ಭಕ್ತರನೆಲ್ಲ ಕರೆಸಿ ಕಾಣಿಕೆಯಿತ್ತು ಸನ್ಮಾನಿಸಿದ (೧೫). ನರಸಿಂಗನ ದಂಡು ಏರಿ ಬಂದಿತು (೧೬). ಮಲ್ಲಣ್ಣ ಸಿರುಮ ಯುದ್ಧಕ್ಕೆ ಸಿದ್ಧರಾದರು (೧೮). ಅರಮನೆಯ ಮಾಳಿಗೆ ಕಿತ್ತಿ ಕಿಚ್ಚು ಮಾಡಿದರು (೨೧). ಆರುನೂರು ಜನ ಹೆಣ್ಣುಮಕ್ಕಳಿಗೆ ಕಾಲಕುಪ್ಪಸ ಕೊಟ್ಟರು. ಅವರು ದಂಡೆ ಮುಡಿದರು (೨೨). ಕರ್ಪೂರ ತೈಲ ಕುಡಿದು ಅವರೆಲ್ಲ ನೆಲಕ್ಕೆ ಉರುಳಿದರು (೨೩). ಕಾಚಣ್ಣ, ರಾಟಿಯ ಸೋಮಯ್ಯರೂ ಇದನ್ನು ತೆಗೆದುಕೊಂಡು ಮಡಿಯಲು, ಮಲ್ಲಣ್ಣ ಅವರನ್ನು ಕೊಂಡಕ್ಕೆ ಎಳೆದ (೨೪). ಕಿಚ್ಚಿನಲ್ಲಿ ವಸ್ತ್ರ, ಬೆಳ್ಳಿ-ಬಂಗಾರ, ಪಾತ್ರೆ-ಪಗಡಿಗಳನ್ನೆಲ್ಲ ಒಟ್ಟಿದರು. ಮಡದಿಯರನ್ನು ಆಮಂತ್ರಿಸಿ ಮಲ್ಲಣ್ಣ ಕಿಚ್ಚಿಗೆ ಆಹುತಿ ಮಾಡಿದನು (೨೭-೩೬). ಚಿಕ್ಕಾಯಿಯನ್ನು ಕೊಲ್ಲಲು ಸಿರುಮನ ಕೈ ಏಳಲಿಲ್ಲ. ಮೈದುನ ಮಲ್ಲಭೂಪನಿಂದ ಆಹುತಿ ಪಡೆದಳು (೪೩). ಕುಮಾರಮಲ್ಲಯ್ಯ ಕಾಳಗಕ್ಕೆ ಇಳಿದ (೪೪). ನರಸಿಂಗ ಬೆಲಗೂರ ಬೈರನನ್ನು ಕರೆಸಿ, ಸಿರುಮನು ಸಮಸ್ತ ಸಂಪತ್ತನ್ನು ಸುಟ್ಟ ವಿಷಯ ಅವನಿಂದ ತಿಳಿದುಕೊಂಡ (೫೩). ಬಾಗೂರಿನಲ್ಲಿಯಂತೆ ಇಲ್ಲಿಯೂ ಐಶ್ವರ್ಯ ಸಿಕ್ಕಬಹುದೆಂದಿದ್ದ ಅರಸನು ನಿರಾಸೆ ಹೊಂದಿದನು (೫೪). ಗಡೆಯ ತರಗ, ತುಳುವರ ತೇಗೆನಾಯಕರು ಏರಿಬರಲು ಮಲ್ಲಣ್ಣ ಗರ್ಜಿಸಿ ಎದುರಿಸಿದ (೫೬). ಗಡೆಯ ತರಗ ಅರಮನೆಯನ್ನು ಮುತ್ತಿದ (೫೭). "ಗಾಳಿಪೂಜೆ ದೇಶದ ಒಡೆಯ ನಾನು ಸಿರುಮ" ಎಂದು ಅವನಿಗೆ ಉತ್ತರಿಸಿದ (೫೮) ಸಿರುಮನ ತಮ್ಮ ಮಲ್ಲಭೂಪನಿಗೆ ಯುದ್ಧದಲ್ಲಿ ಗಾಯವಾಯಿತು. ಸಿರುಮನಿಂದ ಮಲ್ಲಭೂಪ ಮರಣಯಾಚಿಸಿ ಅಗ್ನಿಗೆ ಆಹುತಿಯಾದ (೬೮). ಮಗ ಮಲ್ಲಯ್ಯನಿಂದ ಮರಣಯಾಚಿಸಿ ಸಿರುಮ ಅಗ್ನಿಗೆ ಆಹುತಿಯಾದ (೮೬). ಮಲ್ಲಣ್ಣ ವೀರೋಚಿತವಾಗಿ ಹೋರಾಟ

ಮುನ್ನಡೆಸಿ ವೀರಸ್ವರ್ಗವೇರಿದ (೯೨). ಅವನ ರುಂಡವನ್ನು ಕೊಯ್ದು ತಂದು ನರಸಿಂಗನಿಗೆ ತೋರಿಸಿದರು (೯೩). ಈತನ ಹಲ್ಲುಕಿತ್ತಿ ಚಮ್ಮಾವುಗೆಗೆ ಹಾಕಿಸಲು ಅರಸ ಹೇಳಿದ. ಆಗ ಅರಸನಿಗೂ ತರಗೆ ನಾಯಕನಿಗೂ ಮಿಕ್ಕ ನಾಯಕರು ಬೇಡವೆಂದು ಬಿನ್ನವಿಸಿದರು (೯೫). ತಲೆಯನ್ನು ಕೊಂಡಕ್ಕೆ ಹಾಕಲು ಹೇಳಿದರು (೯೬). ಈಶ್ವರಮಂತ್ರಿಯೂ ಇದನ್ನು ಅನುಮೋದಿಸಿದ (೯೭). ಮಲ್ಲಯ್ಯನ ರುಂಡ ಚಿತೆಗೆ ಅರ್ಪಿತವಾಯಿತು (೯೮). ಒಟ್ಟು ಇಪ್ಪತ್ತಾರು ಸಾವಿರದೇಳುನೂರು ಬಂಟರು ಈ ಯುದ್ಧದಲ್ಲಿ ಸತ್ತರು (೧೧೨). ಸಿರುಮನ ಕೀರ್ತಿ ಸೂರ್ಯ ಚಂದ್ರರಿರುವವರೆಗೆ ಹಬ್ಬಿತು (೧೧೫). ಈತನು ಈಶ್ವರನೊಡ್ಡೋಲಗದ ಬಾಗಿಲಲ್ಲಿ ಭದ್ರಾಸನ ಮಂಡಿತನಾದ (೧೧೬).

ಸ್ಥಳ ಪರಿಶೀಲನೆ

ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲೂಕಿನ ಶ್ರೀರಾಮಪುರ ಒಂದು ದೊಡ್ಡ ಹಳ್ಳಿ. ಇದರ ಪ್ರಾಚೀನ ಹೆಸರು ಬೂದಿಹಾಳು. ಇಲ್ಲಿ ಆಳಿದ ಸಿರುಮನಾಯಕನಿಂದಾಗಿ ಸಿರುಮಪುರ, ಶ್ರೀರಾಮಪುರ ಆಗಿದೆಯೋ, ರಾಮಾಯಣದ ಶ್ರೀರಾಮನ ಹೆಸರು ಬೂದಿಹಾಳು ಹೆಸರಿನ ಮೇಲೆ ದಾಳಿ ಮಾಡಿದೆಯೋ ಸ್ಪಷ್ಟವಾಗುವುದಿಲ್ಲ. ಇಲ್ಲಿ ಗೋಪಾಲಸ್ವಾಮಿ, ಆಂಜನೇಯ, ಬನಶಂಕರಿ, ಕುಮಾರಮಲ್ಲಯ್ಯ, ವೀರೇಶ್ವರ, ರೇವಣಸಿದ್ಧ, ಕೊಲ್ಲಾಪುರದಮ್ಮ, ವೀರಭದ್ರ, ಸೋಮೇಶ್ವರದೇವಾಲಯಗಳೂ, ಕೋಟೆಕೊತ್ತಲ ಇತ್ಯಾದಿ ಅವಶೇಷಗಳೂ ಇವೆ.

ಸಿರುಮನ ಮಕ್ಕಳಲ್ಲಿ ಒಬ್ಬನಾದ ವೀರಭದ್ರನನ್ನು ವೀರಭದ್ರದೇವಾಲಯದ ಆವರಣದಲ್ಲಿ ಸಮಾಧಿ ಮಾಡಿದುದಾಗಿ ಸಿದ್ಧಕವಿಯ ಕಾವ್ಯ ತಿಳಿಸುತ್ತದೆ. ಬಹುಶಃ ಇಂದಿನ ವೀರಭದ್ರದೇವಾಲಯದ ಎಡಕ್ಕೆ, ಸೋಮೇಶ್ವರ ದೇವಾಲಯದ ಬಲಕ್ಕೆ ಇರುವ ಕರಿಯ ಕಲ್ಲಿನ ಸಣ್ಣ ಗುಡಿಯೇ ಮಗ ವೀರಭದ್ರನ ಸಮಾಧಿಯಾಗಿರಬಹುದು. ಇನ್ನೊಬ್ಬ ಮಗ ಮಲ್ಲಯ್ಯನ ಸಮಾಧಿಯ ಮೇಲೆ 'ಕುಮಾರಮಲ್ಲಯ್ಯನ ಗುಡಿ' ಎಂದು ಕರೆಯುತ್ತಿರುವ ಕಟ್ಟಡವೊಂದು ಈಗಲೂ ತಲೆಯೆತ್ತಿ ನಿಂತಿದೆ. ಇದು ಕಲ್ಲು-ಮಣ್ಣಿನಿಂದ ಕಟ್ಟಿದ ಒಂದು ಕೋಣೆ ಮತ್ತು ಅದರ ಮುಂದೆ ಐದು ಅಂಕಣದ ಪಡಸಾಲೆಯನ್ನೊಳಗೊಂಡಿದೆ. ಕೋಣೆಯಲ್ಲಿ ಕೇವಲ ೩ ವೀರಗಲ್ಲುಗಳಿದ್ದು, ಇವುಗಳಲ್ಲಿ ಎರಡನ್ನು ನೆಡಲಾಗಿದ್ದು ಒಂದನ್ನು ನೆಲದ ಮೇಲೆ ಇಡಲಾಗಿದೆ. ಇವುಗಳಲ್ಲಿ ಮಲ್ಲಯ್ಯನ ವೀರಗಲ್ಲು ಯಾವುದು? ಸ್ಪಷ್ಟವಾಗುವುದಿಲ್ಲ. ಮಿಕ್ಕೆರಡು ವೀರಗಲ್ಲುಗಳು ಬಹುಶಃ ತಂದೆ ಸಿರುಮ, ಸೋದರ ಕಾಚಣ್ಣ ಇವರಿಗೆ ಸಂಬಂಧಿಸಿರಬಹುದೇ? ಎಂಬ ಅನುಮಾನ ಹುಟ್ಟುತ್ತದೆ.

ನೆಲದಲ್ಲಿ ನೆಟ್ಟ ಎರಡು ವೀರಗಲ್ಲುಗಳ ಎತ್ತರ ಮೂರು ಅಡಿ. ನೆಲದ ಮೇಲಿಟ್ಟ ವೀರಗಲ್ಲಿನ ಎತ್ತರ ಎರಡು ಅಡಿ. ಗಂಗಾಮತದವರು ಇದರ ಅರ್ಚಕರು. ವೇಷಭೂಷಣಗಳೇನೂ ಇಲ್ಲದ ಈ ವೀರಗಲ್ಲುಗಳನ್ನು ವಿಭೂತಿ ಕುಂಕುಮ ಕಾಡು ಹೂ ಪತ್ರೆಗಳಿಂದ ಪೂಜಿಸುತ್ತಾರೆ. ಪೂಜಾ ವೈಭವವಿಲ್ಲದಿರಬಹುದು, ಆದರೆ ತಮ್ಮ ಗ್ರಾಮದ ವೀರನನ್ನು ನೆನಪಿಟ್ಟು, ಪೂಜಿಸುತ್ತಿರುವುದು ಮುಖ್ಯ.

ಕುಮಾರಮಲ್ಲಯ್ಯನ ಕಟ್ಟಿಗೆಯ ರುಂಡ ವಿಗ್ರಹವೊಂದು ಈ ಗ್ರಾಮದ ಕೊಲ್ಲಾಪುರದಮ್ಮನ ಗುಡಿಯಲ್ಲಿದೆ. ಉತ್ಸವವಿಗ್ರಹವಾಗಿರುವ ಕಾರಣ ಇದಕ್ಕೆ ನಿತ್ಯಪೂಜೆಯಿಲ್ಲ. ವಿಶೇಷದಿನಗಳಲ್ಲಿ ಬೆಳ್ಳಿಯ ಮುಖವಾಡ, ಬೆಳ್ಳಿಯ ಆಭರಣ, ರೇಶಿಮೆಯ ವೇಷಭೂಷಣ, ಖಡ್ಗ-ಬಿಲ್ಲುಬಾಣಗಳಿಂದ ಶೃಂಗರಿಸಿ

ಕಟ್ಟಿಗೆಯ ಕುದುರೆಯ ಮೇಲೆ ಸ್ಥಾಪಿಸುತ್ತಾರೆ. ಮಹಾನವಮಿ ಸಂದರ್ಭದಲ್ಲಿ, ಶೃಂಗಾರಮಾಡಿದ ಈ ವಿಗ್ರಹದ ಪೂಜೆ ೯ ದಿನಗಳ ವರೆಗೆ ನಡೆಯುತ್ತದೆ. ೯ನೆಯ ದಿನ ಮುಂಜಾನೆ ಈ ಮೂರ್ತಿಯನ್ನು ಪಲ್ಲಕ್ಕಿಯಲ್ಲಿಟ್ಟುಕೊಂಡು, ವಾದ್ಯ ವೈಭವಗಳೊಂದಿಗೆ ಊರಿಂದ ೨ ಮೈಲು ಅಂತರದಲ್ಲಿರುವ ಬನ್ನಿಯ ಮರದ ಹತ್ತಿರ ಹೋಗುತ್ತಾರೆ. ಅಲ್ಲಿ ಸುತ್ತಲಿನ ಊರುಗಳ ಗ್ರಾಮದೇವತೆಗಳೂ ಬರುತ್ತವೆ. ಬನ್ನಿಯ ಮರದ ಎದುರು ನಿರ್ಮಿಸಿದ ಸಾಲುಮಂಟಪಗಳಲ್ಲಿ ಈ ಒಂದೊಂದು ದೇವರನ್ನು, ಮಧ್ಯದ ಮಂಟಪದಲ್ಲಿ ಕುಮಾರಮಲ್ಲಯ್ಯನ ವಿಗ್ರಹವನ್ನು ಪ್ರತಿಷ್ಠಾಪಿಸುತ್ತಾರೆ. ಇದು ಮಲ್ಲಯ್ಯನ ಒಡ್ಡೋಲಗದ ಸೂಚನೆಯಾಗಿರಬೇಕು. ಎದುರಿನ ಬನ್ನಿಯ ಮರಕ್ಕೆ ಕಟ್ಟಿದ ಬಾಳೆಯ ಕಂಬಕ್ಕೆ ಊರಗೌಡ ಬಾಣ ಎಸೆದು, ಆಮೇಲೆ ಅದನ್ನು ಖಡ್ಗದಿಂದ ತುಂಡರಿಸುತ್ತಾನೆ. ಇದು ಮಲ್ಲಯ್ಯನು ವೈರಿಗಳನ್ನು ತುಂಡರಿಸಿದ ಸಂಕೇತವಾಗಿರಬೇಕು. ತರುವಾಯ ಮಲ್ಲಯ್ಯನ ಪಲ್ಲಕ್ಕಿಯನ್ನು ಹೊತ್ತುಕೊಂಡು ಓಡುತ್ತ ಊರಿಗೆ ಬರುತ್ತಾರೆ. ಇದು ಮಲ್ಲಯ್ಯನ ಸೈನಿಕರು ರುಂಡವನ್ನು ಮೆರೆಸುತ್ತ ಬೂದಿಹಾಳಕ್ಕೆ ಓಡಿಬಂದುದರ ದ್ಯೋತಕನಾಗಿರಬಹುದು. ಈ ಮೆರವಣಿಗೆಯು ಗ್ರಾಮವನ್ನು ಪ್ರವೇಶಿಸುವಲ್ಲಿ ಒಂದು ಕುರಿ ಕಡಿದು, ಅದರ ಮಾಂಸದಿಂದ ಅಡಿಗೆ ಮಾಡುತ್ತಿದ್ದು, ಇದಕ್ಕೆ 'ರಾಸಿಗೊಳ್' ಎನ್ನುತ್ತಾರೆ. ಬಹುಶಃ ಇದು ವೀರಗಲ್ಲನ್ನು ಸ್ಥಾಪಿಸುವಾಗ ಏರ್ಪಡಿಸುತ್ತಿದ್ದ 'ಬೀರಗೂಳ್'ದ ಸಂಕೇತವಾಗಿರಬಹುದು.

ಇತಿಹಾಸ

ಇದು ವಿಜಯನಗರ ಸಾಳುವ ಮನೆತನದ ಅರಸರ ಕಾಲದ ಘಟನೆ. ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲೂಕಿನ ಇಂದಿನ ಶ್ರೀರಾಮಪುರವನ್ನು ಕೇಂದ್ರವಾಗಿಟ್ಟುಕೊಂಡು ಆ ಪ್ರದೇಶದ ಪಾಳೆಯಗಾರರೂ ಸಾಳುವ ನರಸಿಂಹನೂ ನಡೆಸಿದ ಒಂದು ಪ್ರಾಂತೀಯ ಯುದ್ಧ ಸಂಘರ್ಷವಿದು. ಈ ಯುದ್ಧ ಚಟುವಟಿಕೆಯಲ್ಲಿ ತೊಡಗಿದ ಗ್ರಾಮಗಳು, ವ್ಯಕ್ತಿಗಳು, ಯುದ್ಧದ ಪ್ರತಿಯೊಂದು ಚಲನವಲನಗಳು ಇತ್ಯಾದಿಗಳಿಂದಾಗಿ ಇದೊಂದು ಅಪೂರ್ವ ಐತಿಹಾಸಿಕ ಕೃತಿಯಾಗಿದೆ. ಇದು ರಾಜಕೀಯ ಘಟನೆಯಾಗಿದ್ದರೂ ಅಲ್ಲಲ್ಲಿ ಹೆಣೆದುಕೊಂಡ ಸಾಮಾಜಿಕ ಜೀವನ, ವ್ಯಾಪಾರ, ಸಾಂಸ್ಕೃತಿಕ ಮೌಲ್ಯಗಳು ಅಭ್ಯಾಸಯೋಗ್ಯವೆನಿಸಿವೆ. ಇವುಗಳ ವಿವರವಾದ, ಖಚಿತವಾದ ಅಭ್ಯಾಸ ಮುಂದುವರಿಯುವುದು ಅತ್ಯವಶ್ಯ.

ಈ ಯುದ್ಧದ ವಿಷಯವು ಸಿರುಮನನ್ನು ಕುರಿತ ಮೂರು ಕೃತಿಗಳಲ್ಲಿ ಒಂದೇ ರೀತಿ ಬರುತ್ತಿದ್ದರೂ ಅಲ್ಲಲ್ಲಿ ವ್ಯತ್ಯಾಸವೂ ಇದೆ. ಇದರಲ್ಲಿ ಯಾವುದು ನಿಜ? ಎಷ್ಟು ನಿಜ? ಎಂಬುದನ್ನು ನಿಶ್ಚಯಿಸಬೇಕಾಗಿದೆ. ಈ ಕೃತಿಗಳಲ್ಲದೆ ಬೆಟ್ಟವರ್ಧನಚರಿತೆ (ಚಂದ್ರಸಾಗರವರ್ಣಿ)ಯಲ್ಲಿ ಈ ಯುದ್ಧದ ಕೆಲವು ವಿಷಯಗಳು ಬರುತ್ತಿದ್ದು, ನರಸಿಂಹನು ಸಿರುಮನನ್ನು ಕೊಂದು 'ಹೆಗ್ಗೆರೆ ಬಸದಿಲೆ ಇಡಿಸಿ ಶಾಸನವನ್ನೆದಿದನು' ಎಂದು ಅಲ್ಲಿ ಹೇಳಲಾಗಿದೆ.[೧] ತೆಲುಗು ವರಾಹಪುರಾಣ, ಬಾಲಭಾಗವತಮು ಗ್ರಂಥಗಳಲ್ಲಿಯೂ ಈ ಯುದ್ಧಕ್ಕೆ ಸಂಬಂಧಿಸಿದ ವಿವರಗಳು ಸಿಗುತ್ತವೆ. ಈ ಕೃತಿಗಳ, ಬೇರೆ ಶಾಸನಗಳ

---

೧. ಚಂದ್ರಸಾಗರವರ್ಣಿಯ ಕೃತಿಗಳು (ಸಂ.ಹಂಪ ನಾಗರಾಜಯ್ಯ ಮತ್ತು ಎಸ್. ಶಿವಣ್ಣ) ಪು.೪-೪೨

ಮತ್ತು ಈ ಪ್ರದೇಶದ ಗ್ರಾಮಗಳ ಅಭ್ಯಾಸದಿಂದ ಸಿರುಮನ ಇತಿಹಾಸವನ್ನು ಪುನರ್‍ರಚಿಸುವ ಕೆಲಸ ನಡೆಯಬೇಕಾಗಿದೆ.

ಪರಿಷ್ಕರಣ

'ಸಿರುಮಣನಾಯಕನ ಸಾಂಗತ್ಯ'ವನ್ನು ಪರಿಷ್ಕರಿಸುವುದಕ್ಕೆ ಮ, ಮೈ ಸಂಕೇತಗಳಿಂದ ಬಳಸಿಕೊಂಡ ಹಸ್ತಪ್ರತಿಗಳ ವಿವರ ಹೀಗಿದೆ:

'ಮ' ಹಸ್ತಪ್ರತಿ: ಮದ್ರಾಸ ಪ್ರಾಚ್ಯ ಸಂಶೋಧನೆ ಇಲಾಖೆಯ ತಾಳೆಗರಿ ಪ್ರತಿ. ಡಿ. ೧೦೭೩ ಇದರ ನಂಬರ್. ೧೧ ೧/೨"x೧ ೧/೪" ಆಕಾರದ ಈ ಪ್ರತಿಯಲ್ಲಿ ೧೪೧ ಗರಿಗಳಿವೆ. ತ್ರುಟಿತವೂ ಅಶುದ್ಧವೂ ಆಗಿರುವ ಇದರ ಅಕ್ಷರ ಚೆನ್ನಾಗಿವೆ. ಮೊದಲನೆಯ ಮತ್ತು ೧೬ನೆಯ ಗರಿ ಕಳೆದುಹೋಗಿವೆ. ಕೊನೆಯಲ್ಲಿ "ಚೈತ್ರ ಬಹುಳ ೧೨ರಲ್ಲು ದುಂದುಭಿ ಸಂವತ್ಸರದಲು ಬರೆದ ತುರುವೆಕೆರೆ ಗೋಪುರದ ವಿನಾಯಕನ ಪಾದ ಪದ್ಮಂಗಳೇ ಗತಿ. ಗಂಗಾಧರಸ್ವಾಮಿಯ ಪಾದವೇ ಗತಿ" ಎಂದು ಮುಕ್ತಾಯವಾಗುತ್ತದೆ. ಈ ಹಸ್ತಪ್ರತಿಯ ಹೆಚ್ಚಿನ ವಿವರಗಳಿಗಾಗಿ ``A descriptive catalogue of the Kannada manuscripts in the Government Oriental Manuscripts Library Madras" Vol. VI. Page 1406. ನೋಡಬಹುದು.

'ಮೈ' ಹಸ್ತಪ್ರತಿ: ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿರುವ ಕಾಗದಪ್ರತಿ. ಕೆ.ಎ. ೫೪೯ ಇದರ ನಂಬರ್. ೧೦.೪" x ೯.೪" ಆಕಾರದ ಈ ಪ್ರತಿಯಲ್ಲಿ ೭೩ ಪುಟಗಳಿವೆ. ಇದು'ಮ' ಪ್ರತಿಯ ನೇರ ನಕಲುಯೆಂದು ಇದರ ಕೊನೆಯ ಇಂಗ್ಲಿಷ್ ಬರವಣಿಗೆಯಿಂದಲೂ ಗುಣ-ದೋಷಗಳ ಯಥಾವತ್ತತೆಯಿಂದಲೂ ಸ್ಪಷ್ಟವಾಗುತ್ತದೆ. ಇದರ ಹೆಚ್ಚಿನ ವಿವರಗಳಿಗಾಗಿ ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆ ಪ್ರಕಟಿದ "ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ ಸಂಪುಟ ೯. ಪುಟ ೧೩೭" ನೋಡಬಹುದು.

ಹೀಗೆ ನೋಡಲಿಕ್ಕೆ ಎರಡು ಪ್ರತಿಗಳಾಗಿದ್ದರೂ ಇವು ಮೂಲತಃ ಒಂದೇ ಪ್ರತಿಯಾಗಿರುವುದರಿಂದ ಇದು ಏಕೈಕ ಪ್ರತಿ ಪರಿಷ್ಕರಣವೆಂದೇ ಹೇಳಬೇಕು. ಏಕೈಕ ಹಸ್ತಪ್ರತಿಯ ಅದರಲ್ಲಿಯೂ ತ್ರುಟಿತ, ಅಶುದ್ಧ ಪ್ರತಿಯ ಪರಿಷ್ಕರಣ ಜಟಿಲವಾದುದೆಂದು ಬೇರೆ ಹೇಳಬೇಕಿಲ್ಲ. ಮೇಲಾಗಿ ಇದು ನಡುಗನ್ನಡಭಾಷೆಯ ಹಾಡುಗಬ್ಬ. ಅದರಲ್ಲಿಯೂ ಐತಿಹಾಸಿಕ ಕೃತಿ. ಹೀಗಾಗಿ ಇದರ ಪರಿಷ್ಕರಣ ಪ್ರಸಂಗದಲ್ಲಿ ಹೆಜ್ಜೆ ಹೆಜ್ಜೆಗೂ ಊಹೆಯ ಅಗ್ನಿಪರೀಕ್ಷೆಯನ್ನು ಎದುರಿಸಬೇಕಾಯಿತು. ಇಲ್ಲಿಯ ಕೆಲವು ಊಹೆಗಳು ನನಗೇ ತೃಪ್ತಿಯನ್ನುಂಟುಮಾಡಿಲ್ಲ. ಮತ್ತೆ ಕೆಲವು ಊಹಾತೀತವಾಗಿ ನಿಂತವು. ಈ ಕೊರತೆಯನ್ನು ವಿದ್ವಾಂಸರು ತುಂಬಿಕೊಡಬೇಕೆಂಬ ಭಾವನೆಯಿಂದ ಎರಡೂ ಹಸ್ತಪ್ರತಿಗಳ ಅನ್ಯಪಾಠಗಳನ್ನು ಒಂದೂ ಬಿಡದಂತೆ ಅಡಿಯಲ್ಲಿ ಕೊಟ್ಟಿದ್ದೇನೆ. ಇವುಗಳ ಸಹಾಯದಿಂದ ಇನ್ನೂ ಶುದ್ಧಪಾಠವನ್ನು ಬಲ್ಲಿದರು ನಿರ್ಣಯಿಸಿದರೆ ನನಗೆ ಅದಕ್ಕಿಂತ ಹೆಚ್ಚಿನ ಸಂತೋಷ ಮತ್ತೊಂದಿಲ್ಲ.

ಪರಿಷ್ಕರಣದ ಒಂದು ಭಾಗ ಪ್ರಸ್ತಾವನೆ. ಚರಿತ್ರೆಯನ್ನು ವಸ್ತುವಾಗುಳ್ಳ ಪ್ರಾಚೀನಕೃತಿಗಳ ಸಂಪಾದನೆಗೆ ಭಾಷೆ-ಛಂದಸ್ಸು ಇತ್ಯಾದಿಗಳ ಜೊತೆಗೆ ಇತಿಹಾಸದ ಪರಿಚಯ ಅವಶ್ಯ. ಆದರೆ ಸಿರುಮನ ರಾಜಕೀಯ ಚಟುವಟಿಕೆಗಳು ಶಾಸನಾದಿಗಳಲ್ಲಿ ಅಥವಾ ಇತರ ದಾಖಲೆಗಳಲ್ಲಿ ಅಷ್ಟಾಗಿ

ಸಿಗುವುದಿಲ್ಲ. ಆದುದರಿಂದ ಸಿರುಮನ ರಾಜಕೀಯ ಕ್ಷೇತ್ರವಾದ ಶ್ರೀರಾಮಪುರ ಪ್ರದೇಶದ ಕ್ಷೇತ್ರಕಾರ್ಯ, ಹುಲ್ಲೂರು ಶ್ರೀನಿವಾಸ ಜೋಯಿಸರು ಪ್ರಕಟಿಸಿದ ಸಿರುಮನಚರಿತೆ ಮತ್ತು ವಿಜಯನಗರದ ಇತಿಹಾಸ–ಇಷ್ಟರಿಂದ ಪ್ರಸ್ತಾವನೆಯನ್ನು ಸಿದ್ಧಪಡಿಸಬೇಕಾಯಿತು. ಈ ಕೃತಿಯನ್ನು ಇತಿಹಾಸದ ಒರೆಗೆ ಹಚ್ಚುತ್ತ ಪ್ರತಿಯೊಂದು ಹೆಸರು, ಘಟನೆಯನ್ನು ಪುನರ್ರಚಿಸುವ ಕೆಲಸವನ್ನು ಇತಿಹಾಸ ತಜ್ಞರಿಂದ ಅಪೇಕ್ಷಿಸುತ್ತೇನೆ.

ಕೃತಜ್ಞತೆ

'ಸಿರುಮಣನಾಯಕನ ಸಾಂಗತ್ಯ' ಗದುಗಿನ ಶ್ರೀ ತೋಂಟದಾರ್ಯಮಠದ "ವೀರಶೈವ ಅಧ್ಯಯನ ಸಂಸ್ಥೆ" ಕೈಗೊಂಡಿರುವ "ಸಮಗ್ರ ವೀರಶೈವ ಅಪ್ರಕಟಿತ ಪ್ರಾಚೀನ ಸಾಹಿತ್ಯ ಪ್ರಕಟನಾ ಯೋಜನೆ"ಯ ಅಂಗವಾಗಿ ಬೆಳಕಿಗೆ ಬರುತ್ತಲಿದೆ. ಈ ಯೋಜನೆಯ ಪ್ರೇರಕಶಕ್ತಿಯಾದ ಪೂಜ್ಯ ಶ್ರೀ ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳವರಿಗೆ ಪ್ರಣಾಮಗಳು.

ಮೈಸೂರು ಪ್ರತಿಯನ್ನು ಒದಗಿಸಿದ ಡಾ. ಹಾ. ಮಾ. ನಾಯಕ, ಮದ್ರಾಸ ಹಸ್ತಪ್ರತಿಯ ಪಾಠಗಳನ್ನು ಗುರುತಿಸುವಲ್ಲಿ ನೆರವಾದ ಡಾ. ಕೆ.ಕೆ. ಗೌಡ ಅವರಿಗೆ ನನ್ನ ವಂದನೆಗಳು. ಸಿರುಮನನ್ನು ಕುರಿತ ಕ್ಷೇತ್ರಕಾರ್ಯದಲ್ಲಿ ನೆರವಾದ ಶ್ರೀರಾಮಪುರದ ಶ್ರೀ. ಎಂ. ರಂಗಯ್ಯ ಅವರಿಗೂ ಹಸ್ತಪ್ರತಿ ಸಿದ್ಧಪಡಿಸುವಲ್ಲಿ ಸಹಾಯ ನೀಡಿದ ಪ್ರೊ. ಹನುಮಾಕ್ಷಿ ಗೋಗಿ ಅವರಿಗೂ ಕೃತಜ್ಞತೆಗಳು.

– ಎಂ. ಎಂ. ಕಲಬುರ್ಗಿ

ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೮–೪–೧೯೮೩

❖❖

*

ಪರಿವಿಡಿ

ಸಂಧಿ : ಒಂದು

. . . . ಉ ।
ದರದಲಿ ರತ್ನಹಾರಗಳು ।
ಸರಸಿಜಭವನಾರ್ಧಾಂಗಿಯ ಬಲಗೊಂಡು।
ವಿರಚಿಸಿ ಪೇಳ್ವೆನೀ ಕೃತಿಯ ॥೭॥[೧]

ಶಿವಕವಿಗಳ ಭೃತ್ಯನ ಬಿನ್ನಪವನು ।
ವಿವರಿಸಿ ಕೇಳಿ ಸಜ್ಜನರು
ಭುವನವರಿಯೆ ಗೊಲ್ಲ ಸಿರುಮನ ಕೃತಿಯನು।
ಪವಣಿಸಿ ಸಿದ್ಧನೊರೆದನು ॥೮॥

ಪೃಥಿವಿಯರಿಯೆ ವರ್ಣಿಸುವೊಡೆ ಬೂದಿ[೨][ಯ][೨]ಹಾಳು।
ಪ್ರಥಮಕಲ್ಯಾಣವೆಂದೆನಿಸಿ
ಅತಿಶಯ ಗುರುಪೂಜೆ ಜಂಗಮಾರ್ಚನೆಯನು।
ನುತಿಸುವರಿ[೩][ಗೆಯ][೩]ಗೋಚರವು ॥೯॥

ವ್ಯಾಸನ ತೋಳಿಂದ ವೃಷಭಧ್ವಜದಿ ನಿ।
ರಾಸಯ ಮಠವು ರಂಜಿಸಿತು
ಈಶ್ವರ ತಪಸಿ ವೀರೇಶ್ವರಲಿಂಗನು।
ಬಸವನಿಹುದ[೪][ದ]ನೇನೆಂಬೆ ॥೧೦॥

---

೧ "ಶ್ರೀ ಗಣಾಧಿಪತಿಯೇ ನಮಃ॥ ಶುಭಮಸ್ತು ಶೋಭನಮಸ್ತು ಆಯುರಾರೋಗ್ಯ ಐಶ್ವರ್ಯಮಸ್ತು ॥ ಸಿರುಮಣನಾಯಕನ ಸಾಂಗತ್ಯ ಪುಸ್ತಕಕ್ಕೆ ಶುಭಮಸ್ತು"–ಇಷ್ಟು ಭಾಗ 'ಮ' ಪ್ರತಿಯಲ್ಲಿ ಪುಟಸಂಖ್ಯೆ ನಮೂದಿಸದ ಗರಿಯ ಮೇಲಿದೆ. ಆಮೇಲೆ ೧ನೆಯ ಗರಿ ಕಳೆದು ಹೋಗಿದೆ. ೨ನೆಯ ಗರಿ 'ಉರದಲಿ ರತ್ನಹಾರಗಳು'–ಎಂದು ಪ್ರಾರಂಭವಾಗುತ್ತದೆ. ಇದರ ನಕಲಾಗಿರುವ 'ಮೈ' ಪ್ರತಿಯಲ್ಲಿಯೂ ಹೀಗೆಯೇ ಇದೆ (ಸಂ). ೨–೨ X (ಮ, ಮೈ). ೩–೩ ಗ ಅ (ಮ, ಮೈ). ೪–೪ X (ಮ, ಮೈ).

ಕೆರೆ ಬನ ಪೂದೋಟ ಪದಿಜಾಳಿಯ (?) ವನ।
ಮೆರೆವ ಚೆಂದೆಂಗು ಖರ್ಜೂರ
ತುರುಗಿ [೫][ಬೆಳೆ][೫]ದ ಕ್ರಮುಕದ ಮರನಲ್ಲಲ್ಲಿ।
ಬರನಿಲ್ಲವಾ ದೇಶದೊಳಗೆ ॥೧೧॥

ಕೆತ್ತುಗಲ್ಲುಗಳ ಸೇರುವೆಯ ಶೃಂಗಾರವು।
ಚಿತ್ರದ ತೆನೆಗೆಲಸಗಳು
ಹತ್ತು ಮಾರಿಗೆ ಒಂದು ಕೊತ್ತಳ ಹೂಡೆವು।
ಮೊತ್ತವಾದಂಬುಗಂಡಿಗಳು ॥೧೨॥

ಸುತ್ತ ಬಳಸಿ ನೆಲಗನ್ನ ಚೋರ್ಗಂಡಿಯ ।
ಮುತ್ತುವ ರಾಯರಿಗರಿದು[೬] ॥೧೩॥

ಹೊರಸುತ್ತಿನಗಳ ಜಲವ ನೋಡಲಳವಲ್ಲ।
ಒರತು ಹರಿವ ಜಲಸೂತ್ರ
ತುರುಗಿಹ ಮೀನು ಮೊಸಳೆಗಳ [೭][ಭೀತಿಗೆ][೭] ।
ಎರಗುವ ಮುನ್ನೇರಿಗರಿದು ॥೧೪॥

ಇಟ್ಟಣಿಸಿದ ಹುಲಿಮುಖವಂಕರಿಗಳು ।
ದಟ್ಟನುಸಿವ ಕಾಲ[೮]ಯಮ[೮]ನು
ಬಿಟ್ಟ ಬಾಯಂತೆ ಮೈಲಾರ್[೯]ನ್[೯]ಶವ(?) ನೆರೆ।
ತೊಟ್ಟಂತೆ ಬಾಗಿಲೊಪ್ಪಿಹುದು ॥೧೫॥

ಕಪ್ಪರಿವೀರನ ಬಾಗಿಲ ಬಲಗೈಯ ।
[೧೦][ಲೊಪ್ಪಿತ್ತು][೧೦] ರಣಕೊತ್ತಳವು
ಒಪ್ಪದಿಂದೆಸೆವ ಭೈರವನ ಕೊತ್ತಳವಿಹ।
ದರ್ಪವನದನೇನೆಂಬೆ ॥೧೬॥

೫–೫ ಬೋಳ (ಮ, ಮೈ). ೬. ಈ ಪದ್ಯ ಎರಡೂ ಪ್ರತಿಗಳಲ್ಲಿ ಅರ್ಧರೂಪದಲ್ಲಿದೆ (ಸಂ). ೭–೭ ಭಿತ್ತಿಗೆ (ಮ, ಮೈ). ೮–೮ ಯೆವಂ (ಮ). ೯–೯ ವ (ಮ). ೧೦–೧೦ ವೊಪ್ಪಿತು (ಮ, ಮೈ)

ಒಳಿತವಾಳುವ ಗೊಲ್ಲ ಸಿರುಮನ ಕೋಟೆಗೆ।
ತಳಿತ ತಾವರೆಯ ಕೊಳಗಳು
ಹೆಳಹಿದ ಗುಂಡುಗಲ್ಲುಗಳ ರಾಸಿಗಳು ಭೂ।
ತಳವೆಲ್ಲ ತೆರಪಿಲ್ಲದಂತೆ ॥೧೭॥

ಇಂತೆಸೆದಿಹ ಬೂದಿಹಾಳ ಶೃಂಗಾರವ ।
ನೆಂತು ಬಣ್ಣಿಸಲೆನಗರಿದು
ಅಂತರಂಗದ ಕೇರಿಯ ರಾಜಬೀದಿಯು ।
ಕಂತುಹರ[೧೧][ನು][೧೧] ಬ[೧೨][ಲ್ಲ][೧೨]ನ್ನೈಸೆ ॥೧೮॥

ಧುರಧೀರ ಸಿರುಮಭೂವರನರಮನೆಯೊಳು।
ಹಿರಿಯುಪ್ಪರಿಗೆ ರಂಜಿಸಲು
ಬಿರಿದಿನುಪ್ಪರಗುಡಿ ವ್ಯಾಸನ ತೋಳಿಂದ ।
ತರತರದಲಿ ಹೊನ್ನ ಕಳಸ ॥೧೯॥

ಮಂತ್ರಿಜನರು ಮನ್ನೆಯರಧಿಕಾರರು।
ತಂತ್ರಿಗಳಧಿಕ ಜೋಯಿಸರು
ಪಂಥದ ತಳವಾರರು ವೀರ ರಾವುತ।
[೧೩][ಹಂ][೧೩]ತದ ಕೇರಿಯೊಪ್ಪಿದವು ॥೨೦॥

ಸುರಪನ ಜರೆವ ಸು[೧೪][ಖಕ][೧೪]ತಿಭೋಗದಿ।
ಸಿರಿವುಳ್ಳ ವರಕುಬೇರನನು
ಸರಿಗಾಣೆನೆಂಬ ವಾಣಿಜ ವರ್ಮಗಾರರು।
ಸಿರುಮನ ಪುರೊದಳಗಿಹರು ॥೨೧॥

ಆ ಪಟ್ಟಣವನಾಳುವ ಸಿರುಮೇಂದ್ರನು ।
ರೂಪಿಲಿ ಕುಸುಮಕೋದಂಡ
ಭಾಪುರೆ ಸುಜನಜನರ್ಗೀವವನಿಹ ।
ಭೂಪನಾ [೧೫]ಪು[೧೫]ರದೊಳೊಪ್ಪಿಹನು ॥೨೨॥

೧೧–೧೧ ನ (ಮ, ಮೈ), ೧೨–೧೨ ಲ (ಮ, ಮೈ). ೧೩–೧೩ ರಂ (ಮ, ಮೈ). ೧೪–೧೪–ಖಿಗ (ಮ, ಮೈ). ೧೫–೧೫ ಸು (ಮ).

ಮಕ್ಕಳೊಳಗೆ ಮದಕರಿಯ ಪದುದನಂಗ (?)।
ಚಿಕ್ಕ ಕುಮಾರ ಮಲ್ಲಯನ
ಹೊಕ್ಕು ಮೂದಲಿಸುವ ವೀರ [೧೬]ಶಲ್ಲೆಂದೆನುತೆ[೧೬] ।
ಮಿಕ್ಕು ಮನದರ ಲೀಲಾ[೧೭] ॥೨೩॥

ಕಾಚನಾಯಕ ವೀರಭದ್ರ ಹಿರಿಯಸೋಮ।
ನಾಚಾರದಲಿ ಮಲ್ಲನೃಪನು
ಭೂಚರನೃಪರೊಳು ಸಿರುಮನಗ್ಗಳನಾಗಿ ।
ಗೋಚರದಲಿ ಇರುತಿಹನು ॥೨೪॥

ಸುತ್ತಣ ದೇಶವೆಲ್ಲವ ದೊರೆ ಸಿರುಮಯ।
ನೊತ್ತಿಯಾಳುತ ಸುಖವಿರಲು
ಮೃತ್ಯುವ ಮರನೇರಿ ಕರೆವೋಲು ಗಂಗಯ್ಯ।
ಕೃತ್ರಿಮ ಮನವ ತಾಳಿದನು ॥೨೫॥

ಅರಸುಗಳೊಳು ಗೊಲ್ಲ ಸಿರುಮ ಬಲ್ಲಿದನೆಂದು।
ನರಸಿಂಗರಾಯ ಕೇಳಿದನು
ಕರೆಸಿದ ಈಶ್ವರನಾಯಕ ಮಂತ್ರಿಯ ।
ವಿರಸವ ತಾಳಿ ಮನದೊಳು ॥೨೬॥

ಸೊಕ್ಕಿದ ಗೊಲ್ಲನ ನಾಡನಿರಿದು ಅವ।
ನುಕ್ಕ ಮುರಿವೆನೆಂದೆನುತ
ವಿಕ್ರಮ ನರಸಿಂಗರಾಯ ಕೋಪವ ತಾಳಿ।
ಧಿಕ್ಕರಿಸಿದ ಗದ್ದುಗೆಯ ॥೨೭॥

ಚಂದ್ರಗಿರಿಯ ಗುಂಡೆಯ ನರಸಿಂಗನು ।
ಬಂದನು ತಿರುಮಲಗಿರಿಗೆ
ಅಂದಳವಿಳಿದು ಸ್ನಾನವ ಮಾಡಿ ರಾಯನು ।
ಬಂದ ಪ್ರದಕ್ಷಿಣವಾಗಿ ॥೨೮॥

೧೬–೧೬ ಮತ್ತೆ (ಮೈ). ೧೭ ಈ ಪದ್ಯದ ಅರ್ಥ ಅಸ್ಪಷ್ಟ (ಸಂ).

ಚಿನ್ನ[೧೮][ದ] ಪುಷ್ಪ[೧೮] ಬೆಳ್ಳಿಯ ಪುಷ್ಪ ಕೈಯಲಿ।
ಪನ್ನೆಗರ್ಪೂರ [೧೯][ತಟ್ಟೆ][೧೯]ಯೊಳಗೆ
ತನ್ನ ಕೈಯಾರೆ ಪೂಜೆಯ ಮಾಡಿ ರಾಯನು।
ಉನ್ನಿಸಿದಂದದಲಿಕ್ಕಿದನು (?) ॥೨೯॥

ವೇದರಾಜನು ಬಾಗೂರ ಗೋವಿಂದನು।
ಬೂದಿಹಾಳಿನ ಗೊಲ್ಲ ಸಿರುಮ
ಆದರದಿಂದೆನ್ನ ವಶವಾಗೆ ಸ್ವಾಮಿಯ ।
ಪಾದಕೆ ಹಿಡಿಹೊನ್ನ ಸುರಿವೆ ॥೩೦॥

ಇಂಡೆ ಪ್ರಸಾದವ ತಕ್ಕೊಂಡು ನರಸಿಂಗ।
ಮಂಡಲಪತಿ ತಿರುಗಿದನು
ದಂಡು ಕದಲಬೇಕೆಂದು ಚಾವಡಿಯಲಿ ।
ಮಂಡಿಸಿ ನುಡಿದನಾಗ್ರದಲಿ ॥೩೧॥

ಮಂತ್ರಿಶಿರೋಮಣಿ ಈಶ್ವರನಾಯಕ ।
ಮಂತ್ರಿಯ ಕರೆದು [೨೦][ಹೇ][೨೦]ಳಿದನು
ಪಂಥದ ರಾಯರಾವುತರಿಗೆ ವೀಳ್ಯವ ।
ಚಿಂತೆಯಿಲ್ಲದೆ ಕೊಡು ಬೇಗ ॥೩೨॥

ಉರ್ವಿಪ ಗುಂಡೆಯ ನರಸಿಂಗರಾಯನು।
ಸರ್ವಮನ್ನೆಯರನು ಕರೆಸಿ
ಗರ್ವದ ಮನ್ನೇರ ಮೇಲೆ ನಡೆವೆನೆಂದು ।
ಪರ್ವಿಸಿ ದಂಡ ಕದಲಿ[೨೧][ದ][೨೧] ॥೩೩॥

ದೊರೆಗಳ ಕುದುರೆಯಲ್ಲದೆ ತನ್ನ ಲಾಯದ।
ತುರುಗವಿಪ್ಪತ್ತು ಸಾವಿರವು
ಧರೆ ಬೆಸಲಾದಂತೆ ಸಾಳುವರಾಯನು ।
ಪರಸ್ತಾನವ ಮಾಡಿದನು ॥೩೪॥

೧೮-೧೮ ಪುಷ್ಪದ (ಮ, ಮೈ). ೧೯-೧೯ ಕಟ (ಮ, ಮೈ). ೨೦-೨೦ ಕೇ (ಮ, ಮೈ). ೨೧-೨೧ ದು (ಮ, ಮೈ).

ಗುಡಿ ಸರವತ್ತಿಗೆ [೨೨]ಸಾರ[ಧ][೨೨]ನದ ಬಂಡಿ।
ಒಡನೆ ಉಪ್ಪರಿಗೆಯ ಬಂಡಿ
ಗಡಣದ ಹಕ್ಕರೆಯ ಹೇರು ಕೊಟ್ಟಿಗೆ।
ಪಡೆ [೨೩][ನ][೨೩]ಡೆಯಿತ್ತು ಸಂಭ್ರಮದಿ ॥೩೫॥

ಕರಿಘಟೆ ತುರಗದಳವು ನಡೆಯಿತು ಮುಂದೆ।
ಧರೆ ಬೆ[೨೪][ಸಲಾ][೨೪]ದಂದದಿ
ಭರದಿ ಪೊಳೆವ ನಿಸ್ಸಾಳ ತಂಬಟ ಭೇರಿ।
ಹಿರಿಯ ಹೆಗ್ಗಾಳೆಗಳೊದರೆ ॥೩೬॥

ದಂಡು ನಡೆವ ರಭಸಕೆ ತಾಳಲಾರದೆ।
ಕಂಡರು ಮಲೆವ ಮನ್ನೆಯರು
ಗುಂಡೆಯ [೨೫][ಸಾ][೨೫]ಳುವ ನರಸಿಂಗರಾಯನು।
ಕೊಂಡ ಡೆಂಕಣಿಯ ಕೋಟೆಯನು ॥೩೭॥

ಕೋಳುಗೋಟೆಯಲು ಕಂಬಳ ಕಾಣಿಸಿಕೊಂಡು।
ದಾಳಿಯ ಅರಗುಂಡೆಗಾಗಿ
[೨೬][ಸಾ][೨೬]ಳುವ ನರಸಿಂಗ ಗಂಗಾಧರನು ಮುಟ್ಟು।
ಗೋಳು ಸಹಿತ ತೆರಳಿದನು ॥೩೮॥

ಕಾ[೨೭][ಲೊ][೨೭]ಳು ಮುಳುವಾಗಿಲ ಸೂರೆಯಾಡಿದ।
ದಾಳಿ [೨೮]ಸಾ[೨೮]ವಂದಿಗೆ ನಡೆಯೆ
ಹಾಳು ಮಾಡುತ ದೇಶವೆಲ್ಲವ ರಾಯನು ।
ಕೋಳು ಮುಂತಾಗಿ ತಿರುಗಿದ ॥೩೯॥

ಎಪ್ಪತ್ತೇಳು ಕೋಟದ ಬೇಡರನೆಲ್ಲ।
ದರ್ಪ[೨೯][ಗೆ][೨೯]ಡಿಸಿ ಸೂರೆಮಾಡಿ
ಕಪ್ಪಕಾಣಿಕೆ ಕೈಸೆರೆಗಳ ತಕ್ಕೊಂಡು।
ಉಪ್ಪರದಲಿ ನಡೆತಂದ ॥೪೦॥

೨೨–೨೨ ಸಾಗರದ (ಮ, ಮೈ). ೨೩–೨೩ ವ (ಮ, ಮೈ). ೨೪–೨೪ ಬೆಲ (ಮ), ಬಬಲ (ಮೈ), ೨೫–೨೫ ನಾ (ಮ, ಮೈ). ೨೬–೨೬ ನಾ (ಮ, ಮೈ).೨೭–೨೭ ಲಾ (ಮ, ಮೈ). ೨೮–೨೮ ಸ (ಮ). ೨೯–೨೯ ವ (ಮ, ಮೈ).

ಕುದುರೆನಾಯಕ [೩೦][ಸಾ][೩೦]ಳುವಪ್ಪರಾಜನು।
ಇದಿರಾಗಿ ಬಂದು ಕಾಣುತಲಿ
ಒದವಿದ ಉಲುಪೆಗಾಣಿಕೆ ಸಹಿತಲಿ ರಾಯ।
ಸದಳ ಸಹಿತ ನಡೆತಂದ ॥೪೧॥

ಬಿಟಬಿಟ್ಟ ಪಯಣಕೆ ಕಂಡು ನಡೆವರಾ[೩೧][ಗ][೩೧]।
ನೀಟಿ ನಡೆವ ಮನ್ನೆಯರು
ಕೋಟ ಕೋಟಗಳನೆಲ್ಲವ ಕಾಣಿಸಿಕೊಂಡು।
ನೇಟನೆ ಪೆನುಗೊಂಡೆಗಾಗಿ ॥೪೨॥

ಬರುತ ಕೋಟೆಯ ತಿಮ್ಮರಾಜ ಗುಬ್ಬಿಯ ಸೋಮ।
ತೆರೆಯೂರ ಕರಿಯಣ್ಣಗೌಡ
ಭರದಿ ಮುದಿಗೆರೆಯ ಸೋಮಣ್ಣ ಹೊಸವೂರ।
ರಿರದೆ ಕಂಡರು ರಾಯನನು ॥೪೩॥

ಕಂಡರು ಸುತ್ತಣ ನಾಡ ಮನ್ನೆಯರಾಗ ।
ಗುಂಡೆಯ ನರಸಿಂಹನನು
ಹಿಂಡು ಮನ್ನೆಯರ ದಳವು ಸಹಿತಲಿ ಪೆನು।
ಗೊಂಡೆಯ[೩೨][ದ]ಲಿ ಪಾಳ್ಯ ಬಿಟ್ಟು ॥೪೪॥

ಕರೆಸಿದ ಈಶ್ವರನಾಯಕಮಂತ್ರಿಯ।
ನರಸಿಂಗರಾಯ ಬೇಗದಲಿ
ಬರಸು ಕೊನೇರಿರಾಯನ ಮೇಲೆಂಬತ್ತು।
ತರಿಸು ವೆಚ್ಚದ ಹೊನ್ನ ಎಂದ ॥೪೫॥

ನಾಡ ಉಲುಪೆ ಉಡುಗೊರೆ ಬಿಟ್ಟ ಪಯಣದ ।
ಬೀಡು ಲೆಕ್ಕದ ಹೊನ್ನ ಸಹಿತ
ರೂಢಿಪಾಲಕ ನರಸಿಂಗಗೊಪ್ಪಿಸೆ ಮೆಚ್ಚಿ।
ಕೂಡಿತ್ತ ಪಲ್ಲಕ್ಕಿಯನು ॥೪೬॥

೩೦–೩೦ ನಾ (ಮೈ). ೩೧–೩೧ X (ಮ, ಮೈ). ೩೨–೩೨ X(ಮ, ಮೈ).

ಕುದುರೆಗೆ ಹುರುಳಿ ಕಡಲೆಯಕ್ಕಿ ತುಪ್ಪವ।
ಮದದಾನೆಗಳಿಗೆ ಭೋಗವನು
ಸದಳವನಾಯವರಿದು ಬಿಡಿಸುವುದೆಂದು।
ಮದನವಿಜಯ ಮಂತ್ರಿಗೆಂದ ॥೪೭॥

ಯರಮಂಚಿ ಗುಟ್ಟಿಲಗುರಿಕೆಯ ಸರಸಿಯೆ।
ತೆರಪಿಲ್ಲದೆ ದಂಡುಬಿಡಲು
ಉರ್ವಿಪ ಗುಂಡೆಯ ನರಸಿಂಗರಾಯನು।
ಸರ್ವಮನ್ನೆಯರ ಕರೆಸಿದ ॥೪೮॥

ಸಾಳುವ ತಿಮ್ಮಯ್ಯ ಬೋಳುಕ ನಾಗಯ್ಯ।
ಏಳು ಹಳೆಯದ ರಾಮಯ್ಯ
ಊಳಿಗ ದವಸದಣ್ಣಿ ನಾಯಕನ ಬರ।
ಹೇಳಿದ ನರಸಿಂಗರಾಯ ॥೪೯॥

ಅಮ್ಮರಸ[೩೩][ನ][೩೩] ತೊಂಡೂರ ಪೊಮ್ಮರಸ[೩೩][ನ][೩೩]।
ತಿಮ್ಮರಸ[೩೩][ನ][೩೩]ತಿಪ್ಪರಸ
ತಮ್ಮರಸ[೩೩][ನ][೩೩] ರಾಮರಸನ ಕರೆಸಿದ।
ಗಮ್ಮನೆ ನರಸಿಂಗರಾಯ ॥೫೦॥

ಅಪ್ಪರಪಿಳ್ಳೆ ಕುಪ್ಪರಪಿಳ್ಳೆ ಗಜಸಿಂಹ।
ದರ್ಪದ ಮನ್ನೇರಪಿಳ್ಳೆ
ಒಪ್ಪುವ ಚಳ್ಳಪಿಳ್ಳೆಯ ಕರೆಸಿದನು ಕಂ।
ದರ್ಪ[೩೪][ನು][೩೪] ನರಸಿಂಗರಾಯ ॥೫೧॥

ನಾಗೆನಾಯಕ ತುಳುವರ ತೇಗೆನಾಯಕ।
ರೋಗದ ತೇಗೆನಾಯಕ[೩೫][ನ][೩೫]
ಸಾಗರ[೩೬][ಪ][೩೬]ತಿ ಸಾಳುವರಾಯ ಕರೆಸಿದ।
ನಾಗ ಸಕಲ ಮನ್ನೆಯರ ॥೫೨॥

೩೩–೩೩ ನು (ಮ, ಮೈ). ೩೪–೩೪ X(ಮ, ಮೈ). ೩೫–೩೫ ನು (ಮ, ಮೈ). ೩೬–೩೬ ವ (ಮ, ಮೈ).

ಆಳ ಪವುಜ ನೋಡುವೆನೆಂದು ನರಸಿಂಗ।
ಹೇಳಿದ ಮಂತ್ರೀಶ್ವರಗೆ
ನಾಳಿನ ದಿನ [೩೭][ಒಡ್ಡುವೆ][೩೭] ಪವುಜನೆನುತಲಿ।
ಪಾಳೆಯದೊಳು ಸಾರಿಸಿದ ॥೫೩॥

ಯರಮಂಚಿ ಬಾಗಿಲ ಬಡಗಣ ಬಯಲೊಳು ।
ಉರಿತ ಪೌಜಗಳ ಮಾಡಿದರು
ಗರುವ ಮನ್ನೆಯರ ಗಂಡ[೩೮][ನು ಸಾ][೩೮]ಳುವರಾಯ।
ನೆರೆ ನೋಡಿ ಪವುಜಿನೊಡ್ಡಣೆಯ ॥೫೪॥

ಪರಿವಾರದ ಪೌಜು ತುರಗ ದಳದ ಪೌಜು।
ಕರಿಘಟೆಗಳ ಸಂದಣಿಯು
[೩೯]ಶರಧಿ[೩೯] ಸಾಳುವ ಗುಂಡೆಯ ನರಸಿಂಹನು।
. . . . ॥೫೫॥[೪೦]

[೪೧][ಸಾ][೪೧]ಳುವ ನರಸಿಂಹ ಪೌಜ[೪೨][ನೊಡ್ಡಿ][೪೨]ದನೆಂದು।
ಕೇಳಿದ ಕಡುಗಲಿ ಸಿರುಮ
ಭಾಳಾಕ್ಷ ಸೋಮಯ್ಯ ಬಲ್ಲನೆನುತಲಾಗ ।
ಹೇಳಿದ ಕಲ್ಲರಸನಿಗೆ ॥೫೬॥

ಕರೆಸಿದ ಮಂತ್ರಿ ಕಲ್ಲರಸ ಮಲ್ಲಣ್ಣನ ।
ಕರೆಸಿದ ಭೈರನಾಯಕನ
ಕರೆಸಿದ ಕಾಚನಾಯಕ ಗರ್ಜುಲೋಬನ।
ಕರೆ[೪೩][ಯಿ][೪೩]ಸಿದನು ಗೊಂಡನನು ॥೫೭॥

ಆರ ಮೇಲೆ ನಡೆವನೊ ಕಾಣಬಾರದು।
ನರಸಿಂಹನುದ್ದಂಡನೆಂದು
ವೀರ ಸಿರುಮ ಕಲ್ಲರಸ ಮಲ್ಲಣವಿ।
ಚಾರಿಸದಿರೆ ಮೋಸ[೪೪][ವ][೪೪]ಹುದು ॥೫೮॥

೩೭–೩೭ ನೋಡು (ಮ, ಮೈ). ೩೮–೩೮ ನಾ (ಮ, ಮೈ). ೩೯–೩೯ ಪರಿದಿ (ಮೈ). ೪೦ ಈ ಪದ್ಯದ ಒಂದು ಚರಣ ಲೋಪವಾಗಿದೆ (ಸಂ). ೪೧–೪೧ ನಾ (ಮ, ಮೈ). ೪೨–೪೨ ನೋಡಿ (ಮ, ಮೈ). ೪೩–೪೩ X (ಮ, ಮೈ). ೪೪–೪೪ ಬ (ಮ, ಮೈ).

ಮುಟ್ಟ ಸುದ್ದಿಯ ಕೇಳಬೇಕು ಮಲ್ಲಣ್ಣ ಈ।
ಬಿಟ್ಟ ದಂಡಿನ ಸುದ್ದಿಗಳನು
ದಿಟ್ಟ ಮನದ ಬೇಹುಕಾರರ ಕರೆಸಿಯೆ।
ಕೊಟ್ಟನು ಉಡುಗೊರೆಗಳನು ॥೫೯॥

ಹಾರುವ ಬಸವರಾಯ[೪೫]ಗೆ ಕೊಟ್ಟ ಪಟ್ಟೆಯ।
ಸೀರೆ ಪದಕಾಭರಣವನು
ಧಾರಿಣಿಪತಿ ಸಿರುಮೇಂದ್ರ ಕೊಟ್ಟನು ಕಳ।
ವೀರಗೆ ಮೈದೊಡಿಗೆಯನು ॥೬೦॥

ಗಡೆಯ ಪೊತ್ತನ ಕರೆಸಿದನಾಗ ಸಿರುಮಯ್ಯ।
ಉಡಕೊಟ್ಟ ಮನದಣಿವನಕ
ಪೊಡವಿಪ ಸಾಳ್ವರಾಯನ ದಂಡ ನೋಡಲು।
ನಡೆ ಬೇಗ ಪೆನುಗೊಂಡೆಗೆಂದ ॥೬೧॥

ತಮ್ಮಡಿ ಕಳವೀರಗೆ ಕೊಟ್ಟ ಸಿರುಮಯ್ಯ।
ಇಮ್ಮಡಿ ಉಡುಗೊರೆಗಳನು
ತಮ್ಮ ಮೇಲಣ ರಾಜಕಾರ್ಯವೆಂದೆಂಬುದು।
ವರ್ಮವನರಿ ಹೋಗು ಬೇಗ ॥೬೨॥

ವೀರ ಸಿರುಮ ಕಳುಹಿದ ಬೇಹುಗಾರರು।
ಸೀರ್ಯಯಕಾಗಿಯೆ ಬಂದು
ಧಾರಿಣಿಪತಿ ಬೇಹುಕಾರರಿಗಾ ರಾಜ।
ಕಾರ್ಯದ ಹದನ ಹೇಳಿದರು ॥೬೩॥

ದಿನವೆರಡ[೪೬][ನು][೪೬] ಕಳೆವುತ ಬೇಹುಗಾರರು।
ಪೆನುಗೊಂಡೆಯ ಬಂದು ಹೊಕ್ಕು
ಅನುನ[೪೭][ಯುವ][೪೭]ರಿದು ಪಾಳೆಯಕಾಗ ಬಂದರು।
ಜನದ ಗುಂಪುಗಳ ನೋಡುತಲಿ ॥೬೪॥

೪೫+ರಸ (ಮ, ಮೈ).೪೬–೪೬ X(ಮ, ಮೈ). ೪೭–೪೭ ದಿಯ (ಮ, ಮೈ).

ಬೋಳ ಮಂಡೆಯು ಹೂವಿನ ಕರಡಿಗೆ ಕೈಯು।
ಪಾಳಯದೊಳು ಕಳವೀರ
ಸಾಳುವ ನರಸಿಂಹರಾಯನೊಡ್ಡೋಲಗ।
ವೇಳೆಯನರಿತು ಸಾರಿದನು ॥೬೫॥

ಹುಲ್ಲು ಮಾರುವ ನೆವ[೪೮]ದಿ[೪೮] ಗಡೆಯ ಪೊತ್ತ ತಾ।
ನೆಲ್ಲ ಪಾಳ್ಯವ ಸುತ್ತಿ ನೋಡಿ
ಬಲ್ಲಿದ ಮನ್ನೆಯರೊಡ್ಡೋಲಗದಲಿ।
ಎಲ್ಲ ಸುದ್ದಿಯ ಕೇಳದ[೪೯][ನು][೪೯] ॥೬೬॥

ಸಾಳುವ ನರಸಿಂಹರಾಯನೋಲಗವನು।
ಪೇಳುವರೆನ್ನಳವಲ್ಲ
ಮಾಳವ ಕರ್ನಾಟಕ ಮನ್ನೆರಾಯರ।
ತೋಳ ಬಲುಹು ಶಿವ ಬಲ್ಲ ॥೬೭॥

ದೊರೆಗಳು ಸರ್ವನಾಯಕರು ಪ್ರಧಾನರು।
ಕರಣಿಕರಧಿಕಾರಿಗಳು
ಮ[೫೦][ರೆವ][೫೦] ನಿಯೋಗಿ ಮಾಗಣೆಕಾರರುಗಳಿಂದ।
ಮೆರೆಯಿತು ರಾಯನೋಲಗ[೫೧][ವು][೫೧] ॥೬೮॥

ಎಡಬಲದಲಿ ಹರಿಬ್ರಹ್ಮ ಸಭೆಗಳೊಪ್ಪೆ।
ನಡುವಿದ್ದ ನರಸಿಂಗರಾಯ
ಗಡಣದ ಒಡ್ಡೋಲಗದೊಳೊಪ್ಪಿರ್ದನು।
ಕಡುಗಲಿ ಮಂತ್ರೀಶ್ವರನು ॥೬೯॥

ಕರೆದು ಮಂತ್ರಿಯ ಬೆಸಗೊಂಡನು [೫೨][ಗುಂಡೆಯ][೫೨]
ನರಸಿಂಗರಾಯ ಕೋಪದಲಿ
ಧರೆಯೊಳು ಗೊಲ್ಲ ಸಿರುಮ ಬಲ್ಲಿದನೆಂದು।
ಹಿರಿದು ಚಿಂತೆಯ ಮನದೊಳಗೆ ॥೭೦॥

೪೮–೪೮ ದಲಿ (ಮ, ಮೈ). ೪೯–೪೯ ದು (ಮ, ಮೈ). ೫೦–೫೦ ರ (ಮ, ಮೈ). ೫೧–೫೧ ದಿ (ಮ, ಮೈ). ೫೨–೫೨ X (ಮ, ಮೈ).

ಗೊಲ್ಲನ ಸಿರಿಯ ಬಲುಹ ಹೇ[೫೩][ಳೆ][೫೩] ಮನ್ನೇರು।
ಬಲ್ಲೆಹ ಭುಜಭೀಮನವನು
ಸೊ[೫೪][ಲ್ಲಿಸ][೫೪]ಲಳವೆ ಬಲ್ಲಾಳನೆನಿಸಿಕೊಂಡ।
ರೆಲ್ಲ ಮನ್ನೆಯರಳುಕುವರು ॥೭೧॥

ಎತ್ತ ನೋಡಿದರತ್ತ ಪುತ್ರರ ಬಳಗವು।
ಮುತ್ತು ಹವಳ ಕಾತಂತೆ
ಮತ್ತೆ ನೋಡಲು ಪಾಂಡವರ ಬಳಗದಂತೆ।
ಹತ್ತು ತಲೆಯಸುರನಂತೆ ॥೭೨॥

ಹೇಳಿದ ಮಾತ ಕೇಳುತಲುರಿದ್ದೆನು।
[೫೫][ಸಾ][೫೫]ಳುವ ನರಸಿಂಗರಾಯ
ದಾಳಿಯನಿಕ್ಕಿ ಗೊಲ್ಲನ ಹಿಡಿತಹೆನೆಂದು।
ಪಾಳೆಯಕು[೫೬][ಬ್ಬೆ][೫೬] ಮಾಡಿದನು ॥೭೩॥

ಮದಮುಖದಿಂದಲಿ ನರಸಿಂಗರಾಯನು।
ಕದಲಿದ ಪೆನುಗೊಂಡೆಯಿಂದ
ಸದಳ ಸಕಲ ಸನ್ನಾಹದಿ ತೆರಳಿದ।
[೫೭]. . . . .[೫೭] ಕಾಲವಾದ್ಯಗಳು ॥೭೪॥

ತಂಬಟೆ ಭೇರಿ ನಿಸ್ಸಾಳದ ರಭಸಕೆ।
ಕುಂಭಿನಿಯದುರಿ ತಲ್ಲಣಿಸೆ
ಇಂಬಯಿನೂರು ಗಡೆಯ ತುಳುವರ ಮುಂದೆ।
ಚೆಂಬಕ ರೌಡೆ ಕುಟ್ಟಿದವು ॥೭೫॥

ಮುಳುವಾಗಿಲ ಮೈಗಾವಲ ತುಳುವರು।
ಏಳು ಕಾಸೆಯ ಬಲು ಭಟರು
ಮೊಳಗುವ ಲವುಡೆ ಜೇಗಟೆ ರಾಯನ ಮುಂದೆ।
ಹೊಳಹಿ ನೆರೆಯಿತೊಗ್ಗಿನಲಿ ॥೭೬॥

೫೩–೫೩ ಳಿ (ಮ, ಮೈ). ೫೪–೫೪ ಲ್ಲಳ (ಮ, ಮೈ). ೫೫–೫೫ ನಾ (ಮ, ಮೈ). ೫೬–೫೬ ಚಿ (ಮ), ಬೆ (ಮೈ).
೫೭–೫೭ ಇಷ್ಟು ಭಾಗ ಹಸ್ತ ಪ್ರತಿಗಳಲ್ಲಿ ಇಲ್ಲ (ಸಂ).

ಹರಿಗೆ ಸಬಳ ಬಲ್ಲ ಕರಿಘಟೆ [೫೮]. . . . . .[೫೮]।
ತುರದ [೫೯][ಲೆಸೆವುರೆ][೫೯] ಬೊಬ್ಬೆ
ಅರಿರಾಯದಲ್ಲಣ ಸಾಳುವೇಂದ್ರನ ಬಲು।
ಬಿರುದಿನ ಭಟರು ನಡೆಯಿತ್ತು ॥೭೭॥

ತೋರಿದ ಮುಖದಲಿಡುತ ಪೆಟಲವರೊಂದು।
ಮೂರುಸಾವಿರ[೬೦][ದೇ][೬೦]ಳುನೂರು
ಏರುವ ತುರಗರೋಹಕ ಪಡೆ ನಡೆಯಿತ್ತು।
ಚೀರುವ ಕಹಳೆಯೊಗ್ಗಿನಲಿ ॥೭೮॥

ನಲ್ಲಿಯೋಬನ ಕಲ್ಲದುರ್ಗ ನಾಡಾಯಿತು।
ಜಲ್ಲಿಯ ಸಬಳ ಸಂದಣಿಸೆ
ಎಲ್ಲ ನಾಡ ಗೂಳೆಯ ಹೋಗಿ ಹೊಕ್ಕಿತ್ತು।
ಕಲ್ಲಜರಿಯ ಮಲೆಯೊಳಗೆ ॥೭೯॥

ರತುನಗಿರಿಯ ಕಲ್ಲದುರ್ಗಕೆ ನರಸಿಂಹ।
ಪತಿ ಮನ್ನೆಯ[೬೧][ರ][೬೧]ದಂಡ ಬಿಡಿಸಿ
ಹತವಾಗಬೇಡ ಓಬನ ಕಾಣಹೇಳೆಂದು।
[೬೨][ಹಿ][೬೨]ತವಿಗರಿಂದ ಕೇಳಿಸಿದ ॥೮೦॥

ಮಾತಿಗೆ ಒಳಗಾಗಿ ಸಿಕ್ಕ[೬೩][ನೋಬಯ್ಯ][೬೩]ನು।
ಹತ್ತು ದಿನವ ಕಳೆವುತಲಿ
ಒತ್ತಾಯದುಬ್ಬಸವನು ತಾಳಲಾರದೆ।
ಇತ್ತ ಮಗನ ಕೈಸೆರೆಯ ॥೮೧॥

ಕಪ್ಪ ಕಾಣಿಕೆ ಕೈ ಸೆರೆ*[ಯಿತ್ತು]* ಮಂತ್ರಿಗೆ।
ಒಪ್ಪಿಸಿದನು ರತ್ನಗಿರಿಯ
ಒಪ್ಪದಿ ಒಲಿದು ತಾಣೆಯವಿಕ್ಕಿ ರಾಯ ಕಂ।
ದರ್ಪ ಮುಂದಕೆ ತೆರಳಿದನು ॥೮೨॥

೫೮–೫೮ ಇಷ್ಟು ಭಾಗ ಹಸ್ತಪ್ರತಿಗಳಲ್ಲಿ ಇಲ್ಲ (ಸಂ). ೫೯–೫೯ ಲಿಶಿವಾರ (ಮ), ಲಿತಿವಾರ (ಮೈ). ೬೦–೬೦ ದೊ (ಮ, ಮೈ). ೬೧–೬೧ ರೀ (ಮ, ಮೈ). ೬೨–೬೨ ಹ (ಮ, ಮೈ). ೬೩–೬೩ ಸೊಬ್ಬಯ್ಯ (ಮ, ಮೈ). *–* ಗಿಹ (ಮ, ಮೈ).

ನಿಡುಗಲ್ಲ ಅಣ್ಣನಾಯ[೬೪][ಕ][೬೪] ರಾಜ್ಯ[೬೫][ಗೂ][೬೫]ಳೆಯ।
[೬೬][ಕೇಡು ಬಿದ್ದಿತು][೬೬] ಬಾಯಬಿಡುತ
ಕಡು ಮದ ಸೊಕ್ಕಿ ಸಾಳುವರಾಯ ನಡೆಯಲು।
ಮಿಡಿಗೇಸಿದುರ್ಗ ಒಡೆಯಿತು ॥೮೩॥

ಹೊಕ್ಕು ನೆಲವ ಶೋಧಿಸಿ ತಿರುಗಿದರಾಗ।
ಉಕ್ಕಡದಲಿ ರಾವುತರು
ಇಕ್ಕೆಲದಲಿ ಪೌಜುಗಳೇ[೬೭][ರೆ][೬೭]ರಾಯನು।
ಧಿಕ್ಕನೆ ದಂಡ ಕದ[೬೮][ಲಿ][೬೮]ದ ॥೮೪॥

ಗೊಬ್ಬರ ಕಣಿವೆಯೊಳಗೆ ಸಾಳುವೇಂ[೬೯][ದ್ರನು][೬೯]।
ಹೆಬ್ಬಾರೆ ಹೊಡೆ[೭೦][ಯೆ][೭೦] ತಂಬಟವ
ನಿಬ್ಬರದಲಿ ಬಂದು ಕಂಡನು ಕಸವಯ್ಯ।
ಉಬ್ಬೆಯನೇನ ಹೇಳುವೆನು ॥೮೫॥

ತುರುಗಿ ಬಿಟ್ಟಿತ್ತು ಸಾಳ್ವನ ದಂಡು ಹಿರಿಯೂರ।
ತೊರೆಯ ನಿಃಕ್ಕರಿಸಿ ಪಾಳೆಯವ
ನೆರೆಗಲಿ ಬೇಹುಕಾರರು ಬಂದು ಸಿರುಮಗೆ।
ಅರುಹಿದರಾಗ ಸುದ್ದಿಯನು ॥೮೬॥

ನಿನ್ನ[೭೧][ಯ][೭೧] ಮೇಲಣ ಕಾರ್ಯ[೭೨][ವ][೭೨]ಿಲ್ಲದೆ ಮತ್ತೆ।
ಇನ್ನಾವ ಕಾರ್ಯ ಬೇರಿಲ್ಲ
ಮನ್ನೆಯ ಸಿರುಮ ಮಾರ್ತಂಡ [೭೩][ಇ][೭೩]ಪ್ಪರೆ ಬೇಗ।
ವಿನ್ನು ಕೋಟೆಯ ಸವುರಣೆ[೭೪][ಯು][೭೪] ॥೮೭॥

ಅನುಮಾನ ಬೇಡ ಮಲ್ಲಣ್ಣ ಕೋಟೆಗೆ ಬೇಗ।
ಹನುಮನ ಡೆಂಕಣಿಗಳನು
ಮೊನೆ ಮಾಡಿದ ದಸಿ ಸಬಳ ಪೆಟಲುಗಳ।
[೭೫][ಘ][೭೫]ನ ಕೊತ್ತಳಕೆ ಹಾಕಿ[೭೬][ಸಿಂ][೭೬]ದ ॥೮೮॥

೬೪–೬೪ X (ಮ, ಮೈ). ೬೫–೬೫ ಗು (ಮ, ಮೈ). ೬೬–೬೬ ಗಿಡುವಬದಿತು (ಮ, ಮೈ). ೬೭–೬೭ ರಿ (ಮ, ಮೈ). ೬೮–೬೮ ಲಿಂ (ಮ, ಮೈ). ೬೯–೬೯ ದ್ರಾನೆ (ಮ, ಮೈ). ೭೦–೭೦ ವ (ಮ, ಮೈ).೭೧–೭೧ X (ಮ, ಮೈ). ೭೨–೭೨ ಗಳ (ಮ, ಮೈ). ೭೩–೭೩ ದಿ (ಮ, ಮೈ). ೭೪–೭೪ ಯ (ಮ, ಮೈ). ೭೫–೭೫ ಗ (ಮ, ಮೈ). ೭೬–೭೬ ಸಿ (ಮ, ಮೈ).

ಅಂಬಿನ ಹೊರೆ ಕೊಪ್ಪರಿಗೆ ಕಲ್ಲರಾಸಿ[೨೭][ಯ][೨೭]।
ತುಂಬಿ ಕೊತ್ತಳ ಕೊತ್ತಳದಲಿ
[೨೮][ಇಂಬು][೨೮]ಗೊಳಿಸಿ ಕೊಲ್ಲಬೇಕು ಸಾಳು[೨೯][ವ][೨೯] ದಂಡ।
ನೆಂಬುತ ಸಿರುಮಯ್ಯ ನುಡಿದ ॥೮೯॥

ಹೆಗ್ಗೆರೆ ಬೂದಿಹಾಳಿನ ಒಳಿತಕೆ ನೀನು।
ಕಗ್ಗದ ಕಲಿ ನಾಗಿಗೊಂಡ
ದುರ್ಗ ಸಂವರಣೆ ಮಾಡೆಂದು ಸಿರುಮಭೂಪ।
ಹಿಗ್ಗುತ ಬಿನ್ನಯಿಸಿದನು ॥೯೦॥

ಅಕ್ಕಿ ಹುರುಳಿ ಕಡಲೆಯು ರಾಗಿ ಜೋಳವು।
ಲೆಕ್ಕವಿಲ್ಲದ ಕಣಜ*[ವಿದೆ]*
ರಕ್ಕಸರಾಯ ಸಾಳ್ವನ ಕೂಡೆ ಕಾದುವೆ।
ಮಿಕ್ಕ ಮಾತೇನೆಂದ ನಗುತ ॥೯೧॥

ಎದ್ದುಲ ಭೈರನ ಕರಸಿದ ಸಿರುಮಯ್ಯ।
ಕದ್ದು ತಾರಯ್ಯ ಕುದುರೆಗಳ
ಸದ್ದು ಮಾಡದೆ ಕಳಬಂಟ ಹೊರಟು ಬಲು।
ಬು[೩೦][ದ್ಧೀಲಿ][೩೦] ಕುದುರೆಯ ತಂ[೩೧][ದ][೩೧] ॥೯೨॥

ತೊಟ್ಟ ಪೈರಣ ಮೇಲೆ ಕಟ್ಟಿದಂಜನದಾಡೆ।
ಮೆಟ್ಟಿದ ಕಾಲ[೩೨][ಮರಿ][೩೨]ಯದ
ದಿಟ್ಟ ಮನದ ಬೇಹುಕಾರರು ನಡೆತಂದು।
ಬಿಟ್ಟ ದಂಡನು ಹೊಕ್ಕರಾಗ ॥೯೩॥

ಸಂದು ಹರಿದು ಎಡಸಂದಿಲಿ ಗಂಗಯ್ಯ।
ಬಂದನು ಹಿರಿವೂರ ತೊರೆಗೆ
ಅಂದಳದಿಂದಿಳಿವುತ ಹಿಡಿ ಹೊನ್ನನು।
ತಂದು ಕಾಣಿಕೆಯ ಮಾಡಿನು ॥೯೪॥

೨೭–೨೭ X (ಮ, ಮೈ). ೨೮–೨೮ ಅಂ (ಮ, ಮೈ). ೨೯–೨೯ X (ಮ, ಮೈ). * – * ವನು (ಮ, ಮೈ). ೩೦–೩೦ ಧ್ಧಿಯ (ಮ, ಮೈ).೩೧–೩೧ ದು (ಮ, ಮೈ). ೩೨–೩೨ ಮವ್ವ (ಮ, ಮೈ).

ಕಟ್ಟಿಗೆಯವರು ಸಮ್ಮುಖವಾಗಿ ಕಾಣಿಸೆ।
[೮೩][ಕಟ್ಟ][೮೩] ಗಂಗಯ್ಯನಾಯಕನು
ನೆಟ್ಟನೆ ನರಸಿಂಗರಾಯನ ಪಾದಕೆ।
ಸಾಷ್ಟಾಂಗವೆರಗಿ ಕೈಮುಗಿದ ॥೯೫॥

ಇತ್ತ ಬಾ ಕುಳ್ಳಿರು ಗಂಗಯ್ಯ ನಿನ್ನಯ।
ಚಿತ್ತದ ನೋವ ಬಿಡಿಸುವೆ
ಪೃಥ್ವಿಪಾಲಕ ನರಸಿಂಹ ತಕ್ಕೈಸುತ ।
ಇತ್ತನು ಅಭಯಹಸ್ತವನು ॥೯೬॥

ಅ[೮೪][ಳ್ಳ][೮೪]ದೆಯಿನೀ ನುಡಿಯದೆ ಗಂಗೆನಾಯಕ।
ಸು[೮೫][ಳ್ಳ][೮೫] ಕೈಗಳನಳಕುತಲಿ
ಅ[೮೫][ಳ್ಳ][೮೫]ಬಾರದಿರೆಂದು ಸಾಳುವರಾಯ।
ವೊ[೮೬][ಳ್ಳಿ][೮೬]ಯ ನಂಬುಗೆಯಿತ್ತ ॥೯೭॥

ಎದ್ದು ಕೈಮುಗಿದು ಗಂಗಯ್ಯ ಬಿನ್ನೈಸಿದ ।
ರುದ್ರಗೋಪದಲಿ ಚಾಡಿಯನು
ಛಿದ್ರ ಸೀಗೆಯ ಒಳಗಣ ಬಾಳೆಯಂದದಿ।
ಕದ್ದ ಕಳ್ಳನ ಸತಿಯಂತೆ ॥೯೮॥

ಮಕ್ಕ[೮೭][ಳುಗಳು][೮೭] ಇಲ್ಲ ಉಂಬರೆ ಕೂಳಿಲ್ಲ।
ಒಕ್ಕಲು ನಾಡೊಳಗಿಲ್ಲ
ಸೊಕ್ಕಿದ ಗೊಲ್ಲನ ಭೀತಿಲಿ ಕೆಟ್ಟೆವು।
ಮಕ್ಕಳಿಲ್ಲದ ತಾ[೮೮][ಯಿ][೮೮]ಯಂತೆ ॥೯೯॥

ಕೆರೆಯಸಂತೆಯು ದೇವನೂರು ಹಳೆಯಬೀಡ
ಮೊರೆಯನು ಗೊಲ್ಲನಾಳುವನು।
ಕುರಿಹಿಂಡಿನೊಳು ತೋಳ ಹೊಕ್ಕಂತೆ ಗೊಲ್ಲನ
ತರುಬುವರೆನ್ನಳವಲ್ಲ। ॥೧೦೦॥

೮೩–೮೩ ಕಟ್ಟಿ (ಮ, ಮೈ). ೮೪–೮೪ ಳ (ಮೈ). ೮೫–೮೫ ಳ (ಮ, ಮೈ). ೮೬–೮೬ ಳಿ (ಮೈ). ೮೭–೮೭ ಳಿಗೆ (ಮ). ೮೮–೮೮ X (ಮ, ಮೈ).

ಹಳ್ಳ ಹಡಿಲು ಕಲ್ಲು ಮರೆಯಾದರೆ ನಮ್ಮ
ನೆಲ್ಲರ ಚೆಲ್ಲನಿಡುವನು ।
ಗೊಲ್ಲನಾಳುವ ದೇಶವ ಹೋಗುವರೆ ಸ್ವಾಮಿ
ಹುಲ್ಲ ಮೂವರ ಕೊಲುತಿ[೮೯][ದೆ][೮೯]ಕೋ। ॥೧೦೧॥

ತಳಿರು ತಂಪುಳ್ಳ ರಾಜ್ಯವು ತನ್ನ ಕೈವಶ
ಹೊಳರು ಹೊನ್ನತಿ ಮುಂತಾಗಿ।
ಮಳೆಯಿಲ್ಲ ಬೆಳೆ ಬ[ರ]ದು ಫಲವೇನು ಗೊಲ್ಲನು
ಬಲಿಯಲೀಸನು ರಾಯ ಕೇ[೯೦][ಳು][೯೦]। ॥೧೦೨॥

ದಿಕ್ಕಿನೊಳಗೆ ವರ್ಣಿಸುವರೆ ಬಾಗೂರ
ಚಿಕ್ಕ ವಿಜಯನಗರವು
ಅಕ್ಕಿಯನಳೆದು ಮಾರುವ ಬಣಿಜಿಗರೆಲ್ಲ
ರೊಕ್ಕದ ರಾಸಿ ಉಳ್ಳವರು। ॥೧೦೩॥

ಸಣ್ಣಬಣ್ಣದ ಪಟ್ಟೆ ನಾಣ್ಯದ ಮಳಿಗೆಯು
ಕಣ್ಣು ಸಾಲವು ನೋಡುವರೆ।
ಬಣ್ಣಿಸಲಳವೆ ಬಾಗೂರ[೯೧]ಗೋವಿಂದಗೆ
[೯೨][ಅಣ್ಣ][೯೨] ಗೊಲ್ಲನ ನಂಟು ಬಹಳ। ॥೧೦೪॥

ದುಮ್ಮಿ ಹೊಳಲಕೆರೆ ಒಳಗಾಗಿ ಬಾಗೂರು
ನಿಮ್ಮಾಣೆ ಮೂಲ ಕೈವೊಳಿತ ।
ನಮ್ಮ ರಾಜ್ಯಕೆ ಉಳಿವಿಲ್ಲವೆಂದರೆ ರಾಯ
ಉಮ್ಮಳದಲಿ ಸಂತಯಿಸಿದ। ॥೧೦೫॥

ಅ[೯೩][ಡ][೯೩]ನಿಕ್ಕಿ ತರಿಸಿ ಶೂಲಕೆ ಹಾಕಿ ಗೊಲ್ಲನ
ಮಂದಿ[೯೪]ಯು[೯೪] ನೆರೆ [೯೫][ನ][೯೫]ಗುವಂತೆ ।
ಕೊಡುವೆ ನಿನಗೆ ಗೊಲ್ಲನಾಳುವ ಒಳಿತವ
ಬಿಡು ಮಾತೇಕೆ ಗಂಗಯ್ಯ। ॥೧೦೬॥

೮೯–೮೯ ವ (ಮ). ೯೦–೯೦ ಳಿ (ಮ, ಮೈ). ೯೧ + ಸಿರಿಯ (ಮ, ಮೈ). ೯೨–೯೨ X (ಮ, ಮೈ). ೯೩–೯೩ ಡೆನಿ (ಮ), ಡಗಿ (ಮೈ). ೯೪–೯೪ ಯ (ಮ). ೯೫–೯೫ ದ (ಮ, ಮೈ).

ಅನಿತರೊಳಗೆ ಲಾಯದೊ[೯೬][ಳಗಾ][೯೬]ಗ ತೆಗೆದರು
ಘನ ತೇಜಿಗಳ ಹನ್ನೊಂದ।
ದಿನವೆಂಟರಿ[೯೭][ಂ][೯೭]ದ ತೆಗೆದ ಕುದುರೆ[೯೮][ಯ][೯೮] ಲೆಕ್ಕ
[೯೯][ವನು][೯೯] ಹೇಳಿದನು ಮಂತ್ರೀಶ। ॥೧೦೭॥

ಸದ್ದು ಮಾಡದೆ ಕಳಬಂಟ[೧೦೦][ನು][೧೦೦] ಕುದುರೆಯ
ಕದ್ದು ತೆಗೆದುದೊಂದು ದಾಯ।
ಮದ್ದಗುಣಿಕೆಗಳ ಮೆದ್ದಂತೆ ಗೋಪರು
ಇದ್ದರು ಗರಬಡೆದಂತೆ। ॥೧೦೮॥

ಲಾಯವ ಹೊಕ್ಕು ಕುದುರೆ[೧೦೧][ಗಳ][೧೦೧] ತೆಗೆದ ಉ
ಪಾಯಕ್ಕೆ ತಾ ಬೆರಗಾದ ।
ಕಾಯವಂಚನೆಯ ಕಲಿತ [೧೦೨][ಕಳ][೧೦೨]ಬಂಟರು
ಸಾಯುದಕಂಜುವರಲ್ಲ। ॥೧೦೯॥

ಇನ್ನೆಂಟು ದಿನಕೆ ದೇವರು ನಮ್ಮ ಪಾಳ್ಯದ
ಹನ್ನೊಂದು ಲಾಯದ ತೇಜಿ।
ಬಿನ್ನಣದಲಿ ತೆಗೆವರು ಎಂದು ಮಂತ್ರಿಯು
ತನ್ನೊಡೆಯನಿಗೆ ಹೇಳಿದನು। ॥೧೧೦॥

ಕದ್ದು ಕುದುರೆ ಹೋದುವೆಂಬುದ ಕೇಳಿಯೆ
ಎದ್ದನು ಕಡುಗೋಪದಲಿ।
ಬುದ್ಧಿಯಾಯಿತು ಕಸವಯ್ಯ ಕುದುರೆಗಳ
ನಿರ್ಧರದಲಿ ತರಿಸೆಂದ। ॥೧೧೧॥

ಕೋಪದೊಳುರಿದೆದ್ದು ಕೂಚಿ ಮಾಡಿಸಿದನು
ಭಾಪುರೆ ಕಸವಯ್ಯ ಎನುತ ।
ಆ ಪುರಜನ ಸರ್ವ ಮನ್ನೇರ ಪೌಜುಗಳು
[೧೦೩]ಕೋ[೧೦೩]ಪಿಂದ ಮುಂದಕೆ ತೆರಳೆ। ॥೧೧೨॥

೯೬–೯೬ ಳಾ (ಮ, ಮೈ). ೯೭–೯೭ X (ಮ, ಮೈ). ೯೮–೯೮ ಗಳ (ಮ, ಮೈ). ೯೯–೯೯ X (ಮ, ಮೈ). ೧೦೦–೧೦೦ X (ಮ, ಮೈ). ೧೦೧–೧೦೧ ಯ (ಮ, ಮೈ), ೧೦೨–೧೦೨ ಕಳ್ಳ (ಮ, ಮೈ). ೧೦೩–೧೦೩ ತೋ (ಮ).

ತುರಗವನಡರಿ ಸಾಳುವರಾಯ ಕದಲಿದ
ಹಿರಿಯೂರ ಕಸವಯ್ಯ ಸಹಿತ।
ದೊರೆ ದೊರೆಗಳಿಗೆಚ್ಚ[೧೦೪][ರ][೧೦೪]ನಿಕ್ಕಿ ರಾಯ ಸಂ
ಗರವಿಜಯನು ತೆರಳಿದನು। ॥೧೧೩॥

ಮೊತ್ತದ ಮನ್ನೇರ ಪೌಜಿನ ಕೆಂಧೂಳಿ
ಹುತ್ತದೊರೆಯ ಮುಸುಕಿದವು।
ಒತ್ತಿ ನಡೆವನಿರುನೆಲವಶಿಯಲಿ(?) ರಾಯ
ಮತ್ತೆ [೧೦೫][ಹರಿವೆ][೧೦೫] ಕಣಿವೆಯಲಿ। ॥೧೧೪॥

ಇಕ್ಕೆಲದಲಿ ತುರಗಗಳೇರಿ ಕಣಿವೆಯ
ಹೊಕ್ಕು ನೆಲನ ಶೋಧಿಸುತ ।
ರಕ್ಕಸ ಕಾಚನಾಯಕ ಬಂದು ತಾಗಲು
ಹೊಕ್ಕರು ತಲವಿಲ್ಲುಗೊಂಡು। ॥೧೧೫॥

[೧೦೬][ಹರಿವೆಯ][೧೦೬] ಕಣಿವೆಯೊಳಗೆ ಬಂದು ಕಾಚಯ್ಯ
ಭೂರಿ ದಂಡನು ತಾಗುವಾಗ।
ವೀರ ಬಂಟರು ಕುದುರೆಯ ತಾಗಲೆಚ್ಚರೆ
ಧಾರುಣಿಯೊಳಗೊರಗಿದವು। ॥೧೧೬॥

ತಲೆ ಜೊಟ್ಟು ಚಿಮ್ಮುರಿಸಿಯ [೧೦೭]. . . . . . . [೧೦೭]
ಕುಲಕೊಬ್ಬ ಬೇಡ ಬಿಲ್ಲಾಳು।
ಕಲಿವೀರ ಭಟರು ಬೊಬ್ಬಿರಿದೆಚ್ಚು ಕಡಿದಾಗ
ತಗಲೆಗಳ ಚೆಂಡನಾಡಿದರು। ॥೧೧೭॥

ಕಡುಗುದುರೆಗಳೇರಿದವಿಕ್ಕೆಲದಲಿ
ದುಡುದುಡು ನಾಲ್ಕು ದಿಕ್ಕಿನಲಿ।
ಪೊಡವಿಪ ನರಸಿಂಹ ಚೆನ್ನಕಲ್ಲಿಗೆ ದಂಡ
ನಡೆಸಿದ ಘುಡುಘುಡಿಸುತಲಿ। ॥೧೧೮॥

೧೦೪–೧೦೪ ಲವ (ಮ, ಮೈ). ೧೦೫–೧೦೫ ಮಾರಿಯ (ಮ, ಮೈ). ೧೦೬–೧೦೬ ಹರಿಯ (ಮ, ಮೈ).
೧೦೭–೧೦೭ ಇಷ್ಟು ಭಾಗ ಹಸ್ತಪ್ರತಿಗಳಲ್ಲಿ ಇಲ್ಲ (ಸಂ).

ಶರಧಿಯೆ ಮೇರೆದಪ್ಪಿಯೆ ಮುನಿದಂದದಿ
ನರಸಿಂಗರಾಯನ ದಂಡು।
ತೊರೆದ ಹ[೧೦೮]. . .[೧೦೮]ಣೆಯೆಂಬಂತೆ
ಕರಿತುರಗದ ಪೌಜು ನಡೆಯೆ। ॥೧೧೯॥

ಗಂಗ[೧೦೯][ಯ್ಯ][೧೦೯]ನಾಯಕ ಹಿರಿಯೂರ ಕಸವಯ್ಯ
ಅಂಗವಾಯಿತು ನಮ್ಮ ಪರಿಯು।
ತುಂಗ ವಿಕ್ರಮ ನರಸಿಂಗ ಕೋಪವ ಮಾಡೆ
ಕಂಗೆಟ್ಟು ಪೌಜನಿಕ್ಕಿದರು। ॥೧೨೦॥

ಕಡಲ ಕುಡಿವ ವಡಬನ ಪರಿಯಂದದಿ
ಪೊಡವಿಪಾಲರ ಪೌಜುಗಳು ।
ಅಡರಿ ಕುಂಜತಿಗೊಳಲಯೆದ್ದ(?) ತೆವರಲಿ
ತಡೆವಡೆದುರಗನಂದದಲಿ। ॥೧೨೧॥

ಎತ್ತಿದ ಛತ್ರ ರಾಯನ ಎಡಬಲದಲಿ
ಮೊತ್ತದ ನೆಗಳ ನೇಜೆಯು।
ತಿತ್ತಿರಿ[೧೧೦][ಗಾ][೧೧೦]ಳೆ ಬೊಂಬುಳಿ ಡೋಳು ನಿಸ್ಸಾಳ
ಮತ್ತಗಜ[೧೧೧][ಗಳ][೧೧೧] ಸಂದಣಿಯು। ।೧೨೨॥

ಕದನ ಚೌಪಟಮಲ್ಲ ಸಾಳುವ ನರಸಿಂಹ
ಮಧುರೆಯ[೧೧೨][ಲಿ][೧೧೨]ದ್ದ ತೆವರಲಿ।
ಇದಿರಾಗಿ ಪೌಜನಿಕ್ಕಲು ಬಂದು ತಾಗಿಯೆ
ಕುದುರೆಯ ನಿಲಲೆಚ್ಚರಾಗ। ॥೧೨೩॥

ಅವ[೧೧೩][ಲ್ದು][೧೧೩]ರೆಗುದುರೆಗಳನು ಬೀಳಲೆಚ್ಚರು
ಗೋವಿಂದನಾಯಕ ಭಟರು।
ಬೇವ ಮನೆಗೆ ಹಂದರವಾದ ಪರಿಯಂತೆ
ಸಾವ ಬುದ್ಧಿಯನೆಣಿಸಿದರು। ॥೧೨೪॥

೧೦೮-೧೦೮ ಇಷ್ಟು ಭಾಗ ಹಸ್ತಪ್ರತಿಗಳಲ್ಲಿ ಇಲ್ಲ (ಸಂ).೧೦೯-೧೦೯ ಗೆ (ಮ, ಮೈ). ೧೧೦-೧೧೦ ಗ (ಮ, ಮೈ). ೧೧೧-೧೧೧ ದ (ಮ, ಮೈ). ೧೧೨-೧೧೨ X (ಮ, ಮೈ). ೧೧೩-೧೧೩ ಲು (ಮ, ಮೈ).

ತುಡುಕುವ ಕಡುಗುದುರೆಯ ಬೀಳಲೆಚ್ಚರು
ನಿಡುಗಟ್ಟದ ಪರಿವಾರ ।
ಪೊಡವಿಪ ಸಾಳುವರಾಯ ಕೈವೀಸಲು
ಎಡಬಿಡದೊಳಗೇರಿದರು। ॥೧೨೫॥

ರಾಹು ಶಶಿಯ ತುಡುಕುವವೋಲು ರಾಯನು
ಸಾಹಸಮಲ್ಲನೇರಿದನು।
ಭೋಯೆಂದು ತಲೆ[೧೧೪][ಬಿಲ್ಲು][೧೧೪]ಗೊಂಡರೆ ಮುರಿದರು
ಜೀವದಾಸೆಯ ಹೇಡಿಗಳು। ॥೧೨೬॥

ಕಂಡನು ಸಮರವ ಗುಂಡೆಯ ನರಸಿಂಹ
ಹಿಂಡು ಮನ್ನೆಯರ್ಗೆ ಕೈವೀಸೆ।
ತುಂಡು ತುಂಡಿಗೆ ಬೀಳ ಹೊಯ್ದು ನಿಲಿಸಿದನು
ಗುಂಡೇರ ಹನುಮೆನಾಯಕನು। ॥೧೨೭॥

ಕಂಗಲು ಜೋಡನು ಕಟವಾಯಲೆಚ್ಚರು
ಸಿಂಗಟಿಗೆರೆಯ ಬಿಲ್ಲಾಳು।
ಕೆಂಗರಿಗಳ ಕೋಲು ಬೆನ್ನೊಳು ಮೂಡಲು
ಸಂಗರದೊಳಗುರುಳಿದರು। ॥೧೨೮॥

ಕರುಳು ಕಲ್ಲಲಿ ಸುತ್ತಿ ತೊರಳೆಯು ತುಂಡಾಗಿ
ನರಳುವ ಗಾಯದ ಮಂದಿ।
ದುರುಳ ಗೋವಿಂದನ ಬಂಟರು ಕಡಿದರೆ
ಉರುಳಿತಿದ್ದರು ರಣದೊಳಗೆ। ॥೧೨೯॥

ಉರ್ವಿಪಾಲಕ ಗುಂಡೆಯ ನರಸಿಂಗನು
[೧೧೫][ಪರ್ವಿ][೧೧೫] ಮುತ್ತಿದ ಪೌಜ ಕಂಡು।
ಘೂರ್ಮಿಸಿ ಕೈವೀಸಲು ಹೂಣಲೇರಿತು
ಸರ್ವ ಮನ್ನೆಯರೊಂದಾಗಿ। ॥೧೩೦॥

೧೧೪–೧೧೪ ವೀಲು (ಮ, ಮೈ). ೧೧೫–೧೧೫ X (ಮ, ಮೈ).

ಬಿಲ್ಲ ಮೊಳಗಿನಬ್ಬರ ಕಲ್ಲ ಕೋಳಾಹಳ
ಝಲ್ಲಿಯ ಸ[ಬ]ಳ ವಂಕಿಣಿಯು।
ಬಲ್ಲಿದ ಭಟರು ಭೋಯೆಂ[೧೧೬]ದು ಬೊಬ್ಬಿರಿ[ದರು][೧೧೬]
ನಿಲ್ಲದೆಚ್ಚರು ಕುದುರೆಗಳ। ॥೧೩೧॥

ಮೃತ್ಯುವಿನ ಹಸಿವೆಗೆ ಬಲಿಯೆನುವೊಲು[೧೧೭]
ಬಿತ್ತಿತು ಸರ್ವ ಮನ್ನೆಯರು।
ಕತ್ತಿ ಕತ್ತಿಗಳಲಿ ಕಡಿದಾಡೆ ರಣದೊಳು
ನೆತ್ತರ ಕೋಡಿ ಹರಿದವು। ॥೧೩೨॥

ನೂಕಿತು ನಾಲ್ಕು ದಿಕ್ಕಿನ ಪಾಯದಳವೆಲ್ಲ
ರಾಕಾಸಿ ಬೆಸನ ಕೊಂಡಂತೆ।
ತಾಕಲಾರದೆ ಮುರಿದೋಡಿ ಕೋಟೆಯ ಹೊಕ್ಕು
ಹಾಕಿದರಂದು ಕದವನು। ॥೧೩೩॥

ಕೂಡೆ ಮುತ್ತಿಗೆಯ ಹಾಕಿದರಾ[೧೧೮][ಗ][೧೧೮] ಕೋಟೆಗೆ
ಬೇಡತಿಯರ ಪರಿವಾರ
[೧೧೯][ಮೋಡ ಮೇಘವು][೧೧೯] ಮುಸುಕುವವೊಲು ಬಾಗೂರು
ರೂಢೀಶ್ವರಗೊಳಗಾಯ್ತು। ॥೧೩೪॥

ಬಂದಿ[೧೨೦][ಸೆ][೧೨೦]ಕರಿತುರಗ[೧೨೧][ವ][೧೨೧]ಸರ್ವ[೧೨೨][ಸ][೧೨೨]ದಳ[೧೨೩][ವ][೧೨೩]
ಸಂದಣಿಸಿದುದಲ್ಲಲ್ಲಿ।
ಚಂದ್ರಮರ ಸಾಲು [೧೨೪]ಮಾರ[೧೨೪]ನನೊ[೧೨೫]ಳ[೧೨೫]ಗು ಮಾಡಿ (?)
ಗಂಗಯ್ಯ ಬಿಟ್ಟ ಪಾಳಯವ। ॥೧೩೫॥

ಮರಗಳನಡರಿ ಸಾಳುವರಾಯ ಬಾಗೂರ
ಸಿರಿಯ ನೋಡುತ ತಲೆಯೊಲೆದ।
ಧರೆಯೊಳಗಿನಿತಪ್ಪ ನಗರವಿಲ್ಲೆನುತಲಿ
ಕರೆದು ಮಂತ್ರಿಯ ಬೆಸಗೊಂಡ। ॥೧೩೬॥

೧೧೬–೧೧೬ ದರಿದು ಬೊಬ್ಬಿರಿದು (ಮ, ಮೈ). ೧೧೭ + ಬೇಡಿ (ಮ, ಮೈ). ೧೧೮–೧೧೮ X (ಮ, ಮೈ). ೧೧೯–೧೧೯ ಮೊಡಮೆಗವ (ಮ), ವೊಡಮೆಗವ (ಮೈ). ೧೨೦–೧೨೦ ಸಿ (ಮ, ಮೈ). ೧೨೧–೧೨೧ ವು (ಮ, ಮೈ). ೧೨೨–೧೨೨ ಸಾ (ಮ, ಮೈ). ೧೨೩–೧೨೩ ವು (ಮ, ಮೈ). ೧೨೪–೧೨೪ ಮದ (ಮೈ). ೧೨೫–೧೨೫ ಲ (ಮೈ).

ಧರೆ ಬೆಸಲಾದಂತೆ [೧೨೬][ತು][೧೨೬]ರುಗಿಬಿಟ್ಟಿತು ದಂಡು
ದೊರೆ ದೊರೆಗಳ ಗುಡಿ ಹೊಯ್ದು।
ಶರ[೧೨೭][ಭ][೧೨೭] ಸಾಳುವನಾ[೧೨೮][ದ][೧೨೮] ನರಸಿಂಹರಾಯ ಸಾ
ಗರ ದ[೧೨೯][ನಿಯೆ][೧೨೯]ತ್ತಿ ಹೊಯಿಸಿದ। ॥೧೩೭॥

ಹೊಡೆದವು ಡೋಳು ಸಾವಿರ ನಿಸ್ಸಾಳವು
ಬಿಡು ದಂಡಿನ ಮೋಹರದಲಿ।
ಗಡಣದ ಚಿನ್ನ ಹೆಗ್ಗಾಳೆಯ ರಭಸಕೆ
ನಡುಗಿತು ಕುಲಗಿರಿಯದರಿ। ॥೧೩೮॥

ಸುತ್ತಗೇರಿಯ[೧೩೦][ದಿ][೧೩೦] ಬೇಲಿಯ ಹಾಕಿ ತಳಿಯನು
[೧೩೧][ಇತ್ತೆರ][೧೩೧]ದಲಿ ನಡೆಸಿದರು।
ಮೊತ್ತದ ಉಕ್ಕಡ ಕುದುರೆಯ ಪಹರಿಯು
ಒತ್ತಿ ಚೀರುವ ಜಾವಗಾಳೆ। ॥೧೩೯॥

ಗೊಲ್ಲ ಕಗ್ಗೊಲೆಯ ಬೀಳುವನೆಂ ಪಾಳೆಯ(?)
ತಲ್ಲಣದಲಿ ಬಾಯಿ ಬಿಡುತ।
ಅಲ್ಲಲ್ಲಿ ಪೌ[೧೩೨][ಜನು][೧೩೨]ಮಾಡಿ ದಾರಿ[೧೩೩][ಯೊ][೧೩೩]ಳೆಂದು
ಎಲ್ಲ ಪಾಳೆಯಕೆ ಸಾರಿಸಿದ। ॥೧೪೦॥

ಸಾಗರವನು ಮಂಜು ಮುಸುಕುವ ತೆರನಂತೆ
ಬಾಗೂರ ಕವಿ[೧೩೪][ಯೆ][೧೩೪] ಕಬ್ಬೊಗೆ[೧೩೫][ಯು][೧೩೫] ।
ರಾಗವಳಿದು ಪಟ್ಟಣವೆಲ್ಲ ಕಂಗೆಟ್ಟು
ಬೇಗೊಂಡರು ಬಾಯ ಬಿಡುತ। ॥೧೪೧॥

ಆ ಸಮಯದಿ ತಾ. . . . . ॥೧೪೨॥[೧೩೬]

❖❖

೧೨೬–೧೨೬ ತಿ (ಮ, ಮೈ).೧೨೭–೧೨೭ ದಿ (ಮ, ಮೈ). ೧೨೮–೧೨೮ ಗ (ಮ, ಮೈ). ೧೨೯–೧೨೯ ನವೆ (ಮ, ಮೈ). ೧೩೦–೧೩೦ ದ (ಮ, ಮೈ). ೧೩೧–೧೩೧ ಯೀಥರ (ಮ), ಯೀಧರ (ಮೈ). ೧೩೨–೧೩೨ ಜು (ಮ, ಮೈ). ೧೩೩–೧೩೩ ಯ (ಮ, ಮೈ). ೧೩೪–೧೩೪ ವ (ಮ, ಮೈ). ೧೩೫–೧೩೫ ಯ (ಮ, ಮೈ). ೧೩೬ ಈ ಸಂಧಿಯ ಅಂತ್ಯ ಮತ್ತು ಮುಂದಿನ ಸಂಧಿಯ ಆದಿ ಪದ್ಯಗಳನ್ನೊಳಗೊಂಡ ಒಂದು ಓಲೆ ಕಳೆದುಹೋಗಿದೆ (ಸಂ).

ಸಂಧಿ : ಎರಡು

. . . . ತ್ರಿಯೊಡನೆ ॥೭॥[೧]

ಬೂದಿಹಾಳಿನ ಗೊಲ್ಲನ ಸಂಗದಿಂದಲಿ
ಬಾಧೆ ನಿಮಗೆ ಕಾಣಿಸಿತೆ ।
ಆದೇಶ ಕಲ್ಪನೆಯನು ಮೀರಲಳವಲ್ಲ
ಕಾದುವ ಕಾಬವಿದನಕ। ॥೮॥

ಹುಟ್ಟಿದ ಮನೆಗಿಂದು ಹಗೆಯಾದ ಗಂಗಯ್ಯ
ಕೆಟ್ಟ ಬುದ್ಧಿಯನೆಣಿಸಿದನು।
ದಿಟ್ಟ ಮನದ ಗೋವಿಂದ ಮಂತ್ರಿಗೆ ಬಾಯ
ಬಿಟ್ಟ[೨][ರೂ][೨] ಹರಿಯದೀ ಕಾರ್ಯ। ॥೯॥

ಹಿರಣ್ಯನ ಕರುಳ ಕಿತ್ತಳಲು ಸಾಲದೆ ಕೃಷ್ಣ
ಮರಳೀ ಜನ್ಮಕೆ ಬಂದನೆಂದು।
ಧರೆಯರಿಯಲು ಗುಂಡೆಯ ಸುತ ನರಸಿಂಗ
ನರರ ಬೇಟೆ[೩][ಗೆ][೩] ಬಂದನೆಂದ। ॥೧೦॥

ಮನ[೪][ದಲಿ][೪] ನಿಶ್ಚಯಿಸುತ ಗೋವಿಂದನು
ತನಗುಳ್ಳ ಬಂಟರ ಕರೆಸಿ।
ವಿನಯದಿ ವೀಳೆಯವಿತ್ತು ಛಲವನಿಕ್ಕಿ
ದನು ತನ್ನ ಪರಿವಾರಕಾಗ। ॥೧೧॥

---

೧ ಹಿಂದಿನ ಸಂಧಿಯ ಅಂತ್ಯ ಮತ್ತು ಈ ಸಂಧಿಯ ಆದಿ ಪದ್ಯಗಳನ್ನೊಳಗೊಂಡ ಒಂದು ಓಲೆ ಕಳೆದು ಹೋಗಿದೆ (ಸಂ). ೨–೨ ರೆ (ಮ, ಮೈ). ೩–೩ ಯ (ಮ, ಮೈ). ೪–೪ ಮನ (ಮ, ಮೈ).

ಆಳುವೇರಿಯನೇರಿ ಕಾಳೆಯ ಹಿಡಿಸುತ
೫[ತೂ]೫ಳವರೆಯ ಹೊಯಿಸಿದನು।
ಸಾಳುವರಾಯನ ಕೂಡೆ ಕಾದುವೆನೆಂದು
ಹೇಳಿದ ತನ್ನ ಮಾರ್ಬಲಕೆ। ॥೧೨॥

ಬಿಟ್ಟ ದಂಡಿನ ಸುದ್ದಿಯ ಕೇಳಿ ಬಾಗೂರ
ಪಟ್ಟಣವೆಲ್ಲ ಕಂಗೆಟ್ಟು।
ದಿಟ್ಟ ಮನದ ಗೋವಿಂದನಾಯಕಗೆ ಬಂ
ದಿಟ್ಟರು ಬಲು ಮೊರೆಗಳನು। ॥೧೩॥

ಕರೆಸಿದ ಶಿವಣನಾಯಕನ ಬೇಗದಿ
ಹಿರಿದು ಎಚ್ಚರಿಕೆಯೆಂದೆನುತ ।
ತಿರುಗುವ ಪಹರಿ ಕೊತ್ತಳಕೆ ಸಬಳಿಗರ
ನಿರಿಸಿದರತಿ ಮುದದಿಂದ। ॥೧೪॥

ಚೋರಗಂಡಿಗಳ ಸೇರುವೆಯಲಿ ನಿಂದರು
ಕೂರಿಯ ದಸಿ ಸಬಳಿಗರು।
ವೀರದಿಂಡೆ ಜಾವಗಾಳೆಯೆತ್ತಿದ ಪಂಜು
ಭೋರೆಂಬ ಪಹರಿಯಬ್ಬರವು। ॥೧೫॥

ಕುಮುದ ಸಖನು ಜಾರಲು ತಮ ೬[ಹರಿಯಲು]೬
ಕಮಲಗಳಿರದರಳಿದವು।
ಭ್ರಮರ ಝೇಂಕರಿಸೆ ಸಾಳುವರಾಯ ಸೂರ್ಯಗೆ
ನಮಸ್ಕಾರ ಮಾಡಿದನು। ॥೧೬॥

ಸಾಳುವರಾಯ ಬಾಗೂರ ಮುತ್ತಿದನೆಂದು
ಕೇಳಿದ ಕಡುಗಲಿ ಸಿರುಮ।
ಭಾಳಾಕ್ಷ ಸೋಮಯ್ಯ ಬ೭[ಲ್ಲ]೭ನೆನುತಲಿ
ಹೇಳಿದ ಕಲ್ಲರಸನಿಗೆ। ॥೧೭॥

೫-೫ ಕೂ (ಮ, ಮೈ). ೬-೬ ಹರಾಯರು (ಮೈ). ೭-೭ ಲ (ಮ, ಮೈ).

ಅಣ್ಣ ಗೋವಿಂದನ ನಗರ ಸಿಕ್ಕಿತು ಇಂದು
ಕಣ್ಣೊಡೆಯಿತು ಕಾಡೊಳಗೆ ।
ಸುಣ್ಣಕಲ್ಕುದಿವಂತೆ ಸಿರುಮಯ್ಯನಳಲಿದ
ಬಣ್ಣದ ಚಾವಡಿಯೊಳಗೆ । ॥೧೮॥

ಸಣ್ಣಕ್ಕಿ ಮಳಿಗೆಯಂಗಡಿಕೇರಿ ಬಾಗೂರು
ಬಣ್ಣದಂಗಡಿ ಕೆಟ್ಟೆ[೮][ಯೆಂ][೮]ದು।
ಎಣ್ಣೆ ಕಾವೇರಿಯ ಮಧ್ಯಕ್ಕಿಬ್ಬರು ನಾವು
ಬಣ್ಣಗೆಡದೆ ಬದುಕಿದೆವು। ॥೧೯॥

ತಂದೆ ಗೋವಿಂದನ ನಗರಕೆ ಕಾಚಯ್ಯ
ಬಂದವು ಪ್ರಳಯ ಕಾಲಗಳು ।
ಹಿಂದೆ ಮಾಡಿದ ಸತ್ಯ ಬಳಿ[೯]ನೀರು[೯] ಕಾಚ ನಿ
ನ್ನಿಂದಲಿ ಕಡೆಗಾಣಲೆಂದ । ॥೨೦॥

ತಂದೆಯ ನುಡಿ ಕೇಳಿ ಒಂದಾರು ಭುಜವಾಗಿ
ಬಂದು ಬಣ್ಣದ ಚಾವಡಿಗೆ ।
ಕಂದರ್ಪನ ರೂಪ ಬಂಟರನಾಯ್ದನು
ಒಂದೊಂದು ಪೌಜಿಗೊಬ್ಬರನು। ॥೨೧॥

ಧರೆಯೊಳು [೧೦]ಮೆರೆವ[೧೦] ಹರಿಗೆಕಾರರ ಗಂಡ
ಕರೆಯಿ ಬೋರ್ಗಾರ ಮಲ್ಲನನು ।
ದುರುಳ ಎದ್ದುಲ ಭೈರನ [೧೧][ಗುಜ್ಜ][೧೧]ಲೋಬನ
ಕರೆಸಿದ ಕಾಚನಾಯಕನು । ॥೨೨॥

ಮಾತು ಮಾತಿಗೆ ತಪ್ಪದೆ ಬೀಳಲಿರಿದು ಪೆ
ರ್ಭೂತಕೆ ಬಲಿಯನಿಕ್ಕುವನು ।
ಪೋತುಗುಳಿಯ ಜುಂಜರಾಯಗೆ ಕಾಚಯ್ಯ
ಪ್ರೀತಿಯಿಂದಿತ್ತ ವೀಳೆಯವ। ॥೨೩॥

೮-೮ ನೆಂ (ಮ, ಮೈ). ೯-೯ ನಿರು (ಮೈ). ೧೦-೧೦ ಮಲೆವ (ಮ). ೧೧-೧೧ ಗಜು (ಮ, ಮೈ).

ಹೊನ್ನವಳ್ಳಿಯ ವೀರ ರಾಮಗಡೆಯ ಪೊತ್ತ
ಕನ್ನಗಾರನು ಗಿ[೧೨][ಡ್ಡ][೧೨]ದಿಮ್ಮ।
ಸನ್ನೆಯ ದನಿಯಡಗದ ಮುನ್ನಲಿರಿವನು
ಮನ್ಮಥ ಕೆಂಚದ ಬಸವ। ॥೨೪॥

ಕೆಂಪಿನ ತೆರೆ ಬಿರಿದಿನ ಹರಿಗೆಯ ಬಂಟ
ಹಂಪ ಸೋಮನ ಕರೆಸಿದನು।
ಗುಂಪ ಕೆದರಿಸಿ ಕೊಲ್ಲುವ ಚಾಲಿವರಿದಟ್ಟಿ
ಸೊಂಪಿನ ದೊಣ್ಣೆಯ ಬೈಚ। ॥೨೫॥

ಹಾವ ಡಗ್ಗೆಯ ತಬ್ಬಿ ಹಿಂದಕೆ ಬಿಡಿಸುವ
ನಾವಿಂದರ ದೇವುಗನು।
ಸಾಹಸ ವಿಕ್ರಮ ಚಿಪ್ಪಿಗ ಕಸವನು
ಆಯತವಾದ ಸಮರಕೆ। ॥೨೬॥

ಮುಂದೆ ಬರುವ ಪೌಜನು ಹೊಕ್ಕು [೧೩][ತರಿ][೧೩]ವನು
ನಂದಿಯಾಲದ ಓಬಯ್ಯ।
ಕಂದ ಕಾಚನ ಬಂಟ ನೀರಗುಂದದ ಸಿದ್ಧ
ಚಂದ್ರಗಿರಿಯ ಮಲ್ಲರೆಡ್ಡಿ। ॥೨೭॥

ಒಳಗಾದ ಜಗಳಕ್ಕೆ ಬೆದರದ ಬಂಟನು
ಬೆಳುಗೆರೆ ಸಿಡಿದಿಮ್ಮಣನು।
ದಳಪತಿ ಕಾಚಯ್ಯ ಕರೆದು ವೀಳೆಯವಿತ್ತು
ಕಳಕಳಿಸುತ ತೆರಳಿದನು। ॥೨೮॥

ಉಪ್ಪಲಿಕರ ಹೊನ್ನ ಕಳಸನು ತೊಳಚನು
ದರ್ಪದ ಚೌಡೆನಾಯಕನು।
ಮುಪ್ಪುಡಿ ವಿಕ್ರಮ ಕಾಚಣ್ಣ ಕರೆಸಿಯೆ
ಕರ್ಪೂರ ವೀಳೆಯವಿತ್ತ। ॥೨೯॥

೧೨-೧೨ ಡ (ಮ, ಮೈ). ೧೩-೧೩ ಕರಿ (ಮ), ಕರು (ಮೈ).

ನೆರೆಗಲಿ ಮನ್ನೆಯರುಗಳ ಪವುಜ ಹೊಕ್ಕು
[೧೪][ಸುರ][೧೪]ತಾಳುಗಳ ಬಳಿಲಿರಿವ।
ಬರಿದಲೆ [೧೫][ತಿಮ್ಮ][೧೫]ನ ಕರಸುತ ಕಾಚಯ್ಯ
ನೆರೆಗಲಿ ಕೊಟ್ಟ ವೀಳೆಯವ। ॥೩೦॥

ಮುತ್ತುವ ರಣದಲಿ ಭಟರ ಪೌಜಕೆ ಕಾಲ
ಮೃತ್ಯುವೆನಿಪ ಜಂಪನವನು।
ಮತ್ತಿಡುವಿನ ಗಿರಿಯಣ್ಣಗೆ ಕಾಚಯ್ಯ
ಉತ್ತಮ ವೀಳೆಯವಿತ್ತ। ॥೩೧॥

ಪೊಡವಿಪಾಲನ ಪಡೆಯೆಂದೆಂಬ ಮಡಿಕೆಯ
ನೊಡೆವ ಲವುಡಿಯ ಸುರಿತಾಳ।
ಉಡುವದ ನಿಂಬೆನಾಯಕನಿಗೆ ಕಾಚಯ್ಯ
ನುಡುಗೊರೆ ವೀಳೆಯವಿತ್ತ। ॥೩೨॥

ಸೊಗಸಾದ ಜಗಳಕೆ ಬೆದರದ ಬಂಟನು
ಬಗಸೆ ಹೊನ್ನಿನ ಚಿತ್ತದವನು।
ಅಗಸೆಗುಂದಿಯ ತಿಮ್ಮಯ್ಯಗೆ ಕಾಚಯ್ಯ
ನಗುತ ವೀಳೆಯವಿತ್ತನಾಗ। ॥೩೩॥

ಕುಟಿಲದ [೧೬]ಡೆಂ[೧೬]ಕಣಿಗಳ ಗಂಡ ಕೆಂಚನು
ಪೆಟಲ ಬೈರನು ಚೋಟ ತಿಪ್ಪ।
ಪಟವುಳ್ಳ ಆಸಂದಿಯ ಚಿಕ್ಕಮಲ್ಲ ಎ
ಕ್ಕಟಿಗರ ಹಂಪ ಸೋಮುಗನು। ॥೩೪॥

ನೆಲ್ಲಿಯ ಫಲಗಳ ಬಡಿಗೆಯಲಿಟ್ಟಂತೆ
ಮಲ್ಲಣ್ಣನ ಪರಿವಾರ ।
ಝುಲ್ಲಿ ಸಬಳಗಳ ಹಿಟ್ಟಳ ಮುರಿವರು
ಗೊಲ್ಲನಾಳಿದ ಪಟುಭಟರು। ॥೩೫॥

೧೪-೧೪ ಕುರು (ಮ, ಮೈ). ೧೫-೧೫ ಶಿಷ್ಯ (ಮ, ಮೈ). ೧೬-೧೬ ಚೆಂ (ಮೈ).

ಸಾವಿರಕೊ[೧೭][ಬ್ಬಾಳು][೧೭] ಬಂಟರನಾಯ್ದನು
ಭೂವರ ಕಾಚನಾಯಕನು।
ಜೀವದಾಸೆಗೆ ಅಳುಕದ ವೀರರೆನ್ನೊಳು
ಹಾ[೧೮]ವಿ[೧೮]ಕೊಂಡವ ಕೂಡೆಂದ। ॥೩೬॥

ಮಡದಿ ಮಕ್ಕಳ ಮೇಲಣಾಸೆಯುಳ್ಳವರೆಲ್ಲ
ಕಡೆಗೆ ಸ[೧೯]ನ್ನಿ[೧೯]ರೊ ಬೇಗಲೆನುತ।
ಉಡಿದಾರವ ಕಿತ್ತು ಕಡುಗಲಿ ವೀರರು
ಹಿಡಿಯಿರೊ ಬೇಗೆ ವೀಳೆಯವ। ॥೩೭॥

[೨೦][ತೋಟಿಗೆ][೨೦] ಹೋಗುವ ಕಂದ ಕಾಚನ ತಾಯಿ
ಊಟಕೆ ಕರೆದು ಬೋಳೈಸಿ।
ಮೀಟಿನ ಮನ್ನೇರ ಗಂಡನ ಭಟರಿಗೆ
ಚಾಪೆಗೂಳುಗಳನಿಕ್ಕಿದಳು। ॥೩೮॥

ಮಜ್ಜನ ಭೋಜನವನು ಮಾಡಿ ಕಾಚಯ್ಯ
ಗರ್ಜಿಸಿ ಹೊರಟ ಮಂದಿರವ ।
ಅಬ್ಜಮುಖಿಯರಾರತಿ ಸೇಸೆಯನಿಟ್ಟು
ಜಝೂರವಾಗುಗಿನೆಂದ (?)। ॥೩೯॥

ಕಳುಹಿಸಿಕೊಂಡು ತಂದೆಯ ಪಾದಕೆರಗಿಯೆ
ದಳಪತಿ ಕಾಚಯ್ಯ ಹೊರಟ।
ಬಳಿಕಲಗ್ಗದ ಸಿಂಹದ ಮರಿ ಗಜವನು
ಕೋಳಾಹಳವ ಮಾಡುವಂತೆ । ॥೪೦॥

ಬಾವನ್ನ ವೀರಕುಮಾರ ಕಾಚನ ಮಂದಿ
ಜೀವದಾಸೆಗೆ ಅಳುಕುವರೆ।
ಹೇವ[೨೧][ಗೆ][೨೧]ಡಿಸಿ ತುಂಡುಗಡಿದು ಹೋಗುವೆನೆಂದ
ಸಾಹಸಮಲ್ಲ ಬಾಗೂರ। ॥೪೧॥

೧೭–೧೭ ಬ್ಬೊಳ (ಮ, ಮೈ). ೧೮–೧೮ ಯಿ (ಮ). ೧೯–೧೯ ರಿ (ಮೈ). ೨೦–೨೦ ಕೂಟಿಕೆ (ಮ, ಮೈ). ೨೧–೨೧ ಗ (ಮ, ಮೈ).

ಸದ್ದು ಮಾಡದ ಬಂಟ ದಾರಿಯ ತೆಗೆದನು
ಎದ್ದುಲೋಬನು ಕಳವೀರ।
ಭದ್ರಮನದ ಕುದುರೆಯ ಕಾಮನ ಕೂಡೆ
ಅದ್ದಲಿಸಿ ನುಡಿದ ಕಾಚಣ್ಣ। ॥೪೨॥

ಗಿಡಗ ಸಾಳ್ವನ ಹೊಯ್ಲಿಗೆ ಬಂದು ಲಾವುಗೆ
ಅಡಗಿ ಹೋಗುವ ತೆರನಾಯ್ತು ।
ಅಡಗುವ ಸಿರುಮನ ಮಗನಲ್ಲವೆನುತಲಿ
ಹಿಡಿಸಿದ ಕಾಳೆಯ ಬಿರಿದ। ॥೪೩॥

ಮೂದಲಿಸುತ ಸಾಳ್ವರಾಯನ ದಂಡಿನ
ಬೀದಿ ಬೀದಿಯಲಿರಿದಾಡಿ।
ಮೇದಿನಿಯರಿಯೆ ಬಾಗೂರ ಹೋಗುವೆನೆಂದು
ಸಾಧಿಸಿದವು ಕಹಳೆಗಳು। ॥೪೪॥

ಕೊಂಡಕೆ ವೀರರು ನಡೆವಂತೆ ಕಾಚಣ್ಣ
ಗಂಡುಗಲಿಯು ನಸುನಗುತ ।
ಹಿಂಡೊಡೆಯದೆ ಕೂಡ ಬನ್ನಿರೊ ನನಗುಳ್ಳ
ಗಂಡಗಲಿಗಳೆಡಬಲದಿ। ॥೪೫॥

ಉಪ್ಪಿನ ಮಾಳೆಯ ಎಡಕ್ಕೆ ದಿಬ್ಬದ
ಕಪ್ಪರಿ ಬಂದು ಸೇರಿದರು।
೭೫–೭೫ ದು (ಮ, ಮೈ). ೭೬–೭೬ ರಿ (ಮ, ಮೈ). ೭೭–೭೭ X (ಮ, ಮೈ). ೭೮–೭೮ X (ಮ, ಮೈ).

ವೀರನ ತಲೆ ಕಂಚಿಯಾಲಕೆ ಕಟ್ಟದೆ
ಆರು ಮೀರುವವರು ವಿಧಿಯನು । ॥೧೪೪॥

ಛಲವುಳ್ಳ ಮನ್ನೆಯರೆಲ್ಲರು ಕೇಳಿರೈ
ಬೆಳಗೂರ ಮಾಡಿ ಬಂದುದನು ।
ಸಲೆ ನಂಬಿದವನ ಕೆಡಿಸಿ ಬಂದು ನಮಗೆ ಕೈ
[ತವ] ಮಾಡಿ ಕೊಟ್ಟ ಗೊಲ್ಲನನು । ॥೧೪೫॥

ಕೇಳು ಸಿರುಮಭೂವರ ನಿನ್ನ ಮೈದುನ
ಆಳನೆಲ್ಲವ ಕೂಡಿಕೊಂಡು ।
ಸಾಳುವರಾಯನ ಕಂಡು ಕೊಲೆಗೆ ಕೊಟ್ಟು
ಹಾಳು ಮಾಡಿದನು ಪಟ್ಟಣವ । ॥೧೪೬॥

ಹೇಳಲು ಧೈರ್ಯವಿಮ್ಮಡಿಸಿ ವೀರತ್ವವ
ತಾಳಿದ ಸಿರುಮಭೂವರನು ।
ಭಾಳಾಕ್ಷ ಸೋಮೇಶನೇ ಬಲ್ಲನು ಎಂದು
ಹೇಳುತಿದ್ದನು ರಾಣಿಯೊಡನೆ । ॥೧೪೭॥

ರಾಣಿಯರಧಿದೇವತೆ ಕೇಳು ಚಿಕ್ಕಾಯಿ
ಜಾಣನು ನಿಮ್ಮ ಬೈರ೯[ಣ]೯ನು
ಪ್ರಾಣಕಾಸೆಯ ಮಾಡಿ ಮಂದಿಯ ಕರಕೊಂಡು
ನಾಣುಗೆಡಿಸಿ ಕೊಂದ ನಮ್ಮ । ॥೧೪೮॥

ಮರೆಯ ಮಾತೇಕೆಲೆ ಚಿಕ್ಕಾಯಿ ನಿನ್ನಾಣೆ
ಇರಿವರೆ ಪರಿವಾರವಿಲ್ಲ ।
ಉರ್ವಿಯೊಳಪಕೀರ್ತಿಯ ಹೊತ್ತು ಕರ್ಮಕೆ
ಗುರಿಯಾದ ಬೆಳಗೂರ ಬೈರ । ॥೧೪೯॥

ಹೆಚ್ಚಿದ ಮಕ್ಕಳ ಬಳಗಕೆ ಬೈರಣ್ಣ
ಕಿಚ್ಚನಿಕ್ಕಿಯ ಹೋದ ಶಿವನೆ ।
ಒಚ್ಚತನ ನ್ನು ಗೂಬೆಯು ತಾಗಿ ಮಡಿಯಲಿ
ಕೊಚ್ಚಲಿಲ್ಲಿಗೆ ಛಿದ್ರವಾಗಿ । ॥೧೫೦॥

– ಲೆವೆ (ಮ, ಮೈ). ೯–೯ ನ (ಮ, ಮೈ).

ನಂಬಿವವರ ಬಿಟ್ಟು ಹೋದವರಿಗೆ ಮುಂದೆ
ಕುಂಭಿನಿಪಾತಕ ಬಿಡದು ।
ಬೆಂಬಲದಲಿ ಬಿದ್ದು ಬೆಳಗೂರ ಬೈರನೊಂ
ದಂಬಿನ ಮೊನೆಯಲ್ಲಿ ಮಡಿ[೮೦][ಯಾ][೮೦] । ॥೧೫೧॥

ಆರು ಮೀರುವರು ವಿಧಿಯ ಬರಹವವೆಂದು
ನಾರಿ ಮನದಿ ಮರುಗಿದಳು ।
ಕ್ರೂರ ಕರ್ಮಕೆ ಗುರಿಯಾಗಲಿ ಬೈರ[೮೧][ನು][೮೧]
ಕೂರಲಗೆದೆಯಲಿ ಮೂಡೆ । ॥೧೫೨॥

ಬಣ್ಣದರಳು ಬಾಡುವಂದದಿ ಮುಖ ಕಂದಿ
ಸುಣ್ಣಕಲ್ಕುದಿವಂತೆ ಕುದಿದು।
ಹೆಣ್ಣು ಮಕ್ಕಳ ಶಾಪವು ತಾಗಿ ಬೈರಗೆ
ಮಣ್ಣು ಬೀಳಲಿ ಬಾಯಿಯೊಳಗೆ । ॥೧೫೩॥

ಸೆಳೆನಡು ಬಳುಕುತ ತಳಿರಂತೆ ಮುಖ ಬಾಡಿ
ಅಳಲುತ ಮೊರೆಯಿಟ್ಟು ಶಿವನೆ ।
ಕೆಳದಿ ಮುಕ್ಕಳ ಶಾಪವು ತಾಗಿ ಬೈರಗೆ
ಹುಳು ಸುರಿಯಲಿ ಬಾಯಿಯೊಳಗೆ । ॥೧೫೪॥

ಶೂಲಪಾಣಿಯೆ ಶಂಕರ ಪೊರೆಯೊ ಎಂದು
ಬಾಲೇರು ಬಸವಳಿವುತಲಿ ।
ಶೂಲಕೆ ತೆಗೆಯಲಿ ಬೆಳಗೂರ ಬೈರನ
ನಾಲಗೆ ರ ಿಳಿತು ಕೆಡೆಯಲಿ । ॥೧೫೫॥

ಬೆಳಗೂರ ಬೈರಯ್ಯ ಓಡಿ ಹೋದರೆ[೮೨][ನ][೮೨]ನ್ನ
ಕಲಿತನ ಕೆಡುವುದೆ ರಮಣಿ ।
ಹಲಗೆ ಖಡ್ಗದೆ ವೀರಭದ್ರ ಯಾಗವ ಹೊಕ್ಕು
ಆರಿದಂತೆ ಸಂಹರಿಸುವೆನು । ॥೧೫೬॥

೮೦-೮೦ ದ (ಮ, ಮೈ). ೮೧-೮೧ ನ (ಮ, ಮೈ). ೮೨-೮೨ ನಿ (ಮ, ಮೈ).

ಭೀಮಸೇನನ ಕೈಲಿ ಕೀಚಕನಳಿಯನೆ
ರಾಮಾಳು ಲಂಕೆಯ ಸುಡದೆ ।
ಕಾಮನು ದಹನವಾದನು ಕಣ್ಣ ಕಿಚ್ಚಿಂದ
ಭೂಮಿಗೆ ನರರ ಪಾಡೇನು । ॥೧೫೭॥

ಕಲ್ಲಮನೆಯ ಕಟ್ಟಿ [೮೩][ಮೌರ್ಯ][೮೩]ಕದಂಬರು
ಎಲ್ಲ ಕಾಲವು ಬದುಕಿದರೆ ।
ಅಲ್ಲಿ[೮೪][ಯೆ][೮೪]ಮನೆಗಟ್ಟಿ ಪಾಂಡವನಂದನ
ಎಲ್ಲರು ವನವಾಸಬಡ[೮೫][ರೆ][೮೫] । ॥೧೫೮॥

ನರಸಿಂಗರಾಯಗೆ ಋಣವಾಗಲೆಂದಜ
ಬರೆದನು ತಲೆಯಲಿ ಮುನ್ನ।
ತರುಣಿ[೮೬][ಕೇಳಿನ್ನಳಲುವ ಬನ್ನ][೮೬]ಬೇಡೆಂದು
ಸಿರುಮ ನುಡಿದ ರಾಣಿಯೊಡನೆ । ॥೧೫೯॥

ಧರೆಯರಿಯಲು ಸೋಮಲಿಂಗ[೮೭][ಯ][೮೭]ನ ಕೃತಿ
ವರಸಿದ್ಧಿಯಾಯಿತು ನಮಗೆ ।
ದುರುಳ ಸಿರುಮ ಮಂತ್ರಿ ಮಲ್ಲಣ್ಣ ಬಂಟರ
ಕರೆದಲ್ಲಿ ಸಂಧಿ ಮುಗಿಯಿತು ।

❖❖

೮೩–೮೩ ಮೊರಿಯ (ಮ, ಮೈ). ೮೪–೮೪ ಯ (ಮ, ಮೈ). ೮೫–೮೫ ದೆ (ಮ, ಮೈ). ೮೬–೮೬ ಕೇಳೆನ್ನಳುವೆ ಬಿನ್ನ (ಮ, ಮೈ). ೮೭–೮೭ X (ಮ, ಮೈ).

ಸಂಧಿ : ಐದು

ಧರೆ೧[ಯ]೧ರಿಯೆ ಸಿರಿಮಭೂಪಗೆ
ಶರೀರದಾ ಹಂಗಳಿದು೨[ದು]೨ ರಕ್ಷಣೆ ಮೊಳೆಯಂ ।
ಕುರಿಸಲು ೩. . . . .೩ಸಾಳುವ
ನರಸಿಂಹನ ಕದನದಿ ಮಡಿದನೇಂ ವರ್ಣಿಸುವೆಂ। ॥೧॥

ಸಂಗರದೊಳಳಿವ ನೃಪರುಗ
ಳಂಗಮನರಿದರಿದು ಹಿಂದನೆಣಿಸದೆ ಮನವಂ ।
ಕಂಗೊಳಿಪ ಶಿವನ ದ್ವಾರದ
ಸಿಂಗಮವದಾಯಿತು ಸಿರುಮಭೂಪಗೆ ಮತ್ತಂ । ॥೨*॥

ಸೋಮನೆ ಸಾಹಸ ಭೀಮನೆ ಸುಗುಣ೪[ಲ
ಲಾಮನೆ]೪ ಜಗವೀರ೫ಗೆ ನಿ।
ಸ್ಸೀಮ೬[ಗೆ]೬ ಸಿರುಮಗೆ ವೀರಸ್ವರ್ಗವ ಕೊಡು
ಪ್ರೇಮದಿ ವೀರೇಶಲಿಂಗ । ॥೩*॥

ಆತಿವೀರರೆನಿಪ ಬಂಟರು ನೂರ್ಯೆವರು
ಹಿತವಿಗ೭[ರೆ]೭ ಸಿರುಮನಿಗೆ ।
ಪ್ರತಿಗಾಣೆ ನಿಮಗೆನುತಲಿ ಕೈಯ ಮುಗಿದು ಸ
ದ್ಗತಿಯಾಯಿತೆನಗೆ ನಿಮ್ಮಿಂದ ॥೪॥

೧-೧ ಯೇ (ಮ, ಮೈ). ೨-೨ X (ಮ, ಮೈ). ೩-೩ X (ಮ, ಮೈ). ೪-೪ ವಿಲಾಸನೆ (ಮ, ಮೈ). ೫ + ರಿ (ಮ, ಮೈ). ೬-೬- ನೆ (ಮ, ಮೈ). * ಹಸ್ತ ಪ್ರತಿಗಳಲ್ಲಿ ಈ ಎರಡು ಪದ್ಯಗಳು ಹಿಂದು ಮುಂದಾಗಿ ಇವೆ (ಸಂ). ೭-೭ ರಾ (ಮ, ಮೈ).

ಹಡಪದ ಹಲಗ ಬೋಗಾರ ಮಲ್ಲಣ್ಣ
ಕೆಡಬೇಡ ನೀವ್ ಹೋಗಿ ಬದುಕಿ।
ಪೊಡವಿ ಹೊರುವುದೆ ನಿನ್ನನು ಬಿಟ್ಟು ಹೋದರೆ
ಸುಡು ಸಂಸಾರವಿನ್ನೇಕೆ । ॥೫॥

ಚೋರನಾಯಕ ಗೂಳನ ತಿಮ್ಮಯ್ಯ
ಹೋರದೆ ನೀವ್ ಹೋಗಿ ಬದುಕಿ ।
ಧಾರುಣಿ ಹೊರುವುದೆ ಬಿಟ್ಟು ಹೋದರೆ ನಿಮ್ಮ
ವೀರಸ್ವರ್ಗವು ನಮಗುಂಟೆ । ॥೬॥

ಕಸವ ದೇವಣಗುಂಡಿ ತಿಮ್ಮಣ್ಣ ನೀವೊಂದು
ದೆಸೆಯಾಗಿ ಹೋಗಿ ಬದುಕಿರೊ ।
ಹೆಸರುಂಟು ನಿನ್ನ ಮುಂದಳಿದರೆ ಸಿರುಮಯ್ಯ
ಪಶುಪತಿಯೆಡಗೈದುವೆವು । ॥೭॥

ಎದ್ದುಲ ಬೈರ ಗಡೆಯ ಪೋ[೮][ತಿ][೮]ರಾಮಯ್ಯ
ಬುದ್ಧಿಯಿಂದಲಿ ಹೋಗಿ ಬದುಕಿ
ಹೊದ್ದುವೆ್[೯][ವಿ][೯]ನ್ನಾರನೆನುತ ನಿಶ್ಚಯಿಸಿಯೆ
ನಿರ್ಧರಿಸಿದರು ಕಾಳಗಕೆ । ॥೮॥

ಕೆಂಡದ ಬಸವಣ್ಣ ವೀರಣ್ಣ ಬಯಿಚ ನೀವ್
ಕಂಡ ಬುದ್ಧಿಯ ಕಾಣಿಯೆಂದಾ ।
ಗಂಡುಗಲಿಯೆ ನಿನ್ನ ಮುಂದಳಿದರೆ ನಾವು
ಕಂಡೇವು ಸುಕೃತ ಸ್ವರ್ಗವನು । ॥೯॥

[೧೦][ಜೀಯನು ನಾನೆಂಬ][೧೦] ಮಾತಿಗೆಲ್ಲರು ನೀವು
ಸಾಯಬೇಡವು ಹೋಗಿ ಬದುಕಿ ।
ಕಾಯಜರೂಪ ಸಿರುಮ ನಿನಗೀ ನುಡಿ
ನ್ಯಾಯವಲ್ಲವೊ ನಿನ್ನಾಣೆ । ॥೧೦॥

೮–೮ X (ಮ, ಮೈ). ೯–೯ ನಿ (ಮ, ಮೈ). ೧೦–೧೦ ಜನದಾರೆ (ಮ), X (ಮೈ).

ಎಂದ ಮಾತಿಗೆ ಮನನೊಂದು ಸಿರುಮ ತನ್ನ
ಕಂದನ ಮುಖವ ನೋಡಿದನು ।
ಮಂದಿರದೊಳಗುಳ್ಳ ನಾಣ್ಯಬಂಗಾರವ
ತಂದುಕೊಡೈ ಮನದಣಿಯೆ । ॥೧೧॥

ಅರಮನೆಯೊಳಗಣ ನಾಣ್ಯ ಬಂಗಾರವ
ಸುರಿಸಿದ ಚಾವಡಿಯೊಳಗೆ ।
ನರಸಿಂಗರಾಯಗೀಡಾಗದ ಬುದ್ಧಿಯ
ಸಿರುಮ ನೆನೆದ ಮನದೊಳಗೆ । ॥೧೨॥

ಪುರದೊಳಗಣ ಒಡೆಯರು ಭಕ್ತರೆಲ್ಲರ
ಕರೆಸಿದ ಸಿರುಮಭೂವರನು ।
ತರಿಸಿದ ಭಸಿತವೀಳೆಯವ ಕಾಣಿಕೆಯನು
ಇರಿಸಿ ಕೈಮುಗಿದು ಭಕ್ತಿಯಲಿ । ॥೧೩॥

ಇಂದುತನಕಲೆಮ್ಮನು ನಿಮ್ಮ ಕರುಣದ
ಮಂದಿರದಲಿ ಸಲಹಿದಿರಿ ।
ಮುಂದೆ ನಿಮ್ಮ[೧೧][ಯ][೧೧] ಬಾಗಿಲ ಕಾವ ಸದ್ಗತಿ
ಬಂದಿತು ನರಸಿಂಹನಿಂದ । ॥೧೪॥

ಒಡೆಯರೊಡವೆಯನು ಒಡೆಯರಿಗಿತ್ತಂತೆ
ಕೊಡುತಿದ್ದನು ಮನದಣಿಯೆ ।
ದೃಢಗಲಿ ಸಿರುಮಗೆ ಹರಸಿ ಭಸಿತವಿಟ್ಟು
ಮೃಡನ ಬಾಗಿಲಿಗೆ ಹೋಗೆಂದು। ॥೧೫॥

ಹರಶರಣರಿಗೆ ಭಸಿತವಿಟ್ಟು ಹಿರಿಯರು
ತಿರುಗಿ ಹೋದರು ತಮ್ಮ ಮಠಕೆ ।
ನರಸಿಂಗರಾಯನ ಪರಿವಾರ ಕುದುರೆಯು
ಮೊರೆದೆದ್ದು ಮೋಹರಿಸಿದ[೧೨][ವು][೧೨] । ॥೧೬॥

೧೧–೧೧ X (ಮ, ಮೈ). ೧೨–೧೨ ರು (ಮ, ಮೈ).

ವೀರಗಾಸೆಯ ಮಂಡೆಯ ಜುಂಜು ಕೈಯಲ್ಲಿ
ಕೂರಲಗನು ಝಳಪಿಸುತ ।
ಕೇರಿಕೇರಿಯಲಿ ಬೊಬ್ಬಿರಿವುತ ಬಂಟರು
ಚಾರಿವರಿದು ಕುಣಿವುತಲಿ ॥೧೭॥

ಮಲ್ಲಣ್ಣ ಬಿಗಿದುಟ್ಟನಾ ಮಲ್ಲಕಾಸೆಯ
ತಲ್ಲಣ ವೈರಿಯ ಗಂಡ ।
ಗೊಲ್ಲ ಸಿರುಮನುಟ್ಟು ಕಟ್ಟಿದ ಕಾಸೆಗೆ
ಝಲ್ಲಿ ಮುತ್ತಿನ ಗೊಂಡೆಯನ್ನು । ॥೧೮॥

ಉತ್ತಮ ರತ್ನಹಾರವ[೧೩][ತೊ][೧೩]ಟ್ಟು ಸಿರುಮಯ್ಯ
ಹಸ್ತಕಿಕ್ಕಿದ ಪಚ್ಚೆ ಕಡಗ ।
ಸುತ್ತಿದ[೧೪][ಸಾಲ][೧೪]ಪದಕ ಭಸಿತವ ಪೂಸಿ
ಮುತ್ತಿನ ಕಡೆಯ ಪೆಂಡೆಯ[೧೫][ವ][೧೫] । ॥೧೯॥

ಕುಶಲದ ಚಿತ್ರಾಂಬರ ಸಿರುಮೇಂದ್ರಗೆ
ಭಸಿತವು ಸರ್ವಾಂಗದಲಿ ।
ಅಸಮವೀರನು ಉಪ್ಪರಿಗೆಯನೇರಿ ನಾ
ಲ್ದೆಸೆಯ ನೋಡಿ ಕೈ ಮುಗಿದ । ॥೨೦॥

ತೊಟ್ಟಿಯ ಮಾಳಿಗೆಯನು ಕಿತ್ತು ಕೊಂಡದೊ
ಳೊಟ್ಟಿ ಕೆಂಡವ ಬೇಗ ಮಾಡಿ[೧೬] ॥೨೧॥[೧೭]

ಆರುನೂರು ರಂಭೆವೆಣ್ಣಿಗೆ ತಂದು ಕೊಟ್ಟರು
ಕುರುಹಿನ ಕಾಲಕುಪ್ಪಸವ ।
ಮೆರೆವ ರಭಸಕೆ ಸೂಸಕ ದಂಡೆಯ ತಮ್ಮ
ತುರುಬಿನೊಳಳವಡಿಸಿದರು । ॥೨೨॥

೧೩-೧೩ ಕೊ (ಮ, ಮೈ). ೧೪-೧೪ ಕಾಲು (ಮ, ಮೈ). ೧೫-೧೫ (ಮ, ಮೈ). ೧೬ + ದರು (ಮ, ಮೈ).೧೭ ಈ ಪದ್ಯದ ಉತ್ತರಾರ್ಧ ಬಿಟ್ಟು ಹೋಗಿದೆ (ಸಂ).

ದರುಶನ ಕಳೆಯುಳ್ಳ ಹೆಣ್ಣು ಮಕ್ಕಳಿಗೆಲ್ಲ
ಬೆರಸಿ ಕರ್ಪೂರ ತೈಲವನು ।
ತರಿಸಿ ಹೇಮದ ಬಟ್ಟಲೊಳು ಕೊಡೆ ವಿಷಕೊಂಡು
ಸೊರಗಿ ಬಿದ್ದರು ಅವನಿಯಲಿ । ॥೨೩॥

ಹಿರಿಯ ಕಾಚಣ್ಣ[೧೮]ರಾಟಿಯ ಸೋಮಯ್ಯಗೆ
ಬೆರಸಿ ಕೊಟ್ಟರು ಬಟ್ಟಲೊಳಗೆ ।
ಮರವಟ್ಟು ಸೊರಗಿ ಬೀಳಲು ಕೊಂಡಕೆಳೆದ[೧೯][ನು][೧೯]
ದುರುಳಕುಮಾರ ಮಲ್ಲಣನು । ॥೨೪॥

ಬೇಕಾದ ನಾಣ್ಯನಾಣ್ಯವನೆಣ್ಣೆಯೊಳಗದ್ದಿ
ಹಾಕುತಿರ್ದರು ಕೊಂಡದೊಳಗೆ
ಆಕರವಾದ ವಸ್ತುವನೆಲ್ಲ ತಂದೊಡ್ಡಿ
ನೂಕಿದರಾ ಪಾವಕ[೨೦][ನೊಳು][೨೦] । ॥೨೫॥

ಉತ್ತಮ ರತ್ನ ಮೌಕ್ತಿಕ ವೈಢೂರ್ಯವ
ಮತ್ತೆ ಕಲ್ಲೊಳಗೊಡೆದೊಡೆದು ।
ಕಸ್ತೂರಿ ಝುಲ್ಲಿ ಪಟ್ಟೆಯ ದಿಂಡು ಮೊದಲಾಗಿ
ಒಟ್ಟುತಿರ್ದರು ಕಿಚ್ಚಿನೊಳಗೆ । ॥೨೬॥

ಹರಿವಾಣ ಗಿಂಡಿ ಬಟ್ಟಲು ಚೆಂಬು ಹೂಜೆಯ
ಪರಿಪರಿಯುಪಕರಣವನು ।
ಪರರಿಗೆ ಸಿಕ್ಕದಂದದಿ ಕಿಚ್ಚಿನೊಳು ಹಾಕಿ
ಕರೆಸಿದ ರಾಣಿವಾಸವನು । ॥೨೭॥

ಉಡಿಗೆ ರವಿಕೆ ಜಡೆ ತೊಡೆಯ ಕುಪ್ಪಸ ಮೈಯೊ
ಳಿಡಿದ ಗಂಧದ ಲೇಪವನು ।
ಮಡದಿಯರಲ್ಲಿ ಬೊಬ್ಬಿಡುತ ಬರಲು ಕಂಡು
ಕಡುಗಲಿಗಳು ಕೈಮಾಡಿದರು । ॥೨೮॥

---

೧೮ + ನೀವು (ಮ, ಮೈ). ೧೯-೧೯ ರು (ಮ, ಮೈ). ೨೦-೨೦ ಳ ಗೆ (ಮೈ) ಗೆ (ಮ).

ಮಂದಿಯ ಬೀಳ ಹೊಯಿದು ಕೊಂಡಕೆಳೆವರ
ಕಂಡು ನಗುತ ಸಿರುಮಯನು ।
ಭಂಡಾರಿ ಬಸವಣ್ಣ ಬಲ್ಲನೀ ನೋವನು
ಕಂಡು ಸೈರಿಸುವವರುಂಟೆ । ॥೨೯॥

ಮೊಲೆಯ ಕಣ್ಣಿನ ಮೇಲೆ ಗೆಲತಾಗಲಿದರೆ
ನೆಲವ ಕಚ್ಚುತ ಬಾಯಬಿಡುತ ।
ಕಲಿಗಳ ದೇವ ಕುಮಾರ ಮಲ್ಲಣ್ಣನು
ಸಲೆ ಕೊಂಡಕೆಳೆದು ನೂಕುತಲಿ । ॥೩೦॥

ಮಿಡಿಯ ಗಾಯಕೆ ಬಿದ್ದ ಮಡದಿಯರೆಲ್ಲರ
ಕೆಡಹಿ ಕೊರಳ ಕೊಯ್ಯುತಲಿ ।
ಹಿಡಿಹಿಡಿದೆತ್ತಿ ಕೊಂಡಕೆ ಹಾಕಿ ಮಲ್ಲಣ್ಣ
ಸುಡು ಸಂಸಾರವೇಕೆಂದ । ॥೩೧॥

ಮದನನ ಮದದಾನೆಯಂತೆ ಬಾಲೆಯರೆಲ್ಲ
ಇದಿರಾಗಿ ಬಂದು ನಿಲ್ಲುತಲಿ ।
ಮಿದುಳು ಸುರಿದು ಬಲುಗಾಯದ ಹೆಂಗಳ
ಕದುಬಿ ಕೊಂಡಕೆ ಹಾಕುತಿರಲು । ॥೩೨॥

ಸೆಳೆನಡು ಬಳಕುತ ಕಳಕಳಿಸುತ ಮೆಯ್ಯ
[೨೧][ಲಳವಟ್ಟ][೨೧] ಪರಿಮಳದಿಂದ
ಹೊಳೆವ ಹೊಂಬಣ್ಣ ಮೆಯ್ಯವರನಿರಿದು ಬೇಗ
ಲೆಳೆದು ಕೊಂಡಕೆ ನೂಕುತಲಿ । ॥೩೩॥

ಎಳೆಯ ಮಕ್ಕಳು ಮುಪ್ಪಿನವರೆನ್ನದೆಲ್ಲರು
ಕಳಕಳಿಸದೆ ಕಂಗೆಡದೆ
ಮೊಳಗಿ ಬೊಬ್ಬೆಯ ಕೊಟ್ಟು ಕುಣಿವುತ ಬಿದ್ದರು
ನಳನಳಿಸುವ ಕಿಚ್ಚಿನೊಳಗೆ । ॥೩೪॥

೨೧-೨೧ ಳಳನಟ (ಮ, ಮೈ).

ಹೆಣ್ಣುಗಳೆರಡು ಶೋಕವ ಪಾಡಿ ಕುಣಿವುತ
ಅಣ್ಣಾಜಿ ನೋಡೆಂದು ನಗುತ ।
ಕಣ್ಣುಳುಕದ ಮುನ್ನ ಕೊಂಡಕೆ ಬಿದ್ದರು
ಮಣ್ಣಾದರು ಕಿಚ್ಚಿನೊಳಗೆ । ॥೩೫॥

ಮಿಸುನಿ ಬಣ್ಣ[೨೨][ದ][೨೨] ಮೋಹದ ರಾಣಿವಾಸವ
ಕುಸುರಿದರಿದು ಕೊಂಡಕೆಳೆದು ।
ಉಸಿರಲರಿಯೆ ಒಬ್ಬರುಳಿಯದೆಲ್ಲರ ಕೊಂದು
ಅಸಮವೀರನು ತಿರುಗಿದನು । ॥೩೬॥

ಹಡೆದ ಮಕ್ಕಳು ಒಡವೆಯುವೊಡಲಾ[೨೩]ಸೆಯು
ಕ[೨೩]ಡೆಯಾಯಿತು ನಿನಗಿನ್ನು
ಮಡದಿ ನೀ ಕೇಳ್ ಶರೀರದ ಹಂಗ ಬಿಟ್ಟು ನೀ
ಮೃಡನ ಪಾದವ ಕಂಡು ಬದುಕು । ॥೩೭॥

ಕಡುಗಲಿ ಸಿರುಮನು ತನ್ನಯ
ಮಡದಿಯ ಕೈವಿಡಿದು ಕೊಂಡದ ಮುಖವಾಗಿ ।
ನಡೆತಂದು ನಿಂದು ನುಡಿದನು
ಪೊಡವಿಯ ಹಂಗಳಿದು ಮುಕ್ತಿಯಾಯಿತು ನಮಗಂ। ॥೩೮।*

ತಾಯಿ ತಂದೆಯ ಗರ್ಭದಲಿ ಪುಟ್ಟಿ ನಿನ್ನಯ
ಸೇವೆಗೀಡಾ[೨೪][ಗಿ][೨೪]ದು ಮೊದಲು।
ನೋವ ತರಿಸಿ ಬದುಕಿದುದಿಲ್ಲ ಸಿರುಮಯ್ಯ
ದೇವರೆ ನಿನಗಾರೆಣೆಯೆ। ॥೩೯॥

ಮಡದಿ ಮಾಣಿಕವೆ ನಿನ್ನೊಡಗೂಡಲೆನಗಿಂತು
ಪೊಡವಿಯ ಸಂಪದವಾಯ್ತು ।
ಕೆಡುವ ಕಾಲಕೆ ಬೆಳಗೂರ ಬಯಿರನಿಂದ
ಮೃಡನ ಲೋಕವ ಕಾಣಲಾಯ್ತು । ॥೪೦॥

೨೨–೨೨ ವ (ಮ, ಮೈ). ೨೩–೨೩ X (ಮೈ). * ಇದು ಕಂದ ಪದ್ಯ (ಸಂ) ೨೪–೨೪ ದಿ (ಮ).

ಹೆಂಗಳ ರನ್ನೆ ಚಿಕ್ಕಾಯಿ ನಿನ್ನಯ ಕೊಲೆ
ಗಂಗೈಸೆ ಕೈಯೇಳವೆಂದ ।
ತುಂಗವಿಕ್ರಮ ಮಯಿದುನ ಮಲ್ಲಭೂಪನ
ಅಂಗನೆ ಮುಖ ನೋಡಿ ನಗುತಾ । ॥೪೧॥

ಅತ್ತಿಗೆಯಲ್ಲ ಭಾವಿಸುವರೆ ಚಿಕ್ಕಮ್ಮ
ಹೆತ್ತ ತಾಯೋಪಾದಿ ನೀನು ।
ಚಿತ್ತದೊಳಗೆ ಕಲಿತನವೆಗ್ಗಳಿಸುತ
ಹಸ್ತವ ಮುಗಿದಳು ಪತಿಗೆ । ॥೪೨॥

ಹಿಡಿದ ಖಂಡೆಯವನು ಝಡಿದು ಬೊಬ್ಬೊಡುತಲಿ
ನಡುವ ತುಂಡಿಗೆ ಬೀಳ ಹೊಯಿದ ।
ಮೃಡ ಸೋಮಧರ ಬಲ್ಲನೆನುತ ತಲೆಯನೆತ್ತಿ
ಪಿಡಿದು ಕೊಂಡಕೆ ಹಾಕುವಾಗ । ॥೪೩॥

ಚಿಕ್ಕಕುಮಾರ ಮಲ್ಲಯಭೂಪ ಪರಬಲ
ವಿಕ್ರಮ ಕಲಿ ಗಜಸಿಂಹ ।
ಧಿಕ್ಕನುಪ್ಪರಿಗೆಯನೇರಿ ಸೆರಗ ಬೀಸಿ
ಹೊಕ್ಕು ಕೊಲ್ಲುವ ಪರಬಲವ । ॥೪೪॥

ಕಪ್ಪರಿ ವೀರಗೆ ಶರಣೆಂದು ಮಲ್ಲಣ್ಣ
ಉಪ್ಪರಿಗೆಯನೇರಿ ನಿಂದು ।
ದಪ್ಪಶ ಕೂಗಿ ಬೊಬ್ಬಿಟ್ಟು ಸೆರಗ ಬೀಸಿ
ಉಪ್ಪರಿಗೆಯ ಬೇಗಲಿಳಿದ । ॥೪೫॥

ಎರಡು ಬಾಗಿಲ ಹೊರದೆಗೆಯಲು ಒಳಹೊಕ್ಕು
ಉರವಣಿಸಿತು ಪಾಯದಳವು ।
ದೊರೆ ದೊರೆಗಳು ಜೋಡ ತೊಟ್ಟು ನೂಕಿತು ತಮ್ಮ
ಪರಿವಾರವನು ಮೂದಲಿಸಿ । ॥೪೬॥

ತಲೆವರಿಗೆಯಲಿ ನೂಕಿತು ಸಾಳುವೇಂದ್ರನ
ಕಲಿವೀರ ತುಳುವ ಪಾರಕರು ।
ತಲೆಗಳು ಹೋಹ ಬಳಿಗೆ ಕಾಲು ಹೊಣೆಯೆಂದು
ಹಲುಬುತ ನೂಕಿತೊಗ್ಗಿನಲಿ । ॥೪೭॥

ಊರೊಳಗಣ ಕೇರಿಕೇರಿಯೊಳಗೆ ನಿಂದು
ನೇರಿದರಾ ಸಬಳಿಗರು ।
ವೀರಗೊಲ್ಲನು ಬಂಟರು ಕಂಡು ಮರೆಗೊಂಡು
ಸೇರಿತು ಕಲ್ಲಚಾವಡಿಯ। ॥೪೮॥

ಗುದ್ದಿನೊಳಡಗಿರ್ದ ಪೆರ್ಬುಲಿಗಳು ಬಂದು
ಅದ್ದಲಿಸುವ ತೆರನಂತೆ ।
ನಿರ್ಧೂಮವಾಗಿ ಬಿದ್ದುರುಳಿತು ಹಿಂದಣ
ದೊದ್ದೆಯೆಲ್ಲವು ಮುರಿದೋಡಿ। ॥೪೯॥

ಕಲ್ಲಚಾವಡಿಯಿಂದ ಹೊರಟನು ಸಾಳುವ
ದಲ್ಲಣ ಚಿಕ್ಕಮಲ್ಲಣ್ಣ ।
ಝುಲ್ಲಸಬಳ ಹಿಟ್ಟು ಹಿ[೨೫][ಟ್ಟೇ][೨೫]ಳ ಮುರಿದ[೨೬][ವು][೨೬]
ಗೊಲ್ಲಸುತನ ಖಡ್ಗಹತಿಗೆ ॥೫೦॥

ಗಡೆಗಳ ಹೊಯಿದು ಸತ್ತವರೊಂದು ಗಡಿಯಿಲ್ಲ
ಕೆಡೆಮುರಿದುದು ಗಡಿಯಿಲ್ಲ ।
ಪೊಡವಿಪಾಲನ ಪಡೆ ಪಡಿತಳಿಸಲು ಮತ್ತೆ
ಕಡುಗಲಿಗಳು ತಿರುಗಿದರು । ॥೫೧॥

ತವಗದ ಮೇಲಿರ್ದು ಬೆಲಗೂರ ಬೈರನ
ಅವನಿಪತಿಯು ಕರೆಸಿದನು।
ವಿವರವೇನ್ನೈ ಗೊಲ್ಲನವರೊಳು ಬೊಬ್ಬೆಯ
ಹವಣಿಸಬಾರದು ಹೇಗೈ। ॥೫೨॥

ಮಂಡಲಪತಿ ಚಿತ್ತೈಸು ಗೊಲ್ಲನದೊಂದು
ಲಂಡತನದ ಬುದ್ಧಿಯನು ।
ಕೊಂಡದೊಳಗೆ ತನ್ನ ಹೆಂಡಿರೆಲ್ಲರ ಕೊಂಡು
ದಂಡಿಸಿ ಕಾಡುತಲಹನೆ । ॥೫೩॥

೨೫-೨೫ ಟಿ (ಮ, ಮೈ). ೨೬-೨೬ ರು (ಮ, ಮೈ).

ಬಾಗೂರಲೊದಗಿದ ಹೊನ್ನಿನೋಪಾದಿಯಿ
ಲ್ಲಾ[೨೭][ಗೂ][೨೭]ದೆನುತ ಬಂದೆವೈಸೆ ।
ಸಾಗರ ಮೇರೆದಪ್ಪಿದವೊಲು ಬಂದಿಲ್ಲಿ
ನೀಗಿದೆವೆಮ್ಮ ಬಲವನು । ॥೫೪॥

ಕೊಂಡೆಯ ಗಂಗನ ಮಾತಿಲಿ ಬಂ[೨೮][ದೆವು][೨೮]
ತಂದೆವು ಬ್ರಹ್ಮೇತಿಯನು ।
ಹಿಂಡು ಮನ್ನೆಯರನೆಲ್ಲರ ಕೊಂದು ಫಲವೇನು
ಕಂಡುದಿಲ್ಲವು ಗೊಲ್ಲ ನಮ್ಮ ॥೫೫॥

ಗಡೆಯ ತರಗ ತುಳುವರ ತೇಗೆನಾಯಕ
ಪಡಿಬಲಿಸುತಲೇರ ಕಡಿದು ।
ಕಡುಗಲಿ ಬಂಟರು ಬೀಳಲು ಮಲ್ಲಣ್ಣ
ಸಿಡಿಲಂತೆ ಗರ್ಜಿಸಿ ತಿರುಗಿ । ॥೫೬॥

ಪೊಡವಿಪ ನರಸಿಂಹರಾಯನ ಬಲಕೆಲ್ಲ
ಗಡೆಯ ತರಗ ತೆತ್ತಿಗನು ।
ಎಡಬಲದಲಿ ಪವುಜುಗಳೆತ್ತಿ ನಡೆತಂದು
ಬಿಡದೆ ಮುತ್ತಿದನರಮನೆಯ । ॥೫೭॥

ಒಡೆಯನೆಂದು ಬಂಟನೆಂದರಿಯೆವು ನಾವು
ಕಡುಗಲಿ ಸಿರುಮನಾವ[೨೯][ನೆನೆ][೨೯]
ಪೊಡವಿಯರಿಯೆ ಗಾಳಿಪೂಜೆಯ ದೇಶದ
ಒಡೆಯ ಸಿರುಮ ನಾನೆಂದ । ॥೫೮॥

ತಲೆಯ ಸುತ್ತಿದ ವಾಲು ಪಚ್ಚೆಯ ಕಡಗದ
ಕೊಲೆಯ ಬಂಟಗೆ ಕೊಡು ಸ್ವಾಮಿ ।
ಚೆಲುವ ಮಲ್ಲಣ್ಣ ತಲೆಗೆ ತಪ್ಪದ ಹಾಗೆ
ಒಲಿದು ಗಡಿಯ ದಾಂಟು ನಿನ್ನ ॥೫೯॥

೨೭–೨೭ ಗ (ಮ, ಮೈ). ೨೮–೨೮ ದಿರಿ (ಮ, ಮೈ). ೨೯–೨೯ ವನು (ಮೈ). ನನು (ಮ).

ಹಿಂದಕೆ[೩೦][ಯ್ದಿ][೩೦]ದರ ದೆಸೆಯಿಂದಲಿ ನಮಗೀಗ
ಬಂದವು ಪ್ರಳಯಕಾಲಗಳು ।
ಇಂದಿದು ನಿನ[೩೧]ಗಳವಡದೆಂದು ಸಿರುಮಯ್ಯ
ನೊಂದುಕೊಂಡನು ಮನದೊಳಗೆ । ॥೬೦॥

ಆಳುತನವು ನಿನಗುಳ್ಳರೆ ಇದಿರಾಗು
ಓಳಿಯಾದರೆ ಹೆರಸಾರು ।
ಸಾಳುವರಾಯನ ಬಲಕೆಲ್ಲ ನಾನು ಕ
ಟ್ಟಾಳು ತರಗನೆಂದು ನುಡಿದಾ । ॥೬೧॥

ತನ್ನ ಸೇರುವೆಯ ಬಂಟರು ಬಿರುದಿನ ಗಡೆ
ಹನ್ನೊಂದು ಸಾವಿರವವಗೆ।
ಮನ್ನೆಯ ಪೆರ್ಬುಲಿ ಸಿರುಮನಬ್ಬರಿಸುತ
ಬೆನ್ನ ಬಿದ್ದರು ಅರಿಬಲ[೩೨][ವು][೩೨] । ॥೬೨॥

ಅಬ್ಬರಿಸುತ ಬಂದು ಹೊರಟನು ಮಲ್ಲಣ್ಣ
ಬೊಬ್ಬಗೆ ಬಾಹುವಿನಂತೆ ।
ಸಿಬ್ಬರದಲಿ ಬಂದು ಹೊಯಿದನು ತೆಲುಗರ
ಕೊಬ್ಬಿದ ಮಿದುಳು ಸುರಿದವು । ॥೬೩॥

ಅಟ್ಟೆಯಾಡಿ ಹೊಯಿದನು ಸಿರುಮೇಂದ್ರನ
ಕಟ್ಟಾಳು ಕಲಿ ಮಲ್ಲನೃಪನು ।
ನೆಟ್ಟಿತು ಗದೆಯ ಗಾಯವು ಮಲ್ಲಭೂಪನ
ಹೊಟ್ಟೆಯನುರೆ ತಟಹೊಯಿದು । ॥೬೪॥

ಅಣ್ಣನ ಮುಖವ ನೋಡುತ ಮಲ್ಲಭೂಪನು
ಕಣ್ಣನೀರುಗಳ ತುಂಬುತಲಿ ।
ಹೆಣ್ಣು ಬಿದ್ದರೆ ವೀರಸ್ವರ್ಗವಿಲ್ಲೆನುತಲಿ
ತಿಣ್ಣದ ಮಾತನಾಡಿದನು । ॥೬೫॥

೩೦–೩೦ ಯಿ (ಮ, ಮೈ). ೩೧ + ಗೀ (ಮ, ಮೈ). ೩೨–೩೨ ವ (ಮ, ಮೈ).

ಅಣ್ಣ ಕೇಳಯ್ಯ ಲೋಕದ ವೀರರಿಗೆಲ್ಲ
ತಿಣ್ಣದ ತಲೆವಣಿ ಸಿರುಮ ।
ಕಣ್ಣುಳ್ಳುದಕ ಮುನ್ನ ಮಕ್ಕಳ ಕೂಡೆ ಮು
ಕ್ಕಣ್ಣನೋಲಗಕೈತಂದ । ॥೬೬॥

ಚಿಕ್ಕಮಾಧವ ಕುಲವಿಕ್ರಮ ಸಿರುಮಯ್ಯ
ಚಕ್ರಧರನು ನಿನಗೊಲಿದ ।
ಒಕ್ಕಲ ಕರೆಯ ಬಂದಾಳು ಸಾಳುವರಾಯ
ಮಿಕ್ಕ ಮಾತೇನಣ್ಣಯೆಂದ । ॥೬೭॥

ಬಿಡು ಬಿಡು ತಡವೇತಕೆ ನಿನ್ನ ಮನಸಿನ
ಕಡುಮರುಕವ ತಲ್ಲಣವ ।
ಮಡದಿಮಕ್ಕಳು ದೂರ ಹೋಗದ ಮುನ್ನಲಿ
ಕೊಡು ಬೇಗ ಅಗ್ನಿಗಾಹುತಿಯ ॥೬೮॥

ಪಿಡಿದ ಖಡ್ಗವನೆತ್ತಿ ಝಡಿದು ಹೊಯ್ಯಲು ತಲೆ
ಸಿಡಿದು ಬಿದ್ದಿತು ಕೊಂಡದೊಳಗೆ ।
ಮೃಡ ಸೋಮಧರ ಬಲ್ಲನೆನುತಲಾ ಮುಂಡವ
ಪಿಡಿದು ನೂಕಿದನು ಪಾವಕಗೆ । ॥೬೯॥

ಬಳಿಕಲುರುಬಿ ಹೊಕ್ಕನರಮನೆ ಚಾವಡಿ
ಯೊಳಗಾಗಿ ಹರಿಗೆ ಬಿಲ್ಲಾಳು ।
ತಳೆದ ಕೋಪದಿ ಹೊಕ್ಕು ಸಿರುಮಯ್ಯ ಕಡಿವುತ
ತುಳಿದನು ಹರಿಗೆ ಬಿಲ್ಲಾಳ । ॥೭೦॥

ಭೀಮನ ಕೈಯಲಳಿದ ಕೀಚಕನಂತೆ
ಕಾಮನು ಕಣ್ಣುರಿಯಿಂದ ।
ಸೋಮ[೩೩][ನ][೩೩] ಕೊಯಿಗುರಿಯಾದಂತೆ ಸಿರುಮನು
ಭೂಮಿಪಾಲನ ಪಡೆಯೊಳಗೆ । ॥೭೧॥

೩೩–೩೩ ನು (ಮ, ಮೈ).

ಕರದ ಖಡ್ಗವ ಜಡಿವುತ ಸಿರುಮೇಂದ್ರನು
ಗಿರಿಗೆರಗುವ ಸಿಡಿಲಂತೆ ।
ಮೊರೆದು ಮೋಹರಿಸಿ ಕವಿದು ತುಳುವರ ತಲೆ
ವರಿಯಲುರುಬಿ ಬಾಗಿಲೊಳಗೆ । ॥೭೨॥

ಕರಿಗಳ ಹಿಂಡನು ಹರಿಹೊಕ್ಕು ತಲೆಗಳ
ನರಿದು ಮಿದುಳ ನುಂಗುವಂತೆ ।
ಸಿರುಮ ಭೂವರನುರುಬುತ ಹೊಕ್ಕು ಕಡಿದನು
ನರಸಿಂಗರಾಯನ ಬಲವ । ॥೭೩॥

ಸಿಡಿಲು ಹೊಡೆಯೆ ಕೊಡೆ ಕಾ[೩೪][ಯ್ವವೆ][೩೪] ವಿಪಿನವು
ವಡಬಾಗ್ನಿಗೈದಿದ[೩೫][ರಿ][೩೫]ಹುದೆ।
ಪೊಡವಿಪತಿಯ ಬಲದೊಳು ಗಾಯವಡೆದಾಗ
ಕಡುಗಲಿ ಸಿರುಮ ತಿರುಗಿದ । ॥೭೪॥

ಛಲದಂಕ ಮಲ್ಲನು ಕಂಡನು ತಂದೆಯ
ಹುಲಿ ಮಗ್ಗುಲಿಕ್ಕಿದಂದದಲಿ।
ಕಲಿಯೆದ್ದು ಸಿಡಿಲಂತೆ ಮೊ[೩೬][ರೆದು][೩೬] ಹೂಂಕರಿಸಲು
ಬಲವೆಲ್ಲ ಕಳವಳಿಸಿವ ರು । ॥೭೫॥

ಬಲ್ಲಿದ ಭುಜಭೀಮ ಶೂದ್ರಕ ರಣದಲಿ
ಮಲ್ಲನು ಭುಜವ ಚಪ್ಪರಿಸಿ ।
ನಿಲ್ಲದೆ ಜಡಿದು ಖಡ್ಗವನು ತಂದೆಯ ಕೂಡೆ
ಇಲ್ಲಿ ನೋಡೈ ನಮ್ಮ ಪರಿಯ । ॥೭೬॥

ಪಸುಳೆಯಿವನ ಸತ್ವ ಜಸವ ನೋಡುವೆನೆಂದು
ಹೆಸರಳ್ಳ ಕಡುಗಲಿ ಸಿರುಮ ।
ಮಿಸುಪ ಕಂಬನಿಯ ತುಂಬುತ ಕಂದ ಬಾಯೆಂದು
ಬೆಸಗೊಂಡ ಈ ಪಾವಕಗೆ । ॥೭೭॥

೩೪–೩೪ ಯಿವ (ಮ, ಮೈ). ೩೫–೩೫ ರ (ಮ, ಮೈ). ೩೬–೩೬ ರಮ (ಮೈ), ರದು (ಮ).

ಪರದಳ ವಿಕ್ರಮ ಗಿರಿರಿಪುದಲ್ಲಣ
ಧುರದೊಳು ಮಲೆವರ ಗಂಡ ।
ಸಿರುಮಭೂವರನ ಕುವರ ಚಿಕ್ಕಮಲ್ಲಣ್ಣ
ತಿರುಗಿದ ತಂದೆಯಿದ್ದೆಡೆಗೆ । ॥೭೮॥

ಚಿತ್ತಯಿಸೈ ರಾಯರದೇವ ಮಲ್ಲಣ್ಣ
ಇತ್ತ ನೋಡೈ ನಮ್ಮ ಮುಖವ ।
ಮೊತ್ತದ ಪವುಜುರುಬುತಲದೆ ಕೈಮಾಡು
ಚಿತ್ತಪಲ್ಲಟವಾಗುತ[೩೭][ನ][೩೭]ಕ। ॥೭೯॥

ಹರಿಸುರ ಬ್ರಹ್ಮಾದಿಗಳಳಿವರು ಕಂದ
ನರಜೀವರುಗಳ ಪಾಡೇನು ।
ಅರಿದು ತಲೆಯ ಕೊಂಡಕೆ ಹಾಕಿ ಹೊಕ್ಕು ಸಂ
ವರಿಸು[೩೮] ಸಾಳ್ವ ಮಾರ್ಬಲವ । ॥೮೦॥

ಬೇಡ ಬೇಡಕಟ ಮಗನೆ ನಿನ್ನ ಶೌರ್ಯವು
ರೂಢಿಗೀಶ್ವರ ನೋಡಬೇಕು।
ಖೋಡಿಯಾಗದಲೆನ್ನ ಶಿರವನರಿದು ಬೇಗ
ನೀಡು ಪಾವಕಗೆ ಮಲ್ಲಣ್ಣ । ॥೮೧॥

ಬಳಿಕಲುರುಬುತ [೩೯]ಗಡೆಯ[೩೯] ಮಂದಿ ಬಾಗಿಲ
ನೊಳಪೊಕ್ಕು ಲಗ್ಗೆ ಮಾಡು[೪೦][ತಿರೆ][೪೦]
ಕಳೆಯೇರಿ ತಂದೆ ಚಿತ್ತೈಸೆನುತಲಿ ಪೊಕ್ಕು
ಪ್ರಳಯಕಾಲದ ಸಿಡಿಲಂತೆ। ॥೮೨॥

ವಿಕ್ರಮ ಮಲ್ಲಣ್ಣ ಹೊಕ್ಕು ಹೊಯ್ಯಲು ಮುಂಡ
ದಿಕ್ಕು ದಿಕ್ಕಿನಲುರುಳಿದವು ।
ರಕ್ಕಸನಂತೆ ಬಲವನಟ್ಟಿ ಬಾಗಿಲ
ನಿಕ್ಕಿ ತಿರುಗಿ ತಂದೆಯೆಡೆಗೆ । ॥೮೩॥

೩೭–೩೭ ವ (ಮ, ಮೈ). ೩೮–೩೮ + ತ (ಮ, ಮೈ). ೩೯–೩೯ ತೆ (ಮೈ). ೪೦–೪೦ ತಲಿ (ಮ, ಮೈ).

ತಂದೆಯ ಮುಖವನು ನೋಡಿ ಮಲ್ಲಣ್ಣ
ಮುಂದ್ಯೆಸಿದ ತಳಿರಂತೆ ।
ಚಂದ್ರಧರನ ಪುರಕ್ಕೈದು ನೀನೆನುತಲಿ
ಚಂದ್ರಾಯುಧವನೆತ್ತಿ ಜಡಿದು । ॥೮೪॥

ಅದೆ ಅದೆ ಕಡಿದ ತಲೆಯ ನಿಂದು ದೇವರ್ಕ
ಳೊದವಿ ನೋಡಿದರು ಖೇಚರದಿ ।
ಮದನದಹನನರಸಿಯು ದೇವಗಣಿಕೆಯ
ರೊದವಿ ನೋಡಿದರು ನಭದೊಳಗೆ । ॥೮೫॥

ಆಲಿ ಬೊಬ್ಬಿರಿದು[೪೧][ಹೊ][೪೧]ಯ್ಯಲು ಸಿರುಮನ ತಲೆ
ಶೂಲಧರನ ನೆನೆವುತಲಿ ।
ಆಲಿಗಚ್ಚರಿ[೪೨]ಮಲ್ಲ ತಲೆಯ ಮುಂಡಾಡಿದ
ಜ್ವಾಲೆಯ ಕೊಂಡ ಮಂಡಲದಿ । ॥೮೬॥

ಎಡವಂಕಗಡೆಯ ಪವುಜ ಹೊಕ್ಕು ಕಡಿದಾಡಿ
ಕಡುಗಲಿತನವ ತೋರಿದೆಯ ।
ಬಲವಂಕ ತುಳುವರ ಪವುಜನೆಲ್ಲವ ಕೊಂದು
ಛಲವುಳ್ಳ ವೀರ ಮಡಿದೆಯ । ॥೮೭॥

ಕೊಂಡಕೆ ತಲೆಯನು ಹಾಕುತ ಮಲ್ಲಣ್ಣ
ಕಂಡನು ಉರುಬಿ ಹೊಕ್ಕವರೆ।
ಗಂಡೆದ್ದು ರಣದೊಳು ದಿಂಡುದರಿಯೆ ಸೂಸು
[೪೩][ಕ][೪೩]ಂಡವೊಕ್ಕವು ರಣದೊಳಗೆ । ॥೮೮॥

ಎಲ್ಲಿ ನೋಡಲು ಗೊಲ್ಲ[೪೪][ಸಿರುಮ][೪೪]ಸುತನು ಚಿಕ್ಕ
ಮಲ್ಲನ ಬೊಬ್ಬೆಯಬ್ಬರವು ।
ತಲ್ಲಣಿಸುತ ದೆಸೆದೆಸೆಗೋಡಿ ಬಾಯ್ಬಿಟ್ಟು
ಹಲ್ಲು ಕಚ್ಚಿತು ಕೆಲಕೆಲರು। ॥೮೯॥

೪೧–೪೧ ಹು (ಮ, ಮೈ). ೪೨–೪೨ + ಮುನ್ನ (ಮ, ಮೈ). ೪೩–೪೩ ಗ (ಮ, ಮೈ).
೪೪–೪೪ X (ಮ, ಮೈ).

ಕವಿದೆಸುವಂಬಿನ ಮಳೆಯೊಳು ಮಲ್ಲಣ್ಣ
ಶೌರ್ಯಗುಂದದೆ ಸಮರದಲಿ।
ಭುವನಪತಿ ಪಾಯದಳವೆಲ್ಲ ಪೊಗಳಿತು
ರವಿಸುತನಿಗೆ ಸಮವೆಂದು। ॥೯೦॥

ಮಲ್ಲನ ಬೊಬ್ಬೆಗೆ ವೈರಿಗಳೆದೆಯೊಳು
ತಲ್ಲಣಿ[೪೫][ಸುತ][೪೫] ಬಾಯಬಿಡುತ ।
ಅಲ್ಲೋಲ ಕಲ್ಲೋಲವೆ[೪೬][ಲ್ಲ][೪೬] ಕ[೪೭][ಡೆ][೪೭]ಯಾಗಿ
ಗೆಲ್ಲ ತಿವಿದರು ಗಡೆಯಲಿ । ॥೯೧॥

ಸುತ್ತ ತಾಗಿದ ಸಬಳ ಗಾಯಕೆ ಮಲ್ಲ
ಚಿತ್ತವ ಮರೆದೊರಗಿದನು ।
ಚಿತ್ತಕೆ ಕಳವಳವಿಲ್ಲವೆನುತಲಂಜಿ
ಹತ್ತಿರೆ ಬರಲಮ್ಮದಿರಲು । ॥೯೨॥

ಅರಿದರಾಗಳೆ ಮಲ್ಲಣ್ಣನು ಜೀವವ
ತೊರೆದ ಬಗೆಯ ಸಾಳ್ವಬಲವು ।
ಇರಿದು ನೂಕುತ ಮೆಟ್ಟಿ ತಲೆಯ ಕೊಯ್ದು ತ
ಮ್ಮರೆಯಗೆ ತಂದು ತೋರಿಸಲು । ॥೯೩॥

ಈ ಕ್ಷಣದಲ್ಲಿ ಹಲ್ಲ ಕಿತ್ತು ಚಮ್ಮಾವುಗೆ
ಗಿಕ್ಕೆಂದು ರಾಯ ಗರ್ಜಿಸಲು ।
ಧಿಕ್ಕನೆ ತರಗೆನಾಯಕಗೆ ನಾಯಕರು ಮೈ
ಯಿಕ್ಕಿ ರಾಯಗೆ ಬಿನ್ನೈಸೆ । ॥೯೪॥

ಸಲ್ಲದು ರಾಯ ನಿನಗೆ ಈ ನುಡಿ ಚಿಕ್ಕ
ಮಲ್ಲಣ್ಣನಿವ ದೈವಪಿಂಡ ।
ಎಲ್ಲ ಪಾಳೆಯವ ಸಂಹರಿಸಿದ ವೀರನ
ಹಲ್ಲ ಕೀಳಿಸುವುದುಚಿತವೆ । ॥೯೫॥

೪೫–೪೫ ಸಿತು (ಮ, ಮೈ). ೪೬–೪೬ ಲ (ಮೈ) ಳ (ಮ). ೪೭–೪೭ ಡಿ (ಮ, ಮೈ).

ಹಲವು ಪರಿಯಲಾದರೆ ನಮ್ಮ ಬಂದಿವ
ಕೊಲುವನಲ್ಲದೆ ಮಾಣನೆಂದು ।
ಕಲವೀರ ನರಸಿಂಹರಾಯ ಚಿತ್ತೈಸಯ್ಯ
ತಲೆಯ ಕೊಂಡಕೆ ಹಾಕಬೇಕು । ॥೯೬॥

ದರುಶನದಲಿ ಭೂತಬೇತಾಳನಾಗಿ ಅವ
ತರಿಸಿದಲ್ಲದೆ ಬಿಡನಿವನು ।
ನರಸಿಂಹರಾಯ ಚಿತ್ತೈಸಯ್ಯ ಎನುತ ಈ
ಶ್ವರ ಮಂತ್ರಿ ಬಂದು ಹೇಳಿದನು । ॥೯೭॥

ಮಂಡಲಪತಿ ಮನದೊಳು ನೊಂದು ಕಳುಹಿದ
ಗಂಡಾಳು ಮಲ್ಲನ ತಲೆಯ ।
ಕೊಂಡಕೆ ಹಾಕಿ ಗೊಲ್ಲನ ಮನೆ ಬೊಕ್ಕಸ
ಭಂಡಾರವ ಮುದ್ರಿಸೆಂದ । ॥೯೮॥

ಕಸ್ತೂರಿ ಪುಣುಗು ಜವಾದಿಯ ತರಿಸಿಯೆ
ಸುತ್ತಿಸಿ ಪಟ್ಟೆಸೀರೆಯನು ।
ಮೊತ್ತದ ಪುರಜನ ಸಹಿತ ಬಂದನು ಮಂತ್ರಿ
ಇತ್ತ ಗೊಲ್ಲನ ಅರಮನೆಗೆ । ॥೯೯॥

ಕಂಡನು ಅರಮನೆಯನು ಹೊಕ್ಕು ಮಂತ್ರಿಯು
ಕೊಂಡದ ಕೆಂಡ ದಳ್ಳುರಿಯ ।
ಮಂಡೆ ತೊನೆದು ರಘುಪತಿ ಬಲ್ಲನೆನುತಲಿ
ರುಂಡ ಮುಂಡಗಳ ಹಾಕಿಸಿದ । ॥೧೦೦॥

ಬೊಕ್ಕಸ ಭಂಡಾರ ಪೆಟ್ಟಿಗೆ ನಾಣ್ಯವ
ಧಿಕ್ಕನೆ ತರಿಸ ಹೇಳಿದನು ।
ಹೊಕ್ಕು ಶೋಧಿಸಿದರುಗ್ರಾಣದ ಮನೆಯನು
ಮಿಕ್ಕ ಮಾಳಿಗೆ ತೊಟ್ಟಿಯನು । ॥೧೦೧॥

ಅರಮನೆಯೆಲ್ಲವನುರಿ ಕೊಂಡು ಸಿರುಮನ
ಅರಸಿಯರೆಲ್ಲರು ಮಡಿದು ।
ಹರುಷವಡಗಿ ಮನನೊಂದು ಮಂತ್ರೀಶನು
ತಿರುಗಿ ಬಂದನು ಚಾವಡಿಗೆ । ॥೧೦೨॥

ಕರೆಸಿದ ಮಂತ್ರಿಗಳರಸನು ಸಿರುಮನ
ಕರಣಿಕರಧಿಕಾರಿಗಳ ।
ಅರಮನೆಯುಗ್ರಾಣ ಬೊಕ್ಕಸ ಭಂಡಾರ
ತರಿಸಿ ನೀವೆಂದನಾಗ್ರದಲಿ । ॥೧೦೩॥

ಮಂಡಲಪತಿ ಮಂತ್ರಿ ಚಿತ್ತೈಸು ಗೊಲ್ಲನು
ದ್ದಂಡತನದ ಬುದ್ಧಿಯನು ।
ಕಂಡವರಿಗೆ ಕೊಟ್ಟು ಚೆಲ್ಲಿ ಕೆಲವ ತನ್ನ
ಕೊಂಡದೊಳಗೆ ಹಾಕಿಸಿದ । ॥೧೦೪॥

ಹಿರಿಯರು ಮಾನ್ಯರುಗಳಿಗಿತ್ತ ಕೆಲವನು
ಪುರಜನಗಳಿಗಿತ್ತ ಕೆಲವ।
ಹರಳುಕಲ್ಲು ಮುತ್ತು ಮಾಣಿಕವೆಲ್ಲವ
ತರಿಸಿ ಕೊಂಡಕೆ ಹಾಕಿಸಿದನು । ॥೧೦೫॥

ಚಿತ್ರಲಾವಣ್ಯ ದೀಹದ ಹಕ್ಕಿ ಮೊದಲಾಗಿ
ಎತ್ತಿಕೊಂಡಕೆ ಹಾಕಿಸಿದನು ।
ಉತ್ತಮ ನಾಣ್ಯ ಪಟ್ಟೆಯ ದಿಂಡು ಮೊದಲಾಗಿ
ಸುತ್ತಿ ಕೊಂಡಕೆ ಹಾಕಿಸಿದನು । ॥೧೦೬॥

ಬಳಿಕೊಂದು ಚಿತ್ರವ ಕೇಳು ಮಂತ್ರೀಶ್ವರ
ಉಳಿದ ಹೊನ್ನುಗಳನೆಲ್ಲವನು ।
ದಳದ ಮುಂದಕೆ ಚೆಲ್ಲಿ ಕಡಿವುತ ಮಲ್ಲಣ್ಣ
ಇಳೆಯಪಾಲರ ಕೆಡಹಿದನು । ॥೧೦೭॥

ಝುಲ್ಲಿಯ ಚೌರಿ ಬಂಗಾರವೆಲ್ಲವ ಚಿಕ್ಕ
ಮಲ್ಲಣ್ಣ ಕೊಂಡಕೆ ಚೆಲ್ಲಿ ।
ವಲ್ಲಭೆ ಮಾತೆಪಿತರುಗಳೆಲ್ಲರ ಕೊಂದು
ಕಲ್ಲೋಲವಾಗಿ ಮಾಡಿದನು । ॥೧೦೮॥

ಎಂದೆಂಬ ನುಡಿಯನು ಕೇಳಿ ಈಶ್ವರ ಮಂತ್ರಿ
ಬಂದನು ರಾಯನೋಲಗಕೆ ।
ಹಿಂದುಮುಂದಳ ಕಥೆಯಲ್ಲ ಚಿತ್ತೈಸೆಂದು
ಹೇಳಿದ ಕೈಯನು ಮುಗಿದು । ॥೧೦೯॥

ಒಡವೆಯ ಗೊಡವೆ ಎಳ್ಳಿನಿತಿಲ್ಲ ಗೊಲ್ಲನ
ಮಡದಿ ಮಕ್ಕಳು ಮುನ್ನವಿಲ್ಲ ।
ಪೊಡವಿಯೊಳಚ್ಚರಿ[೪೮]ಮಾಡಿ[೪೯][ದ][೪೯]ಗೊಲ್ಲನು
ಕಡುಗಲಿ ಎನ್ನಬಹುದವನ । ॥೧೧೦॥

[೫೦]ಕುದುರನಿರಿ[೫೦]ದಿರ್ದ ರಣಭೀತಿಯ ಕಂಡು
ಹೆದರಿ ಬಂದೆವು ನಿಮ್ಮಾಣೆ ।
ಕದನ ವಿಕ್ರಮ ಗೊಲ್ಲನರಮನೆಯೊಳು ಬೊಬ್ಬೆ
ಬೆದರುಗಾಳೆಯ ಹಿಡಿದಂತೆ । ॥೧೧೧॥

ನೀರೊಳಗದ್ದಿ ನೆಕ್ಕಿದ ಕೈಯ ತೆರನಂತೆ
ಕಾರ್ಯವು ನಮಗಾಯಿತೆಂದ ।
ವೀರಬಂಟರು ಸತ್ತು ಬರೆದ ಲೆಕ್ಕವು ಇಪ್ಪ
ಇತ್ತಾರು ಸಾವಿರದೇಳುನೂರು । ॥೧೧೨॥

ಗೊಲ್ಲನ ಕಾರ್ಯ ನಿಂದಿ[೫೧][ತೀ][೫೧]ದಿನ ನಮಗೆಂದು
ನಿಲ್ಲದೆ ತಿರುಗಿದ ರಾಯ ।
ಎಲ್ಲ ಸರಳ ಸೊನ್ನೆಯ ನೀಗಿ ಹೋಹಂತೆ
ಖುಲ್ಲ ಗಂಗಯ್ಯ ಮಾಡಿದನು । ॥೧೧೩॥

ಗುಂಡರಾಜನ [೫೨]ವರ[೫೨]ಸುತನಿಂ[೫೩][ದ][೫೩] ಸಿರುಮಯ್ಯ
ಕಂಡನು ಸುಕೃತ ಸ್ವರ್ಗವನು ।
ಕೊಂಡ ಛಲ ಬಿಡದಳಿದನೆಂದು ಸಿರುಮ ಭೂ
ಮಂಡಲದೊಳು ಪಸರಿಸಿತು । ॥೧೧೪॥

ವರ ಶಶಿನೇಸರುಳ್ಳನ್ನ[೫೪][ಕ್ಕ][೫೪]ಕೀರ್ತಿಯ
ಸಿರುಮ ಪಡೆದ ಜಗದೊಳಗೆ ।
ಹರನ ಪುರಕೆ ನಡೆದನು ತನ್ನ ಒಕ್ಕಲು
ವರಸುತ ಸತಿಯರು ಸಹಿತ । ॥೧೧೫॥

---

೪೮ + ಯವ (ಮ, ಮೈ). ೪೯ X (ಮ, ಮೈ). ೫೦–೫೦ ಕುದುರೆ ನಿರಿ (ಮೈ). ಕುದುರೆ ನಿಲಿ (ಮ). ೫೧–೫೧ ತು (ಮ, ಮೈ). ೫೨–೫೨ ನುಪ (ಮೈ), ನಪ (ಮ). ೫೩–೫೩ ದು (ಮೈ). ೫೪–೫೪ ಕಲಿ (ಮ, ಮೈ).

ಈಶ್ವರನೊಡ್ಡೋಲಗದ ಬಾಗಿಲ ಭ
ದ್ರಾಸನ ಮಂ[೫೫][ಡಿತನಾ][೫೫]ಗಿ ।
ಮೋಸವಾಗದೊಲು ಸೋವೇಶನೊಲಿಯೆ ಕೈ
ಲಾಸದೊಳಿಹ ಸಂಧಿ ಮುಗಿಯೆ । ॥೧೧೬॥

ಉಸಿರೊಗ್ಗಿನ ಶಿಪಶರಣರೆಲ್ಲರ ಶಿಶು
ಕುಶಲ ಶಿವಲೀಲೆ ವೀರಯನ ।
ರಸಿಕನ ಮಗ ಮಲ್ಲನಿಂತು ಪೇಳಿದನಿದ
ಹೊಸತಾಗಿ ಸಿರುಮನ ಕೃತಿಯ[೫೬]

❖❖

೫೫–೫೫ ದಿರವಾ (ಮ, ಮೈ). ೫೬ + ಅಂತು ಸಂಧಿ ೫ಕ್ಕಂ ಪದನು ೬೨೬ ಕ್ಕಂ ಮಂಗಳ ಮಹಾಶ್ರೀ, ಚೈತ್ರ ಬಹುಳ ೧೨ಲು ದುಂದುಭಿ ಸಂವತ್ಸರದಲ್ಲು ಬರದ ತುರುವಕ್ಕೆಯ ಗೋಪುರದ ವಿನಾಯಕ ಪಾದಪದ್ಮಂಗಳ ಗತಿ ಬೇಟೆರಾಯಸ್ವಾಮಿಯ ಪಾದವೆ ಗತಿ । ಪರ್ವತ ಮಲ್ಲಿಕಾರ್ಜುನ ದೇವರ ಪಾದವೆ ಗತಿ । ಗಂಗಾಧರ ಸ್ವಾಮಿಯ ಪಾದವೆ ಗತಿ, ಇಲ್ಲಿಗೆ ಸಿರುಮನ ಸಾಂಗತ್ಯವು ಸಂಪೂರ್ಣ ಶ್ರೀ.

ನಾಮಸೂಚಿ

❖❖

ಕೆಂಚಶೆಟ್ಟಿ ಸುತ ರಾಮ ವಿರಚಿತ

ಸಿರುಮನ ಚರಿತೆ

ಸಂಪಾದಕರು

ಎಂ. ಎಂ. ಕಲಬುರ್ಗಿ

ಶ್ರೀ ಜಗದ್ಗುರು ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು

೧೯೯೧

* ಪ್ರಸ್ತಾವನೆ

ಪ್ರಾಚೀನ ಕನ್ನಡ ಕೃತಿಗಳ ಸಂಪಾದನಕಾರ್ಯ ಮತ್ತು ರಮ್ಯಸಾಹಿತ್ಯದ ಸೃಷ್ಟಿಕಾರ್ಯಗಳು ನಮ್ಮ ನಾಡಿನಲ್ಲಿ ಏಕಕಾಲಕ್ಕೆ (೨೦ನೆಯ ಶತಮಾನ) ಪ್ರಾರಂಭವಾದವು. ಈ ರಮ್ಯಧೋರಣೆಯಿಂದಾಗಿ, ಪ್ರಾಚೀನ ರಸವತ್ಕಾದ ಕೃತಿಗಳನ್ನು ಪ್ರಕಟಿಸುವ ಅವು ಗಳನ್ನು ರಸದೃಷ್ಟಿಯಿಂದ ಅಭ್ಯಸಿಸುವ ಒಲವು ನಮ್ಮಲ್ಲಿ ಬೆಳೆದು, ಚಾರಿತ್ರಿಕ ಕೃತಿಗಳನ್ನು ಪ್ರಕಟಿಸುವ, ಅವುಗಳನ್ನು ಶುದ್ಧ ಚಾರಿತ್ರಿಕ ದೃಷ್ಟಿಯಿಂದ ಅಭ್ಯಸಿಸುವ ಒಲವುಗಳು ಕುಂಠಿತವಾದವು. ಪ್ರಕಟವಾದ ಒಂದೆರಡು ಚಾರಿತ್ರಿಕ ಕೃತಿಗಳನ್ನೂ ರಸದೃಷ್ಟಿಯಿಂದ ಅಭ್ಯಸಿಸುವಲ್ಲಿ, ಚಾರಿತ್ರಿಕ ಅಧ್ಯಯನ ಮತ್ತೂ ಅಲಕ್ಷಿತವಾಯಿತು. ಈ ಕೊರತೆಯನ್ನು ಇಂದು ನಾವು ತುಂಬಿಕೊಳ್ಳಬೇಕಾಗಿದೆ.

ಹಲವು ವರ್ಷಗಳ ಹಿಂದೆ ಕರ್ನಾಟಕ ಕವಿಚರಿತೆ ಮತ್ತು ಕನ್ನಡ ಹಸ್ತಪ್ರತಿಸೂಚಿಗಳನ್ನು ಓದುತ್ತಿರುವಾಗ, ನಮ್ಮ ಕಾವ್ಯಗಳನ್ನು ಚಾರಿತ್ರಿಕ ದೃಷ್ಟಿಯಿಂದ ಅಭ್ಯಸಿಸುವುದು, ಚಾರಿತ್ರಿಕ ಕೃತಿಗಳನ್ನು ಪ್ರಕಟಿಸುವುದು ತೀರ ಅವಶ್ಯವೆನಿಸಿತು. ಈ ವಿಚಾರಗಳಿಂದ ಪ್ರೇರಿತನಾಗಿ "ಕರ್ನಾಟಕದ ಕೈಫಿಯತ್ತುಗಳ ಶೋಧ ಮತ್ತು ಪ್ರಕಟನ ಯೋಜನೆ"ಯನ್ನು ಕೈಗೆತ್ತಿಕೊಳ್ಳುವುದರ ಜೊತೆಗೆ "ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ", "ನಿಂಬ ಸಾಮಂತಚರಿತೆ", "ಸಿರುಮಣನಾಯಕನ ಸಾಂಗತ್ಯ"[೧] ಗಳನ್ನು ಪ್ರಕಟಿಸಿದ ನಾನು, ಈಗ "ಸಿರುಮನ ಚರಿತೆ"ಯನ್ನು ಸಂಪಾದಿಸಿ ಮೈಸೂರಿನ "ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ"ಯ ಮೂಲಕ ಪ್ರಕಟಿಸುತ್ತಿದ್ದೇನೆ.

ಸಿರುಮನನ್ನು ಕುರಿತ ಕೃತಿಗಳು

ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ಕುಮಾರರಾಮನನ್ನು ಕುರಿತು ಹಲವು ಕಾವ್ಯಗಳು ಹುಟ್ಟಿಕೊಂಡಿವೆ. ಇಂತಹ ಇನ್ನೊಂದು ಅಪೂರ್ವ ಉದಾಹರಣೆ, ಸಿರುಮನನ್ನು ಕುರಿತ ಕಾವ್ಯಸಮೂಹ. ನಮಗೆ ತಿಳಿದ ಮಟ್ಟಿಗೆ ಈ ವರೆಗೆ ಸಿರುಮನನ್ನು ಕುರಿತು -

೧. ಸಿರುಮಣನಾಯಕನ ಸಾಂಗತ್ಯ- ಸಿದ್ಧಕವಿ-ಸಂಧಿ ೫, ಪದ್ಯ ೬೨೬.

೨. ಸಿರುಮನ ಚರಿತೆ-ಕೆಂಚಿಶೆಟ್ಟಿ ಸುತ ರಾಮ-ಸಂಧಿ ೧೩, ಪದ್ಯ ೧೧೬೫

೩. ಗೊಲ್ಲ ಸಿರುಮನ ಚರಿತೆ - ಮಲ್ಲಕವಿ-ಸಂಧಿ ೬, ಪದ್ಯ ೧೧೫೩.

ಹೀಗೆ ಮೂರು ಕೃತಿಗಳು ಸಿಗುತ್ತಿದ್ದು, ಅವುಗಳ ವಿವರ ಹೀಗಿದೆ:

೧. ಇವುಗಳ ಪ್ರಕಾಶಕರು ಕ್ರಮವಾಗಿ ಶ್ರೀ ಬಾಲಲೀಲಾ ಮಹಾಂತಶಿವಯೋಗೀಶ್ವರ ಗ್ರಂಥಮಾಲೆ, ಮುರುಘಾಮಠ, ಧಾರವಾಡ; ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ಮತ್ತು ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ತೋಂಟದಾರ್ಯಮಠ, ಗದಗ.

ಮೊದಲನೆಯ ಕೃತಿಯ ತಾಳೆಗರಿ ಪ್ರತಿ ಮದ್ರಾಸ ಓರಿಯೆಂಟಲ್ ಮ್ಯಾನುಸ್ಕ್ರಿಪ್ಟ್ ಲೈಬ್ರರಿಯಲ್ಲಿದೆ. ೧೯೩೭ರಲ್ಲಿ ಸಿದ್ಧಪಡಿಸಿದ ಇದರ ನಕಲು ಕಾಗದಪ್ರತಿ ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿಭಾಂಡಾರದಲ್ಲಿದೆ. ಕವಿಚರಿತೆಕಾರರೂ ಈ ಕೃತಿಯನ್ನು ಉಲ್ಲೇಖಿಸಿದ್ದಾರೆ.

ಎರಡನೆಯ ಕೃತಿಯ ಕಾಗದಪ್ರತಿ (?) ಶೇಕದಾರ ಶ್ರೀ. ಜಿ. ಎಂ. ಬಸವರಾಜಯ್ಯನವರ ಸಹಾಯದಿಂದ ಶ್ರೀ ಹುಲ್ಲೂರ ಶ್ರೀನಿವಾಸ ಜೋಯಿಸರಿಗೆ ಲಭಿಸಿದ್ದಿತು. ಇವರು ಸಾಹಿತ್ಯ ಪರಿಷತ್ತಿನ ಮೂಲಕ ಇದರ ಗದ್ಯಾನುವಾದವನ್ನು (೧೯೫೧) ಪ್ರಕಟಿಸಿದ ಬಳಿಕ, ಅದರ ಒಡೆಯರಿಗೆ ಹಿಂದಿರುಗಿಸಿದ ಈ ಮೂಲ ಹಸ್ತಪ್ರತಿ ಇಂದು ಲಭ್ಯವಿಲ್ಲ. ಆದರೆ ಮೈಸೂರಿನ ಜಿ. ವರದರಾಜರಾವ್ ಅವರ ಸಂಗ್ರಹದಲ್ಲಿದ್ದ ಇದರ ನಕಲು ಪ್ರತಿಯ ಆಧಾರದಿಂದ ಪ್ರಸ್ತುತ ಆವೃತ್ತಿಯನ್ನು ಬೆಳಕಿಗೆ ತರುತ್ತಲಿದ್ದೇನೆ.೧೯೫೧ರಲ್ಲಿ ಗದ್ಯಾನುವಾದ ರೂಪದಿಂದ ಬೆಳಕು ಕಂಡ ಈ ಕೃತಿ ೪೦ ವರ್ಷಗಳ ತರುವಾಯ ಈಗ ೧೯೯೧ರಲ್ಲಿ ಮೂಲರೂಪದಿಂದ ಪ್ರಕಟವಾಗುತ್ತಲಿದೆ.

ಮೂರನೆಯ ಕೃತಿಯ ತಾಳೆಯಪ್ರತಿ ಶ್ರೀ. ಎಸ್. ಶಿವಣ್ಣ (ಬೆಂಗಳೂರು)ಅವರ ವಶದಲ್ಲಿದೆ. ಇದರ ಇನ್ನೊಂದು ತಾಳೆಪ್ರತಿ ಉಸ್ಮಾನಿಯಾ ವಿಶ್ವವಿದ್ಯಾಲಯದ ಹಸ್ತಪ್ರತಿ ಭಾಂಡಾರದಲ್ಲಿದೆ. ಪರಿಷ್ಕರಣ ಕಾರ್ಯವನ್ನು ಪೂರ್ಣಗೊಳಿಸಿರುವ ನಾನು, ಇದನ್ನೂ ಪ್ರಕಟಿಸುವ ಆಸೆ ಇಟ್ಟುಕೊಂಡಿದ್ದೇನೆ.

ಸಿರುಮನನ್ನು ಕುರಿತ ಕೃತಿನಾಮಗಳು-ಕವಿನಾಮಗಳು

ಸಿರುಮನನ್ನು ಕುರಿತು ಈ ಮೂರು ಕೃತಿಗಳಿಗೆ ಆಯಾ ಕವಿಗಳು ಇಟ್ಟ ಹೆಸರುಗಳಾವವು? ಎಂಬುದು ಸಂದೇಹ. ಕೃತಿಗಳ ಒಡಲಲ್ಲಿ ಇದಕ್ಕೆ ಗಟ್ಟಿ ಆಧಾರಗಳಿಲ್ಲ. ಒಂದನೆಯ ಕೃತಿಯ ವಸ್ತು-ಪ್ರಕಾರಗಳನ್ನಾಧರಿಸಿ, ಕವಿಚರಿತೆಕಾರರು ಇದನ್ನು 'ಸಿರುಮನ ಸಾಂಗತ್ಯ' ಎಂದು ಕರೆದಿದ್ದಾರೆ.[೨] ಆದರೆ ಹಸ್ತಪ್ರತಿಯ ಪ್ರಾರಂಭದಲ್ಲಿ ಲಿಪಿಕಾರನು ಬರೆದ 'ಸಿರುಮಣನಾಯಕನ ಸಾಂಗತ್ಯ' ಎಂಬುದನ್ನೇ ನಾವು ಸ್ವೀಕರಿಸಿದ್ದೇವೆ. ಈಗ ಪ್ರಕಟವಾಗುತ್ತಲಿರುವ ಎರಡನೆಯ ಕೃತಿಯ ನಿಜನಾಮ ಸಿರುಮನ ಚರಿತೆ ಎಂದು ತಿಳಿದುಬರುತ್ತದೆ. ಮೂರನೆಯ ಕೃತಿಗೂ ಕವಿ ನಿರ್ದಿಷ್ಟ ಹೆಸರು ಬಳಸಿಲ್ಲವಾದುದರಿಂದ, ಲಿಪಿಕಾರ ಹಸ್ತಪ್ರತಿಯ ಆರಂಭದಲ್ಲಿ ಬಳಸಿದ "ಗೊಲ್ಲಸಿರುಮನ ಚರಿತೆ"[೩] ಎಂಬುದನ್ನೇ ಗ್ರಹಿಸುವುದು ಅನಿವಾರ್ಯವಾಗಿದೆ.

ಸಿರುಮನನ್ನು ಕುರಿತು ಈ ವರೆಗೆ ಲಭಿಸಿದ ಮೂರು ಕೃತಿಗಳ ಕರ್ತೃವಿವೇಚನೆ ಇಲ್ಲಿ ಅವಶ್ಯವೆನಿಸಿದೆ. ಶ್ರೀ ಹುಲ್ಲೂರ ಅವರಿಗೆ ಲಭಿಸಿದ 'ಸಿರುಮನ ಚರಿತೆ'ಯ ಕರ್ತೃ "ಪಂಚಮಕುಲದ

---

೨. ಮದ್ರಾಸ ಪ್ರಾಚ್ಯವಿದ್ಯಾಸಂಸ್ಥೆಯ ಹಸ್ತಪ್ರತಿ ಸೂಚಿ ಮತ್ತು ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಸೂಚಿಗಳಲ್ಲಿಯೂ "ಸಿರುಮನ ಸಾಂಗತ್ಯ" ಎಂದೇ ಕರೆಯಲಾಗಿದೆ.

೩. ಶಿವಣ್ಣನವರ ವಶದಲ್ಲಿಯ ಹಸ್ತಪ್ರತಿಯ ಅಂತ್ಯದಲ್ಲಿ ಲಿಪಿಕಾರ 'ಗೊಲ್ಲ ಸಿರುಮನ ಸಾಂಗತ್ಯ ಎಂದು ಕರೆದಿದ್ದಾನೆ. 'ಹೈದ್ರಾಬಾದ ಪ್ರತಿಯ ಆದಿಯಲ್ಲಿ "ಯಲಹಂಕ(?) ಬೂದಿಹಾಳ ಸಿರುಮಣನಾಯಕ ಸಾಂಗತ್ಯ"ಎಂದು ಕರೆಯಲಾಗಿದೆ..

ಕೆಂಚಿಸೆಟ್ಟಿಯ ಸುತ ರಾಮ"ನೆಂದು ವ್ಯಕ್ತವಾಗಿಯೇ ಹೇಳಲಾಗಿದೆ. ಆದರೆ 'ಸಿರುಮಣನಾಯಕನ ಸಾಂಗತ್ಯ'ದ ಅಂತ್ಯ ಮತ್ತು 'ಗೊಲ್ಲ ಸಿರುಮನ ಚರಿತೆ'ಯ ಆದಿಗಳಲ್ಲಿ

ಉಸಿರೊಗ್ಗಿನ ಶಿವಶರಣರೆಲ್ಲರ ಶಿಶು।

ಕುಶಲ ಶಿವಲೀಲೆ ವೀರಯ್ಯನ।

ರಸಿಕನ ಮಗ ಮಲ್ಲನಿಂತು ಪೇಳಿದನಿದ।

ಹೊಸತಾಗಿ ಸಿರುಮನ ಕೃತಿಯ॥

ಎಂಬ ಪದ್ಯ ಕಂಡು ಬರುತ್ತದೆ. ಹೀಗಾಗಿ ಈ ಎರಡೂ ಗ್ರಂಥಗಳನ್ನು ಒಬ್ಬನೇ ಬರೆದನೋ, ಒಂದರಲ್ಲಿ ಇದು ಪ್ರಕ್ಷಿಪ್ತ ಪದ್ಯವಾಗಿ ಸೇರಿಕೊಂಡಿತೋ ಎಂಬ ಸಂದೇಹ ಹುಟ್ಟುತ್ತದೆ. ಆದರೆ ಸಿರುಮಣನಾಯಕನ ಸಾಂಗತ್ಯದ ಅಂತ್ಯದಲ್ಲಿ ಈ ಪದ್ಯವಿದ್ದರೆ ಆದಿಯಲ್ಲಿ "ಭುವನವರಿಯೆ ಗೊಲ್ಲ ಸಿರುಮನ ಕೃತಿಯನು ಪವಣಿಸಿ ಸಿದ್ಧನೊರೆದನು" ಎನ್ನುತ್ತ ಕರ್ತೃನಾಮವನ್ನು 'ಸಿದ್ಧ' ಎಂದು ಸ್ಪಷ್ಟಪಡಿಸಲಾಗಿದೆ. "ಗೊಲ್ಲ ಸಿರುಮನ ಚರಿತೆ"ಯಲ್ಲಿ ಮೇಲಿನ ಪದ್ಯವಲ್ಲದೆ, 'ಶಿವಲೀಲೆ ವೀರನ ಮಗ ಮಲ್ಲೇಶ' ಎಂಬ ಉಲ್ಲೇಖವೂ ಇದೆ. ಹೀಗಾಗಿ 'ಸಿರುಮಣನಾಯಕನ ಸಾಂಗತ್ಯ'ದ ಕರ್ತೃ 'ಸಿದ್ಧಕವಿ'ಯೆಂದೂ, 'ಗೊಲ್ಲಸಿರುಮನ ಚರಿತೆ'ಯ ಕರ್ತೃ 'ಮಲ್ಲಕವಿ'ಯೆಂದೂ ಇಟ್ಟುಕೊಳ್ಳಬಹುದು.

ಕೆಂಚಿಶೆಟ್ಟಿಯ ಸುತ ರಾಮ

ಈ ಕವಿಯ ವಿಷಯ ಕನ್ನಡದ ಬೇರೆ ಕೃತಿಗಳಲ್ಲಿ ಕಂಡುಬರುವುದಿಲ್ಲ. ಪ್ರಸ್ತುತ ಕೃತಿಯಲ್ಲಿ ಸಿಗುವ,

ಪಂಚಮಕುಲವಾರ್ಧಿ ಚಂದಿರನೆನಿಸುವ

ಪಂಚಮುಖನ ಭಕ್ತಿಯುತನು।

ಕೆಂಚಿಶೆಟ್ಟಿಯ ಸುತ ರಾಮ ಪೇಳಿದ ಕೃತಿ

ಯಂ ಚದುರರು ಲಾಲಿಪುದು ॥

ಎಂಬ ಪದ್ಯ ಮಾತ್ರ ಕವಿಪರಿಚಯ ಒದಗಿಸುವ ಏಕೈಕ ಆಧಾರವಾಗಿದೆ. ಇದರ ಪ್ರಕಾರ ಕವಿ ರಾಮನು ಕೆಂಚಿಶೆಟ್ಟಿಯ ಮಗ. ಕುಲದಿಂದ ಪಂಚಮ. ಶಿವಭಕ್ತ. ತಂದೆಯ ಹೆಸರಿನೊಂದಿಗೆ 'ಶೆಟ್ಟಿ'ಯೆಂಬ ಉಪಾಧಿಯಿರುವುದರಿಂದ ಇಲ್ಲಿಯ 'ಪಂಚಮ' ಎಂಬುದು ಶೂದ್ರಜಾತಿಯನ್ನು ಸೂಚಿಸುವ ಬಗ್ಗೆ ಸಂದೇಹ. ಕೃತಿಯಲ್ಲಿ ವೀರಶೈವ ವಾತಾವರಣ ತುಂಬಿರುವುದರಿಂದ ಇವನು ವೀರಶೈವ 'ಪಂಚಮ'ನಾಗಿರುವ ಸಾಧ್ಯತೆ ಇದೆ. ಸಿರುಮನ ರಾಜಧಾನಿಯಾದ ಬೂದಿಹಾಳಿನ ಕೋಟೆ-ಕೊತ್ತಳ, ಅಲ್ಲಿಯ ನಿರಾಸೆ ಮಠ, ಸೋಮೇಶ, ಕಪ್ಪುರ ವೀರಭದ್ರ, ಗಣಪತಿ, ಏಕನಾಥಿ, ಕೊಳಲ ಗೋಪಾಲ, ಬನಶಂಕರಿ ಮೊದಲಾದ ದೇವತೆಗಳನ್ನು ಸೂಚಿಸುವ ಇವನು ಇದೇ ಪ್ರದೇಶದವನಾಗಿರಬಹುದು. ಇವನಿಗೆ ಪಂಚಾಳ ಗಂಗನ 'ಕುಮಾರರಾಮ'ನ ಸಾಂಗತ್ಯದ ಪರಿಚಯವಿದ್ದಂತಿದೆ. ಏಕೆಂದರೆ ಅಲ್ಲಿಯ,

ಇನ್ನು ಪೇಳುವೆ ಚೆನ್ನ ರಾಮನ ಕೃತಿಯನು
ಚೆನ್ನಾಗಿ ಕೇಳಿ ಸಜ್ಜನರು।
ಮುನ್ನಿನ ಪಾಂಡವ ಶೌರ್ಯದ ಪಂಥದಿ
ಬಣ್ಣಿಸುವೆನು ಧರೆಯೊಳಗೆ॥

ಎಂಬ ಪದ್ಯವು ಅಲ್ಪ ಮಾರ್ಪಾಡಿನೊಂದಿಗೆ ಕೆಂಚಿಶೆಟ್ಟಿಸುತ ರಾಮನ ಕೃತಿಯಲ್ಲಿ,

ಇನ್ನು ಪೇಳುವೆ ಚೆನ್ನ ಮಲ್ಲನ ಕೃತಿಯನು
ಚೆನ್ನಾಗಿ ಕೇಳಿ ಸಜ್ಜನರು ।
ಮುನ್ನಿನ ಪಾಂಡವ ಶೌರ್ಯದ ಪಂಥವ
ಬಣ್ಣಿಸುವೆನು ಧರೆಯೊಳಗೆ॥

ಎಂದು ಕಂಡು ಬರುತ್ತದೆ. ಇಲ್ಲಿಯ ಚೆನ್ನಮಲ್ಲನೆಂದರೆ ಸಿರುಮನ ಪರಾಕ್ರಮಶಾಲಿ ಮಗನಾದ ಮಲ್ಲಣ್ಣನೇ ಆಗಿದ್ದಾನೆ. ಆದುದರಿಂದ ಕೆಂಚಿಶೆಟ್ಟಿಯ ಸುತ ರಾಮನು ಪಾಂಚಾಳಗಂಗನ ತರುವಾಯದವನಾಗಿರಬೇಕು. ದುರ್ದೈವದ ಸಂಗತಿಯೆಂದರೆ ಪಾಂಚಾಳಗಂಗನ ಕಾಲವೂ ಸ್ಪಷ್ಟವಿಲ್ಲ. ಬಹುಶಃ ಈ ಕೆಂಚಿಶೆಟ್ಟಿಯ ಸುತ ರಾಮ ೧೭ನೆಯ ಶತಮಾನದವನಿರಬೇಕು.

ಕೆಂಚಶೆಟ್ಟಿಯ ಸುತ ರಾಮನ ಸಿರುಮನ ಚರಿತೆ

"ಸಿರುಮನ ಚರಿತೆ" ಹೆಸರೇ ಸೂಚಿಸುವಂತೆ ಸಿರುಮ ಹೆಸರಿನ ಪಾಳೆಯಗಾರನ ಯುದ್ಧ ಘಟನೆಯನ್ನೊಳಗೊಂಡಿದೆ. ವಿಜಯನಗರದ ಸಂಗಮ ಮನೆತನದ ವಿರೂಪಾಕ್ಷನ ಮಗ ಪ್ರೌಢರಾಯನಲ್ಲಿ ಸಾಳುವ ಮನೆತನದ ಗುಂಡ ಸೇನಾಪತಿಯಾಗಿದ್ದನು; ಗೊಲ್ಲ ಜಾತಿಯ ಕಾಚ ದ್ವಾರಪಾಲಕನಾಗಿದ್ದನು. ಒಂದು ದಿನ ಕಾಚನಿಗೆ ಬಾಗಿಲು ಕಾಯಲು ಹೇಳಿ ಪ್ರೌಢರಾಯ ಅರಮನೆಯಲ್ಲಿ ವಿಶ್ರಾಂತಿ ಪಡೆಯುತ್ತಲಿದ್ದ, ಆ ಸಮಯಕ್ಕೆ ಆಗಮಿಸಿದ ಗುಂಡನನ್ನು ಕಾಚ ಕೈಯಲ್ಲಿಯ ಕೋಲನ್ನು ಚಾಚಿ ತಡೆದ. ಇದರಿಂದ ಕ್ರೋಧತಪ್ತನಾದ ಗುಂಡ "ಕೈ ತೆಗೆಯದಿದ್ದರೆ ಅದನ್ನು ಕಡಿದು ಹಾಕುವೆ" ಎಂದ. "ಈ ಉದ್ಧಟ ಮಾತುಗಳನ್ನಾಡಿದರೆ ಬಾಯ ಹಲ್ಲು ಕಳೆವೆ" ಎಂದು ಕಾಚ ಉತ್ತರಿಸಿದ. ಇಬ್ಬರಿಗೂ ಕಲಹ ಪ್ರಾರಂಭವಾಯಿತು. ಈ ಕಲಹ ಕೋಲಾಹಲದಿಂದ ಎಚ್ಚೆತ್ತ ಪ್ರೌಢರಾಯ ಹೊರಗೆ ಬಂದು ಅವರಿಬ್ಬರ ಪ್ರತಿಜ್ಞಾವಾಕ್ಯಗಳಿಗೆ ತಲೆದೂಗಿದ. "ಬಯಲಲ್ಲಿ ಅಲ್ಲ, ನೆಲದಲ್ಲಿ ತೋಡಿದ ಹಗೆಯಲ್ಲಿ ಇಳಿದು ವಿರೋಧಿಯನ್ನು ಎದುರಿಸುವೆ" ಎಂದು ನುಡಿದ ಕಾಚನ ಸೂಚನೆಗೆ ಕೌತುಕಪಟ್ಟು, ಅವರಿಬ್ಬರನ್ನೂ ಹಗೆಯಲ್ಲಿ ಇಳಿಸಿದ. ಹೋರಾಟ ನಡೆದು, ಕೊನೆಗೆ ಗುಂಡರಾಜನ ಹಲ್ಲುಗಳನ್ನು ಕಾಚ ಕಿತ್ತಿದ. ಕಾಚನ ಈ ಪರಾಕ್ರಮಕ್ಕೆ ಸಂತುಷ್ಟನಾದ ಅರಸು ಬೇಕಾದ ಕಾಣಿಕೆಯನ್ನು ಕೇಳೆನಲು "ನಾನು ಕಿತ್ತಿದ ಹಲ್ಲುಗಳನ್ನು ಮಾತ ಕೊಡು" ಎಂದು ಕಾಚ ಬೇಡಿಕೊಂಡ. ಅರಸ ಇನ್ನೂ ಸಂತುಷ್ಟನಾಗಿ ಆ ಹಲ್ಲುಗಳ ಜೊತೆಗೆ ಸೂಜಿಗಲ್ಲು ಹೆಸರಿನ

ದುರ್ಗವನ್ನು, ಆ ಪರಿಸರದ ಪ್ರದೇಶವನ್ನು ನೀಡಿದ. ಕಾಚನಾಯಕ ಈ ದುರ್ಗಕ್ಕೆ ಅಧಿಪತಿಯಾಗಿ ರಾಜ್ಯಾಧಿಪತ್ಯವನ್ನು ನಡೆಸಿದ. ಪಡೆದು ತಂದ ಹಲ್ಲನ್ನು ತಾನು ಮೆಟ್ಟುತ್ತಲಿದ್ದ ಕೆರವಿನಲ್ಲಿಟ್ಟು ಸಂಚರಿಸುತ್ತಲಿದ್ದ.

ಪುತ್ರ ಸಂತಾನವಿಲ್ಲದ ಪ್ರೌಢರಾಯನು ಗುಂಡರಾಜನ ಪುತ್ರ ನರಸಿಂಹನನ್ನು ಮಗನಂತೆ ಸಲಹುತ್ತಿದ್ದನು. (ತನ್ನ ತರುವಾಯ ವಿಜಯನಗರ ಸಿಂಹಾಸನಕ್ಕೆ ಅವನನ್ನು ಪಟ್ಟಗಟ್ಟಿದನು.) ರಾಜ್ಯಪಾಲನಾಗಿ ಪೆನುಗೊಂಡೆಯಿಂದ ಆಳುತ್ತಲಿದ್ದ ನರಸಿಂಹನ ಕೈಕೆಳಗೆ ಪಾಳೆಯಗಾರನಾಗಿ ಕಾಚನ ಮಗ ಸಿರುಮ ಬೂದಿಹಾಳು ಕೋಟೆ ಕಟ್ಟಿಸಿ, ಆ ರಾಜಧಾನಿಯಿಂದ ಆಡಳಿತ ನಡೆಸಿದ್ದನು. ತಂದೆ ಮೆಟ್ಟಿದ ಕೆರವನ್ನು ತಾನು ಮೆಟ್ಟಬಾರದೆಂದು ಸಿರುಮ ಅದರಲ್ಲಿಯ ಹಲ್ಲುಗಳನ್ನು ಪೀಕದಾನಿಯಲ್ಲಿಟ್ಟು ಉಗುಳುತ್ತಲಿದ್ದ.

ಇದು ಸಿರುಮನ ಪೂರ್ವ ಚರಿತ್ರೆ. ಪ್ರಸ್ತುತ ಕಾವ್ಯದಲ್ಲಿಲ್ಲದ ಈ ವಿಷಯ ಮೇಲೆ ಸೂಚಿಸಿರುವ 'ಗೊಲ್ಲ ಸಿರುಮನ ಚರಿತ್ರೆ' ಎಂಬ ಬೇರೊಂದು ಸಾಂಗತ್ಯ ಕೃತಿಯಲ್ಲಿ ಕಂಡುಬರುತ್ತದೆ. ಇಲ್ಲಿಂದ ಮುಂದಿನ ವಿವರ ಮಾತ್ರ ಈ 'ಸಿರುಮನ ಚರಿತೆ'ಯ ವಸ್ತುವಾಗಿದ್ದು, ಅದನ್ನು ಕೆಳಗಿನ ಕಥಾಸಾರದಿಂದ ಅರಿಯಬಹುದು.

ಕಥಾಸಾರ

ಸಂಧಿ - ಒಂದು:

ಸೋಮೇಶ, ಶರ್ವಾಣಿ, ವಿನಾಯಕ, ಶಾರದೆ ಇವರನ್ನು ಸ್ಮರಿಸಿ ಕೃತಿ ರಚಿಸುತ್ತೇನೆ (೧-೬), ಹರಿಹರ, ಕೇಶಿರಾಜ, ಮಲುಹಣ, ಉದ್ಭಟ, ಕಾಳಿದಾಸ, ಮಯೂರ, ಬಾಣ, ರಾಘವಾಂಕರಿಗೆ ಎರಗುತ್ತೇನೆ (೭-೮), ಸಿರುಮನ ಚರಿತ್ರೆ ನರಕೃತಿಯಲ್ಲ; ಈತನು ಗುರುಲಿಂಗಜಂಗಮ ಚರಣ ಸೇವಕ, ಕಂತುಹರನ ಭಕ್ತ (೯-೧೦), ಪಂಚಮಕುಲವಾರ್ಧಿ ಚಂದಿರನೂ, ಪಂಚಮುಖನಾದ ಶಿವನ ಭಕ್ತನೂ, ಕೆಂಚಿಶೆಟ್ಟಿಯ ಸುತನೂ ಆಗಿರುವ ರಾಮನೆಂಬ ನಾನು ಈ ಕೃತಿಯನ್ನು ಹೇಳುತ್ತೇನೆ (೧೧), ಜಾಣರು ಕ್ಷಮಿಸಬೇಕು. ಇದು ಕೋವಿದ ಜನರಿಗೆ ಮೆಚ್ಚು (೧೨, ೧೩, ೧೪), ಪಾಂಡವಶೌರ್ಯದ ಚೆನ್ನಮಲ್ಲನ ಕೃತಿಯನ್ನು ಹೇಳುತ್ತೇನೆ (೧೫), ಪಟ್ಟಣದ ವರ್ಣನೆ (೧೬-೨೯), ಸಿರುಮನ ವರ್ಣನೆ (೨೦-೩೩), ಮಕ್ಕಳಾದ ಕಾಚ, ಮಲ್ಲ, ವೀರಭದ್ರ, ಸೋಮಣ್ಣ, ನಂಬೆಣ್ಣ, ಅಳಿಯರಾದ ತಿಪ್ಪಯ್ಯ, ಬಸವಯ್ಯ, ಭೈರಯ್ಯ, ತಮ್ಮನಾದ ಹೆಗ್ಗೆರೆ ಮಲ್ಲರ ವರ್ಣನೆ(೩೪-೪೧), ಓಲಗದ ವರ್ಣನೆ (೪೨-೪೯), ಬೆಲಗೂರ ಭೈರನಾಯಕನ ಮಗಳನ್ನು ಕಾಚನಾಯಕನಿಗೆ, ಅಳಿಯ ತಿಪ್ಪಯ್ಯನ ಮಗಳನ್ನು ಕುಮಾರಮಲ್ಲನಿಗೆ, ಅಲುಕುರಿಕೆಯ ರುದ್ರಯ್ಯನ ಮಗಳನ್ನು ವೀರಭದ್ರನಿಗೆ ತೆಗೆದುಕೊಂಡು ಮದುವೆ ಮಾಡಿದರು (೫೦-೫೫), ಬೇಟೆಯ ವರ್ಣನೆ (೫೬-೮೧), ತನ್ನ ಸೀಮೆಯೊಳಗೆ ಬೇಟೆಯಾಡುವುದನ್ನು ಹಿರಿಯೂರ ಕಸವೆನಾಯಕ ಅಡ್ಡಿಪಡಿಸಿದ (೮೨-೮೭), ಸಿರುಮನು ಬೇಟೆ ಮುಗಿಸಿ ರಾಜಧಾನಿಗೆ ಮರಳಿದ (೮೮-೯೯).

ಸಂಧಿ - ಎರಡು :

ಹಿರಿಯೂರ ಕಸವೆನಾಯಕ ಸಿರುಮನ ಮೇಲೆ ಏರಿಬಂದನು (೧-೧೧), ಸಿರುಮನ ಸೈನ್ಯಸಂಗ್ರಹ (೧೨-೧೯), ಯುದ್ಧ (೨೦-೨೯), ಕುಮಾರಮಲ್ಲನಿಂದ ಕಸವೆನಾಯಕನ ಪರಾಜಯ, ನೂರು ಕುದುರೆ

ಸೆರೆ, ಕುದುರೆಗಳಿಗಾಗಿ ಹೊಸ ಲಾಯದ ರಚನೆ (೩೦-೩೫), ಸೋತು ಹಿಂದಿರುಗಿದ ಹಿರಿಯೂರ ಕಸವೆನಾಯಕನಿಂದ ಸೈನ್ಯ ಸಂಗ್ರಹ (೩೬-೪೪), ಎಕ್ಕಟ್ಟಿ ಗಂಗಯ್ಯನು ಬೂದಿಹಾಳು ಸೀಮೆಯ ಸಿಂಗಟಗೆರೆ ಮುತ್ತಿದುದು, ಸಿರುಮನ ಸೈನ್ಯ ಅವನನ್ನು ಎದುರಿಸಿ ಗೆದ್ದುದು (೪೫-೫೪), ಸಿರುಮನ ಸೈನ್ಯ ಹುಳಿಯೂರಿಗೆ ಏರಿಹೋಗಿ ಅಲ್ಲಿಯ ಎತ್ತು-ಕುದುರೆ ಸೆರೆಹಿಡಿದುದು, ವೇದರಾಜನ ಹೋರಾಟ (೫೫-೭೦), ಸಾಳುವ ನರಸಿಂಹನನ್ನು ಕರೆತಂದು ಸಿರುಮನನ್ನು ನಾಶ ಮಾಡಲು ವೈರಿಗಳ ಆಲೋಚನೆ (೭೦-೭೫).

ಸಂಧಿ - ಮೂರು:

ವಿರೋಧಿಗಳೆಲ್ಲ ಸಭೆ ಸೇರಿ, ಎಕ್ಕಟ್ಟಿ ಗಂಗಯ್ಯ, ಹಿರಿಯೂರ ಕಸವೆನಾಯಕರನ್ನು ನರಸಿಂಹರಾಯನಲ್ಲಿಗೆ ಕಳಿಸಿದರು (೧-೭). ಚಂದ್ರಗಿರಿಗೆ ಆಗಮನ, ಓಲಗದ ವರ್ಣನೆ (೮-೧೫). ಸಿರುಮನ ದರ್ಪ, ಅದರಿಂದ ಸುತ್ತಲಿನ ಪಾಳೆಯಗಾರರಿಗೆ ಆಗಿರುವ ಭಯಗಳನ್ನು ವಿವರಿಸಿದರು (೧೬-೨೪). ದಂಡೆತ್ತಿ ಬರಲು ನರಸಿಂಗನ ಒಪ್ಪಿಗೆ, ಸೈನ್ಯ ಸಂಗ್ರಹ (೨೪-೩೯). ಸೈನ್ಯ ಪ್ರಯಾಣ (೪೦-೪೫), ತಿರುಪತಿಗೆ ಸೈನ್ಯ ಬರುವುದು, ನರಸಿಂಗನಿಂದ ವೆಂಕಟೇಶದೇವರಲ್ಲಿ ಹರಕೆ (೪೬-೫೦), ಸೈನ್ಯ ಭೀಮಾವರದ ಬಯಲು, ರಂಗಸಮುದ್ರ, ಪೆನುಗೊಂಡೆ, ಹರುವೆಕೆರೆಗಳಿಗೆ ಬಂದುದು, ಮಿಡಿಗೇಸಿ ಯುದ್ಧ, ನಲ್ಲೋಬನಾಯಕನ ಶರಣಾಗತಿ (೫೧-೭೩), ಹಿರಿಯೂರಿಗೆ ಸೈನ್ಯ ಬಂದುದು, ಕಸವೆ ನಾಯಕನಿಂದ ಬೀಡಾರ ವ್ಯವಸ್ಥೆ (೭೪-೭೫), ಹೊನ್ನವಳ್ಳಿಯ ವೇದರಾಜ, ಕೇಶವರಾಜ, ಮನ್ನೆಯ ರುದ್ರರಾಜಯ್ಯ, ಚನ್ನಮರಾಜ, ಚಿಟ್ಟಿಮರಾಜರು ನರಸಿಂಗನನ್ನು ಕಂಡರು (೭೬-೭೭), ಸಿರುಮನಿಗೆ ಸುದ್ದಿ ಗೊತ್ತಾಯಿತು. ದುರ್ಗವನ್ನು ಸಜ್ಜುಗೊಳಿಸಿದನು (೭೮-೮೨).

ಸಂಧಿ ನಾಲ್ಕು:

ಎಕ್ಕಟಿ ಗಂಗಯ್ಯನೊಂದಿಗೆ ನರಸಿಂಗನ ಸಮಾಲೋಚನೆ, ಸಿರುಮನ ಸ್ನೇಹಿತನಾದ ಬಾಗೂರ ಗೋವಿಂದನ ಮೇಲೆ ದಾಳಿ ಸಿದ್ಧತೆ (೧-೧೦). ಬಾಗೂರಿಗೆ ಸೈನ್ಯಪ್ರಮಾಣ, ಸಿರುಮನ ಮಗ ಮಲ್ಲ ಸೈನ್ಯ ಸಮೇತ ಹಿಂಬಾಲಿಸಿ, ರಾಜನ ಸೈನ್ಯವನ್ನು ಸೂರೆಮಾಡಿ ಸಂಪತ್ತನ್ನು ದೋಚಿದ (೧೧-೧೭). ಬಾಗೂರು ಯುದ್ಧ, ಗೋವಿಂದ ಹಿಮ್ಮೆಟ್ಟಿ ತನ್ನ ಕೋಟೆ ಹೊಕ್ಕು, ಬಾಗಿಲು ಹಾಕಿದನು. ರಾಜನ ಸೈನ್ಯ ಕೋಟೆ ಮುತ್ತಿತು (೧೮-೪೪), ಗೋವಿಂದನು ದೂತನ ಮೂಲಕ ಈ ಸುದ್ದಿಯನ್ನು ಸಿರುಮನಿಗೆ ತಿಳಿಸಿದ (೪೫-೫೫). ಸಿರುಮನ ಮಕ್ಕಳು ಯುದ್ಧಕ್ಕೆ ಉತ್ಸಾಹಿಸಿದರು. ಮಂತ್ರಿ ಕಲ್ಲರಸನೊಂದಿಗೆ ಸಮಾಲೋಚನೆ (೫೬-೬೫), ಕಾಚಯ್ಯನನ್ನು ಕಳುಹಲು ನಿರ್ಧಾರ (೬೬-೭೧), ಹರಿಗೆಯ ವಿರುಪ, ಹಾಲುಕುರಿಕೆಯ ಹನುಮ, ಕೊಂಡದ ಬಸವಯ್ಯ, ಬೋಗಾರ ವೀರ, ಮತ್ತೋಡುವಿನ ಗಿಡ್ಡಗಿರಿಯ, ಮಾದಿಗ ಸಿಂಗ,ತನ್ನ ಕಚ್ಚುತ(?), ಉಪ್ಪಿನಹಳ್ಳಿಯ ಚೋರ, ಕೊಟ್ಟಗಾರ ತಿಪ್ಪ, ಹಾಸಂದಿಯ ಮಲ್ಲ, ಗೋಸಿಕೆರೆಯ ಗೊಲ್ಲ, ಚಿಪ್ಪಿಗ ಕಲ್ಲ, ಕಣಕಟ್ಟೆಯ ಸಿದ್ಧ, ಅಳಿಯ ತಿಪ್ಪಯ್ಯ, ಛಲದಂಕಮಲ್ಲ ರಾವುತ, ಅಗಸರ ತಿಮ್ಮ, ಎಗ್ಗೆರೆ ತಳವಾರ, ಚಿಕ್ಕ, ಚಿಣ್ಣ, ತಿಮ್ಮ, ಒಕ್ಕಲಿಗರ ಮುದ್ದ, ಅಕ್ಕಸಾಲೆಯ ಕೆಂಪಯ್ಯ, ಬುಕ್ಕ, ಬಸವ, ಚಿಕ್ಕ ಲಕ್ಕ, ಉಪ್ಪಲಿಕರ ಹೊನ್ನಕಳಸ, ಕಂಪ, ಕನ್ನುಗ, ಜಗಜಂಪಿನ ಭೈರ, ಕುಂಪ, ಕಂಡೆಯದ ಹೊನ್ನುಗ, ಹಂಪ, ಹನುಮ, ಹಡಪದ ಸೋಮುಗ, ನಾಗ ಈ ಮೊದಲಾದವರು ಯುದ್ಧಕ್ಕೆ ಸಿದ್ಧರಾದರು (೭೨-೯೦), ಮಂಗಳಬೊಲ್ಲ ಹೆಸರಿನ ಕುದುರೆಯನ್ನು ಲಿಂಗರಾವುತನಿಗೆ, ಹಾರನಹಳ್ಳಿಯ ವೇದರಾಜ ಕಳುಹಿದ ವಾರುವ ಹೆಸರಿನ ಕುದುರೆಯನ್ನು ಅಳಿಯ ತಿಪ್ಪಯ್ಯನಿಗೆ, ಹಾಸಂದಿಯ ಕೆಂಚನಾಯಕ ಕಳುಹಿದ ಸಂಪಿಗೆ

ಹೆಸರಿನ ಕುದುರೆಯನ್ನು ಈಶರಾವುತನಿಗೆ, ಕುಂಕನಡುವಿನ ಮಾಳನಾಯಕ ಕಳುಹಿದ ಶಂಕುಪಾಲ ಹೆಸರಿನ ಕುದುರೆಯನ್ನು ಶಂಕರಾವುತನಿಗೆ, ಕಾಲಾಳುಗಳನ್ನು ಕೊಲ್ಲುವ ಕುದುರೆಯನ್ನು ನಿಡುಗಟ್ಟದ ನಾಗರಾಜನಿಗೆ, ಧುರಕೆ ವಿಜಯ ಹೆಸರಿನ ಕುದುರೆಯನ್ನು ತಮ್ಮನಾದ ಮಲ್ಲಯ್ಯನಿಗೆ ಸಿರುಮನು ತರಿಸಿಕೊಟ್ಟನು (೯೧-೯೭), ಯೋಧರಿಗೆ ಮನ್ನಿಸಿ ಕಾಚಯ್ಯ ತನ್ನ ಅರಮನೆಗೆ ಬಂದನು (೯೮-೧೨೨), ಮಡದಿಯರನ್ನು ತಾಯಿಯನ್ನು ಕಂಡನು. ಅವರಿಂದ ಹರಕೆ ಹಾರೈಕೆ ಹೊತ್ತು ಸೈನ್ಯದ ನೆಲೆಗೆ ಬಂದನು (೧೦೩-೧೨೬). ಸಿರುಮನಿಂದ ಮಗನಿಗೆ ಬುದ್ಧಿವಾದ (೧೨೭-೧೩೨), ತಮ್ಮ ಮಲ್ಲಯ್ಯನಿಂದ ಸಲಹೆ (೧೩೩-೧೩೫), ಮುನ್ನಡೆದ ಸೈನ್ಯ ರಾತ್ರಿಯಲ್ಲಿ ನರಸಿಂಗನ ಪಾಳೆಯವನ್ನು ಹಾಳು ಮಾಡಿತು, ಕಾಚ ಬಾಗೂರಿಗೆ ಹೋಗಿ ಗೋವಿಂದನನ್ನು ಸೇರಿದನು (೧೩೬-೧೬೬).

ಸಂಧಿ - ಐದು:

ನರಸಿಂಗನ ಸೈನ್ಯ ಬಾಗೂರ ಕೋಟೆಯನ್ನು ಮುತ್ತಿತು (೧-೧೨). ಭಯಭೀತರಾದ ಪ್ರಜೆಗಳು ಗೋವಿಂದನಾಯಕನಿಗೆ ಕೈಮುಗಿದು, ಸಂಧಾನ ಮಾಡಿಕೊಳ್ಳಲು ಬೇಡಿಕೊಂಡರು (೧೩-೧೭). ಗೋವಿಂದನು ಸಂಧಾನವನ್ನು ಸಾರಿದ. "ಏಳು ಲಕ್ಷ ವರಹಗಳನ್ನು ಕೊಟ್ಟು ಕಾಚನನ್ನು ಒಪ್ಪಿಸಿದರೆ ಮಾತ್ರ ಸಂಧಾನ" ಎಂದು ನರಸಿಂಗ ಹೇಳಿದನು. "ನಂಬಿ ಬಂದವರನ್ನು ವೈರಿಗೆ ಒಪ್ಪಿಸಲಾರೆ. ಕಾಚನನ್ನು ಬೂದಿಹಾಳಿಗೆ ಮರಳಿ ಕಳಿಸುತ್ತೇನೆ. ನೀವೇ ದಾರಿಯಲ್ಲಿ ಹೋರಾಡಿ ಸೆರೆಹಿಡಿಯಬಹುದು" ಎಂದು ಗೋವಿಂದ ಹೇಳಿದ. (೧೮-೨೭). ಯುದ್ಧ ಮುಂದುವರಿಸಲು ಕಾಚ ಎಷ್ಟು ಹೇಳಿದರೂ ಗೋವಿಂದ ಧೈರ್ಯ ಮಾಡಲಿಲ್ಲ. "ನೀನು ಯುದ್ಧಕ್ಕೆ ಬಂದವನಲ್ಲ, ಸೂಳೆ ಬೆನಕಿಗಾಗಿ ಬಂದವನು" ಎಂದು ಗೋವಿಂದ ಮರ್ಮಭೇದಕ ಮಾತನಾಡಿದ. ಈ ಮಾತಿಗೆ ಬೇಸತ್ತು ಕಾಚ ತನ್ನ ಸೈನ್ಯದೊಂದಿಗೆ ಬಾಗೂರಿನಿಂದ ರಾತ್ರಿ ಹೊರಬಿದ್ದ (೨೮-೩೫). ದಾರಿಯುದ್ದಕ್ಕೂ ವೈರಿ ಸೈನ್ಯವನ್ನು ಸಂಹರಿಸುತ್ತ ಸುರ್ಯೋದಯ ಸಮಯಕ್ಕೆ ವೇದಾವತಿ ನದಿಯ ವರೆಗೆ ಬಂದು, ಬೂದಿಹಾಳ ಸೇರಿದ (೩೬-೫೪). ಬಾಗೂರು ವೈರಿ ವಶವಾದುದಕ್ಕೆ ತಮ್ಮನಾದ ಮಲ್ಲಯ್ಯ ಅಣ್ಣನನ್ನು ಜರೆದ. ಬೆಲಗೂರ ಭೈರ ಕಾಚನ ಪಕ್ಷವಹಿಸಿ ವಾದಿಸಿದ (೫೫-೬೩).

ಗೋವಿಂದನಾಯಕ ನರಸಿಂಗನಿಗೆ ಹೊನ್ನ ಅರ್ಪಿಸಿದ. ಸೈನ್ಯ ಬೂದಿಹಾಳನ್ನು ಮುತ್ತಲು ನಡೆದು ವೇದಾವತಿ ತೀರದಲ್ಲಿ ಬೀಡುಬಿಟ್ಟಿತು. ಮುಂಜಾನೆ ಸೈನ್ಯ ಬೂದಿಹಾಳದತ್ತ ನಡೆಯಿತು. ಇತ್ತ ಸಿರುಮಭೂಪಾಲನು ಚಾವಡಿಯಲ್ಲಿ ಸಭೆ ಕರೆದ. ಬೆಲಗೂರ ಭೈರವ, ಅಳಿಯ ತಿಪ್ಪಯ್ಯ, ಮಕ್ಕಳಾದ ಕಾಚೇಂದ್ರ, ಮಲ್ಲಯ್ಯ, ವೀರಭದ್ರ, ನಂಬೆಣ್ಣ, ನಿಡುಗಟ್ಟದ ನಾಗರಾಜ, ಹೆಗ್ಗೆರೆ ಮಲ್ಲನಾಯಕರು ಸೇರಿದರು. ಸಿರುಮ ಸೈನ್ಯ ಸಜ್ಜುಗೊಳಿಸಿದ (೬೪-೮೬). ಸೈನ್ಯ ಮುನ್ನಡೆಯಿತು. ಸಿರುಮನ ಮಕ್ಕಳ ಕಾಳಗ ನಿಕರವಾಯಿತು. ಕೋಟೆಯ ಹೊರಗೆ ವೈರಿಸೈನ್ಯ ಬೀಡುಬಿಟ್ಟಿತು (೮೭-೧೨೦).

ಸಂಧಿ - ಆರು :

ಸಿರುಮನ ರಾಣಿ ಚಿಕ್ಕಮ್ಮ ಮೇಲುಪ್ಪರಿಗೆ ಹತ್ತಿ ನರಸಿಂಗನ ಸೈನ್ಯ ನೋಡಿದಳು (೧-೫). ವಿಷಪೂರಿತ ಅಡಿಗೆ ಮಾಡಿಕೊಂಡು ಸ್ತ್ರೀಸಮೂಹದೊಂದಿಗೆ ದೇವಿಕೆರೆಗೆ ಪೂಜೆಯ ನೆವದಿಂದ ಹೋದಳು (೬-೧೨). ದೇವರ ಪೂಜೆ ಮಾಡುವಷ್ಟರಲ್ಲಿ ವೈರಿ ಸೈನ್ಯ ನೋಡಿ ಓಡಿ ಬಂದಿತು. ಅಡಿಗೆಯನ್ನು ಅಲ್ಲಿಯೇ

ಬಿಟ್ಟು ಚಿಕ್ಕಮ್ಮ ಮಹಿಳೆಯರೊಂದಿಗೆ ಪಾರಾಗಿ ಮನೆಗೆ ಬಂದಳು (೧೩-೧೮). ನೈವೇದ್ಯದ ಅಡಿಗೆಯುಂಡು ಅನೇಕ ಜನ ಸೈನಿಕರು ಸತ್ತರು. ಚಿಕ್ಕಮ್ಮ ಒಕ್ಕಲು ಮಕ್ಕಳನ್ನು ಕರೆಸಿ, ಸೈನಿಕರ ರುಂಡ ಕತ್ತರಿಸಿ, ಬಣವೆ ಒಟ್ಟಿಸಿದಳು. ನರಸಿಂಹ ಕೋಪದಿಂದ ಕೆಂಡವಾದ, ಸಿರುಮ ಸಂತುಷ್ಟನಾದ (೧೯-೨೩).

ಸಂಧಿ - ಏಳು:

ಹೆಗ್ಗೆರೆ ಮಲ್ಲನಾಯಕ, ಚೆನ್ನನಾಯಕ, ಮಗ ವೀರಭದ್ರರ ವಿನಂತಿ ಮೇರೆಗೆ ಸಿರುಮ ಪರಾಕ್ರಮಿಗಳನ್ನು ಆಹ್ವಾನಿಸಿದ (೧-೪). ಭಂಡಾರಿ ಬಸವ, ಭೈರ, ಎಣ್ಣೆಗೆರೆಯ ಗಿರಿತಿಮ್ಮ, ವನ್ನವಳ್ಳಿಯ ವೀರಭದ್ರ, ಉಪ್ಪಿನಳ್ಳಿಯ ಚೋರ, ಗದ್ವಾಲದ ವಾಬನಾಯಕ, ಮತ್ತೋಡುವಿನ ಗಿಡ್ಡಗಿರಿಯ, ಉಪ್ಪಲಿಕರ ಹೊನ್ನಕಳಸ, ಆಸಂದಿ ಮಲ್ಲ, ಗೋಸಿಕೇರಿಯ ವೀರಗೊಲ್ಲ, ಮರಿವುಲ್ಲೆ ರಾಜರು ಎದ್ದು ಬಂದು ವೀಳ್ಯೆ ಹಿಡಿದರು (೫-೧೬). ಹೊನ್ನವಳ್ಳಿಯ ವೇದರಾಜನ ಗಂಡ ಹೆಸರಿನ ಕುದುರೆಯನ್ನು ಮಗ ಮಲ್ಲಯ್ಯನಿಗೆ, ಬೆಟ್ಟಮರಾಜನ ಗಂಡ ಹೆಸರಿನ ಕುದುರೆಯನ್ನು ಮಗ ಕಾಚಯ್ಯನಿಗೆ, ಹಿರಿಯೂರ ಕಸವನ ಗಂಡ ಹೆಸರಿನ ಕುದುರೆಯನ್ನು ಮಗ ಮಲ್ಲಯ್ಯನಿಗೆ, ಗಂಗನಾಯಕನ ಗಂಡ ಹೆಸರಿನ ಕುದುರೆಯನ್ನು ಭೈರವನಿಗೆ, ಜಕ್ಕನಾಯಕನ ಗಂಡ ಹೆಸರಿನ ಕುದುರೆಯನ್ನು ತಿಪ್ಪಯ್ಯನಿಗೆ ಸಿರುಮ ತರಿಸಿಕೊಟ್ಟ (೧೭-೨೨). ಯುದ್ಧ ಪ್ರಾರಂಭವಾಯಿತು. ಹೊನ್ನವಳ್ಳಿಯ ವೇದರಾಜ, ಕೇಶವರಾಜ, ಕಸವನಾಯಕ, ಚೆನ್ನಮರಾಜ, ಚೆಟ್ಟಮರಾಜರು ಯುದ್ಧದಲ್ಲಿ ಓಡಿಹೋದರು (೨೩- ೨೭).ಎಕ್ಕಟಿ ಗಂಗಯ್ಯನು ಸೈನ್ಯದ ಹಾನಿಯನ್ನು ನರಸಿಂಗನಿಗೆ ತಿಳಿಸಿದ. ನರಸಿಂಗ ಎದುರಾದರೂ ಮಣಿಯದ ಮಲ್ಲ, ಸೈನ್ಯವನ್ನು ನಾಶಗೊಳಿಸಿ ಅಪಾರ ಸಂಪತ್ತಿನೊಂದಿಗೆ ಮರಳಿದ (೨೮-೩೬).

ಸಂಧಿ - ಎಂಟು:

ನರಸಿಂಗ ಬೂದಿಹಾಳ ಕೋಟೆ ನೋಡುವ ಆಸೆ ವ್ಯಕ್ತಪಡಿಸಿದ. ಒಳಗೆ ಬಂದು ನೋಡಿ, ಸೋಮೇಶ್ವರನಿಗೆ ನಮಸ್ಕರಿಸಿ ಹೋಗಲು ಸಿರುಮ ಒಪ್ಪಿಗೆ ನೀಡಿದ (೧-೯). ಕೋಟೆಯ ವಿವರಗಳನ್ನು ರುದ್ರರಾಜ ನರಸಿಂಗನಿಗೆ ವಿವರಿಸತೊಡಗಿದ. ಕೋಟೆಯ ಮೇಲೆ ನಿಂತಿರುವ ಅಳಿಯ ತಿಪ್ಪಯ್ಯ, ನಿಡುಗಟ್ಟದ ನಾಗರಾಜ, ಅಳಿಯ ಬಸವಯ್ಯ, ಸಿರುಮನ ತಮ್ಮ ಮಲ್ಲಣ್ಣ, ಮಗ ವೀರಭದ್ರ, ಮಗ ನಂಬೆಣ್ಣ, ಸಿರುಮನ ಮಡದಿಯ ತಮ್ಮ ಬಸವೇಂದ್ರ, ಬೆಲಗೂರ ಭೈರ, ಮಗ ಕುಮಾರಮಲ್ಲಯ್ಯ, ತಳವಾರ ತಿಪ್ಪ, ಮಗ ಕಾಚ, ಕರಿಯ ಸೋಮಯ್ಯ, ಹತ್ತಿಕಾರಿ ಲಿಂಗಯ್ಯ, ಸಿರುಮನ ತಮ್ಮನ ಮಗ ಚೆನ್ನಣ್ಣ, ಮಂತ್ರಿ ಕಲ್ಲರಸ, ನಡುನಾಡಗೂಳಿ ಸಿರುಮೇಂದ್ರ- ಎಂದು ಪರಿಚಯಿಸಿದ (೧೦-೩೪). ಕೋಟೆಯ ವೈಭವ, ವೀರರ ಸಮೂಹ ನೋಡಿದ ನರಸಿಂಗನು ಸಿರುಮನನ್ನು ಒಪ್ಪಂದಕ್ಕೆ ಒಪ್ಪಿಸುವಂತೆ ರುದ್ರರಾಜನಿಗೆ ಹೇಳಿದ. ರುದ್ರರಾಜ ಹೋಗಿ ಒಪ್ಪಂದಕ್ಕೆ ಕೇಳಿದ. "ಸೋಮಯ್ಯನಿಗೆ ಮುಗಿದ ಕೈಯಿಂದ ಪರರಿಗೆ ಕೈಮುಗಿಯೆ" ಎಂದು ಸಿರುಮ ಉತ್ತರಿಸಿದ. ಸಂಧಾನ ವಿಫಲವಾಯಿತು (೩೫-೫೦). ರಾಜ ಕೋಪತಾಳಿದ. ಸೈನ್ಯ ಬೂದಿಹಾಳ ಕೋಟೆ ಮುತ್ತಿತು. ಸೇನಾಪತಿ ಬಂದು ತಮ್ಮ ಸೈನ್ಯದ ವಿಫಲ ಪ್ರಯತ್ನವನ್ನು ಅರಸನಿಗೆ ಹೇಳಿದ. ಎಲ್ಲರೂ ಸಮಾಲೋಚಿಸಿದರು. ಡೆಂಕಣಿ, ಪೆಟಲುಗಳನ್ನು ಬಳಸಿ ಯುದ್ಧಮಾಡಲು ಸಜ್ಜಾದರು (೫೧-೯೧).

ಸಂಧಿ - ಒಂಬತ್ತು:

ಉದ್ದಗಿರಿಯ ಕುಮಾರನು ಸಿರುಮನ ಮಗ ಮಲ್ಲಯ್ಯನೊಂದಿಗೆ ಹೋರಾಡಲು ಅಪೇಕ್ಷಿಸಿದ. ತಂದೆಗೆ ಹೇಳದೆ ಕುದುರೆ ಹತ್ತಿ ಬಂದು, ಮಲ್ಲಯ್ಯನಿಗೆ ಆಹ್ವಾನ ಹೇಳಿ ಕಳಿಸಿದ (೧-೭). ಮಲ್ಲಯ್ಯ ಕೋಟೆಯಿಳಿದು ಬಂದು ಎದುರಾದ. ಕಾಳಗ ಪ್ರಾರಂಭವಾಯಿತು (೮-೧೦). ಉದ್ದಗಿರಿ ಕುಮಾರ ಮಡಿದ. ಈ ವಾರ್ತೆಯನ್ನು ಕೇಳಿ ಸಿಟ್ಟಿಗೆದ್ದ ನರಸಿಂಗನಿಗೆ ದಳಪತಿ ಸಾಂತ್ವನ ಹೇಳಿದ (೧೧-೨೭).

ಸಂಧಿ - ಹತ್ತು:

ಅರಸನನ್ನು ಸಮಾಧಾನಪಡಿಸಿ ವಿಶ್ವರಾಜಯ್ಯ ವೀಳೆಯ ಹಿಡಿದ (೧-೪). ಅವನ ಸೈನ್ಯ ಕೋಟೆಯನ್ನು ಮುತ್ತಿತು. ವಿಶ್ವರಾಜಯ್ಯ ಆನೆಯನ್ನು ಇಳಿದು ಕೋಟೆ ಏರಿದ (೫-೧೧). ಕಾಂಚಾಲ ತಿಮ್ಮ ಎದುರಾದ. ಅಷ್ಟರಲ್ಲಿ ಸಿರುಮನ ಮಗ ವೀರಭದ್ರ ತಿಮ್ಮನನ್ನು ಹಿಂದಕ್ಕೆ ಸರಿಸಿ, ವಿಶ್ವರಾಜನನ್ನು ಎದುರಿಸಿದ. ಅಷ್ಟರಲ್ಲಿಯೇ ಮಲ್ಲಯ್ಯ ಬಂದು ವಿಶ್ವರಾಜನನ್ನು ಕೊಂದುಹಾಕಿದ (೧೨-೨೦). ಗಂಡನ ರುಂಡ ಕಂಡಲ್ಲದೆ ಸತಿಹೋಗಲಾರೆವೆಂದು ವಿಶ್ವರಾಜನ ಸತಿಯರು ಹಟ ಹಿಡಿದರು. ಕೊಟ್ಟಿಗೆ ಕೆಂಪಯ್ಯ ಹೋಗಿ ವೀರಭದ್ರನನ್ನು ವಿನಂತಿಸಿಕೊಂಡು, ಮಲ್ಲಯ್ಯನ ಕೊತ್ತಳಲ್ಲಿ ಬಿದ್ದಿದ್ದ ವಿಶ್ವರಾಜನ ಶಿರವನ್ನು ತಂದು ನರಸಿಂಗನ ಮುಂದೆ ಇಳುಹಿದ (೨೧-೨೯). ವಿಶ್ವರಾಜಯ್ಯನ ಸತಿಯರನ್ನು ಕೊಂದು ಚಿತೆಗೆ ಹಾಕಿದರು (೩೦-೩೧). ನರಸಿಂಗನ ಸೈನ್ಯ ಸವೆಯತೊಡಗಿತು. ಡೆಂಕಣಿ ತಿಪ್ಪನನ್ನು ಕರೆದು ವೀರಭದ್ರನಿಗೆ ಗುರಿಯಿಡಲು ನರಸಿಂಗ ಹೇಳಿದ. ಗುಂಡು ಬಡಿದು ವೀರಭದ್ರ ಸತ್ತ (೩೨-೪೪). ಮಗನ ಮರಣದ ಸುದ್ದಿ ಕೇಳಿ ತಂದೆ ಸಿರುಮ, ತಾಯಿ ಚಿಕ್ಕಮ್ಮ, ಹೆಂಡಂದಿರು, ಅಣ್ಣ-ತಮ್ಮಂದಿರು ಕಣ್ಣೀರು ಹಾಕಿದರು (೪೫-೫೧). ಅತ್ತೆ ಚಿಕ್ಕಮ್ಮ, ಸೊಸೆಯಂದಿರನ್ನು ಶೃಂಗರಿಸಿದಳು. ಅವರು ಊಟ ಮಾಡಿ ಕಾಲಕುಪ್ಪಸ ತೊಟ್ಟುಕೊಂಡರು. ಆಭರಣ ಧರಿಸಿದರು. ಗಂಡನ ಗುಣಗಾನ ಮಾಡಿದರು. ಅತ್ತೆ-ಮಾವಂದಿರಿಗೆ ವಂದಿಸಿದರು. ವಾದ್ಯಮೇಳಗಳೊಂದಿಗೆ ನಗುನಗುತ್ತ ಮನೆಯಿಂದ ಹೊರಟರು. ನಗೆವೆಣ್ಣುಗಳನ್ನು ಪ್ರೀತಿಯಿಂದ ಅಪ್ಪಿಕೊಂಡರು. ಗಂಗೆಯ ತೀರಕ್ಕೆ ಹೋಗಿ ಬಾಗಿನ ಕೊಟ್ಟು ಸಮಾಧಿ ಸ್ಥಳಕ್ಕೆ ಬಂದರು. ಕುಮಾರ ವೀರಣ್ಣನ ಶವವನ್ನು ಎತ್ತಿ ತಂದು ಸಮಾಧಿಯಲ್ಲಿಳುಹಿ, ಅವನ ಸತಿಯರನ್ನು ಮಗ್ಗುಲಲ್ಲಿ ಕುಳ್ಳಿರಿಸಿದರು. ಬಾಯಿಗೆ ಅಕ್ಕಿ ತುಂಬಿದರು. ಮೇಲೆ ಮಣ್ಣು ಎಳೆದರು. ಸಮಾಧಿಗಳನು ಕಮಲದಂತೆ ಮುಚ್ಚಿಕೊಂಡವು. ಉಘೇ! ಉಘೇ! ಹೇಳಿ ಮನೆಗೆ ಬಂದರು (೫೨-೬೯). ಈ ಸುದ್ದಿ ಕೇಳಿದ ಹೊನ್ನವಳ್ಳಿಯ ವೇದರಾಜ, ರುದ್ರರಾಜರು ನರಸಿಂಗನನ್ನು ಕಂಡರು. ಕಪ್ಪ ಕೊಟ್ಟರೆ ಯುದ್ಧ ನಿಲ್ಲಿಸುವುದಾಗಿ ನರಸಿಂಗ ಹೇಳಿದ (೭೦-೭೩). ರುದ್ರರಾಜ ಕಂದಕದ ಮೇಲೆ ನಿಂತು ಸಿರುಮನಿಗೆ ಈ ಮಾತು ಸಾರಿ ಹೇಳಿದ. "ಮಕ್ಕಳನ್ನು ಉಳಿಸಿಕೊಳ್ಳು" ಎಂದು ಬೇಡಿಕೊಂಡ (೭೪-೮೦). ಸಿರುಮ ಒಪ್ಪಲಿಲ್ಲ ರುದ್ರರಾಜ ನರಸಿಂಗನಿಗೆ ಈ ಸುದ್ದಿ ಮುಟ್ಟಿಸಿದ (೭೪-೯೦).

ಸಂಧಿ - ಹನ್ನೊಂದು:

"ಬೂದಿಹಾಳಿಗೆ ಬಂದು ಆರು ತಿಂಗಳಾಯಿತು. ಈ ಕೋಟೆ ನಮಗೆ ಎಂದು ವಶವಾಗುವುದೋ" ಎಂದು ಚಿಂತಿಸಿದ ನರಸಿಂಗ ನೆಲಗನ್ನ ತೋಡಿ, ಕೋಟೆ ಪ್ರವೇಶಿಸಲು ನಿರ್ಧರಿಸಿದ. ಕಾಮಾಟದವರು ಕೆಲಸ ಪ್ರಾರಂಭಿಸಿದರು (೧-೧೩). ಈ ಸುದ್ದಿ ತಿಳಿದ ರುದ್ರರಾಜನು ಡೆಂಕಣಿ ತಿಪ್ಪನನ್ನು ಒಲಿಸಿಕೊಂಡನು.

ರುದ್ರರಾಜನು ಡೆಂಕಣಿ ಗುಂಡಿನ ಮೇಲೆ ನೆಲಗನ್ನದ ವಿಷಯ ಬರೆದ, ತಿಪ್ಪನು ಹೂಡಿದ ಗುಂಡು ಸಿರುಮನ ಓಲಗದಲ್ಲಿ ಬಿದ್ದಿತು (೧೪-೧೭). ಓದಿದ ಸಿರುಮ ಕಾಮಾಟದವರನ್ನು ಕರೆಯಿಸಿ, ಎದುರು ಗನ್ನ ತೋಡಿಸಿ, ಮದ್ದು ತುಂಬಿ, ಬೆಂಕಿ ಇಡಿಸಿದ. ಕನ್ನದಲ್ಲಿ ಪ್ರವೇಶ ಮಾಡಿದ್ದ ವೈರಿಸೈನ್ಯ ಸತ್ತುಹೋಯಿತು. ಈ ಸುದ್ದಿ ನರಸಿಂಗನಿಗೆ ಮುಟ್ಟಿತು (೧೮-೩೪).

ಸಂಧಿ - ಹನ್ನೆರಡು :

"ಮೀಸರ ಗಂಡ" ಎಂಬ ಬಿರುದು ಕೊಟ್ಟರೂ ಸಿರುಮ ನಮ್ಮೊಂದಿಗೆ ಒಪ್ಪಂದ ಮಾಡಿಕೊಳ್ಳುವವನಲ್ಲ - ಎಂದು ನರಸಿಂಹ ಚಿಂತಿಸಿದನು (೧-೩). ಕುಮಾರಮಲ್ಲಯ್ಯ ಕೋಟೆಯಿಂದ ಮನೆಗೆ ಬಂದ. ಹೆಂಡಂದಿರು, ತಾಯಿ ಆರತಿಯತ್ತಿ ಊಟಕ್ಕೆ ಬಡಿಸಿದರು (೪-೬). ಅಷ್ಟರಲ್ಲಿ ಬೆಲಗೂರು ಭೈರಯ್ಯ ಕೋಟೆಯಿಳಿದು ನರಸಿಂಗನ ಪಕ್ಷಕ್ಕೆ ಹೋಗುತ್ತಿರುವ ಸುದ್ದಿ ಬಂದಿತು. ಮಲ್ಲಯ್ಯ ಕೈತೊಳೆಯದೇ ಕೋಟೆಗೆ ಧಾವಿಸಿದ. ಬೆಲಗೂರ ಭೈರ ಬಿಟ್ಟುಹೋದ ಸುದ್ದಿಯನ್ನು ಅವನ ಅಕ್ಕ ಚಿಕ್ಕಮ್ಮ ಕೇಳಿ ಅಳಲಿದಳು, ಶಪಿಸಿದಳು (೭-೧೯). ಭೈರಯ್ಯನಿಗೆ ನರಸಿಂಗ ಸತ್ಕರಿಸಿದ. ಅವನನ್ನು ಮುಂದುಮಾಡಿಕೊಂಡು ನರಸಿಂಗನ ದಂಡು ಬೂದಿಹಾಳು ಕೋಟೆ ಮುತ್ತಿತು (೨೦-೨೫). ಬಾಣದ ಬಸವಯ್ಯ, ಕಾಚ ಹೋರಾಡಿದರು. ಕಾಚ ಗಾಯಗೊಂಡು ಉರುಳಿದನು (೨೬-೩೦). ಸಿರುಮ ಸೊಸೆ ಮಕ್ಕಳನ್ನು ಕೊಂದು ಕೊಂಡಕ್ಕೆ ಹಾಕಲು ನಿರ್ಧರಿಸಿದನು (೩೧, ೩೨). "ಕಾಚ ಸತ್ತನು, ಸೈನ್ಯ ಅಳಿದುಹೋಯಿತು. ನಾಳೆ ಕೋಟೆಯನ್ನು ಗೆದೆಯಲು ಸಾಧ್ಯ"ವೆಂದು ಬೆಲಗೂರು ಭೈರ ಅರಸನಿಗೆ ಹೇಳಿದನು (೩೧-೩೬). "ಕೋಟೆಯ ಮೇಲೆ ನೀನೊಬ್ಬ ಮಾತ್ರ ಉಳಿದಿರುವಿ, ಕಾಚಣ್ಣನಿಗೆ ಅಗ್ನಿಸಂಸ್ಕಾರ ಮಾಡು, ಆಮೇಲೆ ನಾನು ನಿಮ್ಮೆಲ್ಲರನ್ನು ಕೊಂದು ಅಗ್ನಿಸಂಸ್ಕಾರಗೊಳಿಸಿ ನರಸಿಂಗನೊಡನೆ ಕಾದುತ್ತೇನೆ" ಎಂದು ಸಿರುಮ ಮಲ್ಲಣ್ಣನಿಗೆ ಹೇಳಿದ (೩೭-೪೨), ತಮ್ಮನಾದ ಸೋಮಯ್ಯನನ್ನು ಬಲಿದಾನಗೊಳಿಸಲು ಮಲ್ಲಯ್ಯ ಎತ್ತಿದ ಖಡ್ಗವನ್ನು ಸಿರುಮ, ಚಿಕ್ಕಮ್ಮ ತಡೆದು, "ಎಲ್ಲರ ಕೂಳುಕಾರ್ಯ ಮಾಡಲಿಕ್ಕೆ ಒಬ್ಬನಾದರೂ ಬೇಕು, ಸೋಮಯ್ಯನನ್ನು ಕೊಲ್ಲಬೇಡ" ಎಂದು ಹೇಳಿದನು (೪೩-೪೪). ತಮ್ಮ ತಂಗಿಯರ ಕೈಗೆ ಬಿಂದಿಗೆ ಹೊನ್ನು ಕೊಟ್ಟು, ಒಬ್ಬ ಯೋಗಿಯೊಂದಿಗೆ ಅವರನ್ನು ಅಲ್ಲಿಂದ ಕಳಿಸಲು ಸಿದ್ಧತೆ ಮಾಡಿದರು. ವಾರದ ಜಂಗಮನನ್ನು ಕರೆಸಿದರು. ಊರೊಳಗಿನ ಮಠಮಾನ್ಯದ ಒಡೆಯರು ಸೇರಿದರು. ನಂಟರನ್ನೂ ಬರಮಾಡಿಕೊಂಡರು. ಎಲ್ಲರಿಗೂ ಹೊನ್ನನಿತ್ತು ಎಲ್ಲಿಯಾದರೂ ಸುಖವಾಗಿ ಬಾಳಿರೆಂದು ಹೇಳಿದರು. ರಾತ್ರಿ, ಜನರೆಲ್ಲ ಊರ ಬಾಗಿಲ ವರೆಗೆ ಬಂದು ಸೋಮಯ್ಯ ಮೊದಲಾದವರನ್ನು ಬೀಳ್ಕೊಟ್ಟರು. ಮಲ್ಲಯ್ಯ ಅವನನ್ನು ಹುರುಳಿಹಾಳಿನ ಮಾರ್ಗವಾಗಿ ಕರೆತಂದು, ಮಾರಿಯ ಕಣಿವೆ ವರೆಗೆ ಬಂದು, "ಹಿರಿಯೂರ ಸೇರಿರಿ" ಎಂದು ಹೇಳಿ, ಬೂದಿಹಾಳಿಗೆ ಮರಳಿದ (೪೫-೫೩). ತಂದೆ-ತಾಯಿಗಳಿಗೆ ಶರಣು ಮಾಡಿದ. ಏಕಾಂಗಿಯಾಗಿ ಕೋಟೆಯೇರಿ ಕಾಳಗಕ್ಕೆ ಅಣಿಯಾದ (೫೪-೫೮).

ಸಂಧಿ - ಹದಿಮೂರು :

ನರಸಿಂಗ ಮುಂಜಾನೆ ಸೈನ್ಯ ಸಜ್ಜುಮಾಡಿ ಬೂದಿಹಾಳು ಕೋಟೆಯ ರಾಮನಾಥ ಕೊತ್ತಳಕ್ಕೆ ಲಗ್ಗೆ ಹಾಕಿದ. ಕುಮಾರ ಮಲ್ಲಯ್ಯ ಕಾಲ್ದಳ, ತುರಗದಳ, ಆನೆದಳಗಳನ್ನು ಮುರಿದ. ಒಂದು ಕೊತ್ತಳದಲ್ಲಿ ಕಾದುವಷ್ಟರಲ್ಲಿ ಇನ್ನೊಂದು ಕೊತ್ತಳ ಹತ್ತಿದರು. ಹೆಬ್ಬಾಗಿಲನ್ನು ಮುರಿದು ಊರನ್ನು ಪ್ರವೇಶಿಸಿದರು (೧-೧೦). ಎರಡೂ ಬದಿಯಿಂದ ಏರಿಬಂದ ಸೈನ್ಯವನ್ನು ಮಲ್ಲಯ್ಯ ಕೊಂದುಹಾಕಿದನು. ಅಷ್ಟರಲ್ಲಿ

ಹಿಂದಿನಿಂದ ಒಬ್ಬ ಬಾಣಪ್ರಯೋಗ ಮಾಡಿದ. ಅಪಾರ ಸೈನ್ಯ ಕಳೆದುಕೊಂಡ ನರಸಿಂಗ ಬೀಡಾರಕ್ಕೆ ತೆರಳಿದ. ಹೀಗೆ ಏಳುದಿನ ಹೋರಾಟ ನಡೆಯಿತು (೧೧-೨೩). ಅರಸರಿಂದ ವೀಳ್ಯ ಪಡೆದು ಏರಿಬರುವಷ್ಟರಲ್ಲಿ ಮಲ್ಲಯ್ಯನ ಹತ್ತಿರ ರಣಹದ್ದು ಕುಳಿತುದನ್ನು ಕಂಡು, ಅವನು ಸತ್ತಿರುವುದನ್ನು ನಿಶ್ಚಯ ಮಾಡಿಕೊಂಡು ಅವನ ಶಿರವನ್ನು ಕತ್ತರಿಸಿ, ಅರಸನಿಗೆ ಒಪ್ಪಿಸಿದರು (೨೪-೨೯). ಆಗ ಲೀಲೆಗಾರರು ಬಂದು ಮಲ್ಲಯ್ಯನ ಶಿರಕ್ಕೆ ಅಗ್ನಿಸಂಸ್ಕಾರ ಮಾಡಲು ಸೂಚಿಸಿದರು. "ಕಲ್ಲಗುಡಿಯ ಕಟ್ಟದೆ ಹೆಜ್ಜೆಯಿಟ್ಟೆಯಾದರೆ ನಿನಗೆ ಕೆಡಗಾಲ ಒದಗುವುದು" ಎಂದು ಎಚ್ಚರಿಸಿದರು (೩೦-೩೨). ನರಸಿಂಗ ಶಿರವನ್ನು ಶೃಂಗರಿಸಿ ಪಲ್ಲಕ್ಕಿಯಲ್ಲಿಟ್ಟು ಮೆರೆಸಿ ಶಿರವನ್ನು ಅಗ್ನಿಸಂಸ್ಕಾರಗೊಳಿಸಿದನು. ಗುಡಿ ಕಟ್ಟಿಸಿ, ನಾಲ್ವರನ್ನು ಮೇಲ್ವಿಚಾರಣೆಗೆ ನಿಲ್ಲಿಸಿ, ಸೋಮವಾರದಂದು ಪರ್ವ ಮಾಡಿಸಿದನು (೩೩-೩೫). ಬೂದಿಹಾಳವನ್ನು ಆಳಲು ಒಬ್ಬನನ್ನು ನೇಮಿಸಿ, ಅಳಿದ ರಾಜರ ಪುತ್ರರಿಗೆ ಪಟ್ಟಕಟ್ಟಿ ಅರಸನು ಪೆನುಗೊಂಡೆಗೆ ಹೋದ (೩೩-೪೦). ಬೂದಿಹಾಳಿನಲ್ಲಿ ಭೂತಗಳ ಸಂಚಾರ ಅಧಿಕವಾಯಿತು. ಆಡಳಿತಾಧಿಕಾರಿ ಹೆದರಿ ಪೆನುಗೊಂಡೆಗೆ ಹೋದನು (೪೧-೪೨). ಸಿರುಮನ ಮಗ ಸೋಮಯ್ಯ ದೊಡ್ಡವನಾಗಿ ಬೂದಿಹಾಳಿಗೆ ಮರಳಿಬಂದ. ಹೂತಿಟ್ಟ ದ್ರವ್ಯವನ್ನು ತೆಗೆಯಿಸಿ, ಸೋದರ ನಂಬೆಣ್ಣನೊಂದಿಗೆ ತಂದೆತಾಯಿಗಳಿಗೆ ಕೂಳಕಾರ್ಯ ಪೂರೈಸಿ, ಜನತೆಯನ್ನು ತೃಪ್ತಿಪಡಿಸಿ ಬೂದಿಹಾಳನ್ನು ಆಳತೊಡಗಿದ.

ಇತಿಹಾಸ

ದೇಶವೆಂಬುದು ಅನೇಕ ಆಶಯಗಳ ವಿಶಿಷ್ಟಕೋಶ. ಎಲ್ಲ ಆಶಯಗಳಿಗೆ ಸ್ಪಂದಿಸುತ್ತ ಬಂದ ಜನವರ್ಗ ಮಾತ್ರ 'ಪರಿಪೂರ್ಣ ಸಮಾಜ'ವೆನಿಸಿಕೊಳ್ಳುತ್ತದೆ. ಕರ್ನಾಟಕದ ಮಟ್ಟಿಗೆ ವೀರಶೈವವೂ ಅಂಥ ಒಂದು ಪರಿಪೂರ್ಣ ಜನವರ್ಗವೆನಿಸಿದೆ. ಲೌಕಿಕದಿಂದ ಪಾರಮಾರ್ಥಿಕ ವರೆಗಿನ ಜೀವನದ ಎಲ್ಲ ಆಯಾಮಗಳಲ್ಲಿ ತನ್ನನ್ನು ತೊಡಗಿಸಿಕೊಂಡು, ತಾನು ಬೆಳೆಯುವುದರೊಂದಿಗೆ ದೇಶವನ್ನೂ ಬೆಳೆಸಿದ ಸಮಾಜವಿದು. ಹೀಗಾಗಿ ಧರ್ಮತತ್ವ, ಮತಾಚರಣೆ, ಸಾಹಿತ್ಯಸೃಷ್ಟಿ ಮೊದಲಾದ ಕ್ಷೇತ್ರಗಳಲ್ಲಿಯಂತೆ ಕರ್ನಾಟಕದ ರಾಜಕೀಯಕ್ಷೇತ್ರಕ್ಕೂ ಸ್ಪಂದಿಸುತ್ತ ಬಂದ ಹಿರಿಮೆ ಈ ಸಮಾಜದ್ದಾಗಿದೆ. ಆದರೆ ಈ ವರೆಗೆ ವೀರಶೈವದ ಧಾರ್ಮಿಕ, ಸಾಹಿತ್ಯಿಕ ಕೊಡುಗೆಗಳ ಅಧ್ಯಯನಕ್ಕೆ ಮಾತ್ರ ಗಮನ ಹರಿಸಿದ ವಿದ್ವಾಂಸರು, ಅವರ ರಾಜಕೀಯ ಕಾಣಿಕೆಯನ್ನೂ ಬೆಳಕಿಗೆ ತರಬೇಕಾಗಿದೆ.

ವೀರಶೈವ ಸ್ಪಷ್ಟ ಆಕಾರ ಪಡೆದುದು ೧೨ನೆಯ ಶತಮಾನದಲ್ಲಿ. ಹೀಗಾಗಿ ಇದರ ರಾಜಕೀಯ ಚಟುವಟಿಕೆ ಇಲ್ಲಿಂದ ಪ್ರಾರಂಭವಾಗುತ್ತಿದ್ದರೂ, ಇದಕ್ಕೆ ಸ್ವಲ್ಪ ಹಿಂದೆ ಇದರ ಬೇರುಗಳು ಗೋಚರಿಸುತ್ತವೆ.

ಕಲ್ಯಾಣ ಚಾಲುಕ್ಯ ಮನೆತನವನ್ನು ಸ್ಥಾಪಿಸಿದ ಆಹವಮಲ್ಲ ತೈಲಪ, ಜಯಸಿಂಹನ ರಾಣಿ ಸುಗ್ಗಲೆ, ವಿಕ್ರಮಾದಿತ್ಯನ ರಾಣಿ ಲಕ್ಷ್ಮೀದೇವಿ, ಮಂತ್ರಿ ಕೊಂಡಗುಳಿ ಕೇಶಿರಾಜ, ಸಾಮಂತ ತೆಲುಗು ಜೊಮ್ಮಯ್ಯಗಳು ವೀರಶೈವ ಸಾಹಿತ್ಯದಲ್ಲಿ ಎಡೆಪಡೆದಿದ್ದಾರೆ. ಶರಣ ಚಾಳುಕ್ಯ ಭೀಮ, ಬಿಜ್ಜಳನ ಆಸ್ಥಾನದ ಸಚಿವರಾದ ಬಸವಣ್ಣ, ಚೆನ್ನಬಸವಣ್ಣ, ಗಣಕಾಧಿಕಾರಿ ಸೊಡ್ಡಳ ಬಾಚರಸ, ಸೈನ್ಯವ್ಯವಸ್ಥೆಯ ಜಗದೇವ, ಮಲ್ಲಿಬೊಮ್ಮಣ್ಣ ಇವರೆಲ್ಲ ರಾಜಕೀಯ ಕ್ಷೇತ್ರದ ವ್ಯಕ್ತಿಗಳೆಂಬುದನ್ನು ಗಮನಿಸಬೇಕು. ಹೊಯ್ಸಳರ ಆಸ್ಥಾನದಲ್ಲಿ ಕೆರೆಯ ಪದ್ಮರಸ, ಈತನ ಮಾವ ಗೌರಪದಣಾಯಕರು ಅಧಿಕಾರಿಯಾಗಿದ್ದರು. ದೇವಗಿರಿ ಯಾದವರೂ ಅವರ ಮಂತ್ರಿಗಳೂ ಸಿದ್ಧರಾಮ ಕಟ್ಟಿಸಿದ ಕಪಿಲಸಿದ್ಧ ಮಲ್ಲಿಕಾರ್ಜುನದೇವಾಲಯಕ್ಕೆ ದಾನ ನೀಡುವ ಮೂಲಕ ಭಕ್ತಿಯಿಂದ ನಡೆದುಕೊಂಡಿದ್ದಾರೆ.

ವೀರಶೈವಕಾವ್ಯ "ಭಿಲ್ಲರಾಯನ ಚರಿತೆ"ಯ ಕಥಾನಾಯಕ ಈ ಮನೆತನದ ಭಿಲ್ಲಮರಾಯನಾಗಿರಬೇಕೆಂದು ವಿದ್ವಾಂಸರು ಊಹಿಸುತ್ತಾರೆ. ಇನ್ನೊಬ್ಬ ಅರಸು ರಾಮರಾಯನನ್ನು ಶಿವತತ್ತ್ವಚಿಂತಾಮಣಿಯು 'ಜಂಗಮಪ್ರೇಮಿ' ಎಂದು ವರ್ಣಿಸಿದೆ. ಗೋವೆಯ ಕದಂಬ ವಂಶದ ವಜ್ರರಾಜನು ಶರಣರೊಂದಿಗೆ ಶಿವನ ಒಡ್ಡೋಲಗದಲ್ಲಿ ಇದ್ದನೆಂದು ತಿಳಿಸುತ್ತ, ಇವನು ವೀರಶೈವನೆಂಬುದನ್ನು ಸಾನಂದಚರಿತೆ ದೃಢಪಡಿಸುತ್ತದೆ.

ಮೋಪುರಿನ ಅರಸು ಸಂಗಮರಾಜನ ಮಗ ಭೈರವನು ಭೈರವೇಶ್ವರ ಕಾವ್ಯದ ಕಥಾನಾಯಕನಾಗಿದ್ದಾನೆ. ಕುರುಗೋಡಿನ ಸಿಂದವಂಶದ ರಾಚಮಲ್ಲ, ಇಮ್ಮಡಿ ರಾಚಮಲ್ಲರು ವೀರಶೈವರೆಂದು ಕಾವ್ಯಗಳು ತಿಳಿಸುತ್ತವೆ. ಓರಂಗಲ್ಲಿನ ಕಾಕತೀಯ ಗಣಪತಿರಾಯನ ಶಿವಭಕ್ತಿಯನ್ನು ಗುಂಡಬೊಮ್ಮಯ್ಯನ ಪ್ರಸಂಗ ಸ್ಪಷ್ಟಪಡಿಸುತ್ತದೆ. ಈತನ ಅರಮನೆಯ ಗೋಡೆಯ ಮೇಲೆ ಶರಣರ ಚಿತ್ರ ಬಿಡಿಸಲಾಗಿದ್ದ ವಿಷಯ ಗುಂಡಬ್ರಹ್ಮಯ್ಯನ ಚರಿತೆಯಲ್ಲಿದೆ. ಹಗರಟಿಗೆಯ ಭೈಸರಸರು ವೀರಮಾಹೇಶ್ವರ ನಿಷ್ಠೆಯ ವೀರಶೈವರೆಂದು ತಾಳಿಕೋಟೆ ಶಾಸನ ತಿಳಿಸುತ್ತದೆ. ಯಾದವರ ಕೈಕೆಳಗೆ ಮುಳಗುಂದ ನಾಡನ್ನಾಳುತ್ತಲಿದ್ದ ಹೊನ್ನಬೊಮ್ಮಶೆಟ್ಟಿಯ ಜಂಗಮಭಕ್ತಿಯನ್ನು ರಟ್ಟಿಹಳ್ಳಿ ಶಾಸನ ಸಾರುತ್ತದೆ. ತೊರಗಲೆಯ ಕಲ್ಲರಸ ರಾಣಿ ವೀರಕನ್ನಾದೇವಿಯ ವಿಷಯ ಚೌಡದಾನಪುರ ಶಾಸನದಲ್ಲಿದೆ. ಉದ್ಭಟಕಾವ್ಯದ ಕರ್ತೃ ಸೋಮರಾಜ, ಸಿಂಗಿರಾಜ ಪುರಾಣದ ಕರ್ತೃ ಸಿಂಗಿರಾಜ ಮತ್ತು ನಿಜಗುಣ ಶಿವಯೋಗಿಗಳು ರಾಜರಾಗಿದ್ದರೆಂದು ತಿಳಿದುಬರುತ್ತದೆ.

ಈ ತರುವಾಯ, ಅಸ್ತಿತ್ವಕ್ಕೆ ಬಂದ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಗೆ ಕಾರಣೀಭೂತ ವ್ಯಕ್ತಿ ವೀರಶೈವಗುರು ಕ್ರಿಯಾಶಕ್ತಿಯತಿರಾಯ. ಗಂಗಾದೇವಿಯ ಮಧುರಾ ವಿಜಯಂ, ಲಕ್ಕಣದಂಡೇಶನ ಶಿವತತ್ವ ಚಿಂತಾಮಣಿಗಳಲ್ಲಿ ಇವನ ಪ್ರಸ್ತಾಪವಿದೆ. ಈ ಮನೆತನದ ಪ್ರೌಢದೇವರಾಯ ವೀರಶೈವನಾಗಿದ್ದು, ಇವನ ಆಸ್ಥಾನದಲ್ಲಿ ಕರಸ್ಥಲದ ವೀರಣ್ಣ, ಜಕ್ಕಣಾರ್ಯ, ಲಕ್ಕಣದಂಡೇಶ, ಗುರುರಾಯರು ಅಧಿಕಾರಿಗಳಾಗಿದ್ದರು. ಚಾಮರಸನು ಈ ಪ್ರೌಢದೇವರಾಯನಲ್ಲಿ ಮಂತ್ರಿಯಾಗಿದ್ದನೆಂದು ಕೆಲವು ಕೃತಿಗಳು ತಿಳಿಸುತ್ತವೆ.

ವಿಜಯನಗರ ಮನೆತನದ ಸಂದರ್ಭದಲ್ಲಿ ಅನೇಕ ವೀರಶೈವ ಪಾಳೆಯಗಾರರು ತಲೆಯೆತ್ತಿದರು. ಅವರಲ್ಲಿ ಬೂದಿಹಾಳ ಸಿರುಮನ ಮನೆತನವೂ ಒಂದು. ಈ ಮನೆತನದ ಹೋರಾಟಕ್ಕೆ ಸಂಬಂಧಪಟ್ಟ ಒಂದು ಘಟನೆ ಈ ಸಿರುಮನ ಚರಿತೆಯ ವಸ್ತು, ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲೂಕಿನ ಇಂದಿನ ಶ್ರೀರಾಮಪುರ(ಬೂದಿಹಾಳ)ದಲ್ಲಿ ಆಳುತ್ತಲಿದ್ದ ಪಾಳೆಯಗಾರ ಸಿರುಮನು, ಸಾಳುವ ನರಸಿಂಹನೊಡನೆ ನಡೆಸಿದ ಯುದ್ಧ ಘಟನೆಯಿದು. ಸಾಳುವ ನರಸಿಂಹ ೧೪೫೬-೬೬ ರ ವರೆಗೆ ಪೆನುಗೊಂಡೆ ಚಂದ್ರಗಿರಿಗಳಲ್ಲಿ ರಾಜ್ಯಪಾಲನಾಗಿ, ೧೪೮೬-೯೧ರ ವರೆಗೆ ವಿಜಯನಗರದಲ್ಲಿ ಸಾಮ್ರಾಟನಾಗಿ ರಾಜ್ಯಭಾರ ನಡೆಸಿದ್ದು, ಸಿರುಮನೊಂದಿಗಿನ ಯುದ್ಧ ರಾಜ್ಯಪಾಲನಾಗಿರುವ ಸಂದರ್ಭದಲ್ಲಿ ಜರುಗಿರಬೇಕು. ಈ ಯುದ್ಧ ಕಾರ್ಯದಲ್ಲಿ ತೊಡಗಿದ್ದ ಗ್ರಾಮಗಳು, ವ್ಯಕ್ತಿಗಳು, ಯುದ್ಧದ ಪ್ರತಿಯೊಂದು ಚಟುವಟಿಕೆಗಳು ಇತ್ಯಾದಿಗಳಿಂದಾಗಿ ಇದೊಂದು ಅಪೂರ್ವ ಐತಿಹಾಸಿಕ ಕೃತಿಯಾಗಿದೆ. ಇದು ರಾಜಕೀಯ ಘಟನೆಯಾಗಿದ್ದರೂ ಅಲ್ಲಲ್ಲಿ ಹೆಣೆದುಕೊಂಡ ಸಾಮಾಜಿಕ ಜೀವನವ್ಯಾಪಾರ, ಸಾಂಸ್ಕೃತಿಕ ಮೌಲ್ಯಗಳು ಅಭ್ಯಾಸಯೋಗ್ಯವೆನಿಸಿವೆ. ಇವುಗಳ ವಿವರವಾದ, ಖಚಿತವಾದ ಅಭ್ಯಾಸ ಮುಂದುವರಿಯುವುದು ಅತ್ಯವಶ್ಯ.

ಈ ಯುದ್ಧದ ವಿಷಯವು ಸಿರುಮನನ್ನು ಕುರಿತ ಮೂರು ಕೃತಿಗಳಲ್ಲಿ ಒಂದೇ ರೀತಿ ಬರುತ್ತಿದ್ದರೂ ಅಲ್ಲಲ್ಲಿ ವ್ಯತ್ಯಾಸವೂ ಇದೆ. ಇದರಲ್ಲಿ ಯಾವುದು ನಿಜ? ಎಷ್ಟು ನಿಜ? ಎಂಬುದನ್ನು ನಿಶ್ಚಯಿಸಬೇಕಾಗಿದೆ. ಈ ಕೃತಿಗಳಲ್ಲದೆ ಬೆಟ್ಟವರ್ಧನಚರಿತೆ (ಚಂದ್ರಸಾಗರವರ್ಣಿ)ಯಲ್ಲಿ ಈ ಯುದ್ಧದ ಕೆಲವು ವಿಷಯಗಳು ಬರುತ್ತಿದ್ದು, ನರಸಿಂಹನು ಸಿರುಮನನ್ನು ಕೊಂದು 'ಹೆಗ್ಗೆರೆ ಬಸದಿಲೆ ಇಡಿಸಿ ಶಾಸನವನ್ನೆದಿದನು' ಎಂದು ಅಲ್ಲಿ ಹೇಳಲಾಗಿದೆ.[೪] ತೆಲುಗು ವರಾಹಪುರಾಣ, ಬಾಲಭಾಗವತಮು ಗ್ರಂಥಗಳಲ್ಲಿಯೂ ಈ ಯುದ್ಧಕ್ಕೆ ಸಂಬಂಧಿಸಿದ ವಿರವಗಳು ಸಿಗುತ್ತವೆ. ಈ ಕೃತಿಗಳ, ಬೇರೆ ಶಾಸನಗಳ ಮತ್ತು ಈ ಪ್ರದೇಶದ ಗ್ರಾಮಗಳ ಅಭ್ಯಾಸದಿಂದ ಸಿರುಮನ ಇತಿಹಾಸವನ್ನು ಪುನರ್ರಚಿಸುವ ಕೆಲಸ ನಡೆಯಬೇಕಾಗಿದೆ.

ಸ್ಥಳ ಪರಿಶೀಲನೆ

ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲೂಕಿನ ಶ್ರೀರಾಮಪುರ ಒಂದು ದೊಡ್ಡ ಹಳ್ಳಿ. ಇದರ ಪ್ರಾಚೀನ ಹೆಸರು ಬೂದಿಹಾಳು. ಇಲ್ಲಿ ಆಳಿದ ಸಿರುಮನಾಯಕನಿಂದಾಗಿ ಸಿರುಮಪುರ, ಶ್ರೀರಾಮಪುರ ಆಗಿದೆಯೋ, ರಾಮಾಯಣದ ಶ್ರೀರಾಮನ ಹೆಸರು ಬೂದಿಹಾಳು ಹೆಸರಿನ ಮೇಲೆ ದಾಳಿ ಮಾಡಿದೆಯೋ ಸ್ಪಷ್ಟವಾಗುವುದಿಲ್ಲ. ಇಲ್ಲಿ ಗೋಪಾಲಸ್ವಾಮಿ, ಆಂಜನೇಯ, ಬನಶಂಕರಿ, ಕುಮಾರಮಲ್ಲಯ್ಯ, ವೀರೇಶ್ವರ, ರೇವಣಸಿದ್ಧ, ಕೊಲ್ಲಾಪುರದಮ್ಮ, ವೀರಭದ್ರ, ಸೋಮೇಶ್ವರದೇವಾಲಯಗಳೂ, ಕೋಟೆಕೊತ್ತಲ ಇತ್ಯಾದಿ ಅವಶೇಷಗಳೂ ಇವೆ.

ಸಿರುಮನ ಮಕ್ಕಳಲ್ಲಿ ಒಬ್ಬನಾದ ವೀರಭದ್ರನನ್ನು ವೀರಭದ್ರದೇವಾಲಯದ ಆವರಣದಲ್ಲಿ ಸಮಾಧಿ ಮಾಡಿದುದಾಗಿ ಸಿದ್ಧಕವಿಯ ಕಾವ್ಯ ತಿಳಿಸುತ್ತದೆ. ಬಹುಶಃ ಇಂದಿನ ವೀರಭದ್ರದೇವಾಲಯದ ಎಡಕ್ಕೆ, ಸೋಮೇಶ್ವರ ದೇವಾಲಯದ ಬಲಕ್ಕೆ ಇರುವ ಕರಿಯ ಕಲ್ಲಿನ ಸಣ್ಣ ಗುಡಿಯೇ ಮಗ ವೀರಭದ್ರನ ಸಮಾಧಿಯಾಗಿರಬಹುದು. ಇನ್ನೊಬ್ಬ ಮಗ ಮಲ್ಲಯ್ಯನ ಸಮಾಧಿಯ ಮೇಲೆ 'ಕುಮಾರಮಲ್ಲಯ್ಯನ ಗುಡಿ' ಎಂದು ಕರೆಯುತ್ತಿರುವ ಕಟ್ಟಡವೊಂದು ಈಗಲೂ ತಲೆಯೆತ್ತಿ ನಿಂತಿದೆ. ಇದು ಕಲ್ಲು-ಮಣ್ಣಿನಿಂದ ಕಟ್ಟಿದ ಒಂದು ಕೋಣೆ ಮತ್ತು ಅದರ ಮುಂದೆ ಐದು ಅಂಕಣದ ಪಡಸಾಲೆಯನ್ನೊಳಗೊಂಡಿದೆ. ಕೋಣೆಯಲ್ಲಿ ಕೇವಲ ೩ ವೀರಗಲ್ಲುಗಳಿದ್ದು, ಇವುಗಳಲ್ಲಿ ಎರಡನ್ನು ನೆಡಲಾಗಿದ್ದು ಒಂದನ್ನು ನೆಲದ ಮೇಲೆ ಇಡಲಾಗಿದೆ. ಇವುಗಳಲ್ಲಿ ಮಲ್ಲಯ್ಯನ ವೀರಗಲ್ಲು ಯಾವುದು? ಸ್ಪಷ್ಟವಾಗುವುದಿಲ್ಲ. ಮಿಕ್ಕೆರಡು ವೀರಗಲ್ಲುಗಳು ಬಹುಶಃ ತಂದೆ ಸಿರುಮ, ಸೋದರ ಕಾಚಣ್ಣ ಇವರಿಗೆ ಸಂಬಂಧಿಸಿರಬಹುದೇ? ಎಂಬ ಅನುಮಾನ ಹುಟ್ಟುತ್ತದೆ.

ನೆಲದಲ್ಲಿ ನೆಟ್ಟ ಎರಡು ವೀರಗಲ್ಲುಗಳ ಎತ್ತರ ಮೂರು ಅಡಿ. ನೆಲದ ಮೇಲಿಟ್ಟ ವೀರಗಲ್ಲಿನ ಎತ್ತರ ಎರಡು ಅಡಿ. ಗಂಗಾಮತದವರು ಇದರ ಅರ್ಚಕರು. ವೇಷಭೂಷಣಗಳೇನೂ ಇಲ್ಲದ ಈ ವೀರಗಲ್ಲುಗಳನ್ನು ವಿಭೂತಿ ಕುಂಕುಮ ಕಾಡು ಹೂ ಪತ್ರೆಗಳಿಂದ ಪೂಜಿಸುತ್ತಾರೆ. ಪೂಜಾ ವೈಭವವಿಲ್ಲದಿರಬಹುದು, ಆದರೆ ತಮ್ಮ ಗ್ರಾಮದ ವೀರನನ್ನು ನೆನಪಿಟ್ಟು, ಪೂಜಿಸುತ್ತಿರುವುದು ಮುಖ್ಯ.

---

೪. ಚಂದ್ರಸಾಗರ ವರ್ಣಿಯ ಕೃತಿಗಳು (ಸಂ. ಹಂಪ ನಾಗರಾಜಯ್ಯ ಮತ್ತು ಎಸ್. ಶಿವಣ್ಣ)ಪು.೪-೪೨.

ಕುಮಾರಮಲ್ಲಯ್ಯನ ಕಟ್ಟಿಗೆಯ ರುಂಡ ವಿಗ್ರಹವೊಂದು ಈ ಗ್ರಾಮದ ಕೊಲ್ಲಾಪುರದಮ್ಮನ ಗುಡಿಯಲ್ಲಿದೆ. ಉತ್ಸವವಿಗ್ರಹವಾಗಿರುವ ಕಾರಣ ಇದಕ್ಕೆ ನಿತ್ಯಪೂಜೆಯಿಲ್ಲ. ವಿಶೇಷದಿನಗಳಲ್ಲಿ ಬೆಳ್ಳಿಯ ಮುಖವಾಡ, ಬೆಳ್ಳಿಯ ಆಭರಣ, ರೇಶಿಮೆಯ ವೇಷಭೂಷಣ, ಖಡ್ಗ-ಬಿಲ್ಲುಬಾಣಗಳಿಂದ ಶೃಂಗರಿಸಿ ಕಟ್ಟಿಗೆಯ ಕುದುರೆಯ ಮೇಲೆ ಸ್ಥಾಪಿಸುತ್ತಾರೆ. ಮಹಾನವಮಿ ಸಂದರ್ಭದಲ್ಲಿ, ಶೃಂಗಾರಮಾಡಿದ ಈ ವಿಗ್ರಹದ ಪೂಜೆ ೯ ದಿನಗಳ ವರೆಗೆ ನಡೆಯುತ್ತದೆ. ೯ನೆಯ ದಿನ ಮುಂಜಾನೆ ಈ ಮೂರ್ತಿಯನ್ನು ಪಲ್ಲಕ್ಕಿಯಲ್ಲಿಟ್ಟುಕೊಂಡು, ವಾದ್ಯ ವೈಭವಗಳೊಂದಿಗೆ ಊರಿಂದ ೨ ಮೈಲು ಅಂತರದಲ್ಲಿರುವ ಬನ್ನಿಯ ಮರದ ಹತ್ತಿರ ಹೋಗುತ್ತಾರೆ. ಅಲ್ಲಿ ಸುತ್ತಲಿನ ಊರುಗಳ ಗ್ರಾಮದೇವತೆಗಳೂ ಬರುತ್ತವೆ. ಬನ್ನಿಯ ಮರದ ಎದುರು ನಿರ್ಮಿಸಿದ ಸಾಲುಮಂಟಪಗಳಲ್ಲಿ ಈ ಒಂದೊಂದು ದೇವರನ್ನು, ಮಧ್ಯದ ಮಂಟಪದಲ್ಲಿ ಕುಮಾರಮಲ್ಲಯ್ಯನ ವಿಗ್ರಹವನ್ನು ಪ್ರತಿಷ್ಠಾಪಿಸುತ್ತಾರೆ. ಇದು ಮಲ್ಲಯ್ಯನ ಒಡ್ಡೋಲಗದ ಸೂಚನೆಯಾಗಿರಬೇಕು. ಎದುರಿನ ಬನ್ನಿಯ ಮರಕ್ಕೆ ಕಟ್ಟಿದ ಬಾಳೆಯ ಕಂಬಕ್ಕೆ ಊರಗೌಡ ಬಾಣ ಎಸೆದು, ಆಮೇಲೆ ಅದನ್ನು ಖಡ್ಗದಿಂದ ತುಂಡರಿಸುತ್ತಾನೆ. ಇದು ಮಲ್ಲಯ್ಯನು ವೈರಿಗಳನ್ನು ತುಂಡರಿಸಿದ ಸಂಕೇತವಾಗಿರಬೇಕು. ತರುವಾಯ ಮಲ್ಲಯ್ಯನ ಪಲ್ಲಕ್ಕಿಯನ್ನು ಹೊತ್ತುಕೊಂಡು ಓಡುತ್ತ ಊರಿಗೆ ಬರುತ್ತಾರೆ. ಇದು ಮಲ್ಲಯ್ಯನ ಸೈನಿಕರು ರುಂಡವನ್ನು ಮೆರೆಸುತ್ತ ಬೂದಿಹಾಳಕ್ಕೆ ಓಡಿಬಂದುದರ ದ್ಯೋತಕನಾಗಿರಬಹುದು. ಈ ಮೆರವಣಿಗೆಯು ಗ್ರಾಮವನ್ನು ಪ್ರವೇಶಿಸುವಲ್ಲಿ ಒಂದು ಕುರಿ ಕಡಿದು, ಅದರ ಮಾಂಸದಿಂದ ಅಡಿಗೆ ಮಾಡುತ್ತಿದ್ದು, ಇದಕ್ಕೆ 'ರಾಸಿಗೊಳ್' ಎನ್ನುತ್ತಾರೆ. ಬಹುಶಃ ಇದು ವೀರಗಲ್ಲನ್ನು ಸ್ಥಾಪಿಸುವಾಗ ಏರ್ಪಡಿಸುತ್ತಿದ್ದ 'ಬೀರಗೂಳ್'ದ ಸಂಕೇತವಾಗಿರಬಹುದು.

ಕೊಮಾರ ರಾಮು-ಕೊಮಾರ ಮಲ್ಲ

ಕರ್ನಾಟಕದ ಇತಿಹಾಸದಲ್ಲಿ ಜನಮನವನ್ನು ಆಳವಾಗಿ ಕಲಕಿದುದು, ಕಂಪಿಲರಾಮನ ಯುದ್ಧಘಟನೆ. ಹೀಗಾಗಿ ಇದನ್ನು ಕುರಿತು ನಂಜುಂಡ, ಪಾಂಚಾಳಗಂಗ, ಹಂಪೆಯ ಚರಪತಿ ಮಹಾಲಿಂಗಸ್ವಾಮಿ ಮೊದಲಾದವರು ಕೃತಿ ರಚಿಸಿದ್ದಾರೆ. ಜನಪದದಲ್ಲಿಯೂ ಈ ಬಗ್ಗೆ ಅನೇಕ ಹಾಡುಗಳು ಸಿಗುತ್ತವೆ. ಇಷ್ಟೇ ಆಳವಾಗಿ ಜನಮನವನ್ನು ಕಲಕಿದುದು ಬೂದಿಹಾಳ ಸಿರುಮನ ಯುದ್ಧಘಟನೆ. ಈ ಘಟನೆಯನ್ನು ಕುರಿತು ಸಿದ್ಧಕವಿ, ಕೆಂಚಿಶೆಟ್ಟಿಯ ಸುತ ರಾಮ ಮತ್ತು ಮಲ್ಲಕವಿ ಕೃತಿ ರಚಿಸಿದ್ದಾರೆ. ಅಲ್ಲಿ ಕುಮಾರರಾಮನ ಹೋರಾಟ-ವೀರಮರಣ ಮುಖ್ಯವಾದರೆ, ಇಲ್ಲಿ ಕುಮಾರಮಲ್ಲಯ್ಯನ ಹೋರಾಟ-ವೀರಮರಣ ಪ್ರಧಾನವಾಗಿದೆ. ಕೆಂಚಿಶೆಟ್ಟಿಯ ಸುತ ರಾಮನು ಬೂದಿಹಾಳನ್ನು "ಇದು ರಾಮನಿಹ ಕುಮ್ಮಟವೊ" ಎನ್ನುತ್ತ ಕುಮಾರರಾಮನ ರಾಜಧಾನಿಯನ್ನು ಸ್ಮರಿಸಿದ್ದಾನೆ. ಪಾಂಚಾಳ ಗಂಗನಲ್ಲಿ "ಇನ್ನು ಪೇಳುವೆ ಚೆನ್ನರಾಯನ ಕಥೆಯನು" ಎಂದು ಆರಂಭವಾಗುವ ಪದ್ಯವಿದ್ದರೆ, ಕೆಂಚಿಶೆಟ್ಟಿಯ ಸುತ ರಾಮನಲ್ಲಿ "ಇನ್ನು ಪೇಳುವೆ ಚೆನ್ನಮಲ್ಲನ ಕೃತಿಯನು" ಎಂದು ಪ್ರಾರಂಭವಾಗುವ ಅನುಕರಣ ಪದ್ಯವಿದೆ.

ಅಂಗ ಸಿಕ್ಕಿತು ರಾಮನ ತಲೆ ನೇಮಿಗೆ
ಅಂಗ ಸಿಕ್ಕದು ನರಸಿಂಹಗೆ
ಅಂಗವ ಕೊಡದೆ ಕಾದಿದನೊಬ್ಬ ರಣಗಲಿ
ತುಂಗವಿಕ್ರಮ ಗೊಲ್ಲ ಸಿರುಮ

ಎನ್ನುತ್ತ ಮಲ್ಲಕವಿ, ಕಂಪಿಲಯುದ್ಧಕ್ಕಿಂತ ಈ ಬೂದಿಹಾಳಯುದ್ಧ ಘಟನೆ ಮಿಗಿಲಾದುದೆಂದು ಸಾರುತ್ತಾನೆ.

ಹೀಗೆ ಈ ಎರಡೂ ಘಟನೆಗಳು ಜನಮನವನ್ನು ಭೇದಿಸಿದ ಕಾರಣ, ಜನಪದದಲ್ಲಿ ಕುಮಾರರಾಮನನ್ನು ಕುರಿತಂತೆ ಕುಮಾರಮಲ್ಲಯ್ಯನನ್ನೂ ಕುರಿತು ಹಾಡುಗಳು ಹುಟ್ಟಿಕೊಂಡಿವೆ. ಡಾ. ಜೀ. ಶಂ. ಪ. ಅವರ "ದಕ್ಷಿಣ ಕರ್ನಾಟಕ ಜನಪದ ಕಾವ್ಯಪ್ರಕಾರಗಳು" ಎಂಬ ಪಿಎಚ್.ಡಿ. ಪ್ರಬಂಧದಲ್ಲಿ ಈ ಬಗ್ಗೆ ಕೆಲವು ಪದ್ಯಗಳು ಸಿಗುತ್ತವೆ (೩೦೯, ೩೧೪). ಈ ದಿಸೆಯಲ್ಲಿ ಕ್ಷೇತ್ರಕಾರ್ಯ ನಡೆದರೆ ಹೆಚ್ಚಿನ ಸಾಹಿತ್ಯ ಸಿಗುವ ಸಾಧ್ಯತೆಯಿದೆ.

ಗುಣಮೌಲ್ಯ

ಶಬ್ದಮಾಧ್ಯಮದ ಕಲಾಕೃತಿಗಳಲ್ಲಿ ಗದ್ಯ, ಪದ್ಯ, ದೃಶ್ಯಗಳೆಂಬ ಮೂರು ಪ್ರಕಾರಗಳಿದ್ದು, ಇವುಗಳನ್ನು ವಿಮರ್ಶಿಸುವ ಮಾನದಂಡಗಳಲ್ಲಿಯೂ ಮೂರು ಪ್ರಭೇದಗಳು ಅವಶ್ಯವೆಂದು ತೋರುತ್ತದೆ. ಆದರೆ ಇಂದು ಗದ್ಯಕೃತಿ ವಿಮರ್ಶಾಮಾನದಂಡದಿಂದಲೇ ಈ ಎಲ್ಲ ಪ್ರಕಾರಗಳ ಮೌಲ್ಯನಿರ್ಣಯ ಮಾಡುವುದು ರೂಢಿಯಾಗಿಬಿಟ್ಟಿದೆ. ಇದರಿಂದಾಗಿ, ಕೆಲವೊಮ್ಮೆ ಪದ್ಯಪ್ರಕಾರ, ದೃಶ್ಯಪ್ರಕಾರಗಳಿಗೆ ಅನ್ಯಾಯವಾಗುತ್ತಲಿದೆ. ಛಂದೋನಿಷ್ಠವಾಗಿರುವ ಪ್ರಾಚೀನ ಕನ್ನಡ ಸಾಹಿತ್ಯದ ವಿಷಯದಲ್ಲಿಯಂತೂ ಇದು ಬಹಳಷ್ಟು ಸಲ ನಿಜವೆನಿಸುತ್ತದೆ.

ಕನ್ನಡದಲ್ಲಿ ಸಾಹಿತ್ಯದ ಸೃಷ್ಟಿ ಮತ್ತು ಪರಂಪರೆಗಳು ವಿಶಿಷ್ಟಸಂದರ್ಭಗಳಲ್ಲಿ ಸಾಗಿಬಂದಿವೆ. ಮೂಲತಃ ಧ್ವನಿಪಾತಳಿಯಲ್ಲಿ ಸಾಗಿಬರುತ್ತಲಿದ್ದ ಕನ್ನಡ ಸಾಹಿತ್ಯವು, ಲಿಪಿಸೌಕರ್ಯ ಕಾರಣವಾಗಿ ಅಕ್ಷರಪಾತಳಿಗಿಳಿಯಿತು. ಹೀಗೆ ಅಕ್ಷರಕ್ಕಿಳಿದ ದೇಶೀನಿಷ್ಠಸಾಹಿತ್ಯ ದೇಶಿಯೆನಿಸಿದರೆ, ಸಂಸ್ಕೃತನಿಷ್ಠಸಾಹಿತ್ಯ ಮಾರ್ಗವೆನಿಸಿತು. ಇವುಗಳಲ್ಲಿ ಒಂದು ನಿರಕ್ಷರಿಗಳನ್ನು ಗಮನದಲ್ಲಿಟ್ಟುಕೊಂಡು ಶ್ರವಣಪಾತಳಿಯ ಸಾಹಿತ್ಯವಾಗಿ 'ಹಾಡುಗಬ್ಬ' ರೂಪದಲ್ಲಿ ಬೆಳೆಯಿತು. ಇನ್ನೊಂದು ಸಾಕ್ಷರಿಗಳನ್ನು ಗಮನದಲ್ಲಿಟ್ಟುಕೊಂಡು ವಾಚನಪಾತಳಿಯ ಸಾಹಿತ್ಯವಾಗಿ "ಓದುಗಬ್ಬ" ರೂಪದಲ್ಲಿ ಬೆಳೆಯಿತು. ಇವುಗಳನ್ನು ೧೯ನೆಯ ಶತಮಾನದ ವರೆಗೆ ಶ್ರವಣ ಮತ್ತು ವಾಚನಗಳೆಂಬ ಎರಡು ಪ್ರತ್ಯೇಕ ರೀತಿಗಳಲ್ಲಿಯೇ ಆಸ್ವಾದಿಸುವ ವಿಧಾನ ಸಾಮಾನ್ಯವಾಗಿ ಅಸ್ತಿತ್ವದಲ್ಲಿದ್ದಿತು. ಇಂಗ್ಲಿಷ್ ಶಿಕ್ಷಣ, ಸಾಹಿತ್ಯಗಳ ಪ್ರಭಾವದಿಂದಾಗಿ ಶ್ರವಣಮಾಧ್ಯಮದ ಸಾಹಿತ್ಯವನ್ನೂ ವಾಚನಮಾಧ್ಯಮದಲ್ಲಿಟ್ಟು ಆಸ್ವಾದಿಸುವುದು ಪ್ರಾರಂಭವಾಯಿತು. ಈ ಬಗೆಯ ವಿಧಾನ ಬದಲಾವಣೆಯಿಂದಾಗಿ, ಪರಿಣಾಮದಲ್ಲಿಯೂ ವ್ಯತ್ಯಾಸ ಸಂಭವಿಸಿ, ವಿಮರ್ಶಾ ಮೌಲ್ಯಮಾಪನದಲ್ಲಿ ಹಾಡುಗಬ್ಬಕ್ಕೆ ಅನ್ಯಾಯವಾಗಹತ್ತಿತು. ಅಂದರೆ ಹಾಡುಗಬ್ಬವನ್ನು ಶ್ರವಣಮಾಧ್ಯಮದಲ್ಲಿ ಕೇಳಿದಾಗ ಸಿಗುತ್ತಿದ್ದ ಸುಖ ಓದಿದಾಗ ಸಿಗದಿರುವಂತಹ ಪರಿಸ್ಥಿತಿ ನಿರ್ಮಾಣವಾಯಿತು. ಹೀಗಾಗಿ 'ಹಾಡುಗಬ್ಬ ಪ್ರಕಾರ'ದ ಹೊಸ ವಿಮರ್ಶಾಮಾನದಂಡಗಳು ಕನ್ನಡದಲ್ಲಿ ಇಂದು ಹುಟ್ಟಿಬರಬೇಕಾಗಿದೆ. ಅಲ್ಲಿಯ ವರೆಗೆ ಹಾಡುಗಬ್ಬ ಪ್ರಕಾರವಾದ ಸಿರುಮನ ಚರಿತೆಗಳಂಥ ಕೃತಿಗಳನ್ನು ಓದುಗಬ್ಬ ಪ್ರಕಾರದ ವಿಮರ್ಶಾ ಮಾನದಂಡದಿಂದ ಅಳೆದಲ್ಲಿ, ಅವುಗಳಿಗೆ ಅನ್ಯಾಯವಾಗುವುದೆಂದೇ ಹೇಳಬೇಕು. ಈ ಹಿನ್ನೆಲೆಯಲ್ಲಿ ನೋಡಿದಾಗ ಈ ಕವಿ ಇದನ್ನು ಓದುವುದಕ್ಕಾಗಿ ಬರೆದುದಲ್ಲ, ಹಾಡುವುದಕ್ಕಾಗಿ ಬರೆದಿದ್ದು, ಹಾಡುವ ಸಾಹಿತ್ಯಿಕ ಮೌಲ್ಯ ಇದಕ್ಕೆ ಇದ್ದೇ ಇದೆಯೆಂದು ಹೇಳಬಹುದಾಗಿದೆ. ಎರಡನೆಯದಾಗಿ ಒಂದು ಕೃತಿಗೆ ಸಾಹಿತ್ಯಿಕ ಗುಣಮೌಲ್ಯದಂತೆ ಇತರ

ಗುಣಮೌಲ್ಯಗಳೂ ಇರುತ್ತವೆ. ಈ ದೃಷ್ಟಿಯಿಂದ ನೋಡಿದರೆ ಸಿರುಮನ ಚರಿತೆಗಳಿಗೆ ಖಂಡಿತವಾಗಿಯೂ 'ಇತಿಹಾಸಮಹತ್ವ'ದ ಬೆಲೆ ಇದ್ದೇ ಇದೆ.

ಪರಿಷ್ಕರಣ

'ಸಿರುಮನ ಚರಿತೆ'ಯ ಹಸ್ತಪ್ರತಿ ಈವರೆಗೆ ಸಿಕ್ಕುದು ಒಂದೇ ಒಂದು. ಇಂದಿಗೆ ಸುಮಾರು ೪೦ ವರ್ಷಗಳ ಹಿಂದೆ ಶೇಕದಾರ ಜಿ. ಎಂ. ಬಸವರಾಜಯ್ಯ ಅವರ ಸಹಾಯದಿಂದ ಶ್ರೀ ಹುಲ್ಲೂರ ಶ್ರೀನಿವಾಸ ಜೋಯಿಸರಿಗೆ ಈ ಹಸ್ತಪ್ರತಿ ಲಭಿಸಿದ್ದಿತು. ೧೯೫೧ ರಲ್ಲಿ ಇವರು ಇದರ ಗದ್ಯಾನುವಾದವನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಮೂಲಕ ಪ್ರಕಟಿಸಿದ ಬಳಿಕ, ಅದರ ಒಡೆಯರಿಗೆ ಮರಳಿಸಿದ ಹಸ್ತಪ್ರತಿ ಇಂದಿಗೂ ಲಭ್ಯವಿಲ್ಲ.

ಶ್ರೀ ಜಿ. ವರದರಾಜರಾವ್ ಅವರು ತಮ್ಮ ಪಿಎಚ್.ಡಿ. ಪ್ರಬಂಧದಲ್ಲಿ ಹಂಪೆಯ ಚರಪತಿ ಮಹಾಲಿಂಗಸ್ವಾಮಿಯ 'ಬಾಲರಾಮನ ಸಾಂಗತ್ಯ'ದ ಗದ್ಯಾನುವಾದವನ್ನು ಕೊಟ್ಟಿದ್ದಾರೆ. ಏಕೈಕ ಹಸ್ತಪ್ರತಿಯಾಗಿದ್ದ ಇದನ್ನು ಶ್ರೀ ವರದರಾಜರಾವ್ ಅವರಿಗೆ ಪೂರೈಸಿದ್ದವರು ಶ್ರೀ ಹುಲ್ಲೂರ ಶ್ರೀನಿವಾಸ ಜೋಯಿಸರು.

ಇವೆರಡೂ ಕೃತಿಗಳನ್ನು ಪ್ರಕಟಿಸುವ ಆಸೆಯಿಂದ ಕೆಲವು ದಿನಗಳ ಹಿಂದೆ ಇವುಗಳ ಹಸ್ತಪ್ರತಿಯ ಬಗ್ಗೆ ಶ್ರೀ ವರದರಾಜರಾವ್ ಅವರನ್ನು ವಿಚಾರಿಸಿದೆ. ತಾವು ಗದ್ಯಾನುವಾದಕ್ಕೆ ಬಳಸಿಕೊಂಡಿದ್ದ ಬಾಲರಾಮನ ಸಾಂಗತ್ಯದ ಹಸ್ತಪ್ರತಿಯುನ್ನು ಹುಲ್ಲೂರ ಅವರಿಗೆ ಮರಳಿಸಿರುವುದಾಗಿಯೂ, 'ಸಿರುಮನ ಚರಿತೆ'ಯನ್ನು ಪ್ರತಿ ಮಾಡಿಕೊಂಡಿರುವುದಾಗಿಯೂ ತಿಳಿಸುತ್ತ, ಇದನ್ನು ತಾವೇ ಪರಿಷ್ಕರಿಸಿ ಪ್ರಕಟಿಸುವ ಆಸೆಯನ್ನು ವ್ಯಕ್ತಪಡಿಸಿದರು "ನೀವು ಪ್ರಕಟಿಸಿದರೆ ಸಂತೋಷ, ಪ್ರಕಟಿಸದಿದ್ದರೆ ನನಗೇ ಕೊಡಬೇಕು " ಎಂದು ಸಲುಗೆಯಿಂದ ಕೇಳಿದೆ. ಅವರು ಸಮ್ಮತಿಸಿದರು. ಮುಂದೆ ಕೆಲವೇ ದಿನಗಳಲ್ಲಿ ಶ್ರೀ ವರದರಾಜರಾವ್ ಅವರು ನಿಧನರಾದರು. "ಸಿರುಮನ ಚರಿತೆ" ಯ ನಕಲು ಪ್ರತಿ ಅವರ ಮನೆಯಲ್ಲಿಯೇ ಉಳಿದುಕೊಂಡುಬಿಟ್ಟಿತು. ಒಮ್ಮೆ ಈ ಎಲ್ಲ ವಿವರವನ್ನು ಮಿತ್ರರಾದ ಶ್ರೀ ಎನ್. ಬಸವಾರಾಧ್ಯ ಅವರಿಗೆ ತಿಳಿಸಿದೆ. ಶ್ರೀ ವರದರಾಜರಾವ್ ಅವರ ಕುಟುಂಬದವರಿಗೆ ಆತ್ಮೀಯರಾಗಿರುವ ತಮ್ಮ ಸಹೋದ್ಯೋಗಿ ಶ್ರೀಮತಿ ನಾಗರತ್ನ ಅವರ ಮೂಲಕ ನಕಲುಪ್ರತಿಯನ್ನು ತರಿಸಿಕೊಟ್ಟರು. ೪೦ ವರ್ಷಗಳ ಹಿಂದೆ ಶ್ರೀ ಹುಲ್ಲೂರ ಅವರಿಗೆ ಲಭಿಸಿ ಕಣ್ಮರೆಯಾಗಿರುವ ಹಸ್ತಪ್ರತಿಯ ನಕಲುಪ್ರತಿಯಿದು. ಇದನ್ನೂ ಬಿಟ್ಟರೆ ಕೃತಿಯೇ ಮರೆಯಾಗಬಹುದೆಂಬ ಭಯದಿಂದ ಈಗ ಪ್ರಕಟಿಸುತ್ತಿದ್ದೇನೆ. ಮೂಲಪ್ರತಿ ದೊರಕಿಸಿದ್ದ ಹುಲ್ಲೂರ ಅವರಿಂದಲೂ ನಕಲು ಪ್ರತಿ ಸಿದ್ಧಪಡಿಸಿಕೊಂಡಿದ್ದ ವರದರಾಜರಾವ ಅವರಿಂದಲೂ ಕೈಗೂಡದ ಪ್ರಕಟನ ಕೆಲಸವನ್ನು ದೈವ ನನ್ನಿಂದ ಮಾಡಿಸುತ್ತಿರುವುದು ವಿಸ್ಮಯಗಳಲ್ಲಿ ವಿಸ್ಮಯ.

ಹೀಗೆ ಈ ಕೃತಿಯ ಪರಿಷ್ಕರಣ ಪ್ರಸಂಗದಲ್ಲಿ ನಾನು ಬಳಸಿದುದು ಡಾ. ವರದರಾಜರಾವ್ ಮಾಡಿಕೊಂಡಿದ್ದ ನಕಲುಪ್ರತಿಯನ್ನು. ಎರಡು ಟಿಪ್ಪಣಿ ಪುಸ್ತಕ, ಒಂದು ನೋಟಬುಕ್‌ಗಳಲ್ಲಿ ಇವರು ಬರೆದುಕೊಂಡಿದ್ದಾರೆ. "ಹಸ್ತಪ್ರತಿ–ಕಡತ, ಶ್ರೀ ಹು. ಶ್ರೀ. ಜೋಯಿಸರವರ ಬಳಿ ಇದ್ದದ್ದು" ಎಂದು

ಪ್ರಾರಂಭದಲ್ಲಿ ನಮೂದಿಸಿದ್ದಾರೆ. ಇಲ್ಲಿ ಕಡತವೆಂದು ಸೂಚಿಸಿದ್ದರೂ ಮೂಲಪ್ರತಿ ಕಡತವಾಗಿರದೆ ಕಾಗದ ಪ್ರತಿಯಾಗಿರಬಹುದು ಇದನ್ನು 'ಮೂ' ಸಂಕೇತದಿಂದ ಬಳಸಿದ್ದೇನೆ. ಈ ನಕಲು ಪ್ರತಿಯ ಕೊನೆಯಲ್ಲಿ ಬರುವ ಸೂಚನೆಯ ಪ್ರಕಾರ ಇದರ ಸಂಧಿ ೧೩, ಪದ್ಯ ೧೦೬೫. ಆದರೆ ಲಿಪಿಕಾರ ಪದ್ಯಗಳನ್ನು ಮರೆತುಬಿಟ್ಟ ಪರಿಣಾಮವಾಗಿಯೋ ಏನೋ ಇಲ್ಲಿರುವ ಒಟ್ಟು ಪದ್ಯ ೯೪೮. ಇಲ್ಲಿಯ ಸಂಧಿಗಳಲ್ಲಿ ಪದ್ಯಸಂಖ್ಯೆ ಕಡಿಮೆಯೆಂದರೆ ೨೩, ಹೆಚ್ಚೆಂದರೆ ೧೬೬ ಇವೆ. ೫ನೆಯ ಸಂಧಿ ಸ್ತುತಿ ಪದ್ಯವಿಲ್ಲದೆ ಪ್ರಾರಂಭವಾಗಿದೆ. ಕೆಲವು ಸಂಧಿಗಳಿಗೆ ಮಾತ್ರ ವಿಷಯ ಶೀರ್ಷಿಕೆಯಿದೆ, ಕೆಲವುಗಳಿಗೆ ಇಲ್ಲ. ಹೀಗಾಗಿ ನಾವು ಅವೆಲ್ಲವುಗಳನ್ನು ಅಡಿಯಲ್ಲಿ ಇಟ್ಟುಕೊಂಡಿದ್ದೇವೆ. ಈ ನಕಲು ಪ್ರತಿಯ ಪ್ರಾರಂಭದಲ್ಲಿ ಶ್ರೀಕಾರವಾಗಲೀ, ದೇವತಾಸ್ಮರಣೆಯಾಗಲೀ ಇಲ್ಲದೆ ಸ್ತೋತ್ರ ಪದ್ಯವೇ ಪ್ರಾರಂಭವಾಗುತ್ತದೆ. ಬಹುಶಃ ಮೂಲಪ್ರತಿಯಲ್ಲಿಯೂ ಹೀಗೆಯೇ ಇದ್ದಿರಬೇಕು. ಅಪ್ರಕಟಿತ 'ಗೊಲ್ಲ ಸಿರುಮನ ಚರಿತೆ'ಯ ಕೆಲವು ಪದ್ಯಗಳು ಇಲ್ಲಿ ಕಂಡುಬರುತ್ತಿದ್ದು ಇದು ಕವಿಯ ಕೈವಾಡವೋ, ಲಿಪಿಕಾರರ ಕೈವಾಡವೋ ಸ್ಪಷ್ಟವಾಗುವುದಿಲ್ಲ.

ಆಡು ಭಾಷೆ, ಹಾಡು ಭಾಷೆಗಳೆರಡರ ದಾಳಿಯಿಂದಾಗಿ ಹಸ್ತಪ್ರತಿ ತುಂಬ ಅಶುದ್ಧವಾಗಿದೆ. ಉದಾ: ವಿಘ್ನಕಾದಲಿ ಗಜವದನ>ವಿಘ್ನಕದಳಿ ಗಜವದನ, ಮೀರಾಶಿಯ ಮಟ್ಟ>ನಿರಾಸೆಯ ಮಠ, ಮರಿನಾರಿ ಹುಲ್ಲೆ> ಮರಿನರಿ ಹುಲ್ಲೆ, ಗಾನ ಮಹಿಮ>ಘನಮಹಿಮ, ವಡವಭೆರಿ>ಹೊಡೆವ ಭೇರಿ.

ಎರಡನೆಯದಾಗಿ, ಇದು ಇತಿಹಾಸಕಾವ್ಯವಾಗಿರುವುದರಿಂದ ಇಲ್ಲಿನ ಇತಿಹಾಸದ ಪರಿಚಯ ಸಂಪಾದಕನಿಗೆ ಅಗತ್ಯ. ಇಲ್ಲಿ ಕಂಡುಬರುವ ಆ ಕಾಲದ ಅನೇಕ ವ್ಯಕ್ತಿನಾಮ, ಸ್ಥಳನಾಮಗಳ, ಆ ಕಾಲದ ಪದಗಳ ಪರಿಚಯವೂ ಸಂಪಾದಕನಿಗೆ ಅವಶ್ಯ. ಒಟ್ಟಿನಲ್ಲಿ ಒಬ್ಬ ಇತಿಹಾಸಕಾರ, ಒಬ್ಬ ಪ್ರಾದೇಶಿಕ ವಿದ್ವಾಂಸ, ಹೆಚ್ಚಿನದಾಗಿ ಒಬ್ಬ ಸಾಹಿತ್ಯ ಸಂಪಾದಕ– ಈ ಮೂವರ ಸಂಯುಕ್ತ ಪ್ರಜ್ಞೆ ಇಲ್ಲಿ ಅಗತ್ಯವೆನಿಸುತ್ತದೆ. ಈ ಎಲ್ಲ ತಿಳುವಳಿಕೆಯ ಹಿನ್ನೆಲೆಯಲ್ಲಿ ಈ ಕೃತಿಯನ್ನು ಪರಿಷ್ಕರಿಸಲಾಗಿದೆ. ಏಕೈಕ ಹಸ್ತಪ್ರತಿಯಾಗಿರುವುದರಿಂದ ಅಲ್ಲಲ್ಲಿ ಊಹೆ ಅನಿವಾರ್ಯವಾಗಿದೆ. ಅಂಥ ಪ್ರಸಂಗಗಳಲ್ಲಿ ಮೂಲ ಪಾಠವನ್ನು 'ಮೂ' ಸಂಕೇತದಿಂದ ಅಡಿಯಲ್ಲಿ ಕೊಡಲಾಗಿದೆ.

ಕೃತಜ್ಞತೆ

ಮಠ ಒಂದು ಸಾಮಾಜಿಕ ಸಂಸ್ಥೆ, ಗುರು ಒಬ್ಬ ಸಮಾಜ ಸೇವಕ. ಈ ಮೂಲಸತ್ಯವನ್ನು ಆಚಾರಕ್ಕೆ ಅಳವಡಿಸುತ್ತಿರುವ ಕೆಲವೇ ವೀರಶೈವ ಧರ್ಮಪೀಠಗಳಲ್ಲಿ ಮೈಸೂರಿನ ಜಗದ್ಗುರು ಶ್ರೀ ಸುತ್ತೂರು ಶಿವರಾತ್ರೀಶ್ವರ ಮಠವೂ ಒಂದು. ಶ್ರೀಮಠದ "ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ'ಯ ಆಶ್ರಯದಲ್ಲಿ ಈ ವರೆಗೆ ಉತ್ತಮೋತ್ತಮ ಗ್ರಂಥಗಳನ್ನು ಪ್ರಕಟಿಸಿದ ಈ ಸಂಸ್ಥೆ, ಈಗ 'ಸಿರುಮನ ಚರಿತೆ'ಯನ್ನು ಹೊರತರುವ ಮೂಲಕ ಚಾರಿತ್ರಿಕ ಕಾವ್ಯ ಪ್ರಕಟಣೆಯ ಹೊಸ ಉಪಕ್ರಮವನ್ನು ಪ್ರಾರಂಭಿಸಿದೆ. ಈ ಕೃತಿ ಸಂಪಾದನೆಗೆ 'ಅಸ್ತು' ಹೇಳಿ, ಪ್ರಕಟಿಸಲು ಅವಕಾಶ ಮಾಡಿಕೊಟ್ಟ ಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರಿಗೆ ಭಕ್ತಿಪೂರ್ವಕ ಪ್ರಣಾಮಗಳನ್ನು ಸಲ್ಲಿಸುತ್ತೇನೆ.

ಈ ಕೃತಿಗೆ ನಾನು ಬಳಸಿದುದು ಡಾ. ಜಿ. ವರದರಾಜರಾವ್ ಅವರ ನಕಲು ಪ್ರತಿ. ಇದು ಪ್ರಕಟವಾಗುತ್ತಿರುವ ಹೊತ್ತಿಗೆ ಅವರು ನಮ್ಮ ಮಧ್ಯದಲ್ಲಿಲ್ಲದುದು ದುಃಖದ ಸಂಗತಿ. ಮಾನ್ಯ ಡಾ. ವರದರಾಜರಾವ್ ಅವರ ಆತ್ಮಕ್ಕೆ ನನ್ನ ಗೌರವಗಳು ಸಲ್ಲುತ್ತವೆ.

ಈ ನಕಲು ಪ್ರತಿ ನನಗೆ ಒದಗುವಂತೆ ಮಾಡಿದ ಮಿತ್ರರಾದ ಶ್ರೀ ಎನ್. ಬಸವಾರಾಧ್ಯ ಅವರಿಗೂ ಒದಗಿಸಿಕೊಟ್ಟ ಶ್ರೀಮತಿ ನಾಗರತ್ನ ಅವರಿಗೂ, ಔದಾರ್ಯದಿಂದ ಇದನ್ನು ನೀಡಿದ ಡಾ. ಜಿ. ವರದರಾಜರಾವ್ ಅವರ ಕುಟುಂಬವರ್ಗದವರಿಗೂ ನಾನು ಕೃತಜ್ಞನಾಗಿದ್ದೇನೆ. ಸುಂದರವಾಗಿ ಮುದ್ರಿಸಿದ ಗದುಗಿನ ಪ್ರಭು ಪ್ರಿಂಟಿಂಗ ಪ್ರೆಸ್ಸಿನ ಶ್ರೀ ಶಾಂತವೀರ ಜಂಗಮನಿ ಅವರಿಗೂ ಋಣಿಯಾಗಿದ್ದೇನೆ.

ಧಾರವಾಡ.

– ಎಂ. ಎಂ. ಕಲಬುರ್ಗಿ

❖❖

*

ಪರಿವಿಡಿ

ಸಂಧಿ : ಒಂದು

ಶ್ರೀಪತಿ ವಾಣೀಪತಿ ಸುರಪತಿ ತಾ
ರಾಪತಿ ನಮಿತ ಪದಾಬ್ಜ।
ಗೋಪತಿವಾಹನ ಕಾಪಾಲಧರನೆ ಉ
ಮಾಪತಿ ಸಲಹೊ ಸೋಮೇಶ ॥೧॥

ಈಶ ಸರ್ವೇಶ ಗಿರೀಶ ಭಕ್ತರ ಭವ
ನಾಶ ಯೋಗಿಗಳ ಹೃತ್ಕಮಲಾ।
ವಾಸ ಗಂಗೇಶ ಫಣೀಶಕುಂಡಲ ಸೋ
ಮೇಶ ಕೊಡೆನಗೆ ಸನ್ಮ*[ತಿಯ]* ॥೨॥

ದೇವಿ ಸಕಲದೇವರುಗಳ ಪಡೆದ
ಭವಾನಿ ಅತುಳಮುನಿಧ್ಯಾನಿ।
ಭಾವಜಹರನರ್ಧದೇಹದೊಳಿಹ
ಸರ್ವಾಣಿ ಅಡಿಗೆ ನಮಿಸುವೆನು ॥೩॥

ಗಂಗೆಯ ಪ್ರಳಯವಾಗಿ ಮೂಲೋಕಂಗಳ
ನುಂಗುತಿರಲು ನೀ ಕಂಡು।
ಅಂಗಜಪಿತ ಅಜ ಸುರರನೆತ್ತಿದ ೧[ಧ]೧ವ
ಳಾಂಗವಾಸ*[ವೆ]* ಪಾಲಿಸೆನಗೆ ॥೪॥

ವಿಘ್ನ ೨[ವಿಪಿ]೨ನಸಮೂಹ ಪರಶುಧರ
ವಿಘ್ನ೩[ಕದಳಿ]೩ ಗಜವದನ।

– ತವ(ಮೂ), ೧–೧ಡ(ಮೂ), *–* ವ(ಮೂ), ೨–೨ ವಾದ(ಮೂ), ೩–೩ ಕಾದಲಿ(ಮೂ)

ವಿಘ್ನಮೂ*[ಷಕ]* ಸರ್ಪಧರನೆಂದೆನಿಸುವ
ವಿಘ್ನೇಶ್ವರನಡಿಗೆರಗುವೆನು ॥೫॥

ವೀಣಾಪಾಣಿ ಬ್ರಹ್ಮನ ರಾಣಿ ವಿದ್ಯಾ
ಶ್ರೇಣಿ ಕಮಲಲೋಚನೆಯೆ।
ಕೇಣವಿಲ್ಲದೆ ನಿಮ್ಮ ಬಲಗೊಂಬೆನಮ್ಮ ೪[ಶ್ರೀ
ವಾಣಿ]೪ ಕೊಡೆನಗೆ ಸನ್ಮತಿಯ ॥೬॥

ವರರ[ಸ]ಭಾವ *[ಶಬ್ದದ]*ಚಮತ್ಕಾರ೫[ದೆ]೫
ವಿರಚಿಸಿ ಸಕಲಚೋದ್ಯಗಳ।
ವಿರೂಪಾಕ್ಷನೊಳಗೈಕ್ಯಪದವ ಪಡೆದ ಗುರು
ಹರಿದೇವನಡಿಗೆರಗುವೆನು ॥೭॥

ಕೇಶಿರಾಜನು ಮಲುಹಣನುದ್ಭಟ ಕಾಳಿ
ದಾಸ ಮಯೂರ ಬಾಣನನು।
ಲೇಸಪ್ಪ ರಾಘವಾಂಕನು ಶಿವಕವಿಗಳಿ
ಗಾಸೆವಟ್ಟಾನೆರಗುವೆನು ॥೮॥

ಸಿರುಮನ ಚರಿತೆಯ ಪೇಳುಯೆಂದೆನಲಾಗಿ
ನರಕೃತಿಯಿದ ಪೇಳಬಹುದೆ।
ಗುರುಲಿಂಗಜಂಗಮ ಚರಣಸೇವಿತನ೬[ವ]೬
ನೆರೆ ನಿನ್ನ ಬೇಡಿ ಪೇಳುವೆನು ॥೯॥

ಇಂತು ನುಡಿದ ಗುರುವಾಕ್ಯವ ಕೈಕೊಂಡು
ಸಂತೋಷ ಪೆಚ್ಚಲು ಮನಕೆ।
ಕಂತುಹರನ ಭಕ್ತ ಸಿರುಮನ ಚರಿತೆಯ
ಮುಂತೆ ಪೇಳುವೆನು ವಿಸ್ತರಿಸಿ ॥೧೦॥

ಪಂಚಮಕುಲವಾರ್ಧಿಚಂದಿರನೆನಿಸುವ
ಪಂಚಮುಖನ ಭಕ್ತಿಯುತನು।

– ರುತಿ(ಮೂ). ೪–೪ ಸರ್ವಾಣಿ(ಮೂ), *–* X (ಮೂ), ೫–೫ ದ(ಮೂ), ೬–೬ ವಾ(ಮೂ).

ಕೆಂಚಶೆಟ್ಟಿಯ ಸುತ ರಾಮ ಪೇಳಿದ ಕೃತಿ
ಯಂ ಚದುರರು ಲಾಲಿಪುದು ॥೧೧॥

ಜಾಣರೀ ಚರಿತೆಯೊಳಗೆ ತ[೭][ಪ್ಪುಳ್ಳಡೆ][೭]
ಊನಯವ ಮಾಡಬೇಡ।
ಕ್ಷೋಣಿಯೊಳಗೆ ತಪ್ಪ ತಿದ್ದಿ ಮೆರೆವುದಾಗಿ
ಮಾಣದೆ ನಿಮ್ಮವ ನಾನು ॥೧೨॥

ಬ್ರಹ್ಮನ ರಾಣಿಯ ಭಕ್ತಿಯಿಂದಲಿ ನಾನು
ಒಮ್ಮನದಲಿ ಭಜಿಸುವೆನು।
ನಿರ್ಮಳವಾಗಿ ಬಂದೆನ್ನ ವದನದಲ್ಲಿ
ಪೆರ್ಮೆಯೊಳಾಗೆ ಸರಸ್ವತಿಯೆ ॥೧೩॥

ಲೋಲರ ಮೆಚ್ಚು ಪಾಲಿಸುವರಿಗೊಂದಚ್ಚು
ಮೈಲಾರಿ ಹೆಸರಿಗೆ ಹುಚ್ಚು।
ಲಾಲಿಸಿ ಕೇಳ್ವ ಕೋವಿದ ಜನರಿಗೆ ಮೆಚ್ಚು
ಭೂಲೋಕದೊಳಗೆ ಈ ಕೃತಿಯು ॥೧೪॥*

ಇನ್ನು ಪೇಳುವೆ ಚೆನ್ನಮಲ್ಲನ ಕೃತಿಯನು
ಚೆನ್ನಾಗಿ ಕೇಳಿ ಸಜ್ಜನರು।
ಮುನ್ನಿನ ಪಾಂಡವ ಶೌರ್ಯದ ಪಂಥವ
ಬಣ್ಣಿಸುವೆನು ಧರೆಯೊಳಗೆ ॥೧೫॥

ಈ ಪರಿಯಲ್ಲಿ ಸಿರುಮನು ಪಟ್ಟಣವನು
ತಾ ಪರಿಗ್ರಹಿಸಿ ಆಳುವನು।
ಭೂಪ ಸೋಮೇಶನ ಕರುಣದಿಂದಲಿ
ಆ ಪಟ್ಟಣ ವಿಸ್ತಾರವೇನನೆಂಬೆ ॥೧೬॥

ಮೂಡಣ ಬಾಗಿಲಿಗವ[೮][ನು][೮]ಕಾವಲು
ಬೇಡಿದ ವರವನೆಲ್ಲರಿಗೆ।

೭–೭ ಪ್ಪಾಳದೆ(ಮೂ), *–* ೧೩ ರ ಬಳಿಕ ೧೫ ಎಂದು ಪದ್ಯ ಸಂಖ್ಯೆ ಹಾಕಲಾಗಿದೆ. ನಾವು ೧೪ ಎಂದು ತಿದ್ದಿಕೊಂಡು ಉದ್ದಕ್ಕೂ ಮಾರ್ಪಾಡು ಮಾಡಿದ್ದೇವೆ(ಸಂ), ೮–೮ ಲು(ಮೂ).

ಕೂಡೆ ಕೊಡುವ ಕಲಿ ಕಪ್ಪರ ವೀರಣ್ಣ
ರೂಢಿಗೆ ಪೊಸತಾದ ವೀರ ॥೧೭॥

ಅವನ ಬಾಗಿಲ ಕಳದೊ೯[ಳು]೯ಪೋಗೆ ಎಡದಲ್ಲಿ
ಶಿವನ ಮೋಹದ ಮುದ್ದುಕುವರ।
ಅವರಿವರಂತಲ್ಲ ೧೦[ಬೆನ]೧೦ಕ ಕಾದಿಹ
ಅವನ ಬಣ್ಣಿಸಲಳವಲ್ಲ ॥೧೮॥

ಇತ್ತ ಪಡುವಣ ಭಾಗದ ಬಾಗಿಲೊಳಗಿಹ
ಸತ್ಯಸ್ವರೂಪೆಯೆಂದೆನಿಪ।
ಅತ್ಯಂತ ಭೀಕರದೇಕನಾಥಿಯು ತಾನು
ಪ್ರತ್ಯಕ್ಷವಾಗಿರುತಿಹಳು ॥೧೯॥

ಎರಡನೆ ಬಾಗಿಲ ನಡುವಿರುತಿರವನು
ವರವುಳ್ಳ ಕೊಳಲ ಗೋಪಾಲ।
ಇರದೆ ಬೇಡಿದರಿಗೆ ವರಗಳನೀವನು
ಕರಿಯ ಮೈಲಾರಲಿಂಗೇಶ ॥೨೦॥

ಮುದದಿಂದ ಗ್ರಾಮವ ಕಾಯ್ದುಕೊಂಡಿಹಳೀಗ
ಮದಗಜಯಾನೆ ಮಹಾಕಾಳಿ।
ಕದನಪ್ರಚಂಡೆಯು ಬನದಶಂಕರಿ ತಾಯಿ
*[ವಿಧು]*ಮುಖಿಯವಳೇನನೆಂಬೆ ॥೨೧॥

ಈಶನ ಗುಡಿಯು ವೀರೇಶನಾಲಯವು
೧೧[ನಿರಾಸೆಯ ಮಠ]೧೧ ಹರಿಬವನು।
ದೇಶಕೆ ಪೊಸಬಗೆಯೆನಿಪ ಪಟ್ಟಣದ ವಿ
ಲಾಸವನೇನ ಬಣ್ಣಿಪೆನು ॥೨೨॥

ಇದು ರಾವಣನಿಹ ಲಂಕೆಯೊ ಭಾವಿಸೆ
ಇದು ರಾಮನಿಹ ಕುಮ್ಮಟವೊ।

೯–೯ ಳಗೆ(ಮೂ), ೧೦–೧೦ ಗಮ(ಮೂ), *–* ಇಂದು (ಮೂ), ೧೧–೧೧ ಮೀರಾಶಿಯ ಮಟ್ಟ (ಮೂ).

ಇದು ವೈರಿನೃಪರೆದೆದಲ್ಲಣವೆನಿಸುವು
ದಿದಕೆ ಸಾಟಿಯೆ ಮಿಕ್ಕ ನಗರ ॥೨೩॥

ಶಶಿವೀಧಿ ಸೂರ್ಯ ವೀಧಿಗಳಿಂದ ರಂಜಿಪ
ಪಸರಿಪ ಕೆಲವು ವೀಧಿಗಳು।
ಕುಶಲ ಕೋವಿದರು ವರ್ತಕರಿಂದಲಿ
ಪಸರವೆಸೆದವಂಗಡಿಯು ॥೨೪॥

ಅಂಗಡಿಯೊಳಗುದ್ದು ಕಡಲೆ ಗೋದಿಗಳು
ಧಾನ್ಯಗಳು ಪಣ್ಘಲಾದಿಗಳು।
ಹಿಂಗದೆ ಅನುದಿನ ಮಾರುವ ವ್ಯವಹಾರ
ದಂಗಡಿ ಮೆರೆದ[೧೨][ವಿ][೧೨]ಕ್ಕೆಲದಿ ॥೨೫॥

ಗಂದಿಗ ಸರಕಿನ ಪಸರ ಪೂಮಾಲೆಯು
ತಂದು ಮಾರುವರಂಗಡಿಗಳು।
ಮುಂದೆಸೆಯಲ್ಲಿ ಚಿಪ್ಪಿಗ ಚಿತ್ರ ಕೆಲಸಗ
ಳಿಂದಲೊಪ್ಪುತಿಹುದನೇನೆಂಬೆ ॥೨೬॥

ವಡೆ ಸುಕ್ಕಿನುಂಡೆ ಚಕ್ಕುಲಿ ಕರಜಿಕಾಯಿ
ಕಡುಬು ಎಣ್ಣೊರಿಗೆಗಳನು।
ಅಡಿಗೆಯ ಮಾಡುವ ಬ್ರಾಹ್ಮಣ ಕೇರಿಯೊ
ಳ್ಗೊಡರು ತುಂಬಿಹುದು ಅಲ್ಲಲ್ಲಿ ॥೨೭॥

ಲೇಸಿನ ವಿಟರ ಮೆಚ್ಚಿಸಿ ದಕ್ಕಿದವಳಂತೆ
ಮೋಸದೊಳೊಡವೆಯ ಸೆಳೆದು।
ಬೀಸಿ ಬಿಸುಟ್ಟು ಮಗುಳೊರ್ವನ ಕಾವಂಥ
ವೇಸಿಯರಿಹರೇನನೆಂಬೆ ॥೨೮॥

ಲೆತ್ತ ಪಗಡೆ ಚದುರಂಗ ಜೂಜಾಡುವ
ಉತ್ತಮ ರಾಜಮನ್ನೆಯರು।

೧೨–೧೨ ರಿ (ಮೂ).

ಮತ್ತಾಮತ್ತದಿ ಕೋಳಿ ತಗರ ಕಾದಿಸುತಿಹ
ರರ್ತಿ ಸೋಲಿಸಿತು ನೋಟಕರ ॥೨೯॥

ಇಂತು ಮೆರೆವ ಬೂದಿಹಾಳ ಪಟ್ಟಣವ
ನೆಂತು ಬಣ್ಣಿಪೆನೆನಗಳವೆ।
ಕಂತುಸಮಾನ ಸಿರುಮಭೂವರ ತಾನು
ಅಂತಕನಂತಿರುತಿರ್ದ ॥೩೦॥

ಹರಿಗೆ ಪಾಲ್ಗಡಲು ಸುರಪಗಮರಾವತಿ
ದೊರೆಕೊಂಡಂತೆ ಸಿರುಮಗೆ।
ಸಿರಿಯಿಂದ ಬಲುಹಿಂದ ಚಲದಿಂದಲಾ ಭೂತಿ
ಪುರದೊಳು ನೃಪತಿವೊಪ್ಪಿದನು ॥೩೧॥

ಹರಿಗೆ ಲಕ್ಷುಮಿ ಭಾರತಿ ಚತುರಾನನಗೆ
ಸುರಪತಿಗಾ ಶಚಿದೇವಿ।
ದೊರೆಕೊಂಡಂದದಿ ಸಿರುಮನೃಪಗೆ ಪಟ್ಟ
ದರಸಿಯಾಗಿಹಳು ಚಿಕ್ಕಮ್ಮ ॥೩೨॥

ಅಂಗನೆ ಸಹಿತ ಸಿರುಮ ಸುಖಶರಧಿತ
ರಂಗದೊಳೋಲಾಡುತಿರಲು।
ಮಂಗಳಮಹಿಮನೆನಿಸುವ ಸೋಮೇಶ್ವರ
ಲಿಂಗವನೊಲಿದು ಪೂಜಿಪರು ॥೩೩॥

ಆ ಸೋಮೇಶನ ವರದಿಂದ ಪಡೆದನು
ದೇಶಕಧಿಕ ವೀರರುಗಳ।
ಆ ಸುಕುಮಾರರುದ್ಭವಿಸಲು ಜಗವೆಲ್ಲ
ವೆಸೆದು ಪೊಗಳಿದರೊಲಿದು ॥೩೪॥

ಹಾರ ಪದಕ ಕಂಠಮಾಲೆ ತೊಡರುಗಳು
ತೋರ ಭುಜಗಳಿಂದ ಸೊಗಸಿ।
ವೀರರಿದ್ದರು ಸಿರುಮನ ಮಕ್ಕಳುಗಳು
ಸಾರಸೌಖ್ಯದ ಸೊಬಗಿನಲಿ ॥೩೫॥

ಸರಸ ಸಂಗೀತ ಸಾಹಿತ್ಯ ಸಾಧಕದಿಂದ
ತುರುಗದೇರಾಟಂಗಳಿಂದ।
ಹಿರಿಯ ಮಗನು ಕಾಚನಾಯಕನಿರ್ದನು
ಪರಬಲತಿಮಿರಮಾರ್ತಂಡ ॥೩೬॥

ಮಲೆವರಗಂಡ ಸುಕಲಹಕೋಲಾಹಲ
ಚಲದಂಕಮಲ್ಲನೆಂದೆನಿಪ।
ಬಲಗೈಯ್ಯ ವೀರ ಕುಮಾರಮಲ್ಲನ ಕೀರ್ತಿ
ನಲಿದುದು ಮೂಜಗದೊಳಗೆ ॥೩೭॥

ವೀರಭದ್ರನು ಸೋಮಣ್ಣ ನಂಬೆಣ್ಣನು
ಧಾರುಣಿಯೊಳಗೈವರೊಲಿದು।
ಶೂರರಿಪ್ಪರು ಸಿರುಮನ ಮಕ್ಕಳುಗಳದ
ನಾರು ಬಣ್ಣಿಪರಳವಲ್ಲ ॥೩೮॥

ಬಣ್ಣದುಟಿಯ ಬಲ್ಮುಡಿಯ ಬೊಗಸೆಗಣ್ಣ
ತಿಣ್ಣವೆಂದೆನಿಪ ಬಲ್ಮೊಲೆಯ।
ಹೆಣ್ಣುಮಕ್ಕಳುಗಳಿದ್ದರು ಸಿರುಮಯ್ಯನಾ
ಪುಣ್ಯವೆ ರೂಪಾದಂತೆ ॥೩೯॥

ಅಳಿಯ ತಿಪ್ಪಯ್ಯನು ಅಳಿಯ ಬಸವಯ್ಯನು
ಅಳಿಯ ಬೈರಯ್ಯನೆಂಬವನು।
ತೊಳಗುತಿರ್ದರು ವಿಕ್ರಮದೇಳಿಗೆಯಿಂದ
ಕಳವಳಿಸುತ್ತ ವೈರಿಗಳ ॥೪೦॥

ಅಮ್ಮಮ್ಮ ವೀರಾಧಿವೀರನಗ್ಗಳೆಯನು
ಧರ್ಮಪರನು ನೀತಿಯುತನು।
ತಮ್ಮ ಹೆಗ್ಗರೆ ಮಲ್ಲನಾಯಕನೆಂಬಾತ
ನೆಮ್ಮುಗೆಯವ ಸಿರುಮನಿಗೆ ॥೪೧॥

ನಾಯಕರೆಕ್ಕ[ಟಿ]ಗರು ಬಲುರಾವುತ
ಪಾಯ[೧೩][ಕ][೧೩]ರಿಂದ ಸಂದಣಿಸಿ।

೧೩–೧೩ ತ(ಮೂ)

ದಾಯಾದ್ಯರಿಂದವೊಪ್ಪಿತು ಸಿರುಮನ ಬಲ
ದಾಯವನೇನ ಪೇಳುವೆನು ॥೪೨॥

ತಗರ ಕಾಳಗವು ಮಲ್ಲರ ಹೋರಾಟವು
ಪಗಡೆ ಲೆತ್ತವು ಚದುರಂಗ।
ಮಿಗೆ ಲೆಗ್ಗೆ ಜೂಜು ಚೆಂಡಾಟದಿ ಕುವರರ
ಬಗೆಯನಾರು ಬಣ್ಣಿಪರು ॥೪೩॥

ಸಾಧನೆಯಿಂದ ವೈಹಾಳಿಗಳಿಂದಲಿ
ಓದುವ ಪಾಠಕರಿಂದ।
ವಾದಿಪ ಕವಿಗಮಕಿಗಳಿಂದ ಒಪ್ಪಿದ
ರಾ ಧರಣೀಶನಾತ್ಮಜರು ॥೪೪॥

ಎಲ್ಲಿ ಬಲ್ಲಿದರುಂಟು ಎಲ್ಲಿ ಸುಭಟರುಂಟು
ಎಲ್ಲಿ ಮಹಾವೀರರುಂಟು।
ಅಲ್ಲಿಗೆ ಕಳುಹಿ ಕರೆಸಿಕೊಂಬ ಸಿರುಮನು
ಜೆಲ್ಲಿ ಬಂಗಾರ ಹೊನ್ನಿತ್ತು ॥೪೫॥

ಪೊಡವಿಗೆ ಪೆಸರಾದ ಕಾಲಾಳು ಮೇ*[ಲಾಳು]*
ಕಡುಗಲಿಗಳನಾ ಸಿರುಮ।
ಒಡಂಬಡಿಕೆಯ ಮಾಡಿ ಬೇಡಿದೊಸ್ತವನಿತ್ತು
ಪಡೆದನೀ ಪರಿಯ ಬಲವನು ॥೪೬॥

ಇಂತು ಕುಮರ[೧೪][ರೋ][೧೪]ಲಗದೊಳು ಸಿರುಮನು ಅ
ನಂತ ವೈಭವಗಲಿಂದಿರುತ।
ಸಂತೋಷದಿ ಪ್ರಜೆಗಳ ಪಾಲಿಸುವುದ
ನೆಂತು ಬಣ್ಣಿಪೆನದರಿರವ ॥೪೭॥

ಕೊಲೆ ಕುಟ್ಟು ದಂಡ ಕೊಂಡೆಯ ಸೆರೆ ಸಂಕೋಲೆ
ಅಳಿವನ್ಯಾಯಗಳಿವಕೆ।

– ೪(ಮೂ) ೧೪–೧೪ ನೋ(ಮೂ)

ಒಳಗಾಗದಂತಪ್ಪ ಮಂತ್ರಿ ಕಲ್ಲರಸನಿಂ
ದಿಳೆಯನಾಳುತಲಿರ್ದ ಸಿರುಮ ॥೪೮॥

ತರತರದಿಂದಲಿಕ್ಕಿದ ಬಾಗಿಲುಗಳ
ಕರುವಾಡದ ಮುಂದೆಸೆಯೆ।
ಹಿರಿಯ ಚಾವಡಿ ಮಲ್ಲ ಗರುಡಿಗಳಿಂದಲಿ
ತುರುಗದ ಲಾಯ ಒಪ್ಪಿದುವು ॥೪೯॥

ಬೆಲಗೂರ ಭೈರನಾಯಕನ ಕುವರಿಯನು
ಗೆಲವಿಂದ ಕಾಚೆಂದ್ರಪತಿಗೆ।
ಅಳಿಯ ತಿಪ್ಪಯ್ಯನಾತ್ಮಜೆಯನು ನೋಡಿಯೆ
ಒಲಿದು ಕುಮರಮಲ್ಲಯ್ಯಗೆ ॥೫೦॥

ಆಲಕುರಿಕೆಯ ರುದ್ರಯ್ಯನ ಪುತ್ರಿಯ
ಬಾಲನು ವೀರಭದ್ರಗೆ।
ಮೇಲೆಂಬ ಚಪ್ಪರಗಳನು ಹಾಕಿಸಿ ಬೇಗ
ಲೋಲಾಕ್ಷಿಯರು ಹರುಷದಲಿ ॥೫೧॥

ಮುತ್ತಿನ ಬಾಸಿಂಗ ನವರತ್ನದ ತೊಂಡಿಲು
ಉತ್ತಮ ವಸ್ತ್ರಭೂಷ[ಣ]ದಿ।
ಚಿತ್ತಜ ಸಮರೂಪದ ಮದವಳಿಗರ
ಅರ್ತಿಯಿಂ ಮಾಡಿದರೊಲಿದು ॥೫೨॥

ಭೋರೆಂಬೊ ವಾದ್ಯದಿ ಧಾರೆ ಮೂರ್ತವ ಮಾಡಿ
ತೀವ್ರದಿ ನಾಗೋಲಿಯನು।
ನಾರಿಯರೊಲಿದಾಗ ಧವಳ ಶೋಭಾನದಿ
ಆರತಿಗಳನು ಎತ್ತಿದರು ॥೫೩॥

ಸಂತೋಷದಿಂದವ ನ[ಂ]ಟರು ಕೂಡಿ
ಮುಂತೆ ಊಟವನು ಮಾಡಿದರು।
ಚಿಂತೆಯಿಲ್ಲದೆ ದಾನಧರ್ಮಗಳನು ಮಾಡಿ
ಕಂತುಹರನ ಕರುಣದಲಿ ॥೫೪॥

ಮಕ್ಕಳೆಲ್ಲರಿಗೆ ಸಿರುಮೇಂದ್ರಪ ಬೇಗದಿ
ಅಕ್ಕರಿಂದಲಿ ವಿವಾಹಗಳ।
ಗಕ್ಕನೆ ರಚಿಸಿಯೆ ದಾನಧರ್ಮವ ಮಾಡಿ
ಉಕ್ಕುವ ಸಂತೋಷಗಳಲಿ ॥೫೫॥

ಇಂತೊಪ್ಪುವ ಅರಮನೆಯೊಳು ಸಿರುಮನು ಅ
ನಂತ ವೈಭವದೊಳೊಪ್ಪಿರಲು।
ಮುಂತೊರ್ವನೈತಂದು ಕರಗಳ ಮುಗಿವುತ
ನಿಂತು ಬಿನ್ನಹ ಮಾಡಿದನು ॥೫೬॥

ನಡುನಾಡಗೂಳಿ ನಾಲ್ದೆಸೆ ಮನ್ನೆಯರ ಗಂಡ
ಕಡುಗಲಿ ಅರಿಗಜಸಿಂಹ।
ತಡಮಾಡದೆ ಬೇಂಟೆಗೇಳೆಂದು ಸಿರುಮಗೆ
ನುಡಿದನು ಸೊಗಸು ವಾಕ್ಯಗಳ ॥೫೭॥

ಹೆಚ್ಚಿದ ಮೃಗ ಬೆಳೆದಿಹ ಬೆಳೆಗಳನೆಲ್ಲ
ಬೆಚ್ಚದೆ ತಿನುತಿಪ್ಪವವನು।
ಎಚ್ಚು ಕೆಡಹಿ ನಾಡನುಳುಹೆಂದು ರಾಯಗೆ
ನಿಶ್ಚಯದಿಂದ ಪೇಳಿದನು ॥೫೮॥

ಕೇಳುತಲವಗುಡುಗರೆಯಿತ್ತು ಸಿರುಮಯ್ಯ
ಪೇಳಿಸಿದನು ಬೇಂಟೆಯನು।
ಆಳು ಕುದುರೆ ಬಲವನು ಪೊರಡೆ ಬೇಗ
ತೂಳಿತು ಲಗ್ಗೆವರೆಗಳು ॥೫೯॥

ಬಡಿವಲೆ ಮಿಡಿವಲೆ ಗುಂಟಿವಲೆಗಳಿಂದ
ತಡಕಿವಲೆಯು ಕಣ್ಣಿವಲೆಯು।
ಪಿಡಿಕಲ್ಲಿಯು ಬಡಿಕೋಲೀಟಿಗಳನಾಂತು
ನಡೆಯಿತ್ತು ಬೇಡರ ತಂಡ ॥೬೦॥

ಹುಲಿಗೆ [೧೫][ಮಾ][೧೫]ರಿಯು ಸಾರಂಗಮರ್ದನನೆಂಬ
ಬಲು ಹಂದಿಗೊಂದಣನೆಂಬ।
ಬಲು ಬಿರುದಿನ ನಾಯಿಗಳ ಪಿಡಿದು ಬೇಡ
ಬಲ ನಡೆಯಿತು ಭರದಿಂದ ॥೬೧॥

ಹುಲಿಯ ಬಂಡಿಯು ಸಲಹಿದ ಎರಳೆಗಳಿಂದ
ಹಲವು ಬಗೆ ಪಕ್ಷಿಯಿಂದ।
ಬಲು ಗಿಡುವ ಸಾಳುವಗಳ ಪಿಡಿಕೊಂಡು
ಕಲಿಗಳೊದಗಿತೊಗ್ಗಿನಲಿ ॥೬೨॥

ಪುರದ ರಕ್ಷಣಗೆ ಕಲ್ಲರಸನ ನಿಲಿಸಿಯೆ
ತೆರಳಿದನವ ಬೇಂಟೆಗಾಗಿ।
ಪರಿದುದು ಮಂದಿ ಕುದುರೆ ಕಲಾಳಾಗ
ಉರವಣಿಯಿಂದ ಕಾನನಕೆ ॥೬೩॥

ತೆರಳಿತಲ್ಲಿಂದ ಮೂಡಣದೆಸೆ ಗಾವುದ
ಹರಿಯಜಸುರರಕ್ಷಕನು।
ಪುರಹರ ದಶರಥ ರಾಮೇಶ್ವರನಿಹ
ಗಿರಿಯ ತಪ್ಪಲಿಗೆ ಬೇಂಟೆಯನು ॥೬೪॥

ದಶರಥ ರಾಮೇಶನ ಕಾನನದಲ್ಲಿ
ಎಸೆದಿಹ ನಾನಾ ವೃಕ್ಷಗಳೂ।
ಬಿಸಿಲು ಗಾಳಿಯು ಮಳೆ ಕಾಣದೆ ಅಲ್ಲಿಹ
ಋಷಿ ಸಿದ್ಧ ಗುಹ್ಯಯೇನೆಂಬೆ ॥೬೫॥

ಲಕ್ಕೆ ಅಂಕೋಲೆ ಬಿದರೆ ದೇವದಾರೆಯು
ಕಕ್ಕೆ ತುಂಬುರ ಅರುಟಾಳು।
ಬಿಕ್ಕೆ ಬೆಳವು ನೇರಿಲು ಮಾಮರದಿಂದ
ಕಿಕ್ಕಿರಿದಿಹುದು ಆ ವಿಪಿನ ॥೬೬॥

೧೫–೧೫ ಮ(ಮೂ).

ಗಿಡು ಬಳ್ಳಿ ಮೆಳೆಗಳು ಎಸೆದಿಹ ಜರಿಗಳು
ಹೆಮ್ಮಡು ಹಳ್ಳಕೊಳ್ಳ ತಾನೊಳಗೆ।
ಒಡನೆ ಪೊಕ್ಕಲ್ಲಿ ಬೊಬ್ಬಿಡಲು ಮೃಗಗಳೆದೆ
ಒಡೆಯೆ ಬೇಂಟೆಗಳನಾಡಿದರು ॥೬೭॥

ಹೊನ್ನೆ ಹುಣಿಸೆ ಆಲ ಎಲವ ಪಚ್ಚೇರಿಯು
ಬನ್ನಿ ತರಿಯು ಬೇವುಗಳು
ಕೆನ್ನೆಲ್ಲಿ ಇಪ್ಪೆ ತ್ಯಾಗವು ಬಿದುರುಗಳಿಂದ
ಚೆನ್ನೆಸೆದಿಹುದು ಆ ವಿಪಿನ ॥೬೮॥

ಹುಲ್ಲೆ ಹರಿಣ ಕಾಡೆಮ್ಮೆ [೧೬][ಎಕ್ಕ][೧೬]ಲಮರಿ
ಬಲ್ಲುಕ ಕಡವು ಸಾರಂಗ।
ಬಲ್ಲಿದ ಹುಲಿ ಮೊಲವುಡುಹು ಕಾಡಬೆಕ್ಕನು
ನಿಲ್ಲದೆ ಎಚ್ಚಾಡಿದರು ॥೬೯॥

ಇದೆ ಇದೆ ಎಕ್ಕಲ ಸೊಕ್ಕಿದೆ ನೋಡು
ಪೋಗಿದಕೊ ಸಾರಂಗದ ನೆರವಿ।
ಇದೆ ಪೆಣಗಳ ಸಮೂಹವ ತೆಗೆಯೆಂದು
ಒದಗಿ ಮುತ್ತಿತ್ತು ಬೇಡರುಗಳು ॥೭೦॥

ಮುತ್ತಿದ ಭರಕೆ ತೆರಳಿಯೆ ವರಾಹನು
ಎತ್ತಿ ಬಿಸುಟು ಸೀಳಿ ಕರುಳ।
ಕಿತ್ತು ಸೂರ್ಯಾಡಿತ್ತು ಕವಿ[೧೭][ದ ಮೆಳೆಗಳಲ್ಲಿ][೧೭]
ಮೃತ್ಯುವೆ ರೂಪುಗೊಂಡಂತೆ ॥೭೧॥

ಅಂಡುಗೊಂಡವು [೧೮][ಮೆಳೆ][೧೮]ಯೊಳು ಬಿರುದಿನ ನಾಯಿ
ತುಂಡಿಗೆ ಹೊಯಿದು ಬೇಡರನು।
ದಿಂಡುಗೆಡಹಿ ಬೇಂಟೆಕಾರರನೆಲ್ಲರ
ಬಂಡುಮಾಡಿದುದು ಬೇಸರದೆ ॥೭೨॥

೧೬-೧೬ ಯಕು(ಮೂ).೧೭-೧೭ ಗಮಕಿಗಳಲ್ಲಿ(ಮೂ), ೧೮-೧೮ ಮಣೆ(ಮೂ)

ಇ೧೯[ಟ್ಟಿ]೧೯ಡೆ ಗಿಡುಗ೨೦[ಳಾ]೨೦ಕ್ಷಣ ಬಾರ೨೧[ದು]೨೧ಯೆಂದು
ದಿ೨೨[ಟ್ಟ]೨೨ ತಮ್ಮೊಳಗೆ ಪೊಕ್ಕು।
ಈಟಿಯಿಂದಿರಿ೨೩[ದು ನೂಕಲು]೨೩ ಕಂಡು ನೃಪ ಮೆಚ್ಚಿ
ಕೊಟ್ಟನವಗೆ ಉಡುಗರೆಯ ॥೭೩॥

ಕಟ್ಟೆ ೨೪[ತೋಹು]೨೪ಗಳ ಬರುವ ಮೃಗವನು ಕಂಡು
ಬಿಟ್ಟುರು ಸರಳ ಬೊಬ್ಬಿರಿದು।
ಕೆಟ್ಟೋಡಿದವು ಕೆಲಬಲದಲ್ಲಿ ಅಸು೨೫[ಗಳ]೨೫
ಬಿಟ್ಟುವು ಬಾಣ ಹತಿಯಲಿ ॥೭೪॥

ಬಲೆಯಿಂದ ಬಡಿಕೋಲಿನಿಂದ ಸರಳಿನಿಂದ
ಬಲು ನಾಯಿಗಳಿಂದ ಮೃಗವ।
ಕೊಲ್ಲುತ ಕಟ್ಟುತ ತಡವುತ ಬೇಡರ
ಬಲ ನಡೆಯಿತು ಮುಂದಕಾಗಿ ॥೭೫

ನೆಳಲಿಂದ ಹುವ್ವಿನ ಸ್ಥಳದಿಂದ ಬಹಳದ
ಫಲ೨೬[ಸಂತೆ]೨೬ಯಿಂದ ಸಂಪಿನಲಿ।
ತೊಳಗುವ ಕಳಸ ಗೋಪುರವು ರಾಮೇಶನಾ
೨೭[ನಿಳಯ]೨೭ತೋರಿದುದು ರಾಯನಿಗೆ ॥೭೬॥

ಕಾಣುತ ರೋಮಾಂಚನದಿ ಗ೨೮[ದ್ಗ]೨೮ದ ಪುಟ್ಟಿ
ಪ್ರಾಣ ಬಂದಂತೆ ಆ ಸಿರುಮ।
ಏಣಾಂಕಧರನಿಳಯವ ಪೊಕ್ಕು ಸಿರು೨೯[ಮನು]೨೯
ಮಾಣದೆ ಮೈಯನಿ*[ಕ್ಕಿದ]*ನು ॥೭೭॥

ಜಯ ಜಯ ಸುರಗಣ ಪೂಜಿತ ಸುರವಂದ್ಯ
ಜಯ ಜಯ ಜಗದೀಶ್ವರನೆ।

೧೯–೧೯ ಟ್ಟೀ(ಮೂ), ೨೦–೨೦ ಳ(ಮೂ), ೨೧–೨೧ ದೆ(ಮೂ), ೨೨–೨೨ ಟ್ಟಿ(ಮೂ), ೨೩–೨೩ ದನು ಕುಲು(ಮೂ), ೨೪–೨೪ ತೊವು(ಮೂ),೨೫–೨೫ ಗಾವು(ಮೂ), ೨೬–೨೬ ಸತ್ತಿ(ಮೂ).
೨೭–೨೭ ಯಿಳೆಯ(ಮೂ), ೨೮–೨೮ ದ(ಮೂ), ೨೯–೨೯ ಮಾಗೆ(ಮೂ).*–*ಕ್ಕ (ಮೂ)

ಜಯ ಜಯ ಮೃತ್ಯುಂಜಯ ತ್ರಿಪುರಹರ
ಜಯಯೆಂದು ಎರಗಿದ ಸಿರುಮ ॥೭೮॥

ಕಾಮಹರನೆ ಕರುಣಾಕರ ನಿರ್ಮಳ
ವ್ಯೋಮಕೇಶನೆ ಭೀಮ ಭರ್ಗ।
ಸ್ವಾಮಿ ತ್ರೈಜಗವಂದಿಪ ಜಯ ದಶರಥ
ರಾಮೇಶ ಪಾಲಿಪುದೆನ್ನ ॥೭೯॥

ಶಶಿಮೌಳಿಗೆ ಧೂಪ ದೀಪ ಗಂಧಾಕ್ಷತೆ
ಕುಸುಮ ತಾಂಬೂಲ ಪಣ್ಬಲವ।
ಶಶಿಧರಗರ್ಪಿಸಿ ತೀರ್ಥಪ್ರಸಾದವ
ಒಸಗೆಯಿಂದ ಕೊಂಡ ಸಿರುಮ ॥೮೦॥

ಈಶ ಪ್ರಸಾದ ತೆಕ್ಕೊಂಡು ಹರುಷದಿ ರಾ
ಮೇಶ ಬೀಳ್ಕೊಟ್ಟನು ಮುದದಿ।
ಲೇಸೆನಿಸುವ ಕಾನನದೊಳು ಸಿರುಮಯ್ಯ ವಿ
ಲಾಸದಿ ಬೇಂಟೆಯೊಳಿರಲು ॥೮೧॥

ಸಿರುಮ ಬೇಂಟೆಯೊಳಿರುತಿರಲಾಗ
ಹಿರಿಯೂರ ಕಸವನೆಂಬವನು।
ಇರದೆ ಎಲ್ಲವನು ಕೇಳಿರ್ದ ತನ್ನ ಸೀಮೆಯೊಳು
ಉರವಣಿಯಿಂದ ಪೊಕ್ಕುದನು ॥೮೨॥

ಅಳುಕದೆ ನಮ್ಮ ಸೀಮೆಯೊಳು ಸಿರುಮೇಂದ್ರಪ
ಒಳಪೊಕ್ಕು ನೇರಿದಕೇನು।
ಪ್ರಳಯಕಾಲವ ಮಾಡುವ ತನಗೆನುತಲಿ
ಕಳುಹಿದನೋರ್ವ ಊಳಿಗವ ॥೮೩॥

ಬಂದನವನು ಭರದಿಂದ ಸಿರುಮನಿಗೆ
ವಂದಿಸಿ ಕರಗಳ ಮುಗಿದು।
ಎಂದನು ಕಸವನೃಪತಿ ಆಡಿ[ದ] ಮಾತ
ಒಂದು ಉಳಿಯದೆ ಪೇಳಿದನು ॥೮೪॥

ನಮ್ಮ ಸೀಮೆಯೊಳು ಬೇಂಟೆಯು ಬೇಡ ಸಿರುಮಯ್ಯ
ನಿಮ್ಮ ಸೀಮೆಗೆ ತೆರಳೆನಲು।
ಹಮ್ಮೀನ ನುಡಿಯು ನಮ್ಮೊಡನೆನುತಲಿ
ಗಮ್ಮನೆ ಬೈದು ನೂಕಿಸಿದ ॥೮೫॥

ನೊಂದವನೈತಂದು ಕಸವನೃಪನ ಕೂಡೆ
ನಿಂದು ಬಿನ್ನಹ ಮಾಡಿದನು।
ಕೊಂದು ನೂಕಿಸಿದನು ಸಿರುಮಭೂವರನೆನೆ
ಬಂದುದು ಕೋಪವಾಕ್ಷಣದಿ ॥೮೬॥

ಗೊಲ್ಲ ಸಿರುಮ ನಮ್ಮ ಸೀಮೆಯ ಮೆಟ್ಟಲು
ಬಲ್ಲಿದನೇ ಅದಕೇನು।
ನಿಲ್ಲದೆ ಬರಹೇಳು ಮಂದಿ ಕುದುರೆಯ ನೆಂ
ದಲ್ಲಿಗಲ್ಲಿಗೆ ಕಳುಹಿದನು ॥೮೭॥

ಅತ್ತ ಕಸವನೃಪ ಬಲಗೂಡುತಲ್ಲಿ[ರೆ]
ಇತ್ತ ಸಿರುಮ ಬೇಂಟೆಯಿಂದ।
ಪೊತ್ತುಗಳೆದು ತಿರುಗಿದನಾಗ ಬೇಗದಿ
ಹೊತ್ತ ಮೃಗದ ಹೊರೆ ಸಹಿತ ॥೮೮॥

ಮರಿ[೩೦][ನ][೩೦]ರಿ ಹುಲ್ಲೆ ಕರಡಿ ಕಾಡಬೆಕ್ಕನು
ಎರಳೆಯು ಕಡವಿ ಕಾಡೆಮ್ಮೆ।
ತರುವಿಂದ ಸೀಳ್ನಾಯಿ ಮೊಲವು ಮುಂಗುಲಿಗಳ
ಹೊರೆ ತೆರಳಿತು ಪುರಕಾಗಿ ॥೮೯॥

ಹಂಗ ಹಸುಬ ಗೂಬೆ ಚಂಬೋತ ಲಾವುಗೆ।
ಕಂಗೊರಳಿನ ನವಿಲುಗಳು।
ಹಿಂಗದೆ ಬಗೆ ಬಗೆ ಹೊರೆಗಳು ತೆರಳ್ದವು
ಮುಂಗಡೆಯಲಿ ಸಿರುಮಯನ ॥೯೦॥

೩೦–೩೦ ನಾ(ಮೂ)

ಬಂದು ಪೊಕ್ಕನು ಬೂದಿಹಾಳ ಪಟ್ಟಣವನು
ಇಂದುಧರನ ಸೇವಕನು।
ಬಂದರಮನೆಯ ಬಾಗಿಲೊಳು ಸಿರುಮೇಂದ್ರಪ
ನಿಂದು ಮನ್ನೆಯರನು ಕಳುಹಿ ||೯೧||

ಅರಸು ಬಂದುದನರಿದರಿತು ಸಂಭ್ರಮದಿಂದ
ಸರಸಿಜಮುಖಿಯು ಚಿಕ್ಕಮ್ಮ।
ತರಸಿದಳಾರತಿಗಳನೆತ್ತಿ ಬೇಗದಿ
ಹರಿಣಲೋಚನೆಯರ ಕೈಯ ||೯೨||

ತುಂಬಿಗುರುಳ ಅಂಬುಜಮುಖಿಯರುಗಳು
ಬಿಂಬಾಧರದ ನಾರಿಯರು।
ಪೊಂಬೊ[೩೧][ಗ][೩೧]ರಿಯ ಕುಚದ ಸೊಬಗಿಯರು
ಸಂಭ್ರಮಿಸಿದರೊಗ್ಗಿನಲಿ ||೯೩||

ಉಂಗು[ರ]ವಿಡಿ ನಡುವಿನ ಬಲ್ಮುಡಿಗಳ
ತುಂಗಕುಚದ ನಳಿತೋಳ।
ಭೃಂಗಕುಂತಳೆಯ[೩೨][ರು][೩೨] ಭಾವಕಿಯರಾರತಿಗಳ
ಹಿಂಗದೆತ್ತಿದರು ರಾಯನಿಗೆ ||೯೪||

ಇಂದುವದನೆಯರಾರತಿಗಳ ಕೈಕೊಂಡು
ಬಂದು ಹೊಕ್ಕನು ಅರಮನೆಯ।
ಮಿಂದು ಭೋಜನಮಾಡಿ ಸುಖಸಂತೋಷದಿ ಆ
ನಂದದೊಳಿರುತಿರ್ದ ಸಿರುಮ ||೯೫||

ಕಿನ್ನರಿ ವೇಣುದಂಡಿಗೆಗಳ ಪಿಡಿಕೊಂಡು
ಚೆನ್ನೆಯರುಗಳ್ಕೈ ತಂದು।
ಮನ್ನೆಯ ಸಿರುಮನ ಮುಂದೆ ನುಡಿಸಲಾಗ
ಮನ್ನಿಸಿ ಉಡುಗರೆಯಿತ್ತ ||೯೬||

೩೧–೩೧ X(ಮೂ), ೩೨–೩೨ ರ(ಮೂ)

ಕವಿ ಗಮಕಿಗಳು ವಾದಿಗಳು ವಾದಿತ ಜನ
[೩೩][ನವ][೩೩]ರಸವರಿವ ಭಾವಕರ।
ಸವಿ ನುಡಿಗೇಳಿ ಸಿರುಮನೇಳ್ವ ಸಮಯಕ್ಕೆ
ರವಿಯು ಮುಳಿಗಿದ ಪಡುಗಡಲ ॥೯೭॥

ಮುತ್ತ[೩೪][ಡ][೩೪]ಸಿದ ಸಂಜೆಗೆಂಪ ನುಂಗಿದ ಕಾ
ರ್ಗತ್ತಲೆಯನು ನುಂಗಲೆಂದು।
*[ಬಿ]*ತ್ತರದಿಂದ ಮೂಡಿದ ಕಣ್ಗೆ ಕ್ಷೀರಾಬ್ಧಿ
ಪುತ್ರ ನಳಿನಮಿತ್ರ ನಲಿದು ॥೯೮॥

ಅಂತಾ ಸಮಯದೊಳಗೆ ಸಿರುಮೇಂದ್ರನು
ಕಂತುಹರನ ಭಜಿಸುತಲಿ।
ಸಂತೋಷ ಸುಖನಿದ್ರೆಗೈವ ಠಾವಿಗೆ
ಅಂತಾದುದು ಸಂಧಿ ಸಮನು ॥೯೯॥[೩೫]

❖❖

೩೩–೩೩ ವರ(ಮೂ), ೩೪–೩೪ ಡಿ (ಮೂ), *–* ಚಿ(ಮೂ), ೩೫+ಅಂತು ಪ್ರಥಮದ ಸಂಧಿ ೧ಕ್ಕಂ ಮಂಗಳಂ ಮಹಾಶ್ರೀ.

ಸಂಧಿ : ಎರಡು

[೧]ವೇದವ[೨][ದ][೨]ರಸಿ ಕಾಣದ ಶಾಸ್ತ್ರಾಗಮ
ಭೇದಿಸದಿಹ[೩][ಫ][೩]ನಮಹಿಮ।
[೪][ವಾ][೪]ದಿಪ ಹರಿಬ್ರಹ್ಮಾದಿಗಳಿ[೫][ಗ][೫]ಗೋಚರ
ನಾದ ಸೋಮೇಶ ರಕ್ಷಿಪುದು ॥೧॥

ಕತ್ತಲೆ ಪರಿಯೆ ನೈದಿಲು ಸೊಂಪು ಮುರಿಯೆ
ತಂಪೆತ್ತಿ ತಾವರೆ ಬಯಿದೆರೆಯೆ।
ಬಿತ್ತರದಿಂದ ತುಂಬಿಗುರುಳು ಮೆರೆಯೆ [೬][ಪೊಳೆ][೬]
[೭][ದೆ][೭]ತ್ತಲು ರವಿಯು ಮೂಡಿದನು ॥೨॥

ಉದಯದೊಳಗೆ ಮುಖಮಜ್ಜನವನು ಮಾಡಿ
ಮದನಾರಿಯ ಪೂಜೆಗೈದು।
ಮುದದಿಂದ ನಿತ್ಯದಾನವ ಬ್ರಾಹ್ಮರಿಗಿತ್ತು
ಚೆದುರಿಂದ ಪೊರಟ ಚಾವಡಿಗೆ ॥೩॥

ಮಂಡಿಸಿದನು ಅರಿಮನ್ನೆಯ ತಿಮಿರಮಾ
ರ್ತಂಡ ಗದ್ದುಗೆಯೊಳಗೊಲಿದು।
ಚಂಡವಿಕ್ರಮ ಸಚಿವ ರಾಜಪುತ್ರರು
ತಂಡದಿಂದೋಲಗವೆಸೆಯೆ ॥೪॥

೧+ ಶ್ರೀಗಣಾಧಿಪತಯೆ ನಮಃ। ಶ್ರೀಶಾರದಾಂಬಯೆ ನಮಃ॥
ಶ್ರೀ ಮೈಲಾರಲಿಂಗಸ್ವಾಮಿ ಪಾದಾರವಿಂದವೆ ಗತಿ।
ಗುರುವೆ ಗತಿ॥ಪದನು॥ (ಮೂ).
೨–೨ ನ(ಮೂ), ೩–೩ ಗಾ(ಮೂ), ೪–೪ X (ಮೂ), ೫–೫ X(ಮೂ), ೬–೬ ಬಾಳೆ(ಮೂ), ೭–೭ ವೆ(ಮೂ).

ಮುಂದುವರಿವ ಸಂತಸದಿಂದ ಸಿರುಮಯ್ಯ
ಬಂದ ಮಂತ್ರಿಗಳ ಸಚಿವರ।
ಹೊಂದಿ ಗದ್ದುಗೆಯಲ್ಲಿ ಕುಳ್ಳಿರಿಸುತ ಆ
ನಂದದೊಳಿರ್ದ ಓಲಗದಿ ॥೫॥

ಇತ್ತಲು ಸಿರುಮನೋಲಗದೊಳಿರುತಿರೆ
ಅತ್ತಲು ಕಸವನಾಯಕನು।
ಸುತ್ತಣ ಸೀಮೆಯ ಕೂಟವ ಕರಸಿದ
ಮತ್ತಲ್ಲಿ ಕಾಳಗಕೆಂದು ॥೬॥

ಕರವಾಳು ಕಕ್ಕಡ ಕಂಡೆಯ ಕಡಿತಲೆ
ಸುರುಗಿ ತೋಮರ ಪಿಂಡಿವಾಳ।
ಹಿರಿಯುಬ್ಬಣ ಲೌಡಿಗಳ ಕರದೊಳಾಂತು
ಬಿರುದಿನ ಕಟ್ಟಿಗರೊಗ್ಗಿನಲಿ ॥೭॥

ಬೆನ್ನ ಬತ್ತಳಿಕೆ ಕನ್ನದ ಕಡಕನ ಜಲ್ಲಿ
ಹೊನ್ನ ಮೋಹಳದ ಕಡಾರ।
ಚಿನ್ನ ಕಟ್ಟಿನ ಬಿಲ್ಲವರೊದಗಿತ್ತು
ಸನ್ನೆ ಜಾಗಟೆವೈಸುತಲಿ ॥೮॥

ಗಡಿಯ ೮[ತಾಣೆಯಗ]೮ಳಿಗೆ ಮತ್ತೋಡು
ಕಡುಗಲಿ ಸಿರುಮನ ಸೀಮೆ।
ನಡೆಯಿತ್ತು ಹತ್ತು ಸಾವಿರ ಕಲಾಳಾಗ
೯[ಹೊಡೆ]೯ವ ವಾದ್ಯದ ರಭಸದಲಿ ॥೯॥

ಚೂಣಿಯ ಮುಂದಿಹ ಕರು ದನ ತುರುಗಳ
ಕೋಲಾಹಲವು ಮಸಗಿದುದು।
ಗೂಳೆಯದೆಗೆದವು ಹಳ್ಳಿಪಳ್ಳಿಗಳಾಗ
ಆಳು ಬಂದಿತ್ತು ಸಿರುಮನಿಗೆ ॥೧೦॥

೮–೮ ಡಂಣ್ಯಯಗಾ(ಮೂ), ೯–೯ ವಡ(ಮೂ).

ಮಂಡಲಪತಿ ಕೇಳು ಕಸವನೃಪಾಲನ
ದಂಡು ಬಂದುದು ನಮ್ಮ ಮೇಲೆ।
ಕಂಡ ಮುಖದಿಹ ಕರು ದನ ತುರುಗಳ
ದಿಂಡೆ[೧೦][ಯಾ][೧೦]ಳುಗಳುರವಣಿಸಿ ॥೧೧॥

ಪೇಳಿದ ನುಡಿಯ ಕೇಳುತಲಾಗ ಸಿರುಮಯ್ಯ
ತಾಳಿದ ಉಗ್ರ ಕೋಪವನು।
ಕಾಳಗ[೧೧][ಕ][೧೧]ತುಳಭಟರ ಕರೆಸಿದನಾಗ
ತೂಳಿತು ಲಗ್ಗೆವರೆಗಳು ॥೧೨॥

ಕರೆಯಿರೊ ಬೆಲಗೂರ ಭೈರನಾಯಕನನು
ಕರೆಯಿರೊ ತಮ್ಮ ಮಲ್ಲಯನ।
ಕರೆಯಿರೊ ಕಂದ ಕಾಚನ ಮಗ ಮಲ್ಲನ
ಧುರಗಲಿ ವೀರಭದ್ರನನು ॥೧೩॥

ಪೊಡವಿಯೊಳಗೆ ಪೆಸರುಳ್ಳ ಬಸವಯ ನಂಬಣ್ಣ
ನಿಡುಗಟ್ಟುದ ನಾಗರಾಜನನ।
ದೃಢಗಲಿಯೆಗ್ಗರೆ ಚನ್ನನಾಯಕನವ
ರೊಡನೈತಂದರಾಹವಕೆ ॥೧೪॥

ಕರಿಗೆ[೧೨][ಗ][೧೨]ರುವ ಹರಿಯಂತೆ ಹರಿಣಗಳ
ನೆರವಿಯ ಕಂಡು ಬೇಗದಲಿ।
ಪರಿದೈದುವ ವ್ಯಾಘ್ರನಂತೆ ಸುಭಟರಾಗ
ಉರವಣಿಸಿತು ಬಹಳದಲಿ ॥೧೫॥

ಸೊಕ್ಕಿದ ಮದಕರಿಯಂತೆ ಸುಭಟರಾಗ
ಇಕ್ಕೆಲದಲ್ಲಿ ಬೊಬ್ಬಿರಿದು।
ಇಕ್ಕಿದ ಕಾಲ ತೊಡರುಗಳುಲಿಯೇರ*[ಲು]*
ಧಕ್ಕಡಿಗರು ಒದಗಿದರು ॥೧೬॥

೧೦–೧೦ ಯೊ(ಮೂ), ೧೧–೧೧ ಕು(ಮೂ), ೧೨–೧೨ ದ(ಮೂ), *–* ನು(ಮೂ).

ಹಕ್ಕರಿಕೆಯ ಮೇಲಿಕ್ಕಿದ ಜೋಹದ
ಹೊಕ್ಕುಳ ಗಂಟೆಗಳಿಂದ।
ಮುಕ್ಕಣ್ಣ ಬಲ್ಲೆಹ ಬಹಳ ಬಿರುದಿನ
ಎಕ್ಕಟಿಗರು ಒದಗಿದರು ॥೧೭॥

ಹಿಂಡು ಮನ್ನೆಯ ಕೋಲಾಹಲ ಅರಿಗಳ
ಗಂಡಭೇರುಂಡನೆಂದೆನಿಪ।
ಮಂಡಲೇಶ್ವರ ಮಾನ್ಯ ಸಿರುಮ ಪೊರಟನಾಗ
ಕೊಂಡಾಟದಿಂದ ಸಂಭ್ರಮದಿ ॥೧೮॥

ಬಂದು ಕಂಡರು ಬಸವೇಂದ್ರನ ಬಹಳದ
ಮಂದಿ ಕುದುರೆಗಳ ಪವುಜ।
ಕೊಂದು ಭೂತಗಳಿಗೆ ಬಲಿಯನಿಕ್ಕುವೆವು ತಾ
ವೆಂದು ನಡೆದರು ಮೋಹರಿಸಿ ॥೧೯॥

ಕಾಣುತ ಚೂಣಿಯ ಮಂದಿ ಎಚ್ಚಾಡಿತ್ತು
ಕ್ಷೋಣೀಶನ ಮುಂಗಡೆಯ।
ಗೋಣಮುರಿದು ತೊಂಡೆಗರುಳು ಸುರಿಯಲಾಗ
ಹೂಣಿದರಂಬಿನಂಬುಧಿಯ ॥೨೦॥

ತುಳಲಿಗೆಯಂಬು ಮುಮ್ಮೊನೆಯಂಬು ಬೋಳೆಯ
ಬಲು ಸರಳುಗಳಿಂದ ಭಟರು।
ಅಳುಕದೆ ಎಚ್ಚಾಡಿದರು ಉಭಯಬಲ
ಹೊಳಿಕೆಯ ಭಟರು ಮೂದಲಿಸಿ ॥೨೧॥

ಒದಗಿತು ಹರಿಗೆಯ ಬಲ ಬೊಬ್ಬೆಗಳಿಂದ
ಕದನಗಲಿಗಳುರವಣಿಸಿ।
ಕದುಬಿ ತಿವಿದು ಪೊಯ್ದಾಡಿತುಭಯಬಲ
ಅದುಭುತವಾಯ್ತು ಸಂಗ್ರಾಮ ॥೨೨॥

ಇಕ್ಕಿದ ಲಾವಣಿಗೆಯ ತೆಗೆಯದೆ ರಣ
ದಕ್ಕಡೆಯರು ಉರವಣಿಸಿ।

ಸಿಕ್ಕಿದರೆದೆಯಲ್ಲಿ ಸುರಗಿಯ ರೋಷದಿ
ಪೊಕ್ಕಿರಿದರು ಸಬಳದಲಿ ॥೨೩॥

ಉರುಬಿತು ಉರವಣೆಯಿಂದ ರಾವುತರಾಗ
ಳಿರಿದರು ಇದಿರಾಂತ ಭಟರ।
ಮುರಿದರು ಸಿರುಮನ ಬಲವಿತ್ತಲತ್ತ ಬೊ
ಬ್ಬಿರಿದರು ಕಸವನ ಭಟರು ॥೨೪॥

ಮುರಿದು ಬರುವ ಬಲವನು ಕಂಡು ಸಿರುಮಯ್ಯ
ಸೆರಗದೋರಲು ನಿಜಬಲಕೆ।
ಗರಿಗಟ್ಟನಿಂದುದಲ್ಲಿಯದಲ್ಲಿ ಸುಭಟರು
ಸುರಿದರಂಬಿನ ಮಳೆಗಳನು ॥೨೫॥

ಬಿಡಿಸಿಕೊಂಡರು ಸಿರುಮನ ಮೈಗಾವಲು
ಕಡುಗಲಿಗಳುರವಣಿಸಿ।
ಹೊಡೆಯೆ ಸಿರಗಳು ಕತ್ತರಿಸಿ ಬೀಳಲು ರಕ್ತ
ಮಡುಗಟ್ಟಿತು ರಣದೊಳಗೆ ॥೨೬॥

ತಂಬಟ ಗಿಡಿಬಿಡಿ ಕೊಂಬು ಕಾಳೆಯು ರವುಡೆ
ಬೊಂಬಳಿಗಳ ರಭಸದಲಿ ।
ಕುಂಭಿನಿ ನಡುಗೆ ಬೊಬ್ಬಿರಿದು ಕುಮಾರರು ಆ
ಡಂಬರದಿಂದಲೇರಿದರು ॥೨೭॥

ಒಂದು ಕಡೆಯ ಬೆಲಗೂರ ಭೈರಯ್ಯನು
ಒಂದು ಕಡೆಯ ರಾವುತರು।
ಒಂದು ಕಡೆಯ ಕುಮಾರ ಮಲ್ಲಯ್ಯನು
ಮುಂದುಗೆಡಿಸಿದರು ಬಲವ ॥೨೮॥

ಪರಬಲಾಂತಕ ಕುಮಾರ ಮಲ್ಲಯ್ಯನು
ತುರಗವನೇರಿ ತಿವಿಯಲು।
ಹೊರಳಿಯೊಡೆದು ಕಂಡಕಡೆಗೆ ಪರಿದರಾಗ
ಹರಿಗೆ ಕತ್ತಿಗಳನು ಬಿಸುಟು ॥೨೯॥

ತುಡುಕಲೊಡ್ಡಿದ ಹಿರಿಯೂರ ಕಸವೇಂದ್ರನ
ಪಡೆ ಮುರಿದುದು ಬಹಳದಲಿ।
ಪಿಡಿದರು ನೂರು ಕುದುರೆಯ ಹಿಡಿಯಾಳನು
ಹೊಡೆದ ತಲೆಯು ಲೆಕ್ಕವಿಲ್ಲ ॥೩೦॥

ಮುಂಡದ ಮಯ ರುಂಡದ ಮಯ ರಕುತದ
ಜೊಂಡಿನ ಮಯ ಕೈಕಾಲ।
ತುಂಡಿನ ಮಯ ತೊಂಡೆಗರುಳುಮಯಗಳಿಂದ
ಕಂಡದ ಮಯವಾಯಿತಲ್ಲಿ ॥೩೧॥

ಪಿಡಿದ ಕುದುರೆ ಕಾಲಾಳನೆಲ್ಲವ ತಂದು
ಕಡುಗಲಿ ಸಿರುಮಗೊಪ್ಪಿಸಲು।
ಹಿಡಿಹೊನ್ನ ಕಡೆಯ ಕಂಠಮಾಲೆಯ
ತಡೆಯದಿತ್ತನು ಸುಭಟರಿಗೆ ॥೩೨॥

ಬಿಟ್ಟನು ಹಿಡಿಯಾಳ್ಗಳ [ಸಿರುಮ]ನೃಪ
ನೆಟ್ಟಿಸಿ ತಿರುಗಿದನಾಗ।
ಬಿಟ್ಟ ಸೂಟಿಯೊಳಾಗ ಬಂದು ಪೊಕ್ಕನು ತನ್ನ
ಪಟ್ಟಣವ ಬೂದಿಹಾಳ ॥೩೩॥

ಬಂದರಮನೆಯ ಬಾಗಿಲೊಳು ಸಿರುಮಯ್ಯ
ಮಂದಿ ಕುದುರೆಗಳ ಕಳುಹಿ।
ಅಂದು ಕರೆಸಿ ಅಧಿಕಾರಿ ಲಿಂಗಯ್ಯನ
ಒಂದು ಲಾಯವ ಕಟ್ಟಿಸೆಂದ ॥೩೪॥

ಕರವ ಮುಗಿದು ಕಳುಹಿಸಿಕೊಂಡು ಲಿಂಗಯ್ಯ
ಕರೆಸಿದ ಕಾಮಾಟದವರ।
ವಿರಚಿಸಿದನು ತುರುಗದ ಆಲಯವನು
ಹಿರಿಯೂರ ಲಾಯವೆಂಬುದನು ॥೩೫॥

ಅತ್ತಲವನ ಕಳುಹುತ ಭೂಪೋತ್ತಮ
ಚಿತ್ತೈಸಿದನರಮನೆಗೆ।

ಎತ್ತುವರಾರತಿಗಳನೇಕವ ಕೈಕೊಂಡು
ಅರ್ತಿಯೊಳಿರುತಿರ್ದ ಸಿರುಮ ॥೩೬॥

ಮುಂದುವರಿವ ಸಂತಸದಿಂದ ಸಿರುಮಯ್ಯ
ನಂದನರುಗಳೊಡಗೂಡಿ।
ಬಂದು ಚಾವಡಿಯಲ್ಲಿ ಸಚಿವ ಕುಮಾರರ
ಸಂದಣಿಯೋಲಗವೆಸೆಯೆ ॥೩೭॥

ಅತ್ತ ಮುರಿದು ಹೋದ ಕಸವನೃಪತಿ ತನ್ನ
ಆಪ್ತ ಮಂತ್ರಿಗಳನು ಕರೆಸಿ।
ಚಿತ್ತದೊಳಾಳೋಚಿಸಿಕೊಂಡು ನುಡಿದನು
ತತ್ತ ಕಾರ್ಯದ ಹೊರಿಗೆಯನು ॥೩೮॥

ಕೊಟ್ಟವಾದುದು ನಡುನಾಡೊಳು ಗೊಲ್ಲನ
ಪಟ್ಟಣವು ಬೂದಿಹಾಳ।
ಕುಟ್ಟಿ ಕೋಲಾಹಲ ಮಾಡುವೆನೆಂದು
ತೊಟ್ಟನವನು ಪಂಥವನು ॥೩೯॥

ತನ್ನ ಸಮನಿಂದ ದೊರೆ ದೊರೆಗಳಿಗಾಗ
ಚೆನ್ನಾಗಿ ಬರೆಸಿ ಲೇಖನವ।
ಪನ್ನವಳಿಗೆ ಕಳುಹಿದ ವೇದರಾಜಗೆ
ಮನ್ನೆಯ ಕಸವನೃಪಾಲ ॥೪೦॥

ಬರೆ ಹಾರನಳ್ಳಿಯ ಕೇಶವರಾಜಗೆ
ಬರೆ ಕಂದಿಕೆರೆಯ ಚಿಟ್ಟೆಗೆ।
ಬರೆ ಹಾಲಕುರಿಕೆಯ ರುದ್ರರಾಜಯ್ಯಗೆ
ಬರೆ ಎಕ್ಕಟಿಯ ಗಂಗಯಗೆ ॥೪೧॥

ಬಂದರು ಮಣಿಹಾರರು ಲೇಖನಗಳ
ತಂದು ಒಪ್ಪಿಸಿದರಾಕ್ಷಣದಿ।
ಅಂದೋದಿಸಿಕೊಂಡು ದೊರೆ ದೊರೆಗಳು ತಾವು
ಒಂದಾಗಿ ಮಾತಾಡಿದರು ॥೪೨॥

ಗೊಲ್ಲ ಸಿರುಮನ ಕೆಡಿಸಿದಲ್ಲದೆ ನಮ
ಗಿಲ್ಲ ಅರಸುತನಗಳು।
ಸೊಲ್ಲೀ ವೇದರಾಜನು ಕೇಳಿ ಹುಳಿಯಾರಿ
ನಲ್ಲಿ ಬಿಟ್ಟನು ಪಾಳೆಯವ ॥೪೩॥

ಅರಸುಮಕ್ಕಳು ಸಹದಿಂದಲಿ ಹಿರಿಯೂರ
ದೊರೆ ಕಸವಯ್ಯ ತಾನಾಗ।
ತುರಗವು ಮೂರು ಸಾವಿರ ಕಾಲಾಳು
ನೆರೆದುದೈವತ್ತುಸಾವಿರವು ॥೪೪॥

ಅತ್ತಲೆಕ್ಕಟಿ ಗಂಗಯ್ಯನು ಭರದಿಂದ
ಮುತ್ತಿದ ಸಿಂಗಟಿಗೆರೆಯ।
ಸುತ್ತಣ ಜಗಳವ ಕೇಳಿಯೇರಿರಿ[೧೩][ವನು][೧೩]
ಮತ್ತಕುಂಜರ ಸಿರುಮೇಂದ್ರ ॥೪೫॥

ಬೂದಿಹಾಳಿನ ಸೀಮೆ ಸಿಂಗಟಿಗೆರೆ ಮುತ್ತಿ
ಕಾದಲೆಕ್ಕಟಿಯ ಗಂಗಯ್ಯ।
ಮೇದಿನಿಪತಿ ಸಿರುಮನು ತನ್ನ ಬಲದೊಳ
ಗಾಯಿದ ನಚ್ಚಾಳ ಕುದುರೆಯ ॥೪೬॥

ಮೇಲು ಹುಯ್ಯಲಬಿದ್ದು ಗಂಗೆನಾಯಕನನು
ಕಾಲುಗೆಡಿಸಿ ರಣದೊಳಗೆ।
ತೋಳಬಲುಹ ತೋರೆನುತ ಸಿರುಮೇಂದ್ರಪ ಕ
ಟ್ಟಾಳುಗಳನು ಕಳುಹಿದನು ॥೪೭॥

ಕಳುಹಿದನಳಿಯ ಮಕ್ಕಳ ಪರಿವಾರವ
ಬೆಲಗೂರ ಭೈರನಾಯಕನ।
ಮಲಪರ ಗಂಡ ಕುಮಾರ ಮಲ್ಲಯ್ಯನ
ಕಳುಹಿದ ಸಿಂಗಟಿಗೆರಿಗೆ ॥೪೮॥

೧೩–೧೩ ವಾನ(ಮೂ).

ಮಾರಾಂತರ ಗಂಡನಹುದೆಂದು ಬಿರುದಿನ
ಕಾಳೆ ಚೀರಿದವು ಆಕ್ಷಣದಿ।
ಮೀರಿ ನಡೆಯೆ ಪವುಜು ಕಂಡರಿಗಳೆದೆಗೆ ಭೀತಿ
ದೋರಿತು ಕಡು ರಭಸದಲಿ ॥೪೯॥

ಕಂಡರು ಮಂತ್ರಿ ಕಾದುವ ಅರಿಸೇನೆಯ
ಮಂಡಲೇಶ್ವರ ಸಿರುಮಯ್ಯ।
ಚಂಡವಿಕ್ರಮರೇರಿ ಕಡಿಯಲೋಡಿತು ಹುಲಿ
ಕಂಡ ಹುಲ್ಲೆಗಳ ಅಂದದಲಿ ॥೫೦॥

ಹುತ್ತವನೇರಿ ಹುಲ್ಲನು ಕಚ್ಚಿ ಮರಗಳ
ಹತ್ತಿ ಜೀವಗಳಾಸೆಯಿಂದ।
ಒತ್ತರಿಸುವ ಮೆಳೆಗಳ ಪೊಕ್ಕಡಗಿಸಿತು
ಕತ್ತಿಯ ಕೈದುಗಳ ಬಿಸುಟು ॥೫೧॥

ಕೆಟ್ಟೋಡಿತು ಕೆಲಬರು ಕೆಲಬರು ಬಾಯ
ಬಿಟ್ಟರು ಬಾಣಹತಿಯಲಿ।
ಬೊಟ್ಟ ಕಚ್ಚಿದರ ಕುಮಾರ ಮಲ್ಲಯ್ಯನು
ಬಿಟ್ಟು ಕಳುಹಿದನು ನಗುತ ॥೫೨॥

ಹೊಡೆದರಿನ್ನೂರು ತಲೆಯ ಧರ್ಮಗಾಳೆಯ
ಪಿಡಿಸಿದನಾಗ ಮಲ್ಲಯ್ಯ।
ಕಡಿದ ರಕ್ತವ ಭೂತವೇತಾಳ ಮರುಳ್ಗಳು
ಕುಡಿದು ಪರಸಿದವಾಕ್ಷಣದಿ ॥೫೩॥

ಕುಟ್ಟಿದ ತಲೆಯನೆಲ್ಲವನೊಂದುಳಿಯದೆ
ಕಟ್ಟಿಸಿದನು ಕಂಬಿಗಳನು।
ಬಿಟ್ಟಿಯವರ ಕೈಯ ಹೊರಿಸಿ ತಿರುಗಿದನು
ಪಟ್ಟಣಕಾಗಿ ಬೇಗದಲಿ ॥೫೪॥

ಅತ್ತಲೀ ಹದನಾದದು ಸಿರುಮೇಂದ್ರನು
ಇತ್ತಲುಳಿದ ಬಲ ಸಹಿತ।

ಸುತ್ತಣ ದೊರೆಗಳು ಕೂಡಿದ ಹುಳಿಯಾರಿ
ನತ್ತ ನಡೆದ ಭರದಿಂದ ॥೫೫॥

ಒಂದು ಕಡೆಯ ಡಮಾಮಿಯ ಪೊಯಿಸುತ
ಮತ್ತೊಂದು ಕಡೆಯಲ್ಲಿ ತಾಳಗವ।
ಬಂದು ಹತ್ತಾರು ಕೊಟ್ಟಿಗೆ ಎತ್ತು ಸಹವಾಗಿ
ತಂದು ಕೂಡಿದ ಭೂತಿಪುರವ ॥೫೬॥

ಕಟ್ಟಿದ ಎಡಗೈಯ್ಯ ಸಹಿತ ಗೊಲ್ಲರುಗಳ
ನಿಟ್ಟೋಟದಿಂದ್ಯೈತರಲು।
ಕೊಟ್ಟದ ಸಿರುಮ ಕುದುರೆ ಎತ್ತುಗಳನೊಯ್ಯೆ
ಹುಟ್ಟಿತು ಕೋಪ ನೃಪರಿಗೆ ॥೫೭॥

ಹರಿಯಬಿಟ್ಟನು ವೇದರಾಜ ತುರಗವನು
ಅರಸುಮಕ್ಕಳ ಪೈಕವನು।
ದೊರೆದೊರೆಗಳು ಒಗ್ಗಾಗಿ ನಡೆದರಾಗ
ತು*[ರಗ]* ಮರಳಿಸುವ ಭರದಿ ॥೫೮॥

ಏರಿದ ಮಂದಿ ಕುದುರೆ ಪೊರವೇರಿಯ
ಮೀರಲಮ್ಮದೆ ನಿಂದರಾಗ।
ತೋರಿದುದಿಲ್ಲಡಗಿದ ಸಿರುಮನ ಬಗೆ
ಬೇರೊಂದು ಮಾತನಾಡಿದರು ॥೫೯॥

ಎಲ್ಲಿ[೧೪][ಯಿಹ][೧೪]ನು ಎಂದರಿವರಿಗಳವಲ್ಲ
ಗೊಲ್ಲ ಸಿರುಮನ ತಂತ್ರವನು।
ಬಲ್ಲಿದನಹುದಹುದೆಂದು ದೊರೆಗಳಾಗ
ಅಲ್ಲಲ್ಲಿ ನಿಂದರು[೧೫][ಬ್ಬ][೧೫]ರವುಡಿದು ॥೬೦॥

– ರುವ(ಮೂ).೧೪–೧೪ ಹಿವ(ಮೂ), ೧೫–೧೫ ಭ(ಮೂ).

ಮುಂದಕ್ಕೆ ಬರದೆ ಮಂದಿ ಕುದುರೆ ಸಹ
ಹಿಂದಕ್ಕೆ ತಿರುಗಿ ಬೇಗದಲಿ।
ಬಂದು ಪೊಕ್ಕರು ತಮ್ಮ ತಮ್ಮ ಪಾಳೆಯಗಳ
ಮಂದಿ ಕುದುರೆ ಸಹವಾಗಿ ॥೬೧॥

ಸಿಕ್ಕದೆ ಪೋದನು ಸಿರುಮಭೂ[ವ]ರನೆಂದು
ಒಕ್ಕಣಿಸುತ ಮುನ್ನಲವರು।
ಉಕ್ಕುವ ಕೋಪದಿ ನುಡಿದರು ದೊರೆಗಳು
ಸೊಕ್ಕು ಮುರಿವೆವು ಎಂದೆನುತ ॥೬೨॥

ಅಟ್ಟಿದರಾ ದೊರೆಗಳು ಬೂದಿಹಾಳಿಗೆ
ದಿಟ್ಟರಾದಂತ ಹೂಳಿಗರ।
ಬಿಟ್ಟು ಕಳುಹ ಹೇಳು ಹಿರಿಯೂರ ತುರಗವ
ಕೊಟ್ಟಿಗೆ ಎತ್ತನು ಸಹಿತ ॥೬೩॥

ಬಂದ ಚಾರರು ಕೊಂಡಾಡುತ ಸಿರುಮನ
ಮುಂದೆ ನಿಂದರು ಕರ[ವ] ಮುಗಿದು।
ನಿಂದು ಕುಮಾರ ಮಲ್ಲಯ್ಯ ವೀರರುಗಳು
ಸಂದಣಿಸಿತು ಬಳ[ಗ]ದಲಿ ॥೬೪॥

[೧೬][ಹೊಡೆ][೧೬]ವ ನನಾ ವಾದ್ಯ ರಭಸದಿ ಕುವರನು
ಗಡಣದಿಂದಲಿ ಐತಂದರು।
ಪೊಡವಿಪ ನೃಪನ ಕಾಣುತಲಾಗ ಬೇಗದಿ
ಅಡಿಗೆರಗಿದನಾ ಕುವರ ॥೬೫॥

ತಂದ ತಲೆಯನೆಲ್ಲವನೊಂದುಳಿಯದೆ
ತಂದೆಯ ಮುಂದೆ ಹಾಕಿಸಲು।
ಒಂದು ಭುಜವು ಹದಿನಾರಾಗಿ ಸಿರುಮಯ್ಯ
ಕಂದನ ತೆಗೆದಪ್ಪಿ ನಗುತ ॥೬೬॥

೧೬–೧೬ ವಡ(ಮೂ).

ಬಂದ ಭಟರಿಗುಡುಗರೆಯಿತ್ತು ಸಿರುಮಯ್ಯ
ತಂದ ತಲೆಗಳ ತೋರುತಲಿ।
ಎಂದನು ವೇದರಾಜಗಳೊಂದು ಬಾರಿಯು
ಬಂದು ನೋಡಲಿ ನಮ್ಮ ಪುರಿಯ । ।೬೭॥

ಎತ್ತು ಕುದುರೆಯ ಬಿಡೆನುತ ತಾವೆಲ್ಲ ದಂ
ಡೆತ್ತಿ ಬಂದರೆ ಕಾಣಬಹುದು।
ಕಿತ್ತು ಕರುಳ ಶಾಕಿನಿ ಡಾಕಿನಿಯರಿ
ಗಿತ್ತ ಪೆರ್ಮನ ದಣಿವಂತೆ ॥೬೮॥

ನಡೆ ನೀನೆಂದು ಕಳುಹಲವನ್ನೈತಂದು
ನುಡಿದನು ವೇದರಾಜನಿಗೆ।
ಪಡೆ ಮುರಿಯಿತ್ತು ಎಕ್ಕಟಿಯ ಗಂಗಯ್ಯನ
ಹೊಡೆದರೇಳ್ನೂರು ತಲೆಗಳ ॥೬೯॥

ಕೊಡದೆ ಕುದುರೆ ಕೊಟ್ಟಿಗೆ ಎತ್ತುಗಳನು
ನುಡಿದ ಪಂಥವ ನಮ್ಮ ಮೇಲೆ।
ನಡೆದರಾದರೆ ನರಿ ನಾಯಿ ಹದ್ದುಗಳಿಗೆ
ಅಡಗನಿಕ್ಕು[ವೆ]ನೆಂದ ಸಿರುಮ ॥೭೦॥

ಪೇಳಿದ ವಾಕ್ಯವ ಕೇಳುತ ದೊರೆಗಳು
ಆಲೋಚನೆಯ ಮಾಡಿದರು।
ಸಾಳುವ ನರಸಿಂಗರಾಯನ ಕರೆತಂದು
ಹಾಳು ಮಾಡುವ ಭೂತಿಪುರವ ॥೭೧॥

ಎಂದು ಮಾತಾಡಿ ಯೋಚಿಸಿ ಕಾರ್ಯವಹುದೆಂದು
ಅಂದು ತೆರಳಿ ತಮ್ಮ ತಮ್ಮ।
ಮಂದಿ ಕುದುರೆ ಸಹ ತಮ್ಮ ಪಟ್ಟಣವನು
ಬಂದು ಪೊಕ್ಕರು ದುಗುಡದಲಿ ॥೭೨॥

ಇದ್ದರು ಹುಳಿಯಾರ ಪಾಳ್ಯದಿ ಸಿರುಮನ
ಮುದ್ದಿ ಬೇಹಿನ ಭಟರು।
ಅರ್ಧಾಮ ರಾತ್ರಿಯೊಳೈತಂದು ಪೇಳ್ದರು
ಸುದ್ದಿಯ ಸಿರುಮಭೂವರಗೆ ॥೭೩॥

ಕೇಳಿದ ವೇದರಾಜನು ಕಸವೇಂದ್ರನು
ಆಳೋಚಿಸಿದ ಕಾರ್ಯವನು।
ಸಾಳುವ ನರಸಿಂಗರಾಯನ ಕರೆತಂದು
ಮೇಳೈಸುವ ಸುದ್ದಿಗಳನು ॥೭೪॥

ಎಂದ ನುಡಿಗೆ ನಸುನಗುತ ಸಿರುಮಭೂಪ
ಬಂದುದೀಗೆ ಕಾಬೆನೆಂದ।
ಮಂದಿ ಮನ್ನೆಯರನು ಕಳುಹಿ ಅಲಯ ಪೊಕ್ಕ
ಅಂದದೆ[ಡೆ]ಗೆ ಸಂಧಿಯೊಂದು ॥೭೫॥[೧೭]

❖ ❖

೧೭ + ಅಂತು ಸಂಧಿ ೨ಕ್ಕಂ ಪದನು ೧೭೬ ಕ್ಕಂ ಮಂಗಳಂ ಮಹಾಶ್ರೀ.

ಸಂಧಿ : ಮೂರು

[೧]ಚಂಡಿಕೆಯರಸ ಚಾಪವನರ್ಜುನಗಿತ್ತ
ಖಂಡಪರಶು ಕರುಣಾಳು।
ತಂಡ ತಂಡದ [೨][ದೇವ][೨]ಪ್ರಮುಖಪಾಲನ ನುತ
[೩][ತಾಂ][೩]ಡವ ಸೋಮೇಶ ಶರಣು ॥೧॥

ಇತ್ತಲು ಸಿರುಮನು ತೊಳಗಿರುತಿಲಾಗ
ಅತ್ತ ಮನ್ನೆಯರೆಲ್ಲ ಕೂಡಿ।
ಉತ್ತಮ ವಸ್ತ್ರಭೂಷಣ ಉಡುಗರೆಗಳ
ನಿತ್ತು ಕಳುಹಿ ಎಕ್ಕಟಿಗೆ ॥೨॥

ಭರದಿಂದ ವೇದರಾಜನು ಕೇಶವರಾಜ
ಪಿರಿದೆನಿಸುವ ಮದ್ರರಾಜ।
ತುರುವಂಕದ ಜಕ್ಕನಾಯಕ ಮಾಳಯ್ಯನು
ಇರದೆಲ್ಲ ಹಿರಿಯೂರಿನೊಳಗೆ ॥೩॥

ಕರಸಿ ಎಕ್ಕಟಿಯ ಗಂಗನಾಯಕನನು
ಪಿರಿದೆ ಮನ್ನಿಸಿ ವೀಳೆಯವ।
ಹಿರಿಯೂರ ಕಸವನಾಯಕ ನೀವಿಬ್ಬರು
ತೆರಳಿ ಪೋಪುದು ಚಂದ್ರಗಿರಿಗೆ ॥೪॥

೧+ ನರಸಿಂಗರಾಯನು ಹಿರಿಯೂರಿಗೆ ಬಂದದ್ದು.
ಶ್ರೀ ಪಾರ್ವತಿ ಪರಮೇಶ್ವರಯೇ ನಮಃ॥
ಶ್ರೀ ರಾಮಚಂದ್ರಾಯ ನಮಃ॥ಪದನು॥(ಮೂ),
೨–೨ ರೂಭ(ಮೂ), ೩–೩ ತಂ(ಮೂ)

ಎಲ್ಲಾ ತೆರದಿಂದ ನರಸಿಂಗರಾಯನ
ನಿಲ್ಲಿಗೆ ಕರೆತಂದು ನೀವು।
ಗೊಲ್ಲ ಸಿರುಮನುಕ್ಕ ಮುರಿದು ಕೆ೪[ಡಿಸಿ]೪ ನ
ಮ್ಮೆಲ್ಲರನುಳುಹಿ ತೋರೆನಲು ॥೫॥

ಕೇಳುತಲಾಕ್ಷಣದೊಳು ಉಲುಪೆಯನಾಗ
ಸಾಳುವ ನರಸಿಂಗಗೆಂದು।
ಮೇಳೈಸಿ ಅಪರೂಪವಾದ ವಸ್ತುಗಳನು
ನಾಳಿನ ದಿನ ಸಾಗಲೆಂದು ॥೬॥

ಹೋಳು ಸಕ್ಕರೆ ಬಿಳಿಯೆಲೆಯ ತುಂಬಿಯ ದಟ್ಟಿ
ಆಳ ಕೈಯಿಂದಲಿ೫[ಹೇ]೫ರಿ।
ಕೇಳಿ ಲಗ್ನವ ಸುಮೂರ್ತದಿ ಹೊರಟರು
ಪಾಳೆಯಕೆಂದು ಸಂಭ್ರಮಿಸಿ ॥೭॥

ಅಂದಾಗ ಹಿರಿಯೂರ ಕಸವಯ್ಯ ಸಹವಾಗಿ
ಸಂದಿಸಿಕೊಂಡು ಬೇಗದೊಳು।
ಅಂದದಿ ಮಂದಿ ಕುದುರೆ ಸಹಲಿಬ್ಬರು
ಚಂದ್ರಗಿರಿಗೆ ತೆರಳಿದರು ॥೮॥

ಬಂದರು ಪಯಣ ಪಯಣ೬[ದಿ]೬ ಪಯಣವನು
ಚಂದ್ರಗಿರಿಯ ಪಟ್ಟಣಕೆ।
ಅಂದೊಳಪೊಕ್ಕು ಕೇಳಿದರು ರಾಯನ ಬಲು
ಗೊಂದಣದೋಲಗದಿರವ ॥೯॥

ಅರಿರಾಯಗಿರಿವಜ್ರದಂಡ ಮಂಡಿತರಾಯ
ಹರಿಣಶಾರ್ದೂಲನೆಂದೆನಿಪ।
ನರಸಿಂಗರಾಯನಿರ್ದನು ಸಿಂಹಪೀಠ೭[ದಿ]೭
ಅರಸು ಮಕ್ಕಳ ಸಂದಣಿಯೊಳು ॥೧೦॥

೪–೪ ಡಾ(ಮೂ), ೫–೫ ಯೇ(ಮೂ), ೬–೬ ದಲಿ(ಮೂ), ೭–೭ X(ಮೂ)

ಮನ್ನೆಯರು[೮][ಗಳು][೮] ಸಾವಂತರು ಸಚಿವರು
[೯][ಉನ್ನತ][೯] ಚಂಡವಿಕ್ರಮರು।
ದಂಡನಾಥರು ರಾಜಕುವರ ಸಮೂಹದ
ತಂಡದಿಂದೋಲಗವೆಸೆಯೆ ॥೧೧॥

ಕವಿ ಗಮಕಿಗಳು ವಾದಿಕರು ವಿದ್ವಾಂಸರು
ನವರಸವರಿವ ಭಾವಕರು।
ಸವಿಯ ಲಾಲಿಸುವ ರಸಿಕರು ಕೋವಿದ
ನಿವಹವಿದ್ದುದು ಬಳಸಿನಲಿ ॥೧೨॥

[೯]ಬಟ್ಟುಮಕದವ ಬಟ್ಟುಮಗತ್ತರು
ನಟ್ಟುವರು ಸಂಗೀತವ।
ಕಟ್ಟಾಣಿಯಿಂದಲಾಡುವರು ಶಶ್ಯಾವ[೧೦]
ಭಟ್ಟಾರಗಳಿರುತಿರ್ದರಲ್ಲಿ ॥೧೩॥

ಕಾಲ[೧೧][ರು][೧೧]ಳಿ[೧೨][ಯು][೧೨]ಕ[೧೩][ಟಿಸೂತ್ರವು][೧೩] ಪೇರಣೆ
ವಾಲೆ ಮೂಗುತಿಯು ಚಿಂತಾಕ।
ಕೀಲ ಕಡಗ ಕೈಸರ ಹೊನ್ನಬಳೆಗಳ
ಬಾಲೆಯರಿರ್ದರರ್ತಿಯಲಿ ॥೧೪॥

ಎಕ್ಕಟಿ ಗಂಗಯ್ಯ ಕಸವೆನಾಯಕ ಸಹ
ಪೊಕ್ಕರು ರಾಯನೋಲಗವ।
ಸೊಕ್ಕಾನೆ ಕುದುರೆ ಕಾಲಾಳ್ಗಳ ಮೊತ್ತವು
ಕಿಕ್ಕಿರಿವುದನು ನೋಡುತಲಿ ॥೧೫॥

ದಂಡನಾಥರು ಕರೆತಂದು ಕಾಣಿಸಿದರು ಭೂ
ಮಂಡಲಧೀಶನನಾಗ।
ಕಂಡು ಕಾಣಿಕೆಯಿಕ್ಕಿ ಕರಗಳ ಮುಗಿ[೧೪][ದು ಮುಂ][೧೪]
ಕೊಂಡು ಬಿನ್ನಹ ಮಾಡಿದರು ॥೧೬॥

೮–೮ X(ಮೂ), ೯–೯ X(ಮೂ), ೯+ ಈ ಪದ್ಯದ ಪರಿಷ್ಕರಣ ನನಗೆ ಸಾಧ್ಯವಾಗಿಲ್ಲ (ಸಂ). ೧೦+ ಶೇರು ಸೆರ್ರ್ಯಾರು ಸ್ಯೇನಬೋಗರು(ಮೂ), ೧೧–೧೧ ಲು(ಮೂ), ೧೨–೧೨ ಯ(ಮೂ), ೧೩–೧೩ ಟ್ಟಸುತ್ತದ(ಮೂ), ೧೪–೧೪ ದರು ಮು(ಮೂ)

ನಿ[೧೫][ಲ್ಲೆವಿ][೧೫]ದಿರು [೧೬][ಪಳಚಿದಡು][೧೬]ಗಿವನು
ಕೊಲ್ಲದ ಕೊಲೆಗಳ ಕೊಂದು।
ಎಲ್ಲರನಳುಕಿಸಿಕೊಂಬ ನಮಗೆ ಉಳು
ವಿಲ್ಲ ನಿಮ್ಮಯ ಪಾದದಾಣೆ ॥೧೭॥

ಚಿತ್ತೈಸಿ ಬೂದಿಹಾಳಿನ ಗೊಲ್ಲ ಸಿರುಮನು
ಸುತ್ತಣ ಸೀಮೆಯೆಲ್ಲವನು।
ಮುತ್ತಿಗೆಗಳ ಮಾಡಿದ[೧೭][ನು][೧೭] ಸೀಮೆಯನೆಲ್ಲ ಕೊಂ
ಡೊತ್ತಿದ ಹಳ್ಳಿ ಪಳ್ಳಿಗಳ ॥೧೮॥[೧೮]

ಚಿಕ್ಕಂಗಳ ಹಿರಿಯಂಗಳವೆಂಬವು
ಲಕ್ಷ ತೆರಿಗೆಯ ತೆರುವವು।
ಮಿಕ್ಕ ಮಾತೇನು ಅಡಿಕೆ ತೆಂಗು ಬಾಳೆಯು
ಲೆಕ್ಕವಿಲ್ಲವು ವನದೊಳಗೆ ॥೧೯॥

ತಂಗಲಿ ಮಚ್ಚೇರುವೆಂಬ ಪಟ್ಟಣ[೧೯][ಗಳು][೧೯]
ತೆಂಗು ಹಲಸು ಕಿತ್ತಲಿಯು।
ಹಿಂಗಲಾರಳವಲ್ಲ ಕಡವೂರ ಗ್ರಾಮವ
ಗಂಗಾಧರ ಬಲ್ಲನೈಸೆ ॥೨೦॥

ಎಕ್ಕಟಿ ಬಳಿಯಲಿ ಸಿಂಗಟಿಗೆರೆಯಿದೆ
ಹೊಕ್ಕು ಬಾಗಿಲ ಹಾಕಿಸಿದನು।
ಸಿಕ್ಕಿತು ಹೊಳೆಸಾಲು ಸಿರುಮಭೂವರನಿಗೆ
ಮಿಕ್ಕ ಸೀಮೆಗಳ ಪಾಡೇನು ॥೨೧॥

ಗೊಲ್ಲನಾಳುವ ಸೀಮೆಯೊಳು ದೇವರೆ ಕೇಳಿ
ಹುಲ್ಲೆ ಮಾನವರ ಕೊಲುತಿವೆಕೋ।
ನಿಲ್ಲಲಾರೆವು ನಾವೆನುತ ರಾಯನಿಗಾಗ
ಅಲ್ಲಿ ಬಿನ್ನಹ ಮಾಡಿದರು ॥೨೨॥

೧೫–೧೫ ಲ್ಲನಿ(ಮೂ), ೧೬–೧೬ ಪಾಲಾಜಿ ಹಡ (ಮೂ).
೧೭–೧೭ ರು(ಮೂ), ೧೮+ ಇದರ ಮುಂದೆ ೧೬ನೆಯ ಪದ್ಯವನ್ನು ಬರೆದು ೧೯ ಎಂದು ಸೂಚಿಸಿದ್ದಾನೆ ಲಿಪಿಕಾರ. ಅದನ್ನು ನಾವು ಬಿಟ್ಟಿದ್ದೇವೆ. ಬಹುಶಃ ಒಂದು ಪದ್ಯ ಇಲ್ಲಿ ಬಿಟ್ಟು ಹೋಗಿದೆ, ನಾವು ಉದ್ದಕ್ಕೂ ಕ್ರಮಸಂಖ್ಯೆ ತಿದ್ದಿದ್ದೇವೆ (ಸಂ), ೧೯–೧೯ ಗೆರೆ (ಮೂ)

ಕ[20][ಟ್ಟೆ][20]ಕರುಗಳಿಲ್ಲ ಜೀವಧನ ನಾಡನು
ಸುಟ್ಟುರುಹಿದನೆಲ್ಲವನು।
ತೊಟ್ಟವಾದುದು ಗೊಲ್ಲನ ಬೂದಿಹಾಳಿನ
ಸೃಷ್ಟಿಗೀಶ್ವರನೆ ಚಿತ್ತೈಸು ॥೨೩॥

ಕೊಂಡೆಯವಲ್ಲಿದು ಮಂಡಲಪತಿ ಕೇಳು
ದಿಂಡೆಯ ಸಿರುಮನ ಮೇಲೆ।
ದಂಡ ತೆರಳಿ ಪೋಗಿ ತಲೆಯ [21][ಹೊಡೆದು][21]ಮಿಗೆ
ಚೆಂಡಾಡಬೇಕೆಂದರವರು ॥೨೪॥

ಕೇಳುತ ರಾಯನೆಂದನು ಸಿರುಮಯ್ಯಗೆ
ಆಳು ಕುದುರೆಯಿನ್ನೆಷ್ಟು।
ಕಾಳಗಕತುಳ ಭಟರಾರುಂಟೆನೆ
ಪೇಳಿದ ಮತ್ತೆ ಗಂಗಯ್ಯ ॥೨೫॥

ಮಕ್ಕಳವಗೆ ಬಲ್ಲಿದರುಂಟು ಕಾಲಾಳು
ಲೆಕ್ಕಿಸೆ ಹತ್ತು ಸಾವಿರವು।
ಹಕ್ಕರಿಕೆಯ ವಾಜಿಗಳು ಏಳ್ನೂರೆಂದು
ಎಕ್ಕಟಿ ಗಂಗಯ್ಯ ನುಡಿದ ॥೨೬॥

ಮಂದಸ್ಮಿತ ಮೂಕನಾಗುತ ರಾಯನಿಂ
ತೆಂದನೆಕ್ಕಟಿಯ ಗಂಗಯಗೆ।
ಕೊಂದು ಕೊಟ್ಟಪೆ ಸಿರುಮನ ನೀವು ನಮಗೆ ಮಾ
[22][ಳ್ಪಂದ][22]ವಾವುದು ಪೇಳೆನಲು ॥೨೭॥

ಮೇಲುನಾಡನು ಕಾಣಿಕೆಕೊಟ್ಟು ನಾವೆಲ್ಲ
ಓಲೈಸುವೆವು ನಿಮ್ಮಡಿಯ।
ಊಳಿಗವನು ಮಾಡಿ ಬದುಕುವೆವೆಂದಾಗ
ಪೇಳಿದ ಮತ್ತೆ ಗಂಗಯ್ಯ ॥೨೮॥

೨೦-೨೦ ಟ್ಟ(ಮೂ). ೨೧-೨೧ ವಡಬು (ಮೂ), ೨೨-೨೨ ಳ್ಪೆಂದು(ಮೂ).

ವಸುಧೀಶನವರ ಬಿನ್ನಪದ ಕೇಳುತಲಾಗ
ಉಸುರಿದ ಮಂತ್ರಿಗಳೊಡನೆ।
ವಸವಾವುದು ಮೇಲುನಾಡ ಕಾರ್ಯವು ಉ
ಬ್ಬಸವಾವುದು ಪೇಳೆನಲು ॥೨೯॥

ಎನಲಾಳೋಚಿಸಿಕೊಂಡರು ಪ್ರಧಾನರು
ಜನಪತಿಯೊಡನೆ ಪೇಳಿದರು।
ಅನು[೨೩][ವಹು][೨೩]ದೀ ಕಾರ್ಯಕೂಟಕೆ ದೊರೆಗಳ
ವಿನಯದಿ ಕರೆಸೆಂದರವರು ॥೩೦॥

ರಾಯಸದವರನು ಕರೆಸಿ ಲೇಖನಗಳ
[೨೪][ಕ್ಷಿ][೨೪]ಪ್ರದಿಂದಲಿ ಬರೆಸಿದರು।
ಆಯತದಿಂದೆಂಟು ದಿಕ್ಕಿನ ದೊರೆಗಳ
ಪ್ರೀಯದಿ ಬರಹೇಳೆಂದೆನುತ ॥೩೧॥

ಓಲೆಗಾಣುತ ನೆರೆದುದು ಸೇನೆ ವಾರುಧಿ
ಮೇಲುವಾಯಿತುಯೆಂಬ ತೆರದಿ।
ಕಾಲಾಳು ಕರಿ ತುರಗವು ಕೂಡಿದುದಿಳೆ
ತಾಳಲಾರದುಯೆಂಬಂತೆ ॥೩೨॥

ಗೋರಂಟೆಯೊಳು ತಿಪ್ಪರಾಜನೆಂಬವನಿಗೆ
ವಾರುವನೆಂಬ*[ವು]* ಸಾವಿರವು।
ವೀರರಿಪ್ಪತ್ತು ಸಾವಿರದಿಂದಲವನಾಳು
ದೋರಿದನಾಗ ರಾಯನಿಗೆ ॥೩೩॥

ತುಂಗವಿಕ್ರಮ ಬೆ[೨೫][ನ್ನಾ][೨೫]ಳು ರಾಜ[೨೬][ಕಯ್ಯ][೨೬]ನ
ಸಂಗಡ ಬಲು ಕಾಲಾಳು।
ಸಿಂಗದ ಜಂಗುಳಿಯೆಂಬಂದದಿ ಮ
ನಂಗೊಳಿಸಿತು ರಾಯನಿಗೆ ॥೩೪॥

೨೩–೨೩ ವಾವು(ಮೂ), ೨೪–೨೪ ವಿ(ಮೂ),*_* ಬ(ಮೂ), ೨೫–೨೫ ನ್ನೊ(ಮೂ).೨೬–೨೬ ಕೈಯ (ಮೂ).

ಕೋಟೆಯವಳ ನಾಯಕವಾಡಿ ಸಹಗಂದಿ
ಕೋಟೆಯ ತಿರುಮಲರಾಜ।
ತಾಡಪತ್ರೆಯ ಸಿಂಗರಾಜ ಬಂದನು ಬಲು
ಕೂಟ ಕೂಡಿದುದು ರಾಯನಿಗೆ ॥೩೫॥

ಜೋಡಗೊಟ್ಟದ ನಾಯಕರು ಬಂದರು ಕೀ
ಳ್ನಾಡ ತಿಗುಳರೊದಗಿದರು।
ಜೋಡು ಮಾಡಿತು ಕರಿ ತುರುಗ ಕಾಲಾಳಾಗ
ನೋಡಲು ನೆಲ ಹೊರದಂತೆ ॥೩೬॥

ಅಪ್ಪಾರ ಪಿಳ್ಳೆಯು ತುಪ್ಪಾರ ಪಿಳ್ಳೆಯು
ಒಪ್ಪುವ ಮನ್ನೆರ ಪಿಳ್ಳೆ।
ಬೆಪ್ಪಾಳ ಪಿಳ್ಳೆಯು ತಿರುವಾಳ ನಲ್ಲೂರೊ
ಳಿಪ್ಪ ಮುನ್ನೆಯರ್ಬಂದರಾಗ ॥೩೭॥

ಎಲ್ಲೆ ಮಾಲುಕ ಬ್ಯಾಡ ತೆಲುಗ ವಡ್ಡರ ಕುಲ
ಸುಲಲಿತ ಕ್ಷತ್ರಿಯ ತಿಗುಳ।
ಕಲಹಲಂಪಟ ಮೊರ*[ನೊ]*ಕ್ಕಲಿಗ ಮುಂತಾದ
ಕುಲದ ಮನ್ನೆಯರೊದಗಿದರು ॥೩೮॥

ಸುತ್ತಣ [೨೬][ಸೈನ್ಯ][೨೬] ಬಂದುದ ಕೇಳಿ ರಾಯನು
ಅತ್ಯಂತ [೨೮][ಹರ್ಷಿತ][೨೮]ನಾಗಿ।
[೨೯][ಮತ್ತಗಜಗಳ][೨೯] [೩೦][ಪೊ][೩೦]ರದರ ಕರೆಸಿಯೆ।
ಎತ್ತ ಹೇಳಿದ[೩೧][ನು][೩೧] ಗಜ[೩೨][ವ][೩೨] ॥೩೯॥

[೩೩][ಉತ್ತಮ][೩೩] ಗಳಿಗೆಯೊಳಗೆ ರಾಯ ಪೊರಟನು
ಸತ್ತಿಗೆ ಲೋಲ ನ[೩೪][ಭ][೩೪] ಮುಳುಗೆ।
[೩೫][ಎ][೩೫]ತ್ತಿದ ನೆಗಳ [೩೬][ನೇಜೆಯ][೩೬] ಸೀಗುರಿಗಳ
ಮೊತ್ತದಿಂದಲಿ ಸೂರ್ಯ ಮುಳುಗೆ ॥೪೦॥

೨೬–೨೬ X (ಮೂ), ೨೮–೨೮ X (ಮೂ), ೨೯–೨೯ ಮಂತಂಗ ಜಾಲ (ಮೂ),೩೦–೩೦ ಪಾ(ಮೂ), ೩೧–೩೧ ನ(ಮೂ), ೩೨–೩೨ ದಾ(ಮೂ), ೩೩–೩೩ ವುತ್ತೂರ(ಮೂ), ೩೪–೩೪ ಬ(ಮೂ), ೩೫–೩೫ ನೆ(ಮೂ), ೩೬–೩೬ ನ್ಯಜಾಯ್ಯ(ಮೂ)

[೩೭][ಹು][೩೭]ಲ್ಲೆಗಂಗಳ ಹಂಸೆ ನಡೆವಿನ ಸಖಿಯರು
ಪಲ್ಲಕ್ಕಿ ದಂಡಿಗೆಯೊಳಗೆ।
ಅಲ್ಲಿ ತೆರಳಿತು ರಾಯನ ರಾಣಿವಾಸವು
ಗೊಲ್ಲರುಗಳ ಬಳಸಿನಲಿ ॥೪೧॥

ಕೊಟ್ಟಿಗೆಯೆತ್ತು ಕೊಪ್ಪರಿಗೆ ಸರಕು ಮಿಗೆ
ಒಟ್ಟಿದ ಬಂಡಿ [೩೮][ಬೊಕ್ಕಣವು][೩೮]।
ಪೆಟ್ಟಿಗೆ ಹೊರಕೆಗಳಿದ್ದವು ದಂಡಿನ ಕೂಡೆ
ಕಟ್ಟಳೆಕದ [೩೯][ಮೊ][೩೯]ದಲ[೪೦][ಲ್ಲಿ][೪೦] ॥೪೨॥

ಅಲಗಿನ ಹೊರೆ ಅಂಬಿನ ಮೂಡಿಗೆಗಳು
ಬಿಲುವಟ್ಟಲಿನ ಬಂಡಿಗಳು।
ಮಲಗು ಮಂಚವುಗೂಡಿ ಸರಹೊತ್ತಿಗೆಯ ಹೊರೆ
[೪೧][ನೆ][೪೧]ಲ ಹೊ[೪೨][ರೆ][೪೨]ದಂತೆ ತೆರಳಿದರು ॥೪೩॥

ಗಾಣಿಗರೆಣ್ಣೆ ತುಪ್ಪವ ಮಾರುವರು ಸ
ದ್ವಣಿಜ ವೈಶ್ಯ ಚಿಪ್ಪಿಗರು।
ಕ್ಯಾಣೆಕಾರರು ಪಸರದಂಗಡಿಯ [೪೩][ಪ್ರ][೪೩]
ವೀಣ ಶೆಟ್ಟಿಗಳೊದಗಿದರು ॥೪೪॥

ಹೊನ್ನು ಹಣವ ನೋಡಿ [೪೪][ಒರೆ][೪೪]ದು ಮಚ್ಚರನಿಟ್ಟು
ಬಣ್ಣವ ಕಂಡು ಕ್ರಯಗಳನು।
ನಿರ್ಣಯಿಸುವ ನವರತ್ನ ಪರೀಕ್ಷಕ
ಚಿನ್ನವರದರು ನಡೆ[ದ]ರು ॥೪೫॥

ನಡೆಯಿತು ತಿರುಪತಿಗಾಗ ರಾಯನ ದಂಡು
ಕಡು[೪೫][ಭಯಂಕ][೪೫]ರದ ರಭಸದಿ।
ಹೊಡೆದವು ಗುಡಿ ಗೂಡಾರ [೪೬][ಸಂಗರದಲಿ
ಪೊಡವಿಪಾಲ][೪೬] ಪಾಳಯದಿ ॥೪೬॥

೩೭-೩೭ ಮ(ಮೂ). ೩೮-೩೮ ಬಕ್ಕನವು(ಮೂ), ೩೯-೩೯ ಮ(ಮೂ), ೪೦-೪೦ ಲ್ಲ(ಮೂ), ೪೧-೪೧ ನ(ಮೂ), ೪೨-೪೨ ರ(ಮೂ), ೪೩-೪೩ ದ್ರೌ(ಮೂ), ೪೪-೪೪ ವರ(ಮೂ), ೪೫-೪೫ ಬಲುಂಕಾ(ಮೂ), ೪೬-೪೬ ಸಾರಗದನ ನಡವೀದಾನ(ಮೂ).

ಅತ್ತ ತಿರುಮಲದ ಗಿರಿರಾಯನ ಜಯ
ದೊತ್ತರದಿಂದ ಬೇಗದೊಳು।
ಚಿತ್ತಜಪಿತ ವೆಂಕಟೇಶನ ಕಂಡಾಗ
ಭಕ್ತಿಯಿಂದಲಿ ನಮಿಸಿದರು ॥೪೭॥

ಹರಿಯೆ ಮುರಾರಿ ಮುಕುಂದ ಜನಾರ್ದನ
ಸುರಮುನಿನಮಿತ ಶ್ರೀಚರಣ।
ದುರಿತ ದೂರನೆ ಸರಸಿಜನಾಭ ಜಯಯೆಂದು
ನರನಾಥ ಮೈಯ್ಯನಿಕ್ಕಿದನು ॥೪೮॥

ಅಷ್ಟವಿಧಾರ್ಚನೆ ಪೂಜೆ ನೈವೇದ್ಯದಿ
ತೃಪ್ತಿ ಬಡಿಸಿ ದೇವರನು।
ಸಾಷ್ಟಾಂಗವೆರಗಿ ಕಾಣಿಕೆಯಿಟ್ಟು ರಾಯನು ತ
ನ್ನಿಷ್ಟಾರ್ಥವ ಬೇಡಿಕೊಂಡ ॥೪೯॥

ನಡೆವ ಕಾರ್ಯವು ಸಾಧ್ಯವಾಯಿತಾದರೆ ನಿನ್ನ
ಗುಡಿಗೆ ತೊಡಿಸುವೆ ಚಿನ್ನವನು।
ಕೊಡುವೆನು ನವರತ್ನ ಪದಕವನೆಂದು
ನುಡಿದ ರಾಜೇಂದ್ರ ದೇವರೊಳು ॥೫೦॥

ಕಾಮಪಿತನ ಬೀಳ್ಕೊಟ್ಟು ರಾಯನು ತನ್ನ
ಭೂಮಿಪಾಲಕರು ಸಚಿವರು।
ಸ್ತೋಮದಿಂ ಬಂದುಬಿಟ್ಟನು ಪಾಳೆಯವನು
ಭೀಮಾವರದ ಬಯಲೊಳಗೆ ॥೫೧॥

ಸೂಳೈಸಿದವು ನಿಸ್ಸಾಳ ತಂಬಟ ಭೇರಿ
ಜೋಳಿ ಜೋಳಿಯೊಳೆಡೆಬಿಡದೆ।
ಪಾಳೆಯ ತೆರಳಿತು ಎಲ್ಲೆರ ಒಳಗಾಗಿ
ಆ ದಳಪತಿಯ ನೇಮದಲಿ ॥೫೨॥

ಅಟ್ಟಿ ಕೊ[೪೭][ಟ್ಟವ][೪೭]ರ ಕಾಣಿಸಿಕೊಂಡು ಮಲೆತರ
ಸುಟ್ಟುರುವುತಲೈತಂದ।

೪೭–೪೭ ಟ್ಟುದ(ಮೂ).

ಬಿಟ್ಟ ಗಾವಲುಪಾಡಿನೊಳು ಪಾಳೆಯದೊಳು
ಸೃಷ್ಟಿಗೊಡೆಯ ನರಸಿಂಗ ॥೫೩॥

ತುಂಗವಿಕ್ರಮ ನರಸಿಂಗರಾಯನ ದಂಡು
ರಂಗಸಮುದ್ರಕ್ಕೆ ನಡೆಯೆ।
ಕಂಗೊಳಿಸಿತು ಕರಿ ತುರುಗದ ಧೂಳು ಗ
ಣಂಗಳಂಗವನು ೪೮[ಪ]೪೮ರ್ಬಿದುದು ॥೫೪॥

ಧಾರುಣೀಶ್ವರನಲ್ಲಿಂದ ತೆರಳಿಸಿದನು
ವಾರುವಗಳ ಮೋಹರದಿ।
ಕೂರಸಿಯಂ೪೯[ಥ]೪೯ಸುಭಟರ ಸಂದಣಿಯಿಂದ
ಘೋರಂಟೆಯೊಳು ಬಿಟ್ಟ ದಂಡ ॥೫೫॥

ಕನಕ ದಂಡದ ಸತ್ತಿಗೆ ಸಾಲುಗಳಿಂದ
ಜನಪತಿಗಳ ಮಧ್ಯದಲಿ।
ಪೆನುಗೊಂಡೆಗೆ ಬಂದು ಓಲಗವಿತ್ತನು
ಮಣಿಮಯ ಸಿಂಹಪೀಠದಲಿ ॥೫೬॥

ಕರಸಿ ಮನ್ನೆಯ ಮನ್ನೆಯ ಮಂಡಲಿಕರ
ಧರಣೀಶ ನರಸಿಂಗರಾಯ।
ಯರಮಿಂಚಿಯ ಬಾಗಿಲ ಬಯಲೊಳು ಪವುಜ
ನಿರದಿಕ್ಕಬೇಕೆಂದೆನುತ ॥೫೭॥

ಎಂದ ಮಾತಿಗೆ ದೊರೆ ದೊರೆಗಳು ತಮ್ಮೊಳು
ಮಂದಿ ಕುದುರೆ ಸಹವಾಗಿ।
ತಂದಿಕ್ಕಿದರು ಮನ್ನೆಯರ ಪವುಜನು
ಕೆಂಧೂಳು ಮುಸುಕಿತಂಬರದಿ ॥೫೮॥

ಹರಿಗೆಕಾರರು ಬಲ್ಲವರ ಸಮೂಹವು
ತುರುಗದ ಪವುಜುಗಳಿಂದ।

೪೮–೪೮ ಪು(ಮೂ), ೪೯–೪೯ ತೈ(ಮೂ).

ಕರಿಘಟೆಗಳ ಕಾಲಾಳು ಮೋಹರವನು
ತರತರದಲಿ ನಿಲಿಸಿದನು ||೫೯||

ಹಮ್ಮರಾಜನು ತಿಮ್ಮರಾಜ ಗುರುವರಾಜ
ತಮ್ಮರಾಜನು ಬಸವರಾಜ।
ತೊಮ್ಮರಾಜನು ತೊನೇಟಿರಾಜನು ಸಹ
ತಮ್ಮ ಪವುಜುಗಳ ತೋರಿಸಲು ||೬೦||

ಅಪ್ಪರಸಯ್ಯನು ವೀರ ಬಸವರಾಜ
ತಿಪ್ಪರಾಜನು ತಿಮ್ಮರಾಜ।
ಒಪ್ಪದಿ ಪವುಜು ತೋರಿಸಲು ರಾಯನ ಮನ
ವೊಪ್ಪಿ ವಿಸ್ತರವಾ[೫೦][ದು][೫೦]ದಾಗ ||೬೧||

ವೀರಬಾಣನು ಬೊಮ್ಮಯ್ಯ ಬೋಳಕುನಾಗ
ವೀರಮೊರಸ ತೋಟಿಗರ।
ಆ ರಾಮರಾಜ ಸಹಿತ ಕಾಲಾಳುದೋರಿ
ದರು ನರಪತಿ ತಲೆದೂಗೆ ||೬೨||

ಈ ಪರಿಯಲ್ಲಿ ನೆರೆದಿರ್ದ ಸೇನೆಯ ಕಂಡು
ಭೂಪತಿ ಮನದೊಳು ಮೆಚ್ಚಿ।
ಆ ಪೆನಗೊಂಡೆಯ ಮರಳಿ ಪೊಕ್ಕನು ಮ
ತ್ತಾ ಪರಿವಾರದೊಗ್ಗಿನಲಿ ||೬೩||

ಪೊರಟನಲ್ಲಿಂದ ಮು[ಂ]ದಕೆ ತನ್ನ ದೊರೆಗಳ
ಪರಿವಾರ ತುರುಗ ಮೋಹರದಿ।
ಭರದಿಂದ ಬಂದು ನೋಡಿದನು ಪವುಜನೆಲ್ಲ
ಹರುವೆಯ ಕೆರೆಯ ಮುಂಗಡೆಯ ||೬೪||

ಕೇಳಿದ ಮಿಡಿಗೇಶಿಯಾಳುವ ನ*[ಲ್ಲೊಬ]*
ಸಾಳುವರಾಯನ ಬರವ।

೫೦–೫೦X (ಮೂ), *–* ಲ್ಲೊಬ್ಬ (ಮೂ).

ಕಾಳಗವನು ಮಾಡಬೇಕೆಂದು ರಾಯನು ಕ
ಟ್ಟಾಳಾಗಿ ನಿಂದ ವಿಕ್ರಮದಿ ॥೬೫॥

[೫೧][ಕೊ][೫೧]ಟ್ಟದ ಬೇಡನೆನಿಸಿಕೊಂಡು ತಾ ಮುನ್ನ
ಬಿಟ್ಟೊಂದು ಕಡೆಯಲ್ಲಿ ಪೋಗಿ।
[೫೨][ಹೊಟ್ಟೆಯ ಹೊರೆವ][೫೨]ದರಿಂದ ರಾಯನ ಕೂಡೆ
ದಿಟ್ಟತನದಲಿ ಕಾದುವೆನು ॥೬೬॥

ಎಂದೆನುತ *[ನಲ್ಲೋಬ]* ನಾಯಕ ತನ್ನಯ
ಮಂದಿ ಕುದುರೆ ಸಹವಾಗಿ।
ಅಂದು ಕುಣಿ[೫೩][ವ ಬಲ ನಡೆಸು][೫೩]ತ್ತಾ ರಾಯನು
ಬಂದನು ಪಯಣ ಗತಿಯಲಿ ॥೬೭॥

ನಡೆದು ಬರುವ ರಾಯನ ದಳವ ಕಾಣುತಲಾಗ
ಮಿಡಿಗೇಶಿ ನ[ಲ್ಲೋಬ] ಬಿಡದೆ।
ತಡೆದೆಚ್ಚು ಮುಂಚೂಣಿಯರೊಳು ಕಾಳಗ
ತೊಡಗಿತು ಬೊಬ್ಬೆ ಅಬ್ಬರದಿ ॥೬೮॥

ಎಚ್ಚರು ಬೇಡರು ಕುದುರೆಕಾರರನಂ
ಬುಚ್ಚಿ ಅಂಬಾದುವುಯೆಂಬ ತೆರದಿ।
ಮಚ್ಚರಿಸುವರನಿರಿದು ಸುರಗಿಗಳಿಂದ
ಅಚ್ಚರಿಯೆನಿಸಿ ಕಾದಿದರು ॥೬೯॥

ತಡೆದ ಸುದ್ದಿಯ ಕೇಳಿ ಗುಡಿಘುಡಿಸುತಲಿ
ನುಡಿದನು ದಳಪತಿಯೊಡನೆ।
ಹೊಡೆದು ತಲೆಯ ತರಬೇಕು ಬೇಡರನೆಂದು
ಪೊಡವೀಶ ನೇಮವನಿತ್ತ ॥೭೦॥

ಏರಿದ ಭರಕೆ ಮುರಿಯೆ ಬೇಡರ ಪಡೆ
ತಾರುಗೆಡೆದು ಕಂಡಕಡೆಗೆ।

೫೧–೫೧ ತೊ(ಮೂ), ೫೨–೫೨ ವಶಿಯರವಾ (ಮೂ), *–* ಲಿವಬ್ಬ (ಮೂ), ೫೩–೫೩ ವೆಬಲಿಸುರಿ (ಮೂ).

ಮಾರಾಂತ ಅರಿಗಳ ತಲೆಯ ಹೊಡದರಾಗ
ಸೂರೆಹೋಯಿತು ಮಿಡಿಗೇಶಿ ॥೭೧॥

ಹೊಡೆದರು ನಲ್ಲೋಬನಾಯಕನನು ಮಿಗೆ
ಮಡದಿ ಮಕ್ಕಳು ಸಹವಾಗಿ।
ಪಿಡಿದು ರಾಯನ ಮುಂದೆ ನಿಲಿಸೆ ಕಾಣುತಲಾಗ
ಕೊಡು ಹೋಗು ಕಾವಲರಿಗೆ ॥೭೨॥

ಮಿಡಿಗೇಶಿಯ ದುರ್ಗಕ್ಕೆ ಠಾಣೆಯವನು
ತಡೆಯದೆ ಹಾಕಿ ಅಲ್ಲಿಂದ।
ನಡೆಯಿತು ಪಾಳೆಯ ಮೂಡಣ ಹಿರಿಯೂರ
ತ೫೪[ಡ]೫೪ಯ ೫೫[ಹೊ]೫೫ಳೆಯ ೫೬[ತೀ]೫೬ರಕಾಗಿ ॥೭೩॥

ಮಾಡಿಸಿದನು ಕಸವೇಂದ್ರ ಬೀಡಾರವ
ರೂಢಿಗೆ ೫೭[ಅತಿ]೫೭ಪೊಸತೆನಿಸಿ।
೫೮[ಕೂಡೆ ಒಳ್ಳೆಸೆವ]೫೮ ಉಯ್ಯಾಲೆಗಳ ಕರು
ವಾಡ ಚಿತ್ರದ ಅರಮನೆಯ ॥೭೪॥

ಇಂತೊಪ್ಪುವ ಅರಮನೆಯೊಳು ರಾಯನು
ಸಂತೋಷದಿಂದಿರುತಿರಲು।
ಅಂತಾಗಲಯಿತಂದು ಕಂಡರು ದೊರೆಗಳು
ಎಂತು ಬಣ್ಣಿಪೆನದರಿರವ ॥೭೫॥

೫೯[ಹೊ]೫೯ನ್ನವಳ್ಳಿಯ ವೇದರಾಜ ಕೇಶವರಾಜ
ಮನ್ನೆಯ ರುದ್ರರಾಜಯ್ಯ।
ಚನ್ನಮರಾಜ ಚಿಟ್ಟಿಮರಾಜ ಕರ್ನಾಟ
ಮನ್ನೆಯರು ಕಂಡರಯ್ಯ ॥೭೬॥

ಕಾಣಿಕೆಯಿಟ್ಟು ಕಾಣಿಸಿಕೊಂ೬೦[ಡ]೬೦ ನೃಪ೬೧[ರಿ]೬೧ಗೆ
ಕ್ಷೋಣೀಶನುಡುಗೊರೆಯಿತ್ತು।
ಮಾಣದೆ ಮನ್ನಿಸಿ ಮುಂದಣ ಕಾರ್ಯವ
ಕಾಣಿ ನೀವೆಂದನಾ ರಾಯ ॥೭೭॥

೫೪-೫೪ ಡಿ(ಮೂ), ೫೫-೫೫ ವೊ(ಮೂ), ೫೬-೫೬ ತಿ(ಮೂ), ೫೭-೫೭ ಹತ್ತಿ(ಮೂ), ೫೮-೫೮ ಕೆಡಕುಳ್ಳೀ ಸವೀ(ಮೂ), ೫೯-೫೯ ವಂ(ಮೂ)

ಎಂದಾಳೋಚಿ[೬೨][ಸು][೬೨]ತಿರಲತ್ತ ರಾಯನು
ಬಂದರು ಬೇಹಿನ ಭಟರು।
[೬೩][ವೊಂ][೬೩]ದಿ ಓಲಗದೊಳು ಸಿರುಮೇಂದ್ರಪಾಲಗಿಂ
ತೆಂದರು ರಾಯ ಬಂದುದನು ॥೭೮॥

ಹಿರಿಯೂರ ಕಸವಯ್ಯ ಗಂಗೆನಾಯಕ ಪೋಗಿ
ತೆರಳಿಸಿ ರಾಯನ ದಳವ।
ಕರೆತಂದು ಹಿರಿಯೂರ ಹೊಳೆಯಲ್ಲಿಯಿಳಿದಾದ
ಪರಿಯ ಸಿರುಮಗೆ ಪೇಳಿದರು ॥೭೯॥

ಇನ್ನೇನು ಸಂಶಯವಿಲ್ಲವೊ ನರಸಿಂಗ
ಮನ್ನೆ ಮನ್ನೆಯರನು ಕೂಡಿ।
ನಿನ್ನ ಸಂಸ್ಥಾನವ ಮುಳುಗಿಸ ಬಂದನು
ನೀನಿನ್ನು ಮೋಸದೊಳಿರಬೇಡ ॥೮೦॥

ಕೋಟೆ ಕೊತ್ತಳ ಅಗಳಾಳುವೇರಿಗಳನು
ಮೀಟಾದ ದುರ್ಗವೆಂದೆನಿ[೬೪][ಪ][೬೪] ।
ಕೋಟೆಗಳನುಕೂಲವಿಡಿ*[ಯೊ]* ಬೇಗದಿ ಶಶಿ
ಜೂಟನ ಭಕ್ತ ಸಿರುಮ[೬೫][ನೆ][೬೫] ॥೮೧॥

ಎಂದು ಪೇಳಿದ ಬೇಹುಕಾರರ ನುಡಿಗೇಳಿ
ಅಂದು ಪ್ರಧಾನರ ಕರೆಸಿ।
ಚಂದದಿ ಜಲದುರ್ಗ ಬಲಿಸುವಂತಲ್ಲಿಗೆ
ಸಂಧಿ ಮೂರಾಯಿತು ಸಂಪೂರ್ಣ ॥೮೨॥[೬೬]

❖❖

೬೦–೬೦ ಡು(ಮೂ), ೬೧–೬೧ ತಿ(ಮೂ). ೬೨–೬೨ ಸಿ(ಮೂ), ೬೩–೬೩ ವಂ(ಮೂ), ೬೪–೬೪ ಸಿ(ಮೂ), *–* ದು(ಮೂ), ೬೫–೬೫ ನು(ಮೂ), ೬೬+ ಅಂತು ಸಂಧಿ ೩ಕ್ಕಂ ಪದನು ೨೭೫ಕ್ಕಂ ಮಂಗಳ ಮಹಾಶ್ರೀ (ಮೂ).

ಸಂಧಿ : ನಾಲ್ಕು

[೧]ವೇದವ[೨][ದ][೨]ರಸಿ ಕಾಣ[೩][ದ][೩] ಶಾಸ್ತ್ರಾಗಮ
ಭೇದಿಸದಿಹ [೪][ಘ][೪]ನಮಹಿಮ।
ವಾದಿಪ [೫][ಹರಿಯಜರು][೫]ಗಳಿ[೬][ಗ][೬]ಗೋಚರ
ನಾದ ಸೋಮೇಶ್ವರ ಜಯತು ॥೧॥

ಗುರುವೆ ಪುಣ್ಯದ ಕಲ್ಪತರುವೆ ಮೋಕ್ಷಂಗಳ
ನೆರವೆ ನಾನಾ ಸೌಖ್ಯಗಳ।
ಇರವೆ ಅನಾಥಜನರನು ಪಾಲಿಪ ದೇವ
[೭][ಎರೆ][೭]ವುದು ಎನಗೆ ಸನ್ಮತಿಯ ॥೨॥

ಇರಲಿತ್ತ ಹಿರಿಯೂರಿನೊಳು ರಾಯನೋಲಗ
ಶರಧಿಯ [೮][ಹೋಲ್ತು][೮] ಕಣ್ಗೆಸೆಯೆ।
ಕರಸಿ[೯][ಯಾ][೯]ಗಲೆ ಎಕ್ಕಟಿಯ ಗಂಗಯ್ಯನ
ನರನಾಥ ನುಡಿದನಿಂತೆಂದು ॥೩॥

ಇಲ್ಲಿ[೧೦][ಗಿನ್ನೆಷ್ಟು][೧೦]ಗಾವುದ ಬೂದಿಪುರವೆಂದು
ಸೊಲ್ಲಿಸೆನ್ನೊಡನೆ ಗಂಗಯ್ಯ।
ಬಲ್ಲಿದವೆರಡು ಗಾವುದ ದಾರಿ ಪಾಳೆಯ
ಅಲ್ಲಿಗೆ ತೆರಳಬೇಕೆಂದ ॥೪॥

---

೧ + ಶ್ರೀರಾಮಚಂದ್ರಾಯ ನಮಃ। ಶ್ರೀ ಶಾರದಾಂಬಾಯ ನಮಃ॥
ಹಿರಿಯೂರಿಂದ ಬಾಗೂರಿಗೆ ದಂಡುಬಿಟ್ಟಿತ್ತು
ಬಾಗೂರ ಕಗ್ಗೊಲೆ ॥ ಶ್ರೀ ಪದನು॥(ಮೂ),
೨–೨ ನ(ಮೂ), ೩–೩ ದೆ(ಮೂ), ೪–೪ ಗಾ(ಮೂ), ೫–೫ X(ಮೂ), ೬–೬ X(ಮೂ), ೭–೭ ವರ(ಮೂ), ೮–೮ ಹೋಲಿತು(ಮೂ), ೯–೯ ದಾ(ಮೂ), ೧೦–೧೦ ಗುನ್ನೂತ(ಮೂ).

ಒಡಂಬಡಿಕೆಯ ಮಾಡಿ ಬೂದಿಹಾಳಿಗೆ ದಂಡ
ಒಡಗೊಂಡು ಬಂದು ನೀವೀಗ।
ಬಿಡಬಾರದು ಕೇಳೆನುತ ರಾಜೇಂದ್ರಗೆ
ನುಡಿದನೆಕ್ಕಟಿಯ ಗಂಗಯ್ಯ ॥೫॥

ಮೇದಿನಿ ಪತಿ ಕೇಳು ಬಾಗೂರ ಗೋವಿಂದ
ಬೂದಿಹಾಳಿನ ಗೊಲ್ಲ ಸಿರುಮ।
ಭೇದವೆಳ್ಳೆನಿತಿಲ್ಲ ನಂಬಿಗೆ [೧೧][ಸಲುಗೆಗ][೧೧]
ಳಾದವು ಅವ[೧೨][ರು][೧೨] ಇಬ್ಬ[೧೩][ರಿ][೧೩]ಗೆ ॥೬॥

ಪೋಗಿ ದಂಡನು ಬೂದಿಹಾಳಿಗೆ ಬಿಟ್ಟರೆ
ಆ ಗೋವಿಂದನೈತಂದು।
ತಾಗಿದಲ್ಲದೆ ಬಿಡ ಅದರಿಂದ ಬಾಗೂರಿ
ಗಾಗಿ ನಡೆಯಬೇಕೆಂದ ॥೭॥

ಇನ್ನಿಹ ರಾಜಕಾರ್ಯಕೆ ತೆರನೇನೆಂದು
ಮನ್ನೆಯರನು ರಾಯ ನೋಡೆ।
[೧೪][ಹೊ][೧೪]ನ್ನವಳ್ಳಿಯ ವೇದರಾಜ ಕೈಮುಗಿವುತ
ಬಿನ್ನೈಸಿದನಿಂತೆಂದು ॥೮॥

ತಪ್ಪದು ಗಂಗೆನಾಯಕನ ಬಿನ್ನಪವಿದು
ಒಪ್ಪಿಗೆ ನಮ್ಮ ಎಲ್ಲರಿಗೆ।
ದರ್ಪವ ಮುರಿದು ಗೋವಿಂದನ ಕೆಡಿಸಲು
[೧೫][ಬ][೧೫]ಪ್ಪುದು [೧೬][ಮುನಿಸು][೧೬] ಸಿರುಮನಿಗೆ ॥೯॥

ಎಂದ ಮಾತನು ಕೇಳುತಲಾಗ ರಾಯನ
ಲ್ಲಿಂದ ಮುಂದಕ್ಕೆ ಬೇಗದೊಳು।
ಸಂದಣಿಸಿತು ಕರಿ ತುರುಗ ಕಾಲಾಳಾಗ
ಕೆಂಧೂಳು ಮುಸುಕಿತಂಬರಕೆ ॥೧೦॥

೧೧–೧೧ ಸುರೆಗಾ (ಮೂ), ೧೨–೧೨ ರ(ಮೂ), ೧೩–೧೩ ದಿ(ಮೂ), ೧೪–೧೪ ವ(ಮೂ), ೧೫–೧೫ ಮು(ಮೂ), ೧೬–೧೬ X(ಮೂ)

ಹೊಡದವು ಭೇರಿ ತಂಬಟ ನಿಸ್ಸಾಳವು
ತಡೆಯ ಬಿಟ್ಟಂತೆ ಸಿಡಿ[೧೭][ಲನು][೧೭]
ನಡೆಯಿತು ಬಾಗೂರಿಗಾಗಿ ರಾಯನ ದಂಡು
ಪೆಡೆ ಕುಸಿಯಲು ಫಣಿಪತಿಯು ॥೧೧॥

ಕೇಳಿದ ಬಾಗೂರಿಗೆ ಹೋಹ ದಂಡನು
ಆಳುಗಳತಿ ನಾಯಕರ।
ತಾಳಿದ ಕೋಪವ ಸಿರುಮನ ಮಗ ಮಲ್ಲ
ಮೇಳೈಸಿದ ಪಟುಭಟರ ॥೧೨॥

ಬಂದು ತಾಗಿದ ಹಿಂದೆ ಪೋಗುವ ಸದಳವ
ಕೊಂದನು ಇದಿರಾಂತ ಭಟರ।
ಮುಂದುಗೆಟ್ಟಿತು ದುಮ್ಮದಾಸಿಯ ಕಾವಲು
ಮಂದಿ ಓಡಿತು ಕಂಡಕಡೆಗೆ ॥೧೩॥

ಜಲ್ಲಿ ಭಂಡಾರ [೧೮][ಬೊ][೧೮]ಕ್ಕಸದ ಪೆಟ್ಟಿಗೆಗಳ
ನೆಲ್ಲವ ಸೂರೆಯಗೊಂಡು।
ಮಲ್ಲ ತಿರುಗಿದನತ್ತಲು ಬೂದಿಹಾಳಿಗೆ
ಎಲ್ಲವ ಸಿರುಮಗೊಪ್ಪಿಸಲು ॥೧೪॥

ನಿಲ್ಲದೆ ಕೋಲಾಹಲವ ಕೇಳುತ ರಾಯ
[೧೯][ಎಲ್ಲಿ][೧೯]ಯ [೨೦][ಹು][೨೦]ಯ್ಯಲೆಂದೆನಲು।
ಗೊಲ್ಲ ಸಿರುಮನ ಕುಮರ ಮಲ್ಲ ಕೊಂಡೊಯ್ದ
ಜಲ್ಲಿ [೨೧][ಬೊ][೨೧]ಕ್ಕಸದ ಪೆಟ್ಟಿಗೆಯ ॥೧೫॥

ನುಡಿಯ ಕೇಳುತ ರಯ ಬಾಗೂರಿಗೆ ಹೋಹ
ಗೊಡವೆ ಬೇಡೆಂದು ಸಿರುಮನ।
ಹೊಡದು ತಲೆಯ ಅವನ ಬೂದಿಹಾಳನು
ಬಿಡುವೆ ಸೂರೆಯನೆಂದ ರಾಯ ॥೧೬॥

೧೭-೧೭ ಲಿನ(ಮೂ), ೧೮-೧೮ ಬ(ಮೂ), ೧೯-೧೯ ಯೆಲ್ಲೆ(ಮೂ), ೨೦-೨೦ ವು(ಮೂ), ೨೧-೨೧ ಬ(ಮೂ)

ನರನಾಥನ ಕೋಪವ ಕಂಡು ದಳಪತಿ
ಕರಗಳ ಮುಗಿದು ಬಿನ್ನೈಸಿ।
ಇರಲಿ ಬೊಕ್ಕಸದ ಪೆಟ್ಟಿಗೆ ಸಿರುಮನ ಮಗನ
ಹರಣಕಿಕ್ಕಿದ ಸಂಚಕಾರ ॥೧೭॥

ಎಂದು ಮಾತಾಡಿ ತೆರಳಿತು ಬಾಗೂರಿಗೆ
ಮುಂದಣ ಬಲು ಬಯಲೊಳಗೆ।
ತಂದಿಕ್ಕಿದರು ದೊರೆ ದೊರೆಗಳ ಪವುಜನು
ಮುಂದುವರಿಯೆ ತವಕಿಗಳು ॥೧೮॥

ಹರಿಗೆಯ ಪವುಜು ಡೆಂಕಣಿಯೊ[೨೨][ಳು][೨೨] ಬಿಲ್ಲ ಮೋ
ಹರ ಪೆಟ್ಟಲ ಸಂದೋಹ।
ತುರುಗದ ಥಟ್ಟು ಕರಿಗಳ ಸಂದಣಿಯಿಂದ
ದೊರೆ ದೊರೆಗಳು ಮೋಹರಿಸಿ ॥೧೯॥

ನೆಗಹಿದ ನೇಜೆಯ ಸಬಳ ಟೆಕ್ಕೆಯು ಚಕ್ರ
[೨೩][ಮು][೨೩]ಗಿಲ ಮುಸುಕಿತೇನೆಂಬೆ।
ಜಗ ಒದರಲು ಹೊಡೆದವು ವಾದ್ಯಗಳಾಗ
ಬೆಗಡುಗೊಳ್ಳಲು ಅರಿನಿಕರ ॥೨೦॥

ನಿಂದ ಪವುಜನು ಕಾಣುತ್ತೆ ಗೋವಿಂದನು
ಮಂದಿ ಕುದುರೆ ಸಹವಾಗಿ।
ಬಂದ[೨೪][ನು][೨೪] ಹೊರವ[೨೫][ಳಯಕೆ][೨೫] ಸುಭಟರಾಗ
ಳಂದಣಿಸಿತು ಬಹಳದಲಿ ॥೨೧॥

ಅರಿ ಬಿರಿದಿನ ಬಿ[೨೬][ಲ್ಲಿ][೨೬]ನವರು ಬಂದರು ಬಲು
[೨೭][ಹ][೨೭]ರಿಗೆಯ ಬಲವೊದಗಿದರು।
ತುರಗ ಸಮೂಹ ಜೋಡಿಸಿತು ಗೋವಿಂದನ
ಮೆರೆವ ಪೆ[೨೮][ರ್ಬು][೨೮]ಲಿಗಳಂ[೨೯][ದದಲಿ][೨೯]]॥೨೨॥

೨೨–೨೨ ಡು(ಮೂ), ೨೩–೨೩ ಮಿ(ಮೂ), ೨೪–೨೪ ರ(ಮೂ), ೨೫–೨೫ ಳೈ (ಮೂ), ೨೬–೨೬ ಲ್ಲ(ಮೂ), ೨೭–೨೭ ಅ(ಮೂ), ೨೮–೨೮ ರ್ದೂ(ಮೂ), ೨೯–೨೯ ದಾಲ(ಮೂ)

ಚೂಣಿಯ ಬಿಲ್ಲುಗಾರರುಗಳೆಚ್ಚಾಡಿತು
ಬಾಣದ ಮಯವಾಯಿತಲ್ಲಿ।
[೩೦][ತಾ][೩೦]ಣವ ಬಿಟ್ಟೋದಗಿತು ಹರಿಗೆಯ ಮಂದಿ
ಮಾಣದೆ ಹೊಡೆದಾಡಿದರು ॥೨೩॥

ಹೊಡೆದವು ಲಗ್ಗೆ ತಂಬಟಯಿರದೊಡನೆ
ಕಡುಗಲಿಗಳು ಭರದಿಂದ।
ಕಡಿದಾಡಿದರು ಕಾಲಾಳು ಮುಂದ[೩೧][ಲೆಗ][೩೧]ಳ
ಪಿಡಿದೀಡಾಡಿತ್ತೇನೆಂಬೆ ॥೨೪॥

ಹೊಡೆದ ಭರಕೆ ತಲೆ ಕೆಡೆಯೆ ಮುಂಡಗಳೆದ್ದು
ನಡೆಯೆ ರಕ್ತವು ಭೂಮಿಯಲ್ಲಿ।
ಮಡುಗಟ್ಟಿ ಪೆಣಗಳು ಮೆದೆಯೊಡ್ಡಿ ಕಾಲಾಳು
ಕಡೆದಾಡಿದರು ರಭಸದಲಿ ॥೨೫॥

ಒಡನೆ [೩೨][ಬೊಬ್ಬಿ][೩೨]ರಿದು ಪೊ[೩೩][ಕ್ಕ][೩೩]ರು ಗೋವಿಂದನ
ಕಡುಗಾಲದೊತ್ತಿ ರಾವುತರು।
ಕೆಡೆದಾರ್ಭಟಿಸಿ ಕತ್ತಿಯ ಕಿತ್ತು ನಡೆಯಿತು
ತಡ ವಾದ್ಯದ ರಭಸದಲಿ ॥೨೬॥

ಉರುಬಿತು ಉರವಣಿಯಿಂದ ರಾಹುತರಾಗ
ಳಿರಿದರು ಇದಿರಾದ ಭಟರ।
ಮುರಿದರು ರಾಯ ಥಟ್ಟಿನ ಚೂಣಿಯ ಮಂದಿ
ತರುಬಿ ನಿಂದರು ಪರಬಲವ ॥೨೭॥

ಹಿಂಗಡೆಯಿಂದ ಏರಿತು ರಾಯನ ದಳ ತು
ರಂಗದ ಬಳಿ ಮೋಹರಿಸಿ।
ಸಿಂಗಾಡಿ ಸಿಲ್ಲೆಹ ಬಲ್ಲೆ ಅಗಳನಿಂತು
ತುಂಗ ವಿಕ್ರಮರೊದಗಿದರು ॥೨೮॥

೩೦–೩೦ ತ್ಯ (ಮೂ), ೩೧–೩೧ ವೇಗಾ (ಮೂ), ೩೨–೩೨ ಬಬಿ(ಮೂ), ೩೩–೩೩ ಕಾ(ಮೂ).

ನೂಕಿತು ಒಂದೆ ತಾಗೆಯದಿ ಕುದುರೆ ಆದಿ
ನಾಲ್ಕು ಸಾವಿರ ರಾಯ ದಳದಿ।
ನಾಕವ ಮುಸುಕೆ ಕೆಂಧೂಳು ವಾದ್ಯದ ಧ್ವನಿ
ಲೋಕವ ಕಿವುಡುಗೊಳಿಸಿತು ॥೨೯॥

ಭಲ್ಲೆಹ ಲಹುಡಿ ಮುಸಲ ಕೊತ್ತು ಖಡ್ಗದ
ಬಲದ[೩೪][ವ][೩೪]ರವರೊದಗಿದರು।
ನಿಲ್ಲದೆ ತಿವಿದಾಡಿದರು ರೋಷದಿ ಕಣ
ನೆಲ್ಲ ರಕುತಮಯವಾಯಿತು ॥೩೦॥

ಏನ ಪೇಳುವೆ ರಯನ ಚಲ[೩೫][ದಾ][೩೫]ಳು ಮ
[೩೬][ದ್ದಾ[೩೬]ನೆ ಕವಿ[೩೭][ದು][೩೭] ಉರವಣಿ[೩೮][ಸೆ][೩೮] ।
[೩೯][ಆನ][೩೯]ಲಾರದೆ ಗೋವಿಂದ ಪೊಕ್ಕನು ತನ್ನ
ಸೇನೆ ಸಹಿತ ಬಾಗೂರ ॥೩೧॥

ಹೆಬ್ಬಾಗಿಲ ಹಾಕಿಸಿದನು ಗೋವಿಂದ
ಹಬ್ಬಿತ್ತು ಭೀತಿಯೆಲ್ಲರಿಗೆ।
ತಬ್ಬಿಬ್ಬುಗೊಳುತಿರ್ದ ಪುರಜನರೆಲ್ಲ
ರು[೪೦][ಬ್ಬೆ][೪೦]ಯನೇನ ಬಣ್ಣಿಸುವೆ ॥೩೨॥

ಸುತ್ತ[೪೧][ಬ][೪೧]ಳಸಿಬಿಟ್ಟವು ಪಾಳೆಯಗಳು
ತೆತ್ತವು [೪೨][ನೆ][೪೨]ರೆಯ[೪೩][ನಾ][೪೩]ಗ।
ಎತ್ತಿತ್ತು ಗುಡಿಯು ಗುಡಾರ ಗುಮ್ಮತ್ತಿಗಳು
ಮತ್ತೆಲ್ಲ ದೊರೆ ದೊರೆಗಳಿಗೆ ॥೩೩॥

ಕಂಗೊಳಿಸಿತು ರಯನೋಲಗಶಾಲೆ ತು
ರಂಗದಾಲಯಗಳಿಂದ।
ಅಂಗಡಿಗೇರಿ ಕೊಟ್ಟಿಗೆಯ ಸಾಲುಗಳಿಂದ
[೪೪][ಕೆಂಗ][೪೪]ನೆಯ ವೀದಿಯೆಸೆಯೆ ॥೩೪॥

೩೪–೩೪ X(ಮೂ), ೩೫–೩೫ ದೊ(ಮೂ), ೩೬–೩೬ ದಾ(ಮೂ), ೩೭–೩೭ ದ(ಮೂ), ೩೮–೩೮ ಸಿ(ಮೂ), ೩೯–೩೯ ಅನ್ನಾರ(ಮೂ), ೪೦–೪೦ ಬೆ(ಮೂ), ೪೧–೪೧ ಬೆ(ಮೂ), ೪೨–೪೨ ಗೆ(ಮೂ), ೪೩–೪೩ ವಾ(ಮೂ), ೪೪–೪೪ ಕಂಗಾ(ಮೂ).

ಮುಳುಗಿದನಾ ಸಮಯದಿ ರವಿ ಪಡುವಣ
ಜಳನಿಧಿಯೊಳು ಬಂದಾಗ।
ನಳಿನ ಮುಗಿಯೆ ನೈದಿಲು ನಗೆ[೪೫][ತಾರಗೆ][೪೫]
ತೊಳಗಿದ[೪೬][ವಾ ನಭ][೪೬]ದೊಳಗೆ ॥೩೫॥

ಕತ್ತಲೆಯೊಳು ತಿ[೪೭][ರು][೪೭]ಗುವ ಪರಿ[೪೮][ಕಾರರು][೪೮]
ಸುತ್ತಲು ಕಾ[೪೯][ದ][೪೯] ಸುಭಟತು।
ಎತ್ತಿದ ಪಂಜಿನ ಬೆಳಕಿಂದ [೫೦][ತಿಮಿರದ][೫೦]
ಮೊತ್ತದಿ ಪಾಳೆಯವೆಸೆಯೆ ॥೩೬॥

ಜಾರೆ ಕತ್ತಲೆ ಇದಿ[೫೧][ರೇ][೫೧]ರೆ ತಾವರೆ [೫೨][ಪದ್ಮ][೫೨]
[೫೩][ಹಾ][೫೩]ರೆ ತುಂಬಿಗಳಲ್ಲಲ್ಲಿ।
[೫೪][ಪಾರಿಜಾತ ರಾಗವೇರೆ][೫೪] ಸೂರ್ಯ ಬಂದು
ತೋರಿದನುದಯಾದ್ರಿಯಲಿ ॥೩೭॥

ಉದಯವಾಗದ ಮುನ್ನ [೫೫][ಹೊಯ್ಯಲು][೫೫] ತಂಬಟೆ
ಗದಗದಿಸುತ ಭೂಮಿ ಬಿರಿಯೆ।
ಮದದಾನೆ ತುರಗ ಕಾಲಾಳು ಬೊಬ್ಬೆಗಳಿಂದ
ಒದಗಿತು ಕೋಟೆ ಕಾಳಗಕೆ ॥೩೮॥

ತಳಿಯ ಹಾಕುತ ಅಗಳುಗಳ ಸೊಂಪುಗಳಿಂದ
ನೆಲ ಸರಿಸವಮಾಡಿ ಹೂಳಿ।
ಹೊಳಿಕೆಯ ಭಟರೇರಿದರೆಂಟು ದಿಕ್ಕಿನಲಿ
ಅಳುಕದೆ[೫೬][ನೆರೆ ಬೊಬ್ಬಿ][೫೬]ರಿದು ॥೩೯॥

ಎತ್ತಲೀಸದೆ ತಲೆಗಳ ಕವಿದೆಚ್ಚರು।
ಹತ್ತಿದರಾಗ ಕೋಟೆಯನು
ಎತ್ತುಗಲ್ಲುಗಳ ಹಾಕುತ್ತ ಈಟಿಗಳಿಂದ
ಹೊತ್ತೆತ್ತಿ ತಿವಿದು ನೂಕಿದರು ॥೪೦॥

೪೫–೪೫ ತಾವರೆ(ಮೂ), ೪೬–೪೬ ನಾ ಬನ(ಮೂ), ೪೭–೪೭ X (ಮೂ), ೪೮–೪೮ ಕಾರ(ಮೂ), ೪೯–೪೯ ಡದ(ಮೂ), ೫೦–೫೦ ತಮವರ(ಮೂ), ೫೧–೫೧ ದೋ(ಮೂ), ೫೨–೫೨ ಪೆಂದ್ದೆ(ಮೂ), ೫೩–೫೩ ಯಾ(ಮೂ), ೫೪–೫೪ ಪಾರ್‍ರಿಜಾತ್ತೆರಾಗಾವೆರ್‍ರೆ (ಮೂ), ೫೫–೫೫ ಹುಯಿಲು (ಮೂ), ೫೬–೫೬ ನೈರೆ ಬೂಬಿ(ಮೂ).

ಅಡರಲು ಆ ಕೋಟೆಯ ಹತ್ತಿ ಬರುವರ
ಹೊಡೆದಗಳಿಗೆ ಕೆಡಹಿದರು।
ಬಿಡದೆ ಬಾಸೆಯ ಮಾಡಿ ನರಸಿಂಗನ ಬಲ
ಒಡನೆ ಬಿಬ್ಬಿರಿ ಹಾಕಿದರು ॥೪೧॥

ಕಾದ ಮಳಲು ಸಾಸುವೆ[೫೭][ಸುಣ್ಣ][೫೭]ದಪುಡಿ
ಕಾದ ಅಂಬಲಿಯಾಸಿನವನು।
ಭೇದವಿಲ್ಲದೆ ಪೊಯ್ಯುವ [೫೮][ಹೊಯ್ಲೀಗೆ][೫೮]
ಹೋದ [೫೯][ಪ್ರಾ][೫೯]ಣವು ಲೆಕ್ಕವಿಲ್ಲ ॥೪೨॥

ನಿಲ್ಲದೆ ಲಗ್ಗೆಗಳಾಗ[೬೦][ಲೀ][೬೦] ರಾಯನ ಬಲ
ವೆಲ್ಲ ಬಂದುದ ಕಂಡು ಭರದಿ।
ಬಲ್ಲಿದ ದೊರೆ ದೊರೆಗಳ ಪವುಜು ನಡೆಯಲು
ತಲ್ಲಣಿಸಿತು ಬಾಗೂರು ॥೪೩॥

ಕಂಡೊಂದು ದಿನದ ಮಧ್ಯಾಹ್ನದಿ ಜಗಳವ
ಗುಂಡಿಗೆ[೬೧][ಬೆದ][೬೧]ರಿ ಗೋವಿಂದ ಭೂ।
ಮಂಡಲಪತಿಗೆ ಕೈಸೆರೆಯಾದೆವೆನ್ನುತಲಿ
ಮಂಡೆಯ[೬೨][ನೊಲೆ][೬೨]ದು ಚಿಂತಿಸಿದ ॥೪೪॥

ಕರೆಸಿದನು ಮಣಿಹಾರನ ಗೋವಿಂದನು
ಬರಸಿದ ಓಲೆ[೬೩][ಒ][೬೩]ಕ್ಕಣಿಯ।
ಸಿರುಮಭೂವರ ತನ್ನ ಕಾವುದು ಪುಣ್ಯವು
ದೊರೆ ವಶವಾಯಿ[೬೪][ತೀ ನೆಲ][೬೪]ವು ॥೪೫॥

ಎಂದು ಓಲೆಯ ಬರಸಿ ಕೊಟ್ಟು ಮಣಿಹಾರಗೆ
ತಂದು ಉಡುಗೊರೆಗಳ ಪೊದಿಸಿ।
ಬಂದ[೬೫][ನು][೬೫] ನೀರಬಾಗಿಲ ಜ[೬೬][ಡ್ಡಿ][೬೬]ಯ ದಾಂಟಿ
ಕಂದ ಪೋಗೆಂದು ಕಳುಹಿದ ॥೪೬॥

೫೭–೫೭ ಜುಂಣ(ಮೂ), ೫೮–೫೮ +(ಮೂ), ೫೯–೫೯ ಪ್ಯಾ(ಮೂ), ೬೦–೬೦ ವೀ(ಮೂ), ೬೧–೬೧ ಭೇದಾ(ಮೂ), ೬೨–೬೨ ನವಿ(ಮೂ), ೬೩–೬೩ ಬ(ಮೂ), ೬೪–೬೪ ತಿ(ಮೂ), ೬೫–೬೫ ರು(ಮೂ), ೬೬–೬೬ ಡಿ(ಮೂ).

ಒಡೆಯನೊಡನೆ ಕಳುಹಿಸಿಕೊಂಡು ಮಣಿಹಾರ
ಪುಟ ನೆಗೆದನು ಚೆಂಡಿನಂತೆ।
ತಡೆಯದೆ ೬೭[ಹೊಮ್ಮುವ]೬೭ ಎರಳೆಯಂದದಲವ
ನಡೆದನು ಬಲು ಭರದಿಂದ ॥೪೭॥

ನೀರುಗುಂದದ ಏರಿಯ ದಾಂಟಿ ನಿಮಿಷಕ್ಕೆ
ಹಾರಿದ ಕೆಲೋಡಿಗಾಗಿ।
ಭೋರನೆ ೬೮[ವೇ]೬೮ದವತಿಯ ೬೯[ಹೊ]೬೯ಳೆಯನು ದಾಂಟಿ
ನೇರಿಲಕೆರೆಗಾಗಿ ಬಂದ ॥೪೮॥

ಬಂದು ಕಪ್ಪರ ವೀರಣ್ಣಗೆ ಶರಣೆಂದು
ನಿಂದು ಮೂಡಣ ಬಾಗಿಲೊಳಗೆ।
ಬಂದವನೆ ಮಣಿಹಾರನೆಂದುಸುರಲು
ಅಂದು ಕರೆಸಿದನೋಲಗಕೆ ॥೪೯॥

ಬಣ್ಣದ ಚಾವಡಿ ಓಲಗದೊಳು ಆಗ
ಗಣ್ಯ ಸಿರುಮನು ಕುಳ್ಳಿರಲು।
ಕಣ್ಣಾರೆ ಕಂಡು ಕೈಮುಗಿದು ಮಣಿಹಾರನು
೭೦[ಎಣ್ಣೆ ಹರಿವಂದದಿ ಬೆಮರಿ]೭೦ ॥೫೦॥

ಮುತ್ತಿನ ಚಾವಡಿ ಗದ್ದುಗೆಯಲ್ಲಿ ಸಿರುಮನು
ಸುತ್ತ ಮನ್ನೆಯರೊಗ್ಗಿನಲಿ।
ಲೆತ್ತ ಪಗಡೆ ಚದುರಂಗವಾಡುತಲಿರೆ
ಒತ್ತಿಲಿ ವಾಲೆಯಿಕ್ಕಿದನು ॥೫೧॥

ವಾಲೆ ಒಕ್ಕಣೆಯು ಹಾಗಿರಲಿ ಮಣಿಹಾರನೆ
ಮೇಲಾದ ಬಾಯ ಒಕ್ಕಣೆಯ।
ಆಲಸವಿಲ್ಲದುಸು೭೧[ರೆನೆ]೭೧ ರಾಯನು ಬಂದುದ
ಬೇಗದಿ ಸಿರುಮ ಕೇಳಿದನು ॥೫೨॥

೬೭–೬೭ ಆಮಾವ(ಮೂ), ೬೮–೬೮ ಯಾ(ಮೂ), ೬೯–೬೯ ವ(ಮೂ), ೭೦–೭೦ ಯಂಣೋರವೆಂದಾದೀ ಬ್ಯಮರು(ಮೂ), ೭೧–೭೧ ರು(ಮೂ).

ಬಂದುದು ಸಾಳುವ ನರಸಿಂಗನ ದಂಡು
ಕೊಂದೆವು ಮಂದಿ ಕುದುರೆಯ।
ಸಂದೇಹವೆ ಊರು [೭೨][ಬೆ][೭೨]ರಗಾಗಿ ಹೋಗುತಲಿದೆ
ಎಂದು ನುಡಿದ ಮಣಿಹಾರ ॥೫೩॥

ಎಂದ ನುಡಿಯ ಕೇಳುತಲಾ ಸಿರುಮಯ್ಯ
ಮಂದಿ ಮನ್ನೆಯರನು ನೋಡಿ।
ಮುಂದಣ ತೆರನೇ[ನೆ]ನುತ್ತ ಪ್ರಧಾನನ
ಅಂದು ಕೇಳಿದ ನಸುನಗುತ ॥೫೪॥

ಅತ್ತ ಬಾಗೂರೊಳು ಗೋವಿಂದ ಕಾದಲು
ಇತ್ತಲು ಸಿರುಮಭೂವರನು।
ಮುತ್ತಿಗೆಯನು ಕೇಳುತ ವಾಲಗದಲ್ಲಿ
ವಿಸ್ತರಿಸಿದನಿಂತೆಂದು ॥೫೫॥

ನಡೆದು ಬಾಗೂರೊಳಗಿಹ ರಾಯನ ದಂಡ
ಕಡಿದು ಕಂಗೆಡಿಸಿ ಕೀರ್ತಿಯನು।
ಪಡೆವರಿಗಿದು ಸಮಯವುಯೆಂದು ಸಿರುಮಯ್ಯ
ನುಡಿದನೋಲಗದಿ ವಾಕ್ಯವನು ॥೫೬॥

ಎದ್ದನಾ ಸಮಯದೊಳು ಕಾಚನಾಯಕ
ವದ್ದಿ ಭಾಷೆಗಳ ಮಾಡಿದನು।
ಬಿದ್ದು ಕಗ್ಗೊಲೆಯ ರಾಯನ ಕೂಟಕೆ ಬಂದ
ದೊದ್ದೆಗಾರರ ಒರಸುವೆನು ॥೫೭॥

ಏಕೆ ತಡವ ಮಾಡಿದೆಯೊ ಸಿರುಮೇಂದ್ರಪ
ಹಾಕು ವೀಳೆಯವನೆನ್ನುತ
ಲೋಕೈಕ ವೀರನೆದ್ದನು ಮಗ ಮಲ್ಲಯ್ಯ
ಆ ಕಳಕಳದ ಬೊಬ್ಬೆಯಲಿ ॥೫೮॥

೭೨-೭೨ ವ(ಮೂ).

ಮುತ್ತಿಗೆಯನ್ನು ತೆಗೆಸುವೆ ಬಾಗೂರಿನ
ಸುತ್ತ ಬಿಟ್ಟಿರುವ ದೊರೆಗಳ।
ಮೃತ್ಯುಮಾರಿಯ ೭೩[ಬಾಯ ತುತ್ತ]೭೩ ಮಾಡುವೆನೀಗ
ಚಿತ್ತ್ರೈಸೆನಗೆ ವೀಳೆಯವಾ ॥೫೯॥

ಕಾಲ ತೊಡರುಗಳುಲಿಯೆ ಸರಪಣಿಗಳು
ತೋಳಲಿಕ್ಕಿದ ಭುಜಕೀರ್ತಿ।
ಮೇಲೆ ನುಡಿದನು ಕುಮಾರ ವೀರನು ಅರಿ
ಕಲಾಂತಕ ಸಿರುಮಗೆ ॥೬೦॥

ಕಡಿದೋಡಿಸುವೆ ರಾಯನ ದಂಡ ದೊರೆಗಳ
ಪಿಡಿಯಾಳಾಗಿ ಪಿಡಿಸುವೆನು।
ಕುಡಿಸಿ ರಕುತ ಬೂತ ೭೪[ಪ್ರೇತ]೭೪ ಮರುಳಿನ
ಪಡೆಯನೆಲ್ಲವ ದಣಿಸುವೆನು ॥೬೧॥

ಮಕ್ಕಳಾಡುವ ಪಂಥದ ಮಾತುಗಳಿಂದ
ಹೆಕ್ಕಳವಡೆದು ಕಂಗೊಳಿಸೆ।
ಗಕ್ಕನೆ ನಡೆದು ಕಡಿದು ರಾಯನ ದಂಡ
ಸೊಕ್ಕ೭೫[ಡಗಲು]೭೫ ಕೀರ್ತಿ ಬಹುದು ॥೬೨॥

೭೬[ತೂಳಿ]೭೬ದುದು ಪರಿವಾರ ತಮ್ಮೊಳು ತಾವು
ಹಾಳು ಮತ್ಸರದಿಂದ ಸೆಣಸಿ।
ಕಾಳಗ೭೭[ವಿಂದಿ]೭೭ನ್ನು ತಮ್ಮದೆನ್ನುತಲಾಗ
ವೀಳೆಯಗಳನು ಬೇಡಿದರು ॥೬೩॥

ಕೇಳಿದನವರ ಪರತಮ ಪಂಥವ
ಕೋಲಾಹಲಗಳನೆಲ್ಲವನು।
ಕಾಳಗಕವರೊಳು ಸಿರುಮನೃಪಾಲ
ಕೇಳಿದ ಕಲ್ಲರಸನನು ॥೬೪॥

೭೩–೭೩ ಬಯತುತ(ಮೂ), ೭೪–೭೪ ಪೇಳ (ಮೂ), ೭೫–೭೫ ಟ ಕಾಲು(ಮೂ), ೭೬–೭೬ ತೊಳೆ (ಮೂ), ೭೭–೭೭ ವೆಂದೆ(ಮೂ).

ನೆರೆ[೨೮][ಗಲಿ][೨೮] ವೀರಭದ್ರಯನ ಮಲ್ಲಯನ
ಬರುವ ದಂಡಿನ ಮೇಲೆ ಕಳುಹೆ।
ಮುರಿಯಲಿರಿವ ರಾಯನ ದಂಡ ಪಂಥದೊ
[೨೯][ಳ][೨೯]ರಗು[೩೦][ವ][೩೦]ದನರಿಯರು ॥೬೫

ವಿಕ್ರಮವೊಂದಲ್ಲ ಚತುರೋಪಾಯದ
[೩೧][ಲ್ಮಿ][೩೧]ಕ್ಕವನಿಗೆ ಎಣೆಯಿಲ್ಲ।
ಪೊಕ್ಕು ಹೋರಾಡಬಲ್ಲ ಕಾಚೇಂದ್ರ
ಕಗ್ಗೊಲೆ[೩೨][ಗ][೩೨]ತುಳ ವೀರಭಟನು ॥೬೬॥

ಬಲ್ಲನೆಲ್ಲವ ಬುದ್ಧಿಯ ಕಾಚಯ್ಯನು
ಬಲ್ಲಿದನಿವನು ಕಗ್ಗೊಲೆಗೆ।
ಗೆಲ್ಲುಗೈಯ್ಯರ ಕೂಡಿ ಕಳುಹೆಂದು ಸಿರುಮಗೆ
ಕಲ್ಲರಸಯ್ಯ ಪೇಳಿದನು ॥೬೭॥

ಎಂಟು ದಿಕ್ಕಿನ ರಾಯರ ಗಂಡನೆ ಸುಕಲಿ
ಒಂಟಿ ಬಾವುಲಿ ಸರಪಣಿಯ।
ಬಂಟರೊಳಗೆ ಬಂಟನೆನುತಲಿ ಮುತ್ತಿನ
ಕಂಠಮಾಲೆಯ ಕುವರಗೆ ॥೬೮॥

ಮಲವರಾಯರ ಗಂಡ ಚಲದಂಕ ಬಿರಿದುಳ್ಳ
ಕಲಿಸಾಳ್ವನೆಂಬ ತೇಜಿಯನು।
ಚಲದಂಕ ಸಿರುಮಯ್ಯ ತರಿಸಿ ಕೊಟ್ಟನು ಬೇಗ
ಗೆಲುವಿಂದ ಕಾಚನಾಯಕಗೆ ॥೬೯॥

ಕರೆದು ಕೊಟ್ಟನು ವೀಳೆಯವ ಸಿರುಮ ತನ್ನ
ಹಿರಿಯ ಕುಮಾರ ಕಾಚಯಗೆ।
ಅರಿಬಿರಿದಿನ ವೀರರು ಕೂಡಿ ನೀವೀಗ
ತೆರಳೆಂದು ನೇಮವನಿತ್ತ ॥೭೦॥

೨೮-೨೮ ಗಾಳ(ಮೂ), ೨೯-೨೯ ಳೊ(ಮೂ), ೩೦-೩೦ ತ(ಮೂ), ೩೧-೩೧ ಳ್ಮಿ(ಮೂ), ೩೨-೩೨ ಗೆ ಕ(ಮೂ).

ಬೆಸನಾದುದು ಕಾಚಗೆ ಕರೆಸಿದನಾಗ
ಪೆಸರುಳ್ಳ ಬಂಟ ಬಂಟರನು।
ಅಸಹಾಯಸೂರರೊದಗಿದರು ಕಾಳಗಕೆಂದು
ಪಸಿದ ಪೆರ್ಬುಲಿಗಳಂದದಲಿ ॥೭೧॥

ಧುರವ ಕಾಣುತ ಹಿಮ್ಮೆಟ್ಟುವ ಬಂಟರ
ನೆರವಿಯ ಗಂಡನೆಂದೆ[ನಿ]ಪ।
ಸರಪಣಿ ಹರಿಗೆಯ ವಿರುಪ ಬಂದವನಾಗ
ಕರವ ಮುಗಿದನು ಕಾಚಯಗೆ ॥೭೨॥

ಕಾಲ ತೊಡರುಗಳುಲಿಯೆ ಸರಪಣಿಗಳು
ನೀಲಿಯ ಸತ್ತಿಗೆಯಿಂದ।
ಹಾಲಕುರಿಕೆಯ ಹನುಮ ಬಂದು ವೀರ
ಲಲಾಮ ಕಾಚಗೆ ಕರಮುಗಿದು ॥೭೩॥

ಕಂಡು ಹುಯ್ಯಲ ಕಡಿಯದ ಸರಿಭಟರಿಗೆ
ದಿಂಡುಗೆಡೆವ ಹೇಡಿಗಳನು।
ಗಂಡನೆಂದೆಂಬ ಬಿರಿದ ಪೊಗಳಿಸುತಲಿ
ಕೊಂಡದ ಬಸವಯ್ಯ ಬಂದ ॥೭೪॥

ಹೊಡೆಯೆ ರವುಡೆ ಮುಂಗಡೆಯ ಕರದೊಳಿರ್ದ
ಕಡುಗಲಿ ಕಾರ್ಮಿಂಚಿನಂದದೊಳು।
ನಡೆದನು ಬೋಗಾರ ವೀರ ಕಾಚಯ್ಯ [೮೩][ನ][೮೩]
ಮುಂಗಡೆಗೆ ವೀರಾವೇಶದಿಂದ ॥೭೫॥

ಎತ್ತಿ ಪಿಡಿವ ಸತ್ತಿಗೆ ಹರಿಗೆಯ ಮೇಲೆ
ಮೊತ್ತದ ಜಲ್ಲಿಗಳೆಸೆಯೆ।
ಮತ್ತಲ್ಲಿ ನಡೆದು ಕಾಚಗೆ ಕರಮುಗಿದನು
ಮತ್ತೋಡುವಿನ ಗಿಡ್ಡ ಗಿರಿಯ ॥೭೬॥

೮೩–೮೩ ನು(ಮೂ).

ಹಾದಿಯ ಜಗಳವ ಹಾ[೮೪][ರ][೮೪] ಬಡಿಗಳಿಂದ
ಕಾದಿ ಗೆಲಿವನವನೊರ್ವ।
ಮಾದಿಗ ಸಿಂಗ ಬಂದನು ಮಲವುತಲಿ
ಮದ್ದಾನೆ ಕಾಚನ ಹೊ[೮೫][ರೆ][೮೫]ಗಾಗಿ ॥೭೭॥

ಚಿನ್ನದ ಕಟ್ಟಿನ ಬಿಲ್ಲು[೮೬][ವಿ][೮೬]ನಟ್ಟಿನ
ಹೊನ್ನ ಮೋಹಳದ ಕಠಾರ।
ಬೆನ್ನಿನೊಳಿರುವ ಜಾಗಟೆ ಚಾಮರಗಳಿಂದ
ತನ್ನ ಕಚ್ಚುತ[೮೭][ನೊ][೮೭]ದಗಿದ[೮೮][ನು][೮೮] ॥೭೮॥

ಕೊಪ್ಪಿಗೆ ಸೂಲಂಗಿ ಹಾಕಿ ಬಿ[೮೯][ಲ್ಲಿನ][೮೯] ಹಿಂ
ದೊಪ್ಪುವ ಸೆಡಕಾನ ಜಲ್ಲಿ।
ತಪ್ಪದೆ ಹೊಡೆವ ಜಾಗಟೆಯಿಂದ ಬಂದನು
ಉಪ್ಪಿನಹಳ್ಳಿಯ ಚೋರ ॥೭೯॥

ಕಟ್ಟಿದ ಮಲ್ಲಗಾಸೆಯು ಹರಿಗೆಯ ಮೇಲೆ
ಇಟ್ಟು [೯೦][ಚೋ][೯೦]ಹದ ಬೊಂಬೆಗಳ।
ಕೊಟ್ಟಗಾರರ ತಿಪ್ಪನೈತಂದ ಕಾಚಗೆ
ದಿಟ್ಟತನದಿ ಕರಮುಗಿದ ॥೮೦॥

ರೋ[೯೧][ಷವೊಗೆದ][೯೧] ಹುಯ್ಯಲ ಕಂಡು ಮನದಲ್ಲಿ
ವಾಸಿ[೯೨][ಟ್ಟಾಡಿ][೯೨] ಹಿಂಗಡೆಯ।
ಆಸೆಗೈವರ ಗಂಡ ಬಂದು ಕೈಮುಗಿದನು
ಹಾಸಂದಿಯ ಮಲ್ಲುಗನು ॥೮೧॥

ಭಾಷೆಯ ಬರಸಿಡಿಲಂತೆ ಹಿಮ್ಮೆಟ್ಟುವ
ಮಾಸಾಳ್ಗಳ ಗಂಡನೆನಿಪ।
ಗೋಸಿಕೆರೆಯ ಗೊಲ್ಲ ವೀರ ಬಂದೆರಗಿದ
ಆ ಸುಭಟರ ಮಧ್ಯದಲಿ ॥೮೨॥

೮೪–೮೪ ಗ(ಮೂ), ೮೫–೮೫ ರ(ಮೂ), ೮೬–೮೬ ಶೆ(ಮೂ), ೮೭–೮೭ ರೊ(ಮೂ), ೮೮–೮೮ ರು(ಮೂ), ೮೯–೮೯ ಲ್ಲ(ಮೂ), ೯೦–೯೦ ಜೋ(ಮೂ), ೯೧–೯೧ ಷಾವಗದೆ(ಮೂ), ೯೨–೯೨ ಟ್ಟುಟ್ಟಾದೆ(ಮೂ).

ರಣಸೂರೆಗಾರ ಚಿಪ್ಪಿಗ ಕಲ್ಲ ಬಂದನು
ಝಣರೆನೆ ಹರಿಗೆಯ ಗಂಟೆ।
ಕಣಕಟ್ಟೆಯ ಸಿದ್ಧ ಬಂದು ನಿಂದನು
ಹನುಮನ ಬಿರಿದು [೯೩][ಮೆ][೯೩]ರೆಯಲು ॥೮೩॥

ತೊಳಗುವ ನೇಸರನಂತೆಸೆವ ಮೈಸಿರಿ ಕೈಯ
[೯೪][ತೊ][೯೪]ಳಪಾದ ಖಂಡೆಯವೆಸೆಯೆ।
ಅಳಿಯ ತಿಪ್ಪಯ್ಯ ಬಂದನು ಕಾಚಯ್ಯನ
ಬಳಿಗಾಗಿ ವೀರಾವೇಶದಲಿ ॥೮೪॥

ಬಲದ ಕೈಯಲಿ ಖಡ್ಗ ಬಿರಿದಿನ ಚೌರಿಗ
ಳುಲಿಯೆ ಹರಿಗೆ ಕರದೊಳಗೆ।
ಬಲು ಭಟರುಗಳ ಬೊಬ್ಬೆಗಳಿಂದ ಬಂದನು
ಚಲದಂಕಮಲ್ಲ ರಾವುತನು ॥೮೫॥

ಝುಗಝುಂಪಿನ ಸತ್ತಿಗೆ ಮುಂದೊಪ್ಪುವ
ಹಗಲು ಕೈದೀವಿಗೆಯಿಂದ।
ಅಗಸರ ತಿಮ್ಮ ಬಂದನು ಕಾಚಯ್ಯನ
ಬೆಂಗಡಿಗೆ ವೀರಾವೇಶದಿಂದ ॥೮೬॥

ಲಗ್ಗೆಯಿಂದತಿ ಮೈಹಿಗ್ಗುತ ರಣದೊಳು
ಕಗ್ಗೊಲೆಗೆ ಸುರಿತಾಳ।
ಎಗ್ಗರೆ ತಳವಾರ ವೀರ ಕಾಚಯ್ಯಗೆ ಮೈ
ಯಿಗ್ಗುತ ಕರವನೆತ್ತಿದನು ॥೮೭॥

ಚಿಕ್ಕ ಚಿಣ್ಣನು ತಿಮ್ಮ ಒಕ್ಕಲಿಗರ ಮುದ್ದ
ಅಕ್ಕಸಾಲೆಯ ಕೆಂಪಯ್ಯ।
ಬುಕ್ಕ ಬಸವ ಚಿಕ್ಕ ಲಕ್ಕರೊದಗಿದರು
ಎಕ್ಕತುಳದ ವೀರಭಟರು ॥೮೮॥

೯೩-೯೩ ಮೊ(ಮೂ)೯೪-೯೪ ತ(ಮೂ).

ಒಪ್ಪುವ ಬಿಳಿಯ ಸತ್ತಿಗೆ ಚಾಮರಗಳಿಂದ
ಲ್ಲಿಪ್ಪ ಮನ್ನೆಯರೊಗ್ಗಿನಲಿ।
ತಪ್ಪದೆ ಬಂದು ಕಾಚಗೆ ಕರ ಮುಗಿದನು
ಉಪ್ಪಲಿಕರ ಹೊನ್ನಕಳಸ ॥೮೯॥

ಕಂಪ ಕನ್ನುಗ ಜಗಜಂಪಿನ ಭೈರನು
ಕುಂಪ ಕಂಡೆಯದ ಹೊನ್ನುಗನು।
ಹಂಪ ಹನುಮ ಹಡಪದ ಸೋಮು*[ಗ]*ನಾಗ
ಬಂಟರುಗಳು ಒದಗಿದರು ॥೯೦॥

ಮಡದಲೊತ್ತಲು ಗಗನಕ್ಕೆ ಲಂಘಿಸುವುದು
[೯೫][ಸ][೯೫]ಡಿಲ ಬಿಡಲು ಲೆಗ್ಗೆಯವ।
ಪೊಡವಿಯ ಬಗಿದು ಪೋಗುವ ಜಾತಿ ತುರುಗವ
ತಡೆಯದೆ [೯೬][ಮೆ][೯೬]ಚ್ಚವಿಕ್ಕಿದರು ॥೯೧॥*

ಗಂಗಾಳದೊಳು ಮುಂಗಾಲಿಟ್ಟು ಕುಣಿವುದು
ಮಂಗಳ ಬೊಲ್ಲನೆಂಬುದನು।
ಹಿಂಗದೆ ಸಿರುಮಯ ತರಿಸಿಕೊಟ್ಟನು ಬೇಗ
ಲಿಂಗರಾವುತನೆಂಬುವಗೆ ॥೯೨॥

ಹಾರನಳ್ಳಿಯ ವೇದರಾಜ ಕಳುಹಿದದೊಂದು
ವಾರುವನೆಂಬ ತೇಜಿಯನು।
ಭೋರನೆ ಸಿರುಮಯ್ಯ ತರಿಸಿಕೊಟ್ಟನು ತನ್ನ
ಅಳಿಯ ತಿಪ್ಪಯ್ಯನೆಂಬುವಗೆ ॥೯೩॥

ಹಾಸಂದಿಯ ಕೆಂಚನಾಯಕ ಕಳುಹಿದದೊಂದು
ಆ ಸಂಪಿಗೆಯೆಂಬ ತೇಜಿ।
ದೇಶದ ಪತಿ ಸಿರುಮಯ್ಯ ತರಿಸಿಕೊಟ್ಟನು
ಈಶರಾವುತಗೆ ತೇಜಿಯನು ॥೯೪॥

– ಖ(ಮೂ), ೯೫–೯೫ ಸಿ(ಮೂ), ೯೬–೯೬ ವೆ(ಮೂ), * ಇದೇ ಪದ್ಯ ೫–೮೩ ರಲ್ಲಿ ಬಂದಿದೆ(ಸಂ).

ಕುಂಕನಡುವಿನ ಮಾಳನಾಯಕ ಕಳುಹಿದದೊಂದು
ಶಂಕುಪಾಲನೆಂಬ ತೇಜಿ।
ಬಿ[ಂ]ಕದಿ ಸಿರುಮಯ್ಯ ತರಿಸಿಕೊಟ್ಟನು ಬೇಗ
ಶಂಕರಾವುತನೆಂಬುವಗೆ ॥೯೫॥[೯೭]

ಕಡಿದು ಒದರಿ ಕಚ್ಚಿ ಕೆಡಹಿ ಕಾಲಾಳ್ಗಳ
ಬಿಡದೆ ಅಪ್ಪಳಿಸಿ ಕೊಲ್ಲುವುದು।
ಗಡಣದಿ ಸಿರುಮಯ್ಯ ತರಿಸಿಕೊಟ್ಟನು ಬೇಗ
ನಿಡುಗಟ್ಟದ ನಾಗರಾಜನಿಗೆ ॥೯೬॥

ಹರಿವಾಣದೊಳು ಪರಿಪರಿಯಲ್ಲಿ ಕುಣಿವುದು
ಧುರಕೆ ವಿಜಯನೆಂಬ ತೇಜಿ।
ಭರದಿಂದ ಸಿರುಮಯ್ಯ ತರಿಸಿಕೊಟ್ಟನು ತನ್ನ
ನಂಬುಗೆ ಅನುಜ ಮಲ್ಲಯಗೆ ॥೯೭॥

ನೆರೆದುದು ತುರಗದಿ ಕಾಲಾಳು ಸಿಂಹದ ಬಲು
ನೆರವಿಯೊ ಶರಭ ಜಂಗುಳಿಯೊ।
ಶರಧಿಯ ತುದಿಯ ಲಂಘಿಸಿ ವಡಬನ
ಪರಿಯಂತೆ ನಿಂದುದು ಪಡೆಯು ॥೯೮॥

ಬಂದ ಮಂದಿಗೆ ಕರಮುಗಿದನು ಕಾಚಯ್ಯನೈ
ತಂದೊಂದು ವಾಕ್ಯವ ನುಡಿದ।
ಹಿಂದುಳಿಯದೆ ಕುಂದು ತರದ ಬಂಟರೆಲ್ಲ
ಮುಂದಕ್ಕೆ ನಡಹಿ ನೀವೆಲ್ಲ ॥೯೯॥

ಓಡಿ ನಾಚುವರೆಲ್ಲ ನಿಲ್ಲಿ ಹುಯ್ಯಲ ಕಂಡು
ಹೇಡಿಯಾದವರೆಲ್ಲ ತಿರುಗಿ।
ಕೂಡಿ[೯೮][ಯಳುಕುವ][೯೮]ರೆಲ್ಲ ಮರಳಿಯಂದದಿ ಕಾಚ
ನಾಡಿದನಾ ಮಂದಿಯೊಡನೆ ॥೧೦೦॥

---

೯೭ ಇಲ್ಲಿ ೯೬ನೆಯ ಪದ್ಯ ಲುಪ್ತವಾಗಿದೆ. ನಾವು ಮುಂದಿನ ಪದ್ಯಕ್ರಮಸಂಖ್ಯೆಯನ್ನು ತಿದ್ದಿಕೊಂಡಿದ್ದೇವೆ (ಸಂ). ೯೮–೯೮ ಗಾಲಕ(ಮೂ).

ನಿರ್‍[ದ]ರ್‍ ಸುಭಟರಿತ್ತ ಬನ್ನಿ ಗಾಯಗಳಿಗೆ
ನೊಂದಂಜದವರಿತ್ತ ಬನ್ನಿ।
ಮುಂದುವರಿವರಿತ್ತ ಬನ್ನಿ ಸ್ವರ್ಗವನೀಗ
ಬಂದು ಹಿಡಿವವರಿತ್ತ ಬನ್ನಿ ॥೧೧೧॥

ಎಂದು ನುಡಿದ ಕಾಚಯ್ಯ ತನ್ನ ಮಂದಿಗೆ
ಗಂಧ ಕಸ್ತುರಿ ಪರಿಮಳವ।
ಅಂದು ತರಿಸಿಕೊಟ್ಟ ಕರ್ಪುರ ವೀಳ್ಯವ
ಬಂದನು ತನ್ನ ಅರಮನೆಗೆ ॥೧೧೨॥

ಉಟ್ಟನು ಮಲ್ಲಗಂಟಿಕ್ಕಿ ಕಾಸೆಯ ಕಿ
ಗ್ಗಟ್ಟ ಬಂದುಗೆಯ ಗೊಂಡೆಯದಿ।
ತೊಟ್ಟ ಹಾರ ಪದಕ ಕಂಠಮಾಲೆಯ
ಕಟ್ಟಾಳು ಆಯತದಿಂದ ॥೧೧೩॥

ಬಾಗೂರಿಗೆ ಪೋಗಿ ರಾಯ ಮುತ್ತಿಗೆ ಮಾಡಿ
ಕಾದುತಲವನೆ ಗೋವಿಂದ।
ಬೇಗ ನಾ ಮೇಲು ಹುಯ್ಯಲಿಗೆ ಪೋಗುವೆನೆಂದು
ಪೇಳಿದ ರಾಣಿಯರೊಡನೆ ॥೧೧೪॥

ಚಿತ್ತೈಸಿ ಬಾಗೂರು ಮುತ್ತಿಗೆಯನು ತೆಗಸಿ
ಚಿಕ್ಕ ಮಾವ ಗೋವಿಂದನಾಯಕರನ।
ಒಕ್ಕಲು ಊರ ರಾಯಗೆ ಕೊಡದಿರೆಂದು
ಇಕ್ಕಿದ ವೀರ ಸೇಸೆಯವ ॥೧೧೫॥

ಅರ್ಧನಾರಿಯ ಕಸ್ತುರಿ ನೊಸಲಿಗೆ ಬೇಗ
ತಿದ್ದಿಟ್ಟ ಕಾಚನಾಯಕನು।
ಮುದ್ದುಮುಖವ ಸಂತೈಸಿ ಕನ್ನಡಿ ನೋಡಿ
ಎದ್ದನು ತಾಯ ಅರಮನೆಗೆ ॥೧೧೬॥

೯೯-೯೯ ದು(ಮೂ).

ಮುಡಿಮೊಲೆಗ[೧೦೦][ಳ][೧೦೦] ಬಹುಭಾರಕ್ಕೆ ಬಡನಡು
ನ[೧][ಡುಗೆ][೧] ಬಂ[೨][ದು][೨] ಕಾಚೇಂದ್ರಪನ।
ಮಡದಿಯರುಗಳುಪಚರಿಸಿ ಬೀಳ್ಕೊಡಲಾಗ
ಅಡಿಯಿಟ್ಟ ತಾಯ ಅರಮನೆಯ ॥೧೦೭॥

ನಡೆದು ಬರುತ ಕಂಡನು ಕಂಜವದನೆಯ
ಪಡೆದ ಜನನಿಯ ತಾ ಕಾಚ।
ಅಡಿಗೆರಗಲು ಪಿಡಿದೆತ್ತಿ ಗಲ್ಲವ ಪಿಡಿ
ದೊಡನೆ ಪರಸಿದಳಿಂತೆಂದು ॥೧೦೮॥

ದೊರೆಯಾಗು ಧರೆಗೆ [೩][ಶಾಶ್ವತ][೩]ರಾಣಿ[೪][ಯಾ][೪]ಳುನ್ನತ
ವರನಾಗು ಕೀರ್ತಿ ಹೆಂಗಸಿಗೆ।
ಧುರವ ಜಯಿಸಿ ಜಯಲಕ್ಷ್ಮಿಯ ಬಲದಲ್ಲಿ
ಧರಿಸೆಂದು ಪರಸಿದಳಾಗ ॥೧೦೯॥

ಪೇಳಿದನವ ತಾಯೊಳು ಬಾಗೂರಿಗೆ
ದಾಳಿಯಿಟ್ಟ ರಾಯ ದಳವ।
ಕೋಲಾಹಲವ ಮಾಡುವೆ ಕಳುಹೆಂದರೆ
ಆಲೋಚನೆಯ ಮಾಡಿದಳು ॥೧೧೦॥

ನಡೆಯ ಹೇಳಿದನೆ ನಿಮ್ಮಯ್ಯ ಬಾಗೂರಿಗೆ
ಪಡದುದಿಲ್ಲವೆ ತಾನು ನಿನ್ನ।
ಒಡಲು ಹಿಡಿಯಲಾರೆನು ನಿನ್ನ ಕಳುಹಿ ನಾ
ಕಡು [೫][ಮ][೫]ನ ಬೇಡ ಕೇಳ್ಮಗನೆ ॥೧೧೧॥

ಹುಟ್ಟಿದಂದಿಂದ ಮಗನಾದರೆ ಕಾಚಯ್ಯ
ಮುಟ್ಟಿ ತೋರಿದೆಯೋ ಮುಖವ।
ಮುಟ್ಟಿಸಿದೆನಗೆ ಕಷ್ಟದ ಸುದ್ದಿಯ *[ನೆಂದು]*
ಹೊಟ್ಟೆಯ ಹೊಯ್ದಳಲಿದಳು ॥೧೧೨॥

೧೦೦–೧೦೦ ಳು(ಮೂ), ೧–೧ ಡೆಯ(ಮೂ), ೨–೨ ದ(ಮೂ), ೩–೩ ಶಾಶಿತ(ಮೂ), ೪–೪ ಯು(ಮೂ), ೫–೫ ಮಾ(ಮೂ), *–* ಚಿಕ್ಕಮ್ಮ (ಮೂ).

[೬][ಅರೆಗಡಿಉರ][೬]ಗನಂದದಿ ಕಡಿ ಮಿಡುಕುತ
ದೊರೆ ಜಲ್ಮವೆ ತಾ ಸುಡಲೆಂದು।
ಭರದಿಂದ ಮದನ ಕಂಬವ ಹಾಯಿದತ್ತಳು
ಸಿರುಮನ ರಾಣಿ ಚಿಕ್ಕಮ್ಮ ॥೧೧೩॥

ಅಳಲುವ ಸತಿಯಳ ನೆರೆ ನೋಡಿ ಸಿರುಮಯ್ಯ
ಗಳಿಲನೆ ಕಣ್ಣೀರನೊರಸಿ।
ಬಳ[೭][ಲ][೭]ದಿರೆಂದು ಸಿರುಮೇಂದ್ರ ಚಿಕ್ಕರಸಿಯ
ನಳಿತೋಳಲಪ್ಪಿ ಸಂತೈಸಿ ॥೧೧೪॥

ಶರಧಿಗುಂಪಿನಂತಿರುವ ರಾಯನ ದಂಡ
ಗಿರಿಗಳನೊಡೆದೊಳ ಪೊಕ್ಕು।
ಧುರದೊಳಗಿದಿರಾಂತಹಿತರನಿರಿದು ನೀನು
ಮರಳುವುದರಿದು ಕೇಳ್ಮಗನೆ ॥೧೧೫॥

ರಾಯಗೆ ಜೋಡ ಕೊಡಿಸುವೆನಲ್ಲಿಯ ಬಲು
ನಾಯಕವಾಡಿ ರಾವುತರ।
ಸಾಯಬಡಿಯದಿರ್ದರೆ ನಿಮ್ಮ ಬಸುರೊಳು
ತಾಯೆ ನಾ ಬಂದುದು [೮][ತರ][೮]ವೆ ॥೧೧೬॥

ತನಯನಾಡಿದ ವಿಕ್ರಮವ ಕೇಳುತಲಾಗ
[೯][ಒನೆ][೯]ದಳು ತನ್ನ ತಲೆಯನು।
ಘನಪೌರುಷವಿವಗುಂಟೆಂದು ತಾಯಾಗ
ಮನದಿ ಸಂತೋಷ ತಾಳಿದಳು ॥೧೧೭॥

ಇಂದು [೧೦][ಮುಖಿ][೧೦]ಯರು ಊಳಿಗದ ಪೆಣ್ಮಕ್ಕಳು
ಗಿಂಡಿಲು[೧೧][ದಕ][೧೧]ಪಡುಗವನು।
ತಂದಿಟ್ಟು ಕಾಚನ ಪಾದವ ತೊಳೆದರು
ಚಂದನಗಂಧಿಯರೆಲ್ಲ ॥೧೧೮॥

೬-೬ ಹರೆಗಾಡಿ ಹುರುಗ(ಮೂ), ೭-೭ X (ಮೂ), ೮-೮ ತುರು(ಮೂ), ೯-೯ ವನ(ಮೂ), ೧೦-೧೦ ಮತಿ(ಮೂ), ೧೧-೧೧ ದೂತ(ಮೂ).

ಕರೆತಂದರೊಳಹೀಕೆ ಮುತ್ತಿನ ಗದ್ದುಗೆಯಿಕ್ಕಿ
ದೊರೆ ಕಾಚಯ್ಯನ ಕುಳ್ಳಿರಿಸಿ।
ಹರಿವಾಣ ತಟ್ಟೆ ಬಟ್ಟಲ ತಂದಿಟ್ಟರು
ಸಿರುಮನ ರಾಣಿಯರೆಲ್ಲ ॥೧೧೯॥

ಎಡೆಮಾಡಿದರು ಷಡುರಸ ಅಮೃತ್ರನ್ನವ
ಸಡಗರದಿಂದ ಸಖಿಜನರು।
ಕಡುಗಲಿ ಕಾಚ ಚಿಕ್ಕಲದೇವಿಯಿಬ್ಬರು
ಒಡನೆ ಊಟವನು ಮಾಡಿದರು ॥೧೨೦॥

ಕಂದ ಕಾಚಯ್ಯ ನಿನ್ನ ಸುಳುಹು ಕಂಡೆವು ನಾವು
ಇಂದು ಕಂಡೆ[೧೨][ವು][೧೨] ನಿನ್ನ ಮುಖವ।
[೧೩][ಎಂದು ರ][೧೩]ಮಿಸಿ ಮುಖ ನೋಡಿ ಮಾತಾಡುತ
ಒಂದಾಗಿ ಊಟ ಮಾಡಿದರು ॥೧೨೧॥

ಕರವ ತೊಳೆದು ಕರ್ಪುರ ವೀಳೆಯವಿತ್ತು
ಸಿರುಮನ ದೊರೆವೆಂಗಳೆಲ್ಲ।
ಧುರಗಲಿಯಾಗೆಂದು ವೀರಗಂಕಣ ಕಟ್ಟಿ
ಪರಸಿ ಸೇಸೆಯವನಿಕ್ಕಿದರು ॥೧೨೨॥

ಧೀರನತಿವಿಕ್ರಮನಾಗು ಕೀರ್ತಿಯೊ
[೧೪][ಳ್ಪಿರುವಂಥ][೧೪]ನಾಗರಿಗಳೆಂದೆಂಬ।
ವಾರಣ ಪಂಚಾನ[೧೫][ನಾಗೆಂ][೧೫]ದು ಆ ತಾಯಿ
ವೀರಸೇಸೆಯವನಿಕ್ಕಿದಳು ॥೧೨೩॥

ದಿಂಡುಗೆಡೆದ ನರಸಿಂಗರಾಯನ[೧೬] ರುಂಡ
ಮುಂಡದೊಳ[೧೭][ಗಿಕ್ಕಿ][೧೭] ಕೂಟಕ್ಕೆ।
ಬಂದ ದಕ್ಕಡೆಯರನೆಲ್ಲರನು ಸೊಕ್ಕ
ಗಂಡಿಯ ತೊ[೧೮][ಡೆ][೧೮]ದಿರು ಮಗನೆ ॥೧೨೪॥

೧೨–೧೨ ನು(ಮೂ), ೧೩–೧೩ ಮುಂದಣ(ಮೂ), ೧೪–೧೪ ಳ್ಪುರವತ್ತ(ಮೂ), ೧೫–೧೫ ನಿಂ(ಮೂ), ೧೬+ ದಂಡ(ಮೂ), ೧೭–೧೭ ಪೊಕ್ಕು(ಮೂ), ೧೮–೧೮ ಡ(ಮೂ).

ಸಿಕ್ಕದಿರು ಮಗನೆ ಕೂಟಕೆ ಬಂದ ದೊರೆಗಳ
ಸಗ್ಗಾಟದಿ ನೀನೊಳಪೊಕ್ಕು।
[೧೯][ಸೊಕ್ಕಿ][೧೯]ವೆಣನ ಕೊಂದಲ್ಲದೆ ಬಾಗೂ[೨೦][ರ][೨೦]
ಪೊಕ್ಕರೆ ....[೨೧]

...........ಎಲ್ಲ ಮನ್ನೆಯರೊಳು ನಿನ್ನ
ಕಲ್ಲ ಗಾಣಕೆ ಹಾಕಿಸುವೆನು ॥೧೨೫॥[೨೨]

ಚರ[೨೩][ರೊಂದಿಗೆ][೨೩] ಕಳುಹಿಸಿಕೊಂಡು ಬಂದನು
ಶರಭ ಶಾರ್ದೂಲ ಸಿಂಹಗಳ।
ನೆರವಿಯಂತಿರ್ದ ತನ್ನಯ ಪರಿವಾರದ
ಹೊರೆಗಾಗಿ ಕಾಚನಾಯಕನು ॥೧೨೬॥

ಹಿಡಿದವು ಕೊಂಬು ತುತ್ತುರಿ ಚಿನ್ನಗಾಳೆಯು
ಹೊಡೆವ ಸಕಲವಾದ್ಯಗಳು।
ಕಡು ಸುಭಟರ ಬೊಬ್ಬೆಗಳಬ್ಬರದಿಂದ
ನಡೆದ ಕಗ್ಗೊಲೆಗಾಗಿ ಕುವರ ॥೧೨೭॥

ಬಟ್ಟ ಮುಖದ ಕವಿ ಗಮಕಿಗಳಿಗೆ ಹೊನ್ನ
[೨೪][ಪೊ][೨೪]ಟ್ಟಣಗಳನೊರೆದೊರೆದು।
ಕೊಟ್ಟನು ಯಾಚಕರಿಗೆ ಮನ ದಣಿವಂತೆ
ಪಟ್ಟದ ಕುವರ ಕಾಚ ॥೧೨೮॥

ಅರಿಬಲಗಿರಿವಜ್ರದಂಡ ಮಂಡಲರಿಪು
ಶರಧಿಗೆ ವಡಬಾನಲನು।
ಧುರಧೀರ ವೀರವಿಕ್ರಮ ಜಯಜಯತೆಂದು
ಇರದೆ ಪೊಗಳೆ ಬಿರಿದುಗಳು ॥೧೨೯॥

೧೯–೧೯ ತೊಟ್ಟ(ಮೂ), ೨೦–೨೦ ರೊಳ(ಮೂ), ೨೧– ಈ ಪದ್ಯ ಅಪೂರ್ಣವಾಗಿದೆ(ಸಂ೦., ೨೨– ಈ ಪದ್ಯದ ಪೂರ್ವಾರ್ಧ ಹಸ್ತ ಪ್ರತಿಯಲ್ಲಿ ಇಲ್ಲ (ಸಂ)., ೨೩–೨೩ ರಾಗಿ(ಮೂ), ೨೪–೨೪ ಪ(ಮೂ).

ಕಳುಹುತ ಬಂದು ಸಿರುಮ ತನ್ನ ಕಂದಗೆ
ತಳುವದೊರೆದು ಬುದ್ಧಿಯನು।
ಅಳುಕದಿರಿದು ರಾಯನ ದಂಡ ಬಾಗೂರ
ಒಳ ಪೋಗು ವಿಕ್ರಮಧೀರ ॥೧೩೦॥

ತೊ[೨೫][ಡೆ][೨೫]ದಿರು ಬಾಗೂರ ಕಾದುವುದಕೆ ಬಂದ
ಪೊಡವಿಪಾಲಕರನೆಲ್ಲರನು।
ಹೊಡದು ತಲೆಯ ಚೆಂಡನಾಡು ಗೋವಿಂದನ
ನುಡಿಯ ಮೀರಲುಬೇಡ ಮಗನೆ ॥೧೩೧॥

ನಡೆ ಜಯಶೀಲನಾಗೆಂದು ಕುಮಾರನ
ಪೊಡವಿಪ ಸಿರುಮ ಬೀಳ್ಕೊಡಲು।
ಒಡನೈತಂದು ಕುಮಾರ ಮಲ್ಲಯ್ಯನು
ನುಡಿದನಣ್ಣನೊಳು ಇಂತೆಂದು ॥೧೩೨॥

ತಂದೆ ನಿಮಗೆ ವೀಳ್ಯವ ಪಾಲಿಸಿದನು
ಇಂದು ನೀನೆನಗೀವುದೆಂದ।
ಚಂದವಲ್ಲವು ನಿನಗೀಳ್ಯವ ಕೊಡುವುದು
ಹಿಂದಕೆ ಹೋಗು ನೀನೆಂದ ॥೧೩೩॥

ಧುರವ ಜಯಿಸಿ ಮರಳಿದರೆ ಧಾರಿಣಿಯ
ದೊರೆತನವನು ಮಾಡಬಹುದು।
ಮರಣವನೈದಲು ಸುರಲೋಕದ ಭೋಗ
ದಿರವು ತಪ್ಪದು ಅಣ್ಣ ಕೇಳು ॥೧೩೪॥

ಎಂದು ಪೇಳಿಯೆ ಕಳುಹಿಸಿಕೊಂಡು ಮಲ್ಲನು
ಬಂದನಿತ್ತಲು ಅತ್ತ ಕಾಚ।
ಮಂದಿ ಕುದುರೆ ಸಹ ನಡೆದ ಬಾಗೂರಿಗೆ
ಕಂದಿಲ್ಲದಿಂದುವಿನಂತೆ ॥೧೩೫॥

೨೫–೨೫ ಡ(ಮೂ).

ಎಂತು ಕಡಿವೆ ಕಗ್ಗೊಲೆ ರಾಯನ ದಂಡ
ಎಂತೊಳ ಪೊಗುವೆ ಬಾಗೂರ।
ಅಂತವಾವುದು ಪೇಳೆನೆ ಪರಿವಾರ
ಇಂತೆಂದರು ಕಾಚೇಂದ್ರಪತಿಗೆ ॥೧೩೬॥

[೬೧][ಪಂಚಾಕ್ಷರಿಯ][೬೧] ಬಾಗಿಲ ಕಾವಲ ಬೇಡೊ
ಹಿಂಚಾಗಿ [೬೨][ಬಹೆನೆಂದ][೬೨] ಸಿರುಮ ॥೬೫॥

ಎತ್ತಿ ತಂದಾರು ಕುಮಾರ ವೀರಣ್ಣನ
ಮತ್ತೆ ಸಮಾಧಿಯೊಳಿರಿಸಿ।
ಹತ್ತಿರಲವನ ಸ್ತ್ರೀಯರ ಕುಳ್ಳಿರಿಸಿಯೆ
[೬೩][ಹೆತ್ತ][೬೩] ತಂದೆಯು ಸಿರುಮಯ್ಯ ॥೬೬॥

ಮಗನ ಸೊಸೆ[೬೪][ಯರ][೬೪] ಮುಖ ನೋಡುತ ಸಿರು[೬೫][ಮ][೬೫]
ಬಗೆಗುಂದಿ ಬಾಯಿಗಕ್ಕಿಯನು।
ಮಿಗೆಯಿಕ್ಕಿ ಸಿರುಮನ ರಮಣಿ
ಚಿಕ್ಕಮ್ಮನು ಅಗಲಿ ಹೋಹರೆ ಕಂದಾಯೆನುತ ॥೬೭॥

ನಂಬುಗೆಗಳ ಕೊಟ್ಟು ಬಂದ ಸಜ್ಜನರೆಲ್ಲ
ತುಂಬಿಯೆ ಮಣ್ಣ ಮುಚ್ಚಿದರು।
ರಂಭೆಯರ್ ಮ[೬೬][ಡಿಯೆ][೬೬] ಮುಚ್ಚಿದರು ಸಮಾಧಿ
ಗಳಂಬುಜದಂತೆ ಮುಗಿದವು ॥೬೮॥

ಉಗೆ ಉಗೆಯೆನುತ ಸಮಾಧಿ ಮುಚ್ಚಿದರಾಗ
ದುಗುಡದಿ ಗೃಹಕೈತಂದು।
ಜಗದೊಳು [೬೭][ಪೊಸತೆನಿಸಿತುಯೆ][೬೭]ಂದು ಸಿರುಮಯ್ಯ
ಹಗಲಿರುಳು ಪರಿಯಲು ॥೬೯॥

ಕನ್ನೆಗಾಳಗ ತಾಗಿ ವೀರ ಮಡಿ[೬೮][ದ][೬೮] ಸುದ್ದಿ
ಚೆನ್ನಾಗಿ ಹುಟ್ಟಿ ಪಾಳೆಯದಿ।
ಮುನ್ನಲವನ ಸ್ನೇಹಿತನೊಬ್ಬ ಕೇಳಿದ
[೬೯][ಹೊ][೬೯]ನ್ನವಳ್ಳಿಯ ವೇದರಾಜ ॥೭೦॥

೬೦–೬೦ ಶಿವನಗೀ(ಮೂ), ೬೧–೬೧ ಪಚ್ಚಕರಿಯ(ಮೂ), ೬೨–೬೨ ಬಾಯೆಂದ(ಮೂ), ೬೩–೬೩ ಯೆತ್ತಿ(ಮೂ), ೬೪–೬೪ X(ಮೂ), ೬೫–೬೫ X(ಮೂ), ೬೬–೬೬ ಡುಹಿ(ಮೂ). ೬೭–೬೭ ಪೇಸತ್ತೆನಿಡುವೆನೆ(ಮೂ), ೬೮–೬೮ X(ಮೂ), ೬೯–೬೯ ರ(ಮೂ)

ಹರಹರಯೆನ್ನುತ ಮರುಗಿ ರುದ್ರರಾಜನು
ಇರದಾಳೋಚನೆಯನು ಮಾಡಿ।
ಸಿರುಮೇಂದ್ರುಪಾಲನ ಕಾಣಿಸಬೇಕೆಂದು
ನರಸಿಂಗನೊಡನೆ ಪೇಳಿದನು ॥೭೧॥

ನಿನ್ನ ಪಾದವ ಕಾಣಲರಿಯದ ಸಿರುಮಯ್ಯ
ತನ್ನ ಮಗನ ಕೊಂದುಕೊಂಡ।
[೭೦][ಎನ್ನ][೭೦]ನಂಬುಗೆಯು ಬೇಕೆಂದು ಬಿನ್ನೈಸಿದ
[೭೧][ಹೊ][೭೧]ನ್ನ [೭೨][ವ][೭೨]ಳ್ಳಿಯ ವೇದರಾಜ ॥೭೨॥

ಕಪ್ಪವ ಕೊಟ್ಟರೆ ಸಿರುಮನ ಪ್ರಾಣಕೆ
ತಪ್ಪೆನೆಂದನು ನರಸಿಂಗ।
ಒಪ್ಪು[೭೩][ಗೊ][೭೩]ಳಿಸಿ ರುದ್ರರಾಜನು ಕಳುಹಿದ
ತಪ್ಪೇನು ಸಂಧಾನಕೆನುತ ॥೭೩॥

ಮುಗಿ[೭೪][ದು ಕ][೭೪]ರವ ರುದ್ರರಾಜನ ಹರುಷದಿ
ಅಗಳ ದಂಡೆಯ ಮೆಟ್ಟನಿಂದು।
ತೆಗೆದು ಕೋಟೆಯ ಮೇಲೆ ಎಸೆವ ಬಿಲ್ಲವರ ಕೈ
ನೆಗಹಿ ಸನ್ನೆಯೊಳಿರಿಸಿದನು ॥೭೪॥

ತಾಳಿರೊ ಎಸುಗೆಯ ರುದ್ರರಾಜನು ತಾನು
ಪೇಳಿ ನಿಮ್ಮೊಡೆಯಗೆಂದೆನಲು।
ಕೇಳಿ ಸಿರುಮಭೂವರ ಭರದಿಂದಲಿ
ಆಳುವೇರಿಯನಡರಿದನು ॥೭೫॥

ಭಾವ ರುದ್ರಯ್ಯ ಬಿಜಯಮಾಡಿ ನೀವು ಬಂದ
ಭಾವವಾವುದು ಪೇಳೆನಲು।
ನೋವ ಕೇಳುತ ದುಃಖವ ತಾಳಿ ನರಸಿಂಗ
ಭೂವರ ಕಳುಹಿದ ನಿಮಗೆ ॥೭೬॥

೭೦–೭೦ ಯಿನ್ನು(ಮೂ), ೭೧–೭೧ ವ(ಮೂ), ೭೨–೭೨ ಹು(ಮೂ), ೭೩–೭೩ ಗೋ(ಮೂ), ೭೪–೭೪ ಕಾ(ಮೂ).

ನೀಡಿ ಕೊಟ್ಟರು ಉಡುಗೊರೆಯ ಊರೊಳಯಿಕೆ
ಪೊಡವಿಗುನ್ನತ ಸಿರುಮನಿಗೆ।
ಆಡಿದ ಕೇಳಿದರಿಂದ ತಪ್ಪದು ಸತ್ತಾ
ಮಾಡು ರಾಯನೊಳೇಕೆ ಕದನ ॥೭೭॥

ಕ್ಷೋಣಿಯೊಳಗೆ ಇಂಥ ಮಕ್ಕಳನೋರ್ವನು
ಕಾಣಲುಬಹುದೆ ಭಾವಯ್ಯ।
ಊಣೆಯವಿಲ್ಲವು ನರಸಿಂಗನ [೭೫][ಕ][೭೫]ಂಡು
ಪ್ರಾಣವನುಳುಹಿಕೊಳ್ಳಯ್ಯ ॥೭೮॥

ವೀರಾಧಿವೀರನೆಂಬುದು ಮೂರು ಲೋಕದಿ
ಕೀರುತಿವಡೆದೆ ಪಂಥದಲಿ।
ಧೀರ[೭೬][ನೆನಿ][೭೬]ಪುದುಳಿದಿಹ ಬಂಧು ವರ್ಗ[ಕೆ] ಮೂ
ವರನುಳುಹಿಕೋಯೆಂದ ॥೭೯॥

ಸ[೭೭][ರಸ][೭೭]ದಿ ಬೀಯಗತನದೊ[೭೮][ಳಾಡುವೆ ನೋಡು][೭೮]
ಹಿರಿಯ ನೀ ನುಡಿದರೇನಹುದೊ।
ಧರೆಯೊಳು ಪರಬಲ *[ಕ]*ದನ ಕೋಲಾಹಲ
ಸಿರುಮನೆಂಬುದ ಕೇಳಿ ಅರಿಯಾ ॥೮೦॥

ಹುಲ್ಲುಗೂಡಿನೊಳಿಹ ಮರುಳು ಗೊಲ್ಲರುಗಳು
ಬಲ್ಲೆವೆ ಸಿರಿಯುಯೆಂಬುದನು।
ಎಲ್ಲ ಬುದ್ಧಿಯ ಬಲ್ಲೆ ನರಸಿಂಗಗೆ ಪೇಳು
ಸೊಲ್ಲ ಕೇಳಯ್ಯ ರುದ್ರಯ್ಯ ॥೮೧॥

ಕಲ್ಲ ಗೃಹದಲ್ಲಿರ್ದ ಕೌರವರಾಯನು
ಎಲ್ಲ ಕಾಲವು ಬದುಕಿದನೆ।
[೭೯][ಬೆಳ್ಳಿ][೭೯] ಗೃಹದೊಳಿರ್ದ ಪಾಂಡವರುಗಳು
ಮತ್ತೆಲ್ಲ ಜಗವರಿಯೆ ॥೮೨॥

೭೫–೭೫ ದ(ಮೂ), ೭೬–೭೬ ನಿನ(ಮೂ), ೭೭–೭೭ ರಿತಾ(ಮೂ), ೭೮–೭೮ ಳಡುವ ನೋಡಿ(ಮೂ), *–* ಮ(ಮೂ), ೭೯–೭೯ ಚೇಳು (ಮೂ)

ವಾಸಿಯೊಳಿರ್ದ ಸಾಸಿರ ಶಿರವನೀಗಾಡಿದ
ವಾಸಿಯೊಳ್ ಕೌರವನಳಿದ।
ವಾಸಿಯಿಂದಲಿ ಇಂದೆ ನೊಂದವರುಗಳುಂಟು
ವಾಸಿ ಸಲ್ಲ[೮೦][ದು][೮೦] ರಾಯನೊಡನೆ ॥೮೩॥

ಎಣ್ಣೆಯು ಅರಿಸಿನ ಕಣ್ಣಕಪ್ಪುಗಳಿಕ್ಕಿ
ಹೆಣ್ಣುಡಿಗೆಯನುಟ್ಟಿಪೆನೆ।
ಬಣ್ಣಗೆಡದೆ ಹೋಗಿ ನರಸಿಂಗಗೆ ಪೇಳಿ।
[೮೧][ಹಣ್ಣಿ][೮೧] ಕಾದುವೆನೆಂದ ಸಿರುಮ ॥೮೪॥

ನುಡಿಗೇಳಿ ರಾಯ ದಂಡಿನ ಕೂಡೆ ಕಾದು[೮೨][ವ][೮೨]
ಕಡುಗಲಿ ಕುಮಾರ ಮಲ್ಲ।
ಕಡೆಯ ಕೊತ್ತಳದಿಂದ ಬಂದು ಆ ತಂದೆಯ
ಗಡಣದಿಂದಲಿ ಗರ್ಜಿಸಿದನು ॥೮೫॥

ಸಂತದ ನುಡಿ ಪಂಥದ ನುಡಿ ಕಾಬೆನು
ಮುಂತೆನ್ನ ಮಾವ ರುದ್ರಯ್ಯ।
ಭ್ರಾಂತುಗೊಳ್ಳದೆ ಪೋಗು ದುಃಖವೇತಕೆಯೆಂದು
ನಿಂತು ಸಾರಿದ ಮಲ್ಲಭೂಪ ॥೮೬॥

ಹೆಚ್ಚಳ ಬೂದಿಹಾಳಿನ ವೀರ ಪರಿವಾರ
[೮೩][ಎ][೮೩]ಚ್ಚು ಕೊ[೮೪][ಲ್ವ][೮೪]ರು ರುದ್ರಮಾವ।
ನಿಚ್ಚೈಸಿದೆವು ಕಾಳಗಕೆ ನೀ ಹೋಗೆಂದು
ಕೆಚ್ಚೆದೆ ಮಲ್ಲ ನುಡಿದನು ॥೮೭॥

ಪೇಳಿದ ಚತುರೋಪಾಯ ಬುದ್ಧಿಗಳನು
ಕೇಳದವರು ಮೂರ್ಖತನದಿ।
ಕಾಳಗಕನುವಾಗಿಹ ಮಕ್ಕಳೆಲ್ಲರು
ಪೇ*[ಳಿ]*ದಂತಿಹನಾ ಸಿರುಮ ॥೮೮॥

೮೦–೮೦ ದು(ಮೂ), ೮೧–೮೧ ಅಂಣ(ಮೂ), ೮೨–೮೨ ತ(ಮೂ), ೮೩–೮೩ ಹೆ(ಮೂ), ೮೪–೮೪ ಂಬ(ಮೂ)
* ಇಲ್ಲಿ ೮೮ ಎಂದು ಉಲ್ಲೇಖಿಸಿ ೮೯, ೯೦, ೯೧ ಎಂದು ಮುಂದುವರಿಸಿದ್ದಾನೆ. ನಾವು ೮೭, ೮೮, ೮೯, ೯೦ ಎಂದು ತಿದ್ದಿಕೊಂಡಿದ್ದೇವೆ (ಸಂ೦), *–* ಳ(ಮೂ)

ಪೇಳಿದ ಸುದ್ದಿಯ ಕೇಳಿ ರಾಯನು
ಆಲೋಚನೆಗಳ ಮಾಡಿ।
ಕೋಳು ಹೋಗದು ಕೋಟೆಯೆನುತಲಿ ನರಸಿಂಗ
ಪೇಳಿದ ವಾಲಗದೊಳಗೆ ॥೮೯॥

ಕಲ್ಲ ಕೋಟೆಯ ಒಳಪೊಕ್ಕಾಗ ಸಿರುಮಯ್ಯ
ಮೆಲ್ಲನೆ ಚಾವಡಿಗಾಗಿ।
ಮಲ್ಲಯ್ಯ ಕಾಚನಾಯಕರ ಕಳುಹಿದನೆಂ
ಬಲ್ಲಿಗೆ ಈರೈದು ಸಂಧಿ ॥೯೦॥[೮೫]

❖❖

೮೫+ ಅಂ[ತು] ಸಂಧಿ ೧೦ಕ್ಕಂ ಪದನು॥ ೮೫೭ಕ್ಕಂ ಮಂಗಳ ಮಹಾ ಶ್ರೀ(ಮೂ)

ಸಂಧಿ : ಹನ್ನೊಂದು

[೧]ವಾಸವಾರ್ಚಿತ ಸುರಗಣವಂದ್ಯ ದುರಿತ [೨][ವಿ][೨]
[೩][ನಾಶ][೩] ಭಕ್ತರ ಮನೋ[ವಾಸ]।
ಶೇಷಭೂಷಣ ಶಶಿಜೂಟ ಸೋಮೇಶ ಸ
ರ್ವೇಶ ಸೋಮೇಶ್ವರ ಶರಣು ॥೧॥

[೪][ಇತ್ತ][೪] ಸಿರುಮನೂರೊಳಗಿರುತಿರಲಾಗ
ಅತ್ತ ಪಾಳೆಯದೊಳು ರಾಯ।
ಚಿತ್ತದೊಳಾಗ ಯೋಚಿಸಿಕೊಂಡು ನುಡಿದನು
ಮತ್ತೆ ಮನ್ನೆಯರೊಳಿಂತೆಂದು ॥೨॥

ಬಂದಾರು ತಿಂಗಳಾಯಿತು ಬೂದಿಹಾಳಿಗೆ
ಎಂದಾಲೋಚನೆಯ ಮಾಡಿದರು।
[೫][ಎ][೫]ಂದೆಮಗೀವೂರು ಸಾಧ್ಯವಾಗುವುದುಯೆಂದು
ಮಂದಸ್ಮಿತನಾದ ರಾಯ ॥೩॥

ಚಲದಂಕ ಸಿರುಮನೊಡನೆ ನರಸಿಂಗನು
ನೆಲಗನ್ನಗಳನು ತೆಗೆಸಿ।
ಬಲುಗೈಯ್ಯ ಸಿರುಮನ ಪಿಡಿತರುವೆವುಯೆಂದು
ಚಲದಂಕ ರಾಯನೊಳುಸುರೆ ॥೪॥

೧+ ಸುರಂಗ ತ್ಯೆಗದಾ ಸಂಧಿ।
ಶ್ರೀ ಮಲ್ಲಿಕಾರ್ಜುನಯೆ ನಮಃ॥ಪದನು॥(ಮೂ), ೨–೨ X(ಮೂ), ೩–೩ ಧೀ(ಮೂ), ೪–೪ ಯಿಂತು(ಮೂ), ೫–೫ ಯಿ(ಮೂ).

ಕರೆಸಿದ ದಳಪತಿಯಾಗ ಕಾಮಾಟದ
ಹಿರಿಯ ಸೇರುವೆಗಾರರನು।
ಸರಿಸಕ್ಕೆ ನೆಲಗನ್ನವ ತೆಗೆಯೆನುತಲಿ
ಇರದಿತ್ತನವಗುಡುಗರೆಯ ॥೫॥

ಎಂದ ನುಡಿಗೆ ನುಡಿದರು ಕಾಮಾಟದ
ಮಂದಿಗಳತಿ ನಲವಿನಲಿ।
ಇಂದಿಗೆ ಎಂಟು ದಿವಸಕ್ಕೆ ಸಿರುಮನ ನಿಮ್ಮ
ಮುಂದೊಪ್ಪಿಸುವೆವೆಂದೆನುತ ॥೬॥

ವೀಳ್ಯಯವಿಡಿದರು ಕಾಮಾಟಿ ಗೆಲವಿಂದ
ಆಳುಗಳ್ಮೂರು ಸಾವಿರವು।
ದಾಳಾಧೂಳಿಯ[೧][ಲೈ][೧]ತಂದರಂತವರ್ಗಳು
ಆ ದಳಪತಿಯಿರ್ದ ಬಳಿಗೆ ॥೭॥

ಹಾರಿ ಸಲಿಕೆ ಮೊನೆ ಗುದ್ದಲಿಗಳ ತಂದು
ಮೂರು ಸಾವಿರ ಕಾಮಾಟ।
ತೋರಿದ ಸರಿಸಕ್ಕೆ ಕನ್ನವ ತೆಗೆದರು
ಆರು ಮೂರ[೨][ಡಿಯ][೨]ಗಲದಲಿ ॥೮॥

ಬಿಡದೆ ಕನ್ನವನಗೆದರು ಹತ್ತಿ ಬೇಗದಿ
ಕಡುಗಲಿ ರಾಯ ಕಾಮಾಟ।
ಗಡಗಡ ನಡುಗಿಯೆ ಧರಣಿ ತಲ್ಲಣಿಪಂತೆ
ಇಡಿದರು ನೆಲಗನ್ನಗಳನು ॥೯॥

ಎಡೆ ತಿಟ್ಟುಗಳನೆಲ್ಲ ಸುತ್ತ ಅಂತ್ರಾಂತ್ರಕ್ಕೆ
ಪಿಡುಗ ದೊಗರು ಬೀಳುವಂತೆ।
ಕಡುಗಲಿ ರಾಯ ಕಾಮಾಟದ ಕೈಪರಿ
ಪೊಡವಿಗೆ ಅತಿ ಪೊಸತೆನಲು ॥೧೦॥

೧-೧ ಪೈ(ಮೂ), ೨-೨ ಡ(ಮೂ)

ಈಗ ಸಿರುಮನ ಕೂಡಣ ಜಗಳವ ಬಿಟ್ಟು
ನಾಗಲೋಕಕೆ ದಾಳಿಯಿಟ್ಟು ।
ಬೇಗಲಿ[೮][ಳಿ][೮]ವ ಪರಿಯಂತೆ ತೋರಿತು ಕನ್ನ
ಸಾಗಿತು ಎ[೯][ಡರುಗಳ][೯]ಳಿದು ॥೧೧॥

ಎ[೧೦][ಡರು][೧೦]ಗಳಳಿದರೊಳಹಿಕೆ ಕನ್ನ
ನಡೆಯಿತುಯೆಂಬ ಸುದ್ದಿಯನು।
ಪೊಡವೀಶ ನರಸಿಂಗರಾಯನೊಡನೆ ಪೇಳೆ
ತಡೆಯದಿತ್ತನು ಉಡುಗರೆಯ ॥೧೨॥

ಸೂರ್ಯನುದಯದೊಳು ಮಂದಿ ಕುದುರೆ ಸಹ
ಭೋರನೆ ಕನ್ನಕ್ಕೆ ನಡೆದು।
ಊರ ಸೂರೆಯ ಮಾಡಿ ಸಿರುಮನ ಪಿಡಿಯೆಂದು
ಧಾರುಣಿಪತಿ ನೇಮವಿತ್ತ ॥೧೩॥

ಇಂತೆಂಬ ಸುದ್ದಿಯ ಕೇಳಿ ರುದ್ರಯ್ಯನು
ಚಿಂತೆವಡೆದು ಮನದೊಳಗೆ।
ಅಂತು ಡೆಂಕಣಿಯ ತಿಪ್ಪಯ್ಯನ ಕರೆಸಿಯೆ
ನಿಂತು ಏಕಾಂತವಾಡಿದ[೧೧][ನು][೧೧] ॥೧೪॥

ಕನ್ನವಾಯಿತು ಎಂದೆನ್ನುತ ರುದ್ರಯ್ಯನು
ಉನ್ನಂತ ದುಃಖಿತನಾಗಿ।
ಮನ್ನಿಸಿ ಡೆಂಕಣಿ ತಿಪ್ಪಗೆ ರುದ್ರಯ್ಯ
ಹೊನ್ನುಡುಗರೆ ಲಂಚವಿತ್ತು ॥೧೫॥

ತರಿಸಿ ಡೆಂಕಣಿಯ ಗುಂಡಿನ ಮೇಲೆ ರುದ್ರಯ್ಯ
ಬರೆಸಿ ವಿಳಾಸ ಡೆಂಕಣಿಯ।
ಸರಿಸವ ನೋಡಿ ಹಿಡಿಸಿದ ಡೆಂಕಣಿ ಗುಂಡ
ಹರಿಯಿತ್ತು ಸಿರುಮನೋಲಗಕೆ ॥೧೬॥

೮–೮ಡಿ(ಮೂ), ೯–೯ ರಡಾಗಳಿ(ಮೂ), ೧೦–೧೦ ರಡ(ಮೂ), ೧೧–೧೧ ರು(ಮೂ).

ಬಿಡದೆ ಆರ್ಭಟಿಸಿ ಭೋರಿಡುವ ಡೆಂಕಣಿ ಗುಂಡು
ಕಡುಗಲಿ ಸಿರುಮನೋಲಗಕೆ।
ತಡೆಯದೆ ಬಂದು ಬಿದ್ದುರುಳೆ ಡೆಂಕಣಿ ಗುಂಡು
ಒಡನೆ ಕಂಡನು ಸಿರುಮಯ್ಯ ॥೧೭॥

ತರಿಸಿ ನೋಡಿದ ಡೆಂಕಣಿ ಗುಂಡಿನ ಮೇಲೆ
ಬರೆದಿರ್ದ ಬರಹವ ಕಂಡು।
ಹರುಷದಿಂದಲಿ ತಲೆದೂಗಿ ಕರಣಿಕರ
ಕರೆಸಿ ಓದಿಸಿದನಾ ಕ್ಷಣದಿ ॥೧೮॥

ಶ್ರೀಮತು ಸಿರುಮಭೂವರಗೆ ಮಾಡುವ ಬಿನ್ನ
ಭಾವ ರುದ್ರಯ್ಯ ವಿನಯದಿ।
ಊರೊಳಹಿಕೆ ಕನ್ನ ನಡಹಿತ್ತು ನಿಮ್ಮಾಣೆ
ಆರಿಂತು ಮೈಮರೆದಿಹರೆ ॥೧೯॥

ವಂಚನೆಯಿಲ್ಲದೆ ಕನ್ನವು ನಡೆಯಿತ್ತು
ಮಂಚ ಸಹಿತ ತರಲೆಂದು।
ಮುಂಚಾಗಿ ಕಾಬ ಬುದ್ಧಿಯ ಕಾಣು ಬೇಗದಿ
ಪಂಚ ಗುಂಡಿಗೆ ಸಿರುಮಯ್ಯ ॥೨೦॥

ಎಂದು ಒಕ್ಕಣೆ ನೋಡಲು ಸಿರುಮಯ್ಯನು
ಒಂದಾರು ಭುಜವಾಗಿ ಹಿಗ್ಗಿ।
ಬಂದರು ಮಂತ್ರಿ ಕಲ್ಲರಸ ಸಹಿತಲಾಗ
ಅಂದು ಕನ್ನವನರಸುತಲಿ ॥೨೧॥

ಹಿರಿಯ ಹೆಬ್ಬಾಗಿಲಿಂದಲಿ ಕೋಂಟೆಯ ಸುತ್ತ
ಇರದೆ ಕನ್ನವನರಸುತಲಿ।
ಭರದಿಂದ ಬಂದು ನಿಂದನು ಸಿರುಮಯ್ಯನು
ಹಿರಿಯ ಸೇತುವೆಯ ಕೊತ್ತಳದಿ ॥೨೨॥

ಸಿರುಮಭೂವರ ಲಾಲಿಸಿ ನೋಡಿ ಕನ್ನವ
ಬರುವ ಕನ್ನದ ಸರಿಸವನು।

ಕರಸಿದ[೧೨][ಹಿ][೧೨]ರಿಯ ಹೆಗ್ಗರೆ ಚಿಗಚೆಗರ
ತರಸಿದ ಹಾರಿ ಗುದ್ದಲಿಯ ॥೨೩॥

ಇದಿರು ಕನ್ನವ ತೆಗಸಿದನತಿ ವೇಗದಿ
ಚದುರಿಂದ ಸಿರುಮಭೂಪಾಲ।
ಒದಗಿದ ಕನ್ನದೊಳಗೆ ನಿಂದು ನೋಡಿದ
ಕದನ ಚವುಪಟ ಮಲ್ಲ ನಗುತ ॥೨೪॥

ಕನ್ನವಾಯಿತುಯೆಂದು ಕಾಮಾಟದವರಾಗ
ಬಿನ್ನೈಸೆ ಸಿರುಮಭೂವರಗೆ।
ಹೊನ್ನುಡುಗರೆಯ ಬಂಗಾರವನಿತ್ತನು
ಮನ್ನೆಯ ಸಿರುಮಭೂಪಾಲ ॥೨೫॥

ಸನ್ಮತದಿಂದ ಹನ್ನೆರಡು ಕಂಡುಗ ಮದ್ದ
ತನ್ನ ಉಗ್ರಾಣದಿಂ ತೆಗೆದು।
ಉನ್ನತವಾದ ಹೆಬ್ಬಿದುರೊಳು ತುಂಬಿಸಿ
ಕನ್ನದೊಳಗೆ ಹರಡಿಸಿದ ॥೨೬॥

ಭರದಿ ನಾಲ್ಕಾರು ಸಾವಿರ ಬಾಣವ ಮಾಡಿ
ಹರಡಿಸಿದನು ಕನ್ನದೊಳಗೆ।
ಸರಬತ್ತಿಯ ಜೋಡವಣೆಗೈಸಿದನಾಗ
ಧುರಧೀರ ಸಿರುಮಭೂವರನು ॥೨೭॥

ಹಮ್ಮೈಸಿ ಹಿಂದಕ್ಕೆ ಒಡೆಯದಂದದೊಳಾಗ
ಬ್ರಹ್ಮಾಂಡ ತೋರ ಗುಂಡುಗಳ।
ಗಮ್ಮನೆ ತರಿಸಿ ನೂಕಿಸಿ ಸೇತುವೆಗಟ್ಟಿ
ಅಮ್ಮಮ್ಮಯೆನಲು ನೋಟಕರು ॥೨೮॥

ತಿತ್ತಿತ್ತಿಯಲ್ಲಿ ಮದ್ದನು ತುಂಬಿ ಹಾಕಿಸಿ
ಎತ್ತುಗಲ್ಲುಗಳ ನೂಕಿಸಿದ।

೧೨–೧೨ ಹ(ಮೂ).

ಮತ್ತೆ ಕನ್ನವನತಿ ಬೇಗದಿ ಮುಚ್ಚಿಸಿ
ಬತ್ತಿಗಳನು ಮುಟ್ಟಿಸಿದರು ॥೨೯॥

ಘುಡಿಘುಡಿ ಛಿಟಿಛುಗಿಲೆನುತಲಿ ಕನ್ನವು
ಒಡೆದು ಪರಿದುದು ಅಂಬರಕೆ।
ನಡೆದಾವು ಬಾಣ ಗುಂಡುಗಳು ಆರ್ಭಟಿಸುತ್ತ
ಪೊಡವಿ ತಲ್ಲಣಿಸಿತೇನೆಂಬೆ ॥೩೦॥

ಬತ್ತಿ ಹೊತ್ತಿತು ಬರಸಿಡಿಲಂತೆ ಗುಡಿಗುಡಿ
ಸುತ್ತ ಪರಿದು ಬಾಣ ಗುಂಡು।
ಸತ್ತುದು ಮಂದಿ ಮಕ್ಕಳು ನೆಲಗನ್ನದಿ
[೧೩][ಮತ್ತದು][೧೩] ರಾಯ ಕಾಮಾಟ ॥೩೧॥

ಒಳಗೆ ಸತ್ತುದು ಹನ್ನೆರಡುಸಾವಿರ ಮಂದಿ
ತಳುಹದೆ ರಾಯ ಕಾಮಾಟ।
ಗಳಪಿಳೆಯಾಗಿ ರಾಯನ ಗುಡಿ ಗೂಡಾರ
ಇಳೆಯೊಳು ಬಿದ್ದು ಹೊರಳಿದರು ॥೩೨॥

ಕಡೆಯಲಿದ್ದವನೊಬ್ಬ ಸಿಡಿದೋಡಿ ಮೈಬೆಂದು
ಪೊಡವಿಪನೊಡನೆ ಪೇಳಿದನು।
ಮಡುಹಿದ ಕನ್ನದೊಳ್ ಸಿರುಮ ತಂತ್ರದಿ
ಬಿಡದೆ ಹನ್ನೆರಡು ಸಾವಿರವ ॥೩೩॥

ಪೇಳಿದ ನುಡಿ ಕೇಳುತಲಾಗ ರಾಯನು
ಆಲೋಚನೆಯನು ಮಾಡಿ।
ಕೋಳು ಹೋಗದು ಕೋಂಟೆ ನಮಗೆಂದು ದಳಪತಿ
ಪೇಳಲು ಸಂಧಿ ಸಮಾಪ್ತ ॥೩೪॥[೧೪]

❖❖

೧೩–೧೩ ಮತೋದ(ಮೂ), ೧೪+ ಅಂತು ಸಂಧಿ ೧೧ಕ್ಕಂ ಪದನು ೮೯೧ಕ್ಕಂ ಮಂಗಳ ಮಹಾಶ್ರೀ (ಮೂ).

ಸಂಧಿ : ಹನ್ನೆರಡು

[೧]ಅಂಗಜಹರ ಅನಾಥಜನಪಾಲಕ
ಭೃಂಗೀಶ ತಾಂಡವಪ್ರಿಯ।
ಗಂಗೆಯ ರಮಣ ಗರಳಕಂಠ ಸೋಮೇಶ
ಲಿಂಗ ನೀ ಸಲಹೊ ತ್ರೈಜಗವ ॥೧॥

ಮಂದಿ ಮಕ್ಕಳು ದೊರೆ ದೊರೆಗಳು ಕನ್ನದಿ
ಬೆಂದು ಪೋಗಲು ರಾಯ ಮನದಿ।
ಸಂದೇಹಿಸದೆ ವಾಲಗದೊಳು ಕುಳಿತಾಗ
ಒಂದು ಯೋಚನೆಯ ಮಾಡಿದನು ॥೨॥

ದೇಶಾಧಿಪತಿ ನುಡಿದನು ಮನ್ನೆಯರೊಳು
ಮೀಸರ ಗಂಡನೆಂಬ ಬಿರಿದ।
ಬಾಸೆಯ ಕೊಟ್ಟೆ ನಮ್ಮನು ಕಾಣಿಸಿಕೊಂಬ
ಮೋಸವಾಗುವನಲ್ಲ ಸಿರುಮ ॥೩॥

ಇಂದಿತ್ತ ರಾಯನಾಳೋಚಿಸುತಿರಲತ್ತ
ಅಂದು ಕುಮಾರ ಮಲ್ಲಯ್ಯ।
ಮಂದಿಗೆ ಎಚ್ಚರವಾಗಿರಿಯೆಂದು ಪೇಳಿಯೆ
ಮಂದಿರಕಾಗಿ ನಡೆದನು ॥೪॥

೧+ ಶ್ರೀ ರಾಮಚಂದ್ರಾಯನಮಃ। ಶ್ರೀ ಮೈಲಾರಲಿಂಗಾಯನಮಃ॥
ಬೈಲಗೂರ ಬೈರನು ಸತ್ತಿಯಾದನೂ। ಸಕಲರನು
ಕೊಂಡಕ್ಕೆ ಹಾಕಿದ ಸಂಧಿ ॥ಪದನು॥(ಮೂ).

ಬಂದ ಮಗನ ಕಾಣುತ ಚಿಕ್ಕಮ್ಮನು
ತಂದಾರತಿಯನೆತ್ತಿದಳು।
ಇಂದು ವದನೆಯರು ಪಾದವ ತೊಳೆದರು
ಅಂದು ಗದ್ದುಗೆಯನಿಕ್ಕಿದರು ॥೫॥

ಮಂಡಿಸಿದನು ಮಣಿಖಚಿತ ಗದ್ದಿಗೆಯಲ್ಲಿ
ಚಂಡವಿಕ್ರಮ ಮಲ್ಲಭೂಪ।
ಹೆಂಡರುಗಳು ಊಟಕೆಡೆಯ ಮಾಡಿದರಾಗ
ಗಿಂಡಿ ಹರಿವಾಣವನಿಟ್ಟು ॥೬॥

ಊಟಕ್ಕೆ ಪೋದ ವೇಳೆಯದಲ್ಲಿ ಭೈರಯ್ಯ
ಬಿಟ್ಟೇನೊ ಬಾಣಗಳು ಸಹಿತ।
ಕೋಂಟೆಯನಿಳಿದು ಬರುವೆ ರಾಯ ದಳವು ನಿ
ಟ್ಟೋಟದಿಂದಲಿ ಬರ[೨][ಲೆ][೨]ನುತ ॥೭॥

ಎಂದ ವಾಲೆಯ ಕಾಣುತಲಾಗ ರಾಯನು
ಮಂದಿ ಕುದುರೆ ಸಹವಾಗಿ।
ಬಂದರು ನಾಲ್ಕು ದಿಕ್ಕಿಲಿ ಮೋಹರಿಸುತ
ಕೆಂಧೂಳು ಮುಸುಕಲಂಬರವ ॥೮॥

ಚೆಲ್ಲವರಿಸಿ ರಾಯನ ದಂಡನೆಲ್ಲವ
ಕೊಲ್ಲದ ಕೊಲೆಗಳ ಕೊಂದು।
ಅಲ್ಲಿ ಪೋ[೩][ಗು][೩]ವನೆಂದು ಬೆಲಗೂರ ಭೈರನು
ನಿಲ್ಲದೆ ಅಡ್ಡಗಟ್ಟಿದರು ॥೯॥

ಬೆಲಗೂರ ಭೈರನಾಯಕ ಪೋಗುತಿಹನೆಂದು
ಚಲದಂಕಮಲ್ಲನೊಳುಸುರೆ।
ಅಲಗ ಹಿರಿದು ಪೋದನಾ ಕೈತೊಳೆಯದೆ
ಚಲದಂಕ ಪೊರಮಟ್ಟು ಗೃಹವ ॥೧೦॥

ಅಯ್ಯೊ ಮೋಸವು ಬಂತೆನುತ ಮಲ್ಲಯ್ಯನು
ಭೈರನ ಕೊತ್ತಳಕಾಗಿ।

೨-೨ ವೆ(ಮೂ), ೩-೩ ದ(ಮೂ).

ಕೈಯ್ಯ ಖಂಡೆಯವ ಜಡಿದು ಬರುತಿರಲಾ ವೇಳೆ
ಪೊಯ್ಯುತ ಭೈರನೋಡಿದನು ॥೧೧॥

ಇಲ್ಲಿರಲುಳುವಿಲ್ಲವೆನುತ ಮನದೊಳಾಗ
ತಲ್ಲಣಗೊಳುತ ಭೈರಯ್ಯ।
ಮೆಲ್ಲನೆ ಕೋಂಟೆಯ ಹತ್ತಿ ಧುಮುಕುತಿರೆ
ಮಲ್ಲಯ್ಯ ಲಂಘಿಸಿ ಪೊಯ್ದ ॥೧೨॥

ಹರಿದವು ಕೋಂಟೆಯ ತೆನೆ ಮಲ್ಲಗಾಸೆಯ
ಬಿರಿದು ಊರೊಳು ಸಿಕ್ಕಿತಾಗ।
ಒರಲುತ ಪಾಳ್ಯದವರ ಬಳಿಗೋಡಲು
ಕರೆದುಕೊಂಡರು ತಮ್ಮ ಕಡೆಗೆ ॥೧೩॥

ಧುರವ ಕಂಡಂಜಿ ಪೋದಪೆಯೊ ನೀನೀಗಲು
ಪೊರೆವರೆ ಜೀವದ ಘಟವ।
ನರಕಕ್ಕೆ ಶೋಭಿತವಾದೆಯೊ ನೀನೆಂದು
ಧುರಗಲಿ ಮಲ್ಲ ನುಡಿದನು ॥೧೪॥

ಬೆಲಗೂರ ಭೈರ ತಾ ಪೋದ ಸುದ್ದಿಯ
ಲಲನೆ ಚಿಕ್ಕಮ್ಮ ಕೇಳಿದಳು।
ಬಲು ಬಾಸೆಯಲ್ಲಿ ನಂಬಿದೆ ತಮ್ಮ ಹೋಯೆಂದು
ತಲೆಯ ಬಡಿದುಕೊಂಡಳಳುತ ॥೧೫॥

ಗುರುತಾದ ತೇಜಿ ಹಚ್ಚಡ ಬಣ್ಣ ಬಂಗಾರ
ಪರಿಪರಿ ಸಕಲ ವಸ್ತ್ರಗಳ।
ತರಿಸಿ ನಿನಗೆ ಮುಂಚೆ ಕೊಟ್ಟು ಸಾಕಿದ ಭಾವ
ಸಿರುಮನನಗಲಿ ಪೋಗುವರೆ ॥೧೬॥

ಸಕ್ಕರೆ ಚಿಲಿಪಾಲು ತುಪ್ಪ ಬಾಳೆಯಹಣ್ಣು
ಮಕ್ಕಳ ಮರೆಮಾಡಿ ನಿನಗೆ।
೪[ಇಕ್ಕಿದೆ]೪ನಿನ್ನೊಡಲಿಗೆ ಕಟ್ಟಿರುವೆ ಗೂ
ಡಿಕ್ಕಲಿಯೆಂದಳಲಿದಳು ॥೧೭॥

೪–೪ ಇಕ್ಕುವೆ(ಮೂ).

ನಂಬಿದವರಿಗೆರಡೆಣಿಸಿಯೆ ತಾ ಬಾಳ್ವೆ
ನೆಂಬ ರಾಯನನು ವಾಲೈಸಿ।
ತಿಂಬುವ೫[ನಲ್ಲವೆ]೫ ತಿರುಬೋಕಿಯಹನು ಎಲೆ
ಶಂಭು ಸೋಮೇಶ ನೋಡೆನುತ ॥೧೮॥

ನೋಡಬಂದವರೆಲ್ಲರು ಸ್ವರ್ಗವ ೬[ಸೂರೆ]೬
ಯಾಡರೆಂದೆಂಬ ಗಾದೆಯನು।
ಕೂಡೆ ಕಂಡೆವು ರಾಯನಿಗೆ ನಮ್ಮನು ಈಡು
ಮಾಡಿವೋದೆಯೋ ಭೈರಯ್ಯ ॥೧೯॥

ಅತ್ತ ರಾಯನು ಬೆಲಗೂರ ಭೈರಯ್ಯಗೆ
ಸತ್ತಿಗೆ ಪಲ್ಲಕ್ಕಿಗಳನು।
ಉತ್ತಮ ಉಡುಗೊರೆಯಿತ್ತು ರಾಯನು ತನ್ನ
ಹತ್ತಿರ ಕರೆದು ಮನ್ನಿಸಿದ ॥೨೦॥

೭[ಒಡನೆ]೭ ರಾಯನು ಕಡುಗಲಿ ೮[ಭೈರ]೮ಯ್ಯಗೆ
ಖಡೆಯ ಖಂಡೆಯ ಬಾಪುರಿಯನು।
ಸಡಗರದಲಿ ಕೊಟ್ಟು ಸಕಲ ಸಂಭ್ರಮದಿಂ೯
ಸನ್ನಾಹದಿಂದ ಪೇಳಿದ೧೦[ನು]೧೦ ॥೨೧॥

ಕಾಳಗಕನುವಾಗಿಯೆಂದು ಪೇಳಲು ಭೈರ
ಕೇಳುತ ನರಸಿಂಗ ದಂಡ।
.................ನೆಲ್ಲವ ಕೂಡಿ
ದಾಳಿ ಬಿಟ್ಟನು ಬೂದಿಪುರಕೆ ॥೨೨॥

ಆಳ ಮೇಲಾಳು ಹತ್ತಿತು ಕೋಂಟೆಯ ಸುತ್ತ
ಬಾಳವ ಬಡಿದಾರ್ಭಟಿಸಿ।
ಕೋಲಾಹಲದಿಂದ ಕೋಂಟೆಯನಡರಲು
ಆಳುವೇರಿಗೆ ಧುಮುಕಿದರು ॥೨೩॥

೫–೫ ರಿಲ್ಲದೆ(ಮೂ), ೬–೬ ಸಾ(ಮೂ), ೭–೭ ನುಡಿದ(ಮೂ), ೮–೮ ಸಿರುಮ(ಮೂ).
೯+ ದವನ(ಮೂ), ೧೦–೧೦ ರು(ಮೂ).

ಹತ್ತಿದರಾ ಭಸ್ಮಪುರಿಯ ಕೋಂಟೆಯನಾಗ
ಮೃತ್ಯುವೆ [೧೧][ಮೊಗೆ][೧೧]ದೇರುವಂತೆ।
ಕತ್ತಿ ಸಬಳ ಗದೆಗಳನಾಂತು ಅಡರಿತು
ಕೊತ್ತಳ ಕೊತ್ತಳದೊಳಗೆ ॥೨೪॥

ತೆರನಿಲ್ಲ[೧೨][ದೆ][೧೨] ಭಟರೇರುವದನು ನೋಡಿ
ಕರೆದು ಸಿರುಮ ಕುಮಾರರನು।
ಹರಿಯಬಿಟ್ಟನು ನಾಲ್ಕು ದಿಕ್ಕಿಗೆ ಭಟರ್ಗಳು
ಇರಿದು ನೂಕಿದರೇನನೆಂಬೆ ॥೨೫॥

ಬಾಣದ ಬಸವಯ್ಯ ಬಲುಹ ನೋಡೆಂದಾಗ
ಕ್ಷೋಣೀಶನ ಬಲದೊಡನೆ।
ಕೇಣವಿಲ್ಲದ ಬಾಣವ ಹೂಡಿ ಸದೆದನು
ಪ್ರಾಣದಾಸೆಯನಾಗ ತೊರೆದು ॥೨೬॥

ಎಲ್ಲಿ ನೋಡಲು ಕಾಚನ ಬೊಬ್ಬೆ ಅಬ್ಬರ
ಎಲ್ಲಿ ನೋಡಲು ಅಲ್ಲಿ ಇರುವ ।
ನಿಲ್ಲದೆ ರಾಯನ ಭಟರೇರಿ ತಿವಿದರು
ಕಲ್ಲೆದೆ ಕಾಚನ ಮೇಲೆ ॥೨೭॥

ಒಬ್ಬನ ಮೇಲೆ ಮೋಹರಿಸಿ ಕಡಿದರಾಗ
ಸರ್ಬದಳವು ಕೂಡಿಕೊಂಡು।
ಹಬ್ಬವ ಮಾಡಲು ಮರುಳ್ಗಳ ತಂಡವು
ಉಬ್ಬಿ ಕಾಚನ ಪರಸಿದವು ॥೨೮॥

ಕೊಂದನು ಎಡಬಲ ಮೋಹಿ[೧೩][ಸಿ][೧೩] ಬರುವರ
ಮುಂದೆ ಮೂದಲಿಸುತ ಭಟರ।
ನಿಂದು ಕಾದಿದ ಕಾಚ ಗಳಿಗೆ ನಾಲ್ಕರೊಳಲ್ಲಿ
ನೊಂದುದೇಳ್ನೂರು ಮನ್ನೆಯರು ॥೨೯॥

೧೧–೧೧ ಮಗ(ಮೂ), ೧೨–೧೨ x (ಮೂ), ೧೩–೧೩ x(ಮೂ).

ತುಡುಕಿದರಾ ಕಾಚನ ರೋಷದಿಂದಲಿ
ಇಡುತ ಪೆಟಲು ಸರಳಿಂದ।
ಕಡಿದುಳುಹಿದ ಕೋಂಟೆಯ ಬಾಣದ ಗಾಯ
ವಡೆದು ಬಿದ್ದನು ಕಾಚೇಂದ್ರುಪತಿ ॥೩೦॥

ಒಂದು ಜಾವದ ಲಗ್ಗೆಯ ಕಾಳಗದೊಳು
ಕೊಂದ[೧೪][ನೇ][೧೪]ಳೇಂಟು ಸಾವಿರವ।
ಮುಂದುಗೆಡಿಸಿ ರಾಯನ ದಳವ ಕೊಮರಮಲ್ಲ
ಬಂದನು ಕಾಚನ ಬಳಿಗೆ ॥೩೧॥

ಗೊಲ್ಲ ಸಿರುಮ ಸೊಸೆ ಮಕ್ಕಳ ಕೊಂಡದಿ
ಕೊಲ್ಲುವದನು ತನು ಕಂಡು।
ನಿಲ್ಲಬಾರದುಯೆಂದು ರವಿ ಪೋಗಿ ಪಡುಗಡ
ಲಲ್ಲಿ ಬಿದ್ದನು ಭರದಿಂದ ॥೩೨॥

ನರಸಿಂಗರಾಯನ ಬಲ ಪಾಳೆಯದತ್ತ
ತಿರುಗಿತು ಕತ್ತಲೆಯಾಗೆ।
ತರತರದಲ್ಲಿ ದೀವಿಗೆಯ ಬೆಳಕಿನಲ್ಲಿ
ನರನಾಥ ದುಗುಡದಿ ನಡೆದ ॥೩೩॥

ಕೊಡದೆ ಸಿರುಮ ಬೂದಿಹಾಳ ಕೋಂಟೆಯ
ಕಡಿದ ನಮ್ಮಯ ಸರ್ವ ಬಲ್ಲವ।
ಪಡೆಯ ಬೇಡವೆ ಇಂಥ ಮಕ್ಕಳನೆಂದರೆ
ನುಡಿದನು ಬೆಲಗೂರ ಭೈರ ॥೩೪॥

ಚಿತ್ತವಧಾನ ಪರಾಕು ಕೇಳೆಲೆ ರಾಯ
ಹೊತ್ತು ಮುಳುಗಿಹೋಯಿತಿಂದು।
ಸತ್ತರು ಕಾಚನಾಯಕ ಮಲ್ಲಯ್ಯ[೧೫][ನ][೧೫]
ಉತ್ತುಮ ಭಟರ್ಗಳು ಸಹಿತ ॥೩೫॥

೧೪–೧೪ ರೇ(ಮೂ), ೧೫–೧೫ X(ಮೂ).

೧೪[ಉಳಿದಿಹ]೧೬ನೊರ್ವ ಕುಮಾರ ಮಲ್ಲಯ್ಯನು
ಬಳಗ ಬಂಟರು ಸರಿಯಾಯಿತು।
ಉಳಿದ ಮಾತೇನು ನಾಳಿನ ದಿನ ಕೋಂಟೆಯ
ಕೊಳಬಹುದೆಂದು ಪೇಳಿದನು ॥೩೬॥

ಎಂದು ಯೋಚಿಸಿಕೊಂಡು ದೊರೆ ದೊರೆಗಳು ತಾವು
ಬಂದರು ತಮ್ಮ ಪಾಳೆಯಕೆ।
ನಿಂದೆಲ್ಲರ ಕಳುಹಿಸಿ ನರಸಿಂಗನೈ
ತಂದನು ತನ್ನರಮನೆಗೆ ॥೩೭॥

ಇದ್ದರು ರಾಯನೋಲಗದಲ್ಲಿ ಸಿರುಮನ
ಮುದ್ದಿನ ಬೇಹಿನ ಭಟರು।
ಅರ್ಧಮರಾತ್ರಿಯೊಳೈತಂದರೊಲವಿಂದ
ಹೊದ್ದಿ ಪೇಳಿದರು ಸುದ್ದಿಯನು ॥೩೮॥

ಕೇಳಿದ ಬೇಹುಕಾರರ ಸಿರುಮಯ್ಯನು
ಪಾಳೆಯದ ಸುದ್ದಿಯನು।
ಪೇಳಿದ ರಾಯಗೆ ಬೆಲಗೂರ ಭೈರನು
ಮೇಲಾಳ್ಗಳು ಮಡಿದುದನು ॥೩೯॥

ಪೇಳಿದ ಸುದ್ದಿಯ ಕೇಳಿಯೆ ಸಿರುಮಯ್ಯ
ಪೇಳಿದ ಮಗ ಮಲ್ಲನೊಡನೆ।
ಆಳುವೇರಿಯ ಮೇಲಿಹೆ ನೀನೊಬ್ಬನೆ
ಮೇಲಾಳ್ಗಳು ಒಬ್ಬರಿಲ್ಲ ॥೪೦॥

ರವಿ ಮೂಡದ ಮುನ್ನ ಕೋಂಟೆಯ ಸುತ್ತಲು
ಕವಿ೧೪[ವ]೧೭ರು ಬಂದು ೧೮[ಆಹವಕೆ]೧೮।
ಕುವರ ಕಾಚಯ್ಯ೧೯[ಗೆ]೧೯ ಮಲ್ಲಣ್ಣ ಕೊಂಡವ
ಹವಣಿಸು ರಾತ್ರೆಯೊಳೆಂದ ॥೪೧॥

೧೬–೧೬ ವುಳುಸಿಹ(ಮೂ), ೧೭–೧೭ ದ(ಮೂ), ೧೮–೧೮ ಹಕ್ಕೆ(ಮೂ), ೧೯–೧೯ X(ಮೂ).

ನರಜಲ್ಮದ ಕಾಯ ಸ್ಥಿರವಲ್ಲವೆನುತಲಿ
ಅರಮನೆಯೊಳಗೆ ಕೊಂಡವನು।
ಭರದಿ ಮಾಡಿಸಿ ನಿಮ್ಮೆಲ್ಲರ ಕೊಂದು ನಾ
ನರನಾಥನೊಡನೆ ಕಾದುವೆನು ॥೪೨॥

ಕಿರಿಯ ತಮ್ಮನು ಸೋಮಯ್ಯನ ನೋಡಿಯೆ
ಕರದ ಖಂಡೆಯವೆತ್ತುತಿರಲು।
ಸಿರಮಭೂವರ ಚಿಕ್ಕಲದೇ[ವಿ] ಮಲ್ಲನ
ಕರವನು ಪಿಡಿದರಾಕ್ಷ[೨೦][ಣ][೨೦]ದಿ ॥೪೩॥

ಮಲ್ಲನೆಂಬುದು ಪುಸಿಯಲ್ಲವೊ ಚೌಪಟ
ಮಲ್ಲನಹುದು ಕಲಿಯುಗಕೆ।
ಎಲ್ಲರ [೨೧][ಕೂ][೨೧]ಳು ಕಾರ್ಯವ ಮಾಡಲಿಬೇಕು
ಕೊಲ್ಲಲಾಗದು ಸೋಮಯನ ॥೪೪॥

ಅಂದಾಗ ತಮ್ಮ ತಂಗಿಯು ಇಬ್ಬರ ಕೈಯ್ಯ
ಬಿಂದಿಗೆ ಹೊನ್ನುಗಳಿತ್ತು।
ತಂದೊಬ್ಬ ಯೋಗಿಯ ಕೈಯೊಡನಿತ್ತಾಗ
ನಂಬೆಂದು ಬಾಸೆಯ ಕೊಂಡು ॥೪೫॥

ಪಟ್ಟಣದೊಳಗಣ ಪ್ರಜೆ ಪರಿವಾರವ
ಸೆಟ್ಟಿ ಸಮಯರನು ಕರೆದು।
[೨೨][ಕೊ][೨೨]ಟ್ಟದ ಗೊಲ್ಲನ ನಂಬಿ ನೀವೆಲ್ಲರು
ಕೆಟ್ಟೆನೆನ್ನದೆ ತೆರಳೆಂದ ॥೪೬॥

ವಾರದ ಜಂಗಮವನು ಕರೆಸಿಯೆ ಆಗ
ನಿರಾಸೆಯಾಯಿತು ತಮಗೆನುತ।
ಭೋರನೂರೊಳಗಣ ಮಠಮಾನ್ಯದವರ್ಗಳು
ಸೇರಿರ್ದ ಒಡೆಯರೈದಿದರು ॥೪೭॥

೨೦-೨೦ X(ಮೂ), ೨೧-೨೧ ತೂ(ಮೂ), ೨೨-೨೨ ತೊ(ಮೂ).

ಪೇಳಿದ ಬಿರಿದುಳ್ಳ ಬಂಟರ ಕರೆದಾಗ
ಬಾ[23][ಳುವೆಗೆ][23] ಹೊನ್ನನಿತ್ತು।
ಬಾಳಿ ನೀವೆಲ್ಲಾದರು ಸುಖದೊಳಗೆಂದು
ವೀಳೆಯವಿತ್ತು ಕಳುಹಿದ ॥೪೮॥

ಪುರಜನವೆಲ್ಲ ಕಳುಹಿಸಿಕೊಂಡು ಬಾಹಾಗ
ಸಿರುಮ ಚಿಕ್ಕಮ್ಮನು ನಿಂದು।
ಹೆರೆಹಿಂಗುವಂತಾಯಿತೆ ಪುರಹರಯೆಂದು
ಸುರಿದರು ಕಂಬನಿಗಳನು ॥೪೯॥

ನೊಂದುಕೊಳ್ಳಲುಬೇಡ ಜನವೆಲ್ಲ ನಾ ನಿಮ್ಮ
ಕಂದನೆಂದರಿ ಮನದೊಳಗೆ।
ಇಂದು ಶೇಖರನ ಪಾದವ ಕಾಣುವೆ[24][ವೆ][24]ನುತೈ
ತಂದರು ಊರ ಬಾಗಿಲಿಗೆ ॥೫೦॥

ಭರದಿಂದ ಮಂದಿಮಕ್ಕಳು ಪ್ರಜೆಗಳು ಸಹ
ತುರುಗಿತು ಊರ ಬಾಗಿಲಿಗೆ।
ಇ[25][ರೆ][25]ಪೊರಟು ನಡೆದಾರು ಕತ್ತಲೆಯೊಳು
ಹರುಳಿಹಾಳಿನ ಪಥವಿಡಿದು ॥೫೧॥

ಎಡಹುತ ಮುಗ್ಗುತ ಗಿಡುಗಳ ತಬ್ಬುತ
ಒಡವೆ ಮಕ್ಕಳ ಸಂತವಿಡುತ।
ನಡೆಯಲು ಮಲ್ಲನು ಹೆದರಬೇಡೆನುತಲಿ
ಒಡನೆ ಬಂದನು ಸಿಂಹದಂತೆ ॥೫೨॥

ಮಾರಿಯ ಕಣಿವೆಯ ಕಂಡು[26][ಹಿ][26]ರಿಯೂರ
ಸೇರಿ ನೀವೆಂದತ್ತ ಕಳುಹಿ।
ಊರಕಡೆಯ ಒಬ್ಬರಿಲ್ಲವೆಂದು ಮಲ್ಲಯ್ಯ
ಸೇರಿದ ವಿಭೂತಿಪುರವ ॥೫೩॥
ಪಟ್ಟಣದೊಳು ಪೊಕ್ಕು ಅರಸಿದ ಮಂದಿಮಕ್ಕಳ

೨೩–೨೩ ಳಿಗಳ(ಮೂ), ೨೪–೨೪ X(ಮೂ), ೨೫–೨೫ ದ(ಮೂ), ೨೬–೨೬ ಯಿ(ಮೂ).

ಬಿಟ್ಟು ಹೋಗಿಹರೊಯೆಂದೆನುತ।
ನೆಟ್ಟನೆ ತಿರುಗಿ ನೋಡಿಯೆ ಕಾಣದೊರ್ವರು
ದಿಟ್ಟನೈತಂದನರಮನೆಗೆ ॥೫೪॥

ಬಂದನು ಮಂದಿರದೊಳಹಿಕೆ ಮಲ್ಲಯ್ಯ
ತಂದೆ ತಾಯಿಗೆ ಶರಣೆಂದು।
ಮುಂದೆ ಪೋಗಿಯು ಪಡೆ ಬೀಡವ ಶಿವನಲ್ಲಿ
ಚಂದದಿ ಮಾಡಿಸಿ ನನಗೆ ॥೫೫॥

ಇಂದಿಗೆ ಆರು ತಿಂಗಳು ಮಂದಿ ಸಹವಾಗಿ
ನಿಂದು ನೋಡಿದೆವು ಕಾಳಗ[೨೭][ವ][೨೭]
ಇಂದು ನಿನ್ನಯ ಕಾಳಗ ನೋಡಿ ಪೋಗುವೆ
ವೆಂದುಪ್ಪರಿಗೆಯೇರಿದರು ॥೫೬॥

ತೆಗೆದು ಜಾಳಿಗೆ ಹೊನ್ನ ಮಡಲಿಗೆ ಕಟ್ಟಿದ
ಬಿಗಿದುಟ್ಟ ಮಲ್ಲಗಾಸೆಯನು।
ಜಗಝುಂಪಿನ ಹರಿಗೆಯ ಪಾಡು ಮಾಡುತ
ನಗುತಲೇರಿದನು ಕೋಂಟೆಯನು ॥೫೭॥

ಧುರಗಲಿ ಮಲ್ಲನೇಕಾಂಗಿ ಕಾಳಗವನು
ಭರದಿ ನೋಡುವೆನೆಂದು ದಿನಪ।
ಹರಿಬಿಟ್ಟನು ರಥವನು ಮೂಡ ದೆಸೆಯಲ್ಲಿ
ತರಣಿ ಮೂಡಲು ಸಂಧಿ ಸಮನು ॥೫೮॥

❖❖

೨೭-೨೭ ದಿ (ಮೂ), ೨೮+ ಅಂತು ಸಂಧಿ ೧೨ಕ್ಕಂ ॥ಪದನು॥ ೯೮೮ಕ್ಕಂ ಮಂಗಳಂ ಮಹಾಶ್ರೀ (ಮೂ).

ಸಂಧಿ : ಹದಿಮೂರು

[೧]ಸರ್ಪಭೂಷಣ ಸದಾಶಿವ ಚಿನ್ಮಯ ರೂಪ
ದರ್ಪಕಹರ ಧವಳಾಂಗ।
ಮುಪ್ಪುರವನು ಗೆಲಿದಘನಾಶ ಸೋಮೇಶ
ಕಪ್ಪುಗೊರಳ ಸಲಹೆನ್ನ ॥೧॥

ರವಿ ಮೂಡಲು ರಾಯ ಮುಖಮಾರ್ಜನಗೈದು
ನವರತ್ನಭೂಷಿತನಾಗಿ।
ಸವನಿಸಿಕೊಂಡ [೨][ಘನಗಜಕೈತಂದ][೨]
ಬವರ ಭೈರವನಂದದಲಿ ॥೨॥

ಸತ್ತಿಗೆ ಸತ್ತಿಗೆ ತೆತ್ತಿಸಿ ಪಿಡಿದವು
ಸುತ್ತ ಗಾವುದದಳತೆಯಲಿ।
ಮುತ್ತಿದರಾ ಬೂದಿಪುರದ ಕೋಂಟೆಯನಾಗ
ಹತ್ತಿ ಲಗ್ಗೆಯನು ಮಾಡಿದರು ॥೩॥

ರಾಮನಾಥನ ಕೊತ್ತಳಕಡರಿದರಾಗ
ಭೂಮಿಪಾಲಕರು ಮೋಹರಿ[ಸೆ]।
ಭೀಮಗೊಡತಿಯಿಂದ ಪೊಯ್ದು ಕೆಡಹಿದ ಶಿ
ಸ್ತಿಮ ಕುಮಾರ ಮಲ್ಲಯ್ಯ ॥೪॥

ಅರುವತ್ತು ಸಾವಿರ ತುರ[೩][ಗದ][೩] ಘಟೆಯರು
ತರುಬಿ ಕುಮಾರ ಮಲ್ಲುಗನ।

೧+ ಶ್ರೀ ಮೈಲಾರಲಿಂಗಸ್ವಾಮಿ ಪಾದಾರವಿಂದವೆ ಗತಿ॥ ಪದನು॥(ಮೂ), ೨–೨ ಗನವಗಾಜಕ್ಕೆ ತಂದ(ಮೂ)
೩–೩ ವೀನ(ಮೂ)

ಇರಿವೆವೆನ್ನುತ ಬರೆ ಕರಿಯ ಕಬ್ಬಿನ ಕೋಲ
ತರಿವಂತೆ ಕತ್ತರಿಸಿದನು ॥೫॥

ಚೆನ್ನಾ೪[ಗಿಯು]೪ಬ್ಬಿಹ ಹರಿಗೆಯ ಸುಭಟರು
ಸನ್ನೆ ಗಾಳಗಕೈತರಲು।
೫[ಬೆ]೫ನ್ನ ಮಾಡಿಸಿ ಹತ್ತು ಸಾವಿರ ಹರಿಗೆಯ
ಮನ್ನೆಯರುಗಳ ಕಂಗೆಡಿಸಿ ॥೬॥

ಮುಂದರಿಯದೆ ಕೆಣಕಿದೆವು ನಾವಿವನನು
ಕೊಂದನು ಕೋಟಿ೬[ಸೇನೆ]೬ಗಳ।
ನೊಂದು ಕೋಪದಿ ಪಲ್ಮೆರೆವುತ ರಾಯ ತಾ
ನೊಂದು ೭[ತೊ]೭ಟ್ಟನು ಜೋಡನಾಗ ॥೭॥

ರಾಯ ತಾನನುವಾಗಿ ನಡೆವಾಗ ಬಿರಿದಿನ
ನಾಯಕವಾಡಿ ರಾವುತರು।
ಆಯತವಾಗಿ ತೇಜಿಯನಿಳಿದೇರಿತು
ಕೋಯೆಂದು ಕೋಟೆಯನಾಗ ॥೮॥

ಕೊತ್ತಳ ಕೊತ್ತಳಗಳ ಕೆಡವುತಲಾಗ
ಹೊತ್ತಿಸಿದರು ಬಾಣದಿಂದ।
ಮೃತ್ಯುವೆ ನಡೆಗೊಂಡುದೆನೆ ಸೂರ್ಯಮಂಡಲ
ತತ್ತರಿಸಿತು ಧೂಳಿನಿಂದ ॥೯॥

ಒಂದು ಕೊತ್ತಳದೊಳು ಕಾದುತಲಿರಲು ಮ
ತ್ತೊಂದು ಕೊತ್ತಳವ ಹತ್ತಿದರು।
ಬಂದು ಹೆಬ್ಬಾಗಿಲ ಕಡಿದು ಮನ್ನೆಯರಾಗ
ಸಂದಣಿಸಿದರು ಊರೊಳಗೆ ॥೧೦॥

ಇಮ್ಮುಖದಲ್ಲಿ ಎಚ್ಚರು ಬಿಲ್ಲುಗಾರರು
ಗುಮ್ಮೆಂದು ಧರಣಿ ಕಂಪಿಸಲು।

೪-೪ ದನು(ಮೂ), ೫-೫ ಚೆ(ಮೂ), ೬-೬ ಶಂಮೆ(ಮೂ), ೭-೭ ಕೊ(ಮೂ).

ಹೆಮ್ಮಿರಿದಾರ್ಭಟಿಸುತ್ತ ಪೊಕ್ಕಿರಿದರು
ಸುಮ್ಮಾನಿಸೆ ಸುರ ನಿಕರ ॥೧೧॥

ಪೋಗಲೀಸದೆ ಅಡ್ಡಗಟ್ಟಿ ದೊದ್ದೆಗರನು
ಲಂಘಿಸಿ ಖಂಡೆಯದಿಂದ।
ಕೂಗಿ ಬೊಬ್ಬಿರಿದು ಪೊಯ್ಯುತ ಸೇನೆಯನಾಗ
ಸಾಗಿಸಿದನು ಯಮಪುರಕೆ ॥೧೨॥

ಹರಿಬ*[ದಿ]* ಬರುವ ಹಾವಿಗೆ ಬಂದೆರಗುವ
ಗರುಡನಂತೆ ರಾಯದಳವ।
ತರಿದು ಹಿರಿದು ಸವರಿದನಾಗ ರಕ್ತವು
ಪರಿದುದೂರೊಳು ಕಾಲ್ವೆಯಂತೆ ॥೧೩॥

ರಚ್ಚುಗೊಂಡ ವೇಗದಿ ಸುಭಟರ
ಹುಚ್ಚುಗೊಳಿಸಿ ಬೀದಿಯೊಳಗೆ।
ಎಚ್ಚರಿಲ್ಲದೆ ಕೇರಿ ಕೇರಿಯೊಳ್ತಿರುಗುತ
ಅಚ್ಚರಿಯೆನಿಸೆ ಕಾದಿದನು ॥೧೪॥

ಇಮ್ಮೈಯ್ಯೊಳೊದಗುವ ಸುಭಟರು ಕಂಗೆಟ್ಟು
ತಮ್ಮಾಯುಧಗಳ ಬಿಸುಟು।
ಗಮ್ಮನೆ ದಣಿದೂರ ಪೊಗ[೮][ಲಾಗ][೮]ದುಯೆಂದು
ತಮ್ಮ ರಾಯನ ಬೈಯ್ಯೆ ಬೈದು ॥೧೫॥

ಬಡ ನರಿಗಳು ಹುಲಿಯೊಳು ಕಾದುವಂದದಿ
ಗಡಿಯ ಮನ್ನೆಯರು ಮೋಹರಿಸೆ।
ಕಡಿದನು ಬಾಳೆಯ ವನ ಗಜಪೊಕ್ಕು
ಒಡನೆ ತುಳಿವ ತೆರನಂತೆ ॥೧೬॥

[೯][ಗೊ][೯]ಂದಣವನು ಸದೆಬಡಿವುತ ಮಲ್ಲಯ್ಯ
ಮುಂದಣ ಬಾಗಿಲ[೧೦][ಹತ್ತಿರಿರೆ][೧೦]।

– ೦ದು(ಮೂ), ೮–೮ ಬಹು(ಮೂ), ೯–೯ ದೊ(ಮೂ), ೧೦–೧೦ ೦ತಿರಕೆ(ಮೂ)

ಹಿಂದಣಿಂದೊರ್ವನಿಂಬಿನಲೆಸೆಯಲು ಪೆಟ್ಟು
ಸಂಧಿಸಿ ನೊಂ[೧೧][ದ][೧೧]ಗಾಯದಲಿ ॥೧೭॥

ಜಡಿದಂಬಿನ ಗಾಯವ ನೋಡದೆ ಒಂದು
ಗೂಡಿದ ಬಲವ ಬೆಂಬತ್ತೆ।
ಜಾಡಿಯ ಹರಿಗೆ ಖಂಡೆಯ ಅಬ್ಬರಕಂಜಿ
ಓಡಿತು ಬಲವು ಪಾಳೆಯಕೆ ॥೧೮॥

ಇಂದಣ ಕಾಳಗದೊಳು ಮಂದಿ ಬಹಳವು
ನೊಂದುದಿಲ್ಲವನ ಕಾಳಗದಿ।
ಮುಂದುಗೆಟ್ಟಿತುಯೆಂದು ನರಸಿಂಗ ತೆರಳಲು
ವೊಂದಿದ ರವಿ ಪಡುಗಡಲ ॥೧೯॥

[ಕು]ರುಳುದಲೆಯ ಭೂತ ತೊರಳೆಯ ಕೊಟ್ಟ[೨೨][ವು][೨೨]
ಕರುಳು ತುಂಡುಗಳ ವಿಂಗಡಿಸಿ।
ಇರುಳು ಹಗಲು ಏಳು ದಿವಸ ಸಂಭ್ರಮದಿಂದ
ಮರುಳ್ಗಳಾಳಿದವು ಆ ಪುರವ ॥೨೦॥

ಬಾಸಿಂಗವಾದವು ಕೈ ಕಾಲ್ಬೆರಳಿನ
ಸೂಸಕವಾಗಿ ನಾಸಿಕವು।
ಆ ಸಮಯದಿ ರಕ್ತಧಾರೆಯನೆರೆದವು
ಬಾಸೆಯ ಭಟ ಮರುಳುಗಳು ॥೨೧॥*

ಎಲ್ಲ ಭೂತಗಳಿಗೌತಣವ ಮಾಡಿದನೆಂದು
ಅಲ್ಲಲ್ಲಿ ಭಟ ಮರುಳುಗಳು।
ಬಲ್ಲಿದ ಕುಮಾರಮಲ್ಲನ ಪರಸುತ
ನಿಲ್ಲದೆ ಕುಣಿದಾಡುತಿಹವು ॥೨೨॥

ಇಂತೇಳು ದಿವಸವಾಗಲು ನರಸಿಂಗನು
ದಂತಿ ತುರುಗ ಸಹವಾಗಿ।

೧೧–೧೧ X(ಮೂ), ೨೨–೨೨ ನು(ಮೂ), * ೨೧ಕ್ಕೆ ಬದಲು ೩೬ ಹಾಕಿ ೩೭, ೩೮ ಎಂದು ಹಸ್ತಪ್ರತಿಯಲ್ಲಿ ಮುಂದುವರಿಸಿಕೊಂಡು ಹೋಗಲಾಗಿದೆ. ನಾವು ೨೧ ಎಂದು ಉಲ್ಲೇಖಿಸಿ ೨೨, ೨೩ ಎಂದು ಮುಂದುವರಿಸಿದ್ದೇವೆ(ಸಂ).

ಅಂತಸ್ಥವಿಲ್ಲದೈತಂದೂರ ಪೊಕ್ಕನು
ಪಂಥ ಪರಾಕ್ರಮದಿಂದ ॥೨೩॥

ಮತ್ತೂರ ಪೊಕ್ಕು ಕಂಡರು ಮಲ್ಲಭೂಪನ
ಕತ್ತಿಯೊಳ್ಕಡಿವೆವೆಂದೆನುತ।
ಹತ್ತಿರಕೈದಲಮ್ಮದೆ ನಿಂದಿರಲಾಗ
ಹತ್ತಿತು ಕೋಪ ರಾಯನಿಗೆ ॥೨೪॥

[೧೩][ಮು][೧೩]ನ್ನ ಭೀತಿಯಿಂದಲಿ ದೊರೆ ದೊರೆಗಳು
ಚೆನ್ನಾಗಿ ಬಾಹದ ಕಂಡು।
ಚೆನ್ನ ಬೊಲ್ಲನನೇರಿ [೧೪][ಮುಂಕೊಂಡು][೧೪] ರಾಯನು
ಮನ್ನೆ ಮನ್ನೆಯರನ್ನು ಜರೆಯೆ ॥೨೫॥

ರಾಯನ ಕೋಪವ ಕಾಣುತ ದೊರೆಗಳು
ಆಯತವಾಗಿ ಆ ಕ್ಷಣದಿ।
ಜೀಯ ವೀಳ್ಯೆಯ ಉಡುಗರೆಯ ಪಾಲಿಸುಯಿಂದು
ಲಾವಣಿಗೆಯನಿಳುಹುವೆವು ॥೨೬॥

ಎಂದು ವೀಳೆಯವ ಕೈಕೊಂಬ ಸಮಯದೊಳು
[೧೫][ಬ][೧೫]ಂದವು ರಣಹದ್ದು ಕಾಗೆ।
ಹೊಂದಿ ಮಲ್ಲಯ್ಯನ ಶಿರದೊಳು ಕುಳಿತಿರಲಿಂ
ತೆಂದರು ಮಡಿದನೆಂದೆನುತ ॥೨೭॥

ಚಂದಿರಗಾವಿಯ ಕುಂಗಿನೊಳ್ವಾಯಸ
ನಿಂದಿರಲವರು ಕಂಡಾಗ।
[೧೬][ಬಂ][೧೬]ದರು ಐದಾರು ಗಡೆಗಳ ಸೇರಿಸಿ
ಹಿಂದಣಿಂದಲಿ ನೂಕಿಸಿದರು ॥೨೮॥

ಕೊಯ್ದು ಆ ಕ್ಷಣದಿ ಮಲ್ಲಯ್ಯನ ಶಿರವನು
ಒಯ್ದು ರಾಯನಿಗೆ ಒಪ್ಪಿಸಲು ।

೧೩-೧೩ ನಿ(ಮೂ), ೧೪-೧೪ ಬಾತೊಂಡಾಗ(ಮೂ), ೧೫-೧೫ ಬೆ(ಮೂ), ೧೬-೧೬ ವಂ(ಮೂ).

ಸೈಯೆನುತಲಿ ವೀಳೆಯ ಉಡುಗೊರೆಯಿತ್ತು
ಹೊಯ್ಸಿದ ಹೊನ್ನ ಬಾಯೊಳಗೆ ॥೨೯॥

ಪಾಳೆಯದೊಳಗೆ ಹಾಕಿಸೆ ಶಿರವಾಕ್ಷಣ
ಕೂಗಿ ಬೊಬ್ಬಿರಿವುತಲಿಹುದು।
ಆಳು ಮೇಲಾಳು ಮನ್ನೆಯರು ರಾಯನು ಸಹ
ಬೀಳುತಿರ್ದರು ಭೀತಿಯೊಳಗೆ ॥೩೦॥*

ಎದ್ದರಾ ಸಮಯದೊಳಗೆ ಲೀಲೆಗಾರರು
ಹೊದ್ದಿ ಪೇಳಿದರು ಇಂತೆಂದು।
ಮುದ್ದು ಕುಮಾರ ಮಲ್ಲನ ಶಿರವನು ರಾಯ
ಇದ್ದಂತೆ ಕೊಂಡಕ್ಕೆ ಕಳು[೧೭][ಹು][೧೭] ॥೩೧॥

ಕಡೆದು ನಿಲ್ಲಿಸಿ ಕಲ್ಲಗುಡಿಯ ಕಟ್ಟದೆ ನೀನು
ಅಡಿಯಿಟ್ಟೆಯಾದರೆ ನಿನಗೆ।
ಕಡೆಗಾಲವಾಗದಿರದು ಮೈಮರೆಯದೆ
ನಡೆಸು ಮುಂದಣ ಕಾರ್ಯಗಳನು ॥೩೨॥

ಆಡಿದ ಲೀಲೆಗಾರರ ವಾಕ್ಯವನು ಕೇಳಿ
ರೂಢೀಶನು ಶಿರವನು ತರಿಸಿ।
ಕೂಡೆ ಪಟ್ಟಾವಳಿಯುಡಿಸಿ ವಾದ್ಯಗಳನು
ಮಾಡುತ[೧೮][ಲಿರು][೧೮]ವನಾಕ್ಷಣದಿ ॥೩೩॥

ಪಲ್ಲಕ್ಕಿಯೊಳಗಿಟ್ಟು ಪರಿಮಳಗಳ ಪೂಸಿ
ಎಲ್ಲ ದೊರೆಗಳೊಡಗೂಡಿ।
ಅಲ್ಲಲ್ಲಿ ನೃತ್ಯವಾಡಿಸುತ ಕೊಂಡದ ಭರಕಾಗಿ
ಮಲ್ಲನ ಶಿರವ ಹಾಕಿದರು ॥೩೪॥

ಗುಡಿಗಳ ಕಟ್ಟಿಸಿ ಕ[೧೯][ರೆ][೧೯]ಸಿ ನಾಲ್ವರನಾಗ
ಒಡನೆ ನಿಲ್ಲಿಸಿ ಹರುಷದೊಳು।

---

* ಇಲ್ಲಿ ಒಮ್ಮೆಲೇ ೫೫ ಅಂಕಿ ಹಾಕಲಾಗಿದೆ. ನಾವು ಕ್ರಮ ಪಾಲನೆಗಾಗಿ ೩೦ ಎಂದು ಬರೆದು ೩೧,೩೨ ....ಹೀಗೆ ಮುಂದುವರಿಸಿದ್ದೇವೆ(ಸಂ), ೧೭–೧೭ ಹೆ(ಮೂ), ೧೮–೧೮ ತಿರ(ಮೂ), ೧೯–೧೯ ರೆ(ಮೂ).

ದೃಢದಿ ಸೋಮಾರದಿ ಪರುಹು ಪಾಡ್ಯದಿ ತೃಪ್ತಿ
ಬಡಸಿದ ನರಸಿಂಗರಾಯ ॥೩೫॥

ನುಡಿದರು ಬಂದು ಪ್ರಜೆಗಳು ರಾಯನ ಕೂಡೆ
ಒಡನೆ ಮಾರ್ಬಲದ ವಿವರವ।
ಮಡಿದರು ದೊರೆಗಳೆಲ್ಲರು ಪಾಳೆಯದೊಳು ಗಾಯ
ವಡೆಯದವರ ಕಾಣೆನೆಂದು ॥೩೬॥

ಕಾರುಣಿಕದ ಪುರುಷನು ಇವನೆಂದಾಗ
ತೋರಣ ಕಟ್ಟಿ ಪಟ್ಟಣಕೆ।
ಧೀ[೨೦][ರ][೨೦]ನಾದವನ ಠಾಣ್ಯವ ಹಾಕಿ ತಾ ಹುಳಿ
ಯೇರಿಗೆ ನಡದನಾ ರಾಯ ॥೩೭॥

ಮನ್ನೆ ಮನ್ನೆಯರಳಿಯಲು ಪುತ್ರರಿಗಾಗ
ಮನ್ನಿಸಿ ಪಟ್ಟವ ಕಟ್ಟಿ।
ತನ್ನೊಡನುಳಿದ ಬಲವ ಕೂಡಿ ಪೆನುಗುಂಡೆ
ಯನ್ನು ಪೊಕ್ಕನು ನರಸಿಂಗ ॥೩೮॥

ರಾಯ ತನ್ನರಮನೆಯನು ಪೊಗಲಾಕ್ಷಣ
ಆಯತಾಕ್ಷಿಯರಾರತಿಗಳ।
[೨೧][ನಾ][೨೧]ಯತ ಸಿರುಮನ ಗೆಲಿದೆ[೨೨][ಅಹೋ! ಭಲಾ!][೨೨]
ಜೀಯಯೆನುತ ಹರಸಿದರು ॥೩೯॥

ರತ್ನದ ಚುವಡಿಯೊಳು ನಿಂದು ರಾಯನು
ಮತ್ತೆ ಮನ್ನೆಯರನು ಕಳುಹಿ।
ಅತ್ಯಂತ ಹರುಷದಿ ಸತಿಯರೊಳೊಡಗೂಡಿ
ಮತ್ತೆ ಸುಖದಲ್ಲಿರುತಿರ್ದ ॥೪೦॥

ಇಂತು ಬೂತಿಪುರದಿರೆ ಮನ್ನೆಯ ಭಯ
ವೆತ್ತು [೨೩][ಕ][೨೩]ಂಗೆಟ್ಟು ಚಿಂತಿಸುತ।

೨೦-೨೦ x(ಮೂ), ೨೧-೨೧ ಗಾ(ಮೂ), ೨೨-೨೨ ಯವೊಬಳಿ(ಮೂ),೨೩-೨೩ ತ(ಮೂ)

ಹೊತ್ತುಗಳೆಯಲಾರೆವೀ ಪಟ್ಟಣ[೨೪][ವ][೨೪] ಪೊರೆ
ಯುತಿದೆ ಭೂತದ[೨೫][ಬ್ಬ][೨೫]ರವು ॥೪೧॥

ನರಳುತ ಭೂತ[೨೬][ಬೊ][೨೬]ಬ್ಬರಿಯುತ ಕುಣಿವುತ
ನೆಳಲಂತೆ ತಿರುಗಲಿವೆ ಕೋ।
ಮರುಳ ತಂಡದ ಪುರವಿರಬಾರದೆನುತಲಿ
ತೆರಳಿದ ಪೆನಗೊಂಡೆಗಾಗಿ ॥೪೨॥

ಕಿರಿಯ ಕುಮಾರ ಸೋಮಯ್ಯ ದೊಡ್ಡವನಾಗಿ
ತಿರುಗಿದ ತನ್ನ ಪಟ್ಟಣಕೆ।
ಮರೆಯಲ್ಲಿದ್ದ ಹಾಗೆ ಧನವನಗಿಸಿ ಬೇಗ
ಭರದಿ ಕೊಟ್ಟಣವ ಹಾಕಿಸಿದ ॥೪೩॥

ಕೂಳಕಾರ್ಯವ ಮಾಡಿ ತಂದೆ ತಾಯಿಗಳಾಗ
ಸ್ವಾತ್ರ ಸಹ ಪೂರೈಸಿ।
ಮಿತ್ರ ಬಂಧುಗಳಿಗೆ ಸಂತೋಷ[ವಿತ್ತ]ನು
ಮತ್ತೆ ಕುಮಾರ ನಂಬೆಣ್ಣ ॥೪೪॥[೨೭]

ಇಂತು ತೃಪ್ತಿಯನ್ನೈದಿಸಿ ತನ್ನವರಿಗೆ
ಸಂತೋಷದಿಂದ ಸೋಮಯ್ಯ।
ನಿತ್ತ ಬೂತಿಪುರವನಾಳುತಲಿರ್ದ
ಕಂತುಹರನ ಕರುಣದಲಿ ॥೪೫॥

ಸಿರುಮನ ಚರಿತೆಯ ಕೇಳಿದ ಜನ[೨೮][ರು][೨೮]
ತರಣಿಚಂದ್ರಮರುಳ್ಳನಕ।
ಕರುಣಿ ಸೋಮೇಶನ ಕೃಪೆಯಿಂದ ಸ್ಥಿರಬಾಳು
ತಿರಲೆನೆ ಚರಿತೆ ಪೂರಾ[ಯ] ॥೪೬॥

ಹರನ ಭಕ್ತನು ಸಿರುಮಯ್ಯನ ಚರಿತೆಯ
ನಿರದೆ ಕೇಳಿದ ಸುಜನರಿಗೆ।
ಭರದಿಂದಲಿಹಪರವಹುದಿಷ್ಟ ಕಾಮ್ಯಾರ್ಥ
ಪರಮಭಕ್ತರು[೨೯][ಉಫೇ][೨೯]ಯೆನ್ನಿ ॥೪೭॥[೩೦]

❖❖

೨೪–೨೪ x(ಮೂ), ೨೫–೨೫ ಭ(ಮೂ), ೨೬–೨೬ ಕೊ(ಮೂ), ೨೭ ಇಲ್ಲಿ ಎರಡು ಪದ್ಯಗಳು ಸೇರಿಕೊಂಡಂತಿದೆ(ಸಂ). ೨೮–೨೮ ರಿಗೆ(ಮೂ), ೨೯–೨೯ ಹುಗೆ(ಮೂ), ೩೦+ ಅಂತು ಸಂಧಿ ೧೩ಕ್ಕಂ ಪದನು ೧೦೬೫ಕ್ಕಂ ಮಂಗಳ ಮಹಾಶ್ರೀ (ಮೂ).

ನಾಮಸೂಚಿ

❖❖

ಮಲ್ಲಕವಿ ವಿರಚಿತ

ಗೊಲ್ಲ ಸಿರುಮನ ಚರಿತೆ

ಸಂಪಾದಕರು

ಡಾ. ಎಂ. ಎಂ. ಕಲಬುರ್ಗಿ

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೯೯೪

*

ಪ್ರಸ್ತಾವನೆ

ಪ್ರಾಚೀನ ಕನ್ನಡ ಕೃತಿಗಳ ಸಂಪಾದನಕಾರ್ಯ ಮತ್ತು ರಮ್ಯಸಾಹಿತ್ಯದ ಸೃಷ್ಟಿಕಾರ್ಯಗಳು ನಮ್ಮ ನಾಡಿನಲ್ಲಿ ಏಕಕಾಲಕ್ಕೆ(೨೦ನೆಯ ಶತಮಾನ) ಪ್ರಾರಂಭವಾದವು. ಈ ರಮ್ಯಧೋರಣೆಯಿಂದಾಗಿ, ಪ್ರಾಚೀನ ರಸವತ್ತಾದ ಕೃತಿಗಳನ್ನು ಮಾತ್ರ ಪ್ರಕಟಿಸುವ ಅವುಗಳನ್ನು ರಸದೃಷ್ಟಿಯಿಂದ ಅಭ್ಯಸಿಸುವ ಒಲವು ನಮ್ಮಲ್ಲಿ ಬೆಳೆದು, ಚಾರಿತ್ರಿಕ ಕೃತಿಗಳನ್ನು ಪ್ರಕಟಿಸುವ, ಅವುಗಳನ್ನು ಶುದ್ಧ ಚಾರಿತ್ರಿಕ ದೃಷ್ಟಿಯಿಂದ ಅಭ್ಯಸಿಸುವ ಒಲವುಗಳು ಕುಂಠಿತವಾದವು. ಪ್ರಕಟವಾದ ಒಂದೆರಡು ಚಾರಿತ್ರಿಕ ಕೃತಿಗಳನ್ನೂ ರಸದೃಷ್ಟಿಯಿಂದ ಅಭ್ಯಸಿಸುವಲ್ಲಿ, ಚಾರಿತ್ರಿಕ ಅಧ್ಯಯನ ಮತ್ತೂ ಅಲಕ್ಷಿತವಾಯಿತು. ಈ ಕೊರತೆಯನ್ನು ಇಂದು ನಾವು ತುಂಬಿಕೊಳ್ಳಬೇಕಾಗಿದೆ.

ಕೆಲವು ವರ್ಷಗಳ ಹಿಂದೆ ಕರ್ನಾಟಕ ಕವಿಚರಿತೆ ಮತ್ತು ಕನ್ನಡ ಹಸ್ತಪ್ರತಿಸೂಚಿಗಳನ್ನು ಓದುತ್ತಿರುವಾಗ, ನಮ್ಮ ಕಾವ್ಯಗಳನ್ನು ಚಾರಿತ್ರಿಕ ದೃಷ್ಟಿಯಿಂದ ಅಭ್ಯಸಿಸುವುದು, ಚಾರಿತ್ರಿಕ ಕೃತಿಗಳನ್ನು ಪ್ರಕಟಿಸುವುದು ತೀರ ಅವಶ್ಯವೆನಿಸಿತು. ಈ ವಿಚಾರಗಳಿಂದ ಪ್ರೇರಿತನಾಗಿ "ಕರ್ನಾಟಕದ ಕೈಫಿಯತ್ತುಗಳ ಶೋಧ ಮತ್ತು ಪ್ರಕಟನ ಯೋಜನೆ"ಯನ್ನು ಕೈಗೆತ್ತಿಕೊಳ್ಳುವುದರ ಜೊತೆಗೆ "ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ", "ನಿಂಬ ಸಾಮಂತಚರಿತೆ", "ಸಿರುಮಣನಾಯಕನ ಸಾಂಗತ್ಯ", "ಸಿರುಮನ ಚರಿತೆ"ಗಳನ್ನು ಪ್ರಕಟಿಸಿದ ನಾನು, ಈಗ "ಗೊಲ್ಲ ಸಿರುಮನ ಚರಿತೆ"ಯನ್ನು ಸಂಪಾದಿಸಿ ಕರ್ನಾಟಕ ವಿಶ್ವವಿದ್ಯಾಲಯದ ಮೂಲಕ ಪ್ರಕಟಿಸುತ್ತಿದ್ದೇನೆ.

ಸಿರುಮನನ್ನು ಕುರಿತ ಕೃತಿಗಳು

ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ಕುಮಾರರಾಮನನ್ನು ಕುರಿತು ಹಲವು ಕಾವ್ಯಗಳು ಹುಟ್ಟಿಕೊಂಡಿವೆ. ಇಂತಹ ಇನ್ನೊಂದು ಅಪೂರ್ವ ಉದಾಹರಣೆ, ಸಿರುಮನನ್ನು ಕುರಿತ ಕಾವ್ಯಸಮೂಹ. ನಮಗೆ ತಿಳಿದ ಮಟ್ಟಿಗೆ ಈ ವರೆಗೆ ಸಿರುಮನನ್ನು ಕುರಿತು -

೧. ಸಿರುಮಣನಾಯಕನ ಸಾಂಗತ್ಯ- ಸಿದ್ಧಕವಿ-ಸಂಧಿ ೫, ಪದ್ಯ ೬೨೭.

೨. ಸಿರುಮನ ಚರಿತೆ-ಕೆಂಚಿಶೆಟ್ಟಿ ಸುತ ರಾಮ-ಸಂಧಿ ೧೩, ಪದ್ಯ ೧೦೬೫

೩. ಗೊಲ್ಲ ಸಿರುಮನ ಚರಿತೆ - ಮಲ್ಲಕವಿ-ಸಂಧಿ ೬, ಪದ್ಯ ೧೦೫೩.

ಹೀಗೆ ಮೂರು ಕೃತಿಗಳು ಸಿಗುತ್ತಿದ್ದು, ಅವುಗಳ ವಿವರ ಹೀಗಿದೆ:

ಮೊದಲನೆಯ ಕೃತಿಯ ತಾಳೆಗರಿ ಪ್ರತಿ ಮದ್ರಾಸ ಓರಿಯೆಂಟಲ್ ಮ್ಯಾನುಸ್ಕ್ರಿಪ್ಟ್ ಲೈಬ್ರರಿಯಲ್ಲಿದೆ. ೧೯೩೬ರಲ್ಲಿ ಸಿದ್ಧಪಡಿಸಿದ ಇದರ ನಕಲು ಕಾಗದಪ್ರತಿ ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿಭಾಂಡಾರದಲ್ಲಿದೆ. ಕವಿಚರಿತೆಕಾರರೂ ಈ ಕೃತಿಯನ್ನು ಉಲ್ಲೇಖಿಸಿದ್ದಾರೆ.ಇದನ್ನು ಪರಿಷ್ಕರಿಸಿ ಗದುಗಿನ ಶ್ರೀ ತೋಂಟದಾರ್ಯಮಠದ ವೀರಶೈವ ಅಧ್ಯಯನ ಸಂಸ್ಥೆಯ ಮೂಲಕ ನಾನು ಪ್ರಕಟಿಸಿದ್ದೇನೆ (೧೯೮೩).

ಎರಡನೆಯ ಕೃತಿಯ ಕಾಗದಪ್ರತಿ (?) ಶೇಕದಾರ ಶ್ರೀ. ಜಿ. ಎಂ. ಬಸವರಾಜಯ್ಯನವರ ಸಹಾಯದಿಂದ ಶ್ರೀ ಹುಲ್ಲೂರ ಶ್ರೀನಿವಾಸ ಜೋಯಿಸರಿಗೆ ಲಭಿಸಿದ್ದಿತು. ಇವರು ಸಾಹಿತ್ಯ ಪರಿಷತ್ತಿನ ಮೂಲಕ ಇದರ ಗದ್ಯಾನುವಾದವನ್ನು (೧೯೫೧) ಪ್ರಕಟಿಸಿದ ಬಳಿಕ, ಅದರ ಒಡೆಯರಿಗೆ ಹಿಂದಿರುಗಿಸಿದ ಈ ಮೂಲ ಹಸ್ತಪ್ರತಿ ಇಂದು ಲಭ್ಯವಿಲ್ಲ. ಆದರೆ ಮೈಸೂರಿನ ಜಿ. ವರದರಾಜರಾವ್ ಅವರ ಸಂಗ್ರಹದಲ್ಲಿದ್ದ ಇದರ ನಕಲು ಪ್ರತಿಯ ಆಧಾರದಿಂದ ಈ ಕಾವ್ಯವನ್ನು ನಾನು ಪರಿಷ್ಕರಿಸಿ, ಮೈಸೂರಿನ ಶ್ರೀ ಶಿವರಾತ್ರೀಶ್ವರಮಠದ ಮೂಲಕ ಪ್ರಕಟಿಸಿದ್ದೇನೆ (೧೯೯೧).

ಮೂರನೆಯ ಕೃತಿಯ ತಾಳೆಯಪ್ರತಿ ಶ್ರೀ. ಎಸ್. ಶಿವಣ್ಣ (ಬೆಂಗಳೂರು)ಅವರ ವಶದಲ್ಲಿದೆ. ಇದರ ಇನ್ನೊಂದು ತಾಳೆಪ್ರತಿ ಉಸ್ಮಾನಿಯಾ ವಿಶ್ವವಿದ್ಯಾಲಯದ ಹಸ್ತಪ್ರತಿ ಭಾಂಡಾರದಲ್ಲಿದೆ. ಇವೆರಡನ್ನೂ ಆಧರಿಸಿ, ಪ್ರಸ್ತುತ ಕೃತಿಯನ್ನು ಪರಿಷ್ಕರಿಸಿ, ಈಗ ಕರ್ನಾಟಕ ವಿದ್ಯಾಲಯದ ಮೂಲಕ ಪ್ರಕಟಿಸುತ್ತಿದ್ದೇನೆ. ಇದರಿಂದ ಸಿರುಮನನ್ನು ಕುರಿತ ಲಭ್ಯ ಮೂರು ಕೃತಿಗಳನ್ನು ಪ್ರಕಟಿಸಿದ ಸಂತೋಷ ನನ್ನದಾಗಿದೆ.

ಸಿರುಮನನ್ನು ಕುರಿತ ಕೃತಿನಾಮಗಳು-ಕವಿನಾಮಗಳು

ಸಿರುಮನನ್ನು ಕುರಿತ ಈ ಮೂರು ಕೃತಿಗಳಲ್ಲಿ ಎರಡಕ್ಕೆ ಆಯಾ ಕವಿಗಳು ಇಟ್ಟ ಹೆಸರುಗಳಾವವು? ಎಂಬುದು ಸಂದೇಹ. ಕೃತಿಗಳ ಒಡಲಲ್ಲಿ ಇದಕ್ಕೆ ಗಟ್ಟಿ ಆಧಾರಗಳಿಲ್ಲ. ಒಂದನೆಯ ಕೃತಿಯ ವಸ್ತು-ಪ್ರಕಾರಗಳನ್ನಾಧರಿಸಿ, ಕವಿಚರಿತೆಕಾರರು ಇದನ್ನು 'ಸಿರುಮನ ಸಾಂಗತ್ಯ' ಎಂದು ಕರೆದಿದ್ದಾರೆ.[೧] ಆದರೆ ಹಸ್ತಪ್ರತಿಯ ಪ್ರಾರಂಭದಲ್ಲಿ ಲಿಪಿಕಾರನು ಬರೆದ 'ಸಿರುಮಣನಾಯಕನ ಸಾಂಗತ್ಯ' ಎಂಬುದನ್ನೇ ನಾವು ಸ್ವೀಕರಿಸಿದ್ದೇವೆ. ಎರಡನೆಯ ಕೃತಿಯ ನಿಜನಾಮ ಸಿರುಮನ ಚರಿತೆ ಎಂದು ತಿಳಿದುಬರುತ್ತದೆ. ಈಗ ಪ್ರಕಟವಾಗುತ್ತಲಿರುವ ಮೂರನೆಯ ಕೃತಿಗೂ ಕವಿ ನಿರ್ದಿಷ್ಟ ಹೆಸರು ಬಳಸಿಲ್ಲವಾದುದರಿಂದ, ಲಿಪಿಕಾರ ಹಸ್ತಪ್ರತಿಯ ಆರಂಭದಲ್ಲಿ ಬಳಸಿದ "ಗೊಲ್ಲಸಿರುಮನ ಚರಿತೆ"[೨] ಎಂಬುದನ್ನೇ ಗ್ರಹಿಸುವುದು ಅನಿವಾರ್ಯವಾಗಿದೆ.

---

೧. ಮದ್ರಾಸ ಪ್ರಾಚ್ಯವಿದ್ಯಾಸಂಸ್ಥೆಯ ಹಸ್ತಪ್ರತಿಸೂಚಿ ಮತ್ತು ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಸೂಚಿಗಳಲ್ಲಿಯೂ "ಸಿರುಮನ ಸಾಂಗತ್ಯ" ಎಂದೇ ಕರೆಯಲಾಗಿದೆ.

೨. ಶಿವಣ್ಣನವರ ವಶದಲ್ಲಿಯ ಹಸ್ತಪ್ರತಿಯ ಅಂತ್ಯದಲ್ಲಿ ಲಿಪಿಕಾರ 'ಗೊಲ್ಲ ಸಿರುಮನ ಸಾಂಗತ್ಯ' ಎಂದು ಕರೆದಿದ್ದಾನೆ. 'ಹ' ಪ್ರತಿಯ ಆದಿಯಲ್ಲಿ "ಬೂದಿಹಾಳ ಸಿರುಮಣನಾಯಕನ ಸಾಂಗತ್ಯ"ಎಂದು ಕರೆಯಲಾಗಿದೆ.

ಸಿರುಮನನ್ನು ಕುರಿತು ಈ ವರೆಗೆ ಲಭಿಸಿದ ಮೂರು ಕೃತಿಗಳ ಕರ್ತೃವಿವೇಚನೆ ಇಲ್ಲಿ ಅವಶ್ಯವೆನಿಸಿದೆ. ಶ್ರೀ ಹುಲ್ಲೂರ ಅವರಿಗೆ ಲಭಿಸಿದ 'ಸಿರುಮನ ಚರಿತೆ'ಯ ಕರ್ತೃ "ಪಂಚಮಕುಲದ ಕೆಂಚಿಸೆಟ್ಟಿಯ ಸುತ ರಾಮ"ನೆಂದು ವ್ಯಕ್ತವಾಗಿಯೇ ಹೇಳಲಾಗಿದೆ. ಆದರೆ 'ಸಿರುಮಣನಾಯಕನ ಸಾಂಗತ್ಯ'ದ ಅಂತ್ಯ ಮತ್ತು 'ಗೊಲ್ಲ ಸಿರುಮನ ಚರಿತೆ'ಯ ಆದಿಗಳಲ್ಲಿ

ಉಸಿರೊಗ್ಗಿನ ಶಿವಶರಣರೆಲ್ಲರ ಶಿಶು।
ಕುಶಲ ಶಿವಲೀಲೆ ವೀರಯ್ಯನ।
ರಸಿಕನ ಮಗ ಮಲ್ಲನಿಂತು ಪೇಳಿದನಿದ।
ಹೊಸತಾಗಿ ಸಿರುಮನ ಕೃತಿಯು॥

ಎಂಬ ಪದ್ಯ ಕಂಡು ಬರುತ್ತದೆ. ಹೀಗಾಗಿ ಈ ಎರಡೂ ಗ್ರಂಥಗಳನ್ನು ಒಬ್ಬನೇ ಬರೆದನೋ, ಒಂದರಲ್ಲಿ ಇದು ಪ್ರಕ್ಷಿಪ್ತ ಪದ್ಯವಾಗಿ ಸೇರಿಕೊಂಡಿತೋ ಎಂಬ ಸಂದೇಹ ಹುಟ್ಟುತ್ತದೆ. ಆದರೆ ಸಿರುಮಣನಾಯಕನ ಸಾಂಗತ್ಯದ ಅಂತ್ಯದಲ್ಲಿ ಈ ಪದ್ಯವಿದ್ದರೆ ಆದಿಯಲ್ಲಿ "ಭುವನವರಿಯೆ ಗೊಲ್ಲ ಸಿರುಮನ ಕೃತಿಯನು ಪವಣಿಸಿ ಸಿದ್ಧನೊರೆದನು" ಎನ್ನುತ್ತ ಕರ್ತೃನಾಮವನ್ನು 'ಸಿದ್ಧ' ಎಂದು ಸ್ಪಷ್ಟಪಡಿಸಲಾಗಿದೆ. "ಗೊಲ್ಲ ಸಿರುಮನ ಚರಿತೆ"ಯಲ್ಲಿ ಮೇಲಿನ ಪದ್ಯವಲ್ಲದೆ, 'ಶಿವಲೀಲೆ ವೀರನ ಮಗ ಮಲ್ಲೇಶ' ಎಂಬ ಉಲ್ಲೇಖವೂ ಇದೆ. ಹೀಗಾಗಿ 'ಸಿರುಮಣನಾಯಕನ ಸಾಂಗತ್ಯ'ದ ಕರ್ತೃ 'ಸಿದ್ಧಕವಿ'ಯೆಂದೂ, 'ಗೊಲ್ಲಸಿರುಮನ ಚರಿತೆ'ಯ ಕರ್ತೃ 'ಮಲ್ಲಕವಿ'ಯೆಂದೂ ಇಟ್ಟುಕೊಳ್ಳಬಹುದು.

ಮಲ್ಲಕವಿ

ಈ ಕವಿಯ ಹೆಸರನ್ನಾಗಲಿ, ಈ ಕೃತಿಯ ಹೆಸರನ್ನಾಗಲಿ ಕವಿಚರಿತೆಕಾರರು ಉಲ್ಲೇಖಿಸಿಲ್ಲ. "ಕವಿಚರಿತೆಯ ಅನುಕ್ತಕೃತಿಸೂಚಿ"ಯಲ್ಲಿಯೂ ಈ ಬಗ್ಗೆ ಪ್ರಸ್ತಾಪವಿಲ್ಲ. ಅನ್ಯಕವಿಗಳೂ ಈ ವಿಷಯವಾಗಿ ಮೌನತಾಳಿದ್ದಾರೆ. ಹೀಗಾಗಿ ಕೃತಿಯನ್ನೇ ಆಧರಿಸಿ ಈ ಕವಿಯ ಬಗ್ಗೆ ಕೆಲವು ಮಾತುಗಳನ್ನು ಹೇಳುವುದು ಅನಿವಾರ್ಯವಾಗಿದೆ.

ಈ ಕೃತಿಯಲ್ಲಿ "ಅಸಗೋಡ ಶಂಭುಸಿದ್ಧೇಶ" (೧-೧) "ಅಸಗೋಡ ಶಂಭು" (೧-೨, ೩-೧) "ಅಸಗೋಡು ಶಂಭು ಮಲ್ಲೇಶ" (೬-೮೩) ಎಂಬ ಸ್ತುತಿ ಇರುವುದರಿಂದ ಇದರ ಕರ್ತೃ ಬಹುಶಃ ಚಿತ್ರದುರ್ಗ ಜಿಲ್ಲೆಯ ಜಗಳೂರು ತಾಲೂಕಿನ ಅಸಗೋಡಿನವನೋ, ಅಸಗೋಡು ಗ್ರಾಮದ ಸಿದ್ಧಮಲ್ಲೇಶ ದೇವತೆಯ ಭಕ್ತನಾಗಿದ್ದು, ಬೇರೆ ಊರಿನವನೋ ಇರಬೇಕು.*

"ಶಿವಲೀಲೆ ವೀರಯನ ರಸಿಕನು ಮಗ ಮಲ್ಲ" (೧-೭) "ಶಿವಲೀಲೆ ವೀರನ ಮಗ ಮಲ್ಲೇಶ" (೬-೮೩) ಎಂದು ಉಲ್ಲೇಖಿಸಿರುವುದರಿಂದ ಕವಿಯ ಹೆಸರು ಮಲ್ಲೇಶ, ಇವನ ತಂದೆಯ ಹೆಸರು ವೀರಯ್ಯನೆಂದು ಸ್ಪಷ್ಟವಾಗುತ್ತದೆ. "ಶಿವಶರಣರೆಲ್ಲರ ಶಿಶು" ಎಂದು ತನ್ನ ತಂದೆಯನ್ನು ಕರೆದಿರುವುದರಿಂದಲೂ ಕೃತಿಯ ಉದ್ದಕ್ಕೂ ಶಿವಪರ ವಾತಾವರಣ ತುಂಬಿರುವುದರಿಂದಲೂ ಈತನು ವೀರಶೈವಕವಿಯೆಂದು ವ್ಯಕ್ತವಾಗುತ್ತದೆ. ತಂದೆ ವೀರಯ್ಯನು 'ಶಿವಲೀಲೆ'ಯ ಕಲಾವಿದನಾಗಿದ್ದನೆಂದು

* ಆದಿಯಲ್ಲಿ ಅಸಗೊಂಡ ಸಿದ್ದೇಶ ಎಂದೂ, ಅಂತ್ಯದಲ್ಲಿ ಅಸಗೋಡ ಮಲ್ಲೇಶ ಎಂದೂ ಇದೆ. ನಿಜನಾಮ ಶೋಧಿಸಬೇಕಾಗಿದೆ.

ಎರಡು ಸಲ ಬರುತ್ತದೆ. (೧-೭, ೬-೮೩). ಬಹುಶಃ ಮಗನಾದ ಈ ಕವಿಯೂ "ಶಿವಲೀಲೆ"ಯನ್ನೇ ವೃತ್ತಿ ಮಾಡಿಕೊಂಡಿರಲೂಬಹುದು. ೬ನೆಯ ಸಂಧಿಯ ಆರಂಭದ ಮಾರ್ಜಿನ್ನಿನಲ್ಲಿ 'ಶಿವಲೀಲೆ' ಎಂಬ ಉಲ್ಲೇಖವಿದ್ದು, ಸಾಂಗತ್ಯಛಂದದಿಂದ ಭಿನ್ನವಾಗಿರುವ ಇಲ್ಲಿಯ ಪದ್ಯಗಳು 'ಶಿವಲೀಲೆ' ಇಲ್ಲವೆ 'ಶಿವ' ಎಂದೇ ಮುಗಿಯುತ್ತಿದ್ದು, ಬಹುಶಃ ಇಲ್ಲಿಯ 'ಶಿವ' ಎಂಬುದು 'ಶಿವಲೀಲೆ'ಯೆಂಬುದರ ಸಂಕ್ಷಿಪ್ತರೂಪವಾಗಿರಬಹುದು. ಆದುದರಿಂದ ಹಾಡುವಾಗ ಈ 'ಶಿವ' ಎಂಬುದನ್ನು 'ಶಿವಲೀಲೆ' ಎಂದು ವಿಸ್ತರಿಸಿಕೊಳ್ಳಬೇಕೆಂದು ತೋರುತ್ತದೆ.

'ಶಿವಲೀಲೆ' ಎಂಬ ವೃತ್ತಿ ಬಹುಶಃ ಮಂಟೇಸ್ವಾಮಿ ಪರಂಪರೆಯ 'ನೀಲಗಾರ' (ಲೀಲೆಗಾರ)ರೆಂಬ ಗೀತೋಪಜೀವಿಗಳಿಗೆ ಸಂಬಂಧಿಸಿರಬಹುದು. ಇದು ನಿಜವಿದ್ದರೆ ಶಿವಲೀಲೆಯ ವೀರಯ್ಯನ ಮಗನಾದ ಈ ಕವಿಯನ್ನು ದಕ್ಷಿಣ ಕರ್ನಾಟಕದ 'ನೀಲಗಾರ' ಹೆಸರಿನ ವೃತ್ತಿಗಾಯಕರ ವರ್ಗಕ್ಕೆ ಸೇರಿಸಬೇಕಾಗುತ್ತದೆ. ಮತ್ತು ಈ 'ಗೊಲ್ಲ ಸಿರುಮನ ಚರಿತೆ'ಯನ್ನು ಅಲ್ಲಲ್ಲಿ ಗೋಷ್ಠಿ ಮೂಲಕ ಈ ಕವಿ ಮತ್ತುಈ ಸಂಪ್ರದಾಯದವರು ಹಾಡುತ್ತಿರಬಹುದೇ? ಎಂಬ ಸಂದೇಹ ಹುಟ್ಟುತ್ತದೆ. ಹೈದರಾಬಾದಿನ ಹಸ್ತಪ್ರತಿಗೆ ಹೊದಿಸಿರುವ ಕಟ್ಟಿಗೆ ಫಲಕದ ಮೇಲೆ 'ಲಿಂಗಲೀಲಾ ವಿಲಾಸ' ಎಂಬ ಶೀರ್ಷಿಕೆಯನ್ನು ಕಾಗದದ ಮೇಲೆ ಬರೆದು ಅಂಟಿಸಿರುವುದು ಈ ಸಂದರ್ಭದಲ್ಲಿ ನಮ್ಮ ಗಮನ ಸೆಳೆಯುತ್ತದೆ. ಈ ಕೃತಿಯ ಹೇರಳ ಪಾಠಭೇದವೂ, ಅಕ್ಷರಗಳ ಹ್ರಸ್ವೀಕರಣ ದೀರ್ಘೀಕರಣಗಳೂ ಇದು ಮೌಖಿಕ ಸಂಪ್ರದಾಯದಲ್ಲಿಯೂ ಪ್ರಚುರಗೊಂಡುದನ್ನು ಸೂಚಿಸುತ್ತವೆ. 'ಕೆಂಚಶೆಟ್ಟಿಯ ಸುತ ರಾಮ'ನ ಸಿರುಮನ ಚರಿತೆಯಲ್ಲಿ ಸಿರುಮನ ಕುಟುಂಬವರ್ಗ ಮಡಿಯುತ್ತಲೇ ಲೀಲೆಗಾರರು ಬಂದು, ಅವರ ಶೌರ್ಯ-ಸಾಹಸವನ್ನು ಹಾಡಿದ ಉಲ್ಲೇಖ (೧೩-೩೧-೩೩) ಬರುವುದನ್ನು ಇಲ್ಲಿ ನೆನೆಯಬಹುದು.

ಈ ಕೃತಿಯಲ್ಲಿ ಸಿರುಮನ ರಾಜಧಾನಿಯಾದ ಬೂದಿಹಾಳ ಗ್ರಾಮದ ರಾಮನಾಥನ ಕೊತ್ತಳ (೧-೫೫), ಏಕನಾಥಿ (೧-೫೬), ಕಪ್ಪರಿ ವೀರಣ್ಣ (೧-೫೭), ನಿರಾಸೆಯಮಠ (೧-೫೮) ಇತ್ಯಾದಿಗಳ ವರ್ಣನೆ ಮತ್ತು ಸೈನ್ಯದ ಚಲನವಲನೆಯ ಪ್ರಾದೇಶಿಕ ಸ್ಥಳಗಳು ತುಂಬ ನಿರ್ದಿಷ್ಟವಾಗಿ ಬರುವುದರಿಂದ, ಕವಿ ಮಲ್ಲನಿಗೆ ಈ ಪ್ರದೇಶದ ದಟ್ಟ ಪರಿಚಯವೂ ಇರಬಹುದೆನಿಸುತ್ತದೆ.

ಗೊಲ್ಲ ಸಿರುಮನ ಚರಿತೆ

"ಗೊಲ್ಲ ಸಿರುಮನ ಚರಿತೆ", ಹೆಸರೇ ಸೂಚಿಸುವಂತೆ ಸಿರುಮ ಹೆಸರಿನ ಪಾಳೆಯಗಾರನ ಯುದ್ಧಘಟನೆಯನ್ನೊಳಗೊಂಡಿದೆ. ಮಿಡಿಗೇಸಿಯ ಎಕ್ಕಟಿ ಗಂಗಯ್ಯ ಮತ್ತು ಹಿರಿಯೂರ ಕಸವಯ್ಯರ ಪಕ್ಷವಹಿಸಿ, ಚಂದ್ರಗಿರಿಯಲ್ಲಿ ಆಳುತ್ತಲಿದ್ದ ಸಾಳುವ ನರಸಿಂಹನು ಸಿರುಮನ ಮೇಲೆ ಏರಿಬಂದು, ವಿಜಯ ಸಾಧಿಸಿದ ಘಟನೆ ಈ ಕೃತಿಯ ವಸ್ತು. ಆರು ಸಂಧಿಗಳನ್ನು ವ್ಯಾಪಿಸಿರುವ ಈ ಕೃತಿಯ ಕಥಾಸಾರ ಹೀಗಿದೆ:

ಸಂಧಿ : ಒಂದು

ಅಸಗೋಡು ಶಂಭುಸಿದ್ಧೇಶ, ಗಣಪತಿ, ನಂದಿ, ಭೃಂಗೀಶ, ವೀರಭದ್ರ, ಸರಸ್ವತಿಯರನ್ನು ಸ್ತುತಿಸುತ್ತೇನೆ (೧-೪). ಸಿರುಮಭೂವರನ ಕಾಳಗವನ್ನು ಹೇಳುತ್ತೇನೆ (೫). ಶಿವಶರಣರ ಶಿಶುವಾದ ಶಿವಲೀಲೆ ವೀರಯ್ಯನ ಮಗನಾದ ಮಲ್ಲನು ಈ ಕೃತಿಯನ್ನು ಹೇಳಿದನು (೬). ಬೂದಿಹಾಳಿನ ವೀರಭದ್ರನಿಗೆ

ನಮಸ್ಕಾರ ಹೇಳುತ್ತೇನೆ (೭). ಅರ್ಜುನ, ಅಭಿಮನ್ಯು, ರಾವಣರಂತೆ ಕಾದಿ ಬೂದಿಹಾಳಿನ ಗೊಲ್ಲ ಸಿರುಮ ಕೀರ್ತಿವಡೆದ (೯). ಕುಮಾರರಾಮನ ಅಂಗ ನೇಮಿಗೆ ಸಿಕ್ಕಿತು. ಆದರೆ ಅಂಗ ಸಿಗದಂತೆ ನರಸಿಂಹನೊಡನೆ ಸಿರುಮ ಕಾದಿದ (೧೦). ಇದು ಶಿವಕಥೆಯಲ್ಲ, ಪುಣ್ಯಚರಿತೆಯಲ್ಲ ಎನ್ನಬೇಡಿರಿ, ಇದನ್ನು ಕೇಳಿದರೆ ಮುಕ್ತಿಯುಂಟು (೧೧). ಪೆನುಗೊಂಡೆಯಲ್ಲಿ ಪ್ರೌಢರಾಯನ ಊಳಿಗದವರಾಗಿ ಗುಂಡರಾಜ ಮತ್ತು (ಗೊಲ್ಲ) ಕಾಚನಾಯಕರಿದ್ದರು (೧೨). ಗುಂಡರಾಜನು ಲಕ್ಷಸೀಮೆಗೆ ವಜೀರವಾಗಿದ್ದನು (೧೩). ಕಾಚನಾಯಕನು ರಾಜನ ದ್ವಾರಪಾಲಕನಾಗಿದ್ದನು. ಒಮ್ಮೆ ಪ್ರೌಢರಾಯನ ಭೇಟ್ಟಿಗೆ ಬಂದ ಗುಂಡರಾಜನನ್ನು ಕಾಚನಾಯಕ ಕೈಯೊಳಗಿನ ಬೆತ್ತವನ್ನು ಅಡ್ಡವಿಟ್ಟು, ಒಳಗೆ ಬಿಡಲಿಲ್ಲ (೧೬). ಅವಮಾನಿತನಾದ ಗುಂಡರಾಜ "ಬೆತ್ತವನ್ನು ಅಡ್ಡವಿಟ್ಟ ನಿನ್ನ ಕೈ ಕತ್ತರಿಸುವೆ" ಎಂದು ಗುಡುಗಿದ (೧೭). 'ಹೀಗೆ ನುಡಿದ ನಿನ್ನ ಹಲ್ಲನುದುರಿಸುವೆ' ಎಂದು ಕಾಚ ಉತ್ತರಿಸಿದ. ಇಬ್ಬರಿಗೂ ಜಗಳ ಏರ್ಪಟ್ಟಿತು. ಪ್ರೌಢರಾಯ ಎಚ್ಚತ್ತು ವಿಷಯ ತಿಳಿದುಕೊಂಡ. ಗುಂಡನೊಂದಿಗೆ ಕಾದಿ ಅವನ ಹಲ್ಲ ಉದುರಿಸುವೆನೆಂದು ಕಾಚ ನುಡಿದ (೨೩). 'ಕಾಚನ ಕೈ ಕತ್ತರಿಸಿ ನಿನಗೆ ಕಾಣಿಕೆಯಾಗಿ ಒಪ್ಪಿಸುವೆ'ನೆಂದು ಗುಂಡರಾಜ ಮಾರ್ನುಡಿದ (೨೪). 'ಆಯುಧ ಬೇಡ, ಚೂರಿ ಸಾಕು, ಹಗೆಯಲ್ಲಿ ಇಳಿಸು, ಅಲ್ಲಿಯೇ ಕೈಚಳಕ ತೋರಿಸುವೆ'ನೆಂದು ಕಾಚ ಅರಸನಲ್ಲಿ ಬಿನ್ನವಿಸಿದ (೨೬). ಇಬ್ಬರೂ ಹಗೆಯೊಳಗೆ ಇಳಿದು ಹೋರಾಡಿದರು. ಕಾಚ ಗುಂಡನ ಹಲ್ಲು ಉದುರಿಸಿದ (೩೩). ಪ್ರೌಢರಾಯ ಮೆಚ್ಚಿ "ಬಹುಮಾನ ಕೇಳು?" ಎನ್ನಲು, 'ಕಿತ್ತಿದ ಹಲ್ಲು ಕೊಡು' ಎಂದು ಕಾಚ ಬಿನ್ನವಿಸಿದ (೩೪). ಈ ಬಿನ್ನಹಕ್ಕೆ ಮೆಚ್ಚಿ ಪ್ರೌಢರಾಯ ಬಲ್ಲೆಹ, ಪದಕ, ಚೌಕಳಿ, ಬೊಲ್ಲ - ಈ ಉಡುಗೊರೆಗಳನ್ನಲ್ಲದೆ, 'ಸೂಜಿಗಲ್ಲು' ಹೆಸರಿನ ದುರ್ಗವನ್ನು ಕೊಟ್ಟನು(೩೫). ಈ ದುರ್ಗವನ್ನಾಳುವ ಕಾಚನಾಯಕ ಗುಂಡರಾಜನ ಹಲ್ಲನ್ನೊಳಗೊಂಡ ಚಮ್ಮಾವುಗೆ ಮೆಟ್ಟುತ್ತಲಿದ್ದನು (೩೮), ಗಂಡುಸಂತಾನವಿಲ್ಲದ ಪ್ರೌಢರಾಯನು ಗುಂಡನ ಮಗ ನರಸಿಂಹನನ್ನು ಸಲುಹಿ, ತನ್ನ ಪಟ್ಟಕ್ಕೆ ಉತ್ತರಾಧಿಕಾರಿಯನ್ನಾಗಿಸಿದನು (೩೯). ಕಾಚನ ಮಗ ಸಿರುಮನು ೩೦೦೦ ಸೈನ್ಯ, ೩೦೦ ಕುದುರೆಗಳ ಅಧಿಪತಿಯಾಗಿದ್ದನು (೪೧). ತಂದೆಯ ಚಮ್ಮಾವುಗೆ ತಾನು ಮೆಟ್ಟಬಾರದೆಂದು ಸಿರುಮ, ಅದರಲ್ಲಿಯ ಹಲ್ಲನ್ನು ಹೊರತೆಗೆದು, ಉಗುಳುವ ಪಗುಡದಲ್ಲಿಟ್ಟಿದ್ದನು (೪೪). ಪ್ರೌಢರಾಯ ಸ್ವರ್ಗಸ್ಥನಾಗಲು ನರಸಿಂಹನು ಪೆನುಗೊಂಡೆಯಲ್ಲಿ ಆಳುತ್ತಿದ್ದನು (೪೬). ಬೇಟೆಗೆ ಹೋದ ಸಿರುಮನ ನಾಯಿಯನ್ನು ಮೊಲ ಬೆನ್ನಟ್ಟಿದ ದೃಶ್ಯ ಕಂಡು, ಅಲ್ಲಿ ಬೂದಿಹಾಳು ರಾಜಧಾನಿ ಕಟ್ಟಿಸಿ ಆಳತೊಡಗಿದ (೪೮). ಹೊಯ್ಸಳದೇಶದಲ್ಲಿ ಬೂದಿಹಾಳು ಸುಪ್ರಸಿದ್ಧವಾದುದು (೪೯). ಕೋಟೆ-ಕೊತ್ತಲ, ಏಕನಾಥೆಯ ಗುಡಿ-ಕಪ್ಪರಿ ವೀರಣ್ಣನ ಗುಡಿ-ನಿರಾಸೆಮಠಗಳಿಂದ ಬೂದಿಹಾಳು ಒಪ್ಪಿತ್ತಿದೆ (೫೦-೬೦). ತನಗೆ ಉಡುಗೊರೆ ಒಪ್ಪಿಸಲು ಮಿಡಿಗೇಸಿಯ ಎಕ್ಕಟಿ ಗಂಗಯ್ಯನಲ್ಲಿಗೆ ಊಳಿಗದ ಮಲ್ಲನನ್ನು ಸಿರುಮ ಕಳಿಸಿದನು (೬೨-೬೩). ಕರಣಿಕ ಚಿಕ್ಕರಸ ಗಂಗಯ್ಯನಿಗೆ ಓಲೆ ಓದಿ ಹೇಳಿದ (೬೪). ಸಿಟ್ಟಿಗೆದ್ದ ಗಂಗಯ್ಯ ಉಡುಗೊರೆ ಕೊಡಲು ನಿರಾಕರಿಸಿ, ಹಿರಿಯೂರ ಕಸವಯ್ಯನಿಗೆ ಈ ವಿಷಯ ತಿಳಿಸಿದ (೬೬-೬೮). ಕಸವಯ್ಯ ಮಿಡಿಗೇಸಿಗೆ ಬಂದ. ಇಬ್ಬರೂ ಸೇರಿ ನರಸಿಂಹನಾಯಕನಿಗೆ ಸಿರುಮ ಮತ್ತು ಬಾಗೂರು ಗೋವಿಂದರ ಬಗ್ಗೆ ದೂರು ಹೇಳಲು ನಿರ್ಧರಿಸಿದರು (೭೦, ೭೧), ಮತ್ತು ಪೆನುಗೊಂಡೆಗೆ ಹೋಗಿ ನರಸಿಂಹನಿಗೆ ದೂರು ಹೇಳಿದರು (೭೨-೮೦). ಸಿಟ್ಟಿಗೆದ್ದ ನರಸಿಂಹ ಪ್ರಧಾನಿ ಈಶ್ವರನಾಯಕನನ್ನು ಕರೆಯಿಸಿದ (೮೩). ರೊದ್ದ, ಹರವಿಕೆರೆ, ಮಿಡಿಗೇಸಿ ಮಾರ್ಗವಾಗಿ ದಂಡು ನಡೆಯಲು ಈಶ್ವರನಾಯಕ ಸೂಚಿಸಿದ (೮೪). ಸೈನ್ಯ ಮಿಡಿಗೇಸಿಯ ಗಡಿದಾಟಿ ಸಿರುಮನ ಸೀಮೆಯ ವರೆಗೆ ಬಂದಿತು (೯೦, ೯೧). ನಂದ್ಯಾಲದ ತಿಮ್ಮರಾಜ ಮೊದಲಾದ

ನಾಯಕರು (ಅನೇಕ ಹೆಸರುಗಳಿವೆ) ಒಂದು ಗೂಡಿದರು (೯೨-೯೮). ಮೂರುಸಾವಿರ ಏಳುನೂರು ಆನೆ, ಒಂದು ಲಕ್ಷ ತುರಗ ದಳ, ಹದಿನಾರು ಲಕ್ಷ ಕಾಲ್ದಳ ಒಟ್ಟು ಗೂಡಿತು (೯೯). ದುಮ್ಮೆ ಮಾರ್ಗವಾಗಿ ಸೈನ್ಯ ಸಾಗಿತು (೧೦೧) ಬಿಜ್ಜಾವರದಲ್ಲಿ ಸೈನ್ಯ ನೆಲೆಯೂರಿದ ಸುದ್ದಿಯನ್ನು ಬೇಹುಗಾರರು ಸಿರುಮನಿಗೆ ತಿಳಿಸಿದರು (೧೦೪), ಸಿರುಮ ತನ್ನ ಮಕ್ಕಳಾದ ಕಾಚ, ಮಲ್ಲರನ್ನು ಕರೆಸಿದ (೧೦೫). ಹೆಂಡತಿ ಚಿಕ್ಕಾಯಿಗೂ ತಿಳಿಸಿದ (೧೦೯). ಬಿಜ್ಜಾವರದಿಂದ ಬರುತ್ತಲಿರುವ ದಂಡನ್ನು ಮಧ್ಯದಲ್ಲಿಯೇ ತಡೆಯಲು ಬಾಗೂರ ಗೋವಿಂದನಿಗೆ ತಿಳಿಸಿದ (೧೧೩). ಗೋವಿಂದನ ಸೈನ್ಯದ ಶ್ರೀರಂಗ ಮೊದಲಾದವರು (ಅನೇಕರ ಹೆಸರುಗಳಿವೆ), ಕಣಿವೆಯಕಟ್ಟೆ ಹತ್ತಿರ ಸೈನ್ಯವನ್ನು ಎದುರಿಸಿದರು (೧೧೪-೧೨೦). ನರಸಿಂಹನ ೩೦೦ ಕುದುರೆ, ೧೨ ಆನೆಗಳನ್ನು ಸೆರೆಹಿಡಿದರು (೧೨೧). ಮರುದಿನ ನರಸಿಂಹನ ಸೈನ್ಯ ಬಾಗೂರನ್ನು ಮುತ್ತಿತು (೧೩೪). ತನ್ನ ಸಹಾಯಕ್ಕೆ ಬರಲು ಗೋವಿಂದನು ಸಿರುಮನಿಗೆ ಪತ್ರ ಕಳಿಸಿದನು (೧೩೫-೧೩೯).

ಸಂಧಿ : ಎರಡು

ಸಿರುಮಭೂಪಾಲನು ಮಗನಾದ ಕಾಚನನ್ನು ಬಾಗೂರ ಗೋವಿಂದನ ಸಹಾಯಕ್ಕೆ ಹೋಗಲು ಹೇಳಿದ (೧-೮). ಈ ಸುದ್ದಿ ಕೇಳಿ ಸಿರುಮನ ಹೆಂಡತಿ ಚಿಕ್ಕಾಯಿ ಮಮ್ಮಲ ಮರಗಿದಳು (೯-೧೬). ಕಾಚ ತನ್ನ ಸೈನಿಕರಿಗೆ ಉಡುಗೊರೆ ನೀಡಿದ. ತಾನೂ ಸಿಂಗರಿಸಿಕೊಂಡ (೧೭-೨೧). ತಾಯಿಗೆ ನಮಸ್ಕರಿಸಿದ. ಕಾಚನಿಗೆ ಪ್ರೀತಿಯಿಂದ ಊಟ ಮಾಡಿಸಿದರು (೨೨-೨೭). ತಾಯಿ ಮತ್ತು ಹೆಂಡಿರಿಂದ ಬೀಳ್ಕೊಂಡು ಕಾಚೇಂದ್ರ ಬಾಗೂರಿಗೆ ನಡೆದ (೨೮-೩೫). ನಿರಾಸೆಯ ಮಠ, ವೀರಭದ್ರದೇವಾಲಯಗಳಿಗೆ ಬಂದು ಮಹಂತರ ಮತ್ತು ದೇವರ ದರ್ಶನ ಪಡೆದ (೩೬-೩೯). ಸಿರುಮನ ಚಾವಡಿಗೆ ಬಂದು ಎಪ್ಪತ್ತೇಳು ಬಂಟರನ್ನು ಆಯ್ದುಕೊಂಡ (ಅನೇಕರ ಹೆಸರುಗಳಿವೆ) (೪೦-೭೦). ಉತ್ತಮೋತ್ತಮ ಕುದುರೆಗಳನ್ನು (ಹೆಸರುಗಳಿವೆ) ಆಯ್ದುಕೊಂಡ (೭೧-೮೬). ಮುನ್ನೂರು ಕಾಲ್ದಳ, ಮೂವತ್ತು ಕುದುರೆಗಳನ್ನು ಸಂಗ್ರಹಿಸಿದ (೮೭). ಕಾಚೇಂದ್ರ ಬಾಗೂರಿಗೆ ನಡೆದ (೯೨). ಅರೆಯಕಟ್ಟೆಯ ತೆವರಿಗೆ ಬಂದು, ಅಡಗಿ ಹೋಗದೆ ಕಹಳೆಯ ಸದ್ದಿನೊಂದಿಗೇ ಬಾಗೂರು ಸಮೀಪಿಸಿದ (೯೫-೯೮). ನರಸಿಂಹನ ದಂಡನ್ನು ನಾಶಮಾಡುತ್ತ, ಬಾಗೂರ ಕೋಟೆ ಸಮೀಪ ಬಂದು, ಬಾಣದ ಮೂಲಕ ಒಳಗೆ ಪತ್ರ ಎಸೆದ (೧೧೦). ಪತ್ರ ಓದಿ ಗೋವಿಂದ ಕಾಚನನ್ನು ಬರಮಾಡಿಕೊಂಡ (೧೧೧). ಕಾಚ ಬಾಗೂರ ಸೇರಿದ ಸುದ್ದಿ ಕೇಳಿ ನರಸಿಂಹ ಕ್ರುದ್ಧನಾದ, ಈಶ್ವರನಾಯಕನು ಬಾಗೂರನ್ನು ಮುತ್ತಿದ (೧೧೫-೧೧೬). ಯುದ್ಧ ನಡೆದು ನರಸಿಂಹನ ಸೈನ್ಯ ಹಿಮ್ಮೆಟ್ಟಿತು (೧೩೨). ಈ ಯುದ್ಧದಲ್ಲಿ ಕಾಚನ ಬಂಟ ವಿರುಪ ಮಡಿದ (೧೪೦). ಬಾಗೂರಿನ ಪ್ರಜೆಗಳು ಕಂಗೆಟ್ಟರು. ಗೋವಿಂದ ಮಂತ್ರಿ ಕಲ್ಲರಸನನ್ನು ಸಂಧಾನಕ್ಕೆ ನರಸಿಂಹನಲ್ಲಿಗೆ ಕಳುಹಿಸಿದ (೧೪೬-೧೪೭). ಕಾಚನನ್ನು ಸೆರೆಕೊಟ್ಟರೆ ಒಪ್ಪಂದ ಮಾಡಿಕೊಳ್ಳುವುದಾಗಿ ನರಸಿಂಹ ಕರಾರು ಹಾಕಿದ (೧೪೯). ಹತ್ತು ಸಾವಿರ ಹೊನ್ನು ಕೊಡುವೆನೆಂದರೂ ಒಪ್ಪಲಿಲ್ಲ (೧೫೦). ಈ ಕರಾರಿಗೆ ಗೋವಿಂದ ಒಪ್ಪದೆ, ಬೂದಿಹಾಳಿಗೆ ಹಿಂದುರುಗಿ ಹೋಗಲು ಕಾಚನಿಗೆ ಒತ್ತಾಯಿಸಿದ (೧೫೩, ೧೫೪), ಇದಕ್ಕೆ ಕಾಚ ಒಪ್ಪಲಿಲ್ಲ. ತಾನು ಬಂದುದು ಹಿಂದುರುಗಿ ಹೋಗಲು ಅಲ್ಲ. ಯುದ್ಧ ಮಾಡಲು - ಎಂದು ಉತ್ತರಿಸಿದ (೧೫೫). ನೀನು ಯುದ್ಧಕ್ಕಾಗಿ ಬಂದವನಲ್ಲ, ಸೂಳೆ ಬೆನಕಿಗಾಗಿ ಬಂದವನು - ಎಂದು ಗೋವಿಂದ ನುಡಿದ (೧೫೬). "ನಿನ್ನ ಪಟ್ಟಣದ ಹೆಣ್ಣುಗಳು ನನ್ನ ತಾಯಿಗೆ ಸಮಾನ. ನಾನು ಯುದ್ಧ ಮಾಡುತ್ತ ಬೂದಿಹಾಳಿಗೆ ಹೋಗುವೆ"ನೆಂದು ಕಾಚ ತಿಳಿಸಿದ (೧೫೯). ಗೋವಿಂದ ದುಃಖಿಸುತ್ತ ಬೀಳ್ಕೊಟ್ಟ (೧೬೦).

ಕಾಚನ ಜೊತೆ ಅವನ ೩೦೦ ಜನ ಸಿದ್ಧರಾದರು. ಉಡುದಾರವ ಕಿತ್ತಿ ಮುಂಗೈಗೆ ಕಟ್ಟಿಕೊಂಡು ಬಾಗೂರ ಬಿಟ್ಟರು (೧೬೧, ೧೬೨). ಚಂದ್ರಪುರ, ಆನೆವಾಳ ಮಾರ್ಗವಾಗಿ ಮುನ್ನಡೆದರು (೧೭೫). ದಾರಿ ತಪ್ಪಿಸಿ ನೀರಗುಂದ, ನೇರಿಲಗೇರಿ ಮೂಲಕ ಬೂದಿಹಾಳಿನ ಉಪ್ಪಿನಮಾಳೆಗೆ ಬಂದು, ಕಾಚ ಕಹಳೆ ಹಿಡಿಸಿದನು (೧೭೪-೧೭೬). "ಗೋವಿಂದನಿಗೆ ಹೇಳದೆ ಈ ಕಾಚ ಬಂದ, ನನ್ನನ್ನು ಕಳುಹಿಸು" ಎಂದು ಮಲ್ಲ ಅಬ್ಬರಿಸಿದ (೧೮೯). ಕಾಚ ನಡೆದ ಘಟನೆಯನ್ನು ಹೇಳಿ, ತನ್ನ ಮರುಳುವಿಕೆಯ ಅನಿವಾರ್ಯತೆಯನ್ನು ಸಮರ್ಥಿಸಿಕೊಂಡ (೧೮೪). ನರಸಿಂಹನ ಸೈನ್ಯ ಬಾಗೂರನ್ನು ಮುತ್ತಿತು (೧೯೦), ಗೋವಿಂದ ಕಾಣಿಕೆ ನೀಡುವುದಾಗಿ ಸಾರಿದ (೧೯೩-೧೯೪). ಮೂರು ಲಕ್ಷ ಹೊನ್ನು ಮತ್ತು ತಮ್ಮನಾದ ಶ್ರೀರಂಗರಾಜನನ್ನು ಒಪ್ಪಿಸಲು ಈಶ್ವರನಾಯಕ ಒತ್ತಾಯಿಸಿದ (೧೯೯-೨೦೦). ಅಸಹಾಯಕ ಸ್ಥಿತಿಯಲ್ಲಿ ನಿಂತ ಗೋವಿಂದ ಆ ರೀತಿ ನಡೆದುಕೊಂಡ ಮತ್ತು ಅರಮನೆಯನ್ನು ಈಶ್ವರನಾಯಕನಿಗೆ ಒಪ್ಪಿಸಿ ಹೊರಬಂದ (೨೦೪-೨೧೩). ಗೋವಿಂದನನ್ನು ಎಕ್ಕಟಿ ಗಂಗಯ್ಯನಿಗೆ ಒಪ್ಪಿಸಿ, ಬಾಗೂರಿನಲ್ಲಿಯ ಶ್ರೀಮಂತರನ್ನು ಸುಲಿದರು (ಅನೇಕ ಹೆಸರುಗಳಿವೆ) (೨೧೪-೨೧೩). ನರಸಿಂಹನು ಬಾಗೂರು ಸುಲಿದ ಸುದ್ದಿ ಸಿರುಮನ ಕಿವಿಗೆ ಮುಟ್ಟಿತು (೨೩೨).

ಸಂಧಿ : ಮೂರು

ಬಾಗೂರಿನಲ್ಲಿ ಬೀಡುಬಿಟ್ಟಿದ್ದ ನರಸಿಂಹನಿಗೆ ಯುದ್ಧದ ಆಹ್ವಾನನೀಡಿ, ಸಿರುಮನು ಭಟ್ಟರ ತಿಪ್ಪನ ಮೂಲಕ ಪತ್ರ ಕಳುಹಿಸಿದ. ಜೊತೆಗೆ ಅರಿಷಿಣ, ಬಳೆ, ಕಪ್ಪು, ಕೆರಸಿ, ಮೊರ, ಸಿಂಬೆ, ಕರಿಮಣಿ, ಕಡಗಗಳನ್ನೂ ಕಳಿಸಿದ (೨-೯). ಈಶ್ವರನಾಯಕನಿಂದ ಪತ್ರ ಓದಿಸಿ ನರಸಿಂಹ ಕೆರಳಿ ಕೆಂಡವಾದ (೧೦). ನರಸಿಂಹನ ಸೈನ್ಯ ಬೂದಿಹಾಳಿಗೆ ನಡೆಯಿತು (೧೭), ಹರದಾರಿ ನಡೆದು ಬಂದು ಬಲ್ಲಾಳಪುರದಲ್ಲಿ ಬೀಡುಬಿಟ್ಟಿತು. ಇಲ್ಲಿಂದ ಸಿರುಮನ ಸೀಮೆ ಪ್ರಾರಂಭ (೨೧). ಮರುದಿನ ಮುಂಜಾನೆ ಸೈನ್ಯ ಬಲ್ಲಾಳಪುರದಿಂದ ಮುನ್ನಡೆದು ಕೈಗನೂರಿನಲ್ಲಿ ನೆಲೆನಿಂತಿತು (೨೯). ಈ ಸುದ್ದಿ ತಿಳಿದು ಸಿರುಮ ಯುದ್ಧಕ್ಕೆ ಸಿದ್ಧನಾದ (೩೪-೩೭), ಮಕ್ಕಳಾದ ಮಲ್ಲಣ್ಣ, ಕಾಚಣ್ಣ ಬಂದು ಸೇರಿದರು (೩೮). ಪಂತಿ ಊಟದ ವೀರರು (= ವೇಳೆವಾಳಿಗಳು) ಜೊತೆ ನಡೆದರು (೪೪). ಘೋರಯುದ್ಧದಲ್ಲಿ ಸಿರುಮನ ಕೈ ಮೇಲಾಯಿತು. ಕುದುರೆ ಮೊದಲಾದುವನ್ನು ಸೆರೆಹಿಡಿದು ಬೂದಿಹಾಳಿಗೆ ಮರಳಿದನು (೬೪). ನರಸಿಂಹ ನೇರವಾಗಿ ಬೂದಿಹಾಳು ಕೋಟೆಯನ್ನೇ ಮುತ್ತಿದನು (೬೬-೬೭). ಸಿರುಮನ ರಾಣಿ ಚಿಕ್ಕಮ್ಮ, ನರಸಿಂಹನ ದಂಡು ನೋಡಿ ಹರ್ಷಿತಳಾದಳು (೭೨). ವಿಷದ ಅಡಿಗೆ ಮಾಡಿ, ಹರೆಯದ ಹುಡುಗರಿಗೆ ಸೀರೆ ಉಡಿಸಿ, ಊರ ಹೊರಗೆ ದೇವಿಕೆರೆಯ ಕೋಡಿಯ ಹತ್ತಿರ ಬಂದಳು. ಕಣಗಿಲ ತೋಪಿನ ಹತ್ತಿರ ಅಡಿಗೆ ಇಳಿಸಿದಳು (೭೮). ರಂಗವಾಲೆ ಹೊಯಿದು, ದೇವರ ಪೂಜೆ ಮಾಡುವುದನ್ನು ನೋಡಿ ನರಸಿಂಹನ ದಂಡು ಏರಿ ಬಂದಿತು. ಎಲ್ಲರೂ ಅಡಿಗೆ ಬಿಟ್ಟು ಓಡಿದರು (೮೩). ವಿಷದ ಅಡಿಗೆ ಉಂಡು ನರಸಿಂಹನ ದಂಡು ತಮ್ಮ ತಮ್ಮಲ್ಲಿ ಹೊಡೆದಾಡಿ ಮೂರ್ಛೆ ಹೋದರು(೮೫). ಗಂಗಯ್ಯನ ಸೂಚನೆಯಂತೆ ಹೊನ್ನವಳ್ಳಿಯ ವೇದರಾಜ ಬಂದು ಮಂತ್ರಜಲ ಸಿಂಪಡಿಸಲು, ಮೂರುಸಾವಿರ ಸೈನ್ಯ ಮೂರ್ಛೆಯಿಂದ ಎಚ್ಚರವಾಗತೊಡಗಿತು(೯೦). ಅಷ್ಟರಲ್ಲಿ ಚಿಕ್ಕಮ್ಮ ಡೊಣ್ಣೆಯ ಪರವಾರದವರನ್ನು ಊರಬಾಗಿಲಲ್ಲಿ ನಿಲ್ಲಿಸಿದಳು. ಊರಿನ ಎಲ್ಲ ಜಾತಿಯ ಜನ ಏರಿ ಹೋಗಿ ನರಸಿಂಹನ ದಂಡನ್ನು ಸೂರೆಯಾಡಿದರು (೯೮). ಒಂದು ರಾತ್ರಿ ಕಳೆಯಿತು. ಮುಂಜಾನೆ ಯುದ್ಧ ಪ್ರಾರಂಭವಾಯಿತು (೧೧೦). ಹೀಗಿರುತ್ತಿರಲು

ಕಾಕಿಯ ವಿಶ್ವರಾಜನಿಗೆ ಈ ಸುದ್ದಿ ತಿಳಿಯಿತು. ತನ್ನ ಭಾವ ನರಸಿಂಹನ ನೆರವಿಗಾಗಿ ಪ್ರಳಯಕಾಡು ಪಟ್ಟಣದಿಂದ ೭ ದಿನ ಪ್ರಯಾಣಿಸಿ, ೬೦ ಸಾವಿರ ಸೈನ್ಯದೊಂದಿಗೆ ಬಂದ (೧೯೯). ಈ ಸುದ್ದಿಯನ್ನು ಗಿಂಡಿಯ ತಿಮ್ಮನ ಮೂಲಕ ಕೇಳಿದ ಸಿರುಮ ತನ್ನ ಪರಿವಾರವನ್ನು ಕರೆಯಿಸಿದನು (೧೩೨-೩೩). ಮಗ ವೀರಣ್ಣ, ಮಲ್ಲಣ್ಣ, ಹಿರಿಯ ಮಗ (ಕಾಚಣ್ಣ), ಅಳಿಯ ತಿಪ್ಪ, ಬೆಲಗೂರು ಭೈರ ಬಂದರು (೧೪೦). ರಣವೀಳ್ಯೆಯನ್ನು ವೀರಣ್ಣ ಎತ್ತಿಕೊಂಡು, ತಾಯಿಯ ಹತ್ತಿರ ಬಂದು ಆಶೀರ್ವಾದ ಪಡೆದನು (೧೪೬). ಸಂಗಡಿಗರೊಡನೆ ಕೊತ್ತಳವೇರಿ ನಿಂತು, ವೈರಿಗಳನ್ನು ತುಂಡರಿಸತೊಡಗಿದನು (೧೫೬). ನರಸಿಂಹನಿಂದ ವಿಶ್ವರಾಜ ವೀಳ್ಯೆ ಸ್ವೀಕರಿಸಿ ವೀರಣ್ಣನಿಗೆ ಎದುರಾದನು (೧೫೭). ವೀರಣ್ಣ ೩೦೦ ಜನ ಭಟರನ್ನು ಸೂರೆಮಾಡಿದನು (೧೬೫). ವಿಶ್ವರಾಜ ಕೋಟೆ ಏರಿದ (೧೯೬). ವೀರಣ್ಣ ಮತ್ತು ವಿಶ್ವರಾಜರ ಕಾಳಗ ಭೀಕರವಾಗಿ, ವಿಶ್ವರಾಜ ಸತ್ತನು (೧೭೯). ಇದನ್ನು ಕೇಳಿ ಮರುಗಿದ ನರಸಿಂಹ, ವಿಶ್ವರಾಜನ ತಲೆಯನ್ನು ತರಲು ಭಟ್ಟರ ಮಲ್ಲನನ್ನು ಕಳಿಸಿದನು (೧೮೨). ಮಲ್ಲ ವಿಶ್ವರಾಜನ ತಲೆಯನ್ನು ತಂದನು (೧೮೫-೧೯೪). ವಿಶ್ವರಾಜನ ಹೆಂಡಿರು ಮಾಸ್ತಿಯಾದರು (ಆಚರಣೆಯ ವಿವರಗಳಿವೆ) (೧೮೬-೧೯೪). ವೀರಣ್ಣನಿಗೆ ಗುರಿಯಿಡಲು ನರಸಿಂಹ ಡೆಂಕಣಿ ತಿಪ್ಪನಿಗೆ ಸೂಚಿಸಿದ (೧೯೯). ಗುಂಡು ತಾಗಿ ವೀರಣ್ಣ ಮಡಿದ (೨೦೭). ವೀರಣ್ಣನ ಮರಣ ಸುದ್ದಿಯನ್ನು ಸಿರುಮನಿಗೆ ತಿಳಿಸಲಾಯಿತು (೨೧೦). ಮರಣ ಸುದ್ದಿ ಕೇಳಿ ಪರಿವಾರ ಗೋಳಿಟ್ಟಿತು (೨೧೫). ವೀರಣ್ಣನ ಹೆಂಡಿರು ಸಮಾಧಿ ಪ್ರವೇಶಕ್ಕೆ ಸಿದ್ಧರಾದರು. ಗಂಡನ ಜತೆ ಹೆಂಡಿರನ್ನು ಸಮಾಧಿ ಮಾಡಿದರು (೨೨೦-೨೪೪).

ಸಂಧಿ : ನಾಲ್ಕು

ವೀರಣ್ಣನ ವೀರಮರಣದ ಸುದ್ದಿಯನ್ನು ಸಿರುಮನ ಸ್ನೇಹಿತನಾದ ಹೊನ್ನವಳ್ಳಿಯ ವೇದರಾಜ ತಿಳಿದು ಮಮ್ಮಲ ಮರುಗಿದನು. ರುದ್ರರಾಜನ ಜತೆಗೂಡಿ ನರಸಿಂಹನನ್ನು ಕಂಡನು (೧-೩). ಕಪ್ಪಕಾಣಿಕೆ ಕೊಟ್ಟರೆ ಒಪ್ಪಂದ ಮಾಡಿಕೊಳ್ಳುವುದಾಗಿ ನರಸಿಂಹ ತಿಳಿಸಿ, ರುದ್ರರಾಜನನ್ನು ಸಿರುಮನಲ್ಲಿಗೆ ಕಳಿಸಿದನು (೪-೫). ರುದ್ರರಾಜ ಕೋಟೆಯ ಹತ್ತಿರ ಬಂದು ತನ್ನ ಇಂಗಿತವನ್ನು ಕೂಗಿ ಹೇಳಿದ. ಸಿರುಮಯ್ಯ ಅಳುವೇರಿಯ ಮೇಲೆ ನಿಂತು ಅಭಿಪ್ರಾಯ ತಿಳಿದುಕೊಂಡ (೬-೧೦). ಬೀಗನಾಗಿ ಆಡಿದ ಮಾತುಗಳಿಗೆ ಮೆಚ್ಚಿಕೊಂಡನಾದರೂ "ಅಳಿವುದು ಕಾಯ, ಉಳಿವುದು ಕೀರ್ತಿ"; ಆದುದರಿಂದ ನಾನು ಹೋರಾಟವನ್ನು ಮುಂದುವರಿಸುವುದಾಗಿ ಭಾವನಾದ ರುದ್ರರಾಜನಿಗೆ ಸಿರುಮಯ್ಯ ಹೇಳಿ ಮರಳಿಸಿದ (೧-೧೬). ಇದನ್ನು ಅನುಮೋದಿಸುವ ರೀತಿಯಲ್ಲಿ ಮಗ ಮಲ್ಲಣ್ಣನೂ ನುಡಿದ (೧೭-೧೯). ಈ ಸುದ್ದಿಯನ್ನು ರುದ್ರರಾಜನ ಮೂಲಕ ಕೇಳಿ ಕೆಂಡವಾದ ನರಸಿಂಹ, ಬೂದಿಹಾಳು ಕೋಟೆಗೆ ಮುತ್ತಿಗೆ ಹಾಕಲು ತನ್ನ ಮಂತ್ರಿ ಈಶ್ವರನಾಯಕನಿಗೆ ಆದೇಶ ನೀಡಿದನು. ಬೂದಿಹಾಳು ಬಹು ದೊಡ್ಡ ಮುತ್ತಿಗೆಗೆ ಒಳಪಟ್ಟಿತು (೨೦-೨೫). ಕುಮಾರಮಲ್ಲ ಸೈನ್ಯವನ್ನು ಎದುರಿಸಿದನು (೨೬-೩೫). ಸಿರುಮನ ಮಕ್ಕಳಾದ ಸೋಮಣ್ಣ, ಕಾಚಣ್ಣ ಹೋರಾಡಿದರು (೩೬). ಮಲ್ಲಣ್ಣ ವೈರಿಗಳ ಬಿರುದು ಸೆಳೆದುಕೊಂಡು ತಂದೆಯನ್ನು ಕಂಡ (೪೯). ಸಿರುಮಣ್ಣ ಮಗನನ್ನು ಸತ್ಕರಿಸಿದ. ಬಿರುದನ್ನು ಪಗುಡಕ್ಕೆ ಹಾಕಿಸಿದ (೫೦-೫೧). ಬಿರುದನ್ನು ಹಿಂದಿರುಗಿಸಲು ಸಿರುಮ ನಿರಾಕರಿಸಲಾಗಿ ನರಸಿಂಹ ಉಗ್ರವಾಗಿ ದಾಳಿಮಾಡಿದ (೫೬-೬೩). ನರಸಿಂಹನ ಏಳು ಸಾವಿರ ಸೈನ್ಯ ಸತ್ತಿತು. ಕತ್ತಲೆ ಮುಸುಕಿತು (೬೫-೬೬). ಸಿರುಮಣ್ಣ ತನ್ನ ಭಟರನ್ನು ಕರೆಯಿಸಿದ (೭೩-೯೦). ಸಿರುಮನ ಭಟರು ಕತ್ತಲೆಯೊಳಗೆ ಮುನ್ನಡೆದರು (೯೧-೯೪). ಸಿರುಮನ ಭಟರು ಸೆಳೆದು

ತಂದ ಸಂಪತ್ತನ್ನು ಒಡೆಯ ಸಿರುಮನಿಗೆ ಒಪ್ಪಿಸಿದರು (೧೧೦-೧೧೩). ಸೂರ್ಯೋದಯವಾಯಿತು (೧೧೮).

ಸಂಧಿ : ಐದು

ಸಿರುಮ ಡೆಂಕಣಿಯನ್ನು ಹೂಡಿ ಯುದ್ಧಕ್ಕೆ ಸನ್ನದ್ಧನಾದ (೧-೪). ಹಾವುಗಾರರ ಸೋಗುಹಾಕಿ ಬೆಲಗೂರ ಭೈರ, ಅಳಿಯ ತಿಪ್ಪ, ತಮ್ಮ ಸೋಮಣ್ಣ, ಕುಮಾರಮಲ್ಲ ಮೊದಲಾದವರು ಸಿರುಮನಲ್ಲಿಗೆ ಬಂದರು (೫-೧೪). ತಂದೆಯಿಂದ ಬೀಳ್ಕೊಂಡು ನರಸಿಂಹನ ಓಲಗಕ್ಕೆ ಹೋದರು (೧೫-೨೦). ನರಸಿಂಹನ ಮುಂದೆ ತಮ್ಮ ವಿದ್ಯೆತೋರಿಸಿ ಸಂತೋಷ ಪಡಿಸಿದರು (೨೧-೨೭). ಬಳಿಕ ರಾಜನ ಕುದುರೆಯನ್ನು ಇರಿದರು. ತಾವು ಒಯ್ದಿದ್ದ ಹಾವುಗಳನ್ನು ಬಿಟ್ಟು ಸೈನ್ಯವನ್ನು ನಾಶಮಾಡಿದರು (೨೮-೩೨). ಇದರಿಂದ ಸಿಟ್ಟಿಗೆದ್ದ ನರಸಿಂಹ ಕೋಟೆಯ ಒಳಗೆ ಹೋಗಲು ನೆಲಗನ್ನ ತೋಡಿಸುವ ವ್ಯವಸ್ಥೆ ಮಾಡಿದ (೩೩-೩೪). ಇದನ್ನು ಕೇಳಿ ಸಿರುಮ ಈ ನೆಲಗನ್ನದಲ್ಲಿಯೇ ನರಸಿಂಹನ ೩೦೦ ಜನರನ್ನು ಕೊಂದನು. (೩೫-೩೭). ಈಶ್ವರದಂಡನಾಯಕ ಸಿರುಮನ ಕಡೆಯವರಿಗೆ ಆಸೆ ತೋರಿಸುವ ಸಂಚು ಮಾಡಿದ (೪೧). ಸೈನ್ಯ ಬಿಟ್ಟು ಬಂದವರಿಗೆ ಮನ್ನಿಸುವುದಾಗಿ, ಸತ್ಕರಿಸುವುದಾಗಿ ಸಾರಿದ (೪೨-೪೩). ಸಿರುಮನ ಸೈನ್ಯದ ಗುಜ್ಜಲೋಬ ನೂರಾಳು ಸಹಿತ ನರಸಿಂಹನಲ್ಲಿಗೆ ಬಂದ (೪೪-೪೬). ಬೆಲಗೂರು ಭೈರ, ಆನೆಪ್ಪನಾಯಕ ಸಿರುಮನನ್ನು ಬಿಟ್ಟು ಬಂದರು (೪೭-೪೯). ಈ ಸುದ್ದಿಯನ್ನು ಕೇಳಿ ಚಿಕ್ಕಾಯಿ ತಮ್ಮನಾದ ಬೆಲಗೂರು ಭೈರನನ್ನು ಶಪಿಸಿದಳು (೫೨-೫೫). ಸಿರುಮ ಯುದ್ಧಕ್ಕೆ ಸಿದ್ಧನಾದ (೫೬-೬೦). ಸಿರುಮ ಹೆಂಡತಿಯೊಂದಿಗೆ ಸೋಮೇಶ್ವರ, ವೀರಭದ್ರ ದೇಗುಲಕ್ಕೆ ಬಂದು ವಂದಿಸಿದ (೬೧-೬೪). ನಿರಾಸೆಯ ಮಠಕ್ಕೆ ಬಂದು ಮಹಂತಿಗೆ ನಮಸ್ಕರಿಸಿದ (೬೭). ಮಹಂತು ಆಶೀರ್ವದಿಸಿ ಸಿರುಮನ ಸ್ಥಿತಿಗಾಗಿ ಮರುಗಿ, ವೇಷ ಮರೆಯಿಸಿಕೊಂಡು ಹೋಗುವಂತೆ ಅವನಿಗೆ ಸೂಚಿಸಿದರು (೬೮). ಇದಕ್ಕೆ ಸಿರುಮ ಒಪ್ಪಲಿಲ್ಲ. ರಣಾಂಗಣಕ್ಕೆ ನಡೆದ (೬೯-೭೧). ಕಪ್ಪು ಕಾಣಿಕೆ ನೀಡಿ ಬದುಕಲು ತಮ್ಮನಾದ ಮಲ್ಲಣ್ಣ ಸೂಚಿಸಿದ (೭೩-೭೪). ಸಿರುಮ ಇದಕ್ಕೆ ಒಪ್ಪಲಿಲ್ಲ. ಅವನ ಪರಿವಾರ ಯುದ್ಧವನ್ನೇ ಬೆಂಬಲಿಸಿತು (೭೫-೭೯). ಈ ಕಡೆ ಈಶ್ವರಿನಾಯಕನೊಂದಿಗೆ ಬೆಲಗೂರು ಭೈರ ನರಸಿಂಹನನ್ನು ಕಂಡು, ಬೂದಿಹಾಳಿನ ಸ್ಥಿತಿಗತಿಗಳನ್ನು ವಿವರಿಸಿದ (೮೫). ಸಿರುಮ ತನ್ನ ರಾಜಧಾನಿಯಲ್ಲಿ ದೊಡ್ಡ ಕೊಂಡ ತೋಡಿಸಿದ (೯೦). ಅದರಲ್ಲಿ ರೇಶಿಮೆ ಬಟ್ಟೆ, ಸಮಸ್ತ ವಸ್ತು ಸಾಮಗ್ರಿ ಹಾಕಿ ಸುಡಿಸಿದ (೯೦-೯೪). ಅರಮನೆಯ ಹೆಣ್ಣು ಮಕ್ಕಳನ್ನು ಕೊಂದು ಉರಿಗೆ ಆಹುತಿ ನೀಡಬೇಕೆಂದು ಸಿರುಮ ಮಲ್ಲಣ್ಣನಿಗೆ ಆದೇಶ ನೀಡಿದ (೧೦೬). ಮಹಿಳೆಯರೆಲ್ಲ ಸಿಂಗರಿಸಿಕೊಂಡು ಗೌರಿಯನ್ನು ಪೂಜಿಸಿ ಕೊಂಡಕ್ಕೆ ಬಂದರು (೧೧೩). ಸಿರುಮ, ಹೆಂಡಿರು ಮಕ್ಕಳನ್ನೆಲ್ಲ ಇರಿದು ಕೊಂಡಕ್ಕೆ ನೂಕಿಸಿದ (೧೨೦). ಮಲ್ಲಣ್ಣ ಎಲ್ಲ ದಾಸಿಯರನ್ನು, ಮಕ್ಕಳನ್ನು ಎಳೆದು ತಂದು ಬೆಂಕಿಗೆ ಹಾಕಿದ (೧೨೨). ಬೆಕ್ಕು, ಗಿಳಿ, ಪಾರಿವಾಳಗಳನ್ನೂ ಏರುವ ಕುದುರೆಗಳನ್ನೂ ಕೊಂದು ಕಿಚ್ಚಿಗೆ ನೂಕಿದ (೧೩೮). ವಾದ್ಯ, ಆಭರಣ, ಹಾಸಿಗೆ, ಹೊದಿಕೆಗಳನ್ನು ಸುಟ್ಟ (೧೪೦). ಸಿರುಮನ ತಮ್ಮ ಮಲ್ಲಣ್ಣನು ವೈರಿಗಳನ್ನು ಧ್ವಂಸ ಮಾಡುತ್ತಿದ್ದಂತೆಯೇ ಅವರ ಬಾಣಕ್ಕೆ ಹತನಾದ (೧೪೮). ಇವನನ್ನಲ್ಲದೆ, ಕಾದಿ ಬಳಲಿದ ಮಗ ಕಾಚನನ್ನೂ ಕೊಂದು ಸಿರುಮ ಬೆಂಕಿಗೆ ನೂಕಿದ (೧೫೦). ಸಿರುಮಣ್ಣ ಸತಿಯೊಡನೆ ಉಪ್ಪರಿಗೆ ಏರಿ ವೈರಿಗಳನ್ನು ಗಾಸಿಗೊಳಿಸಿದ (೧೫೪). ಅಳಿಯ ತಿಪ್ಪಯ್ಯ, ಹಡಪದ ಹಲಗ ಹೋರಾಡುತ್ತ ಮಡಿದರು (೧೫೮, ೧೫೯). ಹೆಗ್ಗೆರೆ ನಾಗಣ್ಣ ಮಡಿದನು (೧೬೪). ಹಿರಿಯ ಸೋಮಣ್ಣ, ತಳವಾರ ಲಿಂಗರಸಯ್ಯ, ನಂಬೆಣ್ಣನಾಯಕ, ಪ್ರಧಾನಿ ಕಲ್ಲರಸಯ್ಯ ಅರಮನೆ ಮುಂದೆ ನಿಂತು ಹೋರಾಡಿದರು

(೧೬೫). ಹೆಂಡತಿ ಚಿಕ್ಕಾಯಿಯಯನ್ನು ಸಿರುಮ ಕೊಂದು ಕೊಂಡಕ್ಕೆ ನೂಕಿದ (೧೮೧). ನರಸಿಂಹನ ಪರಿವಾರ ಅರಮನೆಯನ್ನು ಮುತ್ತಿತು (೧೯೧). ಅಷ್ಟರಲ್ಲಿ ಸಿರುಮ ಗಾಯಗೊಂಡನು (೧೯೮). ತನ್ನ ಕೊರಳ ಕತ್ತರಿಸಿ ಬೆಂಕಿಗೆ ಹಾಕಲು ಮಗ ಮಲ್ಲಣ್ಣನಿಗೆ ಸಿರುಮ ಒತ್ತಾಯಿಸಿದ (೨೨೨). ಅನಿವಾರ್ಯವಾಗಿ ಮಲ್ಲಣ್ಣ ತಂದೆಯ ತಲೆಯನ್ನು ಕಡಿದು, ಸುಡುತ್ತಿದ್ದ ತಾಯಿಯ ಕೊಂಡಕ್ಕೆ ಹಾಕಿದ (೨೨೮). ನರಸಿಂಹನ ದಂಡನ್ನು ಸಂಹರಿಸಲು ಮಲ್ಲಣ್ಣ ಸಿದ್ಧನಾದ (೨೩೨).

ಸಂಧಿ : ಆರು

ಮಲ್ಲಣ್ಣ, ಲಿಂಗರಸ, ಕಲ್ಲರಸರು ವೈರಿ ಸೈನ್ಯದೊಂದಿಗೆ ಹೋರಾಟ ಮುಂದುವರಿಸಿದರು (-೯). ಕುಮಾರಮಲ್ಲನನ್ನು ವೈರಿಗಳು ಇರಿದರು (೧೯). ಮಲ್ಲಣ್ಣ ತನ್ನೆದುರು ಬಿದ್ದಿದ್ದ ಲಿಂಗರಸ, ಕಲ್ಲರಸರನ್ನು ಎತ್ತಿಕೊಂಡು ನಡೆದನು (೨೦). ಈಶ್ವರನಾಯಕ ಮಲ್ಲಣ್ಣನನ್ನು ತಿವಿದನು (೩೩). ಮಲ್ಲಣ್ಣನು ಲಿಂಗರಸ, ಕಲ್ಲರಸರೊಂದಿಗೆ ಕೊಂಡದಲ್ಲಿ ಧುಮುಕಿದನು (೫೨). ದೇವತೆಗಳು ಹೊಗಳಿದರು. ಹೂಮಳೆಗರೆದರು (೫೪). ಶಿವ ಮಲ್ಲಣ್ಣನಿಗೆ ಪ್ರತ್ಯಕ್ಷನಾದ (೫೫). ತನ್ನ ತಂದೆ, ತಾಯಿ, ಪರಿವಾರವನ್ನು ಕೈಲಾಸಕ್ಕೆ ಒಯ್ಯಲು ಮಲ್ಲಣ್ಣ ಬೇಡಿಕೊಂಡ (೫೬-೫೭). ಕೊಂಡದಲ್ಲಿ ಬಿದ್ದು ಸತ್ತವರೆಲ್ಲ ವಿಮಾನದಲ್ಲಿ ಕೈಲಾಸಕ್ಕೆ ಒಯ್ಯಲು ಮಲ್ಲಣ್ಣ ಬೇಡಿಕೊಂಡ (೫೬-೫೭). ಕೊಂಡದಲ್ಲಿ ಬಿದ್ದು ಸತ್ತವರೆಲ್ಲ ವಿಮಾನದಲ್ಲಿ ಕೈಲಾಸಕ್ಕೆ ತೆರಳಿದರು (೬೦-೬೨). ಬೂದಿಹಾಳಿನ ಸಿರುಮ ಬರುವುದನ್ನು ತಿಳಿದು, ಕೈಲಾಸದಲ್ಲಿದ್ದ ಚೋಳ, ಚೇರ, ಗುಂಡಬ್ರಹ್ಮ, ಚಿಕ್ಕಯ್ಯ, ರಾಮಯ್ಯ ಮೊದಲಾದವರೆಲ್ಲ ಇದಿರುಗೊಂಡರು. ವೀರಶೈವ ರಾಜರೆಲ್ಲ ಅಪ್ಪಿಕೊಂಡರು. ಬರಮಾಡಿಕೊಂಡರು (೬೪-೬೫). ಶಿವ ಎಲ್ಲರಿಗೂ ಸಾಯುಜ್ಯಪದವಿ ನೀಡಿದ (೬೯).

ಈ ಕಡೆ ನರಸಿಂಹ ಮತ್ತು ಈಶ್ವರನಾಯಕ ಸಿರುಮನ ಅರಮನೆಗೆ ಬಂದರು. ಸುಟ್ಟು ಕರಕಾದ ವಸ್ತು-ವಾಹನ, ಹೊತ್ತಿ ಹೊಗೆಯೆದ್ದ ಮುತ್ತು-ಮಾಣಿಕ, ಬೆಳ್ಳಿ-ಬಂಗಾರವನ್ನೆಲ್ಲ ನೋಡಿ ಬೆರಗಾದರು (೬೯-೭೦). ಶಿವಭಕ್ತನೂ, ಮಹಾಶೂರನೂ ಆದ ಸಿರುಮನನ್ನು ನಾಶಮಾಡಿದ ಪಾಪವನ್ನು ಕಾಶಿ-ಕೇದಾರಗಳಲ್ಲಿ ನೀಗುವೆನೆಂದು ನರಸಿಂಹ ನುಡಿದ (೭೫). ನರಸಿಂಹ ಕೊಂಡದ ಮೇಲೆ ಗುಡಿಗೋಪುರ ಕಟ್ಟಿಸಿ ಆದಿಲಿಂಗ ನಿರ್ಮಿಸಿದ (೭೭-೭೮). ಬೂದಿಹಾಳಿನ ಆಡಳಿತಕ್ಕೆ ರುದ್ರರಾಜನನ್ನು ನೇಮಿಸಿ, ನರಸಿಂಹ ವಿಜಯನಗರಕ್ಕೆ ಹೋದ (೭೯). ಪಂಪಾವಿರೂಪಾಕ್ಷನಿಗೆ ವಂದಿಸಿ ಸುಖದಲ್ಲಿದ್ದನು (೮೧). ಸಿರುಮನ ಕಾವ್ಯವನ್ನು ಕೇಳಿದವರಿಗೆ ಪುಣ್ಯಪ್ರಾಪ್ತಿಯಾಗುತ್ತದೆ (೮೨). ಅಸಗೋಡ ಶಂಭು ಮಲ್ಲೇಶ ಸಲಹುತ್ತಾನೆ (೮೩).

ಇತಿಹಾಸ

ದೇಶವೆಂಬುದು ಅನೇಕ ಆಶಯಗಳ ವಿಶಿಷ್ಟಕೋಶ. ಎಲ್ಲ ಆಶಯಗಳಿಗೆ ಸ್ಪಂದಿಸುತ್ತ ಬಂದ ಜನವರ್ಗ ಮಾತ್ರ 'ಪರಿಪೂರ್ಣ ಸಮಾಜ'ವೆನಿಸಿಕೊಳ್ಳುತ್ತದೆ. ಕರ್ನಾಟಕದ ಮಟ್ಟಿಗೆ ವೀರಶೈವವೂ ಅಂಥ ಒಂದು ಪರಿಪೂರ್ಣ ಜನವರ್ಗವೆನಿಸಿದೆ. ಲೌಕಿಕದಿಂದ ಪಾರಮಾರ್ಥಿಕ ವರೆಗಿನ ಜೀವನದ ಎಲ್ಲ ಆಯಾಮಗಳಲ್ಲಿ ತನ್ನನ್ನು ತೊಡಗಿಸಿಕೊಂಡು, ತಾನು ಬೆಳೆಯುವುದರೊಂದಿಗೆ ದೇಶವನ್ನೂ ಬೆಳೆಸಿದ ಸಮಾಜವಿದು. ಹೀಗಾಗಿ ಧರ್ಮತತ್ವ, ಮತಾಚರಣೆ, ಸಾಹಿತ್ಯಸೃಷ್ಟಿ ಮೊದಲಾದ ಕ್ಷೇತ್ರಗಳಲ್ಲಿಯಂತೆ

ಕರ್ನಾಟಕದ ರಾಜಕೀಯಕ್ಷೇತ್ರಕ್ಕೂ ಸ್ಪಂದಿಸುತ್ತ ಬಂದ ಹಿರಿಮೆ ಈ ಸಮಾಜದ್ದಾಗಿದೆ. ಆದರೆ ಈ ವರೆಗೆ ವೀರಶೈವದ ಧಾರ್ಮಿಕ, ಸಾಹಿತ್ಯಿಕ ಕೊಡುಗೆಗಳ ಅಧ್ಯಯನಕ್ಕೆ ಮಾತ್ರ ಗಮನ ಹರಿಸಿದ ವಿದ್ವಾಂಸರು, ಅವರ ರಾಜಕೀಯ ಕಾಣಿಕೆಯನ್ನೂ ಬೆಳಕಿಗೆ ತರಬೇಕಾಗಿದೆ.

ವೀರಶೈವ ಸ್ಪಷ್ಟ ಆಕಾರ ಪಡೆದುದು ೧೨ನೆಯ ಶತಮಾನದಲ್ಲಿ. ಹೀಗಾಗಿ ಇದರ ರಾಜಕೀಯ ಚಟುವಟಿಕೆ ಇಲ್ಲಿಂದ ಪ್ರಾರಂಭವಾಗುತ್ತಿದ್ದರೂ, ಇದಕ್ಕೆ ಸ್ವಲ್ಪ ಹಿಂದೆ ಇದರ ಬೇರುಗಳು ಗೋಚರಿಸುತ್ತವೆ.

ಕಲ್ಯಾಣ ಚಾಲುಕ್ಯ ಮನೆತನವನ್ನು ಸ್ಥಾಪಿಸಿದ ಆಹವಮಲ್ಲ ತೈಲಪ, ಜಯಸಿಂಹನ ರಾಣಿ ಸುಗ್ಗಲೆ, ವಿಕ್ರಮಾದಿತ್ಯನ ರಾಣಿ ಲಕ್ಷ್ಮೀದೇವಿ, ಮಂತ್ರಿ ಕೊಂಡಗುಳಿ ಕೇಶಿರಾಜ, ಸಾಮಂತ ತೆಲುಗು ಜೊಮ್ಮಯ್ಯಗಳು ವೀರಶೈವ ಸಾಹಿತ್ಯದಲ್ಲಿ ಎಡೆಪಡೆದಿದ್ದಾರೆ. ಶರಣ ಚಾಳುಕ್ಯ ಭೀಮ, ಬಿಜ್ಜಳನ ಆಸ್ಥಾನದ ಸಚಿವರಾದ ಬಸವಣ್ಣ, ಚೆನ್ನಬಸವಣ್ಣ, ಗಣಕಾಧಿಕಾರಿ ಸೊಡ್ಡಳ ಬಾಚರಸ, ಸೈನ್ಯವ್ಯವಸ್ಥೆಯ ಜಗದೇವ, ಮಲ್ಲಿಬೊಮ್ಮಣ್ಣ ಇವರೆಲ್ಲ ರಾಜಕೀಯ ಕ್ಷೇತ್ರದ ವ್ಯಕ್ತಿಗಳೆಂಬುದನ್ನು ಗಮನಿಸಬೇಕು. ಹೊಯ್ಸಳರ ಆಸ್ಥಾನದಲ್ಲಿ ಕೆರೆಯ ಪದ್ಮರಸ, ಈತನ ಮಾವ ಗೌರಪದಣಾಯಕರು ಅಧಿಕಾರಿಯಾಗಿದ್ದರು. ದೇವಗಿರಿ ಯಾದವರೂ ಅವರ ಮಂತ್ರಿಗಳೂ ಸಿದ್ಧರಾಮ ಕಟ್ಟಿಸಿದ ಕಪಿಲಸಿದ್ಧ ಮಲ್ಲಿಕಾರ್ಜುನದೇವಾಲಯಕ್ಕೆ ದಾನ ನೀಡುವ ಮೂಲಕ ಭಕ್ತಿಯಿಂದ ನಡೆದುಕೊಂಡಿದ್ದಾರೆ. ವೀರಶೈವಕಾವ್ಯ "ಭಿಲ್ಲರಾಯನ ಚರಿತೆ"ಯ ಕಥಾನಾಯಕ ಈ ಮನೆತನದ ಭಿಲ್ಲಮರಾಯನಾಗಿರಬೇಕೆಂದು ವಿದ್ವಾಂಸರು ಊಹಿಸುತ್ತಾರೆ. ಇನ್ನೊಬ್ಬ ಅರಸು ರಾಮರಾಯನನ್ನು ಶಿವತತ್ತ್ವಚಿಂತಾಮಣಿಯು 'ಜಂಗಮಪ್ರೇಮಿ' ಎಂದು ವರ್ಣಿಸಿದೆ. ಗೋವೆಯ ಕದಂಬ ವಂಶದ ವಜ್ರರಾಜನು ಶರಣರೊಂದಿಗೆ ಶಿವನ ಒಡ್ಡೋಲಗದಲ್ಲಿ ಇದ್ದನೆಂದು ತಿಳಿಸುತ್ತ, ಇವನು ವೀರಶೈವನೆಂಬುದನ್ನು ಸಾನಂದಚರಿತೆ ದೃಢಪಡಿಸುತ್ತದೆ.

ಮೋಪುರಿನ ಅರಸು ಸಂಗಮರಾಜನ ಮಗ ಭೈರವನು ಭೈರವೇಶ್ವರ ಕಾವ್ಯದ ಕಥಾನಾಯಕನಾಗಿದ್ದಾನೆ. ಕುರುಗೋಡಿನ ಸಿಂದವಂಶದ ರಾಚಮಲ್ಲ, ಇಮ್ಮಡಿ ರಾಚಮಲ್ಲರು ವೀರಶೈವರೆಂದು ಕಾವ್ಯಗಳು ತಿಳಿಸುತ್ತವೆ. ಓರಂಗಲ್ಲಿನ ಕಾಕತೀಯ ಗಣಪತಿರಾಯನ ಶಿವಭಕ್ತಿಯನ್ನು ಗುಂಡಬೊಮ್ಮಯ್ಯನ ಪ್ರಸಂಗ ಸ್ಪಷ್ಟಪಡಿಸುತ್ತದೆ. ಈತನ ಅರಮನೆಯ ಗೋಡೆಯ ಮೇಲೆ ಶರಣರ ಚಿತ್ರ ಬಿಡಿಸಲಾಗಿದ್ದ ವಿಷಯ ಗುಂಡಬ್ರಹ್ಮಯ್ಯನ ಚರಿತೆಯಲ್ಲಿದೆ. ಹಗರಟಿಗೆಯ ಭೈಸರಸರು ವೀರಮಾಹೇಶ್ವರ ನಿಷ್ಠೆಯ ವೀರಶೈವರೆಂದು ತಾಳಿಕೋಟೆ ಶಾಸನ ತಿಳಿಸುತ್ತದೆ. ಯಾದವರ ಕೈಕೆಳಗೆ ಮುಳಗುಂದ ನಾಡನ್ನಾಳುತ್ತಲಿದ್ದ ಹೊನ್ನಬೊಮ್ಮಶೆಟ್ಟಿಯ ಜಂಗಮಭಕ್ತಿಯನ್ನು ರಟ್ಟಿಹಳ್ಳಿ ಶಾಸನ ಸಾರುತ್ತದೆ. ತೊರಗಲೆಯ ಕಲ್ಲರಸ ರಾಣಿ ವೀರಕನ್ನಾದೇವಿಯ ವಿಷಯ ಚೌಡದಾನಪುರ ಶಾಸನದಲ್ಲಿದೆ. ಉದ್ಭಟಕಾವ್ಯದ ಕರ್ತೃ ಸೋಮರಾಜ, ಸಿಂಗಿರಾಜ ಪುರಾಣದ ಕರ್ತೃ ಸಿಂಗಿರಾಜ ಮತ್ತು ನಿಜಗುಣ ಶಿವಯೋಗಿಗಳು ರಾಜರಾಗಿದ್ದರೆಂದು ತಿಳಿದುಬರುತ್ತದೆ.

ಈ ತರುವಾಯ, ಅಸ್ತಿತ್ವಕ್ಕೆ ಬಂದ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಗೆ ಕಾರಣೀಭೂತ ವ್ಯಕ್ತಿ ವೀರಶೈವಗುರು ಕ್ರಿಯಾಶಕ್ತಿಯತಿರಾಯ. ಗಂಗಾದೇವಿಯ ಮಧುರಾ ವಿಜಯಂ, ಲಕ್ಕಣದಂಡೇಶನ ಶಿವತತ್ವ ಚಿಂತಾಮಣಿಗಳಲ್ಲಿ ಇವನ ಪ್ರಸ್ತಾಪವಿದೆ. ಈ ಮನೆತನದ ಪ್ರೌಢದೇವರಾಯ ವೀರಶೈವನಾಗಿದ್ದು, ಇವನ ಆಸ್ಥಾನದಲ್ಲಿ ಕರಸ್ಥಲದ ವೀರಣ್ಣ, ಜಕ್ಕಣಾರ್ಯ, ಲಕ್ಕಣದಂಡೇಶ, ಗುರುರಾಯರು

ಅಧಿಕಾರಿಗಳಾಗಿದ್ದರು. ಚಾಮರಸನು ಈ ಪ್ರೌಢದೇವರಾಯನಲ್ಲಿ ಮಂತ್ರಿಯಾಗಿದ್ದನೆಂದು ಕೆಲವು ಕೃತಿಗಳು ತಿಳಿಸುತ್ತವೆ.

ವಿಜಯನಗರ ಮನೆತನದ ಸಂದರ್ಭದಲ್ಲಿ ಅನೇಕ ವೀರಶೈವ ಪಾಳೆಯಗಾರರು ತಲೆಯೆತ್ತಿದರು. ಅವರಲ್ಲಿ ಬೂದಿಹಾಳ ಸಿರುಮನ ಮನೆತನವೂ ಒಂದು. ಈ ಮನೆತನದ ಹೋರಾಟಕ್ಕೆ ಸಂಬಂಧಪಟ್ಟ ಒಂದು ಘಟನೆ ಈ ಸಿರುಮನ ಚರಿತೆಯ ವಸ್ತು, ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲೂಕಿನ ಇಂದಿನ ಶ್ರೀರಾಮಪುರ(ಬೂದಿಹಾಳ)ದಲ್ಲಿ ಆಳುತ್ತಲಿದ್ದ ಪಾಳೆಯಗಾರ ಸಿರುಮನು, ಸಾಳುವ ನರಸಿಂಹನೊಡನೆ ನಡೆಸಿದ ಯುದ್ಧ ಘಟನೆಯಿದು. ಸಾಳುವ ನರಸಿಂಹ ೧೪೫೬-೬೬ ರ ವರೆಗೆ ಪೆನುಗೊಂಡೆ ಚಂದ್ರಗಿರಿಗಳಲ್ಲಿ ರಾಜ್ಯಪಾಲನಾಗಿ, ೧೧೬೬-೯೧ರ ವರೆಗೆ ವಿಜಯನಗರದಲ್ಲಿ ಸಾಮ್ರಾಟನಾಗಿ ರಾಜ್ಯಭಾರ ನಡೆಸಿದ್ದು, ಸಿರುಮನೊಂದಿಗಿನ ಯುದ್ಧ ರಾಜ್ಯಪಾಲನಾಗಿರುವ ಸಂದರ್ಭದಲ್ಲಿ ಜರುಗಿರಬೇಕು. ಈ ಯುದ್ಧಕಾರ್ಯದಲ್ಲಿ ತೊಡಗಿದ್ದ ಗ್ರಾಮಗಳು, ವ್ಯಕ್ತಿಗಳು, ಯುದ್ಧದ ಪ್ರತಿಯೊಂದು ಚಟುವಟಿಕೆಗಳು ಇತ್ಯಾದಿಗಳಿಂದಾಗಿ ಇದೊಂದು ಅಪೂರ್ವ ಐತಿಹಾಸಿಕ ಕೃತಿಯಾಗಿದೆ. ಇದು ರಾಜಕೀಯ ಘಟನೆಯಾಗಿದ್ದರೂ ಅಲ್ಲಲ್ಲಿ ಹೆಣೆದುಕೊಂಡ ಸಾಮಾಜಿಕ ಜೀವನವ್ಯಾಪಾರ, ಸಾಂಸ್ಕೃತಿಕ ಮೌಲ್ಯಗಳು ಅಭ್ಯಾಸಯೋಗ್ಯವೆನಿಸಿವೆ. ಇವುಗಳ ವಿವರವಾದ, ಖಚಿತವಾದ ಅಭ್ಯಾಸ ಮುಂದುವರಿಯುವುದು ಅತ್ಯವಶ್ಯ.

ಈ ಯುದ್ಧದ ವಿಷಯವು ಸಿರುಮನನ್ನು ಕುರಿತ ಮೂರು ಕೃತಿಗಳಲ್ಲಿ ಒಂದೇ ರೀತಿ ಬರುತ್ತಿದ್ದರೂ ಅಲ್ಲಲ್ಲಿ ವ್ಯತ್ಯಾಸವೂ ಇದೆ. ಇದರಲ್ಲಿ ಯಾವುದು ನಿಜ? ಎಷ್ಟು ನಿಜ? ಎಂಬುದನ್ನು ನಿಶ್ಚಯಿಸಬೇಕಾಗಿದೆ. ಈ ಕೃತಿಗಳಲ್ಲದೆ ಬೆಟ್ಟವರ್ಧನಚರಿತೆ (ಚಂದ್ರಸಾಗರವರ್ಣಿ)ಯಲ್ಲಿ ಈ ಯುದ್ಧದ ಕೆಲವು ವಿಷಯಗಳು ಬರುತ್ತಿದ್ದು, ನರಸಿಂಹನು ಸಿರುಮನನ್ನು ಕೊಂದು 'ಹೆಗ್ಗೆರೆ ಬಸದಿಲೆ ಇಡಿಸಿ ಶಾಸನವನ್ನೆದಿದನು' ಎಂದು ಅಲ್ಲಿ ಹೇಳಲಾಗಿದೆ.[೧] ತೆಲುಗು ವರಾಹಪುರಾಣ, ಬಾಲಭಾಗವತಮು ಗ್ರಂಥಗಳಲ್ಲಿಯೂ ಈ ಯುದ್ಧಕ್ಕೆ ಸಂಬಂಧಿಸಿದ ವಿರವಗಳು ಸಿಗುತ್ತವೆ. ಈ ಕೃತಿಗಳ, ಬೇರೆ ಶಾಸನಗಳ ಮತ್ತು ಈ ಪ್ರದೇಶದ ಗ್ರಾಮಗಳ ಅಭ್ಯಾಸದಿಂದ ಸಿರುಮನ ಇತಿಹಾಸವನ್ನು ಪುನರ್ರಚಿಸುವ ಕೆಲಸ ನಡೆಯಬೇಕಾಗಿದೆ.

ಸ್ಥಳ ಪರಿಶೀಲನೆ

ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲೂಕಿನ ಶ್ರೀರಾಮಪುರ ಒಂದು ದೊಡ್ಡ ಹಳ್ಳಿ. ಇದರ ಪ್ರಾಚೀನ ಹೆಸರು ಬೂದಿಹಾಳು. ಇಲ್ಲಿ ಆಳಿದ ಸಿರುಮನಾಯಕನಿಂದಾಗಿ ಸಿರುಮಪುರ, ಶ್ರೀರಾಮಪುರ ಆಗಿದೆಯೋ, ರಾಮಾಯಣದ ಶ್ರೀರಾಮನ ಹೆಸರು ಬೂದಿಹಾಳು ಹೆಸರಿನ ಮೇಲೆ ದಾಳಿ ಮಾಡಿದೆಯೋ ಸ್ಪಷ್ಟವಾಗುವುದಿಲ್ಲ. ಇಲ್ಲಿ ಗೋಪಾಲಸ್ವಾಮಿ, ಆಂಜನೇಯ, ಬನಶಂಕರಿ, ಕುಮಾರಮಲ್ಲಯ್ಯ, ವೀರೇಶ್ವರ, ರೇವಣಸಿದ್ಧ, ಕೊಲ್ಲಾಪುರದಮ್ಮ, ವೀರಭದ್ರ, ಸೋಮೇಶ್ವರದೇವಾಲಯಗಳೂ, ಕೋಟೆಕೊತ್ತಲ ಇತ್ಯಾದಿ ಅವಶೇಷಗಳೂ ಇವೆ.

---

೧. ಚಂದ್ರಸಾಗರವರ್ಣಿಯ ಕೃತಿಗಳು(ಸಂ. ಹಂ.ಪ. ನಾಗರಾಜಯ್ಯ, ಎಸ್. ಶಿವಣ್ಣ)ಪು. ೧೪೧-೪೨.

ಸಿರುಮನ ಮಕ್ಕಳಲ್ಲಿ ಒಬ್ಬನಾದ ವೀರಭದ್ರನನ್ನು ವೀರಭದ್ರದೇವಾಲಯದ ಆವರಣದಲ್ಲಿ ಸಮಾಧಿ ಮಾಡಿದುದಾಗಿ ಸಿದ್ಧಕವಿಯ ಕಾವ್ಯ ತಿಳಿಸುತ್ತದೆ. ಬಹುಶಃ ಇಂದಿನ ವೀರಭದ್ರದೇವಾಲಯದ ಎಡಕ್ಕೆ, ಸೋಮೇಶ್ವರ ದೇವಾಲಯದ ಬಲಕ್ಕೆ ಇರುವ ಕರಿಯ ಕಲ್ಲಿನ ಸಣ್ಣ ಗುಡಿಯೇ ಮಗ ವೀರಭದ್ರನ ಸಮಾಧಿಯಾಗಿರಬಹುದು. ಇನ್ನೊಬ್ಬ ಮಗ ಮಲ್ಲಯ್ಯನ ಸಮಾಧಿಯ ಮೇಲೆ 'ಕುಮಾರಮಲ್ಲಯ್ಯನ ಗುಡಿ' ಎಂದು ಕರೆಯುತ್ತಿರುವ ಕಟ್ಟಡವೊಂದು ಈಗಲೂ ತಲೆಯೆತ್ತಿ ನಿಂತಿದೆ. ಇದು ಕಲ್ಲು-ಮಣ್ಣಿನಿಂದ ಕಟ್ಟಿದ ಒಂದು ಕೋಣೆ ಮತ್ತು ಅದರ ಮುಂದೆ ಐದು ಅಂಕಣದ ಪಡಸಾಲೆಯನ್ನೊಳಗೊಂಡಿದೆ. ಕೋಣೆಯಲ್ಲಿ ಕೇವಲ ೩ ವೀರಗಲ್ಲುಗಳಿದ್ದು, ಇವುಗಳಲ್ಲಿ ಎರಡನ್ನು ನೆಡಲಾಗಿದ್ದು ಒಂದನ್ನು ನೆಲದ ಮೇಲೆ ಇಡಲಾಗಿದೆ. ಇವುಗಳಲ್ಲಿ ಮಲ್ಲಯ್ಯನ ವೀರಗಲ್ಲು ಯಾವುದು? ಸ್ಪಷ್ಟವಾಗುವುದಿಲ್ಲ. ಮಿಕ್ಕೆರಡು ವೀರಗಲ್ಲುಗಳು ಬಹುಶಃ ತಂದೆ ಸಿರುಮ, ಸೋದರ ಕಾಚಣ್ಣ ಇವರಿಗೆ ಸಂಬಂಧಿಸಿರಬಹುದೇ? ಎಂಬ ಅನುಮಾನ ಹುಟ್ಟುತ್ತದೆ.

ನೆಲದಲ್ಲಿ ನೆಟ್ಟ ಎರಡು ವೀರಗಲ್ಲುಗಳ ಎತ್ತರ ಮೂರು ಅಡಿ. ನೆಲದ ಮೇಲಿಟ್ಟ ವೀರಗಲ್ಲಿನ ಎತ್ತರ ಎರಡು ಅಡಿ. ಗಂಗಾಮತದವರು ಇದರ ಅರ್ಚಕರು. ವೇಷಭೂಷಣಗಳೇನೂ ಇಲ್ಲದ ಈ ವೀರಗಲ್ಲುಗಳನ್ನು ವಿಭೂತಿ ಕುಂಕುಮ ಕಾಡು ಹೂ ಪತ್ರೆಗಳಿಂದ ಪೂಜಿಸುತ್ತಾರೆ. ಪೂಜಾ ವೈಭವವಿಲ್ಲದಿರಬಹುದು, ಆದರೆ ತಮ್ಮ ಗ್ರಾಮದ ವೀರನನ್ನು ನೆನಪಿಟ್ಟು, ಪೂಜಿಸುತ್ತಿರುವುದು ಮುಖ್ಯ.

ಕುಮಾರಮಲ್ಲಯ್ಯನ ಕಟ್ಟಿಗೆಯ ರುಂಡ ವಿಗ್ರಹವೊಂದು ಈ ಗ್ರಾಮದ ಕೊಲ್ಲಾಪುರದಮ್ಮನ ಗುಡಿಯಲ್ಲಿದೆ. ಉತ್ಸವವಿಗ್ರಹವಾಗಿರುವ ಕಾರಣ ಇದಕ್ಕೆ ನಿತ್ಯಪೂಜೆಯಿಲ್ಲ. ವಿಶೇಷದಿನಗಳಲ್ಲಿ ಬೆಳ್ಳಿಯ ಮುಖವಾಡ, ಬೆಳ್ಳಿಯ ಆಭರಣ, ರೇಶಿಮೆಯ ವೇಷಭೂಷಣ, ಖಡ್ಗ-ಬಿಲ್ಲುಬಾಣಗಳಿಂದ ಶೃಂಗರಿಸಿ ಕಟ್ಟಿಗೆಯ ಕುದುರೆಯ ಮೇಲೆ ಸ್ಥಾಪಿಸುತ್ತಾರೆ. ಮಹಾನವಮಿ ಸಂದರ್ಭದಲ್ಲಿ, ಶೃಂಗಾರಮಾಡಿದ ಈ ವಿಗ್ರಹದ ಪೂಜೆ ೯ ದಿನಗಳ ವರೆಗೆ ನಡೆಯುತ್ತದೆ. ೯ನೆಯ ದಿನ ಮುಂಜಾನೆ ಈ ಮೂರ್ತಿಯನ್ನು ಪಲ್ಲಕ್ಕಿಯಲ್ಲಿಟ್ಟುಕೊಂಡು, ವಾದ್ಯವೈಭವಗಳೊಂದಿಗೆ ಊರಿಂದ ೨ ಮೈಲು ಅಂತರದಲ್ಲಿರುವ ಬನ್ನಿಯ ಮರದ ಹತ್ತಿರ ಹೋಗುತ್ತಾರೆ. ಅಲ್ಲಿ ಸುತ್ತಲಿನ ಊರುಗಳ ಗ್ರಾಮದೇವತೆಗಳೂ ಬರುತ್ತವೆ. ಬನ್ನಿಯ ಮರದ ಎದುರು ನಿರ್ಮಿಸಿದ ಸಾಲುಮಂಟಪಗಳಲ್ಲಿ ಈ ಒಂದೊಂದು ದೇವರನ್ನು, ಮಧ್ಯದ ಮಂಟಪದಲ್ಲಿ ಕುಮಾರಮಲ್ಲಯ್ಯನ ವಿಗ್ರಹವನ್ನು ಪ್ರತಿಷ್ಠಾಪಿಸುತ್ತಾರೆ. ಇದು ಮಲ್ಲಯ್ಯನ ಒಡ್ಡೋಲಗದ ಸೂಚನೆಯಾಗಿರಬೇಕು. ಎದುರಿನ ಬನ್ನಿಯ ಮರಕ್ಕೆ ಕಟ್ಟಿದ ಬಾಳೆಯ ಕಂಬಕ್ಕೆ ಊರಗೌಡ ಬಾಣ ಎಸೆದು, ಆಮೇಲೆ ಅದನ್ನು ಖಡ್ಗದಿಂದ ತುಂಡರಿಸುತ್ತಾನೆ. ಇದು ಮಲ್ಲಯ್ಯನು ವೈರಿಗಳನ್ನು ತುಂಡರಿಸಿದ ಸಂಕೇತವಾಗಿರಬೇಕು. ತರುವಾಯ ಮಲ್ಲಯ್ಯನ ಪಲ್ಲಕ್ಕಿಯನ್ನು ಹೊತ್ತುಕೊಂಡು ಓಡುತ್ತ ಊರಿಗೆ ಬರುತ್ತಾರೆ. ಇದು ಮಲ್ಲಯ್ಯನ ಸೈನಿಕರು ರುಂಡವನ್ನು ಮೆರೆಸುತ್ತ ಬೂದಿಹಾಳಕ್ಕೆ ಓಡಿಬಂದುದರ ದ್ಯೋತಕನಾಗಿರಬಹುದು. ಈ ಮೆರವಣಿಗೆಯು ಗ್ರಾಮವನ್ನು ಪ್ರವೇಶಿಸುವಲ್ಲಿ ಒಂದು ಕುರಿ ಕಡಿದು, ಅದರ ಮಾಂಸದಿಂದ ಅಡಿಗೆ ಮಾಡುತ್ತಿದ್ದು, ಇದಕ್ಕೆ 'ರಾಸಿಗೊಳ್' ಎನ್ನುತ್ತಾರೆ. ಬಹುಶಃ ಇದು ವೀರಗಲ್ಲನ್ನು ಸ್ಥಾಪಿಸುವಾಗ ಏರ್ಪಡಿಸುತ್ತಿದ್ದ 'ಬೀರಗೊಳ್'ದ ಸಂಕೇತವಾಗಿರಬಹುದು.

ಕೊಮಾರ ರಾಮ-ಕೊಮಾರ ಮಲ್ಲ

ಕರ್ನಾಟಕದ ಇತಿಹಾಸದಲ್ಲಿ ಜನಮನವನ್ನು ಆಳವಾಗಿ ಕಲಕಿದುದು, ಕಂಪಿಲರಾಮನ ಯುದ್ಧಘಟನೆ. ಹೀಗಾಗಿ ಇದನ್ನು ಕುರಿತು ನಂಜುಂಡ, ಪಾಂಚಾಳಗಂಗ, ಹಂಪೆಯ ಚರಪತಿ ಮಹಾಲಿಂಗಸ್ವಾಮಿ ಮೊದಲಾದವರು ಕೃತಿ ರಚಿಸಿದ್ದಾರೆ. ಜನಪದದಲ್ಲಿಯೂ ಈ ಬಗ್ಗೆ ಅನೇಕ ಹಾಡುಗಳು ಸಿಗುತ್ತವೆ. ಇಷ್ಟೇ ಆಳವಾಗಿ ಜನಮನವನ್ನು ಕಲಕಿದುದು ಬೂದಿಹಾಳ ಸಿರುಮನ ಯುದ್ಧಘಟನೆ. ಈ ಘಟನೆಯನ್ನು ಕುರಿತು ಸಿದ್ಧಕವಿ, ಕೆಂಚಿಶೆಟ್ಟಿಯ ಸುತ ರಾಮ ಮತ್ತು ಮಲ್ಲಕವಿ ಕೃತಿ ರಚಿಸಿದ್ದಾರೆ. ಅಲ್ಲಿ ಕುಮಾರರಾಮನ ಹೋರಾಟ-ವೀರಮರಣ ಮುಖ್ಯವಾದರೆ, ಇಲ್ಲಿ ಕುಮಾರಮಲ್ಲಯ್ಯನ ಹೋರಾಟ-ವೀರಮರಣ ಪ್ರಧಾನವಾಗಿದೆ. ಕೆಂಚಿಶೆಟ್ಟಿಯ ಸುತ ರಾಮನು ಬೂದಿಹಾಳನ್ನು "ಇದು ರಾಮನಿಹ ಕುಮ್ಮಟವೊ" ಎನ್ನುತ್ತ ಕುಮಾರರಾಮನ ರಾಜಧಾನಿಯನ್ನು ಸ್ಮರಿಸಿದ್ದಾನೆ. ಪಾಂಚಾಳ ಗಂಗನಲ್ಲಿ "ಇನ್ನು ಪೇಳುವೆ ಚೆನ್ನರಾಯನ ಕಥೆಯನು" ಎಂದು ಆರಂಭವಾಗುವ ಪದ್ಯವಿದ್ದರೆ, ಕೆಂಚಿಶೆಟ್ಟಿಯ ಸುತ ರಾಮನಲ್ಲಿ "ಇನ್ನು ಪೇಳುವೆ ಚೆನ್ನಮಲ್ಲನ ಕೃತಿಯನು" ಎಂದು ಪ್ರಾರಂಭವಾಗುವ ಅನುಕರಣ ಪದ್ಯವಿದೆ.

ಅಂಗ ಸಿಕ್ಕಿತು ರಾಮನ ತಲೆ ನೇಮಿಗೆ
ಅಂಗ ಸಿಕ್ಕದು ನರಸಿಂಹಗೆ
ಅಂಗವ ಕೊಡದೆ ಕಾದಿದನೊಬ್ಬ ರಣಗಲಿ
ತುಂಗವಿಕ್ರಮ ಗೊಲ್ಲ ಸಿರುಮ

ಎನ್ನುತ್ತ ಮಲ್ಲಕವಿ, ಕಂಪಿಲಯುದ್ಧಕ್ಕಿಂತ ಈ ಬೂದಿಹಾಳಯುದ್ಧ ಘಟನೆ ಮಿಗಿಲಾದುದೆಂದು ಸಾರುತ್ತಾನೆ.

ಹೀಗೆ ಈ ಎರಡೂ ಘಟನೆಗಳು ಜನಮನವನ್ನು ಭೇದಿಸಿದ ಕಾರಣ, ಜನಪದದಲ್ಲಿ ಕುಮಾರರಾಮನನ್ನು ಕುರಿತಂತೆ ಕುಮಾರಮಲ್ಲಯ್ಯನನ್ನೂ ಕುರಿತು ಹಾಡುಗಳು ಹುಟ್ಟಿಕೊಂಡಿವೆ. ಡಾ. ಜೀ. ಶಂ. ಪ. ಅವರ "ದಕ್ಷಿಣ ಕರ್ನಾಟಕ ಜನಪದ ಕಾವ್ಯಪ್ರಕಾರಗಳು" ಎಂಬ ಪಿಎಚ್.ಡಿ. ಪ್ರಬಂಧದಲ್ಲಿ ಈ ಬಗ್ಗೆ ಕೆಲವು ಪದ್ಯಗಳು ಸಿಗುತ್ತವೆ (೩೯, ೩೧೪). ಈ ದಿಸೆಯಲ್ಲಿ ಕ್ಷೇತ್ರಕಾರ್ಯ ನಡೆದರೆ ಹೆಚ್ಚಿನ ಸಾಹಿತ್ಯ ಸಿಗುವ ಸಾಧ್ಯತೆಯಿದೆ.

ಗುಣಮೌಲ್ಯ

ಶಬ್ದಮಾಧ್ಯಮದ ಕಲಾಕೃತಿಗಳಲ್ಲಿ ಗದ್ಯ, ಪದ್ಯ, ದೃಶ್ಯಗಳೆಂಬ ಮೂರು ಪ್ರಕಾರಗಳಿದ್ದು, ಇವುಗಳನ್ನು ವಿಮರ್ಶಿಸುವ ಮಾನದಂಡಗಳಲ್ಲಿಯೂ ಮೂರು ಪ್ರಭೇದಗಳು ಅವಶ್ಯವೆಂದು ತೋರುತ್ತದೆ. ಆದರೆ ಇಂದು ಗದ್ಯಕೃತಿ ವಿಮರ್ಶಾಮಾನದಂಡದಿಂದಲೇ ಈ ಎಲ್ಲ ಪ್ರಕಾರಗಳ ಮೌಲ್ಯನಿರ್ಣಯ ಮಾಡುವುದು ರೂಢಿಯಾಗಿಬಿಟ್ಟಿದೆ. ಇದರಿಂದಾಗಿ, ಕೆಲವೊಮ್ಮೆ ಪದ್ಯಪ್ರಕಾರ, ದೃಶ್ಯಪ್ರಕಾರಗಳಿಗೆ ಅನ್ಯಾಯವಾಗುತ್ತಲಿದೆ. ಛಂದೋನಿಷ್ಠವಾಗಿರುವ ಪ್ರಾಚೀನ ಕನ್ನಡ ಸಾಹಿತ್ಯದ ವಿಷಯದಲ್ಲಿಯಂತೂ ಇದು ಬಹಳಷ್ಟು ಸಲ ನಿಜವೆನಿಸುತ್ತದೆ.

ಕನ್ನಡದಲ್ಲಿ ಸಾಹಿತ್ಯದ ಸೃಷ್ಟಿ ಮತ್ತು ಪರಂಪರೆಗಳು ವಿಶಿಷ್ಟಸಂದರ್ಭಗಳಲ್ಲಿ ಸಾಗಿಬಂದಿವೆ. ಮೂಲತಃ ಧ್ವನಿಪಾತಳಿಯಲ್ಲಿ ಸಾಗಿಬರುತ್ತಲಿದ್ದ ಕನ್ನಡ ಸಾಹಿತ್ಯವು, ಲಿಪಿಸೌಕರ್ಯ ಕಾರಣವಾಗಿ ಅಕ್ಷರಪಾತಳಿಗಿಳಿಯಿತು. ಹೀಗೆ ಅಕ್ಷರಕ್ಕಿಳಿದ ದೇಶೀನಿಷ್ಠಸಾಹಿತ್ಯ ದೇಶಿಯೆನಿಸಿದರೆ, ಸಂಸ್ಕೃತನಿಷ್ಠಸಾಹಿತ್ಯ ಮಾರ್ಗವೆನಿಸಿತು. ಇವುಗಳಲ್ಲಿ ಒಂದು ನಿರಕ್ಷರಿಗಳನ್ನು ಗಮನದಲ್ಲಿಟ್ಟು ಶ್ರವಣಪಾತಳಿಯ ಸಾಹಿತ್ಯವಾಗಿ 'ಹಾಡುಗಬ್ಬ' ರೂಪದಲ್ಲಿ ಬೆಳೆಯಿತು. ಇನ್ನೊಂದು ಸಾಕ್ಷರಿಗಳನ್ನು ಗಮನದಲ್ಲಿಟ್ಟುಕೊಂಡು ವಾಚನಪಾತಳಿಯ ಸಾಹಿತ್ಯವಾಗಿ "ಓದುಗಬ್ಬ" ರೂಪದಲ್ಲಿ ಬೆಳೆಯಿತು. ಇವುಗಳನ್ನು ೧೯ನೆಯ ಶತಮಾನದ ವರೆಗೆ ಶ್ರವಣ ಮತ್ತು ವಾಚನಗಳೆಂಬ ಎರಡು ಪ್ರತ್ಯೇಕ ರೀತಿಗಳಲ್ಲಿಯೇ ಆಸ್ವಾದಿಸುವ ವಿಧಾನ ಸಾಮಾನ್ಯವಾಗಿ ಅಸ್ತಿತ್ವದಲ್ಲಿದ್ದಿತು. ಇಂಗ್ಲಿಷ್ ಶಿಕ್ಷಣ, ಸಾಹಿತ್ಯಗಳ ಪ್ರಭಾವದಿಂದಾಗಿ ಶ್ರವಣಮಾಧ್ಯಮದ ಸಾಹಿತ್ಯವನ್ನೂ ವಾಚನಮಾಧ್ಯಮದಲ್ಲಿಟ್ಟು ಆಸ್ವಾದಿಸುವುದು ಪ್ರಾರಂಭವಾಯಿತು. ಈ ಬಗೆಯ ವಿಧಾನ ಬದಲಾವಣೆಯಿಂದಾಗಿ, ಪರಿಣಾಮದಲ್ಲಿಯೂ ವ್ಯತ್ಯಾಸ ಸಂಭವಿಸಿ, ವಿಮರ್ಶಾ ಮೌಲ್ಯಮಾಪನದಲ್ಲಿ ಹಾಡುಗಬ್ಬಕ್ಕೆ ಅನ್ಯಾಯವಾಗಹತ್ತಿತು. ಅಂದರೆ ಹಾಡುಗಬ್ಬವನ್ನು ಶ್ರವಣಮಾಧ್ಯಮದಲ್ಲಿ ಕೇಳಿದಾಗ ಸಿಗುತ್ತಿದ್ದ ಸುಖ ಓದಿದಾಗ ಸಿಗದಿರುವಂತಹ ಪರಿಸ್ಥಿತಿ ನಿರ್ಮಾಣವಾಯಿತು. ಹೀಗಾಗಿ 'ಹಾಡುಗಬ್ಬ ಪ್ರಕಾರ'ದ ಹೊಸ ವಿಮರ್ಶಾಮಾನದಂಡಗಳು ಕನ್ನಡದಲ್ಲಿ ಇಂದು ಹುಟ್ಟಿಬರಬೇಕಾಗಿದೆ. ಅಲ್ಲಿಯ ವರೆಗೆ ಹಾಡುಗಬ್ಬ ಪ್ರಕಾರವಾದ ಸಿರುಮನ ಚರಿತೆಗಳಂಥ ಕೃತಿಗಳನ್ನು ಓದುಗಬ್ಬ ಪ್ರಕಾರದ ವಿಮರ್ಶಾ ಮಾನದಂಡದಿಂದ ಅಳೆದಲ್ಲಿ, ಅವುಗಳಿಗೆ ಅನ್ಯಾಯವಾಗುವುದೆಂದೇ ಹೇಳಬೇಕು. ಈ ಹಿನ್ನೆಲೆಯಲ್ಲಿ ನೋಡಿದಾಗ ಈ ಕವಿ ಇದನ್ನು ಓದುವುದಕ್ಕಾಗಿ ಬರೆದುದಲ್ಲ, ಹಾಡುವುದಕ್ಕಾಗಿ ಬರೆದಿದ್ದು, ಹಾಡುವ ಸಾಹಿತ್ಯಿಕ ಮೌಲ್ಯ ಇದಕ್ಕೆ ಇದ್ದೇ ಇದೆಯೆಂದು ಹೇಳಬಹುದಾಗಿದೆ. ಎರಡನೆಯದಾಗಿ ಒಂದು ಕೃತಿಗೆ ಸಾಹಿತ್ಯಿಕ ಗುಣಮೌಲ್ಯದಂತೆ ಇತರ ಗುಣಮೌಲ್ಯಗಳೂ ಇರುತ್ತವೆ. ಈ ದೃಷ್ಟಿಯಿಂದ ನೋಡಿದರೆ ಗೊಲ್ಲಸಿರುಮನ ಚರಿತೆಗಳಿಗೆ ಖಂಡಿತವಾಗಿಯೂ 'ಇತಿಹಾಸಮಹತ್ವ'ದ ಬೆಲೆ ಇದ್ದೇ ಇದೆ.

ಪರಿಷ್ಕರಣ

೧೯೮೩ರಲ್ಲಿ "ಸಿರುಮಣನಾಯಕನ ಸಾಂಗತ್ಯ"ವನ್ನು ಪರಿಷ್ಕರಿಸಿ ಪ್ರಕಟಿಸಲು ತೊಡಗಿದ ಸಂದರ್ಭದಲ್ಲಿ ಮಿತ್ರರಾದ ಶ್ರೀ ಎಸ್. ಶಿವಣ್ಣ ಅವರು ತಮ್ಮ ಹತ್ತಿರ ಇರುವ ಮಲ್ಲ ಕವಿ ಬರೆದ "ಗೊಲ್ಲ ಸಿರುಮನ ಚರಿತೆ" ಕೃತಿಯ ತಾಳೆಪ್ರತಿಯನ್ನು ಕಳಿಸಿ, ಇದರ ಇನ್ನೊಂದು ಪ್ರತಿ ಹೈದ್ರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾಲಯದ ಗ್ರಂಥಾಲಯದಲ್ಲಿರುವುದಾಗಿ ತಿಳಿಸಿದರು. ಪ್ರಸ್ತುತ ಪರಿಷ್ಕರಣಕ್ಕೆ ಈ ಎರಡೂ ಕೃತಿಗಳನ್ನು (ಶಿವಣ್ಣನವರ ಪ್ರತಿ=ಶಿ, ಹೈದ್ರಾಬಾದ ಪ್ರತಿ=ಹ) ಬಳಸಿಕೊಳ್ಳಲಾಗಿದ್ದು, ಇವುಗಳ ವಿವರ ಹೀಗಿದೆ:

'ಶಿ ಪ್ರತಿ : ೧೨"x೧". ತಾಳೆ ಪ್ರತಿ, ೧೦೭ ಗರಿಗಳು. ಒಂದು ಮಗ್ಗುಲಿನ ಅಂಚುಗಳು ಮುರಿದಿವೆ. ನಡುನಡುವೆ ಗರಿಗಳೂ ತುಂಡಾಗಿ ಕಳೆದುಹೋಗಿವೆ. ಅಕ್ಷರಗಳು ಸ್ಪಷ್ಟವಾಗಿದ್ದು, ತಕ್ಕಮಟ್ಟಿಗೆ ಸುಂದರವಾಗಿವೆ.

'ಹ ಪ್ರತಿ : ೧೦x೧"/೨x೧ ೧/೪". ತಾಳೆ ಪ್ರತಿ. ೧೩೩ ಗರಿಗಳು; ಅಪೂರ್ಣ. ಅಕ್ಷರ ಸರಿಯಾಗಿಲ್ಲ. ಆರನೆಯ ಸಂಧಿಯ ೨೨ನೆಯ ಪದ್ಯದ ಮುಂದಿನ ಗರಿಗಳಿಲ್ಲ. "A Descriptive

Catalogue of the Kannada Manuscripts in the Osmania University Library." ಹೆಸರಿನ ಸೂಚಿಯ ಪುಟ ೧೨೨, ನಂ ೧೧೧ರಲ್ಲಿ ಇದನ್ನು 'ಲಿಂಗಲೀಲಾವಿಲಾಸ (ಸಿರುಮನ ಸಾಂಗತ್ಯ)" ಎಂದು ಕರೆಯಲಾಗಿದೆ. ಇದರ ಮೈಕ್ರೋಫಿಲ್ಮ ಪ್ರತಿ ಮೈಸೂರ ಕನ್ನಡ ಅಧ್ಯಯನ ಸಂಸ್ಥೆಯಲ್ಲಿದೆ.

ಆಡುವ ಭಾಷೆ, ಹಾಡುವ ಭಾಷೆಗಳೆರಡರ ದಾಳಿಯಿಂದಾಗಿ ಹಸ್ತಪ್ರತಿ ತುಂಬ ಅಶುದ್ಧವಾಗಿವೆ. ಸಾಧಾರಣ ಗುಣಮಟ್ಟದ ಲಿಪಿಕಾರರ ಭಾಷಾಜ್ಞಾನವೂ ಸೇರಿ ಈ ಹಸ್ತಪ್ರತಿಗಳು ಇನ್ನೂ ಅಶುದ್ಧ ಸ್ಥಿತಿಗೆ ಇಳಿದಿವೆ. ಅಲ್ಲಲ್ಲಿ ಪಾಠ ತ್ರುಟಿತವಾಗಿ ಹೋಗಿದ್ದರೂ ಪುಣ್ಯವಶಾತ್ ಉಳಿದುಕೊಂಡಿರುವ ಎರಡೇ ಎರಡು ಹಸ್ತಪ್ರತಿಗಳೂ ಕಳೆದು ಹೋದರೆ ಒಂದು ಐತಿಹಾಸಿಕ ಕಾವ್ಯವೇ ಕಣ್ಮರೆಯಾಗುವುದೆಂಬ ಭೀತಿ ಕಾರಣವಾಗಿ, ದುಸ್ಥಿತಿಯಲ್ಲಿರುವ ಈ ಹಸ್ತಪ್ರತಿಗಳನ್ನೇ ಬಳಸಿಕೊಂಡು ಪ್ರಸ್ತುತ ಕೃತಿಯನ್ನು ಸಂಪಾದಿಸಲಾಗಿದೆ. ಹೀಗಾಗಿ ದೋಷಗಳು ಉಳಿದುಕೊಂಡಿರುವುದು ಸಹಜವಾಗಿದೆ.

ಎರಡನೆಯದಾಗಿ, ಇದು ಇತಿಹಾಸ ಕಾವ್ಯವಾಗಿರುವುದರಿಂದ ಇಲ್ಲಿ ಮಡುಗಟ್ಟಿರುವ ಇತಿಹಾಸದ ಪರಿಚಯ ಸಂಪಾದಕರಿಗೆ ಅಗತ್ಯ. ಆ ಕಾಲದ ವ್ಯಕ್ತಿನಾಮ ಸ್ಥಳನಾಮ, ಸ್ಥಳೀಯ ಬಳಕೆಯ ಪದಗಳ ಪರಿಚಯವೂ ಸಂಪಾದಕರಿಗೆ ಅವಶ್ಯ. ಒಟ್ಟಿನಲ್ಲಿ ಒಬ್ಬ ಇತಿಹಾಸಕಾರ, ಒಬ್ಬ ಪ್ರಾದೇಶಿಕ ವಿದ್ವಾಂಸ, ಹೆಚ್ಚಿನದಾಗಿ ಒಬ್ಬ ಸಾಹಿತ್ಯ ಸಂಪಾದಕ ಈ ಮೂರು ಅಂಶಗಳ ಸಂಯುಕ್ತ ಪ್ರಜ್ಞೆಯ ವ್ಯಕ್ತಿಯಿಂದ ಇಂಥ ಕೃತಿಗಳ ಸಂಪಾದನೆ ಪರಿಪೂರ್ಣಗೊಳ್ಳುತ್ತದೆ. ಈ ಎಲ್ಲ ತಿಳುವಳಿಕೆಗಳ ತಕ್ಕಮಟ್ಟಿನ ಹಿನ್ನೆಲೆಯಲ್ಲಿ ಈ ಕೃತಿಯನ್ನು ಪರಿಷ್ಕರಿಸಲಾಗಿದೆ. ಅಶುದ್ಧ ಹಸ್ತಪ್ರತಿಗಳು ಕಾರಣವಾಗಿ ಅಲ್ಲಲ್ಲಿ ಊಹೆ ಅನಿವಾರ್ಯವಾಗಿದೆ. ಅಂಥ ಪ್ರಸಂಗಗಳಲ್ಲಿ ಎರಡೂ ಪ್ರತಿಗಳ ಮೂಲಪಾಠವನ್ನು ಅಡಿಯಲ್ಲಿ ತಪ್ಪದೆ ದಾಖಲಿಸಲಾಗಿದೆ. ವಿದ್ವಾಂಸರು ಈ ಕೃತಿಯ ಬೇರೆ ಹಸ್ತಪ್ರತಿಗಳನ್ನು ಶೋಧಿಸಿ, ಇದನ್ನು ಇನ್ನು ಸರಿಯಾಗಿ ಪರಿಷ್ಕರಿಸುವರೆಂದು ಆಶಿಸುತ್ತೇನೆ.

ಈವರೆಗೆ ಸಿರುಮನನ್ನು ಕುರಿತು ಮೂರು ಕೃತಿಗಳು ಸಿಕ್ಕಿವೆ. ಈ ಮೂರರಲ್ಲಿ ೧ನೆಯ ಕೃತಿಯ, ಇದಕ್ಕಿಂತ ಹೆಚ್ಚು ೨ನೆಯ ಕೃತಿಯ ಪದ್ಯಗಳು ಈ ೩ನೆಯ ಕೃತಿಯಲ್ಲಿ ಕಾಣಿಸಿಕೊಂಡಿವೆ. ಅಂಥ ಸಂದರ್ಭಗಳಲ್ಲಿ ಆಯಾ ಪದ್ಯಗಳ ಮುಂದೆ ೧ ಮತ್ತು ೨ನೆಯ ಕೃತಿಗಳ ಪದ್ಯ ಸಂಖ್ಯೆಯನ್ನು ಚೌಕ ಕಂಸಿನಲ್ಲಿ ಸೂಚಿಸಲಾಗಿದೆ. ಈ ಕಂಸಿನಲ್ಲಿಯ ೧, ೨ ಎಂಬವು ಕ್ರಮವಾಗಿ ಸಿರುಮಣನಾಯಕನ ಸಾಂಗತ್ಯ, ಸಿರುಮನ ಚರಿತೆ ಕೃತಿಗಳನ್ನು ಸೂಚಿಸುತ್ತವೆ.

ಕೃತಜ್ಞತೆ

ಕರ್ನಾಟಕ ವಿಶ್ವವಿದ್ಯಾಲಯ ಬೋಧನೆ, ಸಂಶೋಧನೆ ಮತ್ತು ಪ್ರಕಟನೆಯ ವಿಷಯವಾಗಿ ಮೊದಲಿನಿಂದಲೂ ಗಾಢವಾದ ಆಸಕ್ತಿವಹಿಸುತ್ತ ಬಂದಿದೆ. ಈ ಕಾರಣದಿಂದಾಗಿ ಇದರ ಅಂಗಸಂಸ್ಥೆಯಾದ ಪ್ರಸಾರಾಂಗ ಬೇರೆ ಬೇರೆ ಕ್ಷೇತ್ರಗಳ, ಅದರಂತೆಯೇ ಇತಿಹಾಸ ಕ್ಷೇತ್ರದ ಹಲವು ಕೃತಿಗಳನ್ನು ಪ್ರಕಟಿಸಿದೆ. ಈ ಮಾಲಿಕೆಯಲ್ಲಿ "ಗೊಲ್ಲ ಸಿರುಮನ ಚರಿತೆ" ಪ್ರಕಟವಾಗುತ್ತಿರುವುದು ಇತಿಹಾಸ ಕಾವ್ಯದ ಪ್ರಕಟನೆಯ ದೃಷ್ಟಿಯಿಂದ ಗಮನಾರ್ಹವಾದುದೆಂದೇ ಹೇಳಬೇಕು.

ನಮ್ಮ ವಿಶ್ವವಿದ್ಯಾಲಯದ ಕುಲಪತಿಗಳಾದ ಮಾನ್ಯ ಡಾ. ಎಸ್. ರಾಮೇಗೌಡ ಅವರಿಗೆ ಸಾಹಿತ್ಯ ಮತ್ತು ಚರಿತ್ರೆಗಳ ಬಗ್ಗೆ ಅಪಾರ ಪ್ರೀತಿ, ಅನನ್ಯ ಗೌರವ. ಈ ಕಾರಣದಿಂದಾಗಿ ಪ್ರಸ್ತುತ ಕೃತಿ ಪ್ರಕಟನೆಗೆ ವಿಶೇಷ ಒಲವು, ಒತ್ತಾಯ ತೋರಿದ ಅವರಿಗೆ ನನ್ನ ವಂದನೆಗಳು ಸಲ್ಲುತ್ತವೆ.

ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗದ ನಿರ್ದೇಶಕರಾದ ಪ್ರೊ. ಎಚ್. ವಿ. ನಾಗೇಶ್ ಅವರು ಮನಸ್ಸುಮಾಡಿರದಿದ್ದರೆ ಈ ಕೃತಿ ಪ್ರಕಟವಾಗುತ್ತಿರಲೇ ಇಲ್ಲ. ಸಮಾಜ-ಸಾಹಿತ್ಯಗಳ ಅಭ್ಯಾಸಿಯಾದ, ಅಭಿಮಾನಿಗಳಾದ ಅವರಿಗೆ ಕೃತಜ್ಞನಾಗಿದ್ದೇನೆ. ಹಸ್ತಪ್ರತಿಯನ್ನು ತಮ್ಮ ಸ್ಫುಟವಾದ ಬರವಣಿಗೆಯಿಂದ ನಕಲುಗೊಳಿಸಿದ ಲಿಂಗೈಕ್ಯ ಶ್ರೀ ಕೆ. ಎಸ್. ಪಾಟೀಲ ಮಾಸ್ತರ ಅವರಿಗೂ, ಹಸ್ತಪ್ರತಿ ನೀಡಿದ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ಹಸ್ತಪ್ರತಿ ವಿಭಾಗದ ನಿರ್ದೇಶಕರಾದ ಶ್ರೀ ಎಸ್. ಶಿವಣ್ಣ ಅವರಿಗೂ, ಹೈದ್ರಾಬಾದ ಹಸ್ತಪ್ರತಿಯನ್ನು ಓದಲು ಅವಕಾಶ ಮಾಡಿಕೊಟ್ಟ ಉಸ್ಮಾನಿಯಾ ವಿಶ್ವವಿದ್ಯಾಲಯದ ಗ್ರಂಥಪಾಲರಿಗೂ, ಬೆರಳಚ್ಚು ಕಾರ್ಯವನ್ನು ಪೂರೈಸಿದ ಶ್ರೀ ಗಿರೀಶ ಕುಲಕರ್ಣಿ ಅವರಿಗೂ, ಮುದ್ರಣ ಸಂದರ್ಭದಲ್ಲಿ ಡಿ.ಟಿ.ಪಿ. ಕೆಲಸವನ್ನು ಶ್ರದ್ಧೆಯಿಂದ ಪೂರೈಸಿದ ಧಾರವಾಡದ ಅಖಿಲ ಗ್ರಾಫಿಕ್ಸ್ ಒಡೆಯರಾದ ಶ್ರೀ ವಿನಯ ವಾಲಿ ಮತ್ತು ಅವರ ಸಹೋದರಿ ಕುಮಾರಿ ಜಯಶ್ರೀ ವಾಲಿ ಅವರಿಗೂ, ಮುದ್ರಣಕಾರ್ಯವನ್ನು ಅತ್ಯಲ್ಪ ಕಾಲದಲ್ಲಿ ಪೂರೈಸಿದ ಕರ್ನಾಟಕ ವಿಶ್ವವಿದ್ಯಾಲಯದ ಮುದ್ರಣಾಲಯದ ವಿಭಾಗದ ಕಾರ್ಯನಿರ್ವಾಹಕ ನಿರ್ದೇಶಕರಾದ ಶ್ರೀ ಜೆ. ಎ. ಪೆರೇರಾ ಅವರಿಗೂ, ಮುದ್ರಣಾಲಯದ ಸಿಬ್ಬಂದಿವರ್ಗಕ್ಕೂ ಕೃತಜ್ಞನಾಗಿದ್ದೇನೆ.

-ಎಂ. ಎಂ. ಕಲಬುರ್ಗಿ

ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೨೦-೦೬-೧೯೯೪.

❖❖

*

ಪರಿವಿಡಿ

ಸಂಧಿ : ಒಂದು

[೧][ಶ್ರೀಧವನಜರಾಜ][೧] ವಾದಿಸಿ ಕಾಣ[೨][ದ][೨]
ವೇದನಿಗಮ[೩][ಕ][೩]ಗೋಚರ[೪][ನ][೪]
ಶ್ರೀದಯ ಅಸಗೋಡ ಶಂಭು ಸಿದ್ದೇಶನ
ಪಾದವೆ ಗತಿ ಎನ್ನ ಮತಿಗೆ ॥೧॥

ಶ್ರೀಗೌರಿಯ ವಿಮಲಾಂಗ[೫][ವಾ][೫]ಲಿಂಗಿತ
[*][ನಾ][*]ಗರ ಶಶಿ ಸೂರ್ಯದಲೆಗ
ಯೋಗಿಜನಾನಂದ ಅಸಗೋಡ ಶಂಭು ನೀ
ನಾಗು ಮಾಡೆನಗೆ ಸುಮತಿಯ ॥೨॥

---

೧. 'ಶಿ' ಪ್ರತಿಯ ಮಾರ್ಜನ್ನಿನಲ್ಲಿ "ಗೊಲ್ಲ ಶಿರುಮನ ಚರಿತ್ರೆಯು" ಎಂದು, ಪ್ರಾರಂಭದಲ್ಲಿ "ಶ್ರೀಗುರುಭ್ಯೋನಮಃ। ಶ್ರೀ ವಿರುಪಾಕ್ಷಾಯನಮಃ। ಶ್ರೀಗಣಾಧಿಪತಿಯೇನಮಃ। ಶ್ರೀಶಾರದಾಂಬಾಯನಮಃ। ಶ್ರೀ ಜ.. ಗೊಲ್ಲ ಶಿರಮನ ಚರಿತ್ರೆಯ ಬರೆಯುವುದಕ್ಕೆ ಶುಭಮಸ್ತು। ಶೋಭನಮಸ್ತು। ಆಯುರಾರೋಗ್ಯ ಐಶ್ವರ್ಯಮಸ್ತು। ಪದನು।" ಎಂದು ಬರೆಯಲಾಗಿದೆ. 'ಹ' ಪ್ರತಿಯ ಪ್ರಾರಂಭದಲ್ಲಿ "ಶ್ರೀ ಶಾರದಾ ಗುರುಭ್ಯೋನಮಃ। ಶ್ರೀಗಣಾಧಿಪತಯೇನಮಃ। ಆದಿ ನಾರಾಯಣನೇ ಗತಿ॥ ಶ್ರೀ ಹರು XX ಹಳ್ಳಿಯ ಹನುಮಂಥದೇವರ ಪಾದವೆ ಗತಿ ಮತಿ॥ ಕಂದ॥ಯಿ XX ಹಂತ ಬೂದಿಹಾಳ ಸಿರುಮಣ ನಾಯಕರ ಸಾಂಗತ್ಯಕ್ಕೆ ಶುಭಮಸ್ತು। ಶೋಭನಮಸ್ತು। ಆಯುರಾರೋಗ್ಯ ಅಯಿಶ್ವರ್ಯಮಸ್ತು। ರಾಗ ವರಾಳಿ। ಪದನು" ಎಂಬ ಬರಹವಿದೆ. ಆಮೇಲೆ "ದೇವರ ದೇವನು. . . ॥೧॥ ಕುರುಳ್ದಂಡೆ . . . ॥೨॥ ಕಾದಿದನರ್ಜುನ. . . ॥೩॥ ಅಂಗಸಿಕ್ಕಿತು . . . ॥೪॥ ಶ್ರೀ ವೇದರುಹರಾಜ. . . ॥೫॥ ಸುರರ ವಾಲಗ . . . ॥೬॥ ಗುರುತಂದೆ ತಾಯಿ . . ॥೭॥ ಬಿಂದು ವಿಸರ್ಗ . . ॥೮॥ ಉಸುರೊಡಲಿನ . . . ॥೯॥ ವಸುಧೆಗೆ ಹೊಯಿಸಳ . . . ॥೧೦॥ ಪಂಚಗ ದಿಕ್ಕಿನಲಿ . . ॥೧೧॥ ಹೊರಸುತ್ತಿನಗಳ . . ॥೧೨॥ ತೆನೆಗಳ . . . ॥೧೩॥ ಕಾಸುವ ಅಂಬಲಿ . . ॥೧೪॥ ನರಸಿಂಹ ಬಾಗೂರ ಕೊಂಡನೆಂಬುದ . . . ॥೧೫॥ ಶ್ರೀಪದನು॥" ಎಂದು ಮುಗಿಯುತ್ತಲೇ ಎರಡನೆಯ ಸಂಧಿಯ ಪ್ರಾರಂಭದ "ಮುತ್ತಿಗೆ ಬಾಗೂರಿಗಾಗಲು . . . ॥೧॥ ಎಂಬ ಪದ್ಯ ಪ್ರಾರಂಭವಾಗಿ, ಆ ಸಂಧಿ ಮುಂದುವರಿಯುತ್ತದೆ. (ಸಂ).

೧–೧ ಶ್ರೀಧವರಾಜ ಸುರರು(ಶಿ), ಶ್ರೀವೇದರುಹರಾಜ (ಹ), ೨–೨ ರು (ಶಿ, ಹ), ೩–೩– X(ಶಿ, ಹ), ೪–೪ನೆ (ಶಿ, ಹ), ೫–೫ ನ (ಶಿ), *–* ಸಾ (ಶಿ, ಹ).

ಸುರರ ವಾಗಲ ವಂದಿತಾನಂದ ದಾ[೬][ತ್ರನೆ][೬]
ಗಿರಿಜೆಯ ಪುತ್ರ ಕರಿಮುಖನೆ
ವರನಂದಿ ಭೃಂಗೀಶ ವೀರಭದ್ರೇಶ[೭][ರೆ][೭]
ಪರಮಮುನಿಗ[೮][ಳೆ][೮] ರಕ್ಷಿಪುದು ॥೩॥*

ವಾಣಿ ವೀಣಾಪಾಣಿ ಪೂಬಾಣನಣ್ಣನ
ರಾಣಿ ಶೃಂಗಾರ ಶುಕಶ್ರೇಣಿ
ಊಣೆಯಿಲ್ಲದೆ ಜಾಣೆ ಶಾರದೆ ಎನ್ನ
ಪ್ರಾಣದಗ್ರದಿ ನೆಲಸಿಹಳು ॥೪॥

ಗುರು ತಾಯಿ ತಂದೆ[೯][ಯ ಧರೆ ವರ][೯]ಕವಿಗಳ
ಹರುಷದಿಂದಲಿ ಬಲಗೊಂಬೆ
ಧರೆಯೊ*ಳಮಿತ ರಣ* ವೀರಸಿರಿಯ ಪೇಳ್ವೆ
ಸಿರುಮಭೂವರನ ಕಾಳಗವ ॥೫॥*

[೧೦][ಬಿಂದು ವಿಸರ್ಗವು ಹೊ][೧೦]ಂದಿತ ವಡಿ ಪ್ರಾಸ
ಛಂದೋಲಂಕಾರ ಲಕ್ಷಣವ
ಒಂದರೊಳನಿತ[೧೧][ನ][೧೧]ರಿಯೆನು ಬಲ್ಲರು ನಿಮ್ಮ
ಕಂದ[೧೨]ನ ಕೃತಿಯ ತಿದ್ದುವುದು ॥೬॥

[೧೩]ಬ[೧೩]ಸಿರೊಡಲಿನ ಶಿವಶರಣರೆಲ್ಲರ ಶಿಶು
ಕುಶಲ ಶಿವಲೀಲೆ ವೀರಯನ
ರಸಿಕನು ಮಗ ಮ[೧೪]ಲ್ಲ[೧೪]ನಿಂದು ಪೇಳಿದನೀಗ
ಪೊಸತಾಗಿ ಸಿರುಮನ ಕೃತಿಯ ॥೭॥(।೫-೧೧೭)

ಕೆಂಗಣ್ಣು ಕರು[೧೫][ಳ್ದಂಡೆ][೧೫] ಬಿಲುಬಾಣ ತ್ರಿಶೂಲ
ಜಂಗುಳಿ ದೈವದ ಗಂಡ

೬-೬ ತ್ರಿಯ (ಶಿ), ೭-೭ ೦ಗೆ (ಶಿ), ೮-೮ ಳು (ಶಿ), * 'ಹ' ಪ್ರತಿಯಲ್ಲಿ ಈ ಪದ್ಯಗಳ ಪಾಠ ಅಸ್ತವ್ಯಸ್ತವಾಗಿರುವುದರಿಂದ, ಇಲ್ಲಿ ಅವುಗಳನ್ನು ಪಾಠಾಂತರಕ್ಕೆ ಬಳಸಿಲ್ಲ. (ಸಂ), ೯-೯ ಯಾದರೆ (ಶಿ), *-* ಳು ವಿತರಣ(ಶಿ), ೧೦-೧೦ ಬಂದು ವಿಸಜಾನ ವಂ(ಶಿ). ಈ ಪದ್ಯದ ಮೊದಲಿನ ಎರಡು ಚರಣಗಳಿಗೆ 'ಹ' ಪ್ರತಿಯಿಂದ ಪಾಠಾಂತರ ಹಾಕಿಕೊಂಡಿಲ್ಲ(ಸಂ), ೧೧-೧೧ X(ಶಿ). ೧೩-೧೩ ಉ (ಹ), ೧೪-೧೪ ಲ(ಶಿ), ೧೫-೧೫ ಳಂಡೆ(ಶಿ)

ಹಿಂಗ*[ಡೆ]* ಸುರ ಶಿರಮಾಲೆ ಬೂದೀಹಾಳ
ಲಿಂಗ ವೀರಯ್ಯ ಶರಣೆಂಬೆ ॥೮॥

ಕಾದಿದನರ್ಜುನ ಕಾದಿದನಭಿಮನ್ಯು
ಕಾದಿದ ಲಂಕೆ ರಾವಳನು
ಈ ಧರೆಯೊಳಗೊಬ್ಬ ಕಾದಿ ಕೀರ್ತಿಯವಡೆದ
ಬೂದಿಹಾಳಿನ ಗೊಲ್ಲ ಸಿರುಮ ॥೯॥

ಅಂಗ ಸಿಕ್ಕಿತು ರಾಮನ ತಲೆ ನೇಮಿಗೆ
ಅಂಗ ಸಿಕ್ಕದು ನರಸಿಂಹಗೆ
ಅಂಗವ ಕೊಡದೆ ಕಾದಿದನೊಬ್ಬ [೧೬]ರಣಗಲಿ[೧೬]
ತುಂಗವಿಕ್ರಮ ಗೊಲ್ಲ ಸಿರುಮ ॥೧೦॥

ಇದು ಶಿವಕಥೆಯಲ್ಲ ಇದು ಪುಣ್ಯಚರಿತಲ್ಲ
ಇದನೇಕೆ ಪೇಳಿದೆ ಎನಲು
ಇದು ವೀರ ಸಿರುಮೇಂದ್ರ ಕೀರ್ತಿವಡೆದ ಕಥೆ
ಇದ ಕೇಳಲು ಮುಕ್ತಿಯುಂಟು ॥೧೧॥

ಮುನ್ನವೀ ಪ್ರಭುಡರಾಯನು ಪೆನುಗೊಂಡೆಯೊ
ಳುನ್ನತ ಹರುಷದೊಳಿಹನು
ಮನ್ನೆಯ ಗುಂಡರಾಜನು ಕಾಚಿನಾಯಕ
ಭಿನ್ನವಿಲ್ಲದೆ ಇರುತಿರಲು ॥೧೨॥

ಧಾರುಣಿಯೊಳು [೧೭][ವೀರ][೧೭] ಪ್ರಭುಡರಾಯನಂತೆ
ನೂರು ಕುದುರೆ ಸಹವಾಗಿ
ಧೀರ[೧೮][ನು][೧೮] ಗುಂಡರಾಜನು ಲಕ್ಷ ಸೀಮೆಗೆ ವ
ಜೀರನಾಗಿಹನರ್ತಿಯಲಿ ॥೧೩॥

ನುಡಿದ ಪ್ರಭುಡರಾಯನು ಬಾಗಿಲ[೧೯][ದ][೧೯]ಲ್ಲಿ
ಬಿಡಬೇಡ ಒಬ್ಬರನೆನುತ

---

*_*ಡೆ (ಶಿ). ೧೬–೧೬ ಕಲಿಯೊಳು (ಶಿ)೧೭–೧೭ X(ಶಿ), ೧೮–೧೮ X(ಶಿ), ೧೯–೧೯ X(ಶಿ)

ತಡೆಯದೆ ಪೊಡವೀಶ ಏಕಾಂತಕೆ[೨೦][ನೆ][೨೦] ಪೋಗೆ
ಕಡುಗಲಿಗಳಿ[೨೧][ಗಾಯ್ತು][೨೧] ಕ*ದ*ನ ॥೧೪॥

ಭೋಗದೇವೇಂದ್ರ ಪ್ರಭುಡರಾಯನರಮನೆ
ಬಾಗಿಲ ಕಾಚಿನಾಯಕನು
ಪೋಗಲೀಸದೆ ಮನ್ನೆ[೨೨] ರಾಜಕುವರರ ವೈ
ರಾಗ್ಯದಿಂದ[೨೩][ಲಿ][೨೩] ಕಾದಿಹನು ॥೧೫॥

ಇರುತಲೊಂದಿನ ಪ್ರಭುಡರಾಜನೋಲಗಕೆ
ಪರಿತಂದು ಗುಂಡರಾಜೇಂದ್ರ
ಹರುಷದಿಂದರಮನೆಯನು ಪೊಕ್ಕ ಕಾಚೇಂದ್ರ
ತರುಬಿ ಬೆತ್ತವ ಅಡ್ಡಮಾಡಿ ॥೧೬॥

ನುಡಿದ ಮಾತನು ಕೇಳಿ ಗುಂಡರಾಜೇಂದ್ರನು
ಕಡು ರೋಷದಲಿ ಉರಿದೆದ್ದು
ಕಡಿದು ಬಿಡಲೆ ನಿನ್ನ ಕೈಯನೆಂದೆನಲಾ[೨೪][ಗ][೨೪]
ಒಡನೆ ರಾಜೇಂದ್ರನಿಂತೆಂದ ॥೧೭॥

ಇದಿ[೨೫][ರೆದ್ದು][೨೫] ಎನ್ನೊಳು ನುಡಿದ ಬಾಯೊಳಗಣ
ಹದಿನಾರು ಹಲ್ಲನು ಮೆ[೨೬][ರೆದು][೨೬]
ಮುದದಿಂದ ಚಲ್ಲವಾಡುವೆಯಲಾ ಎನುತಲಿ
ಕದನವ ಮಾಡುತ ಬರಲು ॥೧೮॥

ಅತ್ತಲೆ ಪ್ರಭುಡರಾಯನು ಏಕಾಂತದೊ
ಳರ್ತಿಯಿಂದಲಿ ಇರುತಿರಲು
ಇತ್ತಲೀ ಕಾಚಿನಾಯಕ ಗುಂಡರಾಜಂಗೆ
ಮತ್ತೆ ಯುದ್ಧಗಳಾಗುತಿರಲು ॥೧೯॥

ಎತ್ತಳ ಹುಯ್ಯಲೆನುತ ಪ್ರಭುಡರಾಯ
ಮತ್ತೆ ಕೇಳಿದನು ಸುದ್ದಿಯನು

೨೦–೨೦ X(ಶಿ), ೨೧–೨೧ ಗಿತ್ತ (ಶಿ, ಹ), *_* X(ಶಿ). ೨೨–೨೨+ಯ (ಶಿ), ೨೩–೨೩ X (ಶಿ), ೨೪–೨೪ X (ಶಿ), ೨೫–೨೫ X(ಶಿ), ೨೬–೨೬ ಲೆ (ಶಿ)

ಚಿತ್ತೈಸಿ ಕಾಚಿನಾಯಕ ಗುಂಡರಾಜ ನೆಂ
ದೊತ್ತಿಲಿರ್ದವರು ಪೇಳಿದರು ॥೨೦॥

ಕರ ಚೋದ್ಯವು ಎಂದೆನುತ ಪ್ರಭುಡರಾಯ
ಕರ ಬೇಗ ವಾಲಗಕೆ ಬಂ*[ದು]*
ಕರೆ ಬೇಗ[೨೭][ನೆ][೨೭]ನುತಲಿ ಚರರ ಕಳುಹಲಾಗಿ
ಹರುಷದಿ ಬಂದು ಕರೆಯಲು ॥೨೧॥

ಬಂದನು ಕಾಚಿನಾಯಕ ಗುಂಡರಾಜನು
ನಿಂದನು ಪ್ರಭುಡನೋಲಗದಿ
ಇಂದು ಇವನು ನಾನು ಕಾದಬೇಕೆನುತಲಿ
ಕುಂದದೆ ಕಾಚೇಂದ್ರ ನುಡಿದ ॥೨೨॥

ಗೊಲ್ಲನು ನೀ[೨೮] ಗುಂಡರಾಜನೊಳ್ ಕಾದುವ
ಬಲ್ಲಿದ ತನವ ಪೇಳೆನಲು
ನಿಲ್ಲದೆ ನೋಡು ನಾನವನ ಬಾಯೊಳಗಣ
ಹಲ್ಲುದುರಿಸಿ ಮುಂದಿಡುವೆ ॥೨೩॥

ತಡೆಯದೆ ನುಡಿದ ಮಾತನು ಕೇಳಿ ಗುಂಡ[೨೯][ನು][೨೯]
ಪೊಡವಿ ಪಾಲಕನೆ ನೋಡೆನುತ
ಕಡಿದು ಅವನ ಹಸ್ತವ ಮುಂದಿರಿಸಿ ನಿ
ಮ್ಮಡಿಗೆ ಕಾಣಿಕೆಯನಿಕ್ಕುವೆನು ॥೨೪॥

ಇಂದಿದ ನೋಡಬೇಕೆನು[೩೦][ತ][೩೦]ಪ್ರಭುಡರಾಯ
ತಂದಿತ್ತ ಮೂರು ಆಯುಧವ
ಚಂದದಿ ಯುದ್ಧವ ಮಾಡೆಂದು ಪೇಳಲು
ಕುಂದದೆ ಕಾಚೇಂದ್ರ ನುಡಿದ ॥೨೫॥

ಮೂರು ಆಯುಧದಲ್ಲಿ ಕಾದೇನೆಂದೆಂಬುದು
ನಾರಿಯ ಸಮವೆಂದ ಕಾಚ
ಧೀರರ್ಗೆ ಹಗೆಯವ ತೋಡಿಸು ಕರದಲ್ಲಿ
ಚೂರಿಯ ಕೊಡಿಸು ಕುಕ್ಕುಟನ ॥೨೬॥

---

* – * ದ (ಶಿ,ಹ), ೨೭+ಹ(ಶಿ), ೨೮–೨೮ ರಾಜ (ಶಿ).೨೯–೨೯ X (ಶಿ). ೩೦–೩೦ X(ಶಿ)

ನಗುತ [೩೧][ಪ್ರ][೩೧]ಭುಡರಾಯ ಇದ ನೋಡಬೇಕೆಂದು
ತೆಗೆಸಿದ ಹಗೆಯ[೩೨] ಬೇಗದಲಿ
ಸುಗುಣರಿರ್ವರಿಗೆ ಕೋಳಿಯ ಕತ್ತಿಯ ಕೊಟ್ಟು
ಹೋಗಬಡಿದ [೩೩][ಹಗೆ][೩೩] ಯವನು ॥೨೭॥

ಘಡುಘಡಿಸುವ ಕೋಪ ಕಿಡಿಯನೆ ಉಗುಳುತ
ಕಡುಗಲಿ ಗುಂಡರಾಜೇಂದ್ರ
ಕಡಿದು ಕಡೆಗೆ ಮಾಡುವೆ ಕೈಯ[೩೪][ನೀಗೆನೆ][೩೪]
ಒಡನೆ ಕಾಚೇಂದ್ರನಿಂತೆಂದ ॥೨೮॥

ಹೇಳಿದೆನೆಲವೊ ನಿನ್ನಯ ಹಲ್ಲು ಬೇಗದಿ
ಬಾಳ ಜತನವೆಂದೆನುತ
ತಾಳಿದನುಗ್ರ ಕೋಪವ ಕಾಚಿ[೩೫][ನಾಯಕ][೩೫]
ಕೋಳಿ ಕತ್ತಿಯ ಪಿಡಿದನು ॥೨೯॥

ಮಂಡಿಯ ಹೂಡಿರಿದಾಡಿದರಿರ್ವರು
ಗಂಡುಗಲಿಗಳು ಮೂದಲಿಸಿ
ದಂಡೆಯನೊಡ್ಡಿದ ಗುಂಡರಾಜೇಂದ್ರನು
ಖಂಡಿಸುವೆನು ಕೈಯನೆನುತ ॥೩೦॥

ಎಂದ ಮಾತನು ಕೇಳುತ ಕಾಚಿನಾಯಕ
ನೊಂದು ಕೋಪದಲುರಿದೆದ್ದು
ಸಂದೇಹವಿಲ್ಲದೆ ಒಳಹೊಕ್ಕು ತಿವಿದನು
ಮುಂದುವರಿದು ದಂತದೆಡೆಗೆ ॥೩೧॥

ಹದುರಿಸಿ ಗುಂಡರಾಜನು ನನಗೀ ಗೊಲ್ಲ
ಇದಿರಾಗಿ ನಿಲುವ ಮನ್ನೆಯನೆ
ಕದನದಿಂದಿರಿಯಲು ಕಾಚಿನಾಯಕ ಹಲ್ಲ
ನುದುರಿಸಿ ಪಿಡಿದು ಕೂಗಿದನು ॥೩೨॥

೩೧+ವ(ಶಿ), ೩೨-೩೨ X(ಶಿ), ೩೩-೩೩ X(ಶಿ), ೩೪-೩೪ X(ಶಿ).೩೫-೩೫ X(ಶಿ).

ಕೇಳುತ ಕೈವಿಡಿದೂಳಿಗದವರೆಲ್ಲ
ಮೇಲಕೆ ತೆಗೆಯಲಾಕ್ಷಣದಿ
ಅಲವುತ್ತ ಬೊಬ್ಬಿರಿವುತ ಕಾಚಿನಾಯಕ
ವಾಲಗದೊಳು ಮುಂದಿಡಲು ॥೩೩॥

ಗೊಲ್ಲನೆನು[೩೬][ತ][೩೬] ಹಾಸ್ಯವ ಮಾಡಿದೆವು [೩೭][ನೀನು][೩೭]
ಬಲ್ಲಿದನಹುದೋ ಬೇಡೆನಲು
ಎಲ್ಲ ಸೌಭಾಗ್ಯವ ಕೊಟ್ಟಿದ್ದಿ ನೀ ಎನಗೆ
ಹಲ್ಲನೆ ಪಾಲಿಸು ಎನಲು ॥೩೪॥

ಹಲ್ಲೇನು ಪಾ[೩೮][ವ][೩೮]ನ ತೆಗೆದುಕೋ ಎನುತಲಿ
ಬಲ್ಲೆಹ ಪದಕ ಚೌಕಳಿ[೩೯][ಯ][೩೯]
ಬೊಲ್ಲನನಿತ್ತು ಪ್ರಭುಢರಾಯನು ಸೂಜಿ
ಗಲ್ಲೆಂಬ ದುರ್ಗವ ಕೊಟ್ಟ ॥೩೫॥

ಹೋಗು ನೀ ಬಲ್ಲಿದ ಕಾಚಿನಾಯಕ ನಮ್ಮ
ಬಾಗಿಲ ಕಾಯಬೇಡೆನು[೪೦][ತ][೪೦]
ಭೋಗದೊಳಿರು ನೀನೆನುತ ಪ್ರಭುಢರಾಯ
ಆಗ ಸಂತೋಷದಿ ಕಳು[೪೧][ಹೆ][೪೧] ॥೩೬॥

ಸೂಜಿಗಲ್ಲೆಂಬಾ ದುರ್ಗಕೆ ಸಲುವಂಥ
ರಾಜ್ಯವನ್ನೆಲ್ಲವ ಬಿಡಿಸಿ
ತೇ[೪೨][ಜದಿ][೪೨] ಪ್ರಭುಢರಾಯ[೪೩][ನು ತನ್ನ][೪೩]ಕಳುಹಲು
ರಾಜಾಧಿರಾಜನಾಗಿಹನು ॥೩೭॥

ಬಲ್ಲಿದ ಕಾಚಿನಾಯಕ ಗುಂಡರಾಜನ
ಹಲ್ಲನು[೪೪] ಚಮ್ಮಾ[೪೫][ವು][೪೫]ಗೆಗೆ
ನಿಲ್ಲದೆ ಹಾ[೪೬][ಕಿಸಿ ಮೆಟ್ಯಾ][೪೬]ಡುತ ರಾಯ
ಎಲ್ಲ ರಾಜ್ಯವನಾಳುತಿಹನು ॥೩೮॥

೩೬–೩೬ X(ಶಿ), ೩೭–೩೭ ನಿನ್ನು (ಶಿ), ೩೮–೩೮ ವಿ(ಶಿ), ೩೯–೩೯ X(ಶಿ), ೪೦–೪೦X(ಶಿ), ೪೧–೪೧ ಹಿ (ಶಿ), ೪೨–೪೨ X(ಶಿ), ೪೩–೪೩ X(ಶಿ), ೪೪–೪೪ + ತನ್ನ(ಶಿ), ೪೫–೪೫ ಳಿ(ಶಿ), ೪೬–೪೬ X(ಶಿ).

ಮಂಡಲಪತಿ ಪ್ರಭುಡೇಂದ್ರನುದರದಿ
ಗಂಡು ಸಂತಾನವಿಲ್ಲದಿ[೪೭][ರೆ][೪೭]
ಗುಂ[೪೮][ಡರಾಜ][೪೮]ನ ಸುತ ನರಸಿಂಹನ ಸಲಹಿ
ಕೊಂಡು ಪಟ್ಟವ ಕಟ್ಟಿದನು ॥೪೯॥

ಧುರಧೀರ ಕಾಚಿನಾಯಕನುದರದಲಾ
ಸಿರುಮಭೂಪಾಲನುದ್ಭವಿಸಿ
[೪೯][ಬೇ[[೪೯]ಗದಿ ಪ್ರಬುದ್ಧನಾಗಿ ಸಂತೋಷದಿ
ಸ್ಥಿರವಾಗಿ ರಾಜ್ಯನಾಳುತಿಹ[೫೦] ॥೫೦॥

ಪರಿವಾರ ಮೂರು ಸಾವಿರ ಬೂದಿಹಾಳೊಳು
ತುರಗದಳವು ಮುನ್ನೂರು
ಸರಿಯಾರು ತನಗೆ ಇಳೆಯೊಳು ಇಲ್ಲೆನಲು
ಸಿರುಮಭೂಪಾಲನೊಪ್ಪಿದನು ॥೫೧॥

ಸಿರಿಯ ಸಂತಾನ ಸೌಭಾಗ್ಯದ ದೆಸೆಯಿಂದ
ಬಿರಿದು ಪರಾಕ್ರಮದಲ್ಲಿ
ಹರುಷದಿಂದಲಿ ತಾನು ರಾಜ್ಯವನಾಳಿ[೫೧][ಯೆ][೫೧]
ಮರಣವಾದನು ಕಾಚೇಂದ್ರ ॥೫೨॥

ತಂದೆ ಮೆಟ್ಟಿದ ಚಮ್ಮಾ[೫೨][ವು][೫೨]ಗೆಯನು ತಾ
ನಿಂದು ಮೆಟ್ಟಲಿಬಾರದೆನುತ
ಕುಂದದೆ ಉಗುಳುವ ಪಡುಗಕೆ ಹಾಕಿಸಿ
ಕಂದರ್ಪರೂಪ ಸಿರುಮೇಂದ್ರ ॥೫೩॥

ಸುಗುಣ ಸಿರುಮ ತಂದೆ ಮೆಟ್ಟುವ ಚಮ್ಮಾ
[೫೩][ವಿಗೆ][೫೩]ಮೆಟ್ಟಬಾರದೆಂದೆನುತ
ತೆಗಸಿದ ಮಲೆವ ಮನ್ನೆರಗಂಡ ಸಿರುಮೇಂದ್ರ
ನುಗುಳುವ ಪಡುಗಕೆ ಹಾಕಿ ॥೫೪॥

೪೭–೪೭ರಲು (ಶಿ), ೪೮–೪೮ X(ಶಿ), ೪೯–೪೯ X(ಶಿ), ೫೦+ನು (ಶಿ), ೫೧–೫೧ X(ಶಿ), ೫೧–೫೧ X(ಶಿ), ೫೨–೫೨ಳಿ(ಶಿ), ೫೩–೫೩ ಳಿಗೆಯ ಮಿಗೆ(ಶಿ)

ಸ್ವ[೫೪][ರ್ಗಕೆ][೫೪]ಕಾಚಿನಾಯಕ ಚಿತ್ತೈಸಲು
ವ್ಯಾಘ್ರನ ಶಿಶುವಿನಂದದಲಿ
ಭರ್ಗನ ಕೃಪೆಯಿಂದ ದುರ್ಗವನಾಳುತ
ಉಗ್ರ ಸಿರುಮಭೂವರನು ॥೪೫॥

ಅ[೫೫][ತ್ತಲಾಕ್ಷಣ][೫೫]ದೊಳು ಪ್ರಭುಡರಾಜೇಂದ್ರನು
ಚಿತ್ತಯಿಸಲು ಸ್ವರ್ಗದೆಡೆಗೆ
ಒತ್ತಿ ಪಟ್ಟವನಾಳುತಲಿರ್ದ ನರಸಿಂಗ
ಅರ್ತಿಲಿ ಪೆನುಗೊಂಡೆಯೊಳಗೆ ॥೪೬॥

ಸೂಜಿಕಲ್ಲೊ[೫೬][ಳು ಕಾ][೫೬]ಚಿನಾಯಕನುದರದಿ
ರಾಜ್ಯಾಧಿಪತಿ ಸಿರುಮೇಂದ್ರ
ಪೂಜ್ಯದಿ ಜನಿಸಿ ಪ್ರಬುದ್ಧನಾಗಿರುತಲಿ
ತೇಜಿಯನೇರಿ ನಡೆವುತ[೫೭] ॥೪೭॥

ಮೊಲನ ಬೇಂಟೆ[೫೮][ಗೆ ಹೋಗಿ][೫೮]ಸಿರುಮಣ್ಣನಾಯಕ
ಮೊಲ ನಾಯನಟ್ಟುತ ಬರಲು
ಕಲಿಯೊಳು ಕಾದುವ ಬಲಿದುರ್ಗವಿದೆಂದು
ಒಲಿದು ಕಟ್ಟಿಸಿದ ಬೂದಿಹಾಳ ॥೪೮॥

ವಸುಧೆಗೆ ಹೊಯಿಸಳದೇಶ[೫೯][ಕಗ್ಗಳೆಯಾಗ][೫೯]
ಹೆಸರುಳ್ಳ ಬೂದಿಹಾಳಿನಲಿ
ಪಸರಿಸಿ ಕೀರ್ತಿವಡೆದ ಸಿರುಮೇಂದ್ರನು
ಅಸದಳ ಸಂಹಾರ[೬೦][ನವ][೬೦]ನು ॥೪೯॥

ಪಂಚಾಗ್ನಿದಿಕ್ಕಿಲಿ ಕಂಚಿನ ಕೋಟೆಯು
ಮಿಂಚುವ ತೆನೆ ಡೆಂಕಣಿಗಳು
ಪಂಚಗುಂಡಿಗೆ ಗೊಲ್ಲ ಸಿರುಮನೊ[೬೧][ಪ್ಪಿ][೬೧]ಹನಲ್ಲಿ
ಪಂಚಮುಖನ ಕರುಣದಲಿ ॥೫೦॥

೫೪–೫೪ X(ಶಿ), ೫೫–೫೫X(ಶಿ), ೫೬–೫೬ X (ಶಿ), ೫೭+ಲಿ(ಶಿ), ೫೮–೫೮ X(ಶಿ), ೫೯–೫೯ ದಿರ್ಗಳೆಯದಿ(ಶಿ), ೬೦–೬೦ X(ಶಿ), ೬೧–೬೧ ಪ್ಪುತಿ (ಶಿ).

ಹೊರಸುತ್ತಿನಗಳೊಳು ಒರತುಕ್ಕಿ ಜಲತುಂಬಿ
ತುರುಗಿಹ ಮೀನ್ಮೊಸಳೆಗಳು
ಮೊರೆದು ಕಾದುವರನು ಮುರಿದು ನುಂಗುವವೊಲು
ಬಿರುದಿನ ಬಿಂಕದೊಳಿ[೬೨][ಹವು][೬೨] ॥೫೧॥

ತೆನೆಗಳ ಮೇಲೇರಿಸಿದ ಕಲ್ಲು ಘನವಾಗಿ
ಅನುವಾಗಿ ಇಡುವ ಡೆಂಕಣಿಯು
ತನಗಿದಿರಾದ[೬೩]ಮೊನೆಯ ಮುರಿದು ಯಮನ
[೬೪][ಘನದ][೬೪]ಬಲನ ನುಂಗುವಂತೆ ॥೫೨॥

ಕಾಸುವ ಅಂಬಲಿ ಹುರಿದ ಮಳಲರಾಶಿ
ಸೂಸಿ ಸುಡುವ ಸುಣ್ಣಗದಡು
ಮೋಸದೊಳಾಳು ಪೊಕ್ಕಿರುವ ಚೋರಗಂಡಿ
ಲೇಸೆನಿಸಿತು ಬೂದಿಹಾಳು ॥೫೩॥

ಕೊತ್ತ[೬೫][ಳ][೬೫]ದೊಳು ಮೃತ್ಯುಗಳ ಪಾಳೆಯವು ದಂ
ಡೆತ್ತಿ ಬರಲು ನುಂಗುವಂತೆ
[೬೬][ಪೊತ್ತಿಹ][೬೬]ಶೂಲಗಳೆಂದೆನಿಸುವ ಬಲು
ಕೊತ್ತಳ ಕಣ್ಗೊಪ್ಪುತಿಹವು ॥೫೪॥

ಒಂದು ಕೊತ್ತಳ ರಾಮನಾಥನ ಕಾವಲು
ಒಂದು ಕೊತ್ತಳ ಭಯಂಕರನು
[ಒಂದು] ಕೊತ್ತಳ ಮೀಸರಗಂಡನೆನಿಸುವ
ಒಂದು ಕೊತ್ತಳ ಹೆಣ ರಣನು ॥೫೫॥

ಇತ್ತ ಪಡುವಲ ಬಾಗಿಲು[೬೭][ಕಾವ][೬೭]ಕಾವಲು
ಸತ್ಯಸ್ವರೂಪಿ ಎಂದೆನಿ[೬೮][ಸಿ][೬೮]
[೬೯][ಎತ್ತ][೬೯]ಲಾ ಭೀಕರದಿಂದೇಕನಾ*[ಥೆ]*ಯು
ನಿತ್ಯ ವಾರದಿ ಒಪ್ಪುತಿಹಳು ॥೫೬॥

೬೨–೬೨ ಹುದು(ಶಿ), ೬೩+ರ(ಶಿ), ೬೪–೬೪ ಉರಿವ (ಶಿ), * "ಶಿ" ಹಸ್ತಪ್ರತಿಯಲ್ಲಿ ೫೧ರ ತರುವಾಯ ೫೩ ಎಂದು ಪದ್ಯ ಸಂಖ್ಯೆ ಬರೆಯಲಾಗಿದೆ(ಸಂ), ೬೫–೬೫ X(ಶಿ), ೬೬–೬೬ X(ಶಿ), ೬೭–೬೭ ಕಾದಿರುವ(ಶಿ), ೬೮–೬೮ X(ಶಿ), *–* ರಿ(ಶಿ,ಹ), ೬೯–೬೯ X(ಶಿ)

ಮೂಡ[೭೦][ಲ][೭೦]ಬಾಗಿಲು ಅದು ಬಲು ಕಾ[೭೧][ವ][೭೧]ಲು
ಬೇಡಿದ ವರಗಳೆಲ್ಲರಿಗೆ
[೭೨][ನೀಡುತಲಿ][೭೨] ಹ*[ಕಪ್ಪರಿ]*ವೀರಯ್ಯ
ರೂಢಿಗೆ ಪೆಸರಾದ ದೇವ ॥೫೭॥

ಲಿಂಗದ ಗುಡಿ ಜಂಗಮದ ಬೀಡಾರವು
ಸಂಗ ನಿರಾಸೆಯಮಠ[ವು]
[೭೩][ಜಂಗಮು][೭೩] ಕೊಂದಿಕ್ಕಿ ತಾನೊಂದ ಸಲಿಸುವ
ಭಂಗಹೀನರ ಗಂಡ ಸಿರುಮ ॥೫೮॥

ನೋಟದಿಂ[೭೪][ಗಗ][೭೪]ನವ ಕಾಣೆವೆಂದೆನುತಲಿ
ಮೀಟಿನಲಾ[೭೫] . . . . .[೭೫]ದು
ಪಾಠಿಸಿ ನೋಡೆ ಕೈಲಾಸಕ್ಕೈದುವಂತೆ
ಕೋಟೆಯ ತೆನೆಯೊಪ್ಪುತಿಹವು ॥೫೯॥

ಪರಿವಾರ ಮೂರುಸಾವಿರ ಬೂದಿಹಾಳೊಳು
ತುರಗಬಲವು [೭೬][ಮುನ್ನೂರು][೭೬]
ಸರಿಯಾರು ತನಗಿಳೆಯೊಳು ಸಮವಿಲ್ಲೆಂದು
ಸಿರುಮಭೂಪಾಲನೊಪ್ಪಿದನು ॥೬೦॥[೭೭]

ಮದ[೭೮][ನ][೭೮]ನ ಸಮ[೭೯][ಮಲೆಯುವ] ಮಾನ್ಯರ ಗಂಡ
ಮುದದಿ ರಾಜ್ಯವನಾಳುತಿರಲು
ಕದನವಿಲ್ಲ[೮೦][ವ][೮೦]ದೇಕೆನುತಲಿ ತನಗೊಂದು
ಚದುರ ವಿನಯವ ತೋರಿದನು ॥೬೧॥

ಬಲ್ಲಿದ ಸಿರುಮೇಂದ್ರ ರಾಜ್ಯವನಾಳುತ
ಎಲ್ಲ ಮನ್ನೆ[೮೧][ರಿಗೆ ಸಾರಿದ][೮೧]ನು
ನಿಲ್ಲದೆ[೮೨][ಪಾಗುಡ][೮೨]ಕೊಡಹೇಳಿ ಊಳಿಗದ
ಮಲ್ಲನೆಂಬುವನ ಕಳುಹಿದನು ॥೬೨॥

೭೦-೭೦ ಎ(ಶಿ), ೭೧-೭೧ X(ಶಿ), *-* ತಪ್ಪದಾ (ಶಿ, ಹ), ೭೨-೭೨ Xದ (ಶಿ), ೭೩-೭೩. ಫ(ಶಿ), ೭೪-೭೪ X(ಶಿ), ೭೫-೭೫ X(ಶಿ). ೭೬-೭೬ X(ಶಿ) ೭೭ ಈ ಪದ್ಯ ೪೧ನೆಯದಾಗಿ ಹಿಂದೆ ಬಂದಿದೆ (ಸಂ), ೭೮-೭೮. X(ಶಿ), ೭೯-೭೯ ಲವ X(ಶಿ), ೮೦-೮೦ ಅ(ಶಿ), ೮೧-೮೧ X(ಶಿ), ೮೨-೮೨ ಪಗುದಿಯ(ಶಿ)

ಪೊಡವಿಪ ನರಸಿಂಹರಾಯನ ಸೀಮೆಯ
[೮೩][ಧೃಡ][೮೩]ಮನ್ನೆರಿಗೆ ವಾಲೆಯನು
ತಡೆಯದೆ[೮೪][ಪಾಗುಡ][೮೪]ಕೊಡಹೇಳಿ ಸಿರುಮೇಂದ್ರ
ಒಡನೆ ವಾಲೆಗಳನಟ್ಟಿದನು ॥೬೩॥

ಎಕ್ಕಟಿ ಗಂ[೮೫][ಗಯ್ಯನಿಗೆ ಇ][೮೫]ನ್ನು ವಾಲೆಯ
ನಿಕ್ಕಿದ ಊಳಿಗ[೮೬]ಮಲ್ಲ
ಚಿಕ್ಕರಸ[೮೭][ನ][೮೭]ಕರೆಸಲು ಬಂದನಾಕ್ಷಣ
ದೊಕ್ಕ[೮೮][ಣೆ][೮೮]ವಿಡಿ[೮೯][ದೋ][೮೯]ದಿದನು ॥೬೪॥

ಮಲೆವ ಮನ್ನೇರ್[೯೦][ಸಮೂಹ][೯೦]ಕಂಠೀರವ
ಚೆಲುವ ಸಿರುಮ*[ಗೆ]*ಗಂಗೆಯ*[ನು]*
ಒಲಿದುಡುಗೊರೆಯಿತ್ತು ಪಾಗುಡಿಯ ಕೊಡಹೇ[೯೧][ಳೆ][೯೧]
ಸಲೆ ಕರಣಿಕ ವಾಚಿಸಿದ ॥೬೫॥

ಆ ಮಾತ ಕೇಳಿ ಗರ್ದ[೯೨][ರಿ ನೆಲನೊ][೯೨]ದೆದು ನಿ
ಸ್ಸೀಮ ಗಂಗಯ್ಯ ಕೋಪಿಸಿದ
ಸೀಮೆಯ[೯೩][ರೊಕ್ಕವ][೯೩]ಕೊಡೆನೆಂದು ಮಲ್ಲನ
ತಾನು ಮುನಿದು ನೂಕಿಸಿದನು ॥೬೬॥

ಬಾಲಕ ಬುದ್ಧಿ[೯೪][ಯ ತೋರಿದ ಸಿ][೯೪]ರುಮನು
ತಾ ಲಯವಾಗುವುದರಿಯ
ವಾಲೆಯ ಬರೆಸಿ ಕಳು[೯೫][ಹೆ][೯೫]ಹಿರಿಯೂರಿಗೆ
ಲೋಲ ಗಂಗಯ್ಯ ಬೇಗದಲಿ ॥೬೭॥

ಬಂದ ವಾಲೆಯ [ನೀ]ಸಿಕೊಂಡು ಕಸವಣ್ಣ
ಒಂದಾರು ಭುಜವಾಗಿ ಹಿಗ್ಗಿ
ಬಂದು ತೇರಯ್ಯ [೯೬]ತಂದೆ ಸಲ್[೯೭][ಹೊ][೯೭]ಬೇಗ್[೯೮][ಹೋ][೯೮]
ಗೆಂದು ಕೈಪಿಡಿದೆತ್ತಿರ್ದ[೯೯][ನು][೯೯] ॥೬೮॥

೮೩–೮೩ X(ಶಿ), ೮೪–೮೪ ಪಗುದಿಯ(ಶಿ), ೮೫–೮೫ X(ಶಿ), ೮೬+ದ (ಶಿ), ೮೭–೮೭ ನು (ಶಿ), ೮೮–೮೮ ನೆ(ಶಿ), ೮೯–೮೯ ವೋ(ಶಿ), ೯೦–೯೦ X(ಶಿ), *–* X(ಶಿ), *–* ಗೆ(ಶಿ, ಹ), ೯೧–೯೧ ಳಿ(ಶಿ), ೯೨–೯೨ X(ಶಿ), ೯೩–೯೩ ರೋಖದ (ಶಿ), ೯೪–೯೪ X(ಶಿ), ೯೫–೯೫ ಹಿ(ಶಿ), ೯೬+ಗೆ(ಶಿ), ೯೭ ಹೆ(ಶಿ) ೯೮–೯೮ ಹಾ(ಶಿ), ೯೯–೯೯ ರು(ಶಿ)

ಬ [೧೦೦][ಂದು ಕಸ][೧೦೦] ವಿನಾಯಕ . . . ಮಿಡಿಗೇಶಿಗೆ
ನಿಂದನು ದ್ವಾರದ ಮುಂದೆ
ಚೆಂದದಿ ಇದಿರಾಗಿ ಬಂದ ಗಂಗಯ್ಯನು
ಅಂದು ಕೈವಿಡಿದೈದಿದರು ॥೧೯॥

ಹಿರಿ [೧೦೧][ಯೂರ][೧೦೧]ಕಸವಿನಾಯಕನ ಕರೆಸಿಕೊಂಡು
ನರಸಿಂಗರಾಯನ ಬಳಿಗೆ
ಇರದೆ ನಾವಿಬ್ಬರು ಹೋಗಿ ಬೂದಿಯಹಾಳ
ಸಿರುಮನ ಕೆಡಿಸಬೇಕೆಂ[೧೦೨][ದ][೧೦೨] ॥೨೦॥

ಹೀಗೆಂದು ಕಸವಿನಾಯಕ ಸಹಿತಲಿ ಹೋಗಿ
ಬೇಗದಿ ಪೆನುಗೊಂಡೆಗಾಗ
ಬಾಗೂರ ಗೋವಿಂದ ಗೊಲ್ಲ ಸಿರುಮನ
ನೀಗಬೇಕೆಂ[೧೦೩][ದ][೧೦೩]ಕೋಪ[೧೦೪][ದಲಿ][೧೦೪] ॥೨೧॥

ಬಿಟ್ಟ ಸೂಟಿಯಲಿ ನಿಲ್ಲದೆ ಪೆನುಗೊಂಡೆಯ
ಪಟ್ಟಣವನು ಹೊಕ್ಕರವರು
ದಿಟ್ಟ ನರಸಿಂಗರಾಯನೋಲಗದೊಳ
ಗಪ್ಪ[೧೦೫][ಐಶ್ವ][೧೦೫]ರ್ಯವೇನೆಂಬೆ ॥೨೨॥

ಚಿನ್ನ ಚಾವಡಿಯೊಳು ರಾಜಿಸುವ ಪೊಸ
ರನ್ನದ ಸಿಂಹಾಸನದಿ
ಉನ್ನತ ಐಶ್ವರ್ಯದಲಿ ವಾಲ[೧೦೬][ಗವಿ][೧೦೬]ದ್ದ
ಮನ್ನೆಯರೊಳು ನರಸಿಂಗ ॥೨೩॥

ಎಡಬಲದೊಳು ಪ್ರಧಾನ ಕರಣಿಕರು
ಪೊಡವಿಯನಾಳ್ವ ಮನ್ನೆಯರು
ಗಡಣಡಿ ಗಜಪತಿ ಅಶ್ವಪತಿಗಳ
ಒಡನಿತ್ತನೊಡ್ಡೋಲಗವ ॥೨೪॥

೧೦೦-೧೦೦X(ಶಿ), ೧೦೧-೧೦೧X(ಶಿ), ೧೦೨-೧೦೨ ದು(ಶಿ), ೧೦೩-೧೦೩ದು (ಶಿ), ೧೦೪-೧೦೪ X(ಶಿ). ೧೦೫-೧೦೫ X(ಶಿ), ೧೦೬-೧೦೬ X(ಶಿ)

ಗಂಡರ ಗಂಡ ಗರ್ವಿತ ರಾಯತಿಮಿರಮಾ
ರ್ತಂಡ ಶರಭಶಾರ್ದೂಲ
ಪುಂಡರೀಕಸಖಕುಲಶಿರೋಮಣಿ ಎಂದು
ಕೊಂಡಾಡಿದರು ಭಟ್ಟರುಗಳು ॥೭೫॥

ಬಂದು ಕಂಡರು ಕರಮುಗಿದಡ್ಡಬೀಳುತ
ನಿಂದು ಗಂಗಯ್ಯ ಕಸವಣ್ಣ
ನಿಂದಿರಲೀಸನು ಗೊಲ್ಲ ಸಿರುಮಣ್ಣ
೧೦೭[ನೆಂ]೧೦೭ದು ಬಿನ್ನಹವ ಮಾಡಿದರು ॥೭೬॥

ಗೊಲ್ಲ ಸಿರುಮ ನೆಣಗೊಬ್ಬಿಲಿ ನಮ್ಮನು
ನಿಲ್ಲಲೀಸನು ಸ್ವಾಮಿ ಕೇಳು
ಸಲ್ಲದ ಪಗುಡೆಯ ಬೇಡಿ೧೦೮[ಭೂಮಿ]೧೦೮ಯನು
ಎಲ್ಲವ ಹಾಳುಮಾಡಿದನು ॥೭೭॥

ಕಡಿಸಿದ ಅಡಿಕೆಯ ತೆಂಗಿನ ಬನವನು
ಒಡೆಸಿದ ಕೆರೆಯ ಕಾಲುವೆಯ
ತುಡುಕಿದ೧೦೯[ನಮ್ಮ]೧೦೯ಸೂರೆಯ ಮಾಡಿ ಹಿಡಿಯಾಳ
ಹಿಡುಕೊಂಡು ಹೋದ ಚಿತ್ತೈಸು ॥೭೮॥

ನಾಡು ನಾಡಿನ ಮನ್ನೆರ ಗಂಡನೆನಿಸಿಕೊಂ
ಡಾಡಿಸಿ ಎರಡು ಸತ್ತಿಗೆಯ
ಹಿಡಿಸಿದ೧೧೦[ನೆ]೧೧೦ಳಲ ನೇಜಯ ಮೀನಟೆಕ್ಕೆಯು
ಪೊಡವಿಪತಿಯ ಗಂಡನೆಂದು ॥೭೯॥

ನುಡಿದರು ಚಾಡಿಯ ಬಿಡದೆ ಮತ್ತೊಂದನು
ಪೊಡವಿಪನಡಿಗೆರಗುತಲಿ
ಕಡು ಮೂರ್ಖತನದಿಂದ ಗುಂಡರಾಜನ ಹಲ್ಲ
ಪಡುಗಕೆ ಹಾಕಿಕೊಂಡಿಹನು ॥೮೦॥

೧೦೭-೧೦೭ X(ಶಿ), ೧೦೮-೧೦೮ X(ಶಿ).೧೦೯-೧೦೯ X(ಶಿ), ೧೧೦-೧೧೦ X(ಶಿ)

ಕೇಳುತಲಾ ಮಾತ ನರಸಿಂಗರಾಯನು
ತಾಳಿದನುಗ್ರ ಕೋಪವನು
ದಾಳಿಲಿ ಗೊಲ್ಲನ ಹಿಡಿಯಾಳ ಹಿಡಿತಹೆ
ಹಾಳುಮಾಡುವೆ ಬೂದಿಹಾಳ ॥೮೧॥

ದೊರೆ ದೊರೆಗುಡುಗೊರೆ ವೀಳ್ಯವನಿತ್ತು
ಕರಿ ತುರಗ[೧೧೧][ಗಳ][೧೧೧]ಹೊರಡೆಂದು
[೧೧೨]. . . . .[೧೧೨]
ಭರದಿಂದ ರಾಯ ನೇಮಿಸಿದ ॥೮೨॥

ಕರೆಸಿದ ಪ್ರಧಾನ ಈಶ್ವರನಾಯಕನ
ಸಿರುಮನಿರುವ ಬೂದಿಹಾಳೊಳ್
[೧೧೩][ನೆರೆ][೧೧೩]ವರೆ ದಾರಿಯ ಪೇಳೆನಲಾಗಿ
ಕರವ ಮುಗಿದು ನಮಿಸಿದನು ॥೮೩॥

ಚಿತ್ತೈಸು ಸ್ವಾಮಿ ರೊದ್ದ ಹರುವಿಕೆರೆಯ
ಒತ್ತೀಲಿ ಮಿಡಿಗೇಸಿ ಮೇಲೆ
ಎತ್ತಿ ನ[೧೧೪][ಡೆವುದು][೧೧೪]ದಂಡೆಂದು ಬಿನ್ನೈಸಲು
ಇತ್ತ ಕೇಳಿದ ಪೊರಡುವರೆ ॥೮೪॥

ಆ ಶುಭಗ್ರಹ ತಿ[೧೧೫][ಥಿ][೧೧೫]ವಾರ ನಕ್ಷತ್ರವು
ತಾರೆಯು ಚಂದ್ರ ಹೋರೆಯು
ಲೇಸಿನ ಶಕುನ[೧೧೬][ಶುಭೋ][೧೧೬]ದಯದಲಿ ಧರ
ಣೀಶ ಹೊರಟ ನರಸಿಂಗ ॥೮೫॥

ಪಂಚ[೧೧೭][ಮಾ][೧೧೭]ವಾದ್ಯ ಮೊಳಗೆ ಪರಬಲ ಭೀಮ
ಪಂಚಕಲ್ಯಾಣಿ ಕೆಂಚ ನೀಲ
ಪಂಚರತ್ನದ [೧೧೮][ವರ][೧೧೮] ತುರಗವನೇರಿ
ಪಂಚಬಾಣನ ರೂಪ ನಡೆದ ॥೮೬॥

೧೧೧–೧೧೧ X(ಶಿ), ೧೧೨–೧೧೨ ಈ ಪದ್ಯದ ಮೂರನೆಯ ಸಾಲು ಹಸ್ತಪ್ರತಿಯಲ್ಲಿ ಬಿಟ್ಟುಹೋಗಿದೆ.(ಸಂ), ೧೧೩–೧೧೩ X(ಶಿ), ೧೧೪–೧೧೪ X(ಶಿ), ೧೧೫–೧೧೫ ನಿ(ಶಿ), ೧೧೬–೧೧೬ X(ಶಿ), ೧೧೭–೧೧೭ ಮ(ಶಿ), ೧೧೮–೧೧೮ X(ಶಿ)

ಪಾಳೆಯ ಬಿಡಿ ರೊದ್ದದ ಹೊನ್ನಹೊಳೆಯಲಿ
ಹೇಳಿದ ದಳವಾಯಿಗಳಿಗೆ
ಕೇಳಿ [೧೧೯]. . . . . . [೧೧೯]ದವೆಂದು ಹೊಯಿಸಿ ಗುಡಾರವ
ಆಳ ಕೋಹರನಿಕ್ಕಿಸಿದನು ॥೮೭॥

ಇನನಾಯಕ ಪಡುಗಡಲೊಳು ಮುಳುಗಲು
ಕನಲಿ ಕಾರ್ಗ[೧೨೦][ತ್ತಲೆ][೧೨೦]ಕವಿಯೆ
ಘನ ಹರುಷದಿ ದೀವಿಗೆಗಳೆಸೆದವು
ಇನಕುಲತಿಲಕನೋಲಗದಿ ॥೮೮॥

ರಾಜಾಧಿರಾಜ ಶ್ರೀ ವೀರನರಸಿಂಹನು
ರಾಜಾಧಿರಾಜರ ಕಳುಹಿ
[೧೨೧][ಭೋ][೧೨೧]ಜನ ಮಾಡಿ ಸಂತೋಷದೊಳಿರೆ ರವಿ
ರಾಜನು ತಲೆದೋರಿಸಿದ ॥೮೯॥

ಅಲ್ಲಿಂದ ಮುಂದಕೆ ನಡೆದನು ಮಿಡಿಗೇಶಿ
[೧೨೨][ಯ][೧೨೨]ಲ್ಲಿ ಬಿಟ್ಟಿತು ಪಾಳೆಯವು
ಬಲ್ಲಿ[೧೨೩][ದ][೧೨೩]ಬಂಟರ ಕರೆಸಿ ಕೋಹರಗಳಿ
ಗೆಲ್ಲರ ಕಟ್ಟು ಮಾಡಿದನು ॥೯೦॥

ಮುಂದಣ ನೆಲ ಗೊಲ್ಲ ಸಿರುಮನ ಸೀಮೆಯು
ಎಂದು ಪ್ರಧಾನಿ ಬಿನ್ನೈಸಿ
[೧೨೪][ಮಂ][೧೨೪]ದಿ ಕುದುರೆ ಪೌಜಿಕ್ಕಲು ನೋಡುವೆ
ಎಂದನು ನರಸಿಂಗರಾಯ ॥೯೧॥

ನಂದ್ಯಾಲದ ತಿಮ್ಮರಾಜ ಬಸವರಾಜ
ಕಂದನಹೊಳಲ[೧೨೫]. . . . .[೧೨೫]ರಾಜ
ಕೆಂಚೆಯ ಮಳಲ ಕಾಳಾಶ್ರೀರಾಜನು
ಚಂದ್ರಗಿರಿಯ ತಿಮ್ಮರಾಜ ॥೯೨॥

೧೧೯–೧೧೯ X (ಶಿ), ೧೨೦–೧೨೦ X (ಶಿ), ೧೨೧–೧೨೧ X (ಶಿ), ೧೨೨–೧೨೨ ಅ (ಶಿ), ೧೨೩–೧೨೩ X (ಶಿ), ೧೨೪–೧೨೪ X (ಶಿ)

ಮಧುರೆಯ ಕೃಷ್ಣಪ್ಪನಾಯಕ ಪಡಿವಿಡಿ
[೧೨೬]. . . . . . [೧೨೬] ನಾಯಕ ಮೆಟ್ಟೇರಿಯ
ಚದುರೆಯ ರಾಮಿನಾಯಕನು ಝಲ್ಲಿಯ ತಿಪ್ಪ
ದೇಮಿನಾಯಕನೆಂಬವನು ||೯೩||

ಗಂಡಿಕೋಟಿಯ[೧೨೭]. . . . .[೧೨೭]ರಾಯನು ಇನಿ
ಗೊಂಡೆ ಮಾದಿನಾಯಕನು
ದಂಡಿನ ತಿಮ್ಮಿನಾಯಕ ಮೊದಲಾದ
ಖಂಡೆಯ ರಾಯ ರಾಹುತರು ||೯೪||

ತುಳುವ ಅಲ್ಲೊಂದು[೧೨೮]. . . . [೧೨೮]ರ್ಮಳೆ
ಮಲೆಯಾಳ ಮುಸುಡಿನಾಯಕನು
ಹಳೆಯಬೀಡಿನ ಹನುಮಣ್ಣ ಜಗಜಟ್ಟಿಯು
ತಳಕಲ್ಲ ನಾಗಿನಾಯಕನು ||೯೫||

[೧೨೯][ಮೇ][೧೨೯]ದಿನಿರಾಜ ಗು[೧೩೦][ಜ್ಜ][೧೩೦]ಲ ಬುಕ್ಕಿನಾಯಕ
ನಾದ ಮುಮ್ಮಡಿ ಸಿಂಗಯ್ಯ
ಆದವಾನಿಯ ಅನಿಸಿನಾಯಕ ಹೊಸವೂರ
ಮಾದಿನಾಯಕನೂ[೧೩೧]. . . .[೧೩೧] ||೯೬||

ಬೋಳಿಯ ಬೊಮ್ಮಿನಾಯಕ ಕಾಮಗೇತಿಯ
ಮಾಳಿನಾಯಕ ಕೋಗಿಲೂರ
ದಾಳಿನಾಯಕ ಪೂವಲೂರ ಸೋಮಣ್ಣನು
ಪಿ[೧೩೨]. . . . [೧೩೨]ಮಿನಾಯಕನು ||೯೭||

ಮುಕ್ಕಣ್ಣ ಬಲ್ಲೆಹ ಅಂಕುಶರಾಯ ರಣ
ರಕ್ಕಸ ಗೋಸಲರಾಯ
ಎಕ್ಕೆಯಹಳ್ಳಿಯ ಗೋಪಾಲನಾಯಕ
ಇಕ್ಕಿದರ[೧೩೩][ಲ್ಲಿ ಫೌ][೧೩೩]ಜುಗಳ ||೯೮||

೧೨೫–೧೨೫ X (ಶಿ), ೧೨೬–೧೨೬ X(ಶಿ), ೧೨೭–೧೨೭ X(ಶಿ), ೧೨೮–೧೨೮ X(ಶಿ), ೧೨೯–೧೨೯ X (ಶಿ), ೧೩೦–೧೩೦ ಜ್ಜಾ(ಶಿ), ೧೩೧–೧೩೧ X(ಶಿ), ೧೩೨–೧೩೨ X(ಶಿ), ೧೩೩–೧೩೩ X (ಶಿ)

ಕರಿ ಮೂರುಸಾವಿರ ಏಳುನೂರೆಪ್ಪತ್ತು
ತುರಗದಳವು ಅದು ಲಕ್ಷ
ಹರಿಗೆ ಗದೆಯು ಬಿಲ್ಲು ಹದಿನಾರು ಲಕ್ಷವು
ಭರದಿಂದ ಪವುಜ ಮ[೧೩೪]. . . .[೧೩೪] ॥೯೯॥

ಈ ಪರಿಯಲಿ ದೊರೆದೊರೆಗಳ ಪೌಜನು
ತಾ ಪರಿಣಾಮಿಸಿ ನೋಡಿ
ಭೂಪತಿಗಳಿಗುಡುಗೊರೆಯಿತ್ತು ತಾನಾಗ
[೧೩೫]. . . [೧೩೫]ಮೂಬಾಣನ ರೂಪ[೧೩೬]. . .[೧೩೬]ರಂ ॥೧೦೦॥

ಮುಂದಕೆ ನಡೆ ದಂಡನೆಂದು ಬಿನ್ನೈಸಲು
ಹಿಂದಕೆ ಧುಮ್ಮೆ ದಾರಿಯನು
ಚಂದಿಯ ಕಾಳಾಸ್ತ್ರೀರಾಜನ ವಾಸವು
[೧೩೭]. . . . [೧೩೭]ಳ್ಳೈವ ಕೂಚೆಮಾಡಿ ॥೧೦೧॥

ನಡೆಯೆ ಕಮಠನೆದೆ ಜಡಿಯೆ ದಿಗ್ಗಜ ತಲೆ
*[ಯೊ]*ಡೆಯೆ ಅಹಿರಾಜನೊಲೆಯೆ
ಹೊಡೆವ ವಾ[೧೩೮][ದ್ಯದ ರಭಸ][೧೩೮]ಕೆ ಪರ್ವತಗಳು
ಸಿಡಿಯೆ ಬ್ರಹ್ಮಾಂಡ ಘಟ ಒಡೆಯೆ ॥೧೦೨॥

ತುರಗ ಗಜವು ಕಾಲಾಳು ನಡೆಯೆ ಧೂಳು
ಭರದಿ ರವಿಯ ಬಿಂಬ ಮುಸುಕೆ
ಭ. . . .ಳೆ ಎಲಿಯ ಭರವೆಂದು
ಸುರರು ಖೇಚರರದಿ ನೋಡಿದರು ॥೧೦೩॥

ಪಾಳ್ಯವು ಬಿಜ[೧೩೯][ವಾ][೧೩೯]ರದಿ ಬಿಡೆ ಬೇಹಿನ
ಆಳು ದಂಡನೆ ಹೊಕ್ಕು ನೋ[ಡಿ]
[೧೪೦][ಬೀಳುತೇಳುತಬಂ][೧೪೦]ದು ಚರರು ಬೂದಿಹಾಳ
ಸಿರುಮಗೆ ಬಿನ್ನೈಸಿದರು ॥೧೦೪॥

೧೩೪–೧೩೪ X (ಶಿ), ೧೩೫–೧೩೫X (ಶಿ), ೧೩೬–೧೩೬ X(ಶಿ), ೧೩೭–೧೩೭(ಶಿ), *_* ಗೊ(ಶಿ), ೧೩೮–೧೩೮ X(ಶಿ), ೧೩೯–೧೩೯ ಹಾ(ಶಿ), ೧೪೦–೧೪೦ X (ಶಿ)

ಬಂದ ಚರರಿಗುಡುಗೊರೆ ವೀಳ್ಯವ ಕೊಟ್ಟು
ಕಂದರ್ಪರೂಪ ಸಿರುಮೇಂ[೧೪೧][ದ್ರ
ಕಂದ][೧೪೧]ಕೊಮಾರಮಲ್ಲ ಕಾಚನ ಕರೆಸಲು
ಬಂದರು ಚಾವಡಿಗಾಗ ॥೧೦೫॥

ತಂದೆಯ ಚರಣಕ್ಕೆರಗಿ ಕೊಮಾರಮಲ್ಲ
ನಿಂದು ಕೈಮುಗಿದು ನುಡಿ[೧೪೨][ದನು][೧೪೨]
ಬಂದ ದಂಡನು ಕಗ್ಗೊಲೆಯಲಿ ಕಡಿವೆನು
ಎಂದು ವೀಳ್ಯವ ಬೇಡಿದನು ॥೧೦೬॥

ಗೆಲವಿಂದ ಸಿರುಮೇಂದ್ರ ನಸುನಕ್ಕು ಮಲ್ಲಣ್ಣ
ನಲು[೧೪೩]. . . . .[೧೪೩]ಗೆ ಈ ಬಿರಿದು
ಭಲರೆ ಕೊಮಾರ ನೀನಹುದೆಂದು ಬಿಗಿಯಪ್ಪಿ ಕೊ
ರಳ ಪದಕವ ಕೊಟ್ಟನೊಲಿದು ॥೧೦೭॥

ಬಂದು ಬಿಜ್ಜಾವಾರದಲ್ಲಿಳಿದ ದಂಡ
[೧೪೪][ಹಿಂದೆ][೧೪೪]ನಡೆ[೧೪೫][ಯಿಸದಿದ್ದರೆ][೧೪೫]
ಎಂದೆಂದು ತನಗೆ[೧೪೬][ಶಸ್ತ್ರಾಸ್ತ್ರ][೧೪೬]ಸನ್ಯಾಸ
ವೆಂದು ಕಾಚ[೧೪೭][ನು][೧೪೭]ಎದ್ದು ನುಡಿದ ॥೧೦೮॥

ಆ ಮಾತಿಗೆ ಮೆಚ್ಚಿ ಸಿರುಮ[೧೪೮] ಕಾಚೇಂದ್ರಗೆ
ಪ್ರೇಮದಿಂದುಡುಗೊರೆಯಿತ್ತು ನಿ
ಸ್ಸೀಮಗೆ ಕೊಟ್ಟು ಉಡುಗೊರೆ ವೀಳ್ಯವನಿತ್ತು
ಕಾಮಿನಿ ಚಿಕ್ಕಾಯ ಕರೆಸಿ ॥೧೦೯॥

ಸರಸಿಜದಳವ ಪೋಲುವ ಕಂಗಳ ನೀ[೧೪೯][ರೆ
ನರ][೧೪೯] ಸಿಂಗರಾಯನ ದಂಡು
ಧರೆ ಬೆಸಲಾದಂತೆ ಬಿಜವಾರವೆಂದೆಂಬ
ಪುರದಲ್ಲಿ ಬಿಟ್ಟಿತೆಂದೆನಲು ॥೧೧೦॥

೧೪೧–೧೪೧ X (ಶಿ), ೧೪೨–೧೪೨ X(ಶಿ), ೧೪೩–೧೪೩ X(ಶಿ), ೧೪೪–೧೪೪X (ಶಿ), ೧೪೫–೧೪೫ ಯಿನಿಸಿದರೆ(ಶಿ), ೧೪೬–೧೪೬ ಶಸ್ತ್ರ(ಶಿ), ೧೪೭–೧೪೭X (ಶಿ), ೧೪೮+ನು(ಶಿ), ೧೪೯–೧೪೯X (ಶಿ)

ಸಂತೋಷದಲಿ ಕೇಳಿ ಸತಿ[೧೫೦][ಶಿರೋಮಣಿ][೧೫೦]ತನ್ನ
ಕಾಂತನ ಪಾದಕೆರಗಿದಳು
ಕಂತುಸಮಾನ ಸಿರುಮ ನಿನ್ನ ಸಾಹಸ
ವೆಂತು ನಾ ಪೊಗಳಿ ಪೇಳುವೆನು ॥೧೧೧॥

ನಕ್ಕ ತನ್ನಿ[೧೫೧]. . . . .[೧೫೧]ಕೆಯಂ ಬಿಗಿಯಪ್ಪ ಪೆ
ಣ್ಮಕ್ಕಳ ನೊಸಲ ಮಾಣಿಕವೆ
ಚಿಕ್ಕಾಯಿ ನೀನೆನಗೆ ತಕ್ಕವಳೆಂದು
ಅಕ್ಕರಿಂದಲಿ ಸಂತೈಸಿ ॥೧೧೨॥

ಬರಸಿದ[೧೫೨][ತಾನೋ][೧೫೨]ಲೆಯ ಗೋವಿಂದಗೆ
ನರಸಿಂಗರಾಯನ ದಂಡು
ಬರುತಿದೆ ಬಿಜವಾರದಿಂದಲಿ ಮುಂದಕೆ
ಧುರಗಲಿ ತಾನು ನೀನೆಂದ ॥೧೧೩॥

ಓಲೆಯ ನೋ[೧೫೩]. . . . .[೧೫೩]ಡು ಶ್ರೀರಂಗಗೆ
ಹೇಳಿದ ಗೋವಿಂದನಾಯಕನು
ಆಳು ಕುದುರೆ ಸಹವಾಗಿ ಕಣಿವೆಯಕಟ್ಟಿ
ಹತ್ತಿ ಹೊಯ್ಯಲಿಬೇಕೆನುತ ॥೧೧೪॥

ಇತ್ತಲೀ ರಾಯನು ಬಿಜವಾರ [೧೫೪]ಮುಂದಕೆ
ಎತ್ತಿ ನಡೆದು ಬರುತಿರಲು
ಸುತ್ತಲಿ ಗಿಡ ಮೇರುವೆಯ ಕಣಿವೆಯಕಟ್ಟಿ
ಹತ್ತಿ ಹೊಯ್ಯಲು ಬೇಕೆನುತ ॥೧೧೫॥[೧೫೫]

ಕಗ್ಗಂಟಿಕೆ ಆಳು ಕುದುರೆ ಸಹಿತ
ಲಗ್ಗೆ ಮಾಡುತ ತಿಮ್ಮರಾಜ
ಒಗ್ಗಾಗಿ ನಡೆಯೆ ಗೋವಿಂದನ ಸುಭಟರು
ಬಗ್ಗನೆ ತಾಕಿ ಬೊಬ್ಬಿರಿಯೆ ॥೧೧೬॥

೧೫೦–೧೫೦X(ಶಿ),೧೫೧–೧೫೧X(ಶಿ), ೧೫೨–೧೫೨X(ಶಿ), ೧೫೩–೧೫೩ X(ಶಿ), ೧೫೪+ ದಿಂದಲಿ(ಶಿ), ೧೫೫. ಪದ್ಯ ೧೧೪ರಲ್ಲಿ ೧೧೫ರ ಕೊನೆಯ ಒಂದೂವರೆ ಸಾಲು ಸೇರಿಕೊಂಡಿದೆ (ಸಂ).

ಕಂಡಿಯ ಕುಟ್ಟಿ ಕವಿದೆಚ್ಚು ಖೋಲೊಲೊ ಎಂದು
ಲೆಂಡ ಗಜ ಕದಳಿವನವ
ದಿಂಡುದರಿದು ಕಾದಿರಿದು ಪಚಾರಿಸಿ
ಕೊಂಡು ಹೆಸರ ಹೇಳುವರು ।೧೧೭॥

ಬಿಲ್ಲ ತಿಮ್ಮನು ಬಲ್ಲಿದ ಕಸವಿರಾಜ
ಮಲ್ಲ ಬುರುಡಗ ತಮ್ಮುಗನು
ಝುಲ್ಲಿಯ ಬಸವ ಮೀನಿಗ ಕಾಚನೆಚ್ಚು ಗಡೆ
ಯಲ್ಲಿ ತಿವಿದು ನೂಕಿದರು ॥೧೧೮॥

ಮುಂದಲೆ ಮುಂದಲೆಗಳ ಪಿಡಿದಿರಿದು ಗೋ
ವಿಂದನ ಹೆಸರ ಹೇಳುವರು
ತಂದ ತಲೆಯ ೧೫೬[ನೊ]೧೫೬ ಡೆಯಗೆ ನಿವಾಳಿಸಿ
ಮಂದಿ ಕುದುರೆಗಳ ಇರಿದು ॥೧೧೯॥

ಗ ೧೫೭[ಡೆ]೧೫೭ಯ ತಿಮ್ಮನು ಹರಿಗೆಯ ಕನಕನು ಬುಳ್ಳ
ಇಡು ಮುರಾರಿ ಸೂರಸೋಮ
ಬಿಡದೆ ಕುದುರೆಯ ಹಿಮ್ಮಡಕೆ ಹೊಯಿದು ತ-
ಮ್ಮೊಡೆಯ ಗೋವಿಂದ ನೋಡೆನುತ ।೧೨೦॥

ಮುನ್ನೂರು ಕುದುರೆಯ ಒಂದು ವಾಘೆದಲ್ಲಿ
ಚೆನ್ನಿಗ ಗೋವಿಂದ ನೋ೧೫೮[ಡೆ]೧೫೮
ಮನ್ನೆಯರೆಲ್ಲ ಮುರಿದು ಬೆನ್ನಾಗಲು
ಹನ್ನೆರಡಾನೆಯ ಹಿಡಿದ ।೧೨೧॥

ಹೊಕ್ಕಿರಿದರು ಹೊಂತಕಾರಿ ರಾಹುತರು ಕೈ
ಸಿಕ್ಕಿದವರನೆಲ್ಲ ಬಿಟ್ಟು
ಮುಕ್ಕಣ್ಣ ಬಲ್ಲೆಹದ ಗೋವಿಂದಗೆ
ಎಂಟುದಿಕ್ಕಿನೊಳಗೆ ಪ್ರತಿಯಿಲ್ಲ ॥೧೨೨॥

೧೫೬–೧೫೬ ವ(ಶಿ), ೧೫೭–೧೫೭ ಧೆ(ಶಿ), ೧೫೮–೧೫೮ X(ಶಿ)

ಚೂಣಿಲಿ ಮುರಿದೋಡಿ ಬರುವ ಮನ್ನೆಯರನು
ಕಾಣುತ ನರಸಿಂಗರಾಯ
[೧೫೯][ಆನೆ][೧೫೯]ಯನೇರಿ ಬರಲು ದೊರೆಗಳು ತಮ್ಮ
ಪ್ರಾಣದಾಸೆಯನೆಲ್ಲ ಬಿಟ್ಟು ॥೧೨೩॥

ಹೊಣಕೆ ಹೊಣಕೆಯ ರಾಹುತರು ಪಚಾರಿಸಿ
ಕಣಿ ಖಟಿಲೆನೆ ಕು[೧೬೦]. . . . .[೧೬೦]ದೀ
ಗೊಣಸಿನ ನೇಣ ಸರಿದಂತೆಯಾರಲು
ಹೊಣಕೆ ಹೊಣಕೇಲಿ ಕಡಿದಾಡಿ ॥೧೨೪॥

ತಿಮ್ಮಿನಾಯಕ ಬಲ್ಲೆಹದಲ್ಲಿ ತಿವಿಯಲು
ಚಿಮ್ಮಿ[೧೬೧][ಗೋ][೧೬೧]ವಿಂದನಾಯಕನು
ಘಮ್ಮನೆ ಇರಿಯೆ ರಾಹುತ ನೆಲಕೆ ಬೀಳೆ
ಪೆಮ್ಮನವಾಗಿ ಇರಿದಾಡೆ ॥೧೨೫॥

ಕಡಿಯೆ ತಲೆಯ ಚಿಪ್ಪೊಡೆಯೆ ಕರುಳು ಖಂಡ
ಒಡನೆ ರಾಹುತರೆಲ್ಲ ಮಡಿಯೆ
ತಡೆಯದೆ[೧೬೨][ಮುಂದೆ][೧೬೨]ಹೆಜ್ಜೆಯನಿಟ್ಟು ಸುಭಟರ್ಗೆ
ಮೃಡನಿತ್ತ ಸುರಪದವಿಯನು ॥೧೨೬॥

ಎಲ್ಲಿ ಹೊಕ್ಕರೆ ಬಿಡನೆನುತಲಿ ತೆಲುಗರು
ನಿಲ್ಲಲಾರದೆ ಬಿಲ್ಲ ಬಿಸುಟು
ಚೆಲ್ಲವರಿದು ಹುತ್ತ ಮರಕೆ ಹೊಕ್ಕವ
ರೆಲ್ಲರ ಪ್ರಾಣವ ಕಾಯ್ದು ॥೧೨೭॥

ತಾಗಿದಬ್ಬರಕೆ ತಾಳಲಾರದರಿಗಳು
ಸಾಗಿ ಹೋಗಲು ಕಂಡಕಡೆಗೆ
ಹೋಗಬೇಡವು ತಿರುಗೆಂದು ಪಚಾರಿಸಿ
ಬಾಗೂರು ಗೋವಿಂದ ಹೊಕ್ಕ ॥೧೨೮॥

೧೫೯–೧೫೯ X(ಶಿ), ೧೬೦–೧೬೦ X(ಶಿ), ೧೬೧–೧೬೧ X(ಶಿ), ೧೬೨–೧೬೨ ಮುಂದಕ್ಕೆ(ಶಿ)

ಹಿಂದೆ ಸಿಕ್ಕಿದವರ ಹಿಡಿವುತ ಕಡಿವುತ
ಮುಂದಕ್ಕೆ ಪಾಳಯ ನಡೆಯೆ
ಬಂದತಿ ಮೊಗೆಯಲಿ ಪಾಳ್ಯವ ಬಿಡಲರ
ವಿಂದಸಖ ಕಡಲೊಳ್ಮುಳುಗೆ ॥೧೨೯॥

[೧೬೩][ಹಬ್ಬೆ ತಮವು][೧೬೩]ಬೇಗ ಗಗನದೊಳತಿ ತಾರೆ
[೧೬೪][ಉ][೧೬೪]ಬ್ಬಿನಿಂದಲಿ ತೋರಿದವು
ನಿಬ್ಬರದಲಿ ಚಂದ್ರ ಪೂರ್ವಗಿರಿಯನೇರೆ
ಉಬ್ಬಿದವಾ ಕುಮುದಗಳು ॥೧೩೦॥

ಕುಮುದಗಳರ[೧೬೫][ಳ][೧೬೫]ಲಾ ಕುಣಿದಾಡಿ ಚಕೋ*[ರ]*
ಸುಮನದಿ ಜೊನ್ನವ ಸವಿದು
ಮಮತೆಯಿಂದಿರಲು ಮಚ್ಚರದಿ ಕುಕ್ಕುಟ ಕೂಗೆ
ದ್ಯುಮಣಿ ಪುಟ್ಟಿದ ಪೂರ್ವದಲ್ಲಿ ॥೧೩೧॥

ಮೂಡದೆಸೆಯು ಕೆಂಪೇರಿತಾಗ[೧೬೬]. . . . .[೧೬೬]ರೆಯ
ತೀಡೆ ತಂಗಾಳಿ ಮುಂಬರಿಯೆ
ಪಾಡುವ ಗಿಳಿವಿಂಡು ಪದ್ಮಗಳ ರ[೧೬೭][ಳ್ದ][೧೬೭]ವು
ಕೂಡಿ ರವಿಯು ತಲೆದೋರೆ ॥೧೩೨॥[೧೬೮]

[೧೬೯]. . . . .
. . . . [೧೬೯]ವಂದ್ಯನೆ ಶರಣು
ನರಸಿಂಹನೆದ್ದು ನಾಮತೀರ್ಥವ ಮಾಡಿ
ಧುರಕೆ[೧೭೦][ಸೇ][೧೭೦]ನೆಯು ಸಹ ನಡೆದ ॥೧೩೩॥

[೧೭೧]. . . . .[೧೭೧]ಹಳ್ಳಿಗಳು
[೧೭೧]. . . . .[೧೭೧]
ದಾರಿ ದಾರಿಗೆ ದಾಳಿಯ ಹರಿದು ಕಡಿದು ಬಾ
ಗೂರು ಮುತ್ತಿಗೆಯ ಹಾಕಿದರು ॥೧೩೪॥

೧೬೩-೧೬೩ ಹಬ್ಬಿತೆನಿಸಿ(ಶಿ), ೧೬೪-೧೬೪ X(ಶಿ), ೧೬೫-೧೬೫ X(ಶಿ), *_* X (ಶಿ), ೧೬೬-೧೬೬ X (ಶಿ), ೧೬೭-೧೬೭ ಳ(ಶಿ), ೧೬೮ 'ಶಿ' ಪ್ರತಿಯಲ್ಲಿ ಇಲ್ಲಿಂದ ಮೂರು ಗರಿಗಳು (೧೭,೧೮,೧೯) ಮುರಿದಿರುವದರಿಂದ ಈ ಸಂಧಿಯ ಕೊನೆಯ ವರೆಗಿನ ಯಾವ ಪದ್ಯವೂ ಪೂರ್ಣ ಸಿಗುವುದಿಲ್ಲ (ಸಂ). ೧೬೯-೧೬೯ X (ಶಿ), ೧೭೦-೧೭೦ ಶಾ (ಶಿ), ೧೭೧-೧೭೧ X(ಶಿ), ೧೭೧-೧೭೧ X(ಶಿ)

[೧೭೨]. . . . .[೧೭೨]
ಡೆತ್ತಿ ರಾಯನ ನೋಡಿ
ಸುತ್ತ ಮುತ್ತಿಗೆಯಾಯಿತು ಬಾಗೂರಿಗೆಂದು
ಮತ್ತೆ ಚರರ ಕಳುಹಿದನು ॥೧೩೫॥

[೧೭೩]. . . . . [೧೭೩]ಳ ಹೊಕ್ಕು
ಮುಂದಿರಿಸಿದರು ಓಲೆಯನು
ಕಂದರ್ಪರೂಪ ಸಿರುಮೇಂದ್ರನ ಇದಿರಲಿ
ನಿಂದೋದಿದರು ॥೧೩೬॥

. . . . .ಸಿಂಹ
ನಿಸ್ಸೀಮರ ಭೀಮ ಲಲಾಮ
ಭೂಮಿಪಾಲಕ ಸಿರುಮೇಂದ್ರಗೆ ಗೋವಿಂದ
ಪ್ರೇಮದಿ ಮಾಳ್ಪ ಬಿನ್ನ[೧೭೪][ಪವ][೧೭೪] ॥೧೩೭॥

[೧೭೫] . . . .
. . . . [೧೭೫]ಹರಿದು ಮುತ್ತಿದನು
ನಾಳಿನ ಉದಯಕೆ ಸುರಿತಾಳ ಲೆಗ್ಗೆಗೆ ಎಂದು
ಪಾಳ್ಯದೊಳು ಸಾರಿದರು ॥೧೩೮॥

[೧೭೬]. . . . .[೧೭೬]
ಮ್ಮರಸು ಗೋವಿಂದನಾಯಕಗೆ
ನರಸಿಂಗರಾಯನ ದಂಡು ಜತನವೆಂದು
ಚರರ ಕಳುಹಲೊಂದು ಸಂ[೧೭೭][ಧಿ][೧೭೭] ॥೧೩೯॥

❖❖

೧೭೨–೧೭೨ x(ಶಿ), ೧೭೩–೧೭೩ x(ಶಿ), ೧೭೪–೧೭೪ x(ಶಿ), ೧೭೫–೧೭೫ x(ಶಿ), ೧೭೬–೧೭೬ x(ಶಿ).೧೭೭–೧೭೭ x(ಶಿ).

ಸಂಧಿ : ಎರಡು

[*]ಮುತ್ತಿಗೆ ಬಾಗೂರಿಗಾಗಲು ಸಿರುಮನು
ಹೆತ್ತ ಮಗನ ಕಾಚಯ[೧]ನ
ಉತ್ತಮ ಕೋಟೆ[*][ಗೆ ಕಳು][*]ಹುವ ಕಥೆಯನು
ಚಿತ್ತೈಸಿ[೧]ಸಕಲ ಸಜ್ಜನರು ॥೧॥

ಬಕ್ಕಟ ಬಯಲಿಗೆ ಗೋವಿಂದನಾಯಕ
ಸಿಕ್ಕಿದ ಬಾಗೂರಿನೊಳಗೆ
[೨]ಹೊಕ್ಕು ಬಿಡಿಸುವರ ಕಳುಹಬೇಕೆನುತಲಿ
ಅಕ್ಕಟೆನುತ ಸಿರುಮೇಂದ್ರ[೨] ॥೨॥

[೩]ತನ್ನ ಕೊಮಾರರೊಳುನ್ನಿಸಿ ಕರೆದನು
ಮನ್ನಿಸಿ ಕಂದ ಕಾಚಯನ
ಕನ್ನೆಗಾಳಗವು ನಿನಗೆ ಬಾಗೂರಿಗೆ
ಚೆನ್ನಿಗ ಸಿರುಮ ಹೋಗೆನಲು ॥೩॥

ಸಿಡಿಲ ಮರಿ[೪][ಯು][೪] ಸಿಂಹದ ಶಿಶು ಗಡಣದಿ
ಒಡನೆದ್ದು ಕಂದ ಕಾಚಯ್ಯ
ನುಡಿದ [೫]ಪಂಥದಲಿ ತಂದೆಗೆ ಕಾಚಯ್ಯ
ಕಡುಗಲಿ ಹೋಗುವೆನೆಂದ[೫] ॥೪॥

---

* 'ಶಿ' ಪ್ರತಿಯ ಮಾರ್ಜನ್ನಿನಲ್ಲಿ "ಬಾಗೂರಿಗೆ ಕಾಚಯ್ಯನ ಕೊಟ್ಟು ಕಳುಹಿದ ಪ್ರಸಂಗ" ಎಂದು ಬರೆಯಲಾಗಿದೆ. ಆಮೇಲೆ "ಶ್ರೀ ಗುರುಭ್ಯೋನಮಃ। ಪದನು" ಎಂದು ಪ್ರಾರಂಭವಾಗುತ್ತದೆ. ೧೫,೧೬,೧೭ನೆಯ ಗರಿಗಳು ಅರ್ಧ ಮುರಿದಿರುವುದರಿಂದ ಇಲ್ಲಿಂದ ೨೧ನೆಯ ಪದ್ಯದ ವರೆಗಿನ ಯಾವ ಪದ್ಯವೂ ಪೂರ್ಣ ಸಿಗುವುದಿಲ್ಲ (ಸಂ), ೧–೧x(ಶಿ), * _ * x (ಶಿ,ಹ), ೨–೨ x (ಶಿ), ೩–೩ಕನ್ನಗಾಳಗವು ನಿನಗೆ ಬಾಗೂರಿಗೆ ಮನ್ನಿಸಿ ಕಂದ ಕಾಚಯ್ಯನ ತನ್ನ ಕುಮಾರರೊಳ(ಶಿ), ೪–೪ ಯ(ಶಿ), ೫–೫ x(ಶಿ).

ಮಗನ ಸಾಹಸಕೆ ತಕ್ಕೈ್ಸಿ ಓಲಗದೊಳು
ಬೊಗಸೆ ಕರ್ಪುರದ ವೀಳ್ಯವನು
[೬]ಸುಗುಣ ಕೊಮಾರ ಕಾಚಗೆ ಕೊಟ್ಟು ಸಿರುಮೇಂದ್ರ
ಮುಗುಳು[೬] ನಗೆಯ ನಗುತಿರ್ದ ॥೫॥

ಎಂಟು ದೆಸೆಗೆ ಗಂಡಭೇರುಂಡ ಸಿಂಹದ
ಘಂಟೆಯ ಕೊರಳ[೭] ಕಾಚಯ್ಯ
ಬಂಟರೊಳಗೆ ಮಣಿಕಟ್ಟು ನೀ ಮುತ್ತಿನ
ಕಂಠ[೭]ಮಾಲೆಯ ಕೊಳ್ಳೊ ಮಗನೆ ॥೬॥

ರಂಗ ಮಾಣಿಕದ ಪೊಂಗಲು ಕಟಕುಂಗುರ
[೮]ವಂಗಚಿತ್ತವ ಕೊಟ್ಟನವಗೆ
ಶೃಂಗಾರಮಾಡಿ ಕೊಮಾರ ಕಾಚನ ರಣ
ರಂಗಕೆ[೮]ಸಿರುಮಭೂವರನು ॥೭॥

ತವಕದಿ ಕಾಚ ಪಯಣವಾಗಿ ಬಾರೆಂದು
ಅವನ ಮನೆಗೆ ಕಳುಹಿದನು
[೯]ನವರತ್ನ ಚಾವಡಿಯಿಂದ ಸಿರುಮ ತನ್ನ
ಯುವತಿಯ[೯] ಕೂಡ ಹೇಳಿದನು ॥೮॥

ರಾಕ್ಷಸ ನರಸಿಂಹ ಬಾಗೂರ ಮುತ್ತಿದ
ಸಿಕ್ಕಿದ ಗೋವಿಂದನೊ[೧೦]ಳಗೆ
ಚಿಕ್ಕಾಯಿ ಅವನ ಕೂಟಕೆ ಪಯಣ ಮಾಡಿ[೧೦]
ಮಕ್ಕಳೊಳಗೆ ಕಾಚಯ*[ನು]* ॥೯॥

ಎಂದ ಮಾತನು ಕೇಳಿ ನೊಂದು ಹಮ್ಮೈಸುತ
[೧೧]ಚಂದ್ರನ ರಾಹು ಕೊಂದಂತೆ
ಮುಂದರಿಯದೆ ಕಂದ[೧೧] ಕಾಚನ ಸಿರುಮೇಂದ್ರ
ಇಂದು ನೀ ಕ[ಳು]ಹಲು ಬಹುದೆ? ॥೧೦॥

೬–೬ X(ಶಿ), ೭–೭ X(ಶಿ), ೮–೮(ಶಿ) ೯–೯ X(ಶಿ), *–* ನ (ಶಿ,ಹ), ೧೦–೧೦ (ಶಿ) ೧೧–೧೧ X(ಶಿ).

ಹುಟ್ಟಲೊಡನೆ ಎನ್ನ ಮಗನಾದದರ ಕೈಯ
ಕೊಟ್ಟು ಕಾಣಿಸಿದೆ ನೀನೆಂದು
ಮುಟ್ಟಿಸಿದೆ ನನಗೆ ಕಷ್ಟದ [ಸು]ದ್ದಿಯನೆಂದು
ಕೆಟ್ಟೆನೆನುತ ಮರುಗಿದಳು ॥೧೧॥(॥೪-೧೧೨)

ಅರೆಗಡಿದುರಗನಂದದಿ ಮಿಡಿಮಿ[೧೫]. . . . . .[೧೫]ಡುಕುತ
ದೊರೆ ಜಲ್ಮವೇಕೆ ಸುಡಲೆಂದು
ಭರದಿಂದ ಮದನ ಕಂಬವ ಹಾಯ್ದತ್ತಳು
ಸಿರುಮನ ರಾಣಿ ಚಿಕ್ಕಮ್ಮ ॥೧೨॥(॥೪-೧೧೩)

ಮಸೆದಲಗೆದೆಯೊಳು ಮುರಿಮೊನೆಗಂ [೧೬][ಡಂತೆ]
ಬಸುರ ಹೊಸೆದು ಹೊಯಿಕೊಳುತ
ಹಸುಳೆ ಕಾಚ[೧೬]ನ ಮರುಕದಿ ಚಿಕ್ಕರಸಿ ತನ್ನ
[೧೭][ಬಸಿದಳು ಕಂಬನಿ][೧೭]ಕುಚಕೆ ॥೧೩॥

ಘನಶೋಕಜಲದಿ[೧೮]ನೆನೆದು ದಿವ್ಯಾಂಬರ
ವನಿತೆ ಚಿಕ್ಕಮ್ಮ ಗೋಳಿಡುತ[೧೮]
ಮನನೊಂದು ಸಿರುಮನ ಪಾದಕ್ಕೆರಗಿ[೧೯]ಎನ್ನ[೧೯]
ಮನೆಗೆ ಮಗನ ಕರೆಸಯ್ಯ ॥೧೪॥

[೨೦]ಕಣ್ತುಂಬಿ ನೋಡುವೆ ಕಂದ ಕಾಚಯ್ಯನ
ಹುಣ್ಣಿವೆ ಚಂದ್ರ[೨೦]ನಂತಿಹನ
ಉಣಹೇಳಿ ಕರಸೆಂದು[೨೧][ವೀರ][೨೧]ಸಿರುಮನೊಳು
ಬಣ್ಣಿಸಿ ಬಾಯ್ಬಿಡುತಿಹಳು ॥೧೫॥

ಅಳಲು[೨೨]. . . . . .[೨೨]ನಳಿನ[೨೨]. . . . . . .[೨೨]ವಾರಿ
[೨೩]ತಳತಳನಿಳಿವವ ತೊಡೆದು
ಬಳಲ[೨೩]ದಿರೆಂದು ಸಿರುಮ ಚಿಕ್ಕರಸಿಯ
ನಳಿತೋಳನಪ್ಪಿ ಸಂತೈಸಿ ॥೧೬॥(॥೪-೧೧೪)

೧೨-೧೨ X(ಶಿ), ೧೩-೧೩ X(ಶಿ), ೧೪-೧೪ X(ಶಿ), ೧೫-೧೫ X(ಶಿ), ೧೬-೧೬ X(ಶಿ), ೧೭-೧೭ ಕಂಬನಿಯ ಬಸಿದಳು(ಶಿ), ಬಿಸಿ ಕಂಬನಿಯ ಬಸಿದಳು (ಹ), ೧೮-೧೮ X(ಶಿ), ೧೯-೧೯ X(ಶಿ), ೨೦-೨೦ X(ಶಿ), ೨೧-೨೧ X(ಶಿ,ಹ), ೨೨-೨೨ X(ಶಿ.ಹ) ೨೩-೨೩ X(ಶಿ)

ಬೇಗ ಸಿರುಮ[೨೪]ಕರೆ ಕಳುಹಲು ಕಾಚಿಯ
ಆಗ ತನ್ನರಮನೆಯೊಳಗೆ
ಬಾಗೂರ ಪಯಣ[೨೪] ಬಂಟರಿಗುಡುಗೊರೆ
ಲಾಗಿನಿಂದಲಿ ಕೊಡುತಿರ್ದ ॥೧೭॥

ಪಟ್ಟೆಯ ದಟ್ಟಿ ದುಪ್ಪಡಿ ಚಂದ್ರಗಾವಿಯ
[೨೫]ನುಟ್ಟು ಕಟ್ಟುವ ಝಲ್ಲಿಗಳ
ಕೊಟ್ಟ ಬದ್ದಿಗೆದಾರ ಮುತ್ತಿ[೨೫]ನ ಗೊಂಡೆವ
ಕೊಟ್ಟ ಬಂಟರಿಗೆ ಕಾಚಯ್ಯ ॥೧೮॥

ಚಿನ್ನದ ಬಟ್ಟಲೊಳಗೆ ಗಂಧ ವೀಳ್ಯವ
[೨೬]ಮನ್ನಿಸಿ ಪರಿವಾರಕಿಕ್ಕಿ
ಇನ್ನು ಸಂದೇಹವಿಲ್ಲ[೨೬]ವೆನುತೊಳಯಕ ಪೋಗಿ
ತನ್ನ ತನುವ ಸಿಂಗರಿಸಿದ ॥೧೯॥

ಧುರಧೀರ ಕಾಚಯ್ಯ ದೊರೆ[೨೭]ಗಾಸೆಯನುಟ್ಟು
ಮುರಿದು ಚಿತ್ರದ ಚಿಮ್ಮುರಿಯ[೨೭]
ಬಿರಿದಿನ ಕಾಲಪೆಂಡೆಯ ಪಾದಸರಪಳಿ
ಪರಬಲಾಂತಕನಿಟ್ಟುಕೊಂಡ ॥೨೦॥

ಅರ್ಧನಾರಿಯ ಕಸ್ತುರಿ[೨೮]ಬೊಟ್ಟು ನೊಸಲೊಳು
ತಿದ್ದಿಟ್ಟು ಕಾಚಭೂವರನು
ಮುದ್ದು[೨೮] ಮುಖವ ಶೃಂಗರಿಸಿ ಕನ್ನಡಿ ನೋಡಿ
ಎದ್ದನು ತಾಯರಮನೆಗೆ* ॥೨೧॥ (॥೪-೧೦೬)

ಬಂದನು ಎರಡು ಕೈಯಿಂದಲಿ ಹಿಡಿಹೊನ್ನ
ತಂದಿಕ್ಕಿ ತಾಯ ಪಾದದಲಿ
ವಂದಿಸಿ[೨೯]ಅಡ್ಡಬೀಳಲು[೨೯]ತಾಯ ಪಾದಕ್ಕೆ
ಕಂದನನೆತ್ತಿ ಹರಸಿದಳು ॥೨೨॥

೨೪-೨೪ X (ಶಿ), ೨೫-೨೫ X (ಶಿ), ೨೬-೨೬ X (ಶಿ), ೨೭-೨೭ X (ಶಿ), ೨೮-೨೮ ದು X (ಶಿ), *೧೫, ೧೬, ೧೭ನೆಯ ಗರಿಗಳು ಅರ್ಧದಷ್ಟು ಮುರಿದಿರುವುದರಿಂದ ಈ ಸಂಧಿಯ ಆರಂಭದಿಂದ ಇಲ್ಲಿಯ ವರೆಗಿನ ಪದ್ಯಗಳು ಪೂರ್ಣರೂಪದಿಂದ 'ಶಿ' ಪ್ರತಿಯಲ್ಲಿ ಸಿಗುವದಿಲ್ಲ (ಸಂ), ೨೯-೨೯ X (ಶಿ),

ಆಯುವಂತನು ಆಗೊ ವೀರಸಿರಿಯ ಬಾಳೊ
ನಾಯಕರೊಳು ಗುಣಮಣಿಯೆ
ಕಾಯಜ ಕಾಚ ಮಂಡೆಯ ಹೂವು ಬಾಡದೆ
ಬಾಯೆಂದು ಮಗನ ಹರಸಿದಳು ||೨೩||

ಇಂದುಮುಖಿಯ ಊಳಿಗದ ಹೆಮ್ಮಕ್ಕಳು
ಬಿಂದಿಗುದಕ ಪಡುಗವನು
ತಂದಿಟ್ಟು ಕಾಚನ ಪಾದವ ತೊಳೆದ[೩೦]ರು[೩೦]
ಚಂದನಗಂಧಿಯರೆಲ್ಲ ||೨೪|| (||೪-೧೧೮)

ಕರೆತಂದರೊಳಯಿಕೆ ಮುತ್ತಿನ ಗದ್ದುಗೆ ಮೇಲೆ
ಅರಸು ಕಾಚನ ಕುಳ್ಳಿರಿಸಿ
ಹರಿವಾಣ ತಟ್ಟೆ ಬಟ್ಟಲ ಮುಂದಿಟ್ಟರು
ದೊರೆವೆಣ್ಗಳೆಲ್ಲರು ಸಹಿತ ||೨೫||(||೪-೧೧೯)

ಎಡೆ ಮಾಡಿದರು ಷಡುರಸನ್ನಾಮೃತವನು
ಸಡಗರದಲಿ ಸಖಿಜನರು
ಒಡಗೂಡಿ ಸಿರುಮನ ಮಡದಿ ಚಿಕ್ಕಮ್ಮನು
ಪಿಡಿದು ತುತ್ತನು ಕಾಚನೊಡನೆ ||೨೬||(||೪-೧೨೦)

ಕಂದ ಕಾಚಯ ನಿನ್ನ ಸುಳುಹ ಕಾಣೆವು ನಾವು
ಇಂದು ಕಂಡೆವು ನಿನ್ನ ಮುಖವ
ಚಂದ ಚಂದದಲಿ ಭಾವಿಸಿ ನೋಡಿ ಮಾತಾಡಿ
ಒಂದಾಗಿ ಊಟವ ಮಾಡಿ ||೨೭||(||೪-೧೨೧)

ಕರವ ತೊಳೆದು ಕರ್ಪುರವೀಳ್ಯವ ಕೊಟ್ಟು
ಸಿರುಮನ ಹೆಮ್ಮಕ್ಕಳೆಲ್ಲ
ಧುರಗಲಿಯಾಗೆಂದು ವೀರಗಂಕಣಗಟ್ಟಿ
ಹರಸಿ ತುಂಬಿದರು ಸೀಸೆಯನು ||೨೮||(||೪-೧೨೨)

೩೦-೩೦ ಳು X (ಶಿ).

ಖಂಡೆಯ ಸಿರಿಯಾಗಿ ಕಂದ ಕಾಚಯ್ಯ ಕಡಿ
ಹಿಂಡು ಮನ್ನೆಯರ ಸಾಲ್ದಲೆಯ
ಚಂಡನಾಡು ನರಸಿಂಹನಸಮದಂಡ
ದಂಡಿಗೆಗಳ ಮಾಡು ಹುಯ್ಯಲನು ॥೨೯॥

ಸಿಕ್ಕಿದ ಗೋವಿಂದನಾಯಕ ಕೂಟಕೆ ಹೋಗಿ
ದೊಕ್ಕನೆ ನರಸಿಂಹನವರ
ಲಕ್ಷ ಹೆಣನ ಕೊಂದಲ್ಲದೆ ಬಾಗೂರ
ಒಕ್ಕಲ ಕೊಡದಿರೊ ಮಗನೆ[೩೧] ॥೩೦॥

ಪ್ರಾಣದಾಸೆಯ ಮಾಡಿ ಗೋವಿಂದನೊಡನಾಡಿ
ಕಾಣಬೇಡವೊ ನರಸಿಂಹನ
ಕ್ಷೋಣಿ ಹೆಣನ ಕೊಂದಲ್ಲದೆ ಬಾಗೂರ
ಓಣಿಯ [ಪೊಗ]ದಿರು ಮಗನೆ ॥೩೧॥[೩೨]

ಹುಲ್ಲಮನೆಯ ಕಟ್ಟಿ ಬಾಳುವರೆಲ್ಲಕೆ
ಗೊಲ್ಲನು ಹೇಡಿ ಎಂಬವರು
ಗೊಲ್ಲನ ವಂಶಕೆ ಕೊರತೆಯ ತಂದರೆ
ಕಲ್ಲಗಾಣಕೆ ಹಾಕಿಸುವೆನು ॥೩೨॥

ದಿಂಡುರುಳಿಸಿ ನರಸಿಂಹನ ದಂಡನು
ರುಂಡ ಮುಂಡವ ತುಂಡುಗಡಿದು
ಬಂಡಿಲಿ ಹೇರಿ ನಿಲ್ಲದೆ ಬಾಗೂರ
ಖಂಡಿಯ ಕೊಡದಿರು ಮಗನೆ ॥೩೩॥

ಚಿತ್ತೈಸೆನುತಲಿ ಉತ್ತಮ ಸತಿಯರು
ಹೆತ್ತ ತಾಯಿ ಚಿಕ್ಕಮ್ಮ
ಎತ್ತಿ ಕೈಮುಗಿದು ಕಳುಹಲು ಕಾಚೇಂದ್ರನು
ಮತ್ತೆ ಹೊರಟನರಮನೆಯ ॥೩೪॥

---

೩೧ ಈ ಪದ್ಯದ ಬಳಿಕ "ದಿಂಡುರುಳಿಸಿ . . . . ." ಎಂದು ಪ್ರಾರಂಭವಾಗುವ ಪದ್ಯ (೨-೩೪) 'ಹ' ಪ್ರತಿಯಲ್ಲಿ ಇದೆ.(ಸಂ). ೩೨ ಈ ಪದ್ಯ 'ಹ' ಪ್ರತಿಯಲ್ಲಿ ಇಲ್ಲ (ಸಂ).

ಆಸೆಯಿಲ್ಲದೆ ನಿರಾಸೆಮಠಕೆ ಹೋಗಿ
ಭಾಸುರ ಕೋಟಿಪ್ರಕಾಶ
ಈಶಲಾಂಛನ ಮಹಂತಿಗೆ ಶರಣೆನೆ
ಲೇಸಾಗಲೆಂದರು ಕಾಚಯಗೆ ॥೩೫॥

ಹಸ್ತ ಪರುಶಮಾಡಿ ಹರಸಿ ವಿಭೂತಿಯ
ಮಸ್ತಕವೆತ್ತಿ ಕಾಚಯ್ಯಗೆ
ವಿಸ್ತರ ನೊಸಲಿಗೆ ಧರಿಸಿ ವಿಭೂತಿಯ
ವಸ್ತು ಮಹಂತು ಕಳುಹಿತ್ತು[೩೩] ॥೩೬॥

ಮೃಡನ ಕಿಡಿಗಣ್ಣಲಿ ಪುಟ್ಟಿದ ಕುವರನ
ಗುಡಿಗೆ ನಡೆದು ಬಂದು ಕಾಚ
ಹಿಡಿಹೊನ್ನ ಕಾಣಿಕೆಯಿಕ್ಕಿ ವೀರೇಶನೆ
ಕೊಡು ಎಂದು ಕೂರ್ತು ಪುಷ್ಪವನು[೩೪] ॥೩೭॥

ಕೊಂಡಾಡುತಿಹನ ಭಕ್ತಿಗೆ ಮೆಚ್ಚಿ ವೀರೇಶ
ಇಂಡೆ ದಂಡೆಯ ಪರಿದಿಟ್ಟ
ಕಂಡುಬ್ಬಿ ತೆಗೆದು ಪ್ರಸಾದವ ಕಾಚಯ್ಯ
ಮಂಡೆಯ ಮೇಲಿಟ್ಟುಕೊಂಡ ॥೩೮॥

ದೇವರೆ ಗತಿಯೆಂದು ನಡೆತಂದು ಸಿರುಮನ
ಚಾವಡಿಗೆ ಕಾಚಯ್ಯ ಬಂದ
ಜೀವದಾಸೆಯ ಹಂಗಿಲ್ಲದ[೩೫] ಬಂಟರ
ಆ ವೇಳೆಯಲ್ಲಿ ಕರೆಸಿದನು ॥೩೯॥

ಕರ್ಪುರ ವೀಳ್ಯವ ತರಿಸಿದ ಸಿರುಮೇಂದ್ರ
ಒಪ್ಪದಿಂದಲಿ ಕಾಚಯಗೆ
ಎಪ್ಪತ್ತೇಳು ಮಂದಿ ಬಂಟರ ಹೆಸರನು
ತಪ್ಪದೆ ಹೇಳಿಕೊಂಡು ಬರುವೆ ॥೪೦॥

---

೩೩. ಈ ಪದ್ಯದ ಉತ್ತರಾರ್ಧ 'ಶಿ' ಪ್ರತಿಯಲ್ಲಿ ಇಲ್ಲ (ಸಂ), ೩೪ ಈ ಪದ್ಯದ ಪೂರ್ವಾರ್ಧ 'ಶಿ' ಪ್ರತಿಯಲ್ಲಿ ಇಲ್ಲ (ಸಂ), ೩೫–೩೫ X(ಶಿ).

ಬತ್ತೀಸಾಯುಧ ಸಾಧನೆಗಳ ಬಲ್ಲವ
ಹತ್ತೂರಿಗೊಬ್ಬ ತಳವಾರ
ಮತ್ತಿವಾಡದ ಗಿರಿಯಪ್ಪನ ಕರಸಿದ
ಚಿತ್ತವೊಲಿದು ಕಾಚಯ್ಯ ॥೪೧॥

ಕರಿ ಸಿಂಹ ಚೋಹದ ಹರಿಗೆಯ ಬಿರಿದಿನ
ಬರಹೇಳಿದನು ಸೇರುವೆಯ
ಪರಬಲಾಂತಕ ಕಾಚಯ್ಯನು ಕರಸಿದ
ಧುರಕೆ ಸಿಂಗಟಗೇರಿಯವರ ॥೪೨॥

ತೊಡರ್ದರೆ[೩೬][ಹುಡಿಗೆಯ್ವ][೩೬]ಮುಡಿಯ ಪೂಜಿಸಿಕೊಂಬ
ನಿಡಗಟ್ಟದವರ ಬೇಗದಲಿ
ಕಡಿಗೋಟೆಯ ಲಾವಣಿಗೆಯ ಡೊಣ್ಣೆ ಭೈರನ
ಒಡೆಯ ಕಾಚಯ್ಯ ಕರೆಸಿದನು ॥೪೩॥

ಶೃಂಗಾರ ಬಿಲ್ಲಿಗೆ ಝಲ್ಲಿಯ ಕಟ್ಟಿದ
ಜಂಗುಳಿ ಸಮಯ[೩೭][ಪಿತಾಮಹ][೩೭]
ಜಂಗಮ ಕೆಂಡದ ಬಸವನ ಕರೆಸಿದ
ಸಂಗ್ರಾಮಕೆ ಕಾಚೇಂದ್ರ ॥೪೪॥

ಸಾಧಿಸಿ ಮಾದಿಗ ಹರಿಗೆಯನಾಳುವ
ಕೇದಿಗೆ[೩೮]ಗೆರೆಯ ಸೆಟ್ಟಿಗನು[೩೮]
ಆದಾದು ಕರಸಿದ ವೀರಾಧಿವೀರರ
ವಾದಿನಿರಿವ ಬಂಟರನು ॥೪೫॥

ಮಲತು ಕಾದುವ ಹೋತಿ ಹರಿಗೆಯನಾಳುವ
ಹುಲಿಯ ಜಂಗುಳಿ ನಾಗಿಗೊಂಡ
ತೊಲಗದೆ ಕಾದುವ ತೊಂಬಾರದವರನು
ಕಲಿ ಕಾಚಯ್ಯ ಕರೆಸಿದನು ॥೪೬॥

೩೬-೩೬ ಹುಡೈಯ್ಯ (ಶಿ), ಉಡಿಗೆಯ (ಹ), ೩೭-೩೭ ಪಿತಮಹ(ಶಿ), ಪೆತ್ತವರು (ಹ), ೩೮-೩೮ ಗರಿ ಸೋಮನವರ(ಶಿ).

ಕರೆಸಿದ ಘಂ[ಟೆ]ಯ ಸರಪಣಿ ಕಟ್ಟಿರ್ದ
ತೆರೆಯ ಹರಿಗೆ ವಿರುಪಯನ
ಮೊರೆದೆದ್ದು ಅವನ ಹೆಗಲೆಣೆಯಾಗಿ ಬಂದನು
ಭರದಿಂದ ಬೋಗಾರ ಮಲ್ಲ ॥೪೭॥

ಟೊಪ್ಪಿಗೆ ತಲೆಚಿಪ್ಪನೊಡೆಯಲು ಎಸೆವನು
[೩೯]ತಪ್ಪದೆ ಬಿಬ್ಬಿ ಸುರಿತಾಳ[೩೯]
ಚಿಪ್ಪಿಗ ಕಸವನೆಂಬವ ಕೈಯ್ಯ ಮುಗಿದನು
ಸರ್ಪ ರವಿಯ ನುಂಗುವಂತೆ* ॥೪೮॥

ಕುಲದಲ್ಲಿ ಹಾರುವ ಲಿಂಗರಸಯ್ಯನು
ಛಲದಲಿ ರಣಸೂರೆಗಾರ
ಗೆಲವಿಂದ ಕಾಚನು ಕರೆಸಿದ ಬೇಗದಿ
ಒಲಿದು ವೀಳ್ಯವ ಕೊಡಿಸಿದನು ॥೪೯॥

[೪೦]ಬೆನ್ನಲ್ಲಿ ಕನ್ನಡಿ[೪೦]ಕೈಯಲ್ಲಿ ಜಾಗಟೆ
ಮನ್ನೆಯ ಹನುಮನ ಬಾಲ
ಇನ್ನು ಬರಹೇಳೋ ಬೇಡರ ಸಿದ್ಧನ
ಮನ್ನಣೆ ವೀಳ್ಯವ ಕೊಟ್ಟು ॥೫೦॥

ದಿಕ್ಕುದಿಕ್ಕಿನೊಳು ಹೆಸರುಳ್ಳ ಬಂಟರು
ಮುಕ್ಕಣ್ಣ ಮುಂಗೈಯ್ಯ ಮೀಸೆ
ಇಕ್ಕಿದ ಹರಿಗೆಗೆ ತೊಲಗದ ಕಂಬವು
ಜಕ್ಕಲಧರ ಚಿಕ್ಕ ಕಾಮ ॥೫೧॥

ಒಬ್ಬರೊಬ್ಬರ ಕರೆಯೆಂದರೆ ಬೇಗದಿ
ಬೊಬ್ಬುಳಿ ಭಾವನ ಬಿರಿದು
ಹೆಬ್ಬುಲಿ ಗಾಣದ ಭೈರವನೆಂಬವ ಬಂದು
ಉಬ್ಬಿ ನೆಗೆದು ಕೈಯ್ಯ ಮುಗಿದ ॥೫೨॥

೩೯-೩೯ ತಪ್ಪದೇರ ಸುರಿತ (ಶಿ), * ಇಲ್ಲಿಂದ ಮುಂದಿನ ನಾಲ್ಕು ಪದ್ಯಗಳು 'ಹ' ಪ್ರತಿಯಲ್ಲಿ ಇಲ್ಲ (ಸಂ), ೪೦-೪೦ ಕೈಯ್ಯಲ್ಲಿ ಜಾಗಟೆ ಬೆನ್ನಲ್ಲಿ ಕನ್ನಡಿ(ಶಿ).

ಉರಿಯಲಗಿನಂತೆ ಹಿರಿಯ ಆಸಂದಿಯ
ಕರಿಯ ಮಲ್ಲುಗ ಬಂದು ನಿಂದ
ತರಣಿ ತಲ್ಲಣಿಸಲು ಕರವಾಳ ಪಿಡಿದನು
ಬರಿದಲೆ ತಿಮ್ಮ ಬಂದು ನಿಂದ ॥೫೩॥

ಒಳಿತವಂತರನಾಳ್ವ ಬಿಲ್ಲುಗಾರರ ಹೊನ್ನ
ಕಳಸ ತೊಳಚನೆಂಬವನು
ಅಳವುಳ್ಳ ಬಂಟರಭಾವನ ಪೈಕದ
ದಳ ಧೂಳಿಯನೆ ಮಾಡುವರು ॥೫೪॥

ಇರಿತವೆಂದರೆ ಮುಂಚುವ ನೆರೆಗಲಿ ಬಂದ
ಗೂರಲವರ ಕಾಮಯ್ಯ
ತರುಬಿ ತರುಬಿ ಆಳನೆಸೆವ ಸಾದರ ಚಿಕ್ಕ
ಉರುಬಿ ಬಿಲ್ಲಾಳು ಬಂದು ನಿಂದ ॥೫೫॥

ಕುಸುರಿದರಿದು ಬಿಸಿರಕ್ತವ ಕುಡಿವನು
ಅಸುವ ಹಿಂಡುವ ಮಾರ್ಬಲವ
ದೆಸೆಯುಳ್ಳ ಹಿಡಿಕೊಡತಿಗೆ ಮಂಡಲೇಶ್ವರ
ಅಸಗರ ದುಂಡಿಯ ತಿಮ್ಮ ॥೫೬॥

ಆಯುತವಾಗಿ ಮುಂದಲೆಗಳ ಪಿಡಿವನು
ಬಾಯೊಳಗಿರಿವ ಸಮರದಲಿ
ನಾಯಿಂದ ನಾಗೋಜ ದೇವುಗನೆಂಬವ
ಕೈಯ ಕನ್ನಡಿ ತೋರಿ ನಿಂದ ॥೫೭॥

ಚಂದ್ರಗಿರಿಯ ದುರ್ಗದಿಂದ ಮುನಿದು ಬಂದ
ಇಂದ್ರನ ಭೋಗದಲಿಹನು
ಕುಂದದೆ ಹುಲು ಹುಯ್ಯಲಿಗೆ ತಲೆಯ ತಹ
ನಂದಿನಾಯಕ ಹೊರಹೊಂಟ[೪೧] ॥೫೮॥

೪೧ ಈ ಪದ್ಯ "ಶಿ" ಪ್ರತಿಯಲ್ಲಿ ಇಲ್ಲ (ಸಂ).

ಹೆಜ್ಜೆಯ ಹಿಂದಕೆ ಕೀಳದ ಬಂಟರು
ಗುಜ್ಜಲವರ ಪೈಕದವರು
ಸಜ್ಜರಿಸುತ ಬೀಳಹೊಯ್ದಾಳನೆಸೆವನು
ಗುಜ್ಜಲೋಬಯ್ಯ ಕೈಮುಗಿದ ॥೫೯॥

ಮಚ್ಚರಿಸುವ ರಣದೊಳು ಮಾರ್ಮಲೆವನು
ಮುಚ್ಚಲವರ ಬೀಯಗನು
ಹೆಚ್ಚಿನ ಮೀನಿಗ ಲಕ್ಕಯ್ಯ ಬಂದನು
ನಿಚ್ಚಟ ನಿಜಗಲಿ ಧೀರ ॥೬೦॥

ಶಂಕೆಯಿಲ್ಲದೆ ಸಾವಿರಂಬನು ಎಸೆವನು
ಸಿಂಕಲವರ ಪೈಕದವನು
ಲಂಕೆಗೆ ಹಾರುವ ಹನುಮನ ಸಮದಾಳು
ನುಂಕಿನಾಯಕ ಬಂದು ನಿಂದ ॥೬೧॥

ಮುಷ್ಟಿಗ ತಿಮ್ಮನು ಮುದಿಗಂಡ ಓಬನು
ತಟ್ಟಿಲೋಬಯ್ಯ ಕೈಯ ಮುಗಿದ
ಕಟ್ಟಾಳು ಗುಜ್ಜಲ ಹನುಮನಾಯಕ ಸಹ
ದಿಟ್ಟ ಮನ್ನುಲಿ ಮಲ್ಲ ಬಂದ ॥೬೨॥

ದಸವಂದದಾಳೊಳು ಮಿಸುಕದಲಿರಿವನು
ಕುಸುರಿದರಿವನರಿಬಲವ
ಹೆಸರುಳ್ಳ ಕಾಮಿಗೆತ್ತಿಯ ನಾಗಿನಾಯಕ
ಮಸೆದಲಗೆತ್ತಿ ಕೈಮುಗಿದ[೪೨] ॥೬೩॥

ಮೂಡಣ ಕಬ್ಬಕ್ಕಿಯ ಹಿಂಡ ಕರೆವಂತೆ
ಬೇಡ ಪೈಯಿಕವೆಲ್ಲ ಕೂಡಿ
ಜೋಡಿಸಿ ಕರಗಳ ಮುಗಿದು ಕಾಚೇಂದ್ರಗೆ
ಆಡಿದರತಿ ಪೌರುಷವ ॥೬೪॥

---

೪೨ ಈ ಪದ್ಯ 'ಶಿ' ಪ್ರತಿಯಲ್ಲಿ ಇಲ್ಲ (ಸಂ).

ಶೃಂಗಾರ ಕಂಬಳಿ ಗವಸಣಿಗಿಕ್ಕಿದ
ಹೊಂಗಿಲ ಮರ ಬಿಲ್ಲ ಪಿಡಿದು
ಕೆಂಗೂರ ಭೈರನವರು ಬಂದು ನಿಂದರು
ಹಿಂಗದೆ ಕಾಚನಿದಿರಿನಲಿ ॥೬೫॥

ಅಟ್ಯಾಡಿ ಸುಡುವನು ಪೆಟಲಿನಲ್ಲಾಳುವ
ಇಟ್ಟ ಗುಂಡಿಗೆ ತಪ್ಪಿಲ್ಲ
ಘಟ್ಟಿಗೋವಿಗೆ ಮದ್ದ ತುಂಬಿ ಜಡಿದು ಕೊಲ್ವ
ಜೊಟ್ಟಿಗ ತಿಪ್ಪಯ್ಯ ನಿಂದ ॥೬೬॥

ಗುಂಪು ಗುಂಪಿನ ಆಳ ಝುಂಪಿಸಲೆಸೆವನು
ಸಂಪಗೆ ಭಯಕಾರಿ ಬಂದ
ಪೊಂಪಿನಿಂಪಿನ ಪೆಟಲಿನ ಸಾಗಾಟದ
ಕೆಂಪು ಗಿರಿಯ ಕೈಯ್ಯ ಮುಗಿದ ॥೬೭॥

ಘುಡುಘುಡಿಸಿಡುವ ಗುಂಡಿನ ಪೆಟಲವ ಬಂದ
ನಿಡುಗಟ್ಟದ ಸೂರೋಜ
ಸಿಡಿಲ ಸೆರೆಯ ಬಿಟ್ಟಂದದಿ ಬಂದರು
ಒಡೆಯ ಕಾಚನ ಎಡಬಲದಿ ॥೬೮॥

ಆ ವೇಳೆಯದಿ ಬಂದ ಡೆಂಕಣ ನಾಗೋಜ
ತಾವರೆ ಬಾಣ ತೆಲುಗರ
ದೇವನೂರ ಬಯಲುಂಬಳಿಗೊಂಬನು
ಕಾಹುರದಲಿ ಬಂದು ನಿಂದ ॥೬೯॥

ಆಳಾಳುಗಳ ಮೆಟ್ಟಿ ಹೊಯಿವನ ಬರಹೇಳೊ
ಕಾಳೆಯ ದೇವಗನೆಂಬವನ
ಕಾಳಗಕ್ಕೆ ಹೋಗುತ ಕರೆಸಿದ ಕಾಚಯ್ಯ
ವೀಳ್ಯವ ಕೊಟ್ಟನೆಲ್ಲರಿಗೆ ॥೭೦॥

ಪರಿವಾರ ಕೂಡಿ ಕೂಟಕೆ ಹೋಹ ಮಗನಿಗೆ
ತರಿಸಿದ ಸಿರುಮ ತೇಜಿಗಳ
ಹರಿಣ ವರ್ಣನು ಹಾರುವ ಹಂಸ ಜಂಚನು
ಕರಕಂಠ ಕರಿಕ ಮಾಣಿಕನು ॥೭೧॥

ಕೆಂಚ ನೀಲನು ಹೊಸಮಿಂಚು ಕೇಸರಿವರ್ಣ
ಪಂಚಕಲ್ಯಾಣಿ ಪವಳನು
ಹೊಂಚುವ ಹುಲಿಬಣ್ಣಿ ಸಾರಂಗ ರಣದೊಳು
ಮುಂಚೆ ಕುಣಿವ ಕುದುರೆಗಳ ॥೭೨॥

[೪೩]ಆಯತದಿಂದಲಿ ಮಲ್ಲಣ್ಣನೇರುವ
ದೇವರಶ್ವವ ತರಿಸಿದನು
ಕೋಯೆಂದು ಕೊಟಸರದೊಳು ಪೊಕ್ಕು ತರಸಿದ
ರಾಯಮಲ್ಲನ ಬೊಲ್ಲವನು ॥೭೩॥

ಕವಿಗೊಡವಿನ ಕೆಂಚಲೋ[ಬ]ನೇರುವ[೪೩]
ಗವಿಯ ಕರಡಿಯ ತರಿಸಿದನು
ಕಯಿ ತವಕದಿ ಪೊಕ್ಕು ಕುಣಿವುತ ಬರುವಂಥ
ಮೈಯೆಳಗನ ತರಿಸಿದನು ॥೭೪॥*

ಬೇಟೆಯ ಮಗ ಸೋಮಿನಾಯಕನೇರುವ
ನಾಟಕಸಾಲೆಯ ತರಿಸಿ
ಲೂಟಿಯಿಂದಲಿ ಹೋಗಿ ತಂದುಕೊಟ್ಟರು ಸ
ಘಾಟದಿ ಕೆಂಚ ಬೊಲ್ಲನನು ॥೭೫॥

ಉಡುವೂರರಸು ನಂಬಿನಾಯಕನೇರುವ
ಕಡಗು ನೀಲಾತನ ತರಿಸಿ
ನಡಗೋಟೆಯ ಜಂಬುನಾಗಮರಿಯನು
ಕಡುತವಕದಿ ತರಿಸಿದನು ॥೭೬॥

ಹೆಗ್ಗೇರಿ ಮಲ್ಲಣ್ಣನೇರುವದೊಂದೀಗ
ಹೆಬ್ಬುಲಿಯನು ತರಿಸಿದನು
ಉಗ್ರದಿ ರಣದೊಳು ಕಾದುವ ಕಾಚಗೆ
ಅಗ್ಗಳೆ ಕುದುರೆಯ ತರಿಸಿ ॥೭೭॥

೪೩–೪೩ ಇಷ್ಟು ಭಾಗ 'ಶಿ' ಪ್ರತಿಯಲ್ಲಿ ಇಲ್ಲ (ಸಂ).

ಸಂಗ್ರಾಮಧೀರ ಕೊಮರ ಕಾಚನೇರುವ
ಮಂಗಳ ಬೊಲ್ಲನ ತರಿಸಿ
ಸಿಂಗಟಗೇರಿಯ ನಾಯಕನೇರುವ
ಲಿಂಗವಕ್ಷಿಯ ತರಿಸಿದನು೪೪ ॥೭೮॥

ಇತ್ತಟ್ಟಿನ ಮಾನ್ಯರ ಹುಚ್ಚುಗೊಳಿಸುವ
ಚಿತ್ರಾಂಗಿಯ ತರಿಸಿದನು
ಉತ್ತಮ ಕೆನ್ನೀಲ ಮತ್ತ ವಾರುವ ಜಂಬ
ಅರ್ತಿಯಿಂದಲಿ ತರಿಸಿದನು೪೪ ॥೭೯॥

ಎಕ್ಕಟಿಗಂಗನ ಗಂಡನೆಂಬುವದೊಂದು
ರಕ್ಕಸ ಬೊಲ್ಲನ ತರಿಸಿ
ತಕ್ಕಾಟಿ ಕುಣಿಕಾಲ ತೇಜಿಯ ತರಿಸಿದ
ತಕ್ಕ ರಾಹುತಗಳವಲ್ಲ ॥೮೦॥

ಹಿರಿಯೂರ ಕಸವನ ಗಂಡನೆಂಬುವದೊಂದು
ಉರಿಗೊಳ್ಳಿ ಕುಂಕುಮ ಚಾರ
ದೊರೆ ಏರುವ ತರವಡಿಗನ ತರಿಸಿದ
ಹರಿವಾಣದೊಳು ಕುಣಿವುದನು ॥೮೧॥

ಹೊನ್ನವಳ್ಳಿಯ ವೇದರಾಜನ ಗಂಡನೆಂಬ
ಕೆನ್ನೀಲನ ತರಿಸಿದನು
ಬನ್ನಿಯ ಮರನೇರಿ ಎಸೆವದ ತರಿಸಿದ
ಚೆನ್ನಿಗ ಹೊನ್ನರಳೆಯನು ॥೮೨॥

ಅಂತಕ ನರಸಿಂಹನ ಗಂಡನೆಂಬ
ಲೆಂಕವಿಭಾಂಡನ ತರಿಸಿ
ಶಂಖ ಪವಳ ಸಣ್ಣ ಗುಲಗಂಜಿ ನೀಲನಂ
ಬಿಂಕದ ಬೊಲ್ಲನ ತರಿಸಿ ॥೮೩॥

---

೪೪ ಈ ಪದ್ಯಗಳು 'ಹ' ಪ್ರತಿಯಲ್ಲಿ ಹಿಂದುಮುಂದಾಗಿವೆ (ಸಂ).

ಗುಂಜಮೈಯನು ಸಣ್ಣ ಗುಲಗಂಜಿ ನೀಲನು
ಕೆಂಗರಿಗಣ್ಣಿನದೊಂದು ಬೊಲ್ಲ
ಅಂಜದ ರಣದೊಳು ಕಾದುವ ತೇಜಿಯ
ಸಂಜೀವನ ತರಿಸಿದನು[೪೫] ॥೮೪॥

ಬಂದೊಳಹೊರ ಲಾಯದ ತೇಜಿಗಳನು
ಒಂದುಳಿಯದೆ ತರಿಸಿದನು
ತಂದುಕೊಟ್ಟನು ಕಾಚಣ್ಣಗೆ ಸಿರುಮೇಂದ್ರ
ಚಂದ ಚಂದದ ಕುದುರೆಗಳ ॥೮೫॥

ಮುಟ್ಟ ಸಂಜೋಹವ ಮಾಡಿದರಾಕ್ಷಣದಲ್ಲಿ
ಕಟ್ಟಳಿಲ್ಲದ ಕುದುರೆಗಳು
ಪಟ್ಟದ ತೇಜಿ ಸಹಿತ ಕಾಚನ ಮುಂದೆ
ಇಟ್ಟು ತಕ್ಕೊಳ್ಳ ಹೇಳಿದನು ॥೮೬॥

ಮನ್ನೆಯ ಸಿರುಮನ ಮೂಸಾವಿರದೊಳು
ಮುನ್ನೂರಾಳನು ಆಯ್ದುಕೊಂಡ
ಉನ್ನತ ಮೂವತ್ತು ತೇಜಿಯೊಳಗೆ ಒಂದು
ಕೆನ್ನೀಲನ ತೆಕ್ಕೊಂಡ ॥೮೭॥

ಸಾಧನೆದೋರುತ ಕಾ[ಚೇಂದ್ರ] ತಂದೆಯ
ಪಾದಕ್ಕೆ ತಾ ಶರಣೆಂದ
ಹಾದು ತರ್ಕೈಸಿ ಹರಸಿ ಮಗನೆ ನೀನು
ಹೋದ ಕಾರ್ಯವು ಜಯವೆಂದ ॥೮೮॥

ಸಿರುಮ ಬಾಗೂರಿಗೆ ಹೋಹ ಪರಿವಾರವ
ಕರೆಸಿ ಕೈಯೆಡೆ ಕೊಟ್ಟ ಮಗನ
ಪರೀಕ್ಷಿಸಿ ಕಾಚನ ಮುಖ ನೋಡಿ ರಸಕಳೆ
ತೊರೆದುಬ್ಬಿ ಪಿತಗೆ ಕೈಮುಗಿದ ॥೮೯॥

---

೪೫ 'ಹ' ಪ್ರತಿಯಲ್ಲಿ ಈ ಪದ್ಯವಿಲ್ಲ (ಸಂ).

ಎನ್ನ ಬಸಿರು ಬಂದ ಕಾಚ ಹುಯ್ಯಲು ಬೇಂಟೆ
ಮುನ್ನಲರಿಯ ಮುಂದನರಿದು
ಇನ್ನು ಹೋಹದು ಬಲು ಜೋಕೆಂದು ಬಂಟರ
ಮನ್ನಿಸಿ ಕಳುಹಲಾಕ್ಷಣದಿ ॥೯೦॥

ಹೊಕ್ಕಳ ಘಂಟೆ ಹುಲಿಯ ಬಾಲ ಬಿರಿದಿನ
ಹಕ್ಕರಿಕೆಯು ಮುಖರಂಬ
ತೆತ್ತಿಸಿ ರತ್ನ ಮೆರೆವ ಹೊನ್ನ ಹಲ್ಲಣ
ವಿಕ್ರಮ ಕಾಚನೇರಿದನು ॥೯೧॥

ಹೋಗೆಂದು ಕಳುಹಬಂದವರನು ಕಳುಹುತ
ಲಾಗಿಸಿ ತೇಜಿಯನೇರಿ
ಬಾಗೂರ ದಾರಿ ಹಿಡಿದು ಕಾಚಭೂವರ
ಸಾಗಿಬರುವ ಸಂಭ್ರಮವು ॥೯೨॥

ಮೇದಿನಿಯದುರುವಂದದಿ ವಾದ್ಯರಭಸವು
ಬೂದಿಹಾಳ ಬಾಗಿಲೆಡೆಯ
ಕಾದುವ ಕ್ರಮವ ನೋಡುವೆನೆಂದು ಹೊರಟನು
ಕಡು ವೇಗದಲಿ ಕಲಿಕಾಚ ॥೯೩॥

ಸಂಜೆಯ ಹೊತ್ತಿಲಿ ಮಂಜುಗತ್ತಲೆಯೊಳು
ಪಂಜಿನ ಬೆಳಕಿಲಿ ನಡೆದು
ಮುಂಚೂಣಿವಾದ್ಯ ಕೊಳಲು ತಪ್ಪಡೆ ಕಹಳೆ
ರಂಜಿಸಿ ಬಿರಿದ ಸಾರಿದರು ॥೯೪॥

ಬಂದನು ಅರೆಯಕಟ್ಟೆಯ ತೆವರಿಲಿ ನಿಂದು
ಮಂದಿ ಸಹಿತ ಕಾಚಯ್ಯ
ಮುಂದೆ ಬಾಗೂರಿಗೆ ನಾವು ಹೋಗುವರೆ
ಚೆಂದ ಹೇಗೆಂದು ಕೇಳಿದನು ॥೯೫॥

ಅಡಗಿ ಹೋಗುವ ನಾವು ಕಾಚಣ್ಣ ವಾದ್ಯದ
ಗೊಡವೆ ಬೇಡೆಂದ ಗುಜ್ಜಲೋಬ

ಬಿಡು ಸಲ್ಲ ನಿನಗೀ ಮಾತೆಂದು ಕೋಪಿಸಿ
ನುಡಿದನವಗೆ *[ಮರು]*ಸೊಲ್ಲ ॥೯೬॥

ಅಡಗಿ ಹೋಹುದೊಂದು ಲಾವುಗೆ ಗುಜ್ಜಲೋಬ
ಉಡುಗಿ ಹೋಗುವದೊಂದು ಬುರುಲಿ
ಅಡಗಿ ಹೋಗುವನ ಮಗನಲ್ಲವೆಂದು ಕಾಳೆ
೪೬ಹಿಡಿ೪೬ ಎಂದು ಕಾಚ ಭೂವರನು ॥೯೭॥

ಆಳಿದೊಡೆಯ ಕಾಚಗಿಂದಲಿ ಬೇಗದಿ
ಸಾರಿ ಹಿಡಿದ ದೇವುಗನು
ಸಾಳುವ ನರಸಿಂಹನ ಪಾಳೆಯದೊಳು
. . . . .ಕಹಳೆಯನು೪೭ ॥೯೮॥

ಕಂಡನು ಬಾಗೂರ ಸುತ್ತ ನರಸಿಂಹನ
ದಂಡು ತಾ ಬಿಟ್ಟಿರಲಾಗಿ
ಖಂಡೆಯ ಕಿತ್ತು ಜಡಿದು ಕಾಚನು ನೆರೆ
ಗಂಡು ಮುಂದಕೆ ಮೂದಲಿಸಿ ॥೯೯॥

[ಬೊಗ್ಗನೆ] ಹರೆಯ ಹೊಯಿಸುತ ಲಗ್ಗೆಮಾಡುತ
ನುಗ್ಗೇಳ ತಳಿಗಳ ಕಿತ್ತು
ಉಗ್ಘಡಿಸಿಯೆ ನರಸಿಂಹನ ಪಾಳ್ಯವ
ಕಗ್ಗೊ[ಲೆ ಬಿ] ದ್ದು ಕಡಿದರು ॥೧೦೦॥

ಸೆಳೆದು ಗುಡಾರವ ಹರಿದು ಸೂರೆಯ ಮಾಡಿ
ಖೋಲಲೊ ಎಂದು ಬೊಬ್ಬಿರಿದು
ಹಲವು ಮುಖದಿ ಹೊಕ್ಕು ನರಸಿಂಹನವರನು
ಬಲವ ಸಂಹರವ ಮಾಡಿದರು ॥೧೦೧॥

ಕಿಚ್ಚೊಟ್ಟಿ ಕರಡವ ಸುಡುವ ಪರಿಯಂತೆ
ಕೊಚ್ಚಿ ಕಾಲಾಳ ಮೇಲಾಳ

_ ಮೂರು (ಶಿ,ಹ), *_* X (ಶಿ), ೪೭ ಈ ಪದ್ಯ 'ಹ' ಪ್ರತಿಯಲ್ಲಿ ಇಲ್ಲ (ಸಂ), *_* ಭೋಗಿನ (ಶಿ,ಹ)

ಚುಚ್ಚಿ ನೆಗಹಿ [೪೮]ಚಿತ್ರಹಳ್ಳಿ[೪೮] ಯ ಪರಿವಾರ
ಎಚ್ಚು ಹೆಸರ ಹೇಳುವರು ॥೧೦೨॥

ಹಕ್ಕರಿಕೆಯನು ಬಗದು ಹೊಕ್ಕವನಲ್ಲೆ
ಕುಕ್ಕಲಿರಿದು ಕೊಲ್ಲುವರು
ಮಿಕ್ಕು ಮೀರಿ ಅಡ್ಡಯಿಸಿ ಬಂದ[ವರನು]
[೪೯]ಕುಕ್ಕುರ ಬೀಳ[೪೯]ಲಿರಿದರು ॥೧೦೩॥

ತೋಳು ಕೊರಳು ಖಂಡಿಸಲಾಕ್ಷಣದೊಳು
ಹೋಳಾಗಿ ಬೀಳಲಿರಿದರು
ಬೋಳೆಯ ಪರಿವಾರ ಹೆಸರುಗಳ ಹೇಳಿ
ಕಾಳಗದಿ ಬೊಬ್ಬ[ರಿ]ದು ॥೧೦೪॥

ತುಂಡ ತುಂಡಿಗೆ ಬೀಳಲೆಸೆವುತ ಬಂಟರು
ಗುಂಡಿಲವರ ಪರಿವಾರ
ದಂಡಿನೊಳಗೆ ಚಲ್ಲವರಿದು ಕೆಡಹಿದರು
ರುಂಡ ಮುಂಡವ ಬೀಳಲಿರಿದು ॥೧೦೫॥

ಬಾಳ ಹಿಡಿದು ಕಾಚೇಂದ್ರ ನರಸಿಂಹನ
ಪಾಳೆಯ ಹೊಕ್ಕು ಕಡಿವುತ್ತ
ಕೋಳ ಹಿಡಿದು ಬೀಳಲಿರಿದು ಹೆಸರುಗಳ
ಹೇಳುತ ಬಲು ಬಂಟರೈದಿ ॥೧೦೬॥

ಅರಿತೆವರಿ[೫೦]ಯೆ[೫೦]ವೆಂದೆನಬೇಡಿ ಸಿರುಮನ
ವರವುಳ್ಳ ಕೊಮಾರ ಕಾಚಯ್ಯ
ಇರಿದು ತರಿದು ದಾರಿ ಬಿಡಿಸಿ ಪಾಳ್ಯದೊಳು
ಕುರುಹುದೋರುತಲಿ ನಡೆದನು ॥೧೦೭॥

ಎವೆ ಹಳಚದ ಮುನ್ನ ನರಸಿಂಹನವರನು
ಕಿವಿ ಮೂಗ ಕೊಯ್ಸಿ ಕೆಲಬರನು

೪೮–೪೮ ಚಿತ್ರಾವಳಿ (ಶಿ), ೪೯–೪೯ X (ಶಿ), ೫೦–೫೦ ತೆ(ಶಿ)

ತಿವಿದು ಕಡಿದು ರಣಭೂತಕೆ ಕಾಚೇಂದ್ರ
ಸವಿದುತ್ತ ಮಾಡಿ ನೀಡಿದನು ॥೧೦೮॥

ಧಾರುಣಿಯೊಳೊಡಗಲಿ ಈ ಪರಿಯಂತೆ
ಧಾರುಣಿ ಅಡಿಮೇಲಾದಂತೆ
ಭೋರೆಂದು ನರಸಿಂಹ[ನ] ಪಾಳೆಯದೊಳು
ದಾರಿಯ ಬಿಡಿಸಿದ ಕಾಚ ॥೧೦೯॥

ಲೂಟಿಯಿಂದಲಿ ಮುಂದಕೆ ದಾಂಟಿ ಕಾಚೇಂದ್ರ
ಕೋಟೆಯ ದಂಡಿಗೆ ಬಂದು
ಚೀಟನಂಬಿಗೆ ಕಟ್ಟಿ ಗುಜ್ಜಲೋಬನ ಕೈಯ್ಯ
ಕೋಟೆ[೫೧]ಯ ಮೇಲಕೆಸೆಸಿದ[೫೧] ॥೧೧೦॥

ಎಚ್ಚಂಬಿಲಿ ಬಂದ ಓಲೆಯನೋದಿಸಿ
ಹೆಚ್ಚಿ ಗೋವಿಂದನಾಯಕನು
ಮುಚ್ಚಿದ ಬಾಗೂರ ಕದವ ತೆರೆಸಿ ಹೊರಟು
ಅಚ್ಚರಿಯಲಿ ಬಂದನವನು ೧೧೧॥

ಸಬ್ಬದಳದ ಮೇಲೆ [೫೨]ಹೆಬ್ಬುಲಿ[೫೨] ಕಾಚಯ್ಯ
[೫೩]ಒಬ್ಬನೆ[೫೩] ಬಹರೇನೊ ಮಗನೆ
ತಬ್ಬಿ ಕರೆದುಕೊಂಡು ಊರೊಳೆಯಕೆ [ಹೋದ]
ಉಬ್ಬಿ ಗೋವಿಂದನಾಯಕನು ॥೧೧೨॥

ಇರಲಿತ್ತ ಬೆಳಗಾಗಲಾಕ್ಷಣ ಸುದ್ದಿಯ
ನರಸಿಂಹ ಕೇಳಿ ಕೋಪದಲಿ
ಕರೆಸಿ ಈಶ್ವರಿನಾಯಕ[೫೪]ನಿಗೆಂದನು ಕಾಚ
ನಿರದೆ ಬಾಗುರ ಹೊಕ್ಕುದೆಂತು[೫೪] ॥೧೧೩॥

ಕಾಣೆವರಿಯೆವು ಕಾಚ ಬಾಗೂರ ಹೊಕ್ಕುದ
ಕೇಣದಿ ನಾ ಬಿಡಿಸುವೆನು

೫೧–೫೧ ವಳಯಕೆ ಇಡಿಸಿದನು(ಶಿ), ೫೨–೫೨ ಒಬ್ಬನೆ (ಶಿ), ೫೩–೫೩ ಹೆಬ್ಬುಲಿ (ಶಿ), ೫೪–೫೪.....ಪೊಕ್ಕ ಪರಿಯ ಹೇಗೆಂದು ಕೇಳಿದನು (ಶಿ)

ಕ್ಷೋಣಿಪ ನರಸಿಂಹ ವೈರಿಗೆ ವಜ್ರದ
ಸಾಣೆ ನಿಮ್ಮ ಪಾದಯುಗಳ ॥೧೧೪॥

ಹೊಕ್ಕನು ಕಾಚ ಬಾಗೂರೊಳಯಕೆ ಬಂದು
ಸಿಕ್ಕಿದ ನಮ್ಮ ಬಲೆಯೊಳಗೆ
ಮಿಕ್ಕು ಮೀರಿ ಸೊಕ್ಕಿದವನ ಹಿಡಿದು ಸೆರೆಯ
ನಿಕ್ಕುವೆ ನಿಮ್ಮ ಪಾದದಲಿ ॥೧೧೫॥

ನುಡಿದ ಪಂಥಕೆ ಮೆಚ್ಚಿ ನರಸಿಂಹರಾಯನು
ಕೊಡಿಸಿ ಕರ್ಪುರ ವೀಳೆಯವ
ನಡೆಯೆಂದು ಕಳುಹಿದ ಈಶ್ವರಿನಾಯಕನ
ಒಡನೆ ಕಾಳಗಕನುಮಾಡಿ ॥೧೧೬॥

ಕೂಡಿದ [೫೫]ಮನ್ನೆಯರ[೫೫] ಈಶ್ವರಿನಾಯಕ
ರೂಢಿಗುನ್ನತವೆಂಬಂತೆ
ಈಡು ಪಾಡಿನಲಡ್ಡೈಸಿ ಫೌಜವನಿಕ್ಕಿ
ನೋಡಿದ ಬಾಗೂರ ಸುತ್ತ ॥೧೧೭॥

ಇಂದ್ರಾಗ್ನಿ ಯಮ ನೈಋತ್ಯ ವರುಣ ವಾಯು
ಹೊಂದಿದ ಕೌಬೇರ ಈಶಾನ್ಯ
ಮುಂದೆ ಕೋಟೆಯ ಹಂಚಿ ನಡೆದ[೫೬][ನೀ][೫೬]ಶ್ವರ ಗೋ
ವಿಂದ ಎನುತ ತವಕದಲಿ ॥೧೧೮॥

ಸುತ್ತ ಮೋಹರಿ[೫೭]ಸಿರ್ದ[೫೭]ನಟ್ಟ ತಳಿಯ ಕಿತ್ತು
ಒತ್ತಿ ಅಗುಳ ಸಾರಿದರು
ಹತ್ತಿ ಕೋಟೆಯ ಮೇಲೆ ಕಡಿದಾಡುತಿರಲಾಗಿ
ಎತ್ತುಗಲ್ಲುಗಳ ಹಾಕಿದರು ॥೧೧೯॥

ಶಂಕೆಯಿಲ್ಲದೆ ಹೊರಗೆಂಟು ದಿಕ್ಕಿನಲಿ
ಡೆಂಕಣಿಗಳ ಹೂಡಿಸಿದರು

೫೫–೫೫ ಮನ್ಯರ (ಶಿ), ೫೬–೫೬ ರೀ (ಶಿ, ಹ), ೫೭–೫೭ ಸುತ್ತು (ಶಿ)

ಬಿಂಕ ಮುರಿದು ಬಾಗೂರೊಳು ಗೋವಿಂದ
ಮಂಕಾಗಿ ಮೈಮರೆದಿರ್ದ ॥೧೨೦॥

ಕಂದಿದ ಗೋವಿಂದನಾಯಕನ ಮುಖ ನೋಡಿ
ಕಂದ ಕಾಚಯ್ಯ ಕಂಡೊಡನೆ
ಇಂದಿನ ಕಾಳಗ ನನಗೆ ಸಲುವದೆಂದು
ನಿಂದು ಕೈಮುಗಿದು[೫೮]ಬೇ[೫೮]ಡಿದನು ॥೧೨೧॥

ಕಲಹಕೆ ಕಳುಹಿಸಿಕೊಂಡು ಕಾಚಯ ತನ್ನ
ಬಲು ಬಂಟರು ಸಹವಾಗಿ
ಅಲಗುವಿಡಿದು ಆಳುವೇರಿಯ ಹತ್ತಿತು
ಮಲೆತು ನಿಂತಿತು ಕಾಳಗಕೆ[೫೯] ॥೧೨೨॥[೬೦]

ಹತ್ತಿ ಕೋಟೆಯ ಮೇಲೆ ಕಡಿದಾಡುತಿರಲಾಗ
ಎತ್ತುಗಲ್ಲುಗಳ ಹಾಕಿದರು
ಇತ್ತ ಕವಿದಲ್ಲಿ ಆಳುವೇರಿಯನೇರುವಾಗ
ಮತ್ತಿರಿದಿರಿದು ನೂಕಿದರು[೬೦] ॥೧೨೩॥

ಗೊಲ್ಲ ಕಾಚನ ಬಂಟರೆಂದು ಹೆಸರುಗಳ
ಬಿಲ್ಲವರೆಚ್ಚು ಹೇ [೬೧]ಳಿದರು[೬೧]
ಬಲ್ಲಿದ ಹರಿಗೆಯವರ ತಲೆಯ ಹೊಯಿತಂದು
[೬೨]ಅಲ್ಲಿ[೬೨] ನಿವಾಳಿ ಹಾಕಿದರು ॥೧೨೪॥

ಟೆಂಟಣಿಸುವ ಎದೆ ಮೆಟ್ಟಿ[೬೩]ಗಂಟಲ ಕೊಯ್ವ
ಬಂಟರಿಗಾ[೬೪]ಗ ಕಾಚಯ್ಯ[೬೪]
ಕಂಠಮಾಲೆಯ ಕೊಟ್ಟ ಕರ್ಣದೊಳಿಟ್ಟಿರ್ದ
ಒಂಟಿಯ ತೆಗೆದಿತ್ತನಾಗ ॥೧೨೫॥

ಉರಿಯ ಬಾಣವು ಬರಸಿಡಿಲಿನ [೬೫]ರವದಲಿ[೬೫]
ಧರಣಿ [೬೬]ಸದ್ದನು[೬೬] ಮಾಡುವಂತೆ

೫೮–೫೮ ನೋ(ಶಿ), ೫೯–೫೯ ಮತ್ತು (ಶಿ), ೬೦ 'ಶಿ' ಪ್ರತಿಯಲ್ಲಿ ಈ ಎರಡೂ ಪದ್ಯಗಳು ಒಂದಾಗಿವೆ. (ಸಂ).
೬೧–೬೧ ಳು ವರು (ಶಿ), ೬೨–೬೨ ಎಲ್ಲ (ಶಿ), ೬೩+ಕೊರಳುಗಳ (ಶಿ), ೬೪–೬೪ ಗೆ (ಶಿ).
೬೫–೬೫ ರಭಸವು (ಶಿ), ೬೬–೬೬ ಶ ಲಗ್ಗೆ(ಶಿ)

ಧುರಗಲಿ ವಿಕ್ರಮ ಕಾಚನ ಪರಿವಾರ
ಮೊರೆದೆಲ್ಲ ಮೋಹರಿಸಿದರು ॥೧೨೬॥

ಸುತ್ತ ಮೋಹರದಲಿ ಎತ್ತಿ ಲಗ್ಗೆಯ ಮಾಡಿ
ಕೊತ್ತಳಗಳ ಬೀಳಲಿಡಿಸಿ
ಚಿತ್ತ ಹೆದರದೆ ಈಶ್ವರಿನಾಯಕ ಬೆಂ–
ಬತ್ತಿ ಬಂದಗಳ ದಂಡೆಯಲಿ ॥೧೨೭॥

ಕೋಟೆ ಬಿರ್ದಾ ಠಾವಿಗೆ ಕಾಚಯ್ಯನು[೬೭]
ಮೀಟುಳ್ಳ ಮನ್ನೆಯರ [೬೮]ಕೂಡಿ.[೬೮]
ಲೂಟಿಯಿಂದಲಿ ಬಂದ ನರಸಿಂಹನವರನು
ಕೋಟಲೆಗೊಳಿಸಿ ಕಡಿದನು ॥೧೨೮॥

ಕೊತ್ತಳದೊಳಗಾಗ ನಿಂದ ಕಾಚಯ್ಯಗೆ
ಎತ್ತಿದವೆರಡು ಸತ್ತಿಗೆಯು
ಸುತ್ತ ಮುತ್ತಿದ ದಂಡ ನೋಡುತ ನಿಂದನು
ಮತ್ತೆ ಮೂದಲಿಸಿ ಮನದೊಳು ॥೧೨೯॥

ನೀಲನನೇರಿ ಕೊಮಾರ ಕಾಚಯ್ಯಗೆ
ಮೇಲೆ ಚಾಮರವ ಢಾಳೈಸಿ
ಸಾಲುಮನ್ನೆರ ಗಂಡ ನೋಡು ನೋಡೆನುತಲಿ
ಲೀಲೆಯಿಂದೆದ್ದು ಕಡಿದರು ॥೧೩೦॥

ಕಾದುವ ಶೌರ್ಯವ ಕಂಡನು ಅವನೊಬ್ಬ
ಮೂದಲಿಸಿಯೆ ಬಂದು ನಿಂದ
ಹಾದು ತರ್ಕೈಸಿ ವೀಳ್ಯವ ಕೊಟ್ಟು ವಿರುಪನ
ಕಾದೆಂದು ಕಾಚಯ್ಯ ಕಳುಹೆ ॥೧೩೧॥

ಚಂದ ಚಂದದಲಿ ಕೋಟೆಯನೇರಿ ನಿಂದಾಗ
ಬಂದು ಕಡಿದಾಡುತ್ತಿ[ರ]ಲು

೬೭+ ತನ್ನ (ಶಿ), ೬೮–೬೮ ಕರಸಿ(ಶಿ)

ನಿಂದರು ನರಸಿಂಹನವರು ಕಂಗೆಟ್ಟಾಗ
ಹಿಂದಕೆ ತಿರುಗಿ ಓಡಿದರು* ॥೧೩೨॥

ಒಡೆಯನ ಶೌರ್ಯವ ಕಂಡನವನೊಬ್ಬ
ಕಡುಗಲಿ ಸರಪಳಿ ವಿರುಪ
ಮಡದಿ ಮಕ್ಕಳು ನಿಮ್ಮ ಹೆಸರೆಂದು ಎನುತಲಿ
ಒಡನೆ ಕೋಟೆಯ ಧುಮುಕಿದರು ॥೧೩೩॥

ಸಬ್ಬ ದಳದ ಮೇಲೆ ಒಬ್ಬನೆ ವಿರುಪಯ್ಯ
ಹೆಬ್ಬುಲಿಯಂತೆ ಹೋರುತಲಿ
ತಬ್ಬಿಬ್ಬುಗೊಳ್ಳದೆ ನರಸಿಂಹನವರನು
ಉಬ್ಬಿ ಕಡಿದನು ಬೇಗದಲಿ ॥೧೩೪॥

ಕತ್ತಿಯ ಹೊಯಿಲಿಗೆ ಕಿಡಿಕಿಡಿ ಹಾರುತ
ಹತ್ತುತಿರ್ದವು ಮೈಯ ಗಾಯ
ಕತ್ತಿ ಕೈದುಗಳು ಮುರಿಯಲಾಕ್ಷಣದೊಳು
ಕಿತ್ತುಕೊಂಡರು ವಂಕಿಗಳ ॥೧೩೫॥

ಮುಂದಲೆ ಮುಂದಲೆಗಳ ಪಿಡಿದಿರಿದಾಡಿ
ಸಂಧಿಸಿ [೬೯]ಸಲೆ[೬೯] ತಿವಿದಾಡಿ
ಬಂದು ಮುತ್ತಿತು ಸರಪಳಿ ವಿರುಪಯ್ಯನ
ನಿಂದು ಎಲ್ಲರ ಕಡಿವುತಲಿ ॥೧೩೬॥

ನರಸಿಂಹರಾಯನ ಬಿಲ್ಲಾಳೆಕ್ಕಟಿಗರು
ಧು[ರ]ಗಲಿ ವಿರುಪನ ಮುತ್ತಿ
ಭರದಿಂದಲೆಸೆಯಲು ಮೈಮುತ್ತಿ ರಣದೊಳು
ಗರುಡನ ಗೆರೆಯಂದದಲಿ ॥೧೩೭॥

ಹತ್ತುಸಾವಿರ[೭೦]ಪಡೆಯ[೭೦]ತೆಲುಗರೆಲ್ಲರು ಬಂದು
ಮುತ್ತಿ ನಿಂದರು ವಿರುಪಯನ

---

* ಈ ಪದ್ಯ 'ಹ' ಪ್ರತಿಯಲ್ಲಿ ಇಲ್ಲ (ಸಂ), ೬೯–೬೯ ಸಂಧಿಸಿ (ಶಿ), ೭೦–೭೦ ಗಾಢೇಯ (ಶಿ).

ಮತ್ತೆ ಮೂದಲಿಸಿ ತಿವಿಯಲಾಕ್ಷಣದೊಳು
ಸತ್ತು ಧರಣಿಗೊರಗಿದನು ॥೧೩೮॥

ಕಂಡೆನೊ ಕಂಡೆನೊ ಕಲಿ ವಿರುಪಯ್ಯ ನಿನ್ನ
ರುಂಡ ಮುಂಡವ ಬೀಳಲಿರಿದು
ತುಂಡೇಳ ಬೀಳಿರಿದು ನರಸಿಂಹನ ನೆರೆ
ಗಂಡು ಮೂದಲಿಸಿ ಕಾಚಯ್ಯ ॥೧೩೯॥

ಕೊತ್ತಳದೊಳಗಿರ್ದ ಕಾಚಭೂವರನಾಗ
ಮತ್ತೆ ಕೋಟೆಯ ಧುಮುಕಿದನು
ಸತ್ತ ಹೆಣನ ಕಂಡು ವಿರುಪ ಬಿದ್ದಿರಲಾಗಿ
ಎತ್ತಿ ಹಿಡಿದನು ಬೇಗದಲಿ ॥೧೪೦॥

ಕಾಳಗದೊಳು ಕಾಚ ಕಡಿದಾಡುತಿರಲಾಗ
ಪಾಳಯದೊಳಗೆ ಗುಲ್ಲೆದ್ದು
ಕೋಳುಹೋಗುವ ಬಂಟ ನಾನಲ್ಲವು ಕೇಳಿ
ಸಾಳುವ ಧೀ[ರ] ರಣದೊಳಗೆ ॥೧೪೧॥

ಒಡೆಯನ ಶೌರ್ಯವ ಕಂಡರು ಬಂಟರು
ಕಡುಗಲಿಗಳು ಮೂದಲಿಸಿ
ತಡೆಯದೆ ಕೋಟೆಯ ಧುಮುಕಿ ಬಂದಾಗಳೆ
ನಡೆದರು ಕಾಚನ ಬಲಕೆ ॥೧೪೨॥

ಕಾಳಗದೊಳು ಕಾಚ ಕಡಿದಾಡುತಿರಲಾಗಿ
ಸಾಳುವ ನರಸಿಂಹನವರು
ಕೋಳ ಹಿಡಿಯದೆ ಬಿಟ್ಟೋಡಿ[ತು] ದೆಸೆಗೆಟ್ಟು
ಭಾಳಲೋಚನ ಬಲ್ಲನೆನುತ ॥೧೪೩॥

ಆಳಿದೊಡೆಯ ಕಾಚ ಸರಪಳಿ ವಿರುಪನ
ಬಾಳ ಜತನವೆಂದೆನುತ
ಪಾಳಯವೆಲ್ಲ ತಲೆವಿಡಿದು ನಿಂದಾಗ
ಆಳುವೇರಿಗೆ ಬಂದು ನಿಂದು ॥೧೪೪॥

ಸತ್ತ ಹೆಣನ ಹರಿಗೆಯೊಳು ಹಾಕಿನ್ನು
ಮತ್ತೆ ಹೊತ್ತರು ವಿರುಪಯನ
ಅರ್ತಿಯಿಂದಲಿ ಪಾಳೆಯದೊಳಯಕೆ ಹೊತ್ತು
[೨೧]ಮತ್ತೆ ಇಳುಹಿ ನಿಂದರೆಲ್ಲ[೨೧] ॥೧೪೫॥

ಕಾದುವ ಶೌರ್ಯವ ಕಾಣದೆ ಗೋವಿಂದ
ವೇದನೆಗೊಂಡ ಮನದೊಳಗೆ
ಬಂದು ಸೆಟ್ಟಿಗಳು ಏಕಾಂತವಾಡಿದರು
ಇಂದು ಕಾಬೆವು ನರಸಿಂಹನ ॥೧೪೬॥

ಕರೆಸಿ ಬ್ರಾಹ್ಮಣ ನಿಯೋಗಿ ನರಸಿಂಹನ
ಭರದಿ ಸಂಧಿಸಿ ಮಾತನಾಡು
ಧುರಗಲಿ ಕಲ್ಲರಸಯ್ಯ ಬಂದನು ಬೇಗ
ನರಸಿಂಹರಾಯನ ಕಂಡ ॥೧೪೭॥

ಬಂಡು ಮಾಡಲಿಬೇಡ ಬಾಗೂರ ಪ್ರಜೆಯನು
ಗಂಡುಗಲಿಯು ನರಸಿಂಹ
ಕಂಡು ಬದುಕೇನೆಂದು ಗೋವಿಂದ ಕಳುಹಿದ ಭೂ
ಮಂಡಲಪತಿಯೆ ಕೇಳೆಂದ ॥೧೪೮॥

ಬಲ್ಲಿದ ಈಶ್ವರಿನಾಯಕ ಬಂದಹನೆ
ಎಲ್ಲ ಮನ್ನೇರು ಸಹವಾಗಿ
ಗೊಲ್ಲ ಸಿರುಮನ ಮಗ ಕಾಚನ ಕೊಟ್ಟರೆ
ನಿಲ್ಲದೆಲ್ಲವು ಸಂತವೆಂದ ॥೧೪೯॥

ಹತ್ತು ಸಾವಿರ ಹೊನ್ನ ಕೊಟ್ಟೇವು ಎನುತಲಿ
ಮತ್ತೆ ಸಂಧಿಗೆ ಮಾತನಾ[ಡೆ]
ಒತ್ತೀಲಿ ನಿಂದಿರ್ದ ಈಶ್ವರಿನಾಯಕ
ಕತ್ತವ ಹಿಡಿದು ನೂಕಿಸಿದ ॥೧೫೦॥

೨೧–೨೧ ಮತ್ತಿಳುಹಿದರು ಕಾಚಯ್ಯನ(ಶಿ).

ಕಲ್ಲರಸನು ಬಂದು ಹೊಕ್ಕನಾ ಬಾಗೂರ
ಝಲ್ಲೆನುತಲಿ ಮನದೊಳಗೆ
ಗೊಲ್ಲ ಕಾಚನ ಕೊಟ್ಟರೆ ಸಂತವೆಂದು ರಾಯ
ನಿಲ್ಲದೆನ್ನನು ಕಳಿಹಿದನು ॥೧೫೧॥

ಕಂಡು ಬಾಗೂರ ಸೆಟ್ಟಿಗಳೆಲ್ಲ ಸಹವಾಗಿ
ಮಂಡಲಪತಿಯೆ ನಾವಿನ್ನು
ಕೊಡು ಕಾಚನ ಕೈಸೆರೆಯ ನಮಗೆಯೆಂದು
ನುಡಿದನೀಶ್ವರಿ ನಾಯಕನು[೨೨] ॥೧೫೨॥

ಎಂದ ಮಾತನು ಕೇಳಿ [೨೩]ನೊಂದು ಚಿಂತಿಸುತಲಿ[೨೩]
ಬಂಧುಜನರ ಕರೆಸಿದನು
ಇಂದೆನ್ನ [೨೪] ಕಂದ ಕಾಚನ ಕೈಸೆರೆಯ ಗೋ[೨೪]
ವಿಂದನಾಯಕ ಕೊಡೆನೆಂದ ॥೧೫೩॥

ಅಪ್ಪಾಜಿ ಕೇಳೆನ್ನ ಗೋವಿಂದ ನೊಸಲೊಳು
ತಪ್ಪದಿದೆ ವಿಧಿಲಿಖಿತವೆಂದ
ಕಪ್ಪವ ಕೊಟ್ಟು ಬದುಕು ನರಸಿಂಹಗೆ
ಒಪ್ಪಿಸೆಂದನು ಕಾಚೇಂದ್ರಪತಿ ॥೧೫೪॥

ಆರ ಮಗನ ನಾನಾರಿಗೆ ಕೊಡಲಪ್ಪ
ಧೀರ ಕಾಚಣ್ಣ ಬೂದಿಹಾಳ್ಗೆ
[ಇ]ರದೆ ಹೋಗು ನಾವು ನರಸಿಂಹನ ಕಂಡು
ಧಾರುಣಿಯೊಳು ಬದುಕುವೆವು ॥೧೫೫॥

ಎಂದ ಮಾತನು ಕೇಳುತ ಕಾಚಣ್ಣನು
ನೊಂದು ಮಮ್ಮಲನೆ ಮರುಗುತಲಿ
ಕುಂದದೆ ನರಸಿಂಹನೊಡನೆ ಯುದ್ಧವ ಮಾಡಿ
ಹಿಂದೆ ನಾ ಹೋಗುವೆನೆಂದ[೨೫] ॥೧೫೬॥

---

೨೨ ಈ ಪದ್ಯ 'ಶಿ' ಪ್ರತಿಯಲಿ ಇಲ್ಲ. ಇಲ್ಲಿ ಪ್ರಾಸ ತಪ್ಪಿದೆ. ಎರಡು ಪದ್ಯಗಳು ಒಂದಾಗಿರಬಹುದು (ಸಂ). ೨೩–೨೩ದನು ಗೋವಿಂದ (ಶಿ), ೨೪–೨೪ ಕಾಚನ ಕೈಯ್ಯಾರೆ ಗೋ(ಶಿ), ೨೫ ಈ ಪದ್ಯ 'ಹ' ಪ್ರತಿಯಲ್ಲಿ ಮಾತ್ರವಿದೆ (ಸಂ)

ಬಂದು ಹೋಗುವನಲ್ಲ ತಂದೆ ಸಿರುಮನಾಣೆ
ಸಂದೇಹ ಬೇಡ ನೋಡೆಂದ
ಮುಂದುಗೆಡಿಸಿ ನರಸಿಂಹನ ದಂಡನು ಪೆನು
ಗೊಂಡೆ ಬಾಗಿಲ ಹೊಗಿಸುವೆನು[೭೬] ॥೧೫೭॥

ಕಾಳಗಕ್ಕಾಗಿ ನೀ ಬಂದುದಿಲ್ಲವೊ ಕಾಚ
ಸೂಳೆ [೭೭]ಬೆನಕಿ[೭೭] ಗಾಗಿ ಬಂದೆ
ಹೇಳಿದ ಮಾತಿಗೆ ಹೋಗಲಿಲ್ಲವೊ ಎಂದು
ತಾಳಿದ ಮನದಿ ರೋಷವನು ॥೧೫೮॥

ನಿನ್ನ ಪಟ್ಟಣದೊಳು ಹೆಣ್ಣೆಂಬರೆಲ್ಲರು
ನನ್ನ ತಾಯಿ ಸಮಾನ
ಬಿನ್ನೈಸಿ ನುಡಿದನು ಕಾಚ ಗೋವಿಂದಗೆ
ಮನ್ನಣೆಯಲಿ *[ಮರು]*ಮಾತ ॥೧೫೯॥

ಹಿಂದಣ ಸತ್ಯಪ್ರಮಾಣಕೆ ಗೋವಿಂದ
ತಂದೆ ಸಿರುಮ ಕಳುಹಿದನು
ಕುಂದಿನ ಮಾ[ತ]ನಾಡಿದೆಯೆಂದು ಕಾಚಣ್ಣ
ನೊಂದೆದ್ದ ತನ್ನ ಮನದಲ್ಲಿ ॥೧೬೦॥

ಎದ್ದು ಕೈಮುಗಿದು ಕಾಚ ಗೋವಿಂದಗೆ
ಬುದ್ಧಿಯ ಮಾತ ಹೇಳಿದನು
ಇದ್ದ ದಂಡನು ಕಡಿವುತ ಬೂದಿಹಾಳಿಗೆ
ನಿರ್ಧರದಲಿ ಪೋಪೆನೆಂದ ॥೧೬೧॥

ಉಕ್ಕುವ ಕಂಬನಿ ಸಹಿತ ಗೋವಿಂದನು
ತರ್ಕೈಸಿ ಉಡುಗೊರೆ ಇತ್ತು
ಮಕ್ಕಳ ಮಾಣಿಕ ಕಂದ ಕಾಚಯ ನೀನು
ಸಿಕ್ಕದೆ ಪೋಗು ಬೂದಿಹಾಳಿಗೆ ॥೧೬೨॥

---

೭೬ ಈ ಪದ್ಯ 'ಶಿ' ಪ್ರತಿಯಲ್ಲಿ ಮಾತ್ರವಿದೆ (ಸಂ), ೭೭–೭೭ ಜನರಿ(ಶಿ), *–* ಮೂರು (ಶಿ, ಹ).

ಎನ್ನೊಡನಿಂದು ಸಾವೊ ಬಂಟರು ಬನ್ನಿ
ಚಿನ್ನಗಾಳೆಯ ಹಿಡಿಸಿದನು
ಮನ್ನೆಯ ಕಾಚನ ಮುನ್ನೂರು ಪರಿವಾ[ರ]
ಉನ್ನಿಸಿದರು ತಮತಮಗೆ ॥೧೬೩॥

ಉಡುದಾರವ ಕಿತ್ತು ಮುಂಗೈಗೆ ಕಟ್ಟಿದರು
ಕಡುಗಲಿಗಳು ಪಂಥದಲಿ
ಸಿಡಿಲ ಸೆರೆಯ ಬಿಟ್ಟಂದದಿ ಬಂದರು
ಒಡೆಯ ಕಾಚನ ಎಡಬಲದಿ ॥೧೬೪॥

ಆಳುವೇರಿಯನೇರಿ ಕಾಚಯ್ಯ ಹಿಡಿಸಿದ
ಕಹಳೆಯನಾಗ ಬೇಗದಲಿ
ಸಾಳುವ ನರಸಿಂಹನ ಪಾಳ್ಯ ಜತನವೆಂದು
ಕೋಳುಗೊಂಬೆನು ಇಂದಿನಿರುಳೆ ॥೧೬೫॥

ಚಂದ್ರಪುರದ ಬಾಗಿಲ ಸಾರಿಸಿ ಕಾಚ
ಬಂದುನು ಆನೆವಾಳದಲಿ
ಹೊಂದಿದ ಬಾಗಿಲ ಹನುಮಗೆ ಶರಣೆಂದು
ಮಂದಿ ಸಹಿತ ಮೊರವೊಂಟ[೭೮] ॥೧೬೬॥

ತಳರು. . . . .ಯ ಮಾಡಿ ಬಂಟರು ನಡೆದರು
ಇಳಿವುತಿರ್ದರು ಸೊಬಗಿನಲಿ
ಸೆಳೆದು ಗುಡಾರವ ಹರಿದು ಸೂರೆಯ ಮಾಡಿ
ಕೊಲಲೋ ಎಂದು ಬೊಬ್ಬಿರಿದು[೭೯] ॥೧೬೭॥

ನೆಟ್ಟ ತಳಿಯ ಕಿತ್ತು ಹೊತ್ತು ಸೂರೆಯ ಮಾಡಿ
ಅಷ್ಟಮದವು ಕವಿದಂತೆ
ಕುಟ್ಟಿ ಸಂಹರಮಾಡಿ ಬಂಟರು ನಡೆದರು
ಪಟ್ಟದಾನೆಯು ಕಾಚನ ॥೧೬೮॥

---

೭೮ ಈ ಪದ್ಯದ ಉತ್ತರಾರ್ಧ 'ಶಿ' ಪ್ರತಿಯಲ್ಲಿ ಇಲ್ಲ (ಸಂ), ೭೯ ಈ ಪದ್ಯದ ಪೂರ್ವಾರ್ಧ 'ಶಿ' ಪ್ರತಿಯಲ್ಲಿ ಇಲ್ಲ(ಸಂ),

ಬಲ್ಲಿದ ಬಂಟರು ಕಡಿದಾಡುತಿರಲಾಗಿ
ಬಾಳೆ ಕದಳಿ ಬಿದ್ದಂತೆ
ಸಾಳುವ ನರಸಿಂಹನ ದಂಡಿನೊಳಗೆ ಹೊಕ್ಕು
ಬೀಳಲಿರಿದು ಕೆಡಹಿದರು ॥೧೭೯॥

ಆಳಾಳುಗಳ ಮೆಟ್ಟಿ ಹೊಯ್ಯುತ ನಡೆದನು
ಕಾಳೆಯನಾಯಕ ಕರಿಯ
ಘೋಳೆಂದು ನರಸಿಂಹನ ಪಾಳಯದೊಳು
ಕೋಳುಗೊಂಡನು ಗೊಲ್ಲ ಕಾಚ ॥೧೮೦॥

ಕಲಕಿತು ಬಲವು ಅವರಿವರೆನ್ನದೆ
ಕೊಲಲೋ ಎಂದು ಬೊಬ್ಬಿರಿದು
ಅಲಗಿನ ಮೊನೆಯಲಿ ಹೊಯ್ಯಲು ಕಿಡಿಸೂಸಿ
ಬಲಗೈಯ್ಯ ಕತ್ತಿ [೪೦]ಬಿದ್ದೋಡೆ[೪೦] ॥೧೮೧॥

[೪೧]ಅದ್ದಲಿಸುವ[೪೧] ನರಸಿಂಹನವರು ಸ-
ಮುದ್ರದ ತೆರೆಗಳಂದದಲಿ
ಎದ್ದು ಬರಲು ಬೇಗ ಕಾಚನ ಬಂಟರು ಉ-
ಬ್ಬೆದ್ದು ಕಡಿಯೆ ಪರಬಲವ ॥೧೮೨॥

ಒಡನೆ ಬೆರಸಿ ಬಹ ಪರಿವಾರ ಗುಜ್ಜಲೋಬ
ತಡೆಯ ಬಂದರೇನೋ ಹೇಳೊ
ಮಿಡಿಯ ಗಾಯವು ತಾಕಿ ಹಡಪದ ತಿಮ್ಮನು
ನಡೆಯಲಾರದೆ ಬರುತಹನೆ ॥೧೮೩॥

ಹೇಳಿದ ಮಾತನು ಕೇಳುತ ಕಾಚಯ್ಯ
ಪಾಳೆಯಕಾಗಿ ತಿರುಗಿದನು
ಆಳುವ ಧನಿ ಬಂದು ಹಡಪದ ತಿಮ್ಮನ
ತೋಳುಗೈಯ್ಯಿಕ್ಕಿ ತಂದೊಡನೆ ॥೧೮೪॥

೪೦–೪೦ ಬಿದ್ದಾನೆ (ಶಿ), ೪೧–೪೧ ಆಧರಿಸುತ (ಶಿ)

ಗೆಜ್ಜೆ ಕಾಲಾಟದ ಹರಿಗೆಯ ಬಂಟರು
ವಜ್ರಾಂಗಿಯ ಜೋಡ ತೊಟ್ಟು
ಮಝು ಭಾಪುರಿ ಎಂದು ನಲಿದಾಡಿ ಬಂ*[ದ]*ರು
ಹೆಜ್ಜೆ ಹೆಜ್ಜೆಗೆ ಬೀಳಲಿರಿದು ॥೧೭೫॥

ನರಸಿಂಹನ ದಂಡ ಹೊರಟು ತಿಮ್ಮಯ್ಯನ
ಹರಿಗೆಯೊಳಗೆ ಹಾಕಿ ಹೊತ್ತು
ಬರುತ ಬೂದಿಯಹಾಳ ದಾರಿಯ ತಪ್ಪಿಸಿ
ಹರಿದರು ನೀರಗುಂದಕಾಗಿ ॥೧೭೬॥

ಏರಿದ ವಾರುವ ಹರಿದಾಳು ಸಿಕ್ಕದೆ
ನೇರಲಗೇರಿಗೆ ಬಂದವರು
ಧೀರ ಕಾಚಯ್ಯನು ಮುಖಮಜ್ಜನ ಮಾಡಿ
ಮೀರಿ ನಡೆ[ದ] ಬೂದಿಹಾಳಿಗೆ ॥೧೭೭॥

ಉಪ್ಪಿನಮಾಳಿಗೆ ಬಂದನು ಕಾಚಯ್ಯ
ತಪ್ಪದೆ ಕಹಳೆ ಹಿಡಿಸಿದನು
ಛಪ್ಪನ್ನ ದೇಶದ ನರಸಿಂಹನವರಿನ್ನು
ತೆಪ್ಪತ್ತುಗೊಂಡು ತಿಳಿಯರು ॥೧೭೮॥

ಬಿದಿರಿನ ಕಹಳೆಯ ಕೇಳುತ ಕಾಚನೆಂ
ದರಿದನು ಸಿರುಮಭೂವರನು
ಅರಸಿ ಚಿಕ್ಕಾಯ ಕೂಡೆ ಹೇಳುತಲಾಗ
ಹೊರಚಾವಡಿಗೆದ್ದು ಬಂದ ॥೧೭೯॥

ಹೊಕ್ಕು ಬಂದನು ತಂದೆ ಸಿರುಮೇಂದ್ರನೋಲಗಕೆ
ಎಕ್ಕಟಿಗರು ಸಹವಾಗಿ
ದೊಕ್ಕನೆ ಶರಣೆಂದು ನಿಂದ ಕಾಚನ ಕಂಡು
ಬೆಕ್ಕಸ ಬೆರಗಾದರೆಲ್ಲ ॥೧೮೦॥

– ಟ (ಶಿ, ಹ).

ಮೋಸವ ಮಾಡಿ ಬಾಗೂರ ಗೋವಿಂದನ
ಆಸೆಯ ಕೆಡಿಸಿ ನೀ ಬಂದೆ
ದೇಶದೊಳಗೆ ಅಪಕೀರ್ತಿಯ ಮಾಡಿದೆ
ಹೇಸಿ ಬಂಟನು ಕಾಚಯ್ಯ ॥೧೮೧॥

ಗೋವಿಂದನಾಯಕಗೆ ಹೇಳದೆ ಬಂದೆಯ
ಜೀವದಾಸೆಯಲಿ ಕಾಚಯ್ಯ
ಆವ ಪರಿಯಲಿಯಾದರೆ ಕಾಯ ಸ್ಥಿರವಲ್ಲ
ಸಾವು ತಪ್ಪದು ಕಂದ ನಮಗೆ ॥೧೮೨॥

ಹೇಳದಿಳಿದು ಬಂದ ಗೋವಿಂದನಾಯಕಗೆ
ಕೇಳಬೇಡವೊ ಸಿರುಮೇಂದ್ರ
ಸಾಳುವ ನರಸಿಂಹನ ದಂಡ ಕಡಿವೆನು
ವೀಳ್ಯವ ಪಾಲಿಸೆಂದ ಮಲ್ಲಣ್ಣ ॥೧೮೩॥

ತೋರಿದ ಶೌರ್ಯ ಪ್ರತಾಪಗಳೆಲ್ಲವು
ನೀರಿನ ಹೋಮಗಳೆಂದ
ಧಾರುಣಿಯೊಳು ನಾವು ದಂಡಿನೊಳಗೆ ಹೋಗಿ
ಸೇರಿ ಸಾವೊನು ನಡೆಯೆಂದ ॥೧೮೪॥

ಕಂದ ಕಾಚನ ಕೋಪವ ಕಂಡು ಸಿರುಮೇಂದ್ರ
ನೊಂದುಕೊಂಡನು ಮನದೊಳಗೆ
ಸಂದೇಹ ಬೇಡ ಮಲ್ಲಣ್ಣನ ಮಾತಿಗೆ
ಇಂದು ಕೋಪಿಸುವರೆ ಮಗನೆ ॥೧೮೫॥

ಹಂದೆತನದಿ ಗೋವಿಂದಗೆ ಹೇಳದೆ
ಬಂದೆನಾದರೆ ನಿನ್ನ ಬಸುರ
ಬಂದ ಮಗನು ಅಲ್ಲ ತಂದೆ ಸಿರುಮ ಕೇಳು
ಸಂದೇಹ ಬೇಡ ನಿನ್ನಾಣೆ ॥೧೮೬॥

ಹೀಗೆಂದು ಹೇಳೆ ಹಾಗಹುದೆಂದು ಸಿರುಮೇಂದ್ರ
ಮಾಗಿಯ ಕೋಗಿಲಂತಾದ

ಬಾಗೂರಲತ್ತಲಿ ನರಸಿಂಹರಾಯನು
ಆಗ ಈಶ್ವರಗೆ ಇಂತೆಂದ ॥೧೮೭॥

ಬಲುಹಿಂದ ಬಲವ ಕಲಕಿ ಹೊಕ್ಕು ಬಾಗೂರ
ಕೊಲೆಗೇಡಿ ಸಿರುಮನ ಮಗನು
ಹುಲಿ ಹೊಕ್ಕು ಹುಲ್ಲೆಯ ಹಿಂಡ ಕಲಕಿದಂತೆ
ಗೆಲವಿಂದ ಹೋದ ಗೊಲ್ಲ ಕಾಚ ॥೧೮೮॥

ಹೋಗಲಿ ಕಾಚನು ಕೇಳು ನರಸಿಂಹರಾಯ
ಬಾಗೂರ ಸಾಧ್ಯವ ಮಾಡಿ
ಬೇಗ ಬೂದಿಯಹಾಳ ಸೆರೆವಿಡಿವೆನು ಎಂದು
ಆಗ ಈಶ್ವರ ನುಡಿದನು ॥೧೮೯॥

ಈಶ್ವರನಾಯಕನ ನುಡಿಗೇಳಿ ನರಸಿಂಹ
ರೋಷದಿಂದಲಿ ನೋಡಿದನು
ಮೀಸೆಯ ತಿರುಹಿ ಬಾಗೂರ ಕೋಟೆಯ ನೋಡಿ
ವಾಸಿಯಿಂದಲಿ ನಡೆದನು ॥೧೯೦॥

ಛಲವಿಕ್ಕಿ ಮಲತು ನಡೆದು ದೊರೆಗಳ ಮುಂದೆ
ಕಲಹಕೆ ಕಲಿಗಳೇರಿದನು
ಅಲಗಾಯುಧವ ಕಿತ್ತು ಅಡರಿತಾಕ್ಷ*[ಣ]*ದೊಳು
ಅಳುಕದೆ ಹರಿಗೆಯ ಭಟರು ॥೧೯೧॥

ಏನು ಎಳ್ಳನಿತು ಕಾಣಿಸದಂತೆ ಬಾಗೂರ
ಜೇನ ಹುಳುಗಳು [ಮುತ್ತಿದಂತೆ]
ಆನೆ ಕುದುರೆ ಸೇನೆ ಕವಿಯೆ ಸಮರದೊಳು
ಏಳು ಬೀಳುತ ಕಾದುತಿರಲು ॥೧೯೨॥

ಕಾಳಗದೊಳು ಕೋಳು ಹೋಗದು ಕೋಟೆಯು
ಸಾಳುವ ನರಸಿಂಹ ಕಂಡು

– X (ಶಿ, ಹ).

ಬಾಳ ಜಡಿದು ನಡೆದಲ್ಲಿ ಹೊರಕೇರಿಯ
ಧೂಳಿಕೋಟೆಯ ಮಾಡಿಕೊಂಡ ॥೯೩॥

ಕೆಟ್ಟೆನೆನುತ ಬಾಯಬಿಟ್ಟು ಗೋವಿಂದನು
ಸೆಟ್ಟಿಗಳೆಲ್ಲರ ಕರೆಸಿ
ದಿಟ್ಟ ನರಸಿಂಹಗೆ ಕಾಣಿಕೆ ಕಪ್ಪವ
ಕೊಟ್ಟು ನಮ್ಮನು ಕಾಣೆಸೆಂದ ॥೯೪॥

ಎಂದ ಮಾತನು ಕೇಳಿ ನೊಂದು ಬಾಗೂರ ಪ್ರಜೆ
ಒಂದಾಗಿ ಕೂಡಿ ಮಾತಾಡಿ
ಸಂದೇಹ ಬಿಟ್ಟಿತೆನುತ ಬುದ್ಧಿವಂತರು
ಬಂದು ಕೋಟೆಯ ಮೆಟ್ಟಿ ನಿಂದು ॥೯೫॥

ಇಡಬೇಡ*[ಅಂಬೆ]*ಸೆಯಲಿಬೇಡ ನಿಮ್ಮಯ
ಒಡೆಯ ನರಸಿಂಹನಾಣೆನಲು
ಕೊಡುವೆವು ಬೇಡಿದ ಕಾಣಿಕೆ ಕಪ್ಪವ
ಕೆಡಿಸಬೇಡ[ವೊ] ಬಾಗೂರ ॥೯೬॥

ಎಂದ ಮಾತನು ಕೇಳಿ ಈಶ್ವರಿನಾಯಕ
ನಿಂದನಗಳ ದಂಡೆಯಲಿ
ಇಂದಿನ ಸ್ಥಿತಿಯ ಎಕ್ಕಟಿಗ ಗಂಗಯ್ಯ
ಮುಂದೆ ರಾಯನಿಗೆ ಬಿನ್ನೈಸು ॥೯೭॥

ಹೀಗೆಂಬ ರಾಜಕಾರ್ಯಕೆ ಗಂಗಯ್ಯ ಹೋಗಿ
ಬೇಗ ನರಸಿಂಹನಡಿಗೆರಗಿ
ಬಾಗೂರ ಅರಮನೆಯುಳುಹಬೇಕೈ ಸ್ವಾಮಿ
ಈಗ ಮುತ್ತಿಗೆ ತೆಗೆಸೆಂದ ॥೯೮॥

ಲೇಸಿನ ನುಡಿಯ ಕೇಳುತ ನರಸಿಂಹರಾಯ
ಈಶ್ವರಿನಾಯಕನ ಕರೆಸಿ

– ಇಂದೆ (ಶಿ, ಹ).

ಫಾಸಿ ಮಾಡದೆ ಮುತ್ತಿಗೆಯ ತೆಗೆಸೆನುತ ವಿ
ಲಾಸದೊಳಗವನುಸುರಿದನು ॥೧೯೯॥

ಎಂದ ಮನ್ನಣೆಯ ಮಾತಿಗೀಶ್ವರಿನಾಯಕ
ಹಿಂದಕ್ಕೆ ಮುತ್ತಿಗೆದೆಗೆಸಿ
ಬಂದು ಗೋವಿಂದನಾಯಕನ ಮಂತ್ರಿಗಳೊಳು
ಸಂಧಾನದ ಮಾತನಾಡಿ ॥೨೦೦॥

ಬರಿಯ ಮಾತಿಲಿ ಫಲವಿಲ್ಲ ನರಸಿಂಹಗೆ
ತೆರು ಮೂರು ಲಕ್ಷ ವರಹೊನ್ನ
ನೆರೆ ಸಾರಿದೆನು ಕೇಳು ಗೋವಿಂದನಾಯಕ
ಮರೆಯ ಮಾತಿನ್ನೇಕೆ ಕೇಳು ॥೨೦೧॥

ನಿನ್ನ ತಮ್ಮನ ಶ್ರೀರಂಗರಾಜನ ತಂದು
ಭಿನ್ನವಿಲ್ಲದೆ ಕೈಸೆರೆಯ
ಇನ್ನು ಒಪ್ಪಿಸು ನರಸಿಂಹಗೆ ಗೋವಿಂದ
ಮನ್ನಣೆಯಲಿ ಸುಖವಿಹುದು ॥೨೦೨॥

ಆಗಳಾಲೋಚಿಸಿ ಆವಿಗೆ ಕಿಚ್ಚಿನಂತೆ
ಬೇಗೆವರಿದು ತನ್ನ ಮನದಿ
ಬಾಗೂರ ಪ್ರಜೆಗಳ ಭಂಗಬಡಿಸದೆ ನಾ
ಹೋಗುವೆನೆಂದ ಶ್ರೀರಂಗ ॥೨೦೩॥

ಬಾಣ ತಾಕಿದ ಮೃಗದಂತೆ ಗೋವಿಂದನು ತನ್ನ
ರಾಣಿವಾಸವನೆಲ್ಲ ನೋಡಿ
ಖೇಣದೊಳಿರಿದು ಕೊಲ್ಲುವೆನೆಂದು ತನ್ನಯ
ಪ್ರಾಣಕೆ ಹರುವನೆಣಿಸಿದನು ॥೨೦೪॥

ಮರಳುತನವು ಬೇಡ ಅಣ್ಣಾಜಿ ಗೋವಿಂದ
ಶರಿರಕೆ ನೀನಂಜಬೇಡ
ಹರಣಕೆ ಮರಣ ತಪ್ಪದು ಎಂದಿದ್ದರೆ
ಕರ ದುಃಖ ಬೇಡ ನಮ್ಮಣ್ಣ ॥೨೦೫॥

ಸಿಕ್ಕಿ ಕಂಗೆಟ್ಟು ಗೋವಿಂದನಾಯಕ ಮೂರು
ಲಕ್ಷ ವರ ಹೊನ್ನೊಡಂಬಟ್ಟು
ಧೊಕ್ಕನೆ ತನ್ನ ತಮ್ಮನ ಕೈಸೆರೆಗೊಟ್ಟು ಕ
ಬ್ಬಕ್ಕಿಯಂದದಿ ಬಾಯ ಬಿಟ್ಟ ॥೨೦೬॥

ಬಾಗೂರ ಸೆಟ್ಟಿಸಮಯರು ಸಹಿತ ಬಂದು
ಬಾಗಿಲ ಬೀಗ ಮುದ್ರೆಯನು
ಬೇಗ ಈಶ್ವರಿನಾಯಕಗೊಪ್ಪಿಸಿ ತಲೆ
ವಾಗಿ ಕೈಮುಗಿದು ನಿಂದಿಹರು ॥೨೦೭॥

ಆ ವೇಳೆಯಲಿ ಈಶ್ವರಿನಾಯಕ ತಾನು
ಭಾವಿಸಿ ಪುರ ಪರಿಜನರ
ಗೋವಿಂದನಾಯಕನ ಮನೆಗೆ ಕಾವಲನಿಕ್ಕಿ
ತಾವೀವ ಹೊನ್ನ ಬೇಡಿದನು ॥೨೦೮॥

ಅಕ್ಕಟೆನುತ ಗೋವಿಂದನಾಯಕ ಹೆ
ಮ್ಮಕ್ಕಳ ತೊಡಿಗೆ ಎಲ್ಲವನು
ಲೆಕ್ಕವ ಮಾಡಿ ಹಣ ಹೊನ್ನು ಬಂಗಾರವ
ಲಕ್ಷ ವರ[ವ]ನೆಣಿಸಿದನು ॥೨೦೯॥

ಮಿಕ್ಕ ಹೊನ್ನಿಗೆ ಹರಿತವ ಕಾಣದೆ ಮಿಗೆ
ಹೊಕ್ಕು ತೊಳಲಿ ಅರಮನೆಯ
ರೊಕ್ಕ ಬೆಳ್ಳಿಯ ಚಿನ್ನ ತಾಮ್ರ ಸ್ವರೂಪವ
ಧೊಕ್ಕನೊಪ್ಪಿಸಿ ಕಂಚು ಮುಟ್ಟ ॥೨೧೦॥

ಪಟ್ಟೆಯ ಸಕಲಾತಿ ಝಲ್ಲಿಯ ಪೆಟ್ಟಿಗೆ
ಕಟ್ಟಾಣಿಲ್ಲದ [೮೨]ಜೀಬಿನಾಣ್ಯ[೮೨]
ಒಟ್ಟಿಸಿ ಬಣ್ಣ ಪರಿಯ ದುಪ್ಪಟಿಯಿಂದ
ಕೊಟ್ಟು ಗೋವಿಂದ ಬಾಯ್ಬಿಟ್ಟ ॥೨೧೧॥

೮೨–೮೨ ನಸ್ಸು(ಹ).

ಒಳಹೊರ ಲಾಯದ ಕುದುರೆ ಸಹಿತ ಮುಂದೆ
ಹೊಳಹಿ ಅನಂತ ವಸ್ತುಗಳ
ದಳಪತಿ ಈಶ್ವರಿನಾಯಕಗೊಪ್ಪಿಸಿ
ಕಳೆಯಗುಂದಿದನು ಗೋವಿಂದ ॥೨೧೨॥

ಉಟ್ಟ ಸೀರೆವೆರಸಿ ಅರಮನೆಯಿಂದಲಿ
ನೆಟ್ಟನೆ ಬಿಟ್ಟು ಹೊರಡಿಸಿದ
ಕಟ್ಟಳೆ ಮಾಡಿ ಗೋವಿಂದನಾಯ್ಕನ ಮೇಲೆಂ
ದಟ್ಟಿದ [ತೆ]ರಕಾರರನು ॥೨೧೩॥

ಕಂಗೆಡುತಲಿ ಗೋವಿಂದನಾಯಕ ತಾನು
ಭಂಗಕೆ ಒಳಗಾದೆನೆನುತ
ಕಂಗಳಲುದಕವ ತುಂಬಿ ಅರಮನೆಯ
ಹೆಂಗಳುಸಹಿತ ಹೊರಹೊಂಟ ॥೨೧೪॥

ಮೊರೆಯಿಟ್ಟು ಸತಿಯರು ಸುರಿವ ಕಂಬನಿಗಳ
ಸೆರಗಿಂದ ಒರಸಿಕೊಳುತಲಿ
ಉರ್ವಿಗುನ್ನತ ಬಾಗೂರ ಹೊರಟುಬಂದು
ಹೊರ ಪಾಳ್ಯದಿ ನಿಂದರೆಲ್ಲ ॥೨೧೫॥

ಎಕ್ಕಟಿ ಗಂಗನ ವಶಕೆ ಗೋವಿಂದನ
ಇಕ್ಕಿ ಈಶ್ವರಿನಾಯಕನು
೮೩[ರೊಕ್ಕವ]೮೩ ಕೇಳಲು ಬಂದು ಹೇಳಿದ[ನು]
ರಕ್ಕಸ ಸಮಗಾರ ಮಲ್ಲ ॥೨೧೬॥

ಹೊನ್ನುಳ್ಳವರ ಹೇಳ್ವೆನೀಶ್ವರನಾಯಕ
ಎನ್ನ ಬಿನ್ನಪವ ಕೇಳಯ್ಯ
ಸನ್ನೆಯ ಮಾಡಿ ಒತ್ತಲಿ ನಿಂತಿರ್ದನು
ಚೆನ್ನಿಗ ಸಮಗಾರ ಮಲ್ಲ ॥೨೧೭॥

೮೩–೮೩ ಉಳ್ಳವರ(ಶಿ).

ಈತನು ಅಧಿಕಾರಿ ಬೊಮ್ಮರಸಯ್ಯನು
ಈತ ದುರ್ಮಂತ್ರಿ ಲಿಂಗರಸ
ಈತನು ಹಣವುಳ್ಳ ಮಣಿ[ಹಾ]ರಿ ಓಬಯ್ಯ
ಈತ ಚಿನಿವರದ ಹಂಪರಸ ॥೨೧೮॥

ಆಗ ಪ್ರಧಾನ ರಾಮರಸನ ತೋರಿದ
ಬೇಗ ಕರಣಿಕ ತಿಮ್ಮರಸ
ನಾಗರಸಗಳಣ್ಣ ಲಗುಮರಸನ ಕಟ್ಟಿ
ತೂಗಿ ಹಣನ ತರಿಸೆಂದ ॥೨೧೯॥

ಕಡುಕಿನ ಬ್ರಾಹ್ಮಣಗೆ ಮಡಿಲಲ್ಲಿ ಜಾಳಿಗೆ
ಒಡನಕ್ಕಸಾಲೇರ ಗಿರಿಯಗೆ
ಹಿಡಿತನ್ನಿ ಹಂಪರಸನ ತಿಮ್ಮರಸನ
ನಡುವಿಗೊನಕೆಯ ಹಾಕೆಂದ ॥೨೨೦॥

ಹಿಡಿತನ್ನಿ ಗಾಣದ ತಿಪ್ಪಣ್ಣನ ಬೇಗ
ಹಿಡಿತನ್ನಿ ಚಿಂದಿ ಪುಟ್ಟಣ್ಣನ
ಹಿಡಿತನ್ನಿ ನೀರುಗುಂದದ ಗಿರಿಯಣ್ಣನ
ಹಿಡಿತನ್ನಿ ಜಾಡರ ಚಿಕ್ಕನ ॥೨೨೧॥

*ದೊಡ್ಡ ದೊಡ್ಡವರನು ಹಿಡಿದಾಗ ಸುತ್ತರೆ
ಗಡ್ಡವ ಪಂಜಿಲಿ ಸುಡಿಸಿ
ಮಡ್ಡನೆತ್ತಿಸಿ ಮಾಜದೆ ಹಣಗೊಡಿಯೆಂದ
ಗೊಡ್ಡೇರ ಕೊಲೆಗಳ ಕೊಂದು ॥೨೨೨॥

ಪ್ರಭು ಪ್ರಜೆಯೆನ್ನದೆ ಸಭೆಗಳ ಕೂಡಿಸಿ
ಗಂಭೀರ ಸಮಗಾರ ಮಲ್ಲ
ಅಭಿನ್ನವ ಮುಟ್ಟಿ ಈಶ್ವರಿ[ನಾ]ಯಕಗಾಗ
ಕುಭಿತ ಕುಚಿತವ ಸೂಚಿಸಿದನು ॥೨೨೩॥

ಸೆಟ್ಟಿಗಳೆಲ್ಲಾಗ ಈಶ್ವರಿನಾಯಕ
ಮೇಟಿ ನೆರವಿ ಎಂದೆನುತ
ಕಟ್ಟ ಕರಿಕೆಯಗಳ [ನಡು]ವಿಗೊನಕೆಗಳ
ಕೊಟ್ಟರೆ ಬಿಡಿ ಹಣಗಳನು ॥೨೨೪॥

ಸೊಪ್ಪಿನ ಕೇರಿಯೆಪ್ಪತ್ತು ಸಾವಿರ ಹೊನ್ನ
ತಪ್ಪದೆ ಈ ಕ್ಷಣ ತರಿಸು
ತುಪ್ಪವ ಮಾರುವವರ ಕೈಯ್ಯಲಿ ಮಿಗೆ
ಒಪ್ಪಾಕೆ ಮುನ್ನೂರ ತರಿಸು* ॥೨೨೫॥

ಬಿಡದೆ ರಾಟಾಳವ ತಿರುಹುವರ ಕೈಯ್ಯ
ಒಡವೆ ಬಾಳವ ತರಿಸೆಂದ
ಮಡಕೆಯ ಮಾರುವ ಕುಂಬಾರನ ಕೈಯ್ಯ
ಕುಡಿಕಿ ತುಂಬಲಿ ತರಿಸೆಂದ ॥೨೨೬॥

ಊರೊಳಗಣ ಕೇರಿ ಕಟ್ಟಿನ ಸೂಳೇರ
ಸೇರಿದ ಹಣವ ಹೇಳಿದನು
ಮೀರಿ ಹುಲುಸು ಹಾಗ ಹಣವ ತೆಕ್ಕೊಂಬಳು
ವಾರಿಜಮುಖಿಯು ಮಲ್ಲರಸಿ ॥೨೨೭॥

ಸೂಳೆ ಬೆನಕಿಯೆಂಬವಳ ಕೈಯಲಿ ಮಿಗೆ
ಏಳುನೂರನು ತರಿಸೆಂದ
ಹೇಳಿದ ಪೇಟೆಯ ವಿರುಪಯ ಕೈಯ್ಯಲಿ
ಅಳೆದು ಗಿದ್ದನ ಹೊನ್ನ ತರಿಸೊ ॥೨೨೮॥

ಸೂಜಿಯನುಗುರೊಳಗೇರಿಸಿ ಹಣಗಳ
ಮಾಜದೆ ಕೊಡಿ ಎಂದೆನುತ
ಗಾಜಿನ ಕರಿಮಣಿ ಸಹಿತಾಗಲೊಪ್ಪಿಸಿ
ತ್ಯಜಿಸಿಲ್ಲಿಗೆ ಬೇಡವೆಂದ ॥೨೨೯॥

ಅಲಗಿನ ಮೊನೆಗಳ ಮೇಲಡ್ಡ ಮಲಗಿಸಿ
ಮೊಲೆಗೆ ಗಿರಿಕೆಗಳನು ಕಟ್ಟಿ
ಹಲವು ಬಗೆಯ ಗಳಿಕೆಯ ಹಣಗಳ ಬೇಡಿ
ತೊಲಗಲೀಸದೆ ಬಾಧಿಸಿದರು ॥೨೩೦॥

---

*ಇಲ್ಲಿಂದ 'ಹ' ಪ್ರತಿಯಲ್ಲಿ ಒಂದು ಗರಿ ಕಳೆದಿದೆ. ಹೀಗಾಗಿ "ದೊಡ್ಡದೊಡ್ಡವರು . . . ." "ಸೊಪ್ಪಿನ ಕೇರಿಯ . . ." ಈ ಎರಡನ್ನೂ ಒಳಗೊಂಡ ಪದ್ಯಗಳು ಇಲ್ಲಿ ಸಿಗುವುದಿಲ್ಲ(ಸಂ).

ಬಾಗೂರ ಒಳಯಕೆ ಹೊಕ್ಕು ಜನರ ಬಾಧಿಸುತಿರೆ
ಆಗ ತಮ್ಮಯ ಮೈದೊಡಿಗೆಗಳ
ತೂಗಿ ತಂದೊಪ್ಪಿಸಿ ಈಶ್ವರಿನಾಯಕ
ಮೂಗಿಗೆ ಬೆರಳಿಟ್ಟು ನೋಡಿ* ॥೨೩೧॥

ಛಂದ ಛಂದದ ಹಣ ಹೊನ್ನು ಬಂಗಾರವ
[೮೪]ತಂದು ನರಸಿಂಹರಾಯನಿಗೆ[೮೪]
ಮುಂದೆ ರಾಸಿಯ ಮಾಡಿ ಈಶ್ವರಿನಾಯಕ
ನಿಂದಡ್ಡಬಿದ್ದು ಕೈಮುಗಿದ ॥೨೩೨॥

ಕೂಡಿದ ಹಣ ಬಾಳವನು ಕಂಡು ನರಸಿಂಹ
ರೂಢಿಗುನ್ನತ ಈಶ್ವರಗೆ
ಈಡಿಲ್ಲದುಡುಗೊರೆ ಕರ್ಪುರ ವೀಳ್ಯವ
ಜೋಡಿಸಿ ಕೊಟ್ಟು ಮನ್ನಿಸಿದ ॥೨೩೩॥

ನರಸಿಂಹ ಬಾಗೂರ ಕೊಂಡನೆಂಬುದ ಕೇಳಿ
ಸಿರುಮಭೂವರನಾ ದಿನದಿ
ಬರಸಿದೋಲೆಯ ಬರಲೆಂದು ಭಟ್ಟರ ಕೈಯ
ಕರೆಯ ಕಳುಹಲೆರಡು ಸಂಧಿ[೮೫] ॥೨೩೪॥

❖❖

* ಈ ಪದ್ಯ 'ಹ' ಪ್ರತಿಯಲ್ಲಿ "ಕೂಡಿದ ಹಣ . . . ." ಪದ್ಯದ ಬಳಿಕ ಬಂದಿದೆ(ಸಂ).
೮೪-೮೪ ಮುಂದಿರಿಸಿದ ನರಸಿಂಹನ(ಶಿ), ೮೫ ಅಂತು ಸಂಧಿ ೨ಕ್ಕಂ ಪದನು ೩೭೨ಕ್ಕಂ ಮಂಗಳ ಮಹಾ ಶ್ರೀ (ಶಿ), ಅಂತು ಸಂಧಿ ೨ಕ್ಕಂ ಪದನು ೨೩೪ಕ್ಕಂ ಮಂಗಳ ಮಹಾಶ್ರೀ ಶ್ರೀ (ಹ).

ಸಂಧಿ : ಮೂರು

*ಶ್ರೀಗೌರಿ[೧]ವಾಮಾ[೧]ಂಗಾಲಿಂಗಿತ ಗಣನಾಥ
[೨][ನಾ][೨]ಗರ ಶಶಿರವಿದಲೆಗ
ಯೋಗಿಜನಾನಂದ ಅಸಗೋಡ ಶಂಭು ನೀ
ನಾಗುಮಾಡೆನಗೆ ಸನ್ಮತಿಯ[೩] ॥೧॥ (॥೧-೨)

[೪]ಧರೆಗೆ ಪೊಸತು ಮಾಡುವೆನೆಂದು ಸಿರುಮೇಂದ್ರ
ಅರಿಸಿಣ[೫]ಬಳೆ[೫]ಕಪ್ಪುಗಳನು
[೬]ಕೆರಸಿ[೬]ಮೊರನು ಸಿಂಬೆ ಕರಿಮಣಿ ಕಡಗವ
ನರಸಿಂಹಗೆ ತರಿಸಿದನು ॥೨॥

ಓಲೆಯ ಬರೆಸಿ ನರಸಿಂಹರಾಯನಿಗೆಂದು
ಹೇಳಿದ ಸಿರುಮಭೂವರನು
ಕೇಳಿ ಒಕ್ಕಣಿಕೆಯನಿಕ್ಕಿ ಬರೆದು ಬೇಗ
ಲೋಲ ಪ್ರಧಾನಿ ಕಲ್ಲರಸ ॥೩॥

ಶ್ರೀಮತು ಬಿರಿದು ಗಂಡರಗೂಳಿ ಗಜಸಿಂಹ ನಿ
ಸ್ಸೀಮರ ಭೀಮ ಲಲಾಮ
ಭೂಮಿಪಾಲಕ ನರಸಿಂಹಗೆ ಸಿರುಮೇಂದ್ರ
ಪ್ರೇಮದಿ ಕಳುಹಿದ ಕಾರ್ಯ ॥೪॥

ಗಂಡರ ಗಂಡನು ನರಸಿಂಹರಾಯನ
ಗಂಡನು ಅವ[ನ] ಪೆತ್ತಂಥ

---

* + ಶ್ರೀ ಗುರುಭ್ಯೋನಮಃ । ಪದನು(ಶಿ), ೧-೧ ಮಾಲಾ(ಶಿ), ೨-೨ ಸಾ (ಶಿ), ೩. ಇದು ಮೊದಲನೆಯ ಸಂಧಿಯ ಎರಡನೆಯ ಪದ್ಯವಾಗಿದೆ.'ಹ' ಪ್ರತಿಯಲ್ಲಿ ಇದು ಇಲ್ಲ (ಸಂ), ೪+ ರಾಗಭೈರವಿ (ಹ), ೫-೫ ಬೇಳೆ (ಶಿ), ೬-೬ ಕೆರೆ (ಶಿ).

ಗುಂಡರಾಜನ ಗಂಡ ಸಿರುಮಭೂವರ ಪ್ರ
ಚಂಡ ವಿಕ್ರಮಗೆಣೆಯುಂಟೆ ॥೫॥

ಅರಿರಾಯರ ಗಂಡ ಆಹವಕತಿ ಲೆಂಡ
ಪರರಾಯರಿಗೆದೆಶೂಲ
ಧುರಗಲಿ ಧೀರ ಶರಭಭೇರುಂಡ ಸಿರುಮ ಎಂದು
ಬರೆದನೋಲೆಯ ಕಲ್ಲರಸ ॥೬॥

ಬಾಗೂರ ಕೊಂಡ ಬಿಂಕದ ನರಸಿಂಹರಾಯ
ಹೋಗದೆ ನಿನ್ನ ಪಟ್ಟಣಕೆ
ಈಗಲೆ ಬಹುದು ನೀ ಬೂದಿಯಹಾಳಿಗೆ
ಆಗ ವಾಲೆಯ ಕಳುಹಿದನು ॥೭॥

ಕಟ್ಟಿಸಿದುಡುಗೊರೆ ಬರೆದೋಲೆ ಸಹವಾಗಿ
ಭಟ್ಟರ ತಿಪ್ಪನ ಕೈಯ್ಯ
ಕೊಟ್ಟು ಕಳುಹಿದನು ನರಸಿಂಹರಾಯಗೆ
ದಿಟ್ಟ ಸಿರುಮ ಬೇಗದಲಿ ॥೮॥

ಕಳುಹಲು ಭಟ್ಟರ ತಿಪ್ಪ ಬಾಗೂರಿಗೆ
ತಳುಹಿಲ್ಲದೈದಿ ಬಂದವನು
ಛಲದಂಕ ನರಸಿಂಹರಾಯ ಭಾಪುರೆ ಎಂದು
ಒಲಿದು ಕೊಂಡಾಡಿದ ಭಟ್ಟ ॥೯॥

ತಂದುಡುಗೊರೆ ವಾಲೆ ಬಳೆ ಕಪ್ಪು ಕಡಗವ
ಮುಂದಿರಿಸಿದ ನರಸಿಂಹನ
ಇಂದೀಗ ಬರಲೆಂದು ಸಿರುಮೇಂದ್ರ ಕಳುಹಿದ
ನೆಂದು ಬಿನ್ನೈಸಿದ ಭಟ್ಟ ॥೧೦॥

ತಳಿಗಿಳಿಸಿತ್ತು ನಿತ್ತು ನಡೆ ಚಪ್ಪರ
ಕೆಲದಷ್ಟಗಳು ತನ್ನ ನಿನ್ನ
ಸಿರುಮಭೂವರ ಪಟ್ಟಣರಾಜಿಸು
ನರಸಿಂಹಗೆ ಬಿನ್ನೈಸಿದನು[೭] ॥೧೧॥

೭. ಈ ಪದ್ಯ 'ಶಿ' ಪ್ರತಿಯಲ್ಲಿ ಇಲ್ಲಿ, ತುಂಬ ಅಶುದ್ಧವಾಗಿದೆ. (ಸಂ)

ಕೊಂಡಾಡಿದ ಭಟ್ಟನ ನೋಡಿ ಮೀಸರ
ಗಂಡ ಸಾಳುವ ನರಸಿಂಹ
ದಿಂಡು ದಿಂಡಿನ ಉಡುಗೊರೆಯಿತ್ತು ಸಿರುಮನ
ಲೆಂಡತನಕೆ ಬೆರಗಾದ[೮] ॥೧೨॥

ಕರೆಸಿದ ಪ್ರಧಾನಿ ಈಶ್ವರಿನಾಯಕನ
ನರಸಿಂಹಭೂಪ ಬೇಗದಲಿ
ಕರೆಸಿ ಕೊಟ್ಟ ವಾಲೆಯನೋದಿಸೆನಲಾಗಿ
ಹರುಷದಿ ಪಿಡಿದೋದಿದನು ॥೧೩॥

ಶ್ರೀಮತು ಬಿರಿದು ಗಂಡರಗೂಳಿ ಗಜಸಿಂಹ ನಿ
ಸ್ಸೀಮ ವರ ಭೀಮಲಲಾಮ
ಭೂಮಿಪಾಲಕ ಸಿರುಮೇಂದ್ರ ನರಸಿಂಹಗೆ
ಪ್ರೇಮದಿ ಕಳುಹಿದ ಕಾರ್ಯ ॥೧೪॥

ಗಂಡರ ಗಂಡನು ನರಸಿಂಹರಾಯನ
ಗಂಡನು ಅವನ ಪೆತ್ತಂಥ
ಗುಂಡರಾಜನ ಗಂಡ ಸಿರುಮಭೂವರ ಪ್ರ-
ಚಂಡ ವಿಕ್ರಮಗೆಣೆಯುಂಟೆ ॥೧೫॥ (॥೩-೪)

ಅರಿರಾಯರ ಗಂಡ ಆಹ[ವಕತಿ] ಲೆಂಡ
ಪರರಾಯರಿಗೆದೆಶೂಲ
ಧುರಗಲಿ ಧೀರ ಶರಭಭೇರುಂಡ ಸಿರುಮ ಎಂದು
ಬರೆದ ಓಲೆಯನೋದಿದರು ॥೧೬॥ (॥೩-೬)

ಕೇಳುತ ನರಸಿಂಹರಾಯನು ಆ ಮಾತ
ತಾಳಿದನಾಗ ಕೋಪವನು
ದಾಳಿಲಿ ಗೊಲ್ಲನ ಹಿಡಿಯಾಳ ಹಿಡಿತಹೆ
ಹಾಳು ಮಾಡುವೆ ಬೂದಿಹಾಳ ॥೧೭॥

---

೮. ಇಲ್ಲಿಂದ ಮುಂದಿನ ೫ ಪದ್ಯಗಳು 'ಹ' ಪ್ರತಿಯಲ್ಲಿ ಇಲ್ಲ (ಸಂ)

[೯]ಕೇಳಿ ಈಶ್ವರಿನಾಯಕ[೯]ಬೂದಿಹಾಳನು
ಧೂಳಿಕೋಟೆಯ ಮಾಡಿಕೊಂಬಾ
ಆಳೆಷ್ಟು ಆನೆ ಕುದುರೆ ಎಷ್ಟು ಅವನಿಗೆ
ಹೇಳೆಂದು ನರಸಿಂಹ ನುಡಿದ ॥೧೮॥

ಮೂರು ಸಾವಿರ ಆಳು*[ಮುನ್ನೂರು]*ಕುದುರೆಯ
ಊರೇನು ರಾಜ್ಯವೇನವನ
ಶೂರತ್ವವುಳ್ಳವನೆಎ ನರಸಿಂಹ ಕೇಳಿ
ಮೀರಿ ಕೋಪದಲುರಿದೆದ್ದ[೧೦] ॥೧೯॥

ನಡೆಯಿತು ಕರಿ ತುರಗವು ಕಾಲಾಳೆಲ್ಲ
ಹಿಡಿಯದೆ ಹಲವು ಬಗೆಯಲಿ
ಸಡಗರದಲಿ ಸಾಲಿಟ್ಟವು ಸತ್ತಿಗೆ
ಹಿಡಿದವು ಮಾನ್ಯ ಮನ್ನೆರಿಗೆ ॥೨೦॥

ಧರೆ ಮೊಳಗಿತು ನಭ ನಡುಗಿತು ಕುಲಗಿರಿ
ತೊಲಗದೆಕ್ಕಲ ಹೋಳಾಗೆ
ಉಲಿವ ವಾದ್ಯದ ರವಸದಿ ನರಸಿಂಹರಾಯ
ಬಲು ಬಲ ಸಹಿತ ತೆರಳಿದನು ॥೨೧॥

ಹರಿದಾರಿಯಲಿ ಬಂದು ಬಲ್ಲಾಳಪುರದಲ್ಲಿ
ನರಸಿಂಹ ದಂಡ ಬಿಡಿಸಿದನು
ಕರೆ[ಸೆ] ಈಶ್ವರನಾಯ್ಕನಿಲ್ಲಿಂದಿತ್ತಲಿ
ಸಿರುಮನ ಸೀಮೆಯೆಂದೊ*[ರೆದ]* ॥೨೨॥

ಆಡಿದ ನರಸಿಂಹರಾಯನಾಕ್ಷಣದಲಿ
ನಾಡ ಪಂಥದ ಗೊಲ್ಲನಿರವ
ಕಾಡಿನ ಗಿಡ [೧೧][ತರು ಬಾಣ][೧೧] ಬಿಲ್ಲುಗಳಾಗಿ
ಆಡು ಆನೆಗಳ ಮುರಿವವು ॥೨೩॥

೯–೯X(ಹ), *_* ಮೂವತ್ತು (ಶಿ),೧೦.ಈ ಪದ್ಯ 'ಹ' ಪ್ರತಿಯಲ್ಲಿ ಇಲ್ಲ (ಸಂ), *–*ಬ್ಬ (ಶಿ, ಹ), ೧೧–೧೧ ತುರು ಬೇಡು (ಶಿ)

*ಕಲ್ಲೆಲ್ಲ*ಕನಕವು ನವರತ್ನ ಪದ್ಮವು
ಹುಲ್ಲೆಗಳ ಝುಲ್ಲಿಯ ಮೃಗವು
ಹುಲ್ಲೆ ಮೂವರ ಕಚ್ಚಿ ಕೊಲ್ಲುವವಂತಲ್ಲಿ
ಗೊಲ್ಲ ಸಿರುಮನ ಸಾಹಸದಿ ॥೨೪॥

ಮೈಮರೆದಿರಬೇಡ ರಾಯ ದಂಡನು ಹೊಕ್ಕು
ಒಯ್ವನು ಸೆರೆಸೂರೆ ಮಾಡಿ
ಹುಯ್ಯಲು ಮಾಡಿ ಹೊರಡೆ ಗೊಲ್ಲ ಸಿರುಮನು
ಹೊಯಿಸುವ ತಲೆಗಳೆಲ್ಲವನು ॥೨೫॥

ಕೇಳಿ ಭೀತಿಯನು ನರಸಿಂಹರಾಯನು ತನ್ನ
ಆಳು ಕುದುರೆ ಅರಸಗಳ
ಬಾಳ *[ಜ]*ತನ ಈಶ್ವರನಾಯಕ ಗೊಲ್ಲನ
ಹೇಳುತಹರೆ ಸಾಹಸವನು ॥೨೬॥

ಆಡಿದ ಮಾತಿಗೆ ಕುದುರೆ [೧೨]ಕಾಲಾ[೧೨] ಳೆಲ್ಲ
ಜೋಡನಿಳುಹದೆ ರಾವುತರು
ಪಾಡು ಪಂಥಗಳ ಬಿಟ್ಟೆಲ್ಲ ಗೊಲ್ಲನ
ನಾಡ ಹೊಕ್ಕೆವು ಕೆಟ್ಟವೆನುತ ॥೨೭॥

ಬೆಚ್ಚಿ ಬೆದರುತಿರೆ ಬೆಳಗಾಗಿ ನರಸಿಂಹ
ಎಚ್ಚತ್ತು ಕೂಚೆ ಮಾಡಿಸಿದ
ನಿಶ್ಚಯಿಸಿ ಬಲ್ಲಾಳಪುರದಿಂದ ಮುಂದಕ್ಕೆ
ಅಚ್ಚಾಳು ಸಹ ತೆರಳಿದನು ॥೨೮॥

ಮಂದಿ ಕುದುರೆ ಆನೆ ದಳವೆದ್ದು ನಡೆಯಲು
ಕೆಂಧೂಳ ಮುಸುಕಿತಂಬರಕೆ
ಛಂದ ಛಂದದ ನೇಜೆ ಠೆಕ್ಕೆ ಎತ್ತಿತು ಮುಂದೆ
ಹಿಂದೆ ಬರುವ ಭರವಸಕೆ ॥೨೯॥

_ ಕಾಡೆಲ್ಲ (ಹ), *_* X(ಶಿ, ಹ), ೧೨–೧೨ X(ಶಿ)

ಪಾಯದಳವು ಸಹ ನರಸಿಂಹರಾಯನು
[ಕೈಯಿಗನೂರ] ತೆವರಿನಲಿ
ಬಂದು ಪೌಜ ಮಾಡಲಿ ಬೇಗ ಕಂಡರು
ಛಂದದಿಂದಲಿ ಬೂದಿಹಾಳ+ ॥೩೦॥

ಸುತ್ತಣ ಕೋಟೆಗೆ ಎತ್ತಿದ ತೋರಣ
ಅತ್ಯಂತ ಬಿರಿದ ಬಿಂಕದಲಿ
ಮೃತ್ಯು ಬಾಯಿದೆರೆದೊಲು ಬೂದಿಹಾಳು ದಂ
ಡೆತ್ತಿ ಬರಲು ನುಂಗುವಂತೆ ॥೩೧॥

ಇರಲಿತ್ತ ಬೂದಿಹಾಳ ವೀರ ಸಿರಿಯ ಕಂಡು
ನರಸಿಂಹನ ಮನ್ನೆಯರು
ಧರೆಯೊಳು ಕಣ್ಣಹಬ್ಬವ ಕಂಡೆವೆನುತಲಿ
ಸಿರಬಾಗಿ ಕರಗಳ ಮುಗಿದು ॥೩೨॥

ಬ್ರಹ್ಮ ಸೃಷ್ಟಿಸುವ ಪಟ್ಟಣಕೆ ಇದರ ಪ್ರತಿ
ನಿರ್ಮಿಸುವರೆ ಬೇರಿಲ್ಲ
ಪೆರ್ಮೆಯೊಳಹ ಬೂದಿಹಾಳ ದೂರದಿ ನೋಡಿ
ವರ್ಮವ ತೊಟ್ಟ ನರಸಿಂಹ ॥೩೩॥

ಸುಡಿಸುವೆ ಬೂದಿಹಾಳನು ಕಡಿಸುವೆ ಸಿರುಮನ
ಒಡನೊಕ್ಕಲಾಗಿ ಇದ್ದವರ
ಹಿಡಿಸುವೆ ಸೆರೆ ಕೋಳನೆಂದು ನರಸಿಂಹ ತನ್ನ
ಪಡೆ ಸಹ ಪಂಥದಿ ನಡೆದ ॥೩೪॥

ಹಿಂಡು ಹಿಂಡಾಗಿ ಕೈಯಿಗನೂರ ತೆವರಿಲಿ
ದಂಡು ಬಿಟ್ಟಿರಲಿದಿರಾಗಿ
ಕಂಡು ಬೇಹಿನ ಆಳು ಸಿರುಮಗೆ ಹೇಳಲು
ಲೆಂಡವಿಕ್ರಮನನುವಾದ[೧೩] ॥೩೫॥

_ ಕೈಗಿ ನಡುವಿನ (ಶಿ, ಹ), + ಈ ಪದ್ಯಪ್ರಾಸ ತಪ್ಪಿದೆ (ಸಂ), ೧೩ ಮುಂದಿನ "ಪಟ್ಟಿಯ ದಟ್ಟಿ . . . . ." ಎಂಬ ಪದ್ಯ ಮೊದಲುಗೊಂಡು "ಛಪ್ಪನ್ನದೇಶ . . . ." ಒಳಗೊಂಡ ಪದ್ಯಗಳು 'ಹ' ಪ್ರತಿಯಲ್ಲಿ ಇಲ್ಲ (ಸಂ).

ಪಟ್ಟೆಯ ದಟ್ಟಿ ದುಪ್ಪಟಿ ಚಂದ್ರಗಾವಿಯ
ಉಟ್ಟನು ಸಿರುಮಭೂವರನು
ಅಷ್ಟದಿಕ್ಕಿನ ರಾಯರ ಗಂಡನೆಂಬ
ಮೆಟ್ಟಿದನುಲಿವ ಪೆಂಡೆಯವ ॥೩೬॥

ಶಂಕೆಯಿಲ್ಲದೆ ನರಸಿಂಹನ ಗಂಡನೆಂಬ
ಕಂಕಣವನು ಧರಿಸಿದನು
ಬಿಂಕವ ಮುರಿವೆನೆನುತ ನರಸಿಂಹನೆಂದು
ಅಂಕಕೆ ಶೃಂಗಾರವಾದ ॥೩೭॥

ಅರಿರಾಯರ ಗಂಡ ಆಹವಕತಿ ಲೆಂಡ
ಪರರಾಯರಿಗೆದೆಶೂಲ
ಧುರಧೀರ ಶರಭ ಭೇರುಂಡ ಸಿರುಮ ಎಂದು
ಒರಲಿತು ಕಹಳೆ ಮೊದಲಿಸಿ ॥೩೮॥

ಬಂದರು ವೀರದಿ ವಿಕ್ರಮರೆಲ್ಲ
ಛಂದದಿ ಶೃಂಗಾರವಾಗಿ
ತಂದೆಯ ಚರಣಕೆರಗಿ ಕಾಚ ಮಲ್ಲಣ್ಣ
ನಿಂದರು ಸಿರುಮನೋಲಗದಿ ॥೩೯॥

ಹಿರಿಯೂರ ಕಸವನ ಗಂಡನೆಂಬುವದೊಂದ
ಕರಿಯ ಹುಲ್ಲೆಯ ತರಿಸಿದನು
ದೊರೆರಾಯ ಮಲ್ಲಗೆ ಕೊಡಿಸಿದ ಸಿರುಮೇಂದ್ರ
ಹರುಷದಿಂದಲಿ ನಸುನಗುತ ॥೪೦॥

ಪರಬಲಭೀಮ ಕಾಚಯ್ಯನಗೆ ಕೊಡಿಸಿದ
ಗರುಡಪಕ್ಷಿಯ ಬೇಗದಲಿ
ನರಸಿಂಹನ ಗಂಡನೆಂಬ ತೇಜಿಯ
ಇರದೇರಿದ ಸಿರುಮೇಂದ್ರ ॥೪೧॥

ಸುತ್ತಣ ರಾಯರ ಗಂಡನೆಂಬುವದೊಂದು
ಸತ್ತಿಗೆಯನು ಹಿಡಿಸಿದನು

ಮೊತ್ತದ ಮೋಸದ ಮಾನ್ಯರ ಗಂಡನೆಂದು
ಎತ್ತಿತು ಬಿರಿದಿನ [ಢಾ]ಲು ॥೪೨॥

ಗಿಡಿಬಿಡಿ ಹೊಡೆವ ತಂಬಟ ನಿಸ್ಸಾಳವು
ಜಡಿವ ಕಹಳೆ ಲೆಗ್ಗೆವರಿಯ
ಕೆಡೆ ಕೆಡೆಯೆಂದು ಭೋರಿಡುವ ಹೆಗ್ಗಾಳೆಯು
ಗಡಣದಿಂದಲಿ ಹೊರವಂಟ ॥೪೩॥

ಛಪ್ಪನ್ನದೇಶ ಕೋಳಾಹಳನೆನಿಸುವ
ತಪ್ಪದೆ ಸಿರುಮಭೂಪತಿಯು
ಕಪ್ಪುಗೊರಳನ ಪಾದವೆ ಗತಿ ಎನುತಲಿ
ಉಪ್ಪರಿಸಿದ ರಣದೊಳಗೆ ॥೪೪॥

ಪಂತಿ ಊಟದ ಬಲು ಪಂಥದೆಕ್ಕಟಿಗರು
ಹೊಂತಕಾರಿಗಳು ಕೊಮಾರರನು
ಮುಂತೆ ಕರಸಿಕೊಂಡು ಹೊರಟು ಸಿರುಮೇಂದ್ರ
ನಿಂತನು ಬೂದಿಹಾಳ ಮುಂತೆ ॥೪೫॥

ಒಗ್ಗಿಲಿ ನಡೆದು ಬಂದುದು ವೀರಭಟರೆಲ್ಲ
ವೆಗ್ಗಳ ಸಿರುಮನ ಬಲವು
ಕೊಬ್ಬಿದ ನರಸಿಂಹನ ಭಟರನು ಬೇಗ
ಇಬ್ಭಾಗ ಮಾಳ್ಪೆನೆಂದೆನುತ[೧೪] ॥೪೬॥

ಮೀಟು ಮೀಟಾದ ಬಂಟರನಾಯ್ದು ಕಬ್ಬಿನ
ತೋಟದೊಳಗೆ ಅಡಗಿಸಿದ
ಪಾತಕರುಲಿಯೆ ತುರಗಮನೇರಿ ಸಿರುಮೇಂದ್ರ
ದಾಟಿ ಮುಂದಕೆ ಮೂದಲಿಸಿ ॥೪೭॥

ಕೆಡೆ ಕೆಡೆ ಎಂದು ಕಹಳೆಯನಿಕ್ಕಿ ಪವುಜನು ಮಾಡಿ
ನಡೆದನುದ್ದಟೆಯಿಂದ ಸಿರುಮ

---

೧೪ ಈ ಪದ್ಯ 'ಹ' ಪ್ರತಿಯಲ್ಲಿ ಇಲ್ಲ(ಸಂ).

ಸುಡಿಸುತ್ತ ಪೆಟಲಲಿ ನರಸಿಂಹನ ಚೂಣಿ
ಕಿಡಿ ಕಿಡಿಯಾಗೀಡಾಡಿದನು ॥೪೮॥

ಚೆಂಡು ಲಗ್ಗೆಯ ತಾಗಿದಂತೆ ನರಸಿಂಹನ
ದಂಡ ತಾಕಿದ ಸಿರುಮೇಂದ್ರ
ಹಿಂಡು ಕುರಿಯೊಳು ಹೆಬ್ಬುಲಿ ಹೊಕ್ಕಂತೆ
ಕಂಡ ಕಡೆಗೆ ಕಡಿದಿರಿಯೆ ॥೪೯॥

ಅಂಬ ಕುಸಿಕಿರಿದೆತ್ತಿ ಲಾಘಿಸಿ ಬಿಲ್ಲನು
ತುಂಬ ತಗೆದು ತಿರುಹುತಲಿ
ಕಂಬದೂರ ಭೈರನೆಚ್ಚರೆ ಕುದುರೆಯು
ಡೊಂಬ ಲಾಗವ ಹೊಯಿದಂತೆ ॥೫೦॥

ಒಡನೆ ರಾಹುತರು ಬಿದ್ದೇಳದ ಮುನ್ನಲಿ
ತುಡುಕಿ ಚೂಣಿಯಲಿ ಮುಂದಲೆಯ
ಪಿಡಿದು ಕಡಿದು ಸಿರುಮೇಂದ್ರ ಚಿತ್ತೈಸೆಂದು
ನುಡಿದು ನಿವಾಳಿ ಹಾಕಿದರು ॥೫೧॥

ಸಿರುಮನ ಪರಿವಾರದುರುವಣೆಯನು ಕಂಡು
ನರಸಿಂಹನ ಮನ್ನೆಯರು
ಕರಿ ತುರಗವು ಬಿಲ್ಲ ಹರಿಗೆ ಸಬಳಿಗರು
ಇರದೆಲ್ಲ ಮೋಹರಿಸಿದರು ॥೫೨॥

ಎಲ್ಲಿ ಹೊಕ್ಕರೆ ಬಿಡಬೇಡ ಬೂದಿಯಹಾಳ
ಗೊಲ್ಲ ಸಿರುಮನೆಂದೆನುತ
ಬಲ್ಲಿದ ನರಸಿಂಹರಾಯನ ರಾಹುತ
ರೆಲ್ಲರೊಂದಾಗಿ ಏರಿದರು ॥೫೩॥

ಕಂಡನು ನರಸಿಂಹನುರವಣೆಯ ಪ್ರ
ಚಂಡ ಸಿರುಮಭೂವರನು
ಪುಂಡರೀಕನೆಂಬ ತೇಜಿಯನೇರಿ ತನ್ನ
ಖಂಡೆವ ಕಿತ್ತು ನಡೆದನು ॥೫೪॥

ಬೀಗಿ ಬರುವ ಪರಿವಾರವ ನಿಲಿಸುತ
ಹೋಗದಿರಿ ಹುಸಿ ಹುಸಿ ಎನುತ
ಕೂಗಿ ಬೊಬ್ಬಿರಿದು ಹತ್ತೆಂಟು [ರಾಹು]ತರನು
ತಾಗಹೊಯಿದು ಹೊಳಚಿದನು ॥೩೫॥

ಜರಿದು ಹೋಗಲು ಶಿರ ಹರಿದು ಶೋಣಿತದೊಳು
ಸುರಿದು ಕರುಳ ಗಾಯದಲಿ
ನರಳುತ ಹೊ[ರಳುತ ಬಿದ್ದ]ರು ರಣದೊಳು
ಸಿರುಮನ ಕೈಚಳಕದಲಿ ॥೫೬॥

ಕೆಂಡದೊಸಂತವನಾಡಿದಂತಾಯಿತ್ತು
ರುಂಡಮುಂಡವು ತುಂಡುಗಡಿದು
ಹಿಂಡು ಭೂತಕೆ ಔತಣ ಸಿರುಮನ ರಣ
ಮಂಡಲದೊಳು ಪೊಸತೆನಿಸಿ ॥೫೭॥

ಕಿಚ್ಚುಗಳಿಗೆ ಹೆಚ್ಚಿ ನಲಿವಂತೆ ಸಿರುಮನ
ಮೆಚ್ಚಿನ ಕೈಜೀತದವರು
ಎಚ್ಚರಂಬಿನ ಮಳೆ ಸುರಿವಂತೆ ತೆಲುಗರ
ಕೊಚ್ಚಿದರು ಓಡುವಂತೆ ॥೫೮॥

ಕಡಲು ಕದಡಿದಂತೆ ರಾಯನ ದಂಡೆಲ್ಲ
ಕಡುಗಲಿ ಸಿರುಮನ ಭಟರು
ಗಡೆ ಹಡಪವು ಮೊಟ್ಟೆ ಗಡಿಗೆಯನೊಡೆ ಹಾಯ್ಕಿ
ಅಡವಿ ಗಿಡಕೆ ಓಡಿದರು ॥೫೯॥

ಘಾಸಿಯಾದೆವು ಕೆಟ್ಟವೆನುತಲೋಡುವರನ್ನು
ರೋಷದಿ ನರಸಿಂಹ ಕಂಡು
ಮೀಸೆಯ ಮುರಿದು೧೫ಅವಡಗಚ್ಚಿ ತುರಗವ
ಸಾಸಿ೧೫ರ ಮುಖದೊಳೇರಿದನು ॥೬೦॥

---

* _ * ಖೆಂಡವವಸವಂತಾಯಿತ್ತು (ಶಿ), ೧೫–೧೫ X(ಶಿ)

ಬಂದ ದಂಡನು ಚೂಣಿಯಲಿ ಮುಂದುಗೆಡಿಸಿದ
ಹಿಂದಕೆ ತೆಗಸಿ ಹುಯ್ಯಲನು
ನಿಂದು ಕಬ್ಬಿನ ತೋ[ಟ]ದೊಳು ಅಡಗಿದ ಬಲು
ಮಂದಿಯ ಹೊರಡ ಹೇಳಿದನು ॥೬೧॥

ಹಸಿದ ಹುಲಿಯು ಹೊಂಚಿ ಹೊಯಿದು ಹುಲ್ಲೆಗಳನು
ಅಸುವ ಕೆಡಹಿ ಹಿಂ[ಡುವಂ]ತೆ
ಕುಸುರಿದರಿದರು ನರಸಿಂಹನಸಮ[೧೬]ದಂಡನು[೧೬]
ದೆಸೆಯುಳ್ಳ ಸಿರುಮನ ಭಟರು ॥೬೨॥

ಹುತ್ತವನೇರಿ ಹುಲ್ಲನು ಕಚ್ಚಿ ಮರಗಳ
ಹತ್ತಿ[೧೭]ಪ್ರಾಣವ ಕಾಯೆನುತ[೧೭]
ಕತ್ತಿ ಕೈದುವ ಬಿಟ್ಟು ಜಲವ ಹೊಕ್ಕವರನು
ಮತ್ತೆ ಮನ್ನಿಸಿ ಬಿಡಿಸಿದನು ॥೬೩॥

ಕಡಿದರು ಕಾಲಾಳ ಹಿಡಿದರು ತುರಗವ
ಗಡೆಯ ಹೊರೆಯ ಕಟ್ಟಿ[ದರು]
ತುಡುಕಿ ಬಂಗಾರ ಪೆಟ್ಟಿಗೆ ಪಟ್ಟೆ ಝುಲ್ಲಿಯ
ಒಡೆಯ ಸಿರುಮಗೊಪ್ಪಿಸಿದರು ॥೬೪॥

ಸಾಳುವ ನರಸಿಂಹರಾಯನ ಪಾಳ್ಯದ
ಸೂಳೆಯರನು ಸೆರೆವಿ[ಡಿದು]
ಕೋಳ ಹಿಡಿದು ಕೊಂಡೊಂದಾಳು ಸಿಕ್ಕದೆ ಬೂದಿ
ಹಾಳ ಹೊಕ್ಕನು ಗೊಲ್ಲ ಸಿರುಮ ॥೬೫॥

ಮುಂಚೂಣಿಯ ಗೆದ್ದು ಹೋದ ಸಿರುಮನೆದ್ದು
ಕ[ಂಜ]ಸಖನು ನರಸಿಂಹ
ಅಂಜದೆ ಉದಯಾದ್ರಿ ಅಡರಿದ ಹೊತ್ತಿಲಿ
ಮಂಜು ಗಿರಿಯ ಕವಿದಂತೆ ॥೬೬॥

೧೬–೧೬ X(ಶಿ), ೧೭–೧೭ X(ಶಿ)

ಮೀನಿಗೆ ಮೀನ್ಪುಲಿ ಜೋಡಿಸಿ
. . . . .ಸಹಿತ ನರಸಿಂಹ
ಏನು ಎಳ್ಳನಿತು ಕಾಣಿಸದಂತೆ ಬೂದಿಹಾಳ
ತಾನು ಮುತ್ತಿದ ಸುತ್ತ ಬಳಸಿ[೧೮] ॥೬೭॥

ಶಂಕೆಯಿಲ್ಲದೆ ರಾಮಘಟೆ . . . . ನಡೆತಂದು
ಲೆಂಕೇಲಿ ಬಂದು ಬಿಟ್ಟಂತೆ
ಬಿಂಕದಲಿ ಬೂದಿಹಾಳ ಕೋಟೆಯ ಸುತ್ತ
ಅಂಕಕೆ ಬಂದು ಬಿಡುವಾಗ ॥೬೮॥

ಕುಡುಮು ತಂಬಟ ಗಿಡಿಬಿ[ಡಿ][೧೮]ನಾಗಸ[೧೮]ರದೊಳು
ನುಡಿವ ತಪ್ಪಟೆ ಕೊಂಬು ಕೊಳಲು
ಹಿಡಿದ ಕಹಳೆಯ ಧ್ವನಿಯನು ಗೊಲ್ಲ ಸಿರುಮನ
ಮಡದಿ ಚಿಕ್ಕಮ್ಮ ಕೇಳಿದಳು ॥೬೯॥

ಸಿರುಮನ ಬಿರುದಿನ [ಕ]ಹಳೆಯಲ್ಲವು ಎಂದು
ಹರಿದುಪ್ಪರಿಗೆಯನೇರಿದಳು
ಪರಿಪರಿ ಪವುಜಿಕ್ಕಿ ಬೂದಿಹಾಳ ಹೊರಗೆಲ್ಲ
ನರಸಿಂಹನ ದಂಡಿರಲು ॥೭೦॥

ಸಿರಿಯ[ಕಂ]ಡೆನು ಸೌಭಾಗ್ಯವ ಕಂಡೆನು
ಧರೆಗೆ ಪರ್ವತ ತಿರುಮಲೆಯ
ಪುರುಷೆಯ ಕಂಡೆನು ಪರ್ವತಲಿಂಗನ
ವರದಿ ಸಿರುಮನ ಸಾಹಸದಿ ॥೭೧॥ (॥೬–೩)

ಬೂದಿಹಾಳು ಪುಣ್ಯಕ್ಷೇತ್ರವು ಸಿರುಮನ
ಪಾದವ ಕಾಬ ಮಾನ್ಯರಿಗೆ
ಮೇದಿನಿಯೊಳು ಮಲೆವರ ಕರಿಸಿಂಹ ನೇ
*[ರಾದ]*ವೈರಿಗೆ ವಜ್ರ[ದಂ]ಡ ॥೭೨॥

೧೮–೧೮ X(ಶಿ), *–* (ಶಿ, ಹ), *–* ವಾದಿ (ಶಿ, ಹ)

ಮಾನ್ಯ ಸಿರುಮನ ರಾಣಿ ಚಿಕ್ಕಮ್ಮನು
ತನ್ನ ಮನದಣಿಯೆ ನೋಡಿದಳು
ಮನ್ನಿಸಿದಳು ನರಸಿಂಹನ ಮನದೊಳು
ಮಾನ್ಯ ಮಾರ್ಬಲ ಕವು[ತುಕವ] ॥೭೩॥

ಉಣ್ಣಲಿಕ್ಕುವೆನೆಂದು ರಣದಲಿ ಸಿರುಮಗೆ
ಮಣಿದು ಬಿನ್ನಹವ ಮಾಡಿದಳು
ಕಣಜದಕ್ಕಿಯ ತೆಗೆದಡಿಗೆ[೧೯]ಯನಾಯತ ಮಾಡಿ
ಕಣಕ ಕಡಲೆ ಬೆಲ್ಲಗಳನು[೧೯] ॥೭೪॥

ಪಂಚ ಕಜ್ಜಾಯ ಪಾಯಸ ಬೋನ ಫಲವಸ್ತು
ಮಿಂಚುವ ಬಗೆಯು ಮೇಲೋಗರವ
ಅಂಚೆಗಮನೆ ಅಡಿಗೆಯ ಮಾಡಿ ವಿಷಗಳ
ವಂಚನಿಲ್ಲದೆ ತುಂಬಿದಳು ॥೭೫॥

ಕಾಳಕೂಟದ ವಿಷಗಳನಿಕ್ಕಿ ಅಡಿಗೆಯ
ಬಾಳ ಪರಿಯಲಿ ಸಂಭ್ರಮಿಸಿ
ಜೋಳಿ ಜೋಳಿಯ ಹೆಡಿಗೆಯ ತುಂಬಿ ಮುಸುಕಿಟ್ಟು
[೨೦]ಹಾಳತೆ[೨೦]ಗಳ ಹಾಸಿದರು ॥೭೬॥

ಹದಿನಾರು ವರುಷದ ಹರೆಯದ ಕೊಮರರ
ಚದುರೆ ಚಿಕ್ಕಮ್ಮ ಕರೆಸಿದಳು
ಮುದದಿಂದ ಥಂದ ಥಂದದ ಸೀರೆಗಳನಾಗ
ಮದಗಜಗಮಗೆ[೧]ಉಡಿಸಿದಳು ॥೭೭॥

ಮುಡಿಗಳನಿಕ್ಕಿ ನಿರಿಯನಿಟ್ಟು ಪಂಥದಿ
ಕಡಿಗಲಿಗಳು ಒಂದಾಗಿ
ಹೆಡಗೆಗಳನು ಹೊತ್ತು ನಡೆದರೊಗ್ಗೊಡೆಯದೆ
ಮಡದಿಯರಂತೆ ಮೋಹರಿಸಿ ॥೭೮॥

೧೯–೧೯ X(ಶಿ), ೨೦–೨೦ X(ಶಿ).

ಬಂದರು ಊರ ಹೊರಟು ದೇವಿಗೆರೆಗಾಗಿ
ನಿಂದರು ಬಳಸಿ ಕೋಡಿಯಲಿ
ತಂದಿಳುಹಿದರು ಕಣಗಿಲ ತೋಪಿನ ಸುತ್ತ
ಚಂದ ಚಂದದ ಹೆಡಿಗೆಗಳ ॥೭೯॥

ರಂಗವಾಲೆಯ ಹೊಯಿದು ಬುತ್ತಿಗಳನೆ ಇಕ್ಕಿ
ಹಿಂಗದೆ ಧೂಪದೀಪಗಳ
ವಿಂಗಡದಲಿ ಗಂಧಾಕ್ಷತೆ ವೀಳ್ಯವ
ಸಂಗ್ರಾಮದೆಡೆಯ ಪೂಜಿಸಲು ॥೮೦॥

ಮೂರು ಜಾವದ ವ್ಯಾಳ್ಯದಲಿ ರಂಗವ ಹೊಯಿದು
ಸೇರಿಸಿ ಬಾಳೆಲೆ ಹಾಸಿ
ನಾರಿಯರಂತೆಡೆಮಾಡಿದರು ನಲವಿಂದ
ಕಾರುಣಿಕವ ಮಾಡುತಿರಲು ॥೮೧॥

ಕಂಡರು ನರಸಿಂಹರಾಯನ ಸುಭಟರು ಪ್ರ
ಚಂಡ ಸಿರುಮನವರು ಬಂದು
ದುಂಡುದೇವರ ಪೂಜಿಸುವ ಬೆಡಗನಾಗಿ
ಕಂಡುರವಣಿಸಿತೊಗ್ಗಿನಲಿ ॥೮೨॥

ಕರಿ ತುರಗವು ಕಕ್ಕಟ ಈಟಿ ಸಬಳವು
ಹರಿಗೆ ಬಿಲ್ಲಿನ ಪೆಟಲವರು
ಪರಿವಾರ ಬೊಬ್ಬಿರಿದೊದಗಿ ಬರಲು ಕಂಡು
ಸಿರುಮನವರು ಚಲ್ಲುವರಿದು ॥೮೩॥

ಹೆಡಿಗೆಗಳನು ಬಿಟ್ಟು ಉಡಿಗೆಗಳನು ಬೇಗ
ಎಡದ ಕೈಯ್ಯಲವಚುತಲಿ
ಮುಡಿಗಳ ಕೆದರಿ ಬಾಯ್ಗಳ ಹೊಯಿಕೊಳುತಲಿ
ಕಡುಗಲಿಗಳು ಬರಲಿತ್ತ ॥೮೪॥

ಎಡೆಗಳ ಕಂಡು ಒಬ್ಬರಿಗೊಬ್ಬರ ನೂಕಿ
ಹೆಡಿಗೆಗಳನು ಸೂರೆಮಾಡಿ

ಕಡುಬು ಕಜ್ಜಾಯ ಪಾಯಸನುಂಡು ಮದಸೊಕ್ಕಿ
ಕಡಿದಾಡಿದರು ತಮ್ಮೊಳಗೆ ॥೮೫॥

ಹುಚ್ಚು ಹಿಡಿದು ಪಾಳ್ಯಯದೊಳಗೆಚ್ಚಾಡಿ
ಕಚ್ಚುವರಾನೆ ಕುದುರೆಯ
ಕಿಚ್ಚುಗಳನು ತಂದು ತಮ್ಮ ಗೂಡಲಿಗಿಕ್ಕೆ
ಬೆಚ್ಚಿ ಬೆದರೆ ಪಾಳಯವು ॥೮೬॥

ದಂಡಿನೊಳಗೆ ಗಲಭೆಯ ಕೇಳಿ ನರಸಿಂಹ
ಮಂಡಲಪತಿ ಹೊರಹೊಂಟ
ಲೆಂಡಾಟವೇನೆಂದು ಬಿನ್ನೈಸಲು ಗಂಗಯ್ಯ
ಕಂಡಾ ಸ್ಥಿತಿಯನೆಲ್ಲವನು ॥೮೭॥

ಹುಚ್ಚಡಿಗೆಯನಟ್ಟು ದೇವರ ಪೂಜಿಸಿ
ಕೆಚ್ಚೆದೆ ಸಿರುಮನ ಭಟರು
ಹೆಚ್ಚಿನ ಕವುಟಳೆ ಮಾಡಿ ಪಾಳಯದೊಳ
ಗಾಶ್ಚರಿಯನ್ನು ಮಾಡಿದರು ॥೮೮॥

ಇನ್ನಾವ ತೆರನಿದಕೆನುತ ಗಂಗಯ್ಯನ
ಮನ್ನಣೆಯಲಿ ಕೇಳಲೊಡನೆ
ಹೊನ್ನವಳ್ಳಿಯ ವೇದರಾಜ ಬಲ್ಲನು ಎಂದು
ಬಿನ್ನೈಸಿದ ನರಸಿಂಹಗೆ ॥೮೯॥

ಕರೆಸಿದ ವೇದರಾಜನ ನರಸಿಂಹರಾಯ
ತೆರನಾವುದಿದಕೆನಲವನು
ತರಿಸಿದ ಗಿಂಡಿಯಲುದಕವ ಮಂತ್ರಿಸಿ ಕೊಡೆ
ಪರಿವಾರಕ್ಕೆ ತಳಿಯಲು ॥೯೦॥

ಬಿದ್ದುರುಳಿ*[ದ]* ಮೂರು ಸಾವಿರ ಪರಿವಾರ
ಎದ್ದರು ಕೊರೆಜೀವದವರು

_ ತು (ಶಿ, ಹ).

ನಿದ್ರೆ ತಿಳಿದ ತೆರನಂದದಿ ಪಾಳ್ಯವು
ಸದ್ದು ಮಾಡದೆ ಸುಮ್ಮನಾಯ್ತು ||೯೧||

ಹೆಣ್ಣುಗಳರಸಿ ನೋಡಿದಳು ಪಾಳಯದೊಳು
ಕಣ್ಣುಗೆಟ್ಟುದ ಕಂಡು ನಗುತ
ಬಣ್ಣದುಪ್ಪರಿಗೆಯೊಳು ನಿಂದು ಕಳುಹಿದೊಡೆ
ಡೊಣ್ಣೆಯ ಪರಿವಾರವನು ||೯೨||

ಮೊರ ಮೊಗೆ ಕವಣೆ ಒನಕೆ ಡೊಣ್ಣೆ ಸೊಪ್ಪೆಯ
ಕೊರೆವ ಕುಡುಗೋಲನೆ ಪಿಡಿದು
ಭರದಿ ಕೋಲುಗಳವರೂರ ಬಾಗಿಲೊಳು ನಿಲಿಸಿ
ವೀರ ಸಿರುಮ ನೋಡೆನುತ ||೯೩||

ಹೊಲೆ ಮಾದಿಗರು ಕೀಸುಗತ್ತಿ ಕೊಂಬು ಮೊಳೆಗಳನು
ಬಲದ ಕೈಯ್ಯಲಿ ಪಿಡಿಕೊಂಡು
ಮಲತು ಸಿರುಮ ನೋಡು ನೋಡೆಂದು ನರಸಿಂಹನ
ಬಲವ ಕಲಕಿ ಕೊರೆವರು ||೯೪||

ಇರಿ ತರಿ ಕೊರೆ ನೆತ್ತರ ಸುರಿ ಎನುತಲಿ
ಒರಲಿ ಬೊಬ್ಬಿಟ್ಟು ಖೋಯೆನುತ
ಮೊರದಲ್ಲಿ ಹೊಯ್ದರು ನರಸಿಂಹನವರನು
ಬರಸಿಡಿಲಿನ ರವಸದಲಿ ||೯೫||

ಬಣಜಿಗರಟ್ಟಿಹೊಯಿದರು ಅಟ್ಟಗೋಲಿಂದ
ಹೆಣದೊಟ್ಟಿಲುಗಳ ಒಟ್ಟಿದರು
ಕಣಿಕೆಯ ಕೊರೆವಂತೆ ಕುಡುಗೋಲುಗಳಿಂದ
ದಣಿಯೆ ತರಿದರೊಕ್ಕಲಿಗರು ||೯೬||

ಹದಿನೆಂಟು ಜಾತಿಯಲವರಿವರೆನ್ನದೆ
ಕದನದಿ ನರಸಿಂಹನವರ
*[ತ]*ದಕಿ ಸವರಿದರು ರಣರಂಗದೊಳು ಬಲು
ಕುದುರೆ ಕಾಲಾಳ ಕತ್ತರಿಸಿ ||೯೭||

---

* _ * ಸ (ಶಿ, ಹ).

ಬಿಡಲೀಸದೆ ಗುಡಿ ಹೊಯ್ಯಲೀಸದೆ ತಳಿಯ
ನಡೆಯಲೀಸದೆ ಕಡಿಕಡಿದು
ಹಿಡಿದು ಕೆಲರ ಮೂಗು ಕೊಯ್ದುಬಿಟ್ಟರು ನಿಮ್ಮ
ಒಡೆಯಗೆ ಹೋಗಿ ಹೇಳೆನುತ ॥೯೮॥

ಬಿಟ್ಟರು ರಾಯನ ಮೂಗೆಂದು ಸುಣ್ಣದ
ಬೊಟ್ಟಿಟ್ಟು ಕೆಲಕೆಲಬರಿಗೆ
ತಟ್ಟು ಸೀಳಿದರಟ್ಟೆ ಹೊಯ್ದು ಕೆಡವಿ ತಲೆ
ಕುಟ್ಟಿ ದಣಿದು ತಿರುಗಿದರು ॥೯೯॥

ಬರಿಯೊಳಿರಿದು ತಿರುಗೆ ಕಂಡು ನರಸಿಂಹ
ನಾರಾಯಣ ಬಲ್ಲನೆನುತ
ಊರ ಬಾಗಿಲ ಹೊಗಲೇರಿ ಬೆನ್ನಟ್ಟಿದ
ಸೇರುವೆ ದೊರೆಗಳು ಸಹಿತ ॥೧೦೦॥

ಅಡವಾಗಿ ನರಸಿಂಹ ನಿಂದು ಈಶ್ವರಿನಾಯಕ
ಬಿಡಿಸು ಪಾಳಯವೆನ್ನಲೊಡನೆ
ಗುಡಿ ಗುಡಾರವ ಹೊಯಿಸುತ ಗಿಡುಮರಗಳ
ಕಡಿದು ತಳಿಯ ನಡಿಸಿದರು ॥೧೦೧॥

ಹಲವು ಸೂರ್ಯನ ಪ್ರಭೆ ನೆಲೆದಪ್ಪಿ ಬೂದಿಹಾಳ
ನೆಲನನಾವರಿಸಿ ನಿಂದಂತೆ
ಚೆಲುವಿಕೆಯಿಂದಲಿ ಹೊನ್ನ ಕಳಸಗಳಿಕ್ಕಿ
ಬಲಿದು ಕೆಂಪಿನ ದುಮ್ಮಾನಗಳು ॥೧೦೨॥

ಹೊಯಿದವು ಸಾಗರದಂತೆ ಐಶ್ವರಿಯಾಗಿ
ಬಯಿಗಿನ ವೇಳೆಯದಲ್ಲಿ
ಹುಯ್ಯ[೨೧]ಲ ನಿಲಿಸಿ[೨೧]ಮನ್ನೇರು ಸಹ ದಂಡನು
ಪದುಮಸಖನು ಮೇಲೆ ನೋಡಿ* ॥೧೦೩॥

೨೧–೨೧ ಲೆನಿಸಿ(ಶಿ) *ಇಲ್ಲಿ ಪ್ರಾಸ ತಪ್ಪಿದೆ. ಬಹುಶಃ ಇದು ೧೦೫ನೆಯ ಪದ್ಯದ ಎರಡನೆಯ ಚರಣವಾಗಿದೆ. (ಸಂ),

ಬಳಲಿದ ಮಂದಿ ಮನ್ನೆಯರ ದೊರೆ ರಾಹುತರ
ಕಳುಹಿದನವರ ಬೀಡಾರಕೆ
ಹೆಳಹಿ ದುಗುಡವೇರಿ ದುಮ್ಮಾನದೊಳಯಿಕೆ
ಘಳಿಲನೆದ್ದನು ನರಸಿಂಹ[೨೨] ॥೧೦೪॥

ಸದಮನದಲಿ ಬಂದು ಬಿಟ್ಟಿಹ ದಂಡನು
ಪದುಮಸಖನು ಮೇಲೆ ನೋಡಿ
ಬೆದರಿ ರಥವ ದುವ್ವಾಳಿಸಿ ಪಡುವಣ
ನದಿಯೊಳು ಹೋಗಡಗಿದನು ॥೧೦೫॥

ಸತ್ಯದಿ ಬೂದಿಹಾಳ ಮುತ್ತಿದವನ ಬೆಂ
ಬತ್ತಿ ಹುಯ್ಯಲು ಬಂದಂತೆ
ಸುತ್ತಣ ದೇಶ ದಿಗ್ಗಳೆಯ ಕಾಣಿಸದೆ ಹೆ-
ಗ್ಗತ್ತಲೆ ಕವಿಯಿತಾಕ್ಷಣದಿ ॥೧೦೬॥

ದ್ವಂದ್ವೈಸಿದ ತಮದೊಳು ನರಸಿಂಹನ
ಮಂದಿ ಬೆದರಿ ಬೆಚ್ಚುತಿರಲು
ಇಂದುಳಿದರೆ ಸಿರುಮನ ಬಸುರಿಲಿ ಎಲ್ಲ
ಬಂದೆವೀ ರಾತ್ರಿಗಳೆದರೆ ॥೧೦೭॥

ನೊಸಲ ಬರೆಹವ ನಳನಸಖನವನಿಂತು
ಪೊಸತು ಮಾಡಿದ ಬಗೆವೆರಸಿ
ಮುಸುಕಿದರಂಧಕಾಲಕೆ ಚಂದ್ರೋದಯ
ಪಸರಿಸಿ ಕಿರಣ ಪ್ರಜ್ವಲಿಸೆ ॥೧೦೮॥

ಬೆದರು ಬಿಟ್ಟಿತು ನರಸಿಂಹನ ಪಾಳಯಕೆ
ಮದವೆದ್ದು ಸಿರುಮನೂರೊಳಗೆ
ಕದನ ಕೋಳಾಹಳ ಸುತ್ತ ಕೊತ್ತಳಕೆಲ್ಲ
ಮುದದಿ ಪಹರೆಯ ಕಾವಲಿರಿಸಿ ॥೧೦೯॥

---

೨೨ ಈ ಪದ್ಯ 'ಶಿ' ಪ್ರತಿಯಲ್ಲಿ ಇಲ್ಲ (ಸಂ).

ಅರಮನೆಯ ಮಧ್ಯದುಪ್ಪರಿಗೆಯನಿಳಿದಳು
ಸರಸಿಜವದನೆ ಚಿಕ್ಕಮ್ಮ
ಸಿರುಮೇಂದ್ರನೊಡನೆ ಮಜ್ಜನ ಭೋಜನಮಾಡಿ
ಹರುಷದಿ ನಿದ್ರೆಗೈದಿರಲು ॥೧೧೦॥

ಕಮಲಸಖನ ದಾಳಿ ಬರುತದೆ ಹಿಮರಾಜ
ತಿಮಿರ ಸಹಿತಲಡಗೆನುತ
ಸುಮ್ಮಾನದಿ ತಾಮ್ರಚೂಡ ಹುಯ್ಯಲು ಮಾಡೆ
ನಿಮಿಷ ಕೂಗಿತು ಮುಂಜಾವದಲಿ ॥೧೧೧॥

ಉದಯಾದ್ರಿಯನಡರಲು ರಾಯನ ದಂಡು
ಬದುಕಿದೆವೆಂದೆದ್ದರೆಲ್ಲ
ಒದಗಿದ ಹುಯ್ಯಲುಗಳು ಕಹಳೆ ಸಹ ಭೇರಿ
ಕುದುರೆ ಕಾಲಾಳು ಸಂಭ್ರಮಿಸಿ ॥೧೧೨॥

ಗಿರಿಗಳಂದದ ಮದಕರಿಗೆ ರಂಚಿಕೆ ಹಣ್ಣಿ
ತುರಗ ಸಂದೋಹ ಮಾಡಿದರು
ನರಸಿಂಹರಾಯನ ಸರಿದೊರೆಗಳೆಲ್ಲರು
ಪರಿಯಂತೆ ಪವುಜ ಮಾಡಿದರು ॥೧೧೩॥

ಈ ಪರಿಯಲಿ ನರಸಿಂಹ ಸಿರುಮನೊಳು
ವ್ಯಾಪಿಸಿ ತಾ ಕಾದುತಿರಲು
ಭೂಪ ಕಾಕಿಯ ವಿಶ್ವರಾಜನೋಲಗದೊಳು
ಭಾಪುರೆ ಎಂಬ ಭಟರುಲಿಯೆ ॥೧೧೪॥

ಎಡವಂಕ ಬಲವಂಕದೆಕ್ಕಟಿಗರು ಸಹ
ಕಡುಗಲಿಗಳು ಇರುತಿರಲು
ನುಡಿದನೊರ್ವನು ನರಸಿಂಹ ಸಿರುಮನೊಳು
ಬಿಡದೆ ಕಾದಲು ನಾಲ್ಕು ಮಾಸ ॥೧೧೫॥

ನೆಲದಂಡ ಹೊಯಿದನು ಬಲುಗಾಳಗದೊಳು
ಛಲದಂಕ ಭಟರ ನೀಗಿದನು

ತೊಲಗಲೀಯದೆ ಕಾದುತಹನೆಂದು ಪೇಳಲು
ತಲೆಯ ತೂಗಿದ ವಿಶ್ವರಾಜ ॥೧೧೬॥

ಗೊಲ್ಲಗೆ ನಾಲ್ಕು ತಿಂಗಳು ದಂಡ್ಯಾತಕೆ
ಬಲ್ಲಿದನಲ್ಲ ನಮ್ಮ ಭಾವ
ಎಲ್ಲೆಯ ಕಾಳಗ ತನಗೇತಕೆನುತಲಿ
ಅಲ್ಲಿ ಮಂತ್ರಿಗಳೊಳು ನುಡಿದ ॥೧೧೭॥

ನಾಳಿನ ದಿನ ದಂಡ ಸಾಗಬೇಕೆನುತಲಿ
ಹೇಳಿದ ಬಲುಮಂತ್ರಿಯೊಡನೆ
ಪಾಳೆಯವೆಲ್ಲಕೆ ಸಾರೆನೆ ಕೈಮುಗಿ
ದೋಲಗದಿಂದ ಬಂದವರು ॥೧೧೮॥

ನಿಂದು ಬೇಗದಿ ಪಾಳೆಯದಿಂದ ಸಾರೆನೆ
ಮಂದಿ ಕುದುರೆ ಸಂಭ್ರಮಿಸಿ
ಬಂದು ಬಿನ್ನೈಸಿದ ಬಲು ಬುದ್ಧಿ ಪ್ರಧಾನ
ಕಂದರ್ಪರೂಪ*[ವಿಶ್ವ]*ರಾಜೇಂದ್ರನ ॥೧೧೯॥

ಘಳಲನೆ ನುಡಿಗೇಳಿ*[ವಿಶ್ವ]*ರಾಜೇಂದ್ರನು
ನಳಿನಮುಖಿಯರೊಡಗೂಡಿ
ಪ್ರಳಯಕಾಡೆಂಬ ಪಟ್ಟಣವನೆ ಹೊರವಂಟು
ತಳುಹದ್ಯೆದಿದ ಬೂದಿಹಾಳ್ಗೆ ॥೧೨೦॥

ಬಿಟ್ಟಲ್ಲಿ ಬಿಡದೆ ಬಂದರು ಏಳು ಪಯಣವ
ರಟ್ಟಾಡಿ*[ವಿಶ್ವ]*ರಾಜೇಂದ್ರ
ಕಟ್ಟಾಳು ಆಯಿವತ್ತು ಸಾವಿರ ಸಹವಾಗಿ
ದಿಟ್ಟ ನರಸಿಂಹನಿದ್ದೆಡೆಗೆ ॥೧೨೧॥

ಬಂದನು ಕರಿಘಟೆ ಸಹ ವಿಶ್ವರಾಜೇಂದ್ರ
ಮಂದಿ ಕುದುರೆ ದಳಗೂಡಿ

– ಈಶ್ವರನ (ಶಿ, ಹ), *–* ಈಶ್ವ (ಶಿ, ಹ).

ನಿಂದು ಪೌಜನು ಮಾಡೆ ನರಸಿಂಹದಂಡು
ಹಂದೆಗೊಂಡೆಲ್ಲ ಓಡಿದರು ॥೧೨೨॥

ಸೇನೆ ಮುರಿಯೆ ಕಂಡು ಮಾನವ ನರಸಿಂಹ
ಆನೆಯನೇರಿ ಬರಲೊಡನೆ
ಏನೆಲೆ[ವಿಶ್ವ]ರಾಜನೆ ಎಂದು ಕೇಳಲು
ತಾನು ಫೌಜ ಮಾಡಿಸಿದನು ॥೧೨೩॥

ಮಂದಿ ಕುದುರೆ ಇದಿರಾಗಿ ನಡೆಸಿ ಕರ
ತಂದರು [ವಿಶ್ವ]ನೃಪನ
ಬಂದು ಕಂಡನು ನರಸಿಂಹನ [ವಿಶ್ವ]
ಛಂದದುಲುಪೆಯುಡುಗೊರೆಯ ॥೧೨೪॥

ಕಾಣಿಕೆಗಳನಿಕ್ಕಿ ಕಂಡನು ರಣದಲಿ
ಕ್ಷೋಣಿಪ ನರಸಿಂಹನೃಪನ
ನಾಣ್ಯ ನಾಣ್ಯದ ಉಡುಗೊರೆಯಿತ್ತು ಕಳುಹಲು
ಕೇಣವಿಲ್ಲದೆ ದಂಡು ಬಿಡಿಸಿ ॥೧೨೫॥

ಇಳಿಯಿತು ಸರ್ವ ಜೋಡೆಲ್ಲ ಪಾಳೆಯದೊಳು
ಹೊಳಯಿ ಹೊಯ್ದವು ದುಮ್ಮಾನ
ಘಳಿಲನೆ [ವಿ]ಶ್ವರಾಜನು ಸುಖವಿರುತಿರೆ
ನಳಿನಸಖನು ತವಕದಲಿ ॥೧೨೬॥

ಇಳಿದನು ಪಶ್ಚಿಮಾದ್ರಿಗೆ ಶಶಿ ಕಳೆಯೇರಿ
ಬಳಲಿದ ಮಂದಿ ಮನ್ನೆಯರು
ಇಳೆಗೊರಗಿರಲಿತ್ತ ಒಲಿದು ಕುಕ್ಕಟ ಕೂಗೆ
ಹೊಳಹುದೋರಿದ ರವಿರಾಜ ॥೧೨೭॥

ನಲವಿಂದಲೆದ್ದು ನಾಲ್ದೆಸೆಯಲ್ಲಿ ದಳವೆಲ್ಲ
ಉಲಿದು ಮೋಹರಿ[ಸೆ] ಫೌಜಿಕ್ಕಿ
ಬಲುಹುಳ್ಳ ನರಸಿಂಹನೊಳು ಛಲ ಬೇಡೆಂದು
ಉಲಿದು ಮೂದಲಿ[ಸೆ] ಕಹಳೆಗಳು ॥೧೨೮॥

ಇಳೆ ಬೆಸಲಾದಂತೆ ಬೂದಿಹಾಳ ಹೊರಗೆಲ್ಲ
ಕಲಿ ದಳವೊಡ್ಡಿ ನರಸಿಂಹ
ಬೆಳಗಾಗಲೂರೊಳು ಕಲಿ ಸಿರುಮೇಂದ್ರನು
ಹೊಳೆವ ಚಾವಡಿಗೆದ್ದು ಬಂದ ॥೧೨೯॥

ಮೇಲುಗುಲಾಯವಿಕ್ಕಿ ಮೆರೆವಂಟಿ ಕುಟುಕಿನ
ಕಾಲ ಪೆಂಡೆ ಕಂಠಮಾಲೆ
ಸಾಲಿಯ ಹಚ್ಚಡ ಮಲಗುಮೂಡಿಗೆಗಳಿಂದ
ಲೋಲ ಸಿರುಮ ಬಂದು ಕುಳಿತ ॥೧೩೦॥

ದೆಸೆಯುಳ್ಳ ಮನ್ನೆಯ ಸಿರುಮಭೂವರ ಬಂದು
ಬಿಸಿಲ ಚಾವಡಿಯಲ್ಲಿ ಕುಳಿತ
ಉಸುರಿದನೊಂದು ಸುದ್ದಿಯ ಗಿಂಡಿಯ ತಿಮ್ಮ
ಹೊಸ ವಾರ್ತೆಯನಾಕ್ಷಣದಿ ॥೧೩೧॥

ನಿನ್ನೆಯ್ದೆ ಬಂದನು ಪ್ರಳಯಕಾಡಿನ ದೊರೆ
ತನ್ನ ಮಾರ್ಬಲ ಸಹವಾಗಿ
ಬಿನ್ನೈಸಿದನು ನಿಮ್ಮೊಳು ಕಾಳಗವಂತೆ
ತನ್ನ ಹೆಸರು ವಿಶ್ವರಾಜ ॥೧೩೨॥

ಮುಟ್ಟಿದ ಬೇಹಿನ ಸುದ್ದಿಯ ಹೇಳಿದ
ಕಟ್ಟಾಳು ಗಿಂಡಿಯ ತಿಮ್ಮ
ದಿಟ್ಟಸಿ ಸಿರುಮ[ಗೆ] ಕೈಮುಗಿದು ಬಿನ್ನೈಸಿದ
ಹುಟ್ಟಿದ ಸುದ್ದಿ ವಾರ್ತೆಯನು ॥೧೩೩॥

ತಪ್ಪದೆ ಸುದ್ದಿಯ ಹೇಳಿದ ತಿಮ್ಮಗೆ
ಕರ್ಪೂರ ವೀಳ್ಯವ ಕೊಡಿಸಿ
ಸರ್ಪಭೂಷಣನೊಬ್ಬ ಗತಿ ಎಂದು ಸಿರುಮ ಕಂ-
ದರ್ಪ ಮಂತ್ರಿಯ ಕರೆಸಿದನು ॥೧೩೪॥

ಎಕ್ಕಟಗರು ಪರಿವಾರ ಮೋಹದ ತನ್ನ
ಮಕ್ಕಳೆಲ್ಲರ ಕರೆಸಿದನು
ದೊಕ್ಕನೆ ಬಂದು ತಂದೆಗೆ ವಂದಿಸಿ ಬೇಗ
ಚಿಕ್ಕ ಕೊಮಾರ ವೀರಣ್ಣ ॥೧೩೫॥

ಮುತ್ತಿನ ಚವುಕುಳಿ ಸುತ್ತಿದ ಚಿಮ್ಮುರಿ
[೨೩]ಕತ್ತರಿಸಿದ[೨೩] ಕೊನೆ ಮೀಸೆ
ಇತ್ತರ ಮುಪ್ಪಟ್ಟೆ ಹಚ್ಚಡ ಕೈಯ್ಯಂಬು
ಮತ್ತೆ ಕುಮಾರ ವೀರ ಕುಳಿತ ॥೧೩೬॥

ಮುರಿದ ಮೀಸೆಯು ಕೆಂಗರಿಗಣ್ಣು ಬವರಿಯು
ತರದಲಿ ಸಾಣೆ ಬಂಡೆಗಳು
ದೊರೆ ಕಟಕುಗಳ ಬೊಂಬೆಯ ಹಚ್ಚಡ ಹೊದ್ದು
ಗರುವ ಕುಮಾರ ಮಲ್ಲ ಕುಳಿತ ॥೧೩೭॥

ಎಳೆಯ ಮೊದಲ ದಟ್ಟಿ ಸುಲಿಪಲ್ಲು ಹಚ್ಚಡ
ಥಳಥಳಿಸುವ ಕಂಠಮಾಲೆ
ಹೊಳೆವ ಬೆಳ್ಳಿಯ ಪರಜಿನ ಖಂಡೆಯದಿಂದ
ಚೆಲುವ ಹಿರಿಯ ಸೂ[ನು ಕು]ಳಿತ[೨೪] ॥೧೩೮॥

ಗಂಧಗಾವಿಯ ಧಟ್ಟಿ ಚಂದ್ರಗಾವಿಯ ಹಚ್ಚಡ
ಮಾಂದಳಿರಿನ ಠೋಪಾಯಿ
ಛಂದದಿ ಪಿಡಿದಾ ಸುರಗಿ ಕಾಚೇಂದ್ರನು
ಬಂದು ಕುಳಿತ ಚಾವಡಿಯಲ್ಲಿ ॥೧೩೯॥

ಮಡಿಲಲ್ಲಿ ಜಮದಾಡೆ ಕೈಯಲ್ಲಿ ಗಿಡುಗನು
ಕಡುತಾಸನದ ಹಚ್ಚಡವು
ಮಡಿದು ಸುತ್ತಿದ ಜಡೆ ಬಿಟ್ಟು ಕೊನೆಗಳಿಂದ
ಒಡನೆ ಅಳಿಯ ತಿಪ್ಪ ಕುಳಿತ ॥೧೪೦॥

ಕಂಕುಳ ಕಠಾರಿ ಕೈಯ್ಯಲಿ ಚಿಮಲೆಯ ಹಕ್ಕಿ
ಶಂಖಡಸಿದ ಹಚ್ಚಡವು
ಬಿಂಕದಿ ಮೆಟ್ಟಿದ ಚೆಮ್ಮಾಳಿಗಿಂದ ನಿ–
ಶ್ಯಂಕ ಬೆಲಗೂರ ಭೈರ ಕುಳಿತ ॥೧೪೧॥

೨೩–೨೩ ಕಪ್ಪುವೊತ್ತಿದ(ಶಿ), ೨೪ ಈ ಪದ್ಯ 'ಹ' ಪ್ರತಿಯಲ್ಲಿ ಇಲ್ಲ (ಸಂ)

ಅರಸುಮಕ್ಕಳು ರಾಣೆಯ ರಾಹುತ ತಂಡ
ಪರಿವಾರ ಕಟ್ಟಿಗೆಯವರು
ತರತರ ಪಾಠಕ ವಿದ್ಯಾ. . . . . . .ರೆಲ್ಲ
ನೆರೆದರೋಲಗದಿ ಚೌಭಟರು ॥೧೪೨॥

ಕೇಳಿದನಾಗ ಸಿರುಮಭೂಪ ಇಂದಿನ
ಕಾಳಗಕನುವಹರಾರು
ಪಾಳ್ಯದೊಳು ವಿಶ್ವರಾಜಗೆ ಸಲುವಂತ
. . . . . . .ಳಿ ಕಾಳಗಕನುವಾಗಿ ॥೧೪೩॥

ಎಕ್ಕಟಿಗರು ಪರಿವಾರ ಮಕ್ಕಳು ಸಹ
ದೊಕ್ಕನೆ ಕುಳಿತಿರೆ ಕಂಡು
ಚಿಕ್ಕ ಕುಮಾರ ವೀರಣ್ಣ ಬೇಗದಿ ಬಂದು
[೨೫]ಒತ್ತಲಿ[೨೫] ನಿಂದ ಸಿರುಮನ ॥೧೪೪॥

ಕೇಳೆನ್ನ ತಂದೆ ಸಿರುಮೇಂದ್ರ ಇಂದಿನ
ಕಾಳಗಕೆನಗೆ ವೀಳ್ಯವನು
ವಾಲಗದೊಳು ಬೇಡಿ ಕೈಮುಗಿದಿರೆ ಕಂಡ
[೨೬]ಲೋಲ[೨೬] ಕೋಮಾರ ವೀರಣ್ಣನ ॥೧೪೫॥

ಕಡುಗಲಿ ವೀರಣ್ಣ ಕೊಳ್ಳು ಕಂಠಮಾಲೆಯ
ಖಡೆಯ ಪೆಂಡೆಯ ಕೊಟ್ಟನವಗೆ
ಉಡುಗೊರೆ ವೀಳ್ಯವ ಕೊಟ್ಟು[೨೭]ಸಿರುಮ ಬೇ[೨೭]ಗ
ನಡೆಯೆಂದು *ಕಳುಹಲು ಬೇಗ* ॥೧೪೬॥

ಕಳುಹಿಸಿಕೊಂಡು ಬಂಟರುಗಳು ಸಹವಾಗಿ
ಘಳಿಲನೆ ತಾಯರಮನೆಗೆ
ಬೆಳಗಿದ ಕನ್ನಡಿಯಂದದಿ ಬಂದವ
ನಳಿನಾಕ್ಷಿಯ ಪಾದಕೆರಗಿ ॥೧೪೭॥

೨೫–೨೫ X(ಶಿ), ೨೬–೨೬ X(ಶಿ), ೨೭–೨೭ X(ಶಿ), *–* ಕಳುಹುತ(ಹ).

ಮರಿಯಾನೆಯೊಳು ಮನ್ನೆಯ ಗಜಸಿಂಹ
ಅರಿರಾಯ ತಿಮಿರಮಾರ್ತಂಡ
ಧುರಧೀರ ಶರಭಭೇರುಂಡ ಚೆನ್ನಿಗ ವೀರ
ಧುರವ ನೀ ಗೆಲಹೋಗೊ ಮಗನೆ ॥೧೪೮॥

ಮಡದಿವೆಂಗಳ ಮುಡಿಮಾಣಿಕ ಚಿಕ್ಕಮ್ಮ
ಉಡುಗೊರೆ ವೀಳ್ಯವ ಕೊಡಲು
ಕಡುಗಲಿ ಚೆನ್ನಿಗ ವೀರಣ್ಣ ಕೈಕೊಂಡು
ನಡೆದು ಬರಲು ಮುಂದೆ ಶಕುನ ॥೧೪೯॥

ವಾಸನ ಉಡಿಕೆ ಹಂಗನ ಕಟ್ಟು ಗೌಳಿಯ
ಲೇಸಿಲ್ಲ ಶಕುನದ ಪರಿಯ
ಈಶ್ವರನೊಬ್ಬನೆ ಗತಿಯೆಂದು ನಡೆತಂದ
ಕೇಸರಿಗಣ್ಣ ವೀರಣ್ಣ ॥೧೫೦॥

ಮುಂಗಾರ ಮೇಘದ ಮರೆಯಲಡಗಿದ ಮಿಂಚು
ಜಂಗುಳಿಯಲಿ ಹೊರಟವನು
ಲಿಂಗನೋಲಗದಿಂದ ಕರೆಸಿದ ಬಂಟರ
ಸಂಗ್ರಾಮಕೆ ಕಲಿ ವೀರ ॥೧೫೧॥

ವೀರ ಜಡೆಯು ಗೀರುಗಂಧ ಕಸ್ತುರಿಬೊಟ್ಟು
ಧಾರವಂಕುಡಿ ಧಟ್ಟಿ ಝುಲ್ಲಿ
ಸೇರಿದ ಮುಮ್ಮೊನೆಗಾಸೆ ಶೃಂಗರವಾಗಿ
ಧೀರರು ಸಹವಾಗಿ ನಡೆದ ॥೧೫೨॥

ಮೃಡನುರಿಗಣ್ಣ ಕಿಡಿ ತ್ರಿಪುರಕೆ ನಡೆವಂತೆ
ಅಡರಿದನಾಳುವೇರಿಯನು
ಒಡನೆ ಕೊತ್ತಳದೊಳು ನಿಲಲು ಕೊಮಾರ ವೀರ
ಹಿಡಿದವು ಬಿರಿದಿನ ಕಹಳೆ ॥೧೫೩॥

ಸತ್ತಿಗೆ ನೆಳಲೊಳು ಚಮರ ಢಾಳೈಸುತ
ಕಿತ್ತಲಗಿನ ರವಸದಲಿ

ಸತ್ವದ ಕುಮಾರ ವೀರನ ಭಟರು ಮಿಗೆ
ಒತ್ತಿ ಕಡಿದರು ಮೂದಲಿಸಿ ॥೧೫೪॥

ಚಂಡಾಂಶುವಿನ ಶೌರ್ಯವು ಒಂದು ರೂಪಾಗಿ
ತಾಂಡವಾಡುವ ವೀರನಿರವ
ಕಂಡು ಬೂದಿಯಹಾಳ ಹೊರಗೆ ನರಸಿಂಹ
ತಂಡ ತಂಡದ ಪವುಜ ಮಾಡಿ ॥೧೫೫॥

ಪೃಥ್ವಿ ಬೆಸಲಾದ ಪರಿಯಂತೆ ಬೂದಿಹಾಳ
ಸುತ್ತಲಿನ ನರಸಿಂಹನವರು
ಚಿತ್ತಜರೂಪಿನವನು ಕಾದುತಿರೆ ಕಂಡು
ಕೊತ್ತಳದೊಳಗೆ ವೀರಯ್ಯನ ॥೧೫೬॥

ಜಗದೊಳಗಿವ ಕಾಲರುದ್ರನೊ ವೀರನೊ
ದಿಗುಬಲಿ ಕೊಡಿ ಎಂದ ರಾಯ
ಮಿಗಿಲನೆ ಮಾಡಿ ಅಡರಿ ಕೋಟೆಯ ಮೇಲೆ
ಟಗರು ತಾಕಿದ ಬಗೆ ಮಿಗಿಲು ॥೧೫೭॥

ಮಲೆತು ತೊಲಗದೆ ಕೊಲೊಲೊ ಖೋಖೋಯೆಂದ
ತಲೆವರಿಗೆಯನಿಕ್ಕಿ ನೆಗೆದು
ಹಲವು ಬಗೆಯಲಿ ಹೊಂಚಿ ಹೊಯ್ದಾಡಿದರು ಗೊಲ್ಲ
ಕಲಿವೀರನ ಪರಿವಾರ[೨೮] ॥೧೫೮॥

ನಡೆದು ಬಂದನು ನರಸಿಂಹನ ಎಡೆಗಾಗಿ
ಒಡನೆ ಕಾಕಿಯ ವಿಶ್ವರಾಜ
ಕೊಡು ಸ್ವಾಮಿ ನನಗೆ ವೀಳ್ಯವನೀಗ ಗೊಲ್ಲನ
ಮಡಹುವೆ ಬಲುಗಾಳಗದಿ ॥೧೫೯॥

ನುಡಿಗೇಳಿ ನರಸಿಂಹ ಉಡುಗೊರೆ ವೀಳ್ಯವ
ಕೊಡಲು ತಕ್ಕೊಂಡು ವಿಶ್ವರಾಜ

---

೨೮. ಈ ಪದ್ಯ 'ಶಿ' ಪ್ರತಿಯಲ್ಲಿ ಇಲ್ಲ (ಸಂ).

ನಡೆದು ಬಂದನು ಸಿರುಮನ ಮಗ ವೀರನ
ಹಿಡಿಯಾಳ ಹಿಡಿತಹೆನೆನುತ ॥೧೬೦॥

ಇತ್ತ ಪವುಜ ಮಾಡಿ ದಳ ಮುಂದುವರಿದಾಗ
ಮುತ್ತಿತು ವೀರನಿದ್ದೆಡೆಯ
ಕೊತ್ತಳದೊಳು ಹೊಕ್ಕು ಕೊಲಲೊ ಖೋ ಎಂದು
ಕತ್ತಿ ಕೈದುವಿನೊಳಿರಿದರು ॥೧೬೧॥

ಮುಂದಲೆ ಮುಂದಲೆಗಳ ಪಿಡಿದಿರಿದಾಡಿ
ಸಂಧಿ ಸಾಧಿಸಿ ತಿವಿದಾಡಿ
ಕೊಂದರು ವಿಶ್ವರಾಜನ ಪರಿವಾರವ
ಬಂಧಿಸಿ ವೀರನ ಭಟರು ॥೧೬೨॥

ಚಲ್ಲವರಿದು ಕೆಡಹಿತು ಬಲು ಭಟರನು
ಭಲ್ಲೆಹದಲ್ಲಿ ತಿವಿತಿವಿದು
ಹುಲ್ಲನುರುಹಿ ಸುಟ್ಟು ಸೊರಗಿಸಿದರು ವೀರ
ಬಲ್ಲಿದ ನೋಡು ನೋಡೆನುತ ॥೧೬೩॥

ಈ ಪರಿಯಲಿ ದಳ ಮುರಿದೋಡುವದ ಕಂಡು
ಕೋಪದಿ ಕಿಡಿಯನುಗುಳುತ
ಚಾಪ ಕೊಂತವ ಪಿಡಿದಳಲಿ ವಿಶ್ವರಾಜನು
ಭೂಪನ ಬಿರಿದುಳ್ಳ ಭಟರು ॥೧೬೪॥

ಹತ್ತಿತು ಕೋಟೆ ಕೊತ್ತಳಗಳ ಬೊಬ್ಬಿಟ್ಟು
ಮೃತ್ಯುಲೋಕವ ನುಂಗುವಂತೆ
ಮುತ್ತಿತು ವೀರ ಪಡೆಯು ಮುಸುಕಿ ಮಂಜು
ಪೃಥ್ವಿಗಳನು ತುಂಬುವಂತೆ ॥೧೬೫॥

ಉರಿ[ವ]ರುಣನ ಪಿಡಿದುರುಗ ನುಂಗಿದವೊಲು
ತರಿದರು ಬಲು ಭಟರುಗಳ
ಮೊರೆದು ಮೋಹರಿಸಿತು ಕೋಟೆ ಕೊತ್ತಳಗಳ
ಉರವಣಿಯಲಿ ಮುಸುಕಿದರು ॥೧೬೬॥

– ಉರಿ ನೀರುಣ (ಶಿ), ಉರುಡಿಸಿ ವೀರಣ್ಣನ (ಹ).

ಪೆಟಲ ರವಸದಲ್ಲಿ ಪುಟವೇರಿ ಪರಿವಾರ
ನಟನಟಿಸುತ ತಿವಿದಾಡಿ
ಸುಟಿಯಿಂದ ಬಿಲ್ಲುಗಾರರು ಬಾಣಗರೆಯಲು
ಪುಟವೇರಿ ವೀರಭಟರು ॥೧೬೭॥

ಮುನ್ನೂರು ಕೆಂಪಿನ ಹರಿಗೆಯ ಬಂಟರ
ಸನ್ನೆಗಳಾಗಕೆ ಬಿಟ್ಟವನು
ಕಣ್ಣೆವೆ ಹಳಚದೆ ನೋಡಿ ಕೊಮಾರ ವೀರ
ಹೊನ್ನು ಹಣವ ಚೆಲ್ಲಿದನು ॥೧೬೮॥

ಕೊಡುವ ಕೈಗಳು ನಿನಗೆ ತಪ್ಪವು ವೀರಣ್ಣ
ಕಡಿವ ಕೈಗಳ ನೋಡೆನುತ
ಜಡಿದು ಕರವಾಳನು ಕೈಯ್ಯೆತ್ತಿ ಹೊಯ್ಯಲು
ಕೆಡಹಿ ಅಗಳ ತುಂಬಿದರು ॥೧೬೯॥

ಒಬ್ಬನ ಹೊಯ್ದರೆ ಇಬ್ಬರು ಬೀಳ್ದರು
ಬೊಬ್ಬುಳಿಗೊಂಡ ತೆಲುಗರು
ಅಬ್ಬರಿಸುತ್ತ ಕುಮಾರ ವೀರನ ದಂಡಿಗೆ
ನಿಬ್ಬೆರಗಾದ ವಿಶ್ವರಾಜ ॥೧೭೦॥

ಪಡೆ ಮಡಿಯಲು ಕಂಡು ಕಡು ಹೋರಿ ವಿಶ್ವೇಂದ್ರ
ಕಿಡಿಗೆದರಿದನಕ್ಷಿಗಳಲಿ
ಒಡನೆ ವಜ್ರಾಂಗಿ ತಲೆ ಠವುಳಿಯನಿಕ್ಕಿ
ನಡೆದನಾಕ್ಷಣ ಕೋಟೆಗಡರಿ ॥೧೭೧॥

ಲಾಘಿಸಿ ಪುಟನೆಗೆದಡರಿದ ಕೋಟೆಯ
ಕೂಗಿ ಬೊಬ್ಬರಿದಬ್ಬರಿಸುತ
ಹೋಗದಿರೆಲೊ ಗೊಲ್ಲ ಬಲುಹ ತೋರೆಲೊ ನಿನ್ನ
ತಾಗ ಹೊಯ್ವೆನು ಘನ ಶಿರವ ॥೧೭೨॥

ಭಲ ಭಲರೆ ಭಲದಂಕ ಮನ್ನೆಯ ಬಾರೋ
ಸಲುವದು ನಿನಗೆ ಈ ಬಿರಿದು

ತೊಲಗು ತೊಲಗು ನನ್ನ ಬಲೆಯೊಳು ಬೀಳದಿರೆಂ
ದುಲಿದು ಕುಮಾರ ವೀರಣ್ಣ ॥೧೭೩॥

ನುಡಿಯ ಕೇಳುತ ವಿಶ್ವರಾಜ ಕತ್ತಿಯನೆತ್ತಿ
ಹೊಡೆದನು ಬರಸಿಡಿಲಂತೆ
ಒಡನೆ ಘಾಯವ ನೋಡಿ ತುಡುಕಿ ತಿವಿದನಾಗ
ಕಡುಗಲಿ ಕೊಮಾರ ವೀರಣ್ಣ ॥೧೭೪॥

ಮರಳಿ ಹೋದ ನರಸಿಂಹನ ತೆರನಲ್ಲ
ಸರಸವೆ ವಿಶ್ವೇಂದ್ರನೊಡನೆ
ಕರುಳು ಹಿರಿದು ವನಮಾಲೆ ಹಾಕುವೆನೆಂದು
ಹೊರಗೆ ನಿಂದನು ಕೋಟೆ ತೆನೆಯ ॥೧೭೫॥

ಮುಟ್ಟದಿರೆಲೊ ಬಲು ಬಂಟ ವಿಶ್ವರಾಜನ
ಕಟ್ಟುಗ್ರತನದ ಪಂಥವನು
ಮೆಟ್ಟಿ ಮುರಿವೆನೆಂದುಲಿದು ಕತ್ತಿಯ ಪಿಡಿ
ದಟ್ಟೈಸಿ ಹೊಯ್ದ ಗೊಲ್ಲ ವೀರ ॥೧೭೬॥

ಹುಸಿ ಹುಸಿ ಹೋಗದಿರರೆಂದು ಪಚಾರಿಸಿ
ಬಿಸಿಗಣ್ಣನ ಪೆಸರವನ
ನೊಸಲ ಬರೆಹ ತೊಡೆವೆನೆಂದುಲಿದುಬ್ಬಿ
ಮಸೆದ ಸುರಗಿಯ ಕಿತ್ತಿರಿದ ॥೧೭೭॥

ಕಂಡೆನು ನಿನ್ನ ಸಾ[ಹಸ]ವನು ವಿಶ್ವೇಂದ್ರ
ಕೆಂಡವ ಮಂ[ಡೆ]ಗೆ ಮುಡಿಸಿ
ತುಂಡೇಳ ಕಡಿವೆನು ಕರುಳ ಕಿತ್ತಿಡುವೆನು
ಮಂಡೆಯ ಚಂಡನಾಡಿಸುವೆ ॥೧೭೮॥

ಘುಡಿ ಘುಡಿಸುತ್ತ ನಡೆದೊಡನೆ ಹೆಮ್ಮಾರಿಗೆ
ಸಿಡಿಲೆರಗಿದ ಪರಿಯಂತೆ
ಕಡಿದನು ಕಿತ್ತ ಕತ್ತಿಯನೆತ್ತಿ ವಿಶ್ವೇಂದ್ರ
ಕಡುಗಲಿ ಕುಮಾರ ವೀರಯ್ಯನ ॥೧೭೯॥

ತಡೆಯದೆ ಕಡಿದ ಘಾಯವ ನೋಡಿ ಬೇಗದಿ
ಕಡುಗಲಿ ಕೊಮಾರ ವೀರಣ್ಣ
ಕಡಿದಾಡಿದರು ಸೂತ್ರದ ಬೊಂಬೆಗಳಂತೆ
ಪಡೆ ಕಂಡು ನಿಬ್ಬೆರಗಾಗೆ ॥೧೮೦॥

ಎರಗಿದರೊಬ್ಬರೊಬ್ಬರಿಗೊಗ್ಗೊಡೆಯದೆ
ಮುರಿದಲಗಿಲಿ ಮೂದಲಿಸಿ
ನೆರೆ ತಿವಿದನು ಜವದಾಡಿ ವರಜು ಮುಟ್ಟಿ
ಧುರಗಲಿ ಕೊಮಾರ ವೀರಣ್ಣ ॥೧೮೧॥

ಇರಿದ ಘಾಯಕೆ ಕರುಳು ಪರಿದಿಶ್ವರಾಜೇಂದ್ರ
ಕೊರಗಿ ಬಿದ್ದನು ಅಗಳೊಳಗೆ
ಮೊರೆದು ನೆಲನ ಕಚ್ಚಿ ಮುರಿಯಿತು ಪರಿವಾರ
ಅರಸು ಮಡಿಯೆ ದೆಸೆ ದೆಸೆಗೆ ॥೧೮೨॥

ಓಡಿ ಬಂದರು ನರಸಿಂಹನ ಅಡಿಗಾಗಿ
ಹೇಡಿಗೊಂಡವರು ಬಿನ್ನೈಸಿ
ಬೀಡಾರವಾಯ್ತು ವೈಕುಂತಪುರದಲ್ಲಿ
ನೋಡಲ್ಯೆದಿದ ವಿಶ್ವರಾಜ ॥೧೮೩॥

ಎನ[ಲು] ತಲ್ಲಣಗೊಂಡು ಕನಲಿ ದುಃಖವ ತಾಳಿ
ಮನಗುಂದಿ ಮದಕರಿಯಂತೆ
ಘನಹಿತ ಭಟ್ಟರ ಮಲ್ಲನ ಕರೆಸಿದ
ವಿನಯದೊಳಗುಸುರಿದನು ॥೧೮೪॥

ಎಂದನು ತಲೆ ತಾರೊ ವಿಶ್ವರಾಜೇಂದ್ರನ
ಇಂದು ರಾಣೆರ ಕೊಲ್ವತನಕ
ಬಂದನಾ ಮಾತ ಕೇಳಿ ಭಟ್ಟರ ಮಲ್ಲ
ನಿಂದು ವೀರನ ಕೊಂಡಾಡಿದನು ॥೧೮೫॥

ಛಲದಂಕ ಮಲೆವ ಮನ್ನೆರ ಗಂಡ ಗಜಸಿಂಹ
ಮಲೆತರ ಮನದಂಕುಶವೆ

ತಲೆಯ ಪಾಲಿಸು ಎನೆ ನಲಿದುಡುಗೊರೆಯಿತ್ತು
ಕಳುಹಿದ ತಲೆ ಸಹಿತವನ ॥೧೮೬॥

ತಂದ ತಲೆಯ ಉಡುಗೊರೆ ಸಹವಾಗಿಯು
ಮುಂದಿರಿಸಿದ ನರಸಿಂಹನ
ಕಂದರ್ಪರೂಪ ಭಟ್ಟರ ಮ*[ಲ್ಲ]*ಗೆ ಕೊಟ್ಟ
ಚಂದ ಚಂದದ ಉಡುಗೊರೆಯ ॥೧೮೭॥

ಸಲೆ ಕೊಟ್ಟು ಭಟ್ಟರ ಮಲ್ಲನ ಕಳುಹಿದ
ಛಲದಂಕ ನರಸಿಂಹರಾಯ
ಮೊಲೆಕಟ್ಟು ಕಾಲಕುಪ್ಪಸಗಳ ಹೊಲಿಸಿದ
ಬಲು ಬಿಂಕದ ಮಾಸ್ತಿಯರಿಗೆ ॥೧೮೮॥

ಕಳುಹಿದ ಕಾಲಕುಪ್ಪಸಗಳ ತೊಟ್ಟರು
ಮೊಲೆಕಟ್ಟು ಕಟ್ಟಿ ಶೃಂಗರಿಸಿ
ಬೆಳಗಿದ ಕನ್ನಡಿವಿಡಿದು ಬಂದರು ಕೂಡೆ
ಘಳಿಲನೆ ರಾಯನೋಲಗಕೆ ॥೧೮೯॥

ಒಂದೊಂದು ಪರಿಯ ಶೃಂಗರಿಸಿ ಮಾಸ್ತ್ಯಯರೆಲ್ಲ
ಇಂದು ಷೋಡಶಕಳೆವೆರಸಿ
ಬಂದರು ರಾಣಿವಾಸಿಯರೆಲ್ಲ ರಾಯರಿಗೆ
ನಿಂದು ಬಿನ್ನಹವ ಮಾಡಿದರು ॥೧೯೦॥

ಪುರುಷನ ಕೊಂದವನ ತಲೆಯ ತಂದಲ್ಲದೆ
ಬೆರಸೆವು ಒಡೆಗಿಚ್ಚ ನಾವು
ಅರಸಿಯರಾಡೆ ಚಿಂತಿಸಿ ಕರ ಕರ ಗುಂದಿ
ವೆರಸಿ ನಂಬುಗೆಗೊಟ್ಟ ರಾಯ ॥೧೯೧॥

ಕಡಿವೆನು ಛಿನ್ನಛಿದ್ರವಮಾಡಿ ವಿಶ್ವನ
ಮಡುಹಿದ ಕೊಮಾರ ವೀರುಗನ

- ನೆ (ಶಿ, ಹ).

ತಡಬೇಡ ನಿಮ್ಮ ಗಂಡನ ಕೂಡಿಕೊಳ್ಳೆಂದು
ಕಡು ನಂಬುಗೆಯನಿತ್ತ ರಾಯ ॥೧೯೨॥

ಹೆಚ್ಚಿನ ನಂಬುಗೆಗೊಡಲು [೨೯]ರಾಣಿಯರೆಲ್ಲ[೨೯]
ಕಿಚ್ಚ ಹಾಯಲು ತಿರುಗಿದರು
ಅಚ್ಚ ನಿಂಬೆಯ ಹಣ್ಣು ಕನ್ನಡಿವಿಡಿದಾಗ
ಹೆಚ್ಚಿನ ವೀರ ಮಾಸ್ತಿಯರು ॥೧೯೩॥

ತುರಗವನೇರಿ ಮನದಲ್ಲುಬ್ಬಿ ಹರುಷದಿ
ಕಿರುನಗೆಯಿಂದಲಿ ನಗುತ
ಮೆರೆದರು ವೀರ ಮಾಸ್ತಿಯರೆಲ್ಲ ನಲವಿಂದ
ಗರುವ ವಿಶ್ವನ ಪಾಡಿದರು ॥೧೯೪॥

ಮಂಡಲಪತಿ ಪ್ರಧಾನ ಈಶ್ವರಿನಾಯಕ
ಕೊಂಡಗಳನು ಮಾಡಿಸಿದನು
[೩೦]ಬಂಡಿಬಂಡಿಯಲಿ ಸದೆಯನೊಟ್ಟಿ ಸುಡಿಸುತ[೩೦]
[೩೧]. . . . . .[೩೧]ಡಿಸಿದರು ॥೧೯೫॥

ಇತ್ತ ಮಾಸ್ತಿಯರು ಪಾಡುತ ಬಂದು ಗೌರಿಯ
ಅರ್ತಿಯಿಂದಲಿ ನೋಂಪಿ ನೋಂತು
ಮತ್ತೋಡಿ ಬಂದು ಕೊಂಡವ ಸುತ್ತಿ ನಿಂದಾಗ
ಬುತ್ತಿ ಸಂಚಿಗಳ ಹಾಕಿದರು ॥೧೯೬॥

ಅರಸುಮಕ್ಕಳು ರಾಣೆಯ ರಾಹುತರಿಗೆಲ್ಲ
ಹರಸಿ ಕೈಮುಗಿದು ಎಣ್ಣೆಯೊಳು
ಇರದೆ ನೆಳಲ ನೋಡಿ ಮಸ್ತಕದೊಳಗಾಗ
ಎರಗಿ ಬಿದ್ದರು ಕೊಂಡದೊಳಗೆ ॥೧೯೭॥

ಘೋಳಿಟ್ಟು ಪಾಳೆಯವೆಲ್ಲ ಘೀಳಿಟ್ಟು
ಬೇಳುವೆಗೊಂಡು ನರಸಿಂಹ
ಆಳೋಚನೆಗೊಂಡು ಮರುಗಿ ದುಃಖವ ತಾಳಿ
ಕಾಳಗಕವ ತಿರುಗಿದನು ॥೧೯೮॥

೨೯–೨೯. ಂದು ವಿಶ್ವರಾಜೇಂದ್ರನ ರಾಣೇರು (ಶಿ), ೩೦–೩೦ X(ಶಿ), ೩೧–೩೧ ಇಷ್ಟು ಭಾಗ ಎರಡೂ ಪ್ರತಿಗಳಲ್ಲಿ ಮುರಿದು ಹೋಗಿದೆ (ಸಂ).

ಎಚ್ಚಾಡಿ ಮಡಿದ*[ವಿಶ್ವ]*ನ ರಾಣೇರ ಕೊಂದು
ಹೆಚ್ಚಿ ಕೋಪದಿ ಭುಗಿಲೆನುತ
ಬೆಚ್ಚಿ ತಲ್ಲಣಗೊಂಡು ಮಂದಿಯ ನೋಡಲು
ಮುಚ್ಚಿತಗುಳ ಹೊರವಳೆಯ ॥೧೯೯॥

ಗೊಲ್ಲ ಸಿರುಮನ ಮಗ ವೀರಣ್ಣನೊಡನಿದ್ದ
ಬಿಲ್ಲು ಹರಿಗೆ ಪೆಟಲವರು
ನಿಲ್ಲದೆ ಚೀರುವ ತೆಲುಗರ ಗಾಯವ ಕಂಡು
ತಲ್ಲಣಿಸಿದ ನರಸಿಂಹ ॥೨೦೦॥

ಹೊಂದಲೀಸದೆ ಬೂದಿಹಾಳ ಕೋಟೆಯ ಸುತ್ತ
ನೊಂದ ಮಂದಿಯ ಕಾಣುತಲಿ
ಅಂದವಳಿದ ಕೋಪದಲಿ ನರಸಿಂಹರಾಯ
ನಿಂದು ಕರೆಸಿದ ಪೆಟಲಿನವರ ॥೨೦೧॥ (॥೧೦-೩೬)

ಬೆರಳ ತೋರಿದರಿಟ್ಟೇನೆಂಬ ಡೆಂಕಣಿ ತಿಪ್ಪ
ಬರಸು ಪಂಥವನೆಂದ ರಾಯ
ಬಿರುದಿನ ಉಡುಗೊರೆ ಕೊಟ್ಟು ಕೊಲ್ಲು ವೀರನ
ಉರಕಿಟ್ಟು ಧರೆಗೆ ಕೆಡಹೆಂದ ॥೨೦೨॥ (॥೧೦-೩೭)

ಸತ್ತಿಗೆಯನ ತಾಗಲಿಡಲೊ ಗೊಲ್ಲ ವೀರನ
ಸತ್ತಿಗೆ ಹಾರುವಂತಿಡಲೊ
ಒತ್ತಿನ ಚಾಮರದವನ ಇಡಲೊ ಎಂದು
ಮತ್ತೆ ಮೂದಲಿಸಿದ ತಿಪ್ಪ ॥೨೦೩॥ (॥೧೦-೩೯)

ಗಿಂಡಿಯವನ ತಾಗಲಿಡಲೊ ಗೊಲ್ಲ ವೀರನ
ಮಂಡೆಯ ಹಾರುವಂತಿಡಲೊ
ದಂಡೆಯೊಳೋಲೈಸಿ ಬರುವಂತ ಹಡಪದ
ಕೊಂಡಲ ತಿಮ್ಮನನಿಡಲೊ ॥೨೦೪॥ (॥೧೦-೪೦)

- ಈಶ್ವರ (ಶಿ, ಹ).

ಕುದುರೆಯವನ ಬೀಳಲಿಡಲೊ ವೀರನ
ಕುದುರೆಯ ಹಾರುವಂತಿಡಲೊ
ಚದುರತನದಿ ಅವನೊತ್ತಿಲಿ ನಿಂದಿಹ
ಕುದುರೆಯ ಭೀಮನನಿಡಲೊ ॥೨೦೫॥

ಎಂದ ಮಾತನು ಕೇಳಿ ನರಸಿಂಹರಾಯನು
ನೊಂದು ಕೋಪದಲುರಿದೆದ್ದು
ಚಂದದಿ ಕಾದುವ ವೀರನ ಇಡು ಎಂದು
ನಿಂದು ವೀಳ್ಯವ ಕೊಡಿಸಿದನು ॥೨೦೬॥

ವೀಳ್ಯವ ತೆಕ್ಕೊಂಡು ಡೆಂಕಣಿಯ ತಿಪ್ಪ
ಭಾಳ ಜತನದಲ್ಲಿ ನೋಡಿ
ಕೋಳುಗೊಂಬೆನು ಸಿರುಮನ ಮಗ ವೀರನ
ಹೇಳಿದ ನರಸಿಂಹನೊಡನೆ[೩೨] ॥೨೦೭॥

ಆಡಿದ ಮಾತಿಗೆ ಎವೆ ಹಳಚದೆ ರಾಯ
ನೋಡೆ ಹೂಡಿದ ಡೆಂಕಣಿಯ
ಜೋಡಿಸಿ ತಕ್ಕಡಿ ಗುಂಡಿನ ಸೂತ್ರಗ
ಳಾಡುವ ಪಾತ್ರದಂದದಲಿ ॥೨೦೮॥[II ೩೮]

ಚಿತ್ತವಧಾನ ಪರಾಕು ಇಲ್ಲದೆ ರಾಯ
ಇತ್ತ ನೋಡೆನ್ನ ಕೈಪರಿಯ
ಒತ್ತಿ ಡೆಂಕಣಿಯ ಸಿಡಿಯ ಬಗ್ಗಿಸಿ ತಿಪ್ಪ
ಹತ್ತಿಸಿ ಇಡಲಾರ್ಭಟಿಸಿ ॥೨೦೯॥ (॥೧೦-೪೨)

ಒದರುತ ಬರುವ ಗುಂಡನೆ ಕಂಡು ವೀರಯ್ಯ
ಹೆದರದೆ ನಿಂದು ನೋಡಿದನು
ಕದಲಿ ಹಿಂದಕೆ ಹೋದರೆ ದೇವೇಂದ್ರ
ಪದವಿಲ್ಲವೆಂದು ಮುಂದೆ ನಡೆದ ॥೨೧೦॥

---

೩೨. ಈ ಪದ್ಯ 'ಶಿ' ಪ್ರತಿಯಲ್ಲಿ ಇಲ್ಲ (ಸಂ).

ಘಡು ಘಡು ಢಮ್ಮೆಂದು ನುಡಿವ ಡೆಂಕಣಿಗುಂಡು
ಕಡುಗಲಿ ಸಿರುಮನ ಮಗನ
ಕೆಡಹಿ ಎದೆಯ ತಾಕೆ ಬಿಡಲು ವೀರನು ಪ್ರಾಣ
ಒಡನೆ ಇದ್ದವರು ಘೋಳಿಡಲು ॥೨೧೧॥ (॥೧೦-೪೩)

ಬೊಟ್ಟ ತೋರಿದರಿಡುವನು ಹುಸಿಯಲ್ಲವೊ
ದೃಷ್ಟವ ಕಂಡೆನೆಂದೆನುತ
ತೊಟ್ಟ ಮೈದೊಡಿಗೆಯ ನರಸಿಂಹ ತಿಪ್ಪಗೆ
ಕೊಟ್ಟನು ಬಿರದು ಬಾವಲಿಯ ॥೨೧೨॥ (॥೧೦-೪೪)

ಇತ್ತ ಕೊತ್ತಳದೊಳು ವೀರ ಬಿದ್ದುರುಳಲು
ಒತ್ತಿನೊಳಿರ್ದ ಪರಿವಾರ
ಎತ್ತಿ ತರ್ಕೈಸಿ ಅಂಗದ ಜೀವವ ನೋಡಿ
ಮತ್ತಿ ಕಾಣದೆ ಅಳುತಿರಲು ॥೨೧೩॥ (॥೧೦-೪೫)

ಧುರಗಲಿ ವೀರನ ಮರಣವ ಕಂಡೊಬ್ಬ
ಹರಿದು ಸಿರುಮನಡಿಗೆರಗಿ
ಕರವ ಮುಗಿದು ಬಿನ್ನೈಸಲು ಕಂಬನಿ
ಸುರಿದವು ನೆರೆದೋಲಗದಿ ॥೨೧೪॥ (॥೧೦-೪೬)

ಮಕ್ಕಳೊಳಗೆ ತನ್ನ ಮೋಹದ ಕಂದನ
ಚಿಕ್ಕವೀರನ ಸುದ್ದಿಗೇಳಿ
ಅಕ್ಕಟೆನುತ ಬಾಯ ವೀಳ್ಯವನುಗುಳುತ್ತ
ದುಃಖದಿ ಸಿರುಮ ಕೇಳಿದನು ॥೨೧೫॥ (॥೧೦-೪೭)

ಕಲ್ಲ ಘಾಯವೊ ಬಿಲ್ಲಂಬಿನ ಘಾಯವೊ
ಭಲ್ಲೇದ ಘಾಯವೊ ಮಗಗೆ
ಎಲ್ಲಿ ತಾಕಿತು ಕುಮಾರ ವೀರಣ್ಣಗೆಂದು
ಗೊಲ್ಲ ಸಿರುಮ ಕೇಳಿದನು ॥೨೧೬॥ (॥೧೦-೪೮)

ಬಿಂಕದಿ ಪಂಥದಿ ಅಂಕಕೆ ನಡೆದನು
ಶಂಕೆ ಇಲ್ಲದೆ ಆಳ ತರಿದ

ಭೋಂಕದಿ ಸಿಡಿಲ ರವದಿ ವೀರನೆದೆಯನು
ಡೆಂಕಣಿ ಗುಂಡು ತಾಕಿದುದು ॥೨೧೭॥ (॥೧೦-೪೯)

ಬಂದು ಹೇಳಿದರು ಚಿಕ್ಕರಸಿ ನಿನ್ನ ಕಿರಿಯ
ಕಂದ ವೀರಣ್ಣ ಕಾದಿ ಮಡಿದ
ಸಂದನೆ ಶಿವನ ಪಾದಕೆ ಎಂದು ಶೋಕದೆ
ಮಂದಿರದ ಸತಿಯರಳಲಿದರು ॥೨೧೮॥ (॥೧೦-೫೦)

ಒಡಹುಟ್ಟಿದನ ಸುದ್ದಿಗೇಳಿ ಅಣ್ಣಂದಿರು
ಹುಡಿ*[ಯಲ್ಲಿ]* ಹೊರಳಿ ಬಿದ್ದಳುತ
ನಡೆದು ಹರಿಗೆಯೊಳು ಹಾಕಿ ವೀರನ ಹೊತ್ತು
ಕಡೆಯ ಚಾವಡಿಗೆ ತಂದಿಳುಹಿ ॥೨೧೯॥ ((॥೧೦-೫೧)

ಕಟ್ಟಿ ಕುಳ್ಳಿರಿಸಿ ಚಿಮ್ಮುರಿ ಸುತ್ತಿ ವೀರಗೆ
ಇಟ್ಟರು ಗಂಧ ಕಸ್ತುರಿಯ
ಕಟ್ಟಳಿಲ್ಲದೆ ಬಂಗಾರ ಶೃಂಗಾರ ಮಾಡಿ
ಪಟ್ಟಾವಳಿಯ ಹೊದಿಸಿದರು ॥೨೨೦॥ (॥೧೦-೫೨)

ಹೆತ್ತ ತಂದೆ ತಾಯಿ ಸಿರುಮ ಹೆಣ ಕಂಡು
ಚಿತ್ರದ ಚಾವಡಿಯೊಳಗೆ
ಮೊತ್ತದ ಸತಿಯರೆಲ್ಲರು ಕೂಡಿ ವೀರಗೆ
ಒತ್ತಿ ಒದರಿ ಚಿಕ್ಕಮ್ಮ ॥೨೨೧॥

ಎದೆ ಬಸಿರನು ಹೊಯಿಕೊಳುತ ವಿಧಿಯೆ ಎಂದು
ಮದನ ಕಂಭವ ಹಾಯ್ದಳುತ
ಹದನರಿಯದೆ ಹಾರೈಸಿ ವೀರನ ಮೇಲೆ
ಬಿದುಮುಖಿಯರು ಬಿದ್ದು ಹೊರಳೆ ॥೨೨೨॥(॥೧೦-೫೩)

ಕೆಟ್ಟೆನೆನುತ ಸಿರುಮೇಂದ್ರನ ಮೋಹದ
ಪಟ್ಟದ ರಾಣಿ ಚಿಕ್ಕಮ್ಮ

- ಯಿಟ್ಟು (ಶಿ, ಹ)

ಮುಟ್ಟಿ ಮುದ್ದಿಸಿ ವೀರಗೆ ಹೆತ್ತೊಡಲನು ನೀನು
ಸುಟ್ಟುಹೋಗುವರೆ ಕಂದಯ್ಯ ॥೨೨೩॥

ಬಸವಳಿವುತ ಒಳಯಕೆ ಬಂದು ಚಿಕ್ಕಮ್ಮ
ಸೊಸೆಯರ ಶೃಂಗರಿಸಿದಳು
ಶಶಿಮುಖಿಯರು ಸಹ ಬೆರಸಿ ಊಟವ ಮಾಡಿ
ಒಸರಿ ಕಣ್ಜಲ ಕುಚಕಿಳಿಯೆ ॥೨೨೪॥(॥೧೦-೫೪)

ಕಾಲ ಕುಪ್ಪಸಗಳ ತೊಡಿಸಿ ರವುಕಿಗಳ
ಮೇಲೆ ಚಿತ್ರಾಂಬರ ಉಡಿಸಿ
ಬಾಲೆಯರು ಮೊದಲಿಟ್ಟ ಬಂಗಾರ ತೆಗೆಯದೆ
ಸಾಲಂಚೆಗಮನೇರು ಮೆರೆಯೆ ॥೨೨೫॥ (॥೧೦-೫೫)

ಕನ್ನಡಿ ಕಠಾರವ ಪಿಡಿದೊಲವಿಂದ
ಹೊನ್ನ ಪುತ್ಥಳಿಗಳಂದದಲಿ
ಚೆನ್ನಾಗಿ ಮಣಿದು ಕುಣಿದು ಅತ್ತೆ ಮಾವಗೆ
ಬಿನ್ನೈಸಿ ಕರಗಳ ಮುಗಿದು ॥೨೨೬॥

ನೆರೆ ನೋಂಪಿಯ ನೋಂತುದಿಲ್ಲವೆನುತಲಿ
ಅರೆ ನೋಂಪಿಯ ನೋಂತೆವೆನುತ
ಹರಸುತ ತಮ್ಮ ಗಂಡನ ನೆರೆ ರೂಪನು
ಪರಿಪರಿಯಲಿ ಕೊಂಡಾಡಿದರು ॥೨೨೭॥ (॥೧೦-೫೬)

ನಳಿತೋಳು ಕದಪಿಗೆ ತನು ಒಪ್ಪುತಿದೆ ವೀರ
ಕಳಸ ಕುಚದ ಚೆಲುವಿಕೆಗೆ
ಅಳವಡಿಸಿವೆ ಕಸ್ತುರಿ ಗಂಧಕೆ ಹೊಂದಿ
ಎಳೆಯ ಪ್ರಾಯದಿ ಹಿಂಗುವರೆ ॥೨೨೮॥ (॥೧೦-೫೭)

ನೋಡುವ ಕಣ್ಣು ಕೇಳುವ ಕಿವಿ ಸವಿಮಾತ
ನಾಡುವ ಜಿಹ್ವೆ ನಾಸಿಕವು
ಜೋಡಗಲಿದೆಯೊ ಪಂಚೇಂದ್ರಿ ಪೃಥ್ವಿದೊರೆ
ರೂಢಿಸಿ ಕಾದಿದೊ ವೀರ ॥೨೨೯॥ (॥೧೦-೫೮)

ಚಿಕ್ಕ ಹರೆಯದಲಿ ಮುತ್ತೈದೆತನಗಳ
ಮುಕ್ಕು ಮಾಡಿದೆಯೊ ಕಲಿ ವೀರ
ಸಕ್ಕರೆ ಸವಿಬಾಯೊಳು ಬಾಯಿಕ್ಕದೆ
ಅಕ್ಕಟ ನೀ ಕಾದಿ ಮಡಿದೆ ॥೨೩೦॥

ಮುಂದೆ ಪರಿದು ನರ[ಸಿಂಹನ] ದಂಡ
ಕೊಂದೆಯೊ ಪಾಡು ಪಂಥದಲಿ
ಹಿಂದು ಮುಂದೆಣಿಸದೆ ಎದೆಯ ಡೆಂಕಣಿಗುಂಡು
ಸಂಧಿಸಿ ಪ್ರಾಣ ಬಿಡುವಾಗ ॥೨೩೧॥ (॥೧೦-೫೯)

ನೆನೆದೆಯೆ ನಿನ್ನರಮನೆಯ ರಮಣಿಯರ
ತನುಮನ ಮಚ್ಚುಗಿಚ್ಚೆಯಲಿ
ಜನನಿಯರಿಕ್ಕಿದ ದುಃಖವ ವೀರ
ಇನ ಶಶಿಕಳೆ ಪ್ರಭೆರಮಣ[೩೩] ॥೨೩೨॥ (॥೧೦-೬೦)

ಚಿಕ್ಕತ್ತೆ ಮಾವ ಸಿರುಮೇಂದ್ರಗೆ ಶರಣೆಂದು
ಉಕ್ಕುವಳಲನು ಸಂತೈಸಿ
ವಿಕ್ರಮ ವೀರನ ಸತಿಯರು ಮೆರೆದರು
ಲೆಕ್ಕವಿಲ್ಲದ ವಾದ್ಯಗತಿಗೆ ॥೨೩೩॥ (॥೧೦-೬೧)

ನಿರಿಯ ತಿದ್ದುತ ಮುಂಗುರುಳ ನೇವರಿಸುತ
ಸೆರಗ ಕಿಬ್ಬದಿಗೆ ಸಿಕ್ಕಿಸುತ
ಮೆರೆವುತ ಕಿರುನಗೆ ನಗುತ ವೀರನ ಮೇಲೆ
ಹೊರಳಿ ಗೋಳಿಟ್ಟೊರಲಿದರು ॥೨೩೪॥ (॥೧೦-೬೨)

ಸೋಗೆನವಿಲ ಸೊಂಪಿಲಿ ನಲಿದಾಡುತ
ಸಾಗಿಬಂದರು ಅರಮನೆಗೆ
ಆಗಲತ್ತೆ ಮಾವ ಭಾವಗಳಿಗೆ ತಲೆ
ವಾಗಿ ಕೈಮುಗಿದು ವೀರನಿಗೆ ॥೨೩೫॥

---

೩೩. ಈ ಪದ್ಯ 'ಶಿ' ಪ್ರತಿಯಲ್ಲಿ ಇಲ್ಲ (ಸಂ).

ಹೊಳೆವ ಕನ್ನಡಿ ಮುಖ ಕಳಸ ಕುಚಗಳೆವೆ
ಹಳಚದೆ ಕಣ್ಣಾರತಿಯ
ಬೆಳಗುತ ಜಯ ಜಯ ಎನುತ ವೀರನ ಮೇಲೆ
ತಳಿದರು ಮುತ್ತಿನ ಸೇಸೆಯನು ॥೨೩೬॥

ನಗೆವೆಣ್ಣುಗಳು ತಾವು ತರ್ಕೈಸಿ ಮುಂಡಾಡಿ
ಬಗಸೆಗಂಗಳ ಬಾಲೆಯರು
ಮೊಗ ನೋಡಿ ಮಾತಾಡಿ ಅಕ್ಕಗಳಿರ ನಾವು
ಅಗಲಿ ಹೋಗುತಲಿವೆ ಎನುತ ॥೨೩೭-॥ (॥೧೦-೬೩)

ಸೊಸೆಯ ಮಗನ ಸಿರುಮ ಚಿಕ್ಕರಸಿ ಕಂಡು
ಬಸಿವ ಕಂಬನಿ ಕಾಹುರದಿ
ಬಿಸಿಯೇರಿದುಸುರೊಡಲೊಳು ದೂಟಾಡುತ್ತ
ಮಸೆಲಗೆದೆಯ ಕೊಂಡಂತೆ ॥೨೩೮॥

ಶೋಕವಿಡುತ ಬೂದಿಯಹಾಳ ಪ್ರಜೆಗಳೆಲ್ಲ
ಏಕೆ ಈ ಸಂಸಾರವೆನುತ
ಈ ಕಳೆ ಈ ರೂಪು ಸಿರುಮನ ಮಗ ಜಗ
ದೇಕವಿಕ್ರಮ ವೀರ ಮಡಿದ ॥೨೩೯॥

ನಂಬುಗೆಯನು ಕೊಟ್ಟು ವೀರನ ತರ್ಕೈಸಿ
ಚುಂಬಿಸಿ ಹಣೆಗೊತ್ತಿಕೊಳುತ
ಇಂಬುಗೊಂಡಿಹ ಕೈಲಾಸದೊಳಗೆ ನಿನ್ನ
ಬೆಂಬಳಿ ತಪ್ಪದೆ ಬಹೆವು ॥೨೪೦॥

ಮುಂಚೆ ನೀ ಪೋಗಿ ಶಿವನ ಪಾದಕೆ ಬಿದ್ದು
ವಂಚನಿಲ್ಲದೆ ಬೇಡಿಕೊಳ್ಳು
ಪಂಚಾಕ್ಷರಿಯ ಬಾಗಿಲ ಕಾವಲ ಬೇಡೊ
ಹಿಂಚದೆ ಬಹೆನೆಂದ ಸಿರುಮ ॥೨೪೧॥ (॥೧೦-೬೪)

ಹಿಂದಣ ಭವಪಾಶ ಹರಿದು ವೀರಣ್ಣ ನೀನು
ಮುಂದೆ ಸ್ವರ್ಗವ ಸೂರೆಗೊಳ್ಳೊ

ಬಂದ ಜನರಿಗೆ ಬಿಡಾರವ ಮಾಡಿಸೊ
ಎಂದು ಹೇಳಿದ ಸಿರುಮೇಂದ್ರ ॥೨೪೨॥

ಎತ್ತಿಕೊಂಡೊಯ್ದು ಕುಮಾರ ವೀರಣ್ಣನ
ಮತ್ತೆ ಸಮಾಧಿಯೊಳಿರಿಸಿ
ಒತ್ತಿಲಿ ಅವನ ಸತಿಯರ ಕುಳ್ಳಿರಿಸಿದ
ಹೆತ್ತ ತಂದೆಯು ಸಿರುಮೇಂದ್ರ ॥೨೪೩॥ (॥೧೦-೬೬)

ಮಗನ ಸೊಸೆಯರ ಮೊಗ ನೋಡಿ ಮಾತಾಡಿ
ಬಗೆಗುಂದಿ ಬಾಯಲಕ್ಕಿಯನು
ಮಿಗೆ ಇಕ್ಕಿ ಸಿರುಮನ ರಾಣಿ ಚಿಕ್ಕಮ್ಮ
ಅಗಲಿ ಹೋಹರೆ ಎನ್ನ ಕಂದ ॥೨೪೪॥ (॥೧೦-೬೭)

ನಾಳೆ ನಿನ್ನೊಡನೆ ಬರುತಲಿವೆ ನೀ ಹೋಗಿ
ಹೇಳಯ್ಯ ಪರಮೇಶ್ವರಗೆ
ಕೇಳಿ ಬಿನ್ನೈಸೊ ಬಾಗಿಲ ಕಾದೆವೆನುತಲಿ
ಭಾಳಾಕ್ಷನ ಬೇಡಿಕೊಳ್ಳೊ ॥೨೪೫॥

ಕಂದ ನಿನ್ನೊಡನೆ ನಿನ್ನಂತೆ ಬರುವ ಹಾಗೆ
ತಂದಹನೆ ಶಿವ ನಮಗೆ
ಸಂದೇಹವೆಳ್ಳಿನಿತಿಲ್ಲ ಬರುವೆವೆಂದು
ಮುಂದಲೆವಿಡಿದು ಮುದ್ದಾಡಿ ॥೨೪೬॥

ಪುತ್ರಶೋಕವನು ನನಗೆ ಮುಂದು ತೋರಿದೆ
ಹೆತ್ತವರನು ಕಡೆಮಾಡಿ
ಸತ್ತುದಿಲ್ಲವೊ ಸಿಂಹದ ಮರಿ ನೀನೆಂದು
ಅತ್ತು ಮಗನ ಮುಖ ನೋಡಿ ॥೨೪೭॥

ಮುಂದೆ ಕೈಲಾಸಕೆ ನಡೆದೆ ವೀರಣ್ಣ ನಿನ್ನ
ವೊಂದಿ ಎಲ್ಲರು ಬಂದೆವೆನುತ
ಬಂದ ಜನರುಗಳು ನಂಬುಗೆಯನು ಕೊಟ್ಟು
ನೊಂದೆಲ್ಲ ಮಣ್ಣ ಮುಚ್ಚಿದರು ॥೨೪೮॥

ಉಘೆ ಉಘೆ ಎನುತ ಸಮಾಧಿಯನಿಕ್ಕಿ ಬಂದು
ದುಗುಡದೆಲ್ಲರು ಮಂದಿರಕೆ
ಜಗದೊಳು ಪೊಸತೆನಿಸುವ ಸಿರುಮೇಂದ್ರಗೆ
ಮಿಗಿಲಾದುದು ಮೂರು ಸಂಧಿ[೩೪] ॥೨೪೯॥ (॥೧೦-೬೯)

❖❖

೩೪+ ಅಂತು ಸಂಧಿ ೩ಕ್ಕೆ ಪದನು ೬೧೮ಕ್ಕೆ ಮಂಗಳ ಮಹಾ ಶ್ರೀ ಶ್ರೀ ಶ್ರೀ (ಶಿ), ಅಂತು ಸಂಧಿ ೩ ಕಂ ಪದನು ೪೬೭ ಶ್ರೀ ಶ್ರೀ ಮಂಗಳ ಮಹಾಶ್ರೀ (ಹ).

ಸಂಧಿ : ನಾಲ್ಕು

[೧]ಕನ್ನೆಗಾಳಗ[೨]ಕಾ[೨]ದಿ ವೀರ ಮಡಿದ ಸುದ್ದಿ
ಚೆನ್ನಾಗಿ ಹುಟ್ಟೆ ಪಾಳೆಯದಿ
ಮುನ್ನ ಕೇಳಿದ ಸಿರುಮಣ್ಣನ ಸ್ನೇಹಿತನೊಬ್ಬ
ಹೊನ್ನವಳ್ಳಿಯ ವೇದರಾಜ ॥೧॥ (॥೧೦–೭೦)

ಹರ ಹರ[೩]ಎಂದು[೩]ಮರುಗಿ ರುದ್ರರಾಜನ
ಕರಸಿ ಏಕಾಂತವನಾಡಿ
ಸಿರುಮಣ್ಣನಾಯ್ಕನ ಕಾಣಿಸಬೇಕೆ[೪]ಂದು[೪]
ನರಸಿಂಹನೆಡೆಗೆ ಬಂದವ[೫]ರು[೫] ॥೨॥ (॥೧೦–೭೧)

ನಿನ್ನ ಪಾದವ ರಾಯ ಕಾಣದೆ ಸಿರುಮೇಂದ್ರ
ತನ್ನ ಮಗನ ಕೊಂದುಕೊಂಡ
[೬]ಇನ್ನು[೬]ನಂಬಿಗೆ ಬೇಕೆನುತ ಬಿನ್ನೈಸಿದ
ಹೊನ್ನವಳ್ಳಿಯ ವೇದರಾಜ ॥೩॥ (॥೧೦–೭೨)

ಕಪ್ಪವ ಕೊಟ್ಟರೆ ಸಿರುಮನ ಪ್ರಾಣಕೆ
ತಪ್ಪೆನೆನುತ ನರಸಿಂಹ
ಒಪ್ಪುಗೊಳಿಸಿ ರುದ್ರರಾಜನ ಕಳುಹಿ ನ
ಮ್ಮಪ್ಪಾಜಿಯಾಣೆ ಕರಸೆಂದ ॥೪॥ (॥೧೦–೭೩)

೧+ಶ್ರೀ ಗುರುಭ್ಯೋಂನಮಃ। ಪದನು (ಶ್ರೀ), + ಹರುಪನಹಳ್ಳಿಯ ವಿನಾಯಕದೇವರ ಪಾದವೆಗತಿಮತಿ। ರಾಗ ತೆಲುಗು ಕಾಂಬೋದಿ ।ಪದ। (ಹ), ೨–೨X(ಶಿ), ೩–೩ ಎನುತಲಿ (ಶ.ಹ), ೪–೪ ನುತಲಿ (ಶಿ), ೫–೫ನು (ಶಿ), ೬–೬ ಎನ್ನ (ಶಿ).

ದುಃಖದೆ ಜವಳಿಯ ಕಟ್ಟಿಸಿ ರುದ್ರರಾಜನ
ದೊಕ್ಕನೆ ರಾಯ ಕಳುಹಿದನು
ಮಕ್ಕಳ ಕೊಂದುಕೊಳ್ಳದೆ ಸಿರುಮನ ಬೇಗ
ಗಕ್ಕನೆ ಬರಹೇಳೆಂದ ॥೫॥

ಸೊಗಸುಮಾತಿಗೆ ರುದ್ರರಾಜ ಬೇಗದಿ ಬಂದು
ಅಗಳ ದಂಡೆಯಲಿ ನಿಂದವನು
ತಗುಳಿ ಕೋಟೆಯ ಮೇಲೆ ಎಸೆವ ಬಂಟರನೆಲ್ಲ
ನೆಗಹಿ ಸನ್ನೆಯಲಿ ನಿಲ್ಲಿಸಿದ ॥೬॥ (॥೧೦-೭೪)

ಕಾಳಗ ಬೇಡ ರುದ್ರರಾಜ ಬಂದಹನೆಂದು
ಹೇಳು ನಿಮ್ಮೊಡನೆಯಗೆಂದೆನಲು
ಆಳೋಚಿಸಿ ಕೇಳುತ ಮತ್ತೆ ಸಿರುಮೇಂದ್ರ
ಆಳುವೇರಿಯ ಮೆಟ್ಟಿ ನಿಂದ ॥೭॥ (॥೧೦-೭೫)

ಭಾವ ರುದ್ರಯ್ಯ ನೀವು ಬಿಜಮಾಡಿದಿರಿಲ್ಲಿಗೆ ಇ
ನ್ನಾವ ಕಾರ್ಯವು ಹೇಳಯ್ಯ
ನೋವ ಕೇಳುತ ದುಃಖದೆ ಜವಳಿ ನರಸಿಂಹ
ಭೂವರ ಕಳುಹಿದನಿವ ಕೋ ॥೮॥ (॥೧೦-೭೬)

ನೀಡಿದ ಕೋಟೆಯೊಳೆಯಕುಡುಗೊರೆಗಳ
ರೂಢಿಗುನ್ನತ ಸಿರುಮಣ್ಣಗೆ
ಬೇಡಿಕೊಂಡನು ರುದ್ರರಾಜ ಬುದ್ಧಿಯ ಹೇಳಿ
ಆಡಿದ ಮೇಲೆಣಿಕೆಯನು ॥೯॥ (॥೧೦-೭೭)

ಕ್ಷೋಣಿಯೊಳಗೆ ಮಕ್ಕಳ ಸಾವು ಕಣ್ಮುಂದೆ
ಕಾಣಬಹುದೆ ಸಿರುಮೇಂದ್ರ
ಊಣೆವಿಲ್ಲದೆ ನರಸಿಂಹನ ಕಂಡು
ನಿನ್ನ ಪ್ರಾಣವನುಳುಹಿಕೊಳ್ಳಯ್ಯ ॥೧೦॥ (॥೧೦-೭೮)

ಸರಸದಿ ಬೀಗತನದಲಾಡಿದ ಮಾತು
ನಿರುತವಲ್ಲವೊ ರುದ್ರರಾಜ
ಧರೆಯೊಳು ಪರಬಲಾಂತಕನೆಂಬ ಬಿರಿದನು
ಸಿರುಮನೆಂಬುದನು ಕೇಳ್ದರಿಯ ॥೧೧॥ (॥೧೦-೭೯)

ಅಳಿವುದು ಕಾಯವು ಉಳಿವುದು ಕೀರ್ತಿಯು
ಫಲ ಬೆಳೆವುದು ಭಾವ ರುದ್ರ
ಬಲುಹುಳ್ಳ ನರಸಿಂಹನೊಳು ಸೆಣಸುವೆ ನಾನು
ಇಳೆಯೊಳಾಶ್ಚರಿ ನೀವು ಹೋಗಿ ॥೧೨॥

ಕಲ್ಲುಮನೆಯ ಕಟ್ಟಿ ಮೋರೆಯ ರಾಯರು
ಎಲ್ಲ ಕಾಲವು ಬಾಳಿದರೆ
ಬೆಳ್ಳಿಯ ಮನೆಮಾಡಿ ಪಾಂಡವರೈಶ್ವರ್ಯ
ಉಳ್ಳವರಿಗೆ ವನವಾಸ ॥೧೩॥ (॥೧೦-೮೨)

ಹುಲ್ಲುಮನೆಯ ಕಟ್ಟಿ ಬಾಳ್ವ ಗೊಲ್ಲರು ನಾವು
ನಿಲ್ಲದೈಶ್ವರ್ಯ ಎಂಬುದನು
ಬಲ್ಲಿದ ನರಸಿಂಹಗೆ ಹೇಳೋ ಭಾವಯ್ಯ
ಸೊಲ್ಲೊಂದು ಕೇಳೆಂದ ಸಿರುಮ[೭] ॥೧೪॥ (॥೧೦-೮೧)

ಕಳುಹಿದೆ ನಾ ಮುನ್ನ ಹೆಣ್ಣುಡುಗೆಯನೆಲ್ಲ
ತಳುವದೆ ನರಸಿಂಹನೆಡಗೆ
ಕಳೆಗುಂದಿ ತಾ ಹೋಗಿ ಕಂಡರೆ ಭಾವಯ್ಯ
ಇಳೆಯೊಳಪಕೀರ್ತಿ ತಪ್ಪುವದೆ ॥೧೫॥

ಎಣ್ಣರಿಸಿಣ ಕಣ್ಣಕಪ್ಪು ಹೆಣ್ಣುಡುಗೆಯ
ಇನ್ನುಟ್ಟು ಬಾಳ್ವೆನೆ ನಾನು
ಬಣ್ಣಗೆಟ್ಟು ಕಾಬೆನೆ ನರಸಿಂಹನೊಳು
ಹಣ್ಣಿಯೆ ಕಾದುವೆನೆಂದ ॥೧೬॥ (॥೧೦-೮೪)

ನುಡಿಗೇಳಿ ರಾಯನಾತನ ಕೂಡೆ ಕಾದುವೆ
ಕಡುಗಲಿ ಕುವರ ಮಲ್ಲಣ್ಣ
ಕಡೆಗೊತ್ತಳದಿಂದ ಬಂದಾಗ ತಂದೆಯ
ಗಡಣದಿ ಗರ್ಜಿಸಿ ನುಡಿದ ॥೧೭॥ (॥೧೦-೮೫)

---

೭. ಇಲ್ಲಿ ಮುಂದೆ ದ 'ಹ' ಪ್ರತಿಯಲ್ಲಿ ಒಂದು ಗರಿ ಕಳೆದಿರುವ ಕಾರಣ "ನುಡಿ ಗೇಳರಾಯನ . . . . .", ಒಳಗೊಂಡ ಪದ್ಯಗಳು ಸಿಗುವುದಿಲ್ಲ (ಸಂ).

ಸಂತದ ಮಾತೊ ಪಂಥದ ಮಾತೊ ಸಿರುಮೇಂದ್ರ
ಇಂತೆಂದೆ ಭಾವ ರುದ್ರಯ್ಯ
ಭ್ರಾಂತುಗೊಳ್ಳದೆ ಹೋಗೆಂದು ಕೋಟೆಯ ಮೆಟ್ಟಿ
ನಿಂತು ಸಾರಿದ ಮಲ್ಲಭೂಪ ॥೧೮॥ (॥೧೦-೮೬)

ಹೆಚ್ಚುಳ್ಳ ಬೂದಿಹಾಳ ಸಿರುಮನ ಪರಿವಾರ
ಎಚ್ಚು ಕೊಲ್ವರೊ ರುದ್ರ ಮಾವ
ಎಚ್ಚರಿಕೆಯ ಮೇಲೆ ಹೋಗಿ ರಾಯನ ಕೂಡ
ನಿಶ್ಚಿಯಿಸಿ ಕಾದ ಹೇಳೆಂದ ॥೧೯॥ (॥೧೦-೮೭)

ಡಮ್ಮೆಂದು ಪೆಟಲ ನುಡಿಸೆ ರುದ್ರರಾಜನು
ಹಮ್ಮೈಸಿ ಹಿಂದಕೆ ತಿರುಗಿ
ಗಮ್ಮನೆ ಬಂದು ಹೇಳಿದ ನರಸಿಂಹಗೆ
ಸುಮ್ಮಾನವಳಿದ ಸುದ್ದಿಯನು ॥೨೦॥

ಸಂಧಾನವಿಲ್ಲವೆನಲು ನರಸಿಂಹ ಕೋಪ
ಒಂದು ಹದಿನಾರು [೮]ಮಡಿ ಒದಗಿ[೮]
ಹೊಂದಿದೋಲಗದಿ ಈಶ್ವರನಾಯಕ ಕೇಳು
ಸಂದೇಹ ಬಿಟ್ಟಿತೆನ್ನ ಮನವಿ ॥೨೧॥

ಹಗಲಿರುಳೆನ್ನದೆ ಕಾದುವ ಬೂದಿಹಾಳ
ಅಗಳ ಹೂಣಿಸಬೇಕೆನುತ
ಬಗೆ ಬಗೆ ಏಣಿಬದ್ಧರ ತಳಿ ಪಲಗೆಯ
ಮಿಗೆ ಜೋಡಿಸಿ ತರಿಸಿದನು ॥೨೨॥

ಹೇಳಿದ[೯]ಅರಸಾಳು[೯]ಸೂಳೇರು ಸಹವಾಗಿ
ಏಳಿ ಸವುರಿಸಿಕೊಳ್ಳೆನುತ
ಕೇಳುತ ಮರಮುಟ್ಟು ಸದೆ ಸೊಪ್ಪೆ ಹೊರಗಟ್ಟಿ
ಮೇಲೆ ಹೊತ್ತೆಲ್ಲ ನಡೆದರು[೧೦] ॥೨೩॥

೮–೮ ಮಾಡೊದಗೆ (ಶಿ), ೯–೯ ಆಳು (ಶಿ), ೧೦ 'ಹ' ಪ್ರತಿಯಲ್ಲಿ ಒಂದು ಗರಿ ಕಳೆದ ಕಾರಣ "ಹೇಳಿದ ಅರಸಾಳು . . . ." ಇದರ ತರುವಾಯದಿಂದ "ಮಿಂಚು ಮೇಘದಿ. . . .' ಒಳಗೊಂಡ ಪದ್ಯಗಳು ಇಲ್ಲಿ ಸಿಗುತ್ತಿಲ್ಲ (ಸಂ).

ಹನುಮಂತ ಕಪಿಕಟಕವು ಕೂಡಿ ತರುಗಿರಿ
ವನಗಳ ಕಿತ್ತೆತ್ತುವಂತೆ
ಸನುಮತದಿ ರಾಯನ ದಂಡು ಬೂದಿಹಾಳ
ಅನುವೇರಿದಗಳ ಸೇರಿದರು ॥೨೪॥

ಹೋಯಿತು ಬೂದಿಹಾಳಾಯಿತು ನಮಗೆಂದು
ಖೋಯೆಂದು ನರಸಿಂಗನವರು
ಅಯಮಾನದಿ ತಳಿ ಬಂದರೆ ಮರೆಯಲಿ
ವೈಯ್ಯಾಗೆ ಅಗಳ ಸೇರಿದರು ॥೨೫॥

ಸುತ್ತಲು ಕಂಡರು ಬೂದಿಹಾಳ ಸಿರುಮನ
ಮೊತ್ತದಿ ವೀರ ಪರಿವಾರ
ಉತ್ತಮ ಕೊಮಾರ ನಾಯ್ಕರು ಬಾಗಿಲ ಬೇಗೆ
ಮತ್ತೆ ತೆರಸಿ ಹೊರಟರು ॥೨೬॥

ಕಡಿ ಕಡಿ ಹಿಡಿ ಹಿಡಿ ಬಿಡಬೇಡ ಎನುತಲಿ
ತೊಡರಿ ತೊಡರಿ ಬೇಗದಲಿ
ತುಡುಕಿ ತುರಗವನೇರಿ ಕಡಿ*[ಯೆ ಕುಮಾರರೆಲ್ಲ]*
ಮಡಿಹುಡಿಮಾಡಿ ತೆಲುಗರ ॥೨೭॥

ಮಿಂಚು ಮೇಘದಿ ಹೊಳೆದಡಗಿ ಸಿಡಿಲ ಕೂಡೆ
ಹೊಂಚೆದ್ದಡಗಿ ಹೊಯ್ವಂತೆ
ಮುಂಚೆ ರಾಯನ ದಂಡ ಕಡಿದಡಿ ಕಡಿದರು
ಪಂಚಗುಂಡಿಗೆ ಸಿರುಮನವರು ॥೨೮॥

ಅಟ್ಟಿ ಇರಿದು ಕುಟ್ಟಿ ಕೆಡಹಿ ತೆಲುಗರನು
ಮೆಟ್ಟಿ ತಲೆಯ ಹೊಯ್ದಿಡುತ
ಹೊಟ್ಟೆಯ ಸೀಳಿ ಕರುಳ ಹಿರಿದು ರಣ
ವಟ್ಟೆಯೊಳಗೆ ಹಾಕಿದರು ॥೨೯॥

_ ದೆ ಕಮ್ಮಾರವೆಲ್ಲ (ಶಿ)

ತಗರು ತಗರು ಕಾ[ದಿ]ದಂದದಿ ಉಭಯ ಬಲ
ಕುಭೆ ಕುಭೆನುತ ಬೊಬ್ಬಿರಿದು
ಜಬರಜಂಗು ಮುಂಡುಗೋವಿಯಲಿ [ಮು]ಸುಕೆ
ನಭವದೂರಲು ಕಾದಿದರು[೧೧] ॥೩೦॥

ಕರಿ ಕರಿ ತಗರು ತಗ[ರು] ತಾಕಿ ಭರದಿಂದ
ಅರೆ ನೆರೆ ಹಳಚಿದಂದಲಿ
ಸಿರುಮನ ಪರಿವಾರ ನರಸಿಂಹನವರ ಪಡೆ
ಸರಿಮಿಗಿಲೆನಿಸಿ ತಾಕಿದರು[೧೨] ॥೩೧॥

ಹದಿನೈದು ತುರಗ ತನ್ನೊಡನೆ ಕುಮಾರ ಮಲ್ಲ
ಇದಿರುಗಾಣುತಲೇರಿದನು
ಕದಲಿಸಿ ಕದಳಿಯ ವನವ ತರಿದವೊಲು
ಎದೆಗೆಡಿಸಿದ ತೆಲುಗರನು ॥೩೨॥

ಠಣಕುಟ್ಟಿ ನೆಗದು ಬಿಲ್ಲಾಳೆಚ್ಚ ಘಾಯಕೆ
ಹೆಣಗಳನೆಳೆದೊಯ್ಯುತಲಿ
ಕೆಣಕಿ ಕೆಟ್ಟೆವು ಸಿರುಮಣ್ಣನಾಯಕನೆಂದು
ರಣದೊಳು ತೆಲುಗ ಮನ್ನೆಯರು ॥೩೩॥

ಊಣೆಯ ಬಂದರೆ ಬರಲೆಂದು ಪಾಳೆಯ
ವಾಟದಲೆದ್ದೋಡಿದರು
ಕಾಣುತ ಕುಮಾರಮಲ್ಲ ಹೋಗದಿರೆಂದು
ಹೂಣಲಿರಿದ ಸಮರದಲಿ ॥೩೪॥

ಕತ್ತಿಯ ಕಿತ್ತು ತುರಗದ ರಾಹುತರನು
ಇತ್ತಂಡ ಬೀಳಹೊಯ್ದನು
ಸುತ್ತುವರಿದು ಬೂದಿಹಾಳ ಕುಮಾರಮಲ್ಲ
ಮುತ್ತಿಗೆ ಹಿಂದಕೆ ತೆಗೆಸಿ ॥೩೫॥

---

೧೧ ಈ ಪದ್ಯ 'ಶಿ' ಪ್ರತಿಯಲ್ಲಿ ಇಲ್ಲ (ಸಂ), ೧೨ ಈ ಪದ್ಯ 'ಹ' ಪ್ರತಿಯಲ್ಲಿ ಇಲ್ಲ (ಸಂ).

ತರುಬಿ ತರುಬಿ ನಟ್ಟ ಬಾಣಗಳ ಕೀಳಿಸಿ
ತೆರಹಿಲ್ಲದೇಣಿ ಬದ್ಧರವ
ಹೊರಿಸಿ ಹೊರಿಸಿ ಊರೊಳಯಕೆ ಕಳುಹಿದ
ನೆರೆಗಲಿ ಕೊಮಾರಮಲ್ಲ ॥೩೬॥

ಮತ್ತೆ ಹಿರಿಯ ಸೋಮಣ್ಣ ಕಾಚಣ್ಣನು
ಸತ್ಯದೆಕ್ಕಟಿಗ ನಾಯಕರು
ಕಿತ್ತು ಕಠಾರದಿ ಹೊಕ್ಕು ರಾಯನ ದಂಡ
ಅತ್ತಿತ್ತ ಮಾಡಿ ಒಕ್ಕಿದರು ॥೩೭॥

ಒಡಬರಸಿತು ಸರ್ವದಳ ನರಸಿಂಹನ
ಒಡನಿರ್ದ ಮೈಗಾವಲವರು
ಗುಡುಗುಡಿಸುತ ಹತ್ತು ಸಾವಿರ ಸಬಳವು
ಬಿಡಿಸಿಕೊಂಡಧಿಕ ರಾಹುತರು ॥೩೮॥

ಹೊಕ್ಕರು ನರಸಿಂಹರಾಯನ ಬಿರುದಿನ
ಎಕ್ಕಟಿಗರು ಬೊಬ್ಬಿರಿದು
ಲೆಕ್ಕವಿಲ್ಲದ ವಾದ್ಯ ರಭಸದಿ ಸಿರುಮನ
ಮಕ್ಕಳ ಹಿಡಿ ಹಿಡಿ ಎನುತ ॥೩೯॥

ಹೊಯ್ದಿರಿದೆಸೆಯೆ ಹೊಳೆದು ತಪ್ಪಿ ಸಿರುಮನ
ಮೈಗಾವಲ ವೀರಭಟರು
ಹುಯ್ಯಲಿಕ್ಕದೆ ಹಿಮ್ಮೆಟ್ಟದೆ ಮುದದಿಂದ
ಕೈಮಾಡೆ ಕಾಹುರದವರು ॥೪೦॥

ಹಿಂಗಾಲ ಮುಂಗಾಲ ಹೊಯ್ದರು ಕುದುರೆಯ
ಸಂಗ್ರಾಮದಿ ಕೆಡಹಿದರು
ಭಂಗಬಡಿಸಿದರು ಸಿರುಮನ ಮನ್ನೆರು
ನರಸಿಂಗರಾಯ ರಾಹುತರ ॥೪೧॥

ಕಡಿಯಲು ತಲೆಯ ಮೇಲಕೆ ಸಿಡಿಯಲು ಮುಂಡ
ನಡೆದು ಕೆಡೆದು ಬಿದ್ದುರುಳೆ
ಧಡ ಧಡಿಸಿತು ಭೂಮಿ ಹೆಣ ರಣ ರಕ್ತದ
ಕಡಲುಬ್ಬಿ ಕಡಲೊಳು ಹರಿಯೆ ॥೪೨॥

ಚೆಲುವ ಕಡಿದ ಹೆಣನಾ ಹೊಟ್ಟೆಯಲಿ
ಜೋಲುವ ಕರುಳ ಕಾಳಿಜವು
ಕಾಲು ತೊಡರಿ ಬಿದ್ದ ತಲೆ ಕಣ್ಣೆವೆಗಳ
ಲೋಲರ ತೆರದಂದೆಸೆದರು ॥೪೩॥

ಮುಂಡ ಜೀಕುಳಿ ರುಂಡ ಒಡೆಯಲದರ ಪಾತ್ರೆ
ಹಿಂಡು ಭೂತವು ಹಿಡಿಹಿಡಿದು
ಕೊಂಡಾಡಿ ಸಿರುಮನ ಹರಸುತೋಕುಳಿಯನು
ಕಂಡು ಕಂಡೆಡೆಗೆ ಚೆಲ್ಲಿದವು ॥೪೪॥

ಮುರಿದು ನುಂಗಿದವು ಶಾಕಿನಿ ಡಾಕಿನಿಯರು
ಹೆಣಗಳ ಹೊತ್ತು ನಲಿದಾಡಿ
ಸೆಣಸುವ ಮಲೆವ ಮಾನ್ಯರ ಗಂಡನೆಂದು
ರಣದೊಳು ಭೂತ ಹೊಗಳಿದವು ॥೪೫॥

ಇರಿದ ಘಾಯಕೆ ಬಿದ್ದ ಕೊರೆಹೆಣಗಳ ಕಣ್ಣ
ಬಿರಿ ನೆರೆ ಬಿಟ್ಟು ಬಾಯಿಗಳ
ತೆರೆದು ಮೊರೆಯಿಟ್ಟು ಬೀಳೆ ರಾಯನ ದಂಡು
ಒರಲಿತು ಮುರಿದು ಮುಂಗೆಟ್ಟು[೧೩] ॥೪೬॥

ಹಾಕಿದರು ಹರಿಗೆ ಬಿಲ್ಲು ಸಬಳವ
ನೂಕು ಠಾಕಿಲಿಯೆ. . . . .
. . . ಯೆದೆ ಬಂದೆವೊ ಬೂದಿಹಾಳಿಗೆ ವಿಧಿಯೆಂದು
ಭೂಕಿಸುತೊಡನೆ ಬೆನ್ನಿತ್ತು ॥೪೭॥

ಮುರಿದು ಬರಲು ಕ . . . . ರಸಿಂಹರಾಯ ತನ್ನ
ಸರ್ವದಳವು ವಾಡವು ಸಹಿತ
ಉರಿಬಿ ಸಿರುಮನವರ ಊರ ಬಾಗಿಲಿಗೆ
ನುರುಬಿ . . . . .ನಿಲಿಸಿದರು ॥೪೮॥

---

೧೩ 'ಶಿ' ಪ್ರತಿಯಲ್ಲಿ ಇಲ್ಲಿಂದ ಮುಂದೆ ನಾಲ್ಕು ಗರಿಗಳು (೬೯, ೭೦, ೭೧, ೭೨) ಕಳೆದುಹೋಗಿವೆ. ಹೀಗಾಗಿ ಹಾಕಿದರು "ಹರಿಗೆ. . . ." ಪದ್ಯದಿಂದ "ಒಟ್ಟು ಗಂಟಿನ" ಪದ್ಯ ಒಳಗೊಂಡ ಭಾಗವನ್ನು 'ಹ' ಪ್ರತಿಯಿಂದ ಸ್ವೀಕರಿಸಲಾಗಿದೆ (ಸಂ).

ಹುಲಿಯ ಮುಖವನು ಹೊಗಗೊಡದೆ ತಿರುಗಿದರು
ಚಲದಂಕ ಕುಮಾರನಾಯಕರು
ಎಲಲೊ ತೊಲಗುಯೆಂದೊಬ್ಬೊಬ್ಬನ
ಬಲು ಬಿರಿದ ಸೆಳೆಕೊಳ್ಳೆನುತ ॥೪೯॥

ಹೊಕ್ಕಿರಿದೊಕ್ಕಲಿಕ್ಕುತ ಲೆಕ್ಕವಿಲ್ಲದೆ
ಸಿಕ್ಕಿಸಿ ಹಿಡಿಯಾಳ ಹಿಡಿದು
ಸೊ. . . . . . .ರಾಯನ ಬಿರಿದಿನ
ರೆಕ್ಕೆಯ ಸೆಳೆಕೊಳ್ಳೆನುತ ॥೫೦॥

ಗಂಡಭೇರುಂಡ ಕರಿಸಿಂಹದ ಗುಟ್ಟು
. . . . .ಳಯ ಬಂದಂತೆ
ಹಿಂಡು ಬಿರಿದು ರೆಕ್ಕೆಯ ಸಹಿತ ಕೊಮಾರಮಲ್ಲ
ಲೆಂಡ ಸಿರುಮಗೊಪ್ಪಿಸಿದ ॥೫೧॥

ಮುದ್ದು ಮಲ್ಲಣ . . . . . . ನಗುತ ಸಿರುಮ ತನ್ನ
ಕಂದ ಮಲ್ಲಣ ಬಾಯೆಂದು
ಸಂದಿತ್ತು ಪಂಥವೆಂದುಡುಗೊರೆ ವೀಳ್ಯ
ಗಂಧ ಪರಿಮಳವಿಕ್ಕು. . . . . ॥೫೨॥

ಮಿಗೆ ವೈರಿಯ ಬಾಯೊಲು ಮಾಡಿಸಿ ತಾ
ನುಗುಳುವ ಪಡುಗವ ತೆಗೆಸಿ
ಜಗ ಬಿರಿದಿನ ರಕ್ಕೆಯದ ತುಡಿಗೆ ಕಟ್ಟಿ
ನೆಗಹಿಸಿದನು ಸಿ. . . . . ॥೫೩॥

ಥಾಳಿಪ ಸನ್ನೆಯದೊಳು ಮೃತಾ ಸರ್ವ
ಸೂಳೈಸಲು ಊರು ಸುತ್ತ
ಕಾಳೆಯ ಹಿಡಿಸಲು ಮೇರಲು ಕಂಡರು
ಸಾಳುವ . . . . ॥೫೪॥

ಲಕ್ಷ ಪಾಯದಳ ಬೂದಿಹಾಳ ಕೋಟೆಯ
ದಿಕ್ಕು ದಿಕ್ಕನೆ ಹಂಚಿಕೊಂಡು

ಸೊಕ್ಕಿದ ಗೊಲ್ಲ ಸಿರುಮ ನಮ್ಮ ಠಕ್ಕೆವ
ಸಿಕ್ಕದೆ ಕೊಡಬೇಗಲಾಗ . . . . ॥೫೫॥

[ಅಡ]ರಿ ಕೊತ್ತಳ ಕೋಟೆ ತೆನೆಗಳ ಸಂದಿಲಿ
ತುಡುಕಿ ಚೂಣೆಯಲಿ ಮುಂದಲೆಯ
ಪಿಡಿದಿರಿದಾಡು . . . . . . .ಕೊಡು ನೆಳ್ಜರ ಕವ
ಕಡೆ . . . . .ಲು ॥೫೬॥

ಉರಿಕೊಂಡ ಕರ್ಪುರವ ಉಡುಗಿ ಕಟ್ಟಿದರುಂಟೆ
ಕಲಿ ಕಾಲಿಡವರೆ ಬಿಡುವುದೆದೆ
ನರಸಿಂಹರಾಯನ ಬಿರಿದಿನ *[ಠಕ್ಕೆವ]*
ಸಿರುಮನ . . . . .ಕ್ಕೆ ಬರುವವೆ ॥೫೭॥

ಎಂದ ನುಡಿಗೆ ಭುಗಿಲೆಂದು ರಾಯನ ದಳ
ಇಂದು ಹಿಡಿದು ಗೊಲ್ಲ ಸಿರುಮನ
ಹಿಂದು . . . . . . ದಕೆ ಕುರುಹುಗಳ ಮಾಡುವೆನೆಂದು
ಒಂದಾಗಿ ಲೆಗ್ಗೆ ಮಾಡಿದರು ॥೫೮॥

ಅಗ್ಗಳೆಯ ಮನ್ನೆಯರು ನರಸಿಂಹರಾಯಗೆ
. . . . ಧನವಾಡಿ
ಒಗ್ಗಲಿ ಹೊರಕೋಟೆ ಹುಲಿಮುಖಗಳ ಹೊತ್ತ
ನುಗ್ಗದೆ ಕಡಿದಾಡಿದರು ॥೫೯॥

. . . . ನಿಲೆಂದು ಹೊರಕರಿಬೆಯಲು
ಸಿರುಮನ ಕಪೂರ ನಾಯಕರು
ಥರಥರದಲ್ಲಿ ಒಳಕೋಟೆ ಕೊತ್ತಳಗಳ
ಸರಿಮಾಡಿ ಹಂಚಿಕೊಂ.. . . . . ॥೬೦॥

ಒತ್ತಿ ನರಸಿಂಹನವರೊಳಕೋಟೆಯ
ಹತ್ತಲು ಸಿರುಮಣ್ಣನವರು

– ಕೆರೆವ (ಹ).

ಬತ್ತೀಸಾಯುಧದಲ್ಲಿ ಇರಿದಗಳಿಗೆ ಹಾಕಿ
ಎತ್ತುಗಳಿ. . . . . .ದರು ॥೬೧॥

ಮಂಡಿಸಿ ತಲೆವಿಲ್ಲುಗೊಂಡಾಗ ಕೋಟೆಯ
ದಂಡೆಗೆ ಸೇರಿಕೊಂಡಿರಲು
ಭಂಡಿಯ ಗಾಲಿಯ ನೂಂಕಿ ತೆಲುಗರ
ದಂಡನಿಳಿಯೆ ಕೆಡಹಿದರು ॥೬೨॥

ಮೈಜೋಡ ತೊಟ್ಟು ಮಾರಾಂತು ಕೊತ್ತಳಗಳ
ಹುಯ್ಯಲಿಡುತ ಹತ್ತುತಿರಲು
ಕೈದುಗಾರರು ಬೀಸುದೊಲೆಯ ಬಿಡಲು ಮೇಲೆ
ಹೊಡೆದಪ್ಪಳಿಸಿ ಬಿದ್ದರೆಲ್ಲ ॥೬೩॥

ಕುದಿವೆಣ್ಣೆ ಸುಣ್ಣ ಮಳಲ ಕಾಸಿ ಹೊಯ್ದೆಲ್ಲ
ಬಿದ್ದುರಿಯಲು . . . . .ಕೈ ಕಳೆಯ
ಹೆದರಿ ಕಂಗೆಟ್ಟು ಕಣ್ಮುಚ್ಚಿ ಮುಂಗಾಣದೆ
ಬೆದರಿ ಬಿದ್ದಿಹರಗಳೊಳಗೆ ॥೬೪॥

ಕೊರಡು ಖಂಡಿಸಿದುರಿದಾ . . . . . . ರಿಸುವ ಶ್ರೋಣಿತ
ಹೊರ ಸುತ್ತಿನಗಳೊಳು ತುಂಬಿ
ತೆರಹಿಲ್ಲದುರುವ ಧೂಮದಿ ಬಿದ್ದ ಕೊರೆವೆಣ
ಒರಲು . . . . ಳಿಗೇಳುತ್ತಿರಲು ॥೬೫॥

ಅಗಳೊಳು ಹೊರಗೆ ಹೆಣನ ಹಡಿಕೆಗಳಿಂದ
ಹೊಗಬಾರದು ಹಗಲಿರುಳ
ಜಗಳ ಇಂದಿಗೆ ಸಾ. . . . . .ರಾಯ
ದುಗುಡದಿ ಪಾಳಯಕೆ ಬಂದ ॥೬೬॥

ಕೋಳು ಹೋಯಿದು ಗೆಡು ಕೋಟೆ ಆಳೆಷ್ಟು ಸತ್ತಿತು
ಹೇಳು ಈಶ್ವರಿನಾಯಕ. . . . .
ಭಾಳಲಿಪಿಯ ತೊಡೆದ ಬ್ರಹ್ಮನುಕ್ಕುಡದಿಹದಿ
ಏಳು ಸಾವಿರ ಸತ್ತಿತೆಂದ ॥೬೭॥

ವಿಪರೀತ ಕಾಳಗ ಇಳೆಯೊಳಾಯಿತು.. . . . . .
ತಪನೋಡಿ ಆಕಾಶದಿಂದ
ಉಪಮಿಸಿಂದಿಗೆ ಬಾಳ್ದಲೆಯ ಕಾಯುವೆನೆಂ
ದಪರಾಂಬುಧಿಯ ಸೇರಿದನು ॥೬೮॥

ಆ . . . . ಥವ ನೋಡಿ ಮೆಲ್ಲಡಿಗೂಡಿ
ಮುಗಿದವಂಬುಜಮುಖ ಬಾಡಿ
ಮಿಗೆ ಸಂಜೆಗೆಂಪನು ಸೂಡಿಯಾ ಮಿಹನೆನುದೆ
. . . . . ಮೂ ಒಡದಳು ತಮ್ಮತ್ತಗೂಡಿ ॥೬೯॥

ಇಳೆಗೆ ಆಕಾಶದಿ ನೆಳಲ ಕತ್ತಲೆಯೊಳು
ತಳಿತ ನಕ್ಷತ್ರ ಮಧ್ಯದಲಿ
ಹೊಳೆವ ಚಂದ್ರನ ಕಿರಣವು ನರಸಿಂಹನ
ಬಳದ ಮಂದಿಯ ನೋಡುವಂತೆ ॥೭೦॥

ಹಿಡಿದ ಪಂಜುಗಳೆಡೆಯಾಡೆ ಪಾಳೆಯದೊಳಾ
ಸುಡಿ. . . . . .ವ ಹೆಣ ಲೆಕ್ಕವಿಲ್ಲ
ಮಿಡು ಮಿಡುಕಲು ಗಾಯವ ಕಾಸಿ ಕಟ್ಟುವ
. . . . ॥೭೧॥

ಸಾಳುವ ನರಸಿಂಹರಾಯನ ಪಾಳ್ಯದ
ಗೋಳ ನೋಡಿ. . . ದ ಸಿರುಮ
ಆಳವೇರಿಯ ಹತ್ತಿ ಕಾಳೆಯ ಹಿಡಿಸಿದ
ಕಾಳಗ ಕದನಪ್ರಚಂಡ ॥೭೨॥

ಅರಿರಾಯದಲ್ಲಣ ಪರರಾಯ ಮ. . . . .
ಧೀರ ಶರಭಶಾರ್ದೂಲ
ಸಿರುಮಭೂವರಗಿಳೆಯೊಳು ಸಮನಿಲ್ಲವೆಂದು
ಒರಲಿತು ಕಾಳೆ ಮೂದಲಿಸಿ ॥೭೩॥

ಕಾಳೆ. . . . . .ಕೇಳುತ ನರಸಿಂಹನ
ಪಾಳೆಯ ಬೇಳುವೆಗೊಂಡು

ಏಳಲಮ್ಮದೆ ಮಲಗಿರೆ ಕಂಡು ಸಿರುಮೇಂದ್ರ
ಆಳೋಚಿಸಿದ ಬ. . . . . . . .ನು ॥೭೪॥

ಕರೆಸಿದ ತನ್ನ ಪ್ರಧಾನ ಕಲ್ಲರಸಗೆ
ಪರಿಮಳ ವೀಳ್ಯವ ಕೊಡಿಸಿ
ಬರಹೇಳು ಹಳೆಯ ಪೈಕವನೆಂದಾ . . . . .ರಲು
ಉರವಣಿಸಿತು ಕಲಿ ಭಟರು ॥೭೫॥

ಬಂದನು ನಡೆಗೋಟೆಯ ಮಲ್ಲ ತೋಡೆಯ ಸಂಗ
ಬಂದನು ಸಿಡಿಲ ಮರಿಯಾ
ಬಂದನು ಹೆಗ್ಗೇರ ಭದ್ರ ಉಗ್ರದ ರುದ್ರ
ಬಂದ ಮಾಸಾಳ ಹಮ್ಮೀರ ॥೭೬॥

ಬಂದನು ಕಾಲಭೈರವ ಜುಂಜ ಧುರಧೀರ
ಬಂದನು ಚೊಕ್ಕನ ಬುಳಿಗ
ಬಂದನು ರೂಢಿಯ ಹರಿಗೆಯ ಕಲಿವೀರ
ಬಂದನು ಬಿರಿದಿನ ದಂಡ ॥೭೭॥

ಬಂದನು ತುಳುವರ ಪೆಮ್ಮ ಕೆಂಡದ ಬೊಮ್ಮ
ಬಂದನು ಕೆಂಡ . . . . .ತಿಮ್ಮ
ಬಂದನು ಹಗಲು ಕಗ್ಗೊಲೆಯ ಮಾದಿಗ ಜಂಪ
ಬಂದರು ವೀರಾದಿ ಭಟರು ॥೭೮॥

ರಣಬೋಥೆ ಏಕೆ ಬಲಿಂ. . . . . . .ಸುಭಟರು
ಬಣಗು ಭೂತದ ಕೈಸೆಳೆದು
ನೆಣನ ಹಿರಿದು ಹಿರಿತಿಂಬ ನಲಿವ ಬಲು
ರಣವಕ್ಕಿಯಂತೊದಗಿದರು ॥೭೯॥

. . . . . . .ಟ್ಟರೊದಗಳು ಕಂಡು ಸಿರುಮೇಂದ್ರ
ಉಬ್ಬಿ ನಲಿದು ಹರುಷದಲಿ
ಹೆಬ್ಬುಲಿಗಳ ಜಂಗುಳಿಯಂತೆ ಮುಸುಕಿತ್ತು
ಉ. . . . . . . ಯ ಭಟರು ॥೮೦॥

ಕಡುಗಲಿ ಭಟರು ಕಗ್ಗೊಲೆಗೆ ಹೋಗುವರೆಲ್ಲ
ಹಿಡಿ ಕರ್ಪುರ ವೀಳೆಯವಾ
ನಡೆಗೋಟೆಯ ಮಲ್ಲ ಬಂ. . . . . .ಡಿಯಲಾಗ
ತಡೆದನು ತುಳುವರ ಪೆಮ್ಮ ॥೮೧॥

ತುಳುವನ ಗುಂಡಿಗೆಯನು ಬಲ್ಲೆ ಹೊಯ್ಯಲಿ
ಗಳುಕುವಾ. . . . . ದು ನೆರೆ ಜಂಪಾ
ಹೊಳಕೆಯ ಮಾಸಾಳು ಬಂದು ನಡೆದನಾಗ
ಸೆಳೆಗತ್ತಿ ಮಾದಿಗ ಜಂಪ ॥೮೨॥

ಕಗ್ಗೊಲೆಯೊಳು ಮಾರಿಯ. . . . ಣುವೆಯಲಂದು
ಮುಗ್ಗಿ ಬೀಳಲು ನಾನಿವನ
ಸ್ವರ್ಗ ಪರಿಯಲೆತ್ತಿ ತಂದೆ ಸಿರುಮಯೆಂದು
ನುಗ್ಗು ನುರಿಯ ತಮ್ಮ ನುಡಿದ ॥೮೩॥

. . . . . ಡೆಯನ ಮುಂದೆ ಪಂಥವನಾಡಿ ಹುಯ್ಯಲ
ಕಡೆಯ ನೋಡದೆ ಬರಿಮಾತ
ನುಡಿವರ ಗಂಡ ನಾನೆನುತ ಚೊಕ್ಕನ ಬುಳ್ಳ
ನಡೆದು ಬೇಡಿದ ವೀಳೆಯವ ॥೮೪॥

ಬಟ್ಟು ಗಂಟಿನ ವೀಳೆಯವನಾಂತು ಬೇಡುವ
ಕಿರುಕುಳ ಬಂಟರ ಗಂಡ
ಬರಸಿಡಿಲಿನ ಭದ್ರ ಬಂದು . . . . . . ನಾಗ
ಜರೆದುಬ್ಬಿ ನಡೆದನೋಲಗದಿ ॥೮೫॥

ಗಬ್ಬಿನ ಪಂಥವೇತಕೆ ನಿನಗೆಯೆಂದು
ಹೆಬ್ಬುಲಿ ಕೆಂಡದ ಬಸವ
ಇಬ್ಬರ ಹೊಣಕೆಯ ಬರಸು ನರಸಿಂಗನ
ಸಬ್ಬ ದಳಕೆ ಸಿರುಮೇಂದ್ರ ॥೮೬॥

ಆನೆ ಕುದುರೆ ಸೇನೆಯ ಕಡಿದೊಟ್ಟುವೆ
ನಾನಿಂದಿನಿರುಳು ಕಗ್ಗೊಲೆಯ

ಜೇನಕಲ್ಲ ಬೈಚಣ್ಣ ನುಡಿಯೆ ಕಂಡು
ಮೀನಿಗ ಲಕ್ಕಯ್ಯ ತಡದ ॥೮೭॥

ತೊರೆಯನೀಸುವ ಹರುಗೋಲಪ್ಪ ತೆರನಂತೆ
ಸರ್ವ ದಂಡಿನ ಬುದ್ಧಿಯನು
ಹೊರವಂತು ಬಾಳುವ ದಿನವುಂಟು ನಮಗಿನ್ನು
ಮೆರೆವೆನು ವೀರಗಾಳಗವ ॥೮೮॥

ಅರೆಬಿರಿದಿನ ಚೋಹದ ನಡೆಗೋಟೆಯ
ಮೆರೆವ ಗುಬ್ಬಿಯ ಜಗಝಂಪ
ತರುಗಿದ ಝಲ್ಲಿ ಎಳವ ಸರಪಣಿಗಳ
ಹರಿಗೆಯಕಾರರ ಕರೆಸಿ ॥೮೯॥

ತನ್ನ ಪ್ರಾಣಕೆ ಸರಿಮಿಗಿಲೆಂಬ ಭಟರಿಗೆ
ಮನ್ನಿಸಿ ಸಮ ವೀಳ್ಯವಿತ್ತು
ಭಿನ್ನವಿಲ್ಲದೆ ಕಗ್ಗೊಲೆಗೆ ಕಳುಹಿದ
ಚೆನ್ನಿಗ ಸಿರುಮಭೂವ[ರ]ನು ॥೯೦॥

ಕಡುಗಲಿ ಸಿರುಮಗೆರಗಿ ಬಂಟರು ಮುಂದೆ
ನಡೆದರೊಗ್ಗಾಗಿ ಸುಭಟರು
ಉಡಿದಾರಗಳ ಕಿತ್ತು ಕಡಿದಲೆಗಳ ಹೊತ್ತು
ಆಡಿವ [೧೪]ಕಾರ್ಗತ್ತಲೆಯೊಳಗೆ[೧೪] ॥೯೧॥

ಕಾರ ಮಿಂಚಿನ ಬಳಗದವೊಲು ಸುಭಟರು
ಸೇರಿ ರಾಯನ ಪಾಳೆಯವ
ದಾರೆ ಕಿಗ್ಗಟ್ಟಿ ಸುರಗಿಗಳ ಕಿತ್ತೆತ್ತಿ
ಧೀರರು ನಡೆದರೊಗ್ಗಿನಲಿ ॥೯೨॥

ಮಹರಾತ್ರಿಯಲಿ ಬೂದಿಹಾಳಿನ ಸಿರುಮನ
ಸಾಹಸದ ಎಕ್ಕಟಿಗರು

೧೪-೧೪ ಖಡ್ಗವು ತಲೆಯೊಳು (ಶಿ).

ಕಾಹು ಮಾಡದೆ ಊರ ಹೊರಡಿಸಿ ದಂಡನು
ನುಗ್ಗುನುರಿಯ ಮಾಡೆಂದ ||೯೩||

ಅಗ್ಗಳೆ ಸಿರುಮನ ವೀರಾಧಿವೀರರು
ಉಗ್ರದಿಂದಲಿ ಹೊರಟರು
ಸ್ವರ್ಗದ ಬಾಗಿಲ ಕಿತ್ತೆತ್ತಿ ಹೊಕ್ಕಂತೆ
ಕಗ್ಗೊಲೆಯಲಿ ರಾಯನವರ ||೯೪||

ಸಿಡಿಲ ರವಸದಂತೆ ತಮ್ಮೊಳು ತಾವಾಡಿಸಿ
ದೊಡನೆರಗುವ ತೆರನಂತೆ
ಗುಡಿ ಗಜ ತುರಗ ಕಾಲಾಳು ಪವುಜನೆಲ್ಲ
ಕಡಿದೊಟ್ಟಿದರು ಬೇಸರದೆ[೧೫] ||೯೫||

ಏಳಲೀಸದೆ ಬೀಳಲಿರಿದು ಮಲಗಿದರ
ತೋಳ್ತೊಡೆ ನಡು ಹರಿಯ ಹೊಯ್ದು
ಸೀಳೆ ಹೊಟ್ಟೆಯ ಕರುಳ್ಗಳ ಚೆಲ್ಲಿ ತೆಲುಗರ
ಪಾಳ್ಯವ ಧುಮ್ಮೇಳಲಿರಿದು[೧೫] ||೯೬||

ಕರಿಗಳ*[ಹಿಂಡ ಒತ್ತರಿಸಿ]*ಕೋಪದಿ ಕೇ
ಸರಿಯೊಳು ಸೆಣಸುವಂದದಲಿ
ಸಿರುಮನ ಭಟರು ಮೂದಲಿಸಿರಿದಾಡಿತು
ನರಸಿಂಹನ ಭಟರೊಡನೆ ||೯೭||

ಮುಂದಲೆಗಳ ಪಿಡಿದಿರಿದಾಡಿತು ತಮ್ಮ
ಕಂದುವೆಗಳ ಬಲಿಬಲಿದು
ಮುಂದುವರಿಯಗೊಡದವರ ತರುಬಿದರು
ಚಂದದಿ ರಾಯನ ಭಟರು ||೯೮||

ಉರುಬಿ ಹೊಕ್ಕರು ಕಲಿ ಮಾಸಾಳು ಪಂಥದಿ
ಕುರಿವಿಂಡ ತೋಳ ಹೊಕ್ಕಂತೆ

---

೧೫ ಈ ಪದ್ಯಗಳು 'ಹ' ಪ್ರತಿಯಲ್ಲಿ ಹಿಂದುಮುಂದಾಗಿವೆ (ಸಂ). *_* ಹಿಂಡುವ ತರಿಸಿ (ಶಿ, ಹ).

ಕರುಳ ಹಿರಿದು ಖಂಡಗಳ ತೆಗೆದೀಡಾಡಿ
ಮರುಳ ತಂಡವ ತಣಿಸಿದರು ॥೯೯॥

ಒಬ್ಬರೊಬ್ಬೆರಸಿ ಒಬ್ಬರು ಚೀರಿ ಮೊರೆಯಿಟ್ಟು
ಬೊಬ್ಬುಳಿಗೊಂಡು ತೆಲುಗರು
ತಬ್ಬಿಕೊಂಡರು ಗಿಡ ಮರಗಳ ಹೊಕ್ಕು
ಸಬ್ಬ ದಂಡೆಲ್ಲ ಬೆದರಿತು ॥೧೦೦॥

ತಲೆಗಳ ಕೆದರಿ ಓಡಿತು ದಿಕ್ಕು ದಿಕ್ಕಿಗೆ
ನೆಲ ಬಾಯಿದೆರೆಯೆಂದೆನುತ
ಉಲಿವ ಬೊಬ್ಬೆಯ ರಭಸವ ಕೇಳಿ ನರಸಿಂಗ
ಛಲದಂಕ ಹೊರಟು ಬಂದವನು ॥೧೦೧॥

ಗೊಲ್ಲನ ಹುಯ್ಯಲೆಂಬುದ ಕೇಳಿ ನರಸಿಂಗ
ತಲ್ಲಣಿಸಿದ ಮನದೊಳಗೆ
ಬಲ್ಲಿದ ಎಕ್ಕಟಿಗರಂ ಕರೆಸಿದನಾಗ
ನಿಲ್ಲದೆ ಡೇರೇದ ಬಳಿಗೆ ॥೧೦೨॥

ಹಳೆಯ ಪೈಕ ಕರಿ ತುರಗ ಕಾಲಾಳೆಲ್ಲ
ತಳಿಯ ಬರಿಸಿ ನರಸಿಂಹನ
ಹೊಳಕೆಯ ಭಟರು ಹೊಕ್ಕಿರಿದರೊಡನೆ ಮುಂದೆ
ಅಳುಕದೆ ನೆರೆ ಬೊಬ್ಬಿಡುತ ॥೧೦೩॥

ಹಿಡಿದು ಮುಂದಲೆಗಳ ಝಡಿದು ಕೆಡಹಿ ಮೆಟ್ಟಿ
ಉಡಿಯ ಸುರಗಿಯನೆ ಹುದುಗಿ
ಮಡಿಗೊರಳಿಕ್ಕಿ ಮಂಡಿಸಿ ತಲೆಗಳನೆತ್ತಿ
ಹೊಡೆದರಂಬರ ಸಿಡಿಲಂತೆ ॥೧೦೪॥

ಗುಂಡಿಗೆಗಳ ನೆಗ್ಗಲೊತ್ತಿ ಬದಿಹಲಿಹ
ದೊಂಡೆಗರುಳ ತೆಗೆತೆಗೆದು
ಕಂಡ ಕಡೆಗೆ ಚೆಲ್ಲವರಿದು ಪಾಳೆಯದೊಳು
ಚೆಂಡಾಡಿ ಕಡಿದಾಡುತಿರಲು ॥೧೦೫॥

ಮೇಲರಿಯದೆ ಮಲಗಿದರೆದ್ದು ಕುದುರೆಯ
ಬಾಲಕೆ ಕಡಿವಾಣವಿಕ್ಕಿ
ಮೇಲು ಕೆಳಗು ಮಾಡಿ ಹಲ್ಲಣಗಳ ಹಾಕಿ
ಕೋಲ ಹಿಡಿದು ನೇಜೆಯೆನುತ ॥೧೦೬॥

ಹಿಂದುಮು[ಂದಾಗಿ] ಏರಿದರು ಕುದರೆಗಳ
[೧೬]ತಂಡವೆನುತ[೧೬] ಬಾಲ ಪಿಡಿದು
ಮುಂದಕೆ ಹೊಡೆಯಲು ಹಿಂದಕೆ ನಡೆಯಲು
ಅಂದಗೆಟ್ಟರು ರಾಹುತರು ॥೧೦೭॥

ಬತ್ತಲೆ ಓಡಾಡಿದರು ಪಾಳೆಯದೊಳು
ನೆತ್ತರು ಜಾರಿ ಬಿದ್ದವರು
ಒತ್ತಿ ಒದರಿ ಒಲ್ಲೆ ಒಲ್ಲೆವೆನುತ ಮಂದಿ
ಮತ್ತೆ ಬಿಟ್ಟರು ಪ್ರಾಣಗಳ ॥೧೦೮॥

ಪಾಳೆಯದೊಳು ದುಮಾನಗಳನೆ ಸುಟ್ಟು
ಗೋಳುಗುಟ್ಟಿತು ಕಡಿದಾಡಿ
ಆಳು ತಿರುಗಿ ಬೂದಿಹಾಳ ಹೊಗಲು ಮುಂದೆ
ಕಾಳೆಗಳೆತ್ತಿ ಸಾರಿದವು ॥೧೦೯॥

ಇರಿದು ತರಿದು ಕಿವಿ ಮೂಗು ಕೈಕಾ[ಲ್ಗ]ಳ
ಕೊರೆದು ಕೊರಳ ಅರೆಗಡಿದು
ಉರುಳಿಸಿ ಕರಿ ತುರುಗವ ಸಿರುಮೇಂದ್ರನ
ಧುರಗಲಿ ಭಟರಿತ್ತ ಮಗುಳೆ ॥೧೧೦॥

ತೂಕ ತೂಕದ ಬಂಟರುಗಳು ಕೋಳಿಂದ
ನೂಕು ತಾಕಿಲಿ ಸಿರುಮಣಗೆ
ಬೇಕಾದ ಝುಲ್ಲಿ ಪಟ್ಟೆಯ ಸುನಾಣ್ಯವ
ಏಕಾಂಗಿ ವೀರರೊಪ್ಪಿಸಲು ॥೧೧೧॥

೧೬–೧೬ ಕಂದವೆಂದು (ಹ).

ಕಗ್ಗೊಲೆಯಲಿ ತಂದ ತುರಗ ಬಂಗಾರವ
ಉಗ್ಗದ ಸುಭಟರೊಪ್ಪಿಸಲು
ಅಗ್ಗಳೆಯವರ ಮನ್ನಿಸಿ ಉಡುಗೊರೆಯಿತ್ತು
ಹಿಗ್ಗಿದ ಸಿರುಮಭೂವರನು ॥೧೧೨॥

ಗಂಧ ಕಸ್ತೂರಿ ಕದಂಬ ಕುಂಕುಮವ
ತಂದು ಕೊಡಿಸಿದ [ಕ]ಲಿಗಳಿಗೆ
ಚಂದದಿ ಸಿರುಮ ತನ್ನರಮನೆಯನು ಹೊಗೆ
ಹಿಂದೆ ಹೊರಗೆ ಪಾಳೆಯದಿ ॥೧೧೩॥

ಕಲಕಿತು ನರಸಿಂಹನಾಳು ತಮ್ಮೊಳು ಮುಂ
ದಲೆಗಳ ಹಿಡಿದಿರಿದಾಡಿ
ಅಲಗಾಯುಧವ ಹುಡುಕಿ ನೋಡಿ ಕಾಣದೆ
ಹಲವು ಕಡೆಗೆ ಅಡ್ಡವಾಯ್ದು ॥೧೧೪॥

ಗೋಳು ಉಬ್ಬಸವಾಗಿ ಹೆದರಿ ಓಡಿದರೆ
ಹೇಳಿ ಸಿರುಮಣ್ಣನ ಹೆಸರ
ಆಳು ತಿರುಗಿ ಬೂದಿಹಾಳ ಹೋಗಲು ಮುಂದೆ
ಪಾಳೆಯದೊಳು ನರಸಿಂಹ ॥೧೧೫॥

ಸಿರುಮಣ್ಣನಿಹ ಬೂದಿಹಾಳ[ಕೋ]ಟೆಯ ಮೇಲೆ
ಹರಿವ ಪಂಜುಗಳು ತೆನೆತೆನೆಗೆ
ಇರುಳು ಹಗಲಾದ ಪರಿಯ ಸಮರಣೆಯನು
ನರಸಿಂಹ ನೋಡಿ ಬೆರಗಾದ ॥೧೧೬॥

[೧೭]ಚಂಚಲಿಸಲು ನರ[೧೭]ಸಿಂಹ ಕತ್ತಲೆಗೆ ವಿ
ರಂಚಿಯ ತಂದೆಯಾಜ್ಞೆಯಲಿ
ಮುಂಚೆ ಹುಯ್ಯಲು ಮಾಡಿ ತಾಮ್ರಚೂಡನು ಕೂಗೆ
ಇಂಚರಧ್ವನಿ ಕಳವಳದಿ ॥೧೧೭॥

೧೭-೧೭ X(ಶಿ)

[೧೮]ಮೂಡಲಾದ್ರಿಯ[೧೮] ರವಿ ಏರಲು ತಮ ಹರಿ
ದೋಡೆ ಭೇರಿಗಳು ಸೂಳೈಸಿ
ರೂಢಿಗೆ ಬೆಳಗಾಗೆ ಸಿರುಮ ನರಸಿಂಹನ
ಕೂಡೆ ಕಾದಲು ನಾಲ್ಕು ಸಂಧಿ[೧೯] ॥೧೧೮॥

❖❖

೧೮-೧೮ X(ಶಿ), ೧೯+ಅಂತು ಸಂಧಿ ೪ಕ್ಕೆ ಪದನು ೨೩೮ಕ್ಕಂ ಮಂಗಳ ಮಹಾಶ್ರೀ (ಶಿ), + ಅಂತು ಸಂಧಿ ೪ಕಂ ಪದನು ೫೬೯ಕಂ ಮಂಗಳ ಮಹಾಶ್ರೀ (ಹ).

ಸಂಧಿ : ಐದು

[೧]ಸಿಡಿಲ ತವರಮನೆಯಂತೆ ಬೂದಿಯಹಾಳ
ಸಡಗರವೆಂಟು ದಿಕ್ಕಿನಲಿ
ತಡೆಯದೆ ಸಿರುಮ ಡೆಂಕಣಿಗಳ ಹೂಡಿಸಿ
ಇಡಿಸಿದ ಹೊರ ಪಾಳೆಯಕೆ ॥೧॥

ಇರುಳು ಹಗಲು ಕಡಿತಂದ ತಲೆಗಳನು
ಸಿರುಮ ಚಿನ್ಮುಕ ಡೆಂಕಣಿಯಲಿ
ಮರಳಿ ಪಾಳೆಯಕಿಡಿಸಲು [ನರ]ಸಿಂಹ
ಕರ ಸೋಜಿಗಬಡುತಿರ್ದ ॥೨॥

ಹಿಂಡು ಸಿಡಿಲ ಸೆರೆಬಿಟ್ಟಂತೆ ಡೆಂಕಣಿ
ಗುಂಡು ಎರಗಿ ಬಿದ್ದ ಭರಕೆ
ದಂಡೆಲ್ಲ ಗಡಬಡಿಸಿತು ಇತ್ತೆರದಲಿ
ದಿಂಡುಗೆಡೆದು ಉರುಳಿದರು[೨] ॥೩॥

ಕಲ್ಲ ಮಳೆ ಕರೆದಂತೆ ಬೂದಿಯಹಾಳ
ಗೊಲ್ಲ ಸಿರುಮನುಪಮಿಯಲಿ
ನಿಲ್ಲಬಾರದು ಪಾಳೆಯ ನರಸಿಂಗನು
ಅಲ್ಲಿ ಹಿಂದಕೆ ತೆಗಸಿ[ದನು][೨] ॥೪॥

೧+ ಶ್ರೀ ಗುರು ವಿರೂಪಾಕ್ಷಲಿಂಗಾಯ ನಮಃ ಪದನು (ಶಿ), + ಶ್ರೀ ಶಾರದಾಗುರುಭ್ಯೋ ನಮಃ । ರಾಗ ವರಾಳಿ (ಹ),
೨. ಈ ಪದ್ಯಗಳು 'ಹ' ಪ್ರತಿಯಲ್ಲಿ ಹಿಂದು ಮುಂದಾಗಿವೆ (ಸಂ).

ಜೋಗಿ ವೇಷವ ತಾಳಿ ಹೋಗಬೇಕೆನುತಲಿ
ಆಗ ಮಲ್ಲಣ್ಣನಾಡಿದನು
ಈಗ ಕತ್ತಿಗೆ ಔತಣವಿಲ್ಲೆನುತಲಿ
ಆಗ ಯೋಚನೆಯು ಮಾಡಿದನು[೩] ॥೫॥

---

೩. 'ಹ' ಪ್ರತಿಯಲ್ಲಿ ಈ ಪದ್ಯವಿಲ್ಲ. ಇದರ ಬಳಿಕ 'ಶಿ' ಪ್ರತಿಯಲ್ಲಿ

XXXಚಾರ್ಯದಿ ನರಸಿಂಹ
ಹದಿನಾರು ತೆರದಿ ಜಾಣ್ಮೆಯಲಿ
ಇದಿರು ಡೆಂಕಣಿಗಳ ಹೂಡಿಸಿ ಬೂದಿಹಾಳ
ಕದವ ಮುರಿಯಲಿಡಿಸಿದನು ॥೬॥

ಎಂಬ ಪದ್ಯವಿದೆ. 'ಹ' ಪ್ರತಿಯಲ್ಲಿ ಇದಕ್ಕೆ ಪ್ರತಿಯಾಗಿ ಕೆಳಗಿನ ಪದ್ಯವಿದೆ.

XXತೂರ್‍ಯಗದ ಕ್ರಮದಲಿ ನಿಲಿಸದವಲ್ಲಿ
ಹದಿನಾರು ಬಗೆ ನರಸಿಂಹ
ಇದಿರು ಡೆಂಕಣಿಗಳ ಹೂಡಿಸಿ ಬೂದಿಹಾಳ
ಕದವ ಮುರಿಯಲಿಡಿಸಿದನು ॥೫॥

ಕಥೆಯ ಏಕಮುಖತೆಗೆ ಅಡ್ಡಿಯೆನಿಸುವುದರಿಂದ ಈ ಪದ್ಯಗಳನ್ನು ಅಡಿಯಲ್ಲಿ ಇಟ್ಟುಕೊಂಡಿದ್ದೇವೆ. (ಸಂ). ಈ ಬಳಿಕ 'ಹ' ಪ್ರತಿಯಲ್ಲಿ ಕೆಳಗಿನ ಪದ್ಯಗಳಿವೆ. ಕಥೆಯ ಏಕಮುಖತೆಗೆ ಅಡ್ಡಿಮಾಡುವುದರಿಂದ ಇವುಗಳನ್ನು ಅಡಿಯಲ್ಲಿ ಕೊಟ್ಟಿದ್ದೇವೆ.

ಊರ ಸುತ್ತಲು ಸೆರೆವಿನಲಿಡುವ ಸೂತ್ರ
ಹಾರಿತೆನುತ ನರಸಿಂಹ
ಭೂರಿ ಸೇತುವೆ ನಡೆ ಚಪ್ಪರಗಳನಿಕ್ಕಿ
ಕಾರುಣಿಕ xxxಕೋಟೆಯೆಂದ ॥೬॥

ಸಾಲು ಸೇತುವೆಗಟ್ಟಿ ಬರಲು ಸಿರುಮ ನೋಡಿ
ಮೇಲ ಸೇತುವೆಯನ್ನೊಡ್ಡಿಸಿದ
ಆಳು ಕುದುರೆ ಅಸಮಾನ ಮಾಡಿದ ಗೊಲ್ಲ
ಕಾಳಗ ಕೆಂಡ ನರಸಿಂಹ ॥೭॥

ತನ್ನೊತ್ತಿಲಿಹ ಬಲು ಬಿರುದು ಬಾವುಲಿಗಳ
xxಬೊಂಬೆಯು ಹರಿಗೆಯವರು
ಸನ್ನೆಗಾಳೆಗಕ ಸಾಳುವ ನರಸಿಂಹ ಬಿಟ್ಟು
ತನ್ನವೆ ಹಳಚದೆ ನೋಡಿ ॥೮॥

ಆಕಾಶ xದೂ ಬಂದಂತೆ
ಭೂಕಲಿ ಸಿರುಮನ ಭಟರು
ತಾಕ ಹೊಯಿದರೆ ಒಡಲ ಹರಿಯೆ ರಕ್ತವೊನಲಿ
ಕಾಕಿನಿಯರು ಯೀಂಟುತಿರು ॥೯॥

XXಬರದಲ್ಲಿ ಕಂಬ ಸೂತ್ರದ
ಬೊಂಬೆ ಕಡಿದಾಡಿ ಮಡಿದಂತೆ →

ಇತ್ತ ಜೋಗಿ ವೇಷವ ತಾಳಬೇಕೆಂದು
ಅರ್ತಿಯಿಂದಲಿ ಕರೆಸಿದನು
. . . .
. . . . ೪ ॥೬॥

ಬಂದು ಜೋಗಿಯರಾಗಿ ನಿಂದು ಮಾತನಾಡಿಯೆ
ಒಂದೊಂದು ಪರಿ ಮುದ್ದುನುಡಿಯ
ತಂದುಕೊಟ್ಟರು ದೇಶಿಕಟ್ಟು ಬಾಯಿಕಟ್ಟುಗಳ
ತಂದು ಕುಮಾರಮಲ್ಲನಿಗೆ ॥೭॥

ಕಾಳಿಂಗ ಗೋದಿವಣ್ಣಿಗೆ ಶಂಖಪಾಳನು
ಏಳೆಂಟು ಬಗೆಯ ಪಾವುಗಳ
ಬಾಳವಾಗಿಯೆ ಪೆಟ್ಟಿಗೆ ತುಂಬಿ ಮಲ್ಲಣ್ಣ
ಹೇಳಿ ಬೆಲಗೂರ ಭೈರಯಗೆ ॥೮॥

ಹೂವಿನ ಪೆಟ್ಟಿಗೆ ಕಾವುಡಿಯನು ಮಾಡಿ
ಮಾವ ಬೆಲಗೂರ ಭೈರವಗೆ
ಈ ವಿಧದಿ ಅಳಿಯ ತಿಪ್ಪಯ್ಯಗೆ ಬೇಗದಿ
ಕಾವುಡಿಗಳ ಮಾಡಿದರು ॥೯॥

→ ನಂಬಿದ ನರಸಿಂಹರಾಯನವರನೆಲ್ಲ
ನಿಂಬಿಲ್ಲದೆ ಉರುಳಿದರು ॥೧೦॥

ಕಡುಗಲಿ ಸಿರುಮನ ನಡೆಚಪ್ಪರವನು
ಕೆಡಹಿ ಕೆಡಹಿ ಕಾದುತಿರಲಿ
ನಡನಡಗುತ ನರಸಿಂಹನು ಅವನು
ನುಡಿಯಲಮ್ಮದೆ ಸುಮ್ಮನಿರಲು ॥೧೧॥

ಮೂಗಿಗೆ ಬೆರಳಿಟ್ಟು ತಲೆದೂಗಿ ನರಸಿಂಹ
ಯೋಗಿಗಳಂತೆ ಧ್ಯಾನಿಸಿದ
ಆ Xಚಿಸಿ ನೆಲನ ಗನ್ನದ ಊರೊಳಯಿಕೆ
ಬೇಗ ಕೊರಸ ಹೇಳಿದನು ॥೧೨॥

'ಹ' ಪ್ರತಿಯಲ್ಲಿ ಈ ಪದ್ಯ ಮುಗಿಯುತ್ತಲೇ 'ಆ ಮಾತು ಹೊರಡಲಾಕ್ಷಣದ . . .॥೧೩॥' ಎಂಬ ಪದ್ಯ ಪ್ರಾರಂಭವಾಗುತ್ತದೆ. (ಸಂ).

೪ "ಶಿ" ಪ್ರತಿಯಲ್ಲಿ ಪದ್ಯದ ಉತ್ತರಾರ್ಧ ಲಿಪಿಕಾರನ ವಿಸ್ಮೃತಿಯಿಂದ ಬಿಟ್ಟು ಹೋಗಿದೆ (ಸಂ).

ಕಟ್ವಾಳು ಮಲ್ಲಣ್ಣ ಕಿನ್ನರಿಯ ನು[ಡಿ]ಸಲು
ಜಟ್ಟಿಗ ತಮ್ಮ ಸೋಮಣ್ಣ
ಪೆಟ್ಟಿಗೆಯನು ಹೊತ್ತು ಅಳಿಯ ತಿಪ್ಪಯ್ಯನು
ದಿಟ್ಟ ಬೆಲಗೂರ ಭೈರವನು ॥೧೦॥

ನಾಗಸರವು ಬೆಲಗೂರ ಭೈರವಗೆ
ಆಗ ಜೋಗೇರ ಸಿಂಗಿನಾದ
ಬೇಗದಿ ಹೊರವಂಟು ಸಿರುಮನಿದ್ದೆಡೆಗಾಗ
ಸಾಗಿ ಬಂದರು ಹರುಷದಲಿ ॥೧೧॥

ಸುಲಿಪಲ್ಲು ಮುಖಭಸ್ಮ ಕಿರಿಜಡೆಯಿಂದಲಿ
ಉಲಿವ ಸಿಂಗಿನಾದಗಳು
ಗೆಲುವಿಂದ ಬಂದರು ಸಿ[ರು]ಮನಿದ್ದೆಡೆಗಾಗ
ಒಲಿದು ಜೋಗೇರ ತೆರದಿಂದ ॥೧೨॥

ಎಲ್ಲಿಂದ ಬಂದಿರೊ ಜೋಗೇರ ನೀವೆಂದು
ಗೊಲ್ಲ ಸಿರುಮ ಕೇಳಿದನು
ಬಲ್ಲಿದ ನಿಮ್ಮ ಕುಮಾರ ಮಲ್ಲನು ಎಂದು
ಅಲ್ಲಿ ಹೇಳಿದರು ಬೇಗದಲಿ ॥೧೩॥

ಸಂತೋಷವಾಗಿ ಸಿರುಮಭೂವರನಾಗ
ಚಿಂತೆಯಿಲ್ಲದೆ ಮನದೊಳಗೆ
ಕಂತುರೂಪನು ಕುಮಾರ ಮಲ್ಲಣ್ಣಗೆ
ಅಂತು ವೀಳ್ಯವ ಕೊಡಿಸಿದನು ॥೧೪॥

ನರಸಿಂಹ ಕಾದದೆ ಸುಮ್ಮನಿಹನೆ ಎಂದು
ಧುರಧೀರ ಸಿರುಮಭೂವರನು
ಧರೆಯೊಳು ಚೋದ್ಯವ ನೋಡುವೆನೆಂದಾಗ
ಗರುವ ಕೊಮಾರ ಮಲ್ಲ ನುಡಿದ ॥೧೫॥

ಒಂದೊಂದು ಪರಿಯ ವೇಷವ ತಾಳಿ ನರಸಿಂಹನ
ಅಂದವನು ಕೆಡಿಸುವೆನು

ಮುಂದುಗೆಡಿಸುವೆನೆಂದು ಕುಮಾರ ಮಲ್ಲ
ತಂದೆಯ [ಕಾಲ್ಗೆರಗಿದನು] ॥೧೬॥

ತಂದೆಯ ಕೈಯ್ಯ ಕಳುಹಿಸಿಕೊಂಡಾಗ
ಬಂದನು ತನ್ನರಮನೆಗೆ
ಒಂದೊಂದು ಪರಿ ಜೋಗಿ ವೇಷವ ತಾಳಿದ
ಅಂದವನಾರು ಬಣ್ಣಿಪರು ॥೧೭॥

ಬತ್ತಿ[ಸಾ]ಯುಧವನು ಆಡಕವ ಮಾಡಿನ್ನು
ಮತ್ತೆ ಹೊರಟನರಮನೆಯ
ಅರ್ತಿ ವಿಲಾಸವ ನೋಡುವೆನೆಂದು ರವಿರಾಜ
ಇತ್ತ ರಥವನೇರಿದನು ॥೧೮॥

ಬಂದರು ಸಂಜೆಗತ್ತಲೆಯೊಳು ಪಾಳ್ಯಕೆ
ನಿಂದರು ನರಸಿಂಹನೆಡೆಯ
ಇಂದುಧರನು ನಿಮ್ಮ ರಕ್ಷಿಸುವನೆಂದು
ತಂದುಕೊಟ್ಟರು ವಿಭೂತಿಯನು ॥೧೯॥

ಆದಿಭೈರವ ನಿಮ್ಮ ರಕ್ಷಿಸಬೇಕೆಂದು
ಮೇದಿನಿಪತಿಯ ಹರಸಿದರು
ಮೂದೇವರ ಕರುಣದಿ ಜೋಗೇರು ಬಂದು
ಓದಿ ಆಳಾಪ ಮಾಡಿದರು ॥೨೦॥

ಸೀಗ್ರ ಕಾಂಬೋಧಿ ಶಂಕರಾಭರಣವ
ಭೋರೆಂಬ ಕಿನ್ನರಿಯೊಳಗೆ
ಧುರಧೀರ ಕುಳಿತು ನುಡಿಸಲಾಗಿ ನರಸಿಂ
ಹರಾಯ ತಾ ತಲೆದೂಗಿದನು ॥೨೧॥

ನಾಗಸರವ ಬೆಲಗೂರ ಭೈರವನು
ಜೋಗಿಯರಂತೆ ನುಡಿಸುತ
ಬೇಗ ಸಂತೋಷವ ಮಾಡೆ ನರಸಿಂಹರಾಯ
ಕೇಳಿದನಾಗ ಸುದ್ದಿಯನು ॥೨೨॥

ಮಂದಿ ಕುದುರೆ ಬೂದಿಹಾಳೊಳಗೆಷ್ಟುಂಟು
ಎಂದನು ಗೊಲ್ಲ ಸಿರುಮಗೆ
ಚೆಂದದಿ [೫][ಮುನ್ನೂರು][೫] ಕುದುರೆ ಮೂರು ಸಾವಿರಾಳು
ಎಂದು ಬಿನ್ನಹವ ಮಾಡಿದರು ॥೨೩॥

ಎಂದ ಮಾತನು ಕೇಳಿ ನರಸಿಂಹರಾಯನು
ಅಂದು ನಿಶ್ಚಯವ ಮಾಡಿದನು
ನಿಂದು ಕುದುರೆಯ ಲಾಯದೊಳಗೆ ತಾ ನಿಂತು
ಚಂದದಿಂದಲಿ ಕೊಡಿಸಿದನು ॥೨೪॥

ಇತ್ತಲಿ [ನ]ರಸಿಂಹ ಈಶ್ವರಿನಾಯಕ
ಮತ್ತೆ ಜೋಗೆರಿಗೆ ಬುತ್ತಿಗಳ
ಚಿತ್ತಜರೂಪನು ತರಿಸಿಕೊಡುವೆನೆಂದು
ಅರ್ತಿಯಿಂದಲಿ ಕೇಳಿದನು ॥೨೫॥

. . . . . .ನ ತಪ್ಪಿಸಿ ಒಂದನೊಲ್ಲೆನು
ಮಿಕ್ಕುದನೊಲ್ಲೆವೆಂದೆನುತ
ಸಕ್ಕರೆ ಹಾಲು ಹಣ್ಣನು ತರಿಸಿದಾರಾಗ
ಅಕ್ಕಿ ತುಪ್ಪವ ಕೊಡಿಸಿದರು ॥೨೬॥

ಪಾಯಸ ಬೋನ ಊಟವ ಮಾಡಿದರು ತಮ್ಮ
ಆಯಮಾನವ ನೋಡಿದರು
ಖೋಯೆಂದು ಕುದುರೆಯ ಲಾಯಗಳನು ಹೊಕ್ಕು
ರಾಯನೇರುವ ತೇಜಿ ಇರಿದು ॥೨೭॥

ಗಲಭೆದ್ದು ತಮ್ಮೊಳು ತಾವಿರಿದಾಡಿತು
ಹೊಲಬನರಿಯದೆ ತೆಲುಗರು
ಹಲವು ಪರಿಯ ಹಾವು ಕಚ್ಚಿ ಸತ್ತಿತು
ಕಲಿ ನರಸಿಂಹಗುಸುರಿದರು ॥೨೮॥

೫-೫ ಮೂವತ್ತು (ಶಿ, ಹ).

ಮಧ್ಯರಾತ್ರೆಯೊಳು ಗಲಭೆದ್ದು ನರಸಿಂಹನು
ಎದ್ದು ಬಂದನು ನಿಮುಷದಲಿ
ಹೊದ್ದಿರ್ದ ಈಶ್ವರನಾಯಕ ಕೇಳಿದ
ಕದ್ದು ಕಡಿದ ಮಲ್ಲಣ್ಣ ॥೨೯॥

ಜೋಗಿಯರೆಂದು ಬಂದರು ಕೇಳು ನರಸಿಂಹ
ಆಗ ಕುಮಾರ ಮಲ್ಲಣ್ಣ
ಸಾಗಿ ಕಡಿದು ಹೋದರು ಬೂದಿಹಾಳಿಗೆ
ಬೇಗ ಹೇಳಿದ ನರಸಿಂಹಗೆ ॥೩೦॥

ಎಂದ ಮಾತನು ಕೇಳಿ ನರಸಿಂಗರಾಯಗೆ
ಅಂಧಕಾರವು ಪರಿದಂತೆ
ಚಂದ್ರನು ಪಶ್ಚಿಮಕಿಳಿಯಲಾಗಲು ರವಿ
ಬಂದಡರಿದ ಪೂರ್ವಕ್ಕೆ ॥೩೧॥

ಜೋಗಿಗಳಂದದಿ ಕಡಿದರೆಂಬುದ ಕೇಳಿ
ಯೋಗಿಗಳಂತೆ ಧ್ಯಾನಿಸುತ
ಬೇಗದಿ ನೆಲಗನ್ನವ ಊರೊಳಯಕೆ
ಆಗ ಕೊರಸ ಹೇಳಿದನು ॥೩೨॥

ಆ ಮಾತು ಹೊರಡಲಾಕ್ಷಣ ಈಶ್ವರಿನಾಯಕ
ಕಾಮಾಟದವರನು ಕರಸಿ
ತಾಮಸವಿಲ್ಲದೆ ಹಾರೆ ಗುದ್ದಲಿ ಕೊಟ್ಟು
ಭೂಮಿಯಡಿಯ ತೋಡಿಸಿದ ॥೩೩॥

ಸರಿಸವ ಮಾಡಿ ಬೂದಿಹಾಳೊಳಯಕೆ
ಕೊರಕೊಂಡು ಬಹ ಕನ್ನವನು
ಸಿರುಮ ತಾ ಕೇಳಿ ಇದಿರುಗನ್ನಗಳನು
ಕರ ವೇಗ ತೆಗಸುತ್ತೈದಿದನು ॥೩೪॥

ಹೆಗ್ಗಣಗಳ ಬಂಧಿಸಿದಂತೆ ಸಿರುಮನ
ಉಗ್ರದ ಕಾಮಾಟದವರು

ನುಗ್ಗಿಸಿದರು ಹೊಗೆಗಳನಿಕ್ಕಿ ತೆಲುಗರ
ನುಗ್ಗೇಳ ಪಟಿಪಟಿಲಿರಿದು ॥೩೫॥

ಕನ್ನವ ನರಸಿಂಗ ಕೊರಸಿ ಕಾಮಾಟದ
ಮುನ್ನೂರಾಳನೆ ಕೊಂದುಕೊಂಡ
ಇನ್ನು ಕೆಣಕದಿರಿ ಗೊಲ್ಲ ಸಿರುಮನನೆಂದು
ಚಿನ್ನಗಾಳೆಗಳು ಸಾರಿದವು ॥೩೬॥

ನರಸಿಂಹ ಮೂರುರಾಯರ ಗಂಡನೆಂದೆಂಬ
ಬಿರಿದಿನ ಕಾಲ ಪೆಂಡೆಯವ
ತರಿಸಿನ್ನು ಗೊಲ್ಲ ಸಿರುಮಗೆ ಕೊಟ್ಟು ತಾ
ತಿರುಗುವೆನೆಂದೆಣಿಸಿದನು ॥೩೭॥

ಹೃದಯದೆಣಿಕೆಯನರಿದು ನರಸಿಂಹನ
ಚದುರ ಪ್ರಧಾನ ಈಶ್ವರನು
ಕದುಬಲೀಸದೆ ಮೂರು ದಿನ ತಾಳಬೇಕೆಂದು
ಮುದದಿ ಬಿನ್ನೈಸಿ ಕೈಮುಗಿದ ॥೩೮॥

ಅಂತರಂಗವನರಿತನು ಎಂದು ತನ್ನಯ
ಚಿಂತೆಯ ಬಿಟ್ಟ ನರಸಿಂಹ
ಸಂತೋಷದುಡುಗೊರೆಯಿತ್ತು ಈಶ್ವರ ನೀ
ನೆಂತಿರ ಹೇಳಿದಂತಿಹೆನು ॥೩೯॥

ಇನ್ನು ಸಿರುಮನ ನಂಬಿ ನಚ್ಚಿದ ಬಂಟರ
ಸನ್ಮಾನದಲಿ ಕರೆಸುವೆನು
ಬಿನ್ನಹ ಮಾಡಿ ಹೆಳಹಿ ತಂದು ನರಸಿಂಹ
ನಿನ್ನ ಪಾದವ ಕಾಣಿಸುವೆನು ॥೪೦॥

ಎಂದು ಬೂದಿಯಹಾಳ ಕೋಟೆಯ ಹೊರಗಲ್ಲಿ
ನಿಂದು ಈಶ್ವರಿನಾಯಕನು
ಇಂದು ಸಾರಿದೆ ಸಿರುಮನ ಬಿಟ್ಟು ಬೇಗದಿ
ಬಂದವರನು ಪಾಲಿಸುವೆನು ॥೪೧॥

ಕಡುಕು ಕಂಠಮಾಲೆ ಕೊಡುವೆ ಬೇಡಿದ ನಾಡ
ಕೊಡುವೆನು ನರಸಿಂಹನಾಣೆ
ಕೆಡಬೇಡ ಸಿರುಮನ ಬಿಟ್ಟು ಬನ್ನಿರೊ ಎಂದು
ನುಡಿದ ಈಶ್ವರಿನಾಯಕನು ॥೪೨॥

ಆಸೆಯ ಮಾತನಾಡಲು ಕೇಳಿ ಸಿರುಮನ
ಲೇಸಿನ ಬಂಟ ಗುಜ್ಜಲೋಬ
ಮೋಸದಿ ನೂರಾಳು ಸಹಿತಲಿಳಿದು ಬಂದು
ಈಶ್ವರನಾಯ್ಕನ ಕಂಡ ॥೪೩॥

ತಡೆಯದೆ ನರಸಿಂಹನೆಡೆಗೈದಿ ಗುಜ್ಜಲೋಬ
ಒಡನಡ್ಡಬಿದ್ದು ಕೈಮುಗಿದ
ಕಡಗ ಕಂಠಮಾಲೆಯುಡುಗೊರೆ ವೀಳ್ಯವ
ತಡೆಯದಲಿತ್ತು ಮನ್ನಿಸಿದ ॥೪೪॥

ಹೇಳೆಲೊ ಗುಜ್ಜಲೋಬ ಬೂದಿಹಾಳ ಸಿರುಮನ
ಆಳು ಕುದುರೆ ಬಲುಮೆಯನು
ಕೇಳು ದೇವರ ದೇವ ಎಕ್ಕಟಿಗನಾಯಕರೆಲ್ಲ
ನಾಳೆ ಡಿಳ್ಳಿಸಿ ಬಹರೆಂದ ॥೪೫॥

ಎಂದ ಮಾತಿಗೆ ನರಸಿಂಹರಾಯನ ಮನ
ದಂದ ಕಾರ್ಯವು ಪರಿದಂತೆ
ಬಂದು ಗುಜ್ಜಲೋಬ ಸಮರಸ ದೊರೆಗಳು
ಮುಂದೆ ನಿಲ್ಲಿಸಿ ಕೋಟೆಯೊಳಗೆ ॥೪೬॥

ಕಂಗೆಟ್ಟು ಬೆಲಗೂರ ಭೈರವ ತಾನಿಳಿಯಬಿದ್ದ
ಸಂಗಡದಾಳು ಸಹಿತಲಿ
ಅಂಗ ಹೆದರಿ ಆನೆಪನಾಯಕ ಬೂದಿಹಾಳ
ಭಂಗ ಬಡದೆ ಹೊರವಂಟ ॥೪೭॥

ಆನೆಪ್ಪನಾಯಕ ಬೆಲಗೂರ ಭೈರನು
ಪ್ರಾಣಕೆ ಸಾರಿ ಸಿರುಮನ

ಏನೆಂದೆಣಿಸದೆ ರಾಯನ ಪಾದಕೆ
ಕಾಣಿಕೆಯಿಕ್ಕಿ ಕಂಡವರು ॥೪೮॥

ಹೆಚ್ಚಿದ ನರಸಿಂಗರಾಯನುಡುಗೊರೆಯನು
ಪಚ್ಚದ ಕಡಗ ಪದಕವನು
ನಿಶ್ಚೈಸಿ ಕೊಡಲಿತ್ತ ಸುದ್ದಿಯ ಕೇಳಿದ
ಆಶ್ಚರ್ಯದಿ ಸಿರುಮೇಂದ್ರ ॥೪೯॥

ಹಿತವನು ಬೆಲಗೂರ ಭೈರ [೬][ಆನೆಪ][೬]ನಾಯಕ
ಗತಿಗೆಟ್ಟು ಹೋದ ಸುದ್ದಿಯನು
ಸತಿಕುಲರನ್ನೆ ಚಿಕ್ಕರಸಿಗೆ ಹೇಳಿದ
ಶತಪತ್ರಸಖ ಸಿರುಮೇಂದ್ರ ॥೫೦॥

ಚಿಕ್ಕಾಯಿ ನಿನ್ನ ತಮ್ಮ ಕಕ್ಕುಲತೆಯ ಮಾಡಿ
ಅಕ್ಕಟ ಪಾಪಿ ಕೆಡಿಸಿದನು
ಇಕ್ಕಿದ ಕಿಚ್ಚ ಇರುವೆಯ ಗೂಡಿಗೆ ಎಂದು
ವಿಕ್ರಮ ಸಿರುಮನಾಡಿದನು ॥೫೧॥

ನನ್ನೊಡಹುಟ್ಟಿದ ಬೆಲಗೂರ ಭೈರನು
ತನ್ನ ಪ್ರಾಣಕೆ ಆಶೆಮಾಡಿ
ಮುನ್ನಲಿ ಕೊಲೆ ಹಗೆ ನರಸಿಂಹನ ಕಂಡ
ಇನ್ನು ನಿಶ್ಚೈಸೆಲೊ ಸಿರಮ ॥೫೨॥

ಎಂದಿದ್ದರೆ ಸಾವು ತಪ್ಪದು ಸಿರುಮೇಂದ್ರ
ಇಂದಪಕೀರ್ತಿಯ ಮಾಡಿ
ಹಂದೆತನದಿ ಬೆಲಗೂರ ಭೈರಯ್ಯನು ನಮ್ಮ
ಕೊಂದು ಹೋದನು ಸ್ವಾಮಿದ್ರೋಹಿ ॥೫೩॥

ಹೋದವರೆಲ್ಲ ಹೋಗಲಿ ಈ ಊರೊಳು
ಕಾದಿ ಸಾಯಲು ಬೇಕು ಸಿರುಮ

೬-೬ ಅಶ್ವಿ (ಶಿ, ಹ).

ಬೋಧಿಸಿದಳು ಗಂಡಗೆ ಚಿಕ್ಕರಸಿಯು
ಮೇದಿನಿಯೊಳು ಕೀರ್ತಿವನಿತೆ ॥೫೪॥

ಹೆಂಡತಿಯ ಮಾತ ಕೇಳುತ ಸಿರುಮೇಂದ್ರ
ಮಂಡೆಯ ವೀರ ಜಡೆಹೆಣಿಸಿ
ಮಂಡಲದೊಳು ದಿವ್ಯಪರಿಮಳವನು ನೆರೆ
ಗಂಡು ಅಂಗಕೆ ಲೇಪಿಸಿದ ॥೫೫॥

ಜಗ ಬಿರಿದಿನ ಜನರೊಳು ಶೃಂಗಾರಕೆ
ಮಿಗೆ ಬಿರಿದಾಂಕ ಬಿಂಕದಲಿ
ಪಗಲೊಡೆಯನ ಬಗೆಬಗೆಯಂದದೊಳಾಗ
ನಗೆಮುಖ ಸಿರುಮ ಶೌರ್ಯದಲಿ[೭] ॥೫೬॥

ಚಿನ್ನಗಾವಿಯನುಟ್ಟು ಹರುಷದಿ ಸಿರುಮೇಂದ್ರ
ರನ್ನ ಗೊಂಡೇವ ಇಳಿಬಿಟ್ಟ
ಚೆನ್ನಗೊಂಡೆಯ ದಾರ ಮುತ್ತಿನ ಸರಗಳ
ಚೆನ್ನಿಗ ಸಿರುಮ ಕಟ್ಟಿದನು ॥೫೭॥

ಉತ್ತಮ ನಾಯಕ ಸಿರುಮನಾಯತವಾಗಿ
ಚಿತ್ತದೊಲ್ಲಭೆಯು ಚಿಕ್ಕಮ್ಮ
ಇತ್ತಂಡ ನಿಂದು ನಿಲುವುಗನ್ನಡಿಯನು
ಅರ್ತಿಯಿಂದಲಿ ನೋಡಿದರು ॥೫೮॥

ರಮಣಿ ರಮಣರ ರೂಪು ದರ್ಪಣದೊಳಿದಿರಿಟ್ಟು
ಸಮಗಾಣಿಸಲು ಸಾಹ[ಸ]ದಿ
ದ್ಯುಮಣಿ ವಿಕ್ರಮ ಜಯ ಜಯ ಎಂದು ಸಿರುಮನು
ಕ್ರಮದಿ ಕೈದುವ ಝಳಪಿಸಿದ ॥೫೯॥

ಬಂದು ಕುಲದೈವ ಸೌರಾಷ್ಟ್ರಸೋಮೇಶಂಗೆ
ವಂದಿಸಿ ಕಾಣಿಕೆಯಿಕ್ಕಿ
ತಂದೆ ತಾಯಾಗಿ ಮುನ್ನಲಿ ಸಲಹಿದೆ ಸ್ವಾಮಿ
ಇಂದು ಮುಕ್ತಿಯನೈದಿಸೆಂದ ॥೬೦॥

---

೭ 'ಹ' ಪ್ರತಿಯಲ್ಲಿ ೫೬, ೫೭ನೆಯ ಪದ್ಯಗಳು ಹಿಂದುಮುಂದಾಗಿವೆ (ಸಂ).

ಅಂಗನೆ ಸಹಿತ ಸಿರುಮ ಸೋಮೇಶಗೆ
ಹಿಂಗದೆರಗಿ ಬೇಡಿಕೊಂಡ
ಜಂಗುಳಿ ದೈವದ ಗಂಡ ವೀರೇಶ್ವರ
ಲಿಂಗನ ಆಲಯಕೆ ಬಂದ ॥೬೧॥

ಹಿಡಿಹೊನ್ನ ಕಾಣಿಕೆಯಿಕ್ಕಿ ವೀರೇಶಗೆ
ಹಿಡಿವ ಕಠಾರಿಯೊಪ್ಪಿಸಿದ
ಉಡಿಸಿದ ನಡುವಿಗೆ ಪಟ್ಟೆಯ ಕಾಸೆಯ
ಮೃಡಸುತ ವೀರಭದ್ರನಿಗೆ ॥೬೨॥

ಗಂಡ ಹೆಂಡಿರ ಮನ ಒಂದಾಗಿಯೆ ಬೇಡಿ
ಕೊಂಡರು ವೀರ[೮]ಸ್ವರ್ಗವನು[೮]
ಇಂಡೆ ಪ್ರಸಾದವ ಕೈಕೊಂಡು ಹೊರಟ ಪ್ರ
ಚಂಡ ಸಿರುಮ ಮನ್ನೆಯನು ॥೬೩॥

ಆಶೆಯಿಲ್ಲದ ನಿರಾಶೆಮಠಕೆ ಬಂದ
ಭಾಸುರ ಕೋಟಿಪ್ರಕಾಶ
ಈಶನ ಲಾಂಛನ ಮಹಾಂತಿನಂಘ್ರಿಗೆ
ಆ ಸಮಯದಲೆರಗಿದನು ॥೬೪॥

ಕಟ್ಟಾಣಿ ಮುತ್ತು ಮಾಣಿಕ ವಜ್ರ ನೀಲದ
ಕಟ್ಟಣಿಲ್ಲದೆ ಜಾಳಿಗೆಯ
ಪಟ್ಟೆಯ ಕಂಥೆ ಮಹಂತಿಗೆ ಶರಣೆಂದು
ಕೊಟ್ಟು ಕಾಣಿಗೆ ಸಿರುಮೇಂದ್ರ ॥೬೫॥

ಪರಮಪಾವನ ಪುಣ್ಯಪುರುಷ ವಿಭೂತಿಯ
ಚರಲಿಂಗ ವರ ಕರುಣದಲಿ
ಸಿರುಮನ ದುರಿತ ದುರಕ್ಷರ ತೊಡೆವೊಲು
ಹರಸಿ ಭಸಿತವ ಧರಿಸಿದರು ॥೬೬॥

೮–೮ ಶೈವವನು (ಹ).

ಕಂಡೆವು ಸಿರುಮೇಂದ್ರ ನಿನ್ನ ಕೈಯಲಿ ಪೂಜೆ
ಗೊಂಡೆವು ಕೆಲ ಕಾಲದಲಿ
ಕೊಂಡೊಯ್ವೆವು ಜಂಗಮವೇಷದಿ ನಿನ್ನ
ಮಂಡಲದೊಳು ಪೊಸತೆನಿಸಿ ॥೬೭॥

ಕೇಡುಬುದ್ಧಿಗಳನೆಣಸದಿರಿ ಹಾಸ್ಯವ
ಮಾಡುವರತಿ ಜಗದೊಳಗೆ
ಬೇಡ ನೀ ಕೇಳು ಜಂಗಮವೇಷದಿ ನಿನ್ನ
ಕೂಡಿಕೊಂಡೊಯ್ವೆವೇಳೆನಲು ॥೬೮॥

ಯಾನ ಮಾಡಲು ನರಸಿಂಹನೋಡಿಸಿ ನಮ್ಮ
ಮಾನಭಂಗಿತರ ಮಾಡಿ ಹಿಡಿವ
ನಾನಾ ಬಂಧನಗಳಲಿ ಕಟ್ಟಿ ಬಾಧಿಸಿ ಮದ
ದಾನೆಗಳಲಿ ಕೊಲಿಸುವನು ॥೬೯॥

ಹೀಗೆಂದು ಹೇಳೆ ಹಾಗಹುದೆಂದು ಮಹಂತು
ಭೋಗಿತ ಫಲ ತಪ್ಪದೆನುತ
ಹೋಗೆಂದು ಕಳುಹಲು ಸಿರುಮನು ಸತಿಸಹ
ವಾಗಿ ಬಂದರು ಅರಮನೆಗೆ ॥೭೦॥

ಬಂದು ಬಣ್ಣದ ಚಾವಡಿಯೊಳು ಸಿರುಮೇಂದ್ರ
ನಿಂದು ಸಂದೇಹವಿಲ್ಲದಿರಲು
ಹಿಂದು ಮುಂದೆಡಬಲದೊಳಿ[ದ್ದ]ವರನು
ಬಂಧುಜನರ ಮುಖ ನೋಡಿ ॥೭೧॥

ಅಣ್ಣನ ಮನದ ನಿಶ್ಚಯವರಿತು ಮ
ಲ್ಲಣ್ಣ ಕರವ ಮುಗಿದೊಡನೆ
ಹೆಣ್ಣು ಗಂಡೊಂದು ಕೋಟೆಯ ಕೆಡಿಸದೆ ಸಿರು-
ಮಣ್ಣ ಕಾಬೆನೊ ನರಸಿಂಹನ ॥೭೨॥

ನಮ್ಮ ಕೈಸೆರೆಯ ಕಪ್ಪವ ಕೊಟ್ಟು ಬದುಕಣ್ಣ
ಸುಮ್ಮನೆ ಸಾಯಲೇಕಣ್ಣ
ತಮ್ಮ ಮಲ್ಲಣ್ಣ ಹೀಗೆನಲು ಸಿರುಮ ಕೇಳಿ
ಕೆಮ್ಮೀಸೆ ಮುರಿದು ಕೋಪದಲಿ ॥೭೩॥

ಕಂಗೆಟ್ಟು ಹೆಂಬೇಡಿ ಕಾಣಹೇಳಿದ ನರ–
ಸಿಂಗನ ನಮ್ಮ ಮಲ್ಲಣ್ಣ
ಹೆಂಗೂಸು ಮುಖ ನೋಡಿವನೆಂದು ಕೋಪದಿ
ಭಂಗಿಸಿದನು ಸಿರುಮೇಂದ್ರ ॥೨೪॥

ಬದುಕಬಲ್ಲವರೆಲ್ಲ ಬಿಟ್ಟು ಹೋಗಿರೊ ನಮ್ಮ
ಮುದದಿಂದ ಪಣೆಯ ಅಕ್ಕರವ
ವಿಧಿ ಬರದನೊ ನರಸಿಂಹ ಬರದನೊಯೆಂದು
ಹೆದರಲೇಕೆಂದ ಸಿರುಮೇಂದ್ರ ॥೨೫॥

ಹಡಪದ ಹಲಗನು ಒಡಗೂಡಿ ಊಳಿಗದ
ಕಡುಗಲಿ ಭಟರೊಂದಾಗಿ
ಒಡೆಯ ಸಿರುಮ ಕೇಳೋ ಕ*[ಡೆಯೊ]*ಳು ಕಲ್ಪಿತ
ಪೊಡವಿಯೊಳಗೆ ಬಿಡುವದೆ ॥೨೬॥

ಎಷ್ಟು ದಿನವು ಬಾಳೆ ಕಾಯವಳಿದು ಕೀರ್ತಿ
ಸೃಷ್ಟಿಯೊಳಿಹುದು ಕೇಳಯ್ಯ
ಪಟ್ಟದ ಕುಮಾರ ಕಾಚಯ್ಯ ಸೋಮಣ್ಣ
ದಿಟ್ಟನು ಮಗ ಮಲ್ಲ ನುಡಿದ ॥೨೭॥

ಅಗ್ಗಳೆ ಅಳಿಯ ತಿಪ್ಪಣ ನಂಬಿನಾಯಕ
ಹೆಗ್ಗರೆ ನಾಗೊಂಡ ಸಹಿತ
ಉಗ್ರದ ಸಿರುಮ ನಿನ್ನೊಡನೆಲ್ಲರು ವೀರ
ಸ್ವರ್ಗ [೯]ವೈವೆವೆಂದಾರಾಗ[೯] ॥೨೮॥

ಮೆಚ್ಚಿದ ಮಾತಿಗೆ ನಿಶ್ಚಯ ಮನದಲ್ಲಿ
ಉತ್ಸಾಹದಿ ಸಿರುಮೇಂದ್ರ
ಪಚ್ಚೆ ಕಡಗ ಪದಕಗಳ ಕೊಡಿಸಿದ
ಹೆಚ್ಚಿನ ವೀರಭಟರಿಗೆ ॥೨೯॥

೯–೯ ವೆ ದೇವೇಂದ್ರ ರಮರು (ಶಿ, ಹ)

ಹೆಬ್ಬುಲಿ ಕರಿ ಸಿಂಹದ ಗಂಡಭೇರುಂಡ
ಅಬ್ಬರದಲಿ ಸಿರುಮೇಂದ್ರ
ಹಬ್ಬದ ಕುರಿ ನರಸಿಂಗನ ದಂಡನು
ಹೆಬ್ಬಾಗಿಲೊಳು ತರಿ ಎಂದ ॥೮೦॥

ಬರಸಿಡಿಲು ತರಿವಾಯುಧ ಹರಿಗೆಯ
ಮರೆಗೊಂಡು ನಡೆದು ಬಂದವರು
ಉರ್ವಿಗುನ್ನತ ಬೂದಿಹಾಳ ಬಾಗಿಲುಗಳ
ತೆರಸಿ ನಿಂದೆಲ್ಲ ಕಾದಿದರು ॥೮೧॥

ಇತ್ತಲಿ ಬೇಗ ಈಶ್ವರಿನಾಯಕನ ಕೂಡೆ
ಮಾತಾಡಿ ಬೆಲಗೂರ ಭೈರ
ಭೀತಿಲಿ ಸಾಷ್ಟಾಂಗವೆರಗಿದ ರಾಯಗೆ
ಅತ್ತ ಕೈಮುಗಿದು ಬಾಯೊಡನೆ ॥೮೨॥

ಎನ್ನ ಭಾವನ ಗೊಲ್ಲ ಸಿರುಮನ ಬಿಟ್ಟೀಗ
ನಿನ್ನ ಪಾದವೆ ಗತಿಯೆನುತ
ಭಿನ್ನವಿಲ್ಲದೆ ಕಂಡೆ ರಾಯ ನಿನಗೆ ನಾನು
ಕನ್ನಡಿಸುವೆ ಕಂಡ ಸ್ಥಿತಿಯ ॥೮೩॥

ಕೇಳಯ್ಯ ನರಸಿಂಹ ಬೂದಿಹಾಳ ಸಿರುಮನ
ಆಳು ಜಾಳಿಸಿಹೋಯಿತೆಲ್ಲ
ಕೋಳುಗೊಂಬುದಕಿದು ವ್ಯಾಳೆವೆನುತಲಿ
ಹೇಳಿದ ಬೆಲಗೂರ ಭೈರ ॥೮೪॥

ಎಂದ ಮಾತಿಗೆ ನರಸಿಂಹ ತನ್ನಯ ಮನ
ದಂದ ಕಾರ್ಯವು ಪರಿದಂತೆ
ತಂದು ಕಡುಕು ಕಂಠಮಾಲೆಯ ಕೊಡಿಸಿದ
ನಿಂದು ಸಂದೇಹವಿಲ್ಲದಿರಲು ॥೮೫॥

ಇರಲಿತ್ತ ಬೂದಿಹಾಳ ಹೊರವಳಯದಿ
ನರಸಿಂಹನಿರ್ದ ಪರಿಗಳನು

ಸಿರುಮ ಪರೀಕ್ಷಿಸಿ ನೋಡಲುನ್ನತವಾಗಿ
ಧರಣಿ ಮಂಡಲವ ತುಡುಕುತ ॥೮೬॥

ಉಪ್ಪರಿಗೆಯ ಹತ್ತೊ ತಮ್ಮ ಮಲ್ಲಣ್ಣ ನೀ
ಮುಪ್ಪುರದವರ ಪರಿಯಲ್ಲಿ
ಕಪ್ಪುಗೊರಳನ ಕೂಡೆ ಕಾದಿ ಮಡಿದರ
ಅಪ್ರತಿ ಮಾಡುವೆನೆಂದ ॥೮೭॥

ಪುರದೊಳು ಪ್ರಭು ಪಟ್ಟಣಶೆಟ್ಟಿ ಪ್ರಜೆಗಳ
ಸಿರುಮ ಕರೆಸಿ ಕೈಯ ಮುಗಿದ
ಗೆರೆಗೊರೆದೀ ಭೂಮಿ ಸಮವೆಂದು ತೋರಿದ
ಅರಮನೆಯೊಳು ನಿಶ್ಚೈಸಿ ॥೮೮॥

ಸಾವುದು ಸತ್ಯವು ಕಾವಲಾಯಿತು ಸುತ್ತ
ನೀವಿಲ್ಲಿ ತೆಗಸಿ ಕೊಂಡವನು
ಆ ವೇಳೆಯದಿ ಪಟ್ಟಸಾಲೆಯ ಬಿಚ್ಚಿಸಿ
ಬಾವನ್ನಗೊರಡನೊಟ್ಟಿಸಿದ ॥೮೯॥

ಇಂದ್ರಗೋಪವು ಸಕಲಾತಿ ಪಟ್ಟೆಯ ಝಲ್ಲಿ
ಚಂದ ಚಂದದ ನಸುನಾಣ್ಯ
ಕುಂದದೆ ಚೀನಿಚೀನಾಂಬರಗಳ ಬೇಗ
ತಂದು ತುಪ್ಪದಲದ್ದಿಸಿದ ॥೯೦॥

ಇಷ್ಟ[ದೈ]ವವು ಸೋಮೇಶನೆ ಜಯ ಎಂದು
ಮುಟ್ಟಿಸಿ ಜ್ಯೋತಿಯ ಬೆಳಗಿ
ಅಷ್ಟಮದದ ನರಸಿಂಹನ ಗಂಡನೆಂಬ
ದಿಟ್ಟ ಬಿರಿದ ಸಾರಿಸಿದ ॥೯೧॥

ಕೊಮಾರ ಮಲ್ಲಣ್ಣ ಬಂಟರ ಭಾವ ಸೋಮಯ್ಯ
ನಿಮುಷ[೧೧][ಕುದುರ][೧೧]ಇರಿಯೆಂದ

೧೧–೧೧ ಕುದುರೆ (ಶಿ, ಹ).

ಕ್ರಮ ಕ್ರಮದಕ್ಕಿ ಕಡಲೆ ನೆಲ್ಲಗಳನು
ಕಣಜವನೊಡೆದು ಸುಡಿಸಿದ ॥೯೨॥

ಛಿಗಿಲು ಭುಗಿಲು ಛಿಟಲುಛಿಟಲೆಂದಾಗ
ಹೊಗೆಯೇರಿ ನೆಗೆಯಲಂಬರಕೆ
ಪಗಲೊಡೆಯನ ಕಿರಣವ ಕಿಡಿ ತಾಗಲು
ಅಗಣಿತ ಜಗ ಮುಸುಕಿದವು ॥೯೩॥

ಕಂಡು ಬೆರಗಾಗಿ ನಾರದಮುನಿ ಸಿರುಮನ
ಮಂಡಲದೊಳು ಮಾಡುವರ್ಭುತವ
ಕೆಂಡಗಣ್ಣನಿಗರುಹುವೆನೀ ಸುದ್ದಿಯ
ಕೊಂಡಾಡಿ ಕೈಲಾಸದೊಳಗೆ ॥೯೪॥

ಹೊಕ್ಕನು ಅಜಗಣ ಸುರಗಣ ಕೆ[ಳ]ದಿಯ
ರಿಕ್ಕೆಲದೊಡ್ಡೋಲಗದಿ
ಮುಕ್ಕಣ್ಣನಿರಲು ವಂದಿಸಿ ನಾರದಮುನಿ
ದೊಕ್ಕನೆ ಬಿನ್ನೈಸಿದನು ॥೯೫॥

ಮೂರುಜಗದೊಡೆಯನೆ ನೀನರಿಯದೊಂದು
ತೋರುವೆನಿಂದು ಚೋದ್ಯವನು
ಮೀರಿದ ಮುನ್ನಿನ ವೀರರ್ಗೆ ಅಗಣಿತ
ಧೀರನು ಬೂದಿಹಾಳ ಸಿರುಮ ॥೯೬॥

ಮಾಡುವ ಮಾಟವ ನೋಡಬೇಕೆಂದು ಶಿವ
ಕೂಡೆ ನಂದೀಶನಡರಿದನು
ಮೂಡುವ ರವಿ ಶಶಿ ಗಂಗೆ ಸಹಿತವು
ಒಡ್ಡೈಸೆ ಹರಗಣ ಕುಲವು ॥೯೭॥

ಬಂದರು ದೇವದೇವೇಂದ್ರರು ಸಹವಾಗಿ
ನಿಂದರು ಖೇಚರದಲ್ಲಿ
ಬಂದೀ ಭೂಲೋಕದಿ ನೋಡೆ ಬೂದಿಹಾಳು
ಒಂದಿಲ್ಲ ಸಿರುಮನುನ್ನತವು ॥೯೮॥

ಕೆಂಡವಾಗುವ ಕಿಚ್ಚು ಕಂಡ[೧೧]ವರಿಗೆ ಮೆಚ್ಚು[೧೧]
[೧೨]ಹಿಂಡುರೂಪು ಸಿರಿವನಗಿಚ್ಚು[೧೨]
ಮಂಡಲದೊಳು ನರಸಿಂಹನೊಡನೆ ಕಾದಿ
ತಂದಿಟ್ಟ ಸಿರುಮ ಹೆಗ್ಗಿಚ್ಚ ॥೯೯॥

ಕಡೆಯ ಬಾಗಿಲಲಿ ಸಿರುಮನ ಬಂಟರು ಬರ
ಸಿಡಿಲ ರವದಿ ತರುಬಿದರು
ಕಿಡಿ ಕಿಡಿ ಬೀಳಲಿರಿದು ಖಣಿಖಟಿಲೆನೆ
ಕಡಿದು ಬಾಗಿಲ ಹೊಗಗೊಡದೆ ॥೧೦೦॥

ಹೊಗಲೀಸ ಅಳಿಯ ತಿಪ್ಪಯ್ಯ ಊರಬಾಗಿಲ
ನಗಣಿತ ನಿಂಬಣ್ಣನಾಯ್ಕ
ತಗರು ತಾಗಿ ಬಗೆ ಮಿಗೆ ತೆಲುಗರ ಕೂಡೆ
ಜಗಳವ ಕೊಡುತಿರಲಿತ್ತು ॥೧೦೧॥

ಹಣ ಹೊನ್ನ ಚೆಲ್ಲಿಸಿ ಸಿರುಮನೃಪ ರಣದೊಳು
ಕುಣಿದು ವಸಂತವಾಡಿದನು
ತ್ರಿಣೆಯನ ಮರುಳು ತಂಡವು ಉಂಡು ದಣಿವಂತೆ
ಎಣಿಸಿದನೊಂದು ಬುದ್ಧಿಯನು ॥೧೦೨॥

ಸಂಗ್ರಾಮದೊಳು ಖೋ ಎಂದುಬ್ಬಿ ಜೀವದ
ಹಂಗಿಲ್ಲದೆ ಕಾದುತಿರಲು
ಹಿಂಗದೆ ಸಿರುಮನ ಎಡಬಲದಲಿ ಸಹ
ಸಂಗಡ ಹದಿನಾಲ್ಕಾಳು ॥೧೦೩॥

ಕಟ್ಟಾಳುಗಳ ಮುಂದಿಟ್ಟನು ಜಗಳಕೆ
ಮುಟ್ಟಿ ಮೂದಲಿಪ ತೆಲುಗರ
ಕುಟ್ಟಿ ರಣವಟ್ಟೆಯೊಳು ತಲೆರಾಸಿಯ
ಒಟ್ಟೆಂದು ಸಿರುಮೇಂದ್ರ ಕಳುಹೆ ॥೧೦೪॥

---

೧೧ ವರಿವಕಿಚ್ಚು (ಹ), ೧೨-೧೨ ಗಂಡುರಿವೆಂಗಳ ಹೆಗ್ಗಿಚ್ಚು (ಹ).

ಧುರಗಲಿ ಸಿರುಮ ತನ್ನರಮನೆಯನು ಹೊಕ್ಕು
ಕರೆದು ಕೊಮಾರ ಮಲ್ಲ ಕೇಳೊ
ಇರಿಸದೆ ಹೆಮ್ಮಕ್ಕಳೆಲ್ಲರ ಕೊಂದು ನೀ
ಉರಿಗಾಹುತಿಯ ಮಾಡೆಂದ ॥೧೦೫॥

ಗಬ್ಬಿ ಕೊಮಾರ ಮಲ್ಲ ತಾಯಿಗಳಡಿಗೆ ತಾ
ನೊಬ್ಬನೆ ಕಣ್ಣೀರೊತ್ತಿ ಬರಲು
ಸಬ್ಬ ಸ್ತ್ರೀಯರು ಚಿಕ್ಕಮ್ಮನ ಸವತೇರು
ತಬ್ಬಿಕೊಂಡೆಲ್ಲ ಗೋಳಿಡುತ ॥೧೦೬॥

ಮಡದೇರು ಮಕ್ಕಳು ಎತ್ತಿ ಮುದ್ದಾಡುತ
ಕಡೆಗಣ್ಣ ನೀರೊಸರುತ್ತ
ಬಿಡದೆ ಒಬ್ಬೊಬ್ಬರ ಮುಖನೋಡಿ ಮಾತಾಡಿ
ಕಡುಗುರಿಯಾದೆವೆಂದೆನುತ ॥೧೦೭॥

ಪಟ್ಟದ ರಾಣಿ ಉಟ್ಟಳು ತೊಡೆ ಚಲ್ಲಣ
ಕಟ್ಟಾಣಿವೆಂಗಳು ಸಹಿತ
ಬಟ್ಟಮುತ್ತಿನ ಸರ ಕಟ್ಟಿ ರವುಕೆಯ ತೊಟ್ಟು
ಇಟ್ಟರು ಚಂದನ ತಿಲಕ ॥೧೦೮॥

ಪೊಳೆವ ಕುಂತಳ ವೀರಜಡೆಗಳ[೧೩]ಹೆಣೆಸಿಯೆ[೧೩]
ಒಳಕಂಪ ಮೈಗೆ ಶೃಂಗರಿಸಿ
[೧೪][ತೊಳ][೧೪]ಪುಗಂಗಳ ಮುಖ[೧೫][ಕನ್ನಡಿ][೧೫]ಕತಾರ[೧೬][ವು][೧೬]
ಅಳವಟ್ಟವಾ ಸತಿಯರಿಗೆ ॥೧೦೯॥

ಕರೆಸಿದ ತನ್ನರಮನೆಯ ರಮಣಿಯರ
ಮೆರಸಿದ ಸಿರುಮಭೂವರನು
ಹರುಷದಿಂದಲಿ ನಿಂದು ನೋಡುತಿರೆ ಮೇಘದಿ
ಪರಮೇಶ್ವರ ಬೆರಗಾದ ॥೧೧೦॥

೧೩–೧೩ ಸಂಧಿಸಿ (ಶಿ), ೧೪–೧೪ ತಳು (ಶಿ), *–* ತಳ (ಹ), ೧೫–೧೫ ಕೆನ್ನೆ (ಶಿ, ಹ), ೧೬–೧೬ ದಿ (ಶಿ),ವ(ಹ)

ಮೆರೆದರು ಸಿರುಮೇಂದ್ರ ಏಳೇಳು ಜಲ್ಮದಿ
ಪುರುಷನಾಗೆಂದು ಮುಂಡಾಡಿ
ಕರೆದು ಒಬ್ಬೊಬ್ಬರ ಮುಖ ನೋಡಿ ಮಾತಾಡಿ
ಮರಳ ಗೌರಿಯನೊಲಿಸಿದರು ॥೧೧೧॥

ಬಾಗಿನವಿತ್ತರು ಸಿರುಮ ನರಸಿಂಗನ
ಈಗಲೆ ಗೆಲಿದು ಪಂಥದಲಿ
ಬೇಗ ಬಂದೆಮ್ಮ ಕೂಡೆಂದು ನಗುತಲಿ
ಸಾಗಿ ಬಂದರು ಕೊಂಡದೆಡೆಗೆ ॥೧೧೨॥

ಕಡಿಯೊ ನೀ ನರಸಿಂಗರಾಯನ ದಂಡನು
ಮುಡುಹಿ ನೀನವನ ಮಾರ್ಬಲವ
ಪಡೆಯೊ ನೀ ವೀರಸ್ವರ್ಗವನೆಂದು ಸಿರುಮನ
ಮಡದಿಯರಾಡಿ ಪಾಡಿದರು ॥೧೧೩॥

ನನಗಿಂದ ವೀರಾಧಿವೀರರು ನೀವೆಂದು
ಘನ ಸಂತೋಷದಿ ನಗುತ
ಸನುಮತವನು ಮಾಡಿ ಗುಟುಕು ತಾಂಬುಲವಿತ್ತು
ವನಿತೆಯೊಡನೆ ನುಡಿದನು ॥೧೧೪॥

ಒಂದೇ ಘಳಿಗೆ ಮುಂದೆ ನಡೆ ನಿಮ್ಮ ಸಂಗಡ
ಹಿಂದೆ ಬರುವೆನೀ ಕ್ಷಣದಿ
ಸಂದೇಹ ಬೇಡ ನಿಮ್ಮಾಣೆ ಎನುತಲಾಗ
ಕುಂದದೆ ಸಿರುಮೇಂದ್ರ ನುಡಿದ ॥೧೧೫॥

ಎಲ್ಲರ ಮುಖ ನೋಡಿ ಮುಂಡಾಡಿ ಮುದ್ದಿಸಿ
ಗಲ್ಲವ ಪಿಡಿದಲುಗಾಡಿ
ನಿಲ್ಲೆ ನಾನೀಹೊತ್ತು ನೀವಿರುವ ಸುರಲೋಕ
ದಲ್ಲಿಗೆ ಬರುವೆನೀ ಕ್ಷಣದಿ ॥೧೧೬॥

ಇರಿಯೆಂದು ಕೊಂಡದೊತ್ತಿಲಿ ನಿಂದು ಸಿರುಮನ
ನೆರೆ ನೋಡಿ ಕನ್ನಡಿವಿಡಿದು

ಮೆರೆವುತಿರಲು ಕಂಡು ಸಿರುಮಭೂಪಾಲನು
ಇರಿದು ಕೊಂಡಕೆ ಹಾಕಿಸಿದ ॥೧೧೭॥

ಕೊಂಡಗಳಿಗೆ ಆಹುತಿಯಾಗಬೇಕೆಂದು
ಗಂಡುಗಲಿಯು ಸಿರುಮೇಂದ್ರ
ತಂಡ ತಂಡದಲಿರಿದೆಲ್ಲರನು ನೂಕಿ
ಕೊಂಡದೊಳಗೆ ಹಾಕಿ ಸುಡಿಸಿ ॥೧೧೮॥

ದುಃಖದ ಕಡಲು ಉತ್ತಳಿಕೆಯ ಮಾಡಿದ
ಮಕ್ಕಳು ಹೆಂಡೆರನೆಲ್ಲ
ಸಿಕ್ಕದೆ ಇರಿದು ಇಕ್ಕೆಲದ ಕೊಂಡಕೆ ಹಾಕಿ
ವಿಕ್ರಮ ಸಿರುಮ ನಿಂದಿರಲು ॥೧೧೯॥

ಗಮ್ಮನೆ ಮಗ ಮಲ್ಲ ತಮ್ಮಮ್ಮಗೆ ದುಃಖ
ಉಮ್ಮಳಿಸುತ ಶರಣೆಂದ
[೧೭]ಅಮ್ಮಮ್ಮ[೧೭] ನೋಡೆನುತ ಮಿಕ್ಕ ತೊತ್ತಿರನೆಲ್ಲ
ದುಮ್ಮೇಳಲಿರಿದು ಹಾಕುವೆನು ॥೧೨೦॥

ಹುಡುಕಿ ಅರಸಿ ನೋಡಿ ಅಡಗಿರ್ದ ಮಕ್ಕಳ
ಉಡಿಕೈಯ್ಯ ಹಿಡಿದೆಳೆತಂದು
ಬಿಡದೆ ಕೊಲ್ಲಿಸಿ ಎಣ್ಣೆ ತುಪ್ಪದ ಹಡಗವ
ಒಡೆಯ ಹೊಯ್ಸಿ ಸುಡಿಸಿದನು ॥೧೨೧॥

ಚಪ್ಪರ ಲಾಯವ ಹೊಗುವಾಗಲಂದಿಗೆ
ಇಪ್ಪತ್ತೇಳು ಕುದುರೆಯನು
ತಪ್ಪದೆ ಕೊಮಾರ ಮಲ್ಲಣ್ಣ ಹೊಕ್ಕಿರಿವಾಗ
ಗತ್ತದಲಗೆ ಗಣಿಲೆನಲು ॥೧೨೨॥

ಬೆಕ್ಕು ಗಿಳಿಯು ಪಾರಿವಾಳವು [೧೮][ದೀಹದ][೧೮]
ಹಕ್ಕಿಯ ಕೊರಳನೆ ಕೊಯ್ಸಿ

೧೭-೧೭ ಅಮ್ಮನೆ (ಶಿ), ೧೮-೧೮ ದಾಯದ (ಶಿ), ದೆಯದ (ಹ)

ಲೆಕ್ಕದ ಕಡಿತವ ಬಣ್ಣ ಬಂಗಾರವ
ಹಕ್ಕರಿಕೆಯ ಸುಡಿಸಿದನು ॥೧೨೩॥

ಆಯತದಿಂದ ಮಲ್ಲಣ್ಣನೇರುವ
ಜೀವರತ್ನವ ಬೀಳಲಿರಿದ
ಖೋ ಎಂದು ಕೂಗುತ ಒಳಹೊಕ್ಕು ತಿವಿದನು
ರಾಯ ಬೊಲ್ಲನನಾಕ್ಷಣದಿ ॥೧೨೪॥

[೧೯][ಕಯ್ಯಿಗನೂರಿನ][೧೯] ಕೆಂಚಣ್ಣನೇರುವ
ಗವಿಯಕರಡಿಯ ಬೀಳಲಿರಿದ
ಕೈತವಕದಿ ಹೊಕ್ಕು ಇರಿದು ಕೆಡಹಿದನು
ಮೈಯೆಳಗನ ಮನವುಬ್ಬಿ ॥೧೨೫॥

ಬೇಟೆಯ ಮಗ ಸೋಮಿನಾಯಕನೇರುವ
ನಾಟಕಸಾಲೆಯನಿರಿದ
ಲೂಟಿಯಿಂದಲು ಹೊಕ್ಕು ತಿವಿದು ಕೆಡಹಿದನು ಸಾ-
ಗಾಟದಿ ಕೆಂಚ ಬೊಲ್ಲನನು ॥೧೨೬॥

ಉಡುವದರಸು ನಂಬಿನಾಯಕನೇರುವ
ಕಡುಗಲಿ ನೀಲನ ಇರಿದ
ನಡೆಗೋಟೆಯ ಜಂಬುನಾಗರಮರಿಯನು
ತವಕದಿಂದಲಿ ಹೊಕ್ಕು ತಿವಿದ ॥೧೨೭॥

ಹೆಗ್ಗೆರೆ ಮಲ್ಲಣ್ಣನೇರುವದೊಂದೀಗ
ಹೆಬ್ಬುಲಿಯನು ಬೀಳಲಿರಿದ
ಉಗ್ರದಿ ರಣದೊಳು ಕಾದುವ ಕಾಚನ
ಅಗ್ಗಳೆ ಬೊಲ್ಲನನಿರಿದ ॥೧೨೮॥

ಸಂಗ್ರಾಮಧೀರ ಕುಮಾರ ಕಾಚನೇರುವ
ಮಂಗಳ ಬೊಲ್ಲನ ಇರಿದ

೧೯-೧೯ ಕೈಗ ನಡುವಿನ (ಶಿ), ಕೈಗಿನೊಡವಿನ(ಹ).

ಸಿಂಗಟಿಗೆರೆಯ ಆನೆಪ್ಪನಾಯ್ಕನೇರುವ
ಲಿಂಗಪಕ್ಷಿಯ ಬೀಳಲಿರಿದ ॥೧೨೯॥

ಇತ್ತಟ್ಟಿನ ಮನ್ನೆರ ಹುಚ್ಚುಗೊಳಿಸುವ
ಚಿತ್ರಾಂಗಿಯ ಬೀಳಲಿರಿದ
ಉತ್ತಮ ಕೆನ್ನೀಲ ಮತ್ತವಾರುವ ಜಂಬ
ಅರ್ತಿಯಿಂದಲಿ ಬೀಳಲಿರಿದ ॥೧೩೦॥

ಎಕ್ಕಟಿ ಗಂಗನ ಗಂಡನೆಂಬುವದೊಂದು
ರಕ್ಕಸಿ ಬೊಲ್ಲನನಿರಿದ
ತಕ್ಕಡಿ ಕುಣಿಕಾಲ ತೇಜಿಯನಿರಿದನು
ನೆಕ್ಕಟಗಾಲ ಜಂಬನಿರಿದ ॥೧೩೧॥

ಹಿರಿಯೂರ ಕಸವನ ಗಂಡನೆಂಬುವದೊಂದು
ಉರಿಗೊಳ್ಳಿ ಕುಂಕುಮಚಾರ
ದೊರೆ ಏರುವ ತರವ[೨೦]ಳಿ[೨೦]ಗನ ಇರಿದನು
ಹರಿವಾಣದೊಳು ಕುಣಿವದನು ॥೧೩೨॥

ಹೊನ್ನವಳ್ಳಿಯ ವೇದರಾಜನ ಗಂಡನೆಂಬ
ಕೆನ್ನೀಲನ ಬೀಳಿರಿದ
ಬನ್ನಿಯ ಮರನೇರಿ ಎಸೆವದನಿರಿದನು
ಚೆನ್ನಿಗ ಹೊನ್ನರಳಿಯನು ॥೧೩೩॥

ಅಂಕಕಾರನು ನರಸಿಂಹನ ಗಂಡನೆಂಬ
ಲೆಂಕೆವಿಭಾಡನನಿರಿದ
ಶಂಕಪಾಳನು ಸಣ್ಣಗುಲಗಂಜಿ ನೀಲನ
ಬಿಂಕದ ಬೊಲ್ಲನನಿರಿದ ॥೧೩೪॥

ಕೆಂಚನೀಲನು ಹೊಸ ಮಿಂಚುವ ಕೇಸರಿ
ಪಂಚಕಲ್ಯಾಣಿ [೨೧]ಪವಳವನು[೨೧]

೨೦-೨೦ ಡ(ಹ), ೨೧-೨೧ ವಾಳವನು (ಶಿ)

ಹೊಂಚುವ ಹುಲಿಬಣ್ಣ ಸಾರಂಗ ರಣದೊಳು
ಮುಂಚೆ ಕುಣಿವ ಕುದುರೆಗಳ ॥೧೩೫॥

ಕೊಲೆಗೇಡಿ ಬೆಲಗರ ಭೈರನೇರುವದೊಂದು
ಕಲಿಸಿಂಹನೆಂಬುದನಿರಿದ
ಕಲಹಲಂಪಟ ಗುಜ್ಜಲೋಬನು ಏರುವ
ಹುಲಿ ಸಾರಂಗನನಿರಿದ ॥೧೩೬॥

ಬಂದೊಳಹೊರ ಲಾಯದ ಕುದುರೆಗಳನು
ಒಂದಿಲ್ಲದೆ ಬೀಳಲಿರಿದ
ಕುಂದದೆ ಕೂದಲ ಬಾಲಂಗಳನೆ ಕೊಯ್ದು
ಕೊಂಡದೊಳಗೆ ಹಾಕಿ ಸುಡಿಸಿ ॥೧೩೭॥

ಒಡಕುಟ್ಟಿ ಡೋಳ [ತಮ್ಮ]ಟಿ ಗಿಡಿಬಿಡಿಯನು
ಹಿಡಿವ ಠೆಕ್ಕವ ಸುಡಿಸಿದನು
ಪಡುಗವನೊಡೆಕುಟ್ಟಿ ಕೊಂಡದೊಳಗೆ ಹಾಯ್ಕಿ
ಹುಡಿ ಹುಡಿ ಮುತ್ತು ಮಾಣಿಕವ ॥೧೩೮॥

ಹಿಟ್ಟುಮಾಡಿಸಿ ಕಡುಕು ಕಂಠಮಾಲೆಯ
ಕಟ್ಟಾಣಿಲ್ಲದ ಜಾಳಿಗೆಯ
ಪೆಟ್ಟಿಗೆ ಪರಿಮಳ ಬಣ್ಣ ಬಂಗಾರವ
ಸುಟ್ಟು ಬೂದಿಯ ತೂರಿಸಿದ ॥೧೩೯॥

[ಭಿತ್ತಿ]ಲಿ ಬರೆದ ಬಣ್ಣದ ಚಿತ್ರವ
ಕೆತ್ತಿ ಕೆಡಹಿ ಸವರಿಸಿದ
ಸುತ್ತ *[ಭಗ]*ವಂತಿಯ ಮನೆ ಮಣಿಮಂಚವ
ಮೊತ್ತದಲವ ಸುಡಿಸಿದನು ॥೧೪೦॥

ನರಸಿಂಹ ಕಣ್ಮನ ಬಯಸಿ ಕೈದುಡುಕಲು
ಸರಕೇನು ಇನಿತಿಲ್ಲದಂತೆ

– X(ಶಿ.ಹ)

ಸಿರುಮ ತನ್ನರಸಿ ತಾನಲ್ಲದೆ ಎಲ್ಲರ
ಉರಿಗಾಹುತಿಯ ಮಾಡಿದನು ॥೧೪೧॥

ಮೇಲುಪ್ಪರಿಗೆಯೊಳು ತಮ್ಮ ಮಲ್ಲಣ್ಣನು
ಆಲಿ ಬಿಲ್ವಿಡಿದು ಬೊಬ್ಬಿರಿದು
ಕೋಲು ಕೋಟಿಗೆ ತಪ್ಪದೆಚ್ಚು ಮಹೇಂದ್ರದ
ಜಾಲವ ಬೀಸಿದಂದದಲಿ ॥೧೪೨॥

ಸುಳಿಯಲೀಸದೆ ಮಾಸಾಳನು ಎಚ್ಚೆಚ್ಚು
ಬಳಲಿ ಕೈ ಕೆಚ್ಚಾಗಲೊಡನೆ
ಇಳಿದುಪ್ಪರಿಗೆಯಿಂದ ತಮ್ಮ ಮಲ್ಲಣ್ಣನು
ಹೊಳೆವ ಖಂಡೆಯವ [೨೨]ತಕ್ಕೊಂಡ[೨೨] ॥೧೪೩॥

ಸಾಧನೆದೋರುತ ಹೊರಚಾವಡಿ ಮುಂದೆ
ಮೂದಲಿಸಿದ ಮಲ್ಲಭೂಪ
ಬೀದಿ ಬೀದಿಗಳಲ್ಲಿ ಇರಿದು ಕೆಡಹಿದನು
ಭೂದೇವತೆಗೊರಗಿ[ಸಿ]ದ ॥೧೪೪॥

ಮದಸೊಕ್ಕಿದಾನೆ ಕದಳಿ ವನವ ಹೊಕ್ಕು
ಮೆದೆಗೆಡಹಿದಂದದಲಿ
ಕದಲದೆ ತೆಲುಗರ ಕಡಿಯಲು ಮಲ್ಲಭೂಪ
ಎದೆಯಲ್ಲಿ ಗಾ[ಯವಡೆ]ದನು ॥೧೪೫॥

ಅಂಬು ನೆಟ್ಟಿತು ಕಾಣೊ ನಂಬೆಣ್ಣನಾಯಕ
ಇಂಬುಗೊಡದಿರೊ ತೆಲುಗರನು
ತಂಬಿಸಿ ಕಾದೆಂದು ತಿರುಗಿದ ಚಾವಡಿ
ಕಂಬಕೊರಗಿದ ಮಲ್ಲೇಂದ್ರ ॥೧೪೬॥

ಆಯತವಾಗಿ ಆ ಕ್ಷಣದಿ ಸಿರುಮೇಂದ್ರ
ನಾಯಕ [೨೩]ಹೊರಟುಬಂದವನು[೨೩]

೨೨–೨೨ ನೊಪ್ಪಿ (ಶಿ), ೨೩–೨೩ ನಾಗ ಬಂದನವ(ಶಿ).

ಆಯಮಾನದಿ ತಮ್ಮನೆದೆಯ ಘಾಯವ ಕಂಡು
ಖೋಯೆಂದು ಚಾಲಿವರಿದನು ॥೧೪೭॥

ಮುಂಡಾಡಿ ಮುಖನೋಡಿ ತಮ್ಮನ ತಲೆಯನು
ಕೊಂಡದೊಳಗೆ ಹಾಕಿ ಸುಡಿಸಿ
ತಾಂಡವಾಡುವ ವೀರನಂತೆ ಸಿರುಮ ತನ್ನ
ಹೆಂಡತಿ ಸಹವಾಗಿ ಬರಲು ॥೧೪೮॥

ದೆಸೆಯುಳ್ಳ ಕಂದ ಕಾಚಯ ಕಾದಿ ಉರದಲ್ಲಿ
ಹೊಸ ಘಾಯ ಬಿಸಿ ರಕ್ತದಲಿ
ಉಸಿರಾಡುತಿರಲು ಕಡಿದು ಕೊಂಡಕೆ ಹಾಕಿ
ವಸುಧೆಗಧಿಕ ಸಿರುಮೇಂದ್ರ ॥೧೪೯॥

ಮಡದಿ ಸಹಿತಲುಪ್ಪರಿಗೆಯನಡರಿದ
ಕಡುಗಲಿ ಕದನ ಪ್ರಚಂಡ
ಒಡನೆ ಮೈದೋರಿ ಮೆರವುತ ಸಿರುಮೇಂದ್ರ
ತೊಡಿಸಿದ ಕೂರಂಬುಗಳನು ॥೧೫೦॥

ಪೂಣಿಸಿ ಪೊಸ ಕಣೆಗಳ ತೆಲುಗರ ಮೇಲೆ
ಬಾಣದ ಮಳೆಗರೆದಂತೆ
ಕೇಣವಿಲ್ಲದೆ ಎದೆ ಬದಿಗಳ ಕೀಲಿಸಿ
ಗೋಣ ಕೊರೆಯಲೆಚ್ಚ ಸಿರುಮ ॥೧೫೧॥

ಘಲ್ಲುಘಲ್ಲೆಗೆ ಬಿಲ್ಲು ಬಿಲ್ಲ ಝೇವಡೆಯಲು
ತಲ್ಲಣಗೊಂಡು ತೆಲುಗರು
ಝುಲ್ಲನೆ ತೆಗೆದೋಡುತಿರಲಾಗ ಕಂಡರು
ಗೊಲ್ಲ ಸಿರುಮನೆಕ್ಕಟಿಗರು ॥೧೫೨॥

ಮೊಗನೋಡಿ ಮನ್ನೆಯ ಸಿರುಮ ಚಿತ್ತೈಸೆಂದು
ನೆಗೆದು ತೆಲುಗರ ಮುಂದಲೆಯ
ಜಗಿದು ಕೆಡಹಿ ಮೆಟ್ಟಿ ಕೊರ ಕೊಯ್ದು ತಲೆಗಳ
ನೆಗಹಿ ನಿವಾಳಿ ಹಾಕಿದರು ॥೧೫೩॥

ಮುನ್ನ ಸಾಕಿದ ಕೈ[೨೪]ಜೀತ[೨೪]ವೊ ಸಿರುಮೇಂದ್ರ
ಚೆನ್ನಾಗಿ ನೋಡು ನೋಡೆನುತ
ತನ್ನ ಕಠಾರವ ಕಿತ್ತಳಿಯ ತಿಪ್ಪಯ್ಯ
ಬೆನ್ನಟ್ಟಿ ಇರಿದು ತೆಲುಗರ ॥೧೩೪॥

ಕರುಳ ಕೊರಳು ಕೈಬೆರಳು ಕತ್ತರಿಸಲು
ಭರದಿ ಹೊಯ್ದು ರಣದೊಳಗೆ
ಮರಳಿಸಿದನು ಕರಿ ತುರಗ ಕಾಲಾಳನು
ಧುರಗಲಿ ಅಳಿಯ ತಿಪ್ಪಯ್ಯ ॥೧೩೫॥

ಕೆಕ್ಕರಿಸುತ ನೋಡಿ ಸೊಕ್ಕಿದ ತೆಲುಗರ ಮೆಟ್ಟಿ
ಸಿಕ್ಕನೆ ಸೀಳಿ ಬಿಸುಡಲು
ಚಿಕ್ಕಾಯಿ ಸಿರುಮೇಂದ್ರ ಕಂಡುಪ್ಪರಿಗೆಯೊಳು
ಹೆಕ್ಕಳದಿಂದ ನಗುತಿರಲು ॥೧೩೬॥

ನರಸಿಂಹನವರೆಲ್ಲ ಮೊರೆದು ತಿಪ್ಪಯ್ಯನ
ಉರದ ಮೇಲಿರಿಯೆ ಏರ್ವಡೆದು
ಶರೀರ ಕತ್ತರಿಸುತ ರಣರಂಗದೊಳಗೆಲ್ಲ
ಮರಣವಾದನು ಬೇಗದಲಿ ॥೧೩೭॥

ಎವೆ ಹಳಚದ ಮುನ್ನ ಸಿರುಮ ಎನುತಲಾಗ
ಕವಿದನು ಹಡಪದ ಹಲಗ
ಸವರಿದ ಸಾಳುವ ನರಸಿಂಹನವರನು
ತಿವಿ ತಿವಿದವ ಹವಣಿಸಿದ ॥೧೩೮॥

ಒಬ್ಬನ ಹಿಡಿದು ತಿರ್ರನೆ ತಿರುಹುತ ಮ-
ತ್ತೊಬ್ಬನ ಹೊಡೆದಪ್ಪಳಿಸಿ
ಆರ್ಭಟಿಸಲು ಆಕಾಶದಿ [ಶಿ]ವಗಣ
ನಿಬ್ಬೆರಗಾಗಿ ನೋಡಿದರು ॥೧೩೯॥

೨೪-೨೪ ಪಂಥ(ಶಿ).

ಮಡದಿ ಸಹಿತ ಸಿರುಮಣ್ಣ ತಲೆಯ ತೂಗೆ
ಗಡೆಯ ತೆಲುಗರೆತ್ತಿ ಬರಲು
ತುಡುಕಿ ಹಡಪದ ಹಲಗನ ಇರಿಯಲಾಗಿ
ಮಡಿದನು ರಣರಂಗದೊಳಗೆ ॥೧೬೦॥

ಚಿತ್ತವಧಾನ ಪರಾಕು ಸಿರುಮ ನಿನ್ನ
ಅರ್ಥಿಯ ಸಲಿಸುವೆನೆನುತ
ಕತ್ತಿಯ ಝಳಪಿಸಿ ಹೆಗ್ಗರೆ ನಾಗಣ್ಣ
ಮತ್ತಗಜದಂತೆ ಮಾರ್ಮಲೆದ ॥೧೬೧॥

ಒಳಹೊಕ್ಕು ತೆಲುಗರ ಮುಂದಲೆಗಳ
ತಲೆವರಿಗೆಯನಿಕ್ಕಿ ನಿಂದ
ಬಲಭುಜ ಹರಿದು ನಿಟ್ಟೆಲು ಕತ್ತರಿಸಲು
ನೆಲದಲ್ಲಿ ಬೀಳಹೊಯ್ದವನು ॥೧೬೨॥

ಕಟ್ಟಾಳುಗಳ ಕಾಲ್ವಿಡಿದಪ್ಪಳಿಸುತ
ಜಟ್ಟಿಗಳಂತೆ ಹೆಣಗುತಲಿ
ಈಟಿಯಿಂದಿರಿಯಲು ಹೆಗ್ಗರೆ ನಾಗಣ್ಣ
ದಾಟಿ ಮುಂದಕೆ ಉರುಳಿದನು ॥೧೬೩॥

ಹಿರಿಯ ಸೋಮಣ್ಣ ತಳವಾರ ಲಿಂಗರಸಯ್ಯ
ಕರವೇಗ ನಂಬೆಣ್ಣನಾಯ್ಕ
ಸಿರುಮನ ಪ್ರಧಾನ ಕಲ್ಲರಸಯ್ಯನು
ಅರಮನೆ ಮುಂದೆ ನಿಂದಿರಲು ॥೧೬೪॥

ಸಂಗ್ರಾಮವೆಂಬ ಸಮು[ದ್ರ]ಕೆ ಸೊಕ್ಕಿಕ್ಕಿ
ಮೀನ್ಗಳನೆಸೆವಂದದಲಿ
ಜಂಗುಳಿ ತೆಲುಗರ ಎದೆ ಬದಿ ಕಿವಿ ಮೂ[ಗು]
ಕಂಗಳುದುರಲೆಚ್ಚ ಸಿರುಮ ॥೧೬೫॥

ಕೆಡೆ ಕೆಡೆ ಎಂದೆಚ್ಚು ಕೈಯೆತ್ತಿ ಕಡಿಯಲು
ಗಡೆಯ ತರಗನೆಂಬುವವನು

ಪೊಡವಿಗುನ್ನತವಾದ ಸಿರುಮನಿಟ್ಟಿಹ ಪಚ್ಚೆ
ಕಡಗವ ನನಗೆ ಹಾಕೆಂದ ॥೧೬೬॥

ತವಕದಿ ಸಿರುಮ ಹಾಕಿದ ಪಚ್ಚೆಕಡಗಕೆ
ಕವಿವ ತೆಲುಗರ ಕಾಲಾಳ
ಸವರಿ ಸಾಲ್ದಲೆಯ ಬಣಬೆಯನೊಟ್ಟಿಸಿದ
ಸಿರುಮನ ಪ್ರಧಾನ ಕಲ್ಲರಸ ॥೧೬೭॥

ಕಡಿದನು ಮುತ್ತಿರ್ದ ತೆಲುಗರ ಪಚ್ಚೆದ
ಕಡಗವ ತಂದು ಕಲ್ಲರಸ
ತಡೆಯದೆ ಸಿರುಮ ಕೋ ಎನುತ ಕಲ್ಲರಸ
ಒಡಯಗೆ ತಂದೊಪ್ಪಿಸಿದನು ॥೧೬೮॥

ಆಶ್ಚರಿವಟ್ಟು ಕಲ್ಲರಸನ ಮುಖ ನೋಡಿ
ಮೆಚ್ಚಿ ಹಸಾದವೆಂದೆನುತ
ಪಚ್ಚೆಯವನು ಹೊಗಲೀಸದೆ ನೀ ಎನ್ನ
ಪಚ್ಚೇದ ಕಡಗವ ತಂದೆ ॥೧೬೯॥

ಧನ್ಯ ಸಿರುಮ ಕೇಳು ಎನ್ನ ಬಿನ್ನಪವನು
ಇನ್ನುಪ್ಪರಿಗೆ ಇಳಿಯೆಂದ
ತನ್ನ ಸತಿಯು ಸಹ ಬಂದು ಮಾತಾಡಿದ
ಮನ್ನಿಸಿ ಪ್ರಧಾನನೊಡನೆ ॥೧೭೦॥

ಮಿಕ್ಕಾಳು ಮುಂದೆ ಕಾದಿರಲಲ್ಲಿ ಕಲ್ಲರಸ
ಧೊಕ್ಕನೆ ಬಂದು ಬಿನ್ನೈಸೆ
ಚಿಕ್ಕಾಯಿ ಸಿರುಮೇಂದ್ರ ನರಸಿಂಗರಾಯಗೆ
ಸಿಕ್ಕದುಪಾಯವ ನೆನೆದ ॥೧೭೧॥

ಮುಂಚಲಿ ಸಿರುಮೇಂದ್ರ [ಮು]ತ್ತೈದೆತನ ನಿನ್ನ
ಹಿಂಚಲಿ ರಂಡೆತನಗಳ
ಸಂಚಲಿಸದೆ ಕೊಲ್ಲೆಂದು ಬೇಡಿಕೊಂಡಳು
ಅಂಚೆಗಮನೆ ಚಿಕ್ಕಮ್ಮ ॥೧೭೨॥

ಮುಗುಳುನಗೆಗಳಿಂದ ಮುದ್ದಿಸಿ ಗಂಡನ
ಕಂಗಳು ದಣಿಯೆ ನೋಡಿದಳು
ಸಂಗ್ರಾಮದಿ ಕಾದಿ ಸಿರುಮ ನೀ ಬಾರೆಂದು
ಹೆಂಗಳ ರನ್ನೆ ನುಡಿದಳು ||೧೭೩||

ಅಭಿಮಾನಕೆ ಬದುಕುವ ಅರಸುಗಳೆಂದು
ವಿಪರೀತವಡೆಯಲು ಸಿರುಮ
ಉಪಮಿಸಲರಿಯದೆ ಕೊಲ್ಲೆಂದು ಬೇಡಿಕೊಂಡಳು
ನಿಪುಣ ಪ್ರಧಾನಿ ಕಲ್ಲರಸನ ||೧೭೪||

[ತಡ]ಬೇಡ ಚಿಕ್ಕಮ್ಮ ನಿನ್ನ ಗಂಡನು ಕಾದಿ
ಮಡಿದರೆ ತಲೆಯನು ತಂದು
ಒಡಗೂಡಿಸುವೆನೆಂದು ಕುಮಾರ ಮಲ್ಲಣ್ಣ
ನುಡಿದು ನಂಬುಗೆಗೊಟ್ಟನಾಗ ||೧೭೫||

ಚಿಕ್ಕಾಯಿ ನಿನ್ನ ಕೊಲ್ಲುವರೆ ಕೈ ಏಳವು
ಮಕ್ಕಳ ತಾಯಿ ನೀನೆಂದ
ಅಕ್ಕಟ ಸಿರುಮೇಂದ್ರ ಕಕ್ಕುಲತೆಯ
ಮಾಡಿ ಸಿಕ್ಕಿಸುವರೆ ನರಸಿಂಹಗೆ ||೧೭೬||

ಮಲ್ಲಣ್ಣನಾಗಾಡಿದ ಮಾತಿಗೆ ಚಿಕ್ಕಮ್ಮ
ಗಲ್ಲವ ಪಿಡಿದಲುಗಾಡಿ
ಬಲ್ಲಿದ ಸಿಂಹದ ಮರಿಯೆ ನಿನಗಿದಿರಾಗಿ
ನಿಲ್ಲುವ ರಾಯರಿನ್ನುಂಟೆ ||೧೭೭||

ಕರ್ಣ[೨೫][ಶೂದ್ರಕ][೨೫]ವೀರ ಕಾರ್ತವೀರ್ಯಾರ್ಜುನ
ಹರನ ಕುಮಾರ ವೀರೇಶ
ವರ್ಣಿಸಲವರೊಳು ನೀನೊಬ್ಬನಲ್ಲದೆ
ಕರ್ನಾಟಕದಿ ನಿನಗೆಣೆಯೆ ||೧೭೮||

೨೫-೨೫ ಸೂತ್ರಿಕ (ಶಿ, ಹ)

ಕುಲದೀಪ ಮಲ್ಲಣ್ಣ ಸಿರುಮ ನರಸಿಂಹನ
ಬಲದೊಳು ಕಾದಿ ಮಡಿದರೆ
ತಲೆಯ ತಂದೊಡಗೂಡೆಂದು ಮಗನ
ನಲಿದು ಮುದ್ದಾಡುತಿರಲು ॥೧೭೯॥

ಆಯವ ತಾಕಲಿರಿದು ಸಿರುಮಣ್ಣನು ಚಿ
ಕ್ಕಾಯ ನೂಕಿದ ಕೊಂಡದೊಳಗೆ
ಬೇಯುತಿರಲು ಖೋ ಎಂದು ಕೂಗುತಲಾಗ
ರಾಯ ದಂಡಿಗೆ ಇದಿರಾದ ॥೧೮೦॥

ಅಂಬರದಲಿ ಶಿವನ[೨೬][ಮರರ್ಕಳು ಸಹ][೨೬]
ಕುಂಭಿನಿ ಎಲ್ಲ ನೋಡುತ
ನಂಬೆಣ್ಣನಾಯಕ ಹಿರಿಯ ಸೋಮಣ್ಣನು
ಮುಂಬರಿದರು ತೆಲುಗರನು ॥೧೮೧॥

ಎಚ್ಚರೆ ಎದೆ ಬಿರಿಯಲು ಗೋಣೊರಗಿ ಬಾಯ
ಬಿಚ್ಚಿ ರಕ್ತವ ಕಾರುತಿರಲು
ಹು[ಚ್ಚೇಳು]ತೋಡಲು ಮಿಗೆ ಮೇಲಾಗಿ ಕಂಡನು
ಮುಚ್ಚಿ ಮುಸುಕುವ ತೆಲುಗರನು ॥೧೮೨॥

[೨೭]ಕೈದಿನಲಿರಿ[೨೭]ದಾಡುತಿರಲು ರುಂಡ ಮುಂಡ ಕೈ
[೨೮]ಕೊಯ್ದೀಡಾ[ಡಿ] ತಲೆಗಳನು[೨೮]
ಹುಯ್ಯಲಿಡುತ ನಂಬೆಣ್ಣ ಸೋಮಣ್ಣನು
ಕೈಯೆತ್ತಿ ಹೊಯ್ದು ತೆಲುಗರ ॥೧೮೩॥

ಮುತ್ತಿ ಕಡಿಯಲು ಇತ್ತಂಡದ ಜೀವ
ಚಿತ್ತೈಸಲು ಶಿವನೆಡೆಗೆ
ಮತ್ತಾ ಪ್ರಧಾನ ಕಲ್ಲರಸನು ಪರದಳ
ದೊತ್ತಿಲಿ ಲಿಂಗರಸಯ್ಯ ॥೧೮೪॥

೨೬–೨೬ ನಂಬರದಣಿಯಲಿ(ಶಿ), ಭುಜಮರ್ಕಳು ಸಹ(ಹ), ೨೭–೨೭ ಭರದಿರಿ(ಶಿ), ೨೮–೨೮ ಕೈಕೊಯ್ದೀಡಾಡುತಿರ X X(ಹ)

ಕುಲಕೆ ಬ್ರಾಹ್ಮರು ನಾವು ಸಾಕಿದೆ ಸಿರುಮೇಂದ್ರ
ಕಲಹಕೆ ಬಿಟ್ಟು ನೋಡೆನಲು
ಬ[ಲು]ಹು ಮಾ[ಡ]ದಿರಿ ಕಲ್ಲರಸ ಲಿಂಗರಸ ನನ್ನ
ತಲೆಗೊಡೆಯರು ನೀವೆಂದ ॥೧೮೫॥

ಪ್ರಾಣಕೆ ಪ್ರಧಾನ ಕಲ್ಲರಸಯ್ಯನು ಕ-
ಟ್ಟಾಣಿಗೆ ಲಿಂಗರಸಯ್ಯ
ರಾಣ್ಯಕಧಿ[ಕ] ವಿಶ್ವಾಸಿಗಳಿಬ್ಬರು ಕಡೆ
ಗಾಣಿಸಿ ನಮ್ಮ ಕಾಳಗವ ॥೧೮೬॥

ಬಿದ್ದರೆ ಕೊರಳ ಕೊಯ್ದು ಕೊಂಡದಿ ಹಾಕು
ಮುದ್ದು ಕುಮಾರ ಮಲ್ಲಣ್ಣ
ಬುದ್ಧವಂತರು ಕಲ್ಲರಸ ಲಿಂಗರಸ[೨೯][ರಿಗೆ][೨೯]
ರೌದ್ರದಿ ಸಿರುಮ ಹೇಳಿದನು ॥೧೮೭॥

ರೋಷದಿ ಮೀಸೆಯ ತಿರುಹುತ ಕಣ್ಕೆಂಚ
ಸೂಸುತ ಮುಂದಕೆ ನಡೆದ
ಬೀಸುತ ಖಂ[ಡೆಯವ ಹೊ]ರ ಚಾವಡಿಯ
ಸಾಸಿರ ಮುಖದಲಿ ಸಿರುಮ ॥೧೮೮॥

ಹೊಂಚುತ ಹೊಯ್ದನು ಮುಂಚೆ ತಾ ತೆಲುಗರ
ಹಂಚಿದ ಹಲವು ಖಂಡಗಳ
ಗೊಂಚೆಯ ಭೂತ ಬೇತಾಳರುಣಲೆಂದು
ವಂಚನಿಲ್ಲದೆ ಸಿರುಮೇಂದ್ರ ॥೧೮೯॥

ಅರಮನೆಯ ಮಗಿಲ ಬಾಗಿಲ ಸುತ್ತ ಮುತ್ತಿಹ
ನರಸಿಂಹನ ಪರಿವಾರ
ಕರಿ ತುರಗ ನೆರದಿರೆ ನೋಡಿ ಸಿರುಮೇಂದ್ರ
ಬಿರಿದಂಕ ಹೊಕ್ಕು ಮೂದಲಿಸಿ ॥೧೯೦॥

೨೯-೨೯ ರೆ(ಶಿ,ಹ)

ಹಿರಿಯರ ಕಾಲದ ಕೊಲೆ ಬೇಕಾದರೆ
ಬರಹೇಳೋ ನಿಮ್ಮ ನರ[ಸಿಂಹನ]
ಕರುಳ ಹಿರಿದು ಕೊರಳೊಳ್ಕಟ್ಟುವೆನೆಂದು
ಸಿರುಮ ಹೊಕ್ಕನು ಮೂದಲಿಸಿ ॥೧೯೧॥

ಬೆಳ್ದಿಂಗಳು ಕತ್ತಲೆಯ ಮುಸುಕಿದೊಲು
ತೊಳೆಯ ಹುಳವು ಮುತ್ತಿದಂತೆ
ಸಾಳುವ ನರಸಿಂಹರಾಯನವರು ಬೂದಿ
ಹಾಳ ಸಿರುಮನ ಮುತ್ತಿದರು ॥೧೯೨॥

ಮಗಿಲನಿಳಿವ ತೆಲುಗರ ಕಂಡು ಲಾಘಿಸಿ
ತೆಗೆದು ಲಾವುಗೆ ಭ . . . ನೋದಂತೆ
ಮಗ ಮಲ್ಲನಿರಿದು ಕೆಡಹುವ ಪಂಥಕೆ ಮೆಚ್ಚಿ
ಮುಗುಳು ನಗೆಯ ನಗುತಿರ್ದ ॥೧೯೩॥

ನರಸಿಂಹರಾಯನ ಬಿರಿದಿನ ಬಂಟನು
ಹರಿಗೆಯ ಚೋರನೆಂಬವನು
ಸಿರುಮಣ್ಣನಾಯ್ಕನ ಹಿಡಿತಹೆನೆನುತಲಿ
ಗರಿಗರಿಲನೆ ಒತ್ತಿ ಬರಲು ॥೧೯೪॥

ಎಂದ ಮಾತಿಗೆ ಸಿರುಮನ ಮ[ಗ ಮಲ್ಲ]
ಮುಂದುವರಿದು ಕಾದು ಕೆಡಹಿ
ಸಂದ ಸಂದನೆ ಕಡಿದವನ ತಲೆಯ ತಂದು
ತಂದೆಗೆ ನಿವಾಳಿ ಹಾಕಿದನು ॥೧೯೫॥

ಕುಲದೀಪ ನನ್ನ ಕುಮಾರ ಮ[ಲ್ಲಣ್ಣನ]
ಅಲಗಿನಾಹುತಿಗೆ ಇಂಬಿಲ್ಲ
ಚೆಲುವ ಸಿಂಹದ ಮರಿ ಬಾರೆಂದು ಬೋಳೈಸಿ
ಕಲಿವೀರ ಸಿರುಮ ಇಂತೆಂದ ॥೧೯೬॥

ಪಾಡು ಪಂಥವನಾಡುತಿರಲೊಬ್ಬ ಸಬಳಿಗ
ಗೋಡೆಯ ಮರೆಯಲಿ ಬಂದು

ನೋಡಿ ಸಿರುಮನಾಯವ ತಾಗಲಿರಿದಾಗ
ಓಡಿ ೩೦ಓವ೩೦ರಿಯ ಹೊಕ್ಕನವನು ॥೧೯೭॥

ತಂದೆಯನಿರಿದು ಗೊಂದೆಯ ಹೊಕ್ಕ[ನ] ಹಿಡಿ
ತಂದು ಕಡಿದು ಕಾಲಡಿಯ
ಸಂದಿತೊ ಪಂಥ ಮಲ್ಲಣ್ಣ ಕಲ್ಲರಸ ಎಂದು
ಬಂದ ತಳವಾರ ಲಿಂಗರಸ ॥೧೯೮॥

ಉರಿವ ಘಾಯದಿ ಬಿದ್ದ ಸಿ[ರುಮನೃ]ಪಾಲನ
ಒರಗಿಸಿದರು ಚಾವಡಿಗೆ
ಸಿರುಮ ಭೂಪಾಲ ನೀ ಸಾಕಿದ ಕೈಯನು
ಪರೀಕ್ಷಿಸಿ ನೋಡೆನುತ ॥೧೯೯॥

ಹೆಣಕೆ ರಣಕೆ. . . . . . . .ಬ ಸಿರುಮ ನಮ್ಮ
ಗುಣನಿಧಿ ನೋಡು ನೋಡೆನುತ
ಅಣಿಯಾಗಿ ನಿಂದು ಬಂಧಿಸಿ ತೆಲುಗರ
ಕಣುಗೆಡಿಸಿ ಕ[ಡಿ]ದಾಡುತಿರಲು ॥೨೦೦॥

ಸರ್ವ[ಪ್ರ]ಧಾನ ಕಲ್ಲರಸ ಲಿಂಗರಸನು
ಧುರಧೀರ ಕುಮಾರ ಮಲ್ಲ
ತರಿತರಿದೊಟ್ಟುವದನು ನೋಡಿ ಸಿರುಮೇಂದ್ರ
ಉರಿವ ಘಾಯದಿ ಬೊಬ್ಬಿರಿದ ॥೨೦೧॥

ಕಂಡೆ . . . . .[ಕಲ್ಲರ]ಸ ಲಿಂಗರಸರೆ
ಗಂಡು ಸಿಂಹದ ಮರಿ ಮಲ್ಲ
ಮಂಡಲದೊಳು ನಿನಗೆಣೆಯುಂಟೆ ಶರಭ ಭೇ-
ರುಂಡ ಶಾರ್ದೂಲ ಬಾರೆನುತ ॥೨೦೨॥

ಕರೆಯಲು ಬಂದು ಮುಖವನು ನೋಡಿ
ಒರಲಿ ದುಃಖದಲಿ ಖೋ ಎನಲು

೩೦-೩೦ ಹ(ಶಿ,ಹ)

ಮರುಗಿ ಮಲ್ಲಣ್ಣನ ಮುಖ ನೋಡಿ ಮುಂಡಾಡಿ
ಸಿರುಮಭೂಪಾಲನಿಂತೆಂದ ॥೨೦೩॥

[ನ]ನ್ನನಿರಿದ ಹರಿಗೆಯವನ ಹಿಡಿದು ಬೇಗ
ಚೆನ್ನಾಗಿ ಕಡಿದೆ ಮಲ್ಲಣ್ಣ
ಇನ್ನು ಕೈ ಮರೆಯದೆ ಕೊರಳ ಕೊಯ್ದು ತಲೆಯ
ನಿನ್ನ ತಾಯೊಡಗೂಡಿಸೆಂದ ॥೨೦೪॥

ಕೇಳಿ ಕುಮಾರ ಮಲ್ಲ ಕೊರಳ ಕೊಯ್ವರೆ ಕೈ
ಏಳವೊ ಸಿರುಮ ಎಂದೆನಲು
ಸಾಳುವ ನರಸಿಂಹಗೆ ಸೆರೆ ಮಾಡದೆ
ಕೋಳು ಹೋಗದೆ ಕೊಯ್ಯೋ ಕೊರಳ ॥೨೦೫॥

[ಏನೆ]ಂದು ಕೊರಳ ಕೊಯ್ಯಲೊ ಎನ್ನ ತಂದೆ
ಮಾನವಸಿಂಹದ ಮರಿಯೆ
ನಾನು ದೆಸೆಗೇಡಿಯಾಗಿ ಪರದೇಸಿಯಾದೆನೊ
ನನಗೇನು ಗತಿಯೊ ಎನ್ನ ತಂದೆ ॥೨೦೬॥

ಧರೆಯೊಳು ನರಸಿಂಹರಾಯನ ಗಂಡನೆಂಬ
ಬಿರಿದ ನುಂಗಿದ ಪಂಥಗಾರ
ಪರದೇಶಿಯಾದೆ[ನೊ] ಸಿರುಮೇಂದ್ರ ನನಗೊಂದು
ತೆರನ ಹೇಳೊ ನನ್ನ ತಂದೆ ॥೨೦೭॥

ಹೇಡ್ಯಾಗಬೇಡ ನರಸಿಂಹನ ದಂಡನು
ಈಡಾಡಿ ಕಡಿದು ಸಂಹರಿಸಿ
ನಾಡೊಳು ಕೀರ್ತಿಯ ಮಾಡಿ ಬಂದೆಮ್ಮನು
ಕೂಡೆಂದು ಸಿರುಮೇಂದ್ರ ನುಡಿದ ॥೨೦೮॥

ಅರಮನೆ ಹೋಯಿತು ಪರಿವಾರ ನನಗಿಲ್ಲ
ತರಿಯೊ ಬೇಗದಿ ನನ್ನ ಶಿರವ
ಬೆರಿಯೊ ನಿಮ್ಮಮ್ಮನ ಕೂಡಿಸೋ ಏ ನನ್ನ
ಮರಿಯೊ ಎಂದನು ಸಿರುಮೇಂದ್ರ ॥೨೦೯॥

ತಂದೆ ನಾ ನಿನ್ನ ಕೊರಳನೆಂತು ಕೊರೆಯಲೊ
ಬಂದೆನೊ ನಾ ನಿನ್ನ ಬಸುರ
ಮುಂದೆ ನೀನಿದ್ದಂತೆ ನಾ ಕಾದಿ ರಣದೊಳು
ಸಂದಾಲಿ ದುಃಖವ ಕಾಣೆ ॥೨೧೦॥

ಇನ್ನು ದುಃಖವ ಮಾಡಿ ಚಿಂತಿಸಲೇತಕೆ
ಚೆನ್ನಿಗ ಸಿಂಹನ ಮರಿಯೆ
ನನ್ನ ನೀ ನರಸಿಂಹನವರಿಗೊಪ್ಪಿಸುವೇನೊ
ಮುನ್ನ ಕುಮಾರ ಮಲ್ಲಣ್ಣ ॥೨೧೧॥

ತರಿಕೆಂಡವ ಮುಟ್ಟಿದವರುಂಟೆ ಧರೆಯೊಳು
ಅ[ರಿ] ಮನ್ನೇರ ಸೀಳ್ದ ಸಿಂಹ
ತರಿವರೆ ಎನಗೆ ಕೈ ಏಳವೊ ಅಪ್ಪಾಜಿ
ಸಿರುಮ ಎನುತ ಪಾದಕೆರಗೆ ॥೨೧೨॥

ಮುತ್ತಿತು ನರಸಿಂಗರಾಯನ ದಂಡೆಲ್ಲ
ಸುತ್ತಿ ಬಳಸಿ ಹಿಡಿಯ[ಲು]
ಮೊತ್ತವನರಿದು ಕಡಿದು ಹಿಂದಕಟ್ಟಿಸಿ
ಅತ್ತನು ತಂದೆಯ ನೋಡಿ ॥೨೧೩॥

ಇಳೆಯೊಳು ಕಾದಿದ ದೊರೆಗಳೊಳು ಕೀರ್ತಿಯ
ಗಳಿಸಿದ ವೀರಾಧಿವೀರ
ಅಳುವುದುಚಿತವೆ ಸಿಂಹದ ಮರಿ ಮಲ್ಲಣ್ಣ
ತಳುವದೆ ಕೇಳೆನ್ನ ಮಾತ ॥೨೧೪॥

ಮಲ್ಲಣ್ಣ ನರಸಿಂಗರಾಯ ತನ್ನ ಪಂಥವು
ಗೆಲ್ಲಬೇಕೆಂದುಪಾಯದಲಿ
ಎಲ್ಲ ಪ್ರಧಾನಿಯ ಕಳುಹಿ ಮಾತಾಡಿ[ಸೆ]
ಬಲ್ಲಿದ ಒಳಗಾದಿ ಕಂಡ್ಯ ॥೨೧೫॥

ಸಿರುಮೇಂದ್ರ . . . . .ನಾಗದಿದ್ದರೆ
ನರಸಿಂಹರಾಯನ ಕಂಡು

ಪೊರೆವೆನೆ ನನ್ನ ಜಲ್ಮವನೆಂದು ಬಿರಿದ
ಪರವೈರಿ ಗಜಸಿಂಹ ನುಡಿದ ॥೨೧೬॥

ಅಚ್ಚ ಬಿ[ರಿದಾಂಕ]ನಹುದೊ ನನ್ನ ಚಿಂತೆ
ಬಿಟ್ಟಿತು ತನ್ನಯ ಕೊರಳ
ಸಂತೋಷದಲಿ ಕೊಯ್ದು ಕೊಂಡದೊಳಗೆ ಹಾಕೊ
ಪಂಥ ಪರಾಕ್ರಮಭೀಮ ॥೨೧೭॥

ಕೊಲ್ಲುವ[ರೆನ್ನ] ಕೈ ಏಳವೋ ಅಪ್ಪಾಜಿ
ಬಲ್ಲಿದ ಸಿರುಮ ಎಂದೆನುತ
ಕಲ್ಲರಸಯ್ಯ ನೀ ನನ್ನ ಕೊರಳ ಕೊಯ್ದು ತನ್ನ
ವಲ್ಲಭೇರ ಕೂಡಿಸೆಂದ ॥೨೧೮॥

[ಮ]ಲ್ಲಣ್ಣ ನಿನ್ನ ಕೈಮುಟ್ಟ ಮನವನು
ಕಲ್ಲೆದೆಯನು ಮಾಡಿಕೊಂಡು
ನಿಲ್ಲದೆ ಕೊರಳ ಕೊಯ್ದು ಕೊಂಡದೊಳು ಹಾಕೋ ರಣ
ಮಲ್ಲ ಎಂದನು [ಸಿರು]ಮೇಂದ್ರ ॥೨೧೯॥

ನೋಡೊಂದು ಘಳಿಗೆ ನನ್ನನು ನಾನು ನೀನು
ಕೂಡೆ ಹೋಗುವ ಎನ್ನ ತಂದೆ
ಈಡಾಡಿ ನರಸಿಂಹನ ದಂಡು ಕಡಿವೀ
ರೂಢಿಗಪ್ರತಿ[ಮ ಸಿರು]ಮೇಂದ್ರ ॥೨೨೦॥

ನಿನ್ನ ನೋಡಲಿಬೇಕು ಹರಿಹರಬ್ರಹ್ಮರು
ಎನ್ನಳವೆ ಎನ್ನ ಕಂದ
ಇನ್ನು ಸೈರಿಸಲಾರೆನು ಘಾಯ ಸೊಕ್ಕಿತು
ಮಾನ್ಯರ ಕುಲಕೆ ಭೇರುಂಡ ॥೨೨೧॥

ಕಂದರ್ಪ ಸಿರುಮ ನೀನೇಳೇಳು ಜಲ್ಮಕೆ
ತಂದೆಯಾಗೆಂದು ಮುಂಡಾಡಿ
ಇಂದು ಕಂಡೆನೊ ನಾನೆಂದಿಗೆ ಕಾಬೆನೊ
ಇಂದು ಕೈಯ್ಯೇಳವೆಂದೆನುತ ॥೨೨೨॥

ಒಂದೆ ಗಳಿಗೆ ಸಿರುಮೇಂದ್ರನ ಸಂಗಡ
ಹಿಂದೆ ಹೋಗುವನಂತೆ ನಾವು
ಸಂದೇಹವೇಕೆ ಕಡಿದು ಕೊಂಡಕೆ ಹಾಕೆಂದ
ಪ್ರಧಾನ ಕಲ್ಲ[ರಸನಾಗ] ॥೨೨೩॥

. . . . ಭಾಗ್ಯ ಕುದುರೆ ಹೆಣ್ಣು
ಮಕ್ಕಳು ಹೆತ್ತ ತಾಯಿಗಳ
ಇಕ್ಕಿದೆ ಕಿಚ್ಚನು ಇನ್ನೇತಕನುಮಾನ
ದಿಕ್ಕಿನ ಪ್ರತಿ ರಣಧೀರ ॥೨೨೪॥

ನು[ಡಿದ ಪ್ರ]ಧಾನರ ಮಾತಿಗೆ ಮಲ್ಲಣ್ಣ
ಪಿಡಿದು ಸಿರುಮನ ಮುಂಡಾಡಿ
ಕಡಿವುತೇನೆ ನನ್ನ ತಂದೆ ಪರಾಕೆಂದು
ನುಡಿದು ದುಃಖದಿ ಮಾತಾಡಿದನು ॥೨೨೫॥

[ನು]ಡಿಯಲೇನೊ ನನ್ನ ತಂದೆ ಸಿರುಮ ಎಂದು
ನುಡಿದು ಬಾಯೊಳು ಬಾಯನಿಡಲು
ತಡ ಮಾಡಬೇಡ ಎನುತ ಮಗನ ಮುಂಡಾಡಿ
ಕಡಿ ಎಂದು ಸಿರುಮೇಂದ್ರ [ನುಡಿದ] ॥೨೨೬॥

ತಕ್ಕೈಸಿ ಮುಂಡಾಡಿ ತಂದೆಯ ತಲೆಯನು
ಛಕ್ಕನೆ ಕಡಿದೆತ್ತಿ ತಂದು
ಚಿಕ್ಕಾಯ ಕೊಂಡದೊಳುರಿಯೆ ಸಿರುಮನ ಹಾಯ್ಕಿ
ಮಕ್ಕಳ ಮಾಣಿಕ್ಯ [ಮ]ಲ್ಲಣ್ಣ ॥೨೨೭॥

ಹೆತ್ತ ತಾಯೆ ನಿಮ್ಮ ಪುರುಷ ಕೊಂಡಕೆ ಬಿದ್ದ ನಾ-
ನಿತ್ತ ಭಾಷೆಗೆ ತಪ್ಪಿಲ್ಲ
ಸುತ್ತವರಿದು ಕೂಗಿ ಹೇಳಿ ಕುಮಾರ ಮಲ್ಲ
ಮ[ತ್ತಳಲಿ]ದ ದುಃಖದಲಿ ॥೨೨೮॥

ಚಿಕ್ಕಮ್ಮ ಸಿರುಮೇಂದ್ರ ನನ್ನೊಡಹುಟ್ಟಿದವರೆಲ್ಲ
ದಿಕ್ಕುಗೇಡಿಯ ಮಾಡಿ ನನ್ನ

ಒಕ್ಕಲ ಹೋಗಿ ಎನುತ ದುಃಖ
. . . . . .ನುಡಿದನು ॥೨೨೯॥

ಉರಿಯನು ಕವಿವ ತಂದೆಯ ತಲೆಯನು ನೋಡಿ
ನರಸಿಂಹರಾಯನ ದಂಡು ಕಡಿ-
ವರೆ ಎನಗೆ ಅಪ್ಪಣೆ ಸಿರುಮಾ ಎಂದು
[ತಿ]ರುಗಿದ ಕದನಕೆ ಮಲ್ಲ ॥೨೩೦॥

ತಂದೆ ತಾಯಳಿದರು ಬಂಧು ಜನರು ಸಹ
ಒಂದಾಗಿ ಅಳಿದರೆಂದೆನುತ
ಸಂದೇಹ ಬಿಟ್ಟಿತೆನುತ ಕೊಮಾರ
ನೆಂದಲ್ಲಿಗೆ ಸಂಧಿ ಸಂಪೂರ್ಣ[೩೧] ॥೨೩೧॥

❖❖

೩೦+ ಅಂತು ಸಂಧಿ ೫ಕ್ಕೆ ಪದನು ೧೦೨೫ಕ್ಕಂ ಮಂಗಳಮಹಾಶ್ರೀ (ಶಿ), + ಅಂತು ಸಂಧಿ ೫ಕಂ ಪದನು ೮೩೯ಕ್ಕಂ ಮಂಗಳ ಮಹಾಶ್ರೀ(ಹ), ೮೩೯ ಕಂ ಮಂಗಳಮಹಾಶ್ರೀ (ಹ).

ಸಂಧಿ : ಆರು

೧ಕೃತ[ಯು]ಗ ದ್ವಾಪರ ಕಲಿಯುಗಕೆ ಶತಪತ್ರ[ಮಿತ್ರ]
ಸುತನುಪಮಿಸಿದನು ಸಮರಸಾಹಸಕೆ
ಸತಿ ಪತಿ ತನುಜನನುಜರ . . . . ಜೋಕೆ
ಮತನದಿ ಬೂದಿಹಾಳ ಸಿರುಮನ ಮಗ[ಮ]ಲ್ಲ
ಕಾ೨ದಿ೨ರಿದಿ[ದಿ]ರಾದ ಧುರಕೆ ಶಿವ ॥೧॥

ನೆಲದಲ್ಲಿ ಬಲ. . . .ತ ಕೈದುವ ಜಡಿದು
ಫಲಿರೆಂಬ ಗೆಜ್ಜೆಯ ಹರಿಗೆಯ ಜಾಡಿಸಿ ಪಿಡಿದು
ಬಲು ಬಿರುದಿನ ಬೂ. . . .ಸರ..ಲಿ ನಡದು
ಎಲೆಲೊ ತೊಲಗು ತೊಲಗು ತೊಲಗೆನುತಲಿ
ಸಿರುಮನ ಕುಮಾರ ಮಲ್ಲಣ್ಣ ಧು..ವ
ಭರವ ಕಾಣುತಲಿ ಪ್ರಧಾನ ಮಲ್ಲರಸ ॥೨॥

ಬೆರೆಸಿದನತಿ ಹಿತವನು ತಳವಾರ ಲಿಂಗರಸ
ಸಿರುಮನ ಮನ ಮಿ. .ಕೊನೆ. .ದೆ. . ಹರುಷ
ಧೀರುರೆ ಧೀರುರೆ ಮಝು ಭಾಪುರೆಯೆನುತಲಿ
ನರಸಿಂಹಗೆ ನಿಂದ ಸರಸ ಶಿವಲೀಲೆ ॥೩॥

೧+ ಶ್ರೀ ಶಾರದಾ ಗುರುಭ್ಯೋನಮಃ। ಶ್ರೀ ವೀರಭದ್ರದೇವರ ಶ್ರೀ ಪಾದವೇ ಗತಿ ಮತಿ। ರಾಗ ಆಹರಿ। ಪದನು (ಹ), 'ಹ' ಪ್ರತಿಯ ಮಾರ್ಜಿನ್ನಿನಲ್ಲಿ 'ಶಿವಲೀಲೆ' ಎಂದು ಬರೆಯಲಾಗಿದೆ (ಸಂ). 'ಹ' ಪ್ರತಿಯಲ್ಲಿ ೫ನೆಯ ಸಂಧಿಯು ಗರಿಯೊಂದರ ಬೆನ್ನಿನ ಕೊನೆಗೆ ಮುಗಿಯುತ್ತಲೇ ಮುಂದುವರಿಯುವ ಹೊಸ ಗರಿಯ ಆರಂಭದಿಂದಲೇ ಇಲ್ಲಿಯ ಇಪ್ಪತ್ತೆರಡುವರೆ ಪದ್ಯಗಳನ್ನು (ಛಂದ?) ಬರೆಯಲಾಗಿದೆ. ಇವು ಕೃತಿಯ ಭಾಗವೋ, ಈ ಕಾಳಗವನ್ನು ಕುರಿತು ಬರೆದ ಅನ್ಯಕೃತ ಪದ್ಯಗಳೋ ಸ್ಪಷ್ಟವಾಗುವುದಿಲ್ಲ (ಸಂ), ೨–೨ ದು (ಶಿ, ಹ).

ಕುಂಜ[ರ ಕೊಲ್ಲು]ವ ಕೇಸರಿಯೆಂಬಂತೆ
ಮಂಜಿನ ಮಡುವನು ಕಲಕುವವನ ಬಗೆಯಂತೆ
ಕಂಜಸಖನ ಫಣಿಯಟ್ಟಿ ಹೊಯ್ದ. . . .ತೆ
ರಂಜಿಸಿ ಕುಮಾರಮಲ್ಲ ಹೊಕ್ಕಿರಿದನು ನರಸಿಂಹನ ದಳವಂತೆ ॥೪॥

ಝಲ್ಲಿಯ ಸಬಳದ ತೆಲುಗರು ಹರಿಗೆ ಬಿಲ್ಲವರು
ಎ[ಲ್ಲ]ರೊಂದಾಗಿ ಮೋಹರಿಸಿ ರಾಯ ರಾಹುತರು
ಗೊಲ್ಲ ಮಲ್ಲ ಕಲ್ಲರಸ ಲಿಂಗರಸನೆಂಬವರು
ನಿಲ್ಲದೆ ಹೊಯ್ದೆಲ್ಲರ ಬೇಗ ಸಮರದಿ ಕಲ್ಲ. . .ಕ ನಿಂದವರು ॥೫॥

ಅಡ್ಡ ಹುಯ್ದು ಮೊನೆಯಲಗಿಲಿರಿದು ಲಾಗಿಸುತ
ಒಡ್ಡಿ ಕಾದು ಕಲ್ಲರಸ ಕೈದುವ . . . .
ದೊಡ್ಡ ದೊಡ್ಡ ರಾಹುತರ ಕಡಿದು ಮರ್ದಿಸುತ
ಜಡ್ಡು ಕೊಮಾರರ ಗಂಡ ಮಲ್ಲ ನೋಡೆಂದು ಕೂಗಿ. . .ಸುತಾ ॥೬॥

ಮತ್ತಗಜ ಕುಂಭಸ್ಥಳ ಶುಂಡಿಲಗಳನು
ಕತ್ತರಿಸಿ ಬೀಳ ಹೊಯ್ದನು
ನೆಟ್ಟೆಲುಗಳು. . . . .ನಾಲ್ದಸೆಯಲೋಡುವ ಮಂದಿಗಳನು
ತತ್ತನೆದರಿಯುತ ಮಲ್ಲಭೂಪ ನೋಡೆಂದು
ಕಲ್ಲರಸನು ಲಿಂಗರಸ. . .ದ ಹೆಜ್ಜೆಯ ಕೀಳದೆ ಮಲ್ಲನೆಡಬಲದಿ ॥೭॥

ಅಟ್ಟಿ ಸಬಳಿಗರೊತ್ತಿರಿಯಲು ತೆಲುಗ. . . ಭರದಿ
ಕಟ್ಟಿದ ಕಠಾರವ . . . .ನಡೆದ ಸಡಗರದಿ
ದಿಟ್ಟ ಕಲ್ಲರಸ ಲಿಂಗರಸ ಮುಂದಲೆಗಳ
ಪಡಿವಿಡಿದಿರಿದು ಸಂಗರದಿ ಶಿವ ॥೮॥

ಸಂಧಿ[ಸಿ ಕಲ್ಲ]ರಸ ಲಿಂಗರಸನೆಂಬವರು
ಬಂದು ಕೊಮಾರ ಮಲ್ಲನೆಡಬಲದಲಿ ಬೀಳಲವರು
ಕಣ್ಣೊಳಲಾಗಿ ನೋಡುತ ನರಸಿಂಹನೆಕ್ಕಟಿಗರು
ಹಿಂದು ಮುಂದೆಣಿಸದೆ ಮನ್ನೆ ಮಾರ್ಬಲವೆಲ್ಲ
ಒಂದೆ ಮೋಹರದೊಳೇರಿದರು ಶಿವ ॥೯॥

ಹೊಸ ಭ . . . .ಗೆನುಂ ಮಯ್ಯೊಳು ಪಕವು ಮೂಡಿ
ಮಿಸುಕುವ ಅಗ್ನಿಗೆ ಸಹಬಲವಾಗಿನ್ನು ಕೂಡಿ
ಹಸಿದ ಹುಲ್ಲೆಯಂತೆ ಹೊಂಚ ನಡವ. . . . ವದೊಂದು ಮೋಡಿ
ಮಸೆದಲಗವ ಹರಿಗೆಯ ಪಿಡಿದಾಡುವ ಕೊಮಾರಮಲ್ಲನ ನೋಡಿ ಶಿವ ॥೧೦॥

ಏಳು ಸ. . . .ನಿ ಜಗವ ನುಂಗುವಂತೆ
ಕಾಳೀಶ ಉರಿಹೊಗೆ ನೆಗೆದು ಗಗನಕೆತ್ತುವಂತೆ
ದಾಳಿಟ್ಟು ಬಿಟ್ಟು ಗಾಳಿ ಬರಸಿಡಿಲೆರಗಿ...ವ ನರಸಿಂಹನವರೆರಗಿದಲ್ಲಿ
ಶಿವಸಭೆ ಕಣ್ಮುಚ್ಚುವಂತೆ ಶಿವ ॥೧೧॥

ಹೊಕ್ಕು ತರಿದು ಜವನಿಹ ಬಾಣಸಿಗನಂದಾದಲ್ಲಿ
ಲೆಕ್ಕ. . . ದೆ ಕಡಿದೊಡೆನಲಸಿದ ಕಂಡವನು
ಹಿಕ್ಕಿದ ಹೆಕ್ಕೊಡಲುಗಳ ಬಗಿದು ಕರುಳುವನು
ಇಕ್ಕಿದನೆಂಟುದೆಸೆಯ ತಕೆ ಬಲು ವಿಕ್ರಮ ಕುಮಾರ ಮಲ್ಲುಗನು ॥೧೨॥

ಹರಿದು ಹಬ್ಬು ಮುಗಿಲೊಳಗಣ ಬಳ್ಳಿ ಮಿಂಚಿನಂತೆ
ಸರಸದಿ. . . .ಸಿರಿವನಿತೆ ಮೋಹಿಸಲಿ
ಉರುಳಗಡಿದ ಕರಿ ತುರಗ ಕಾಲಾಳುವೆಂದೆನಲಿ
ಧರೆಯೊಳು ಬೂದಿಹಾಳ ಸಿರುಮನ . . . . ಮಲ್ಲ
ನರಸಿಂಹರಾಯನಿದಿರಿನಲಿ ಶಿವಲೀಲೆ ॥೧೩॥

ಕಡೆಗಣ್ಣು ಕೆಂಪೇರಿ ಮನದಲ್ಲಿ ಮುಂಕೊಂಡು
ನಿಡುಹುಬ್ಬು ಕುಡಿಮೀಸೆ ಕುಣಿದವು ಕಾಹುರಗೊಂಡು
ನಡೆದು ಹೊಯ್ದಿ ರಣಭೂಮಿಯೊಳಗೆ ಪುಟಿಚೆಂಡು
ಮ. . . .ನಿಯದೆ ಮಲ್ಲ ವೈರಿಯ ತಾಗಿದ
ದೃಢಗಲಿ ವಜ್ರದ ಗುಂಡೊ ಶಿವ ॥೧೪॥

ದಿಂಡುಹೊಯ್ದು ಮುಂಡ. . . . ಜ್ಜೆಯ ತೊಲಗು
ಮಂಡೆ ಮಯ್ಯೊಳು ಸು ತಾಳಿಸಿದನು ಕೈಯಲಾಗ
ಕಂಡವರೆದೆ ಬಿಲ್ಲಿ. . . .ಡುವ ವಿಲಾಗ
ತಾಂಡಕ್ಕೆ ಹೆದರದೆ ಹೆಬ್ಬಲದೊಳು ಮಲ್ಲ
ಗಂಡೆಬ್ಬಿಸಿದನುಗಲಾಗ ॥೧೫॥

ಬಿಲ್ಲನು . . . .ಯಲು. . . .ಯವರು ಖೋಯೆನುತ
ಬಲ್ಲೆದಲಿರಿಯಿರಿ ಕಡಿ ಬರುವ ರಾಹುತರನೆಂದೆನುತ
ನಿಲ್ಲದೆ ಗದೆಯಲಿರಿವಿಸುಡಿ. . . .ಲ್ಲಲೆಂದೆನುತ
ಎಲ್ಲರು ಕಡಿ ಕಡಿ ಬಿಡಬೇಡವೆನುತಲಿ
ಗೊಲ್ಲ ಮಲ್ಲನನೆಂದೆನುತ ॥೧೬॥

ಕದಲಗೆ . . . .ಯ ಹೂಡಿದ ಹರಿಗೆಯ ಮರೆಯ
ಹದುಳದೆ ಬಂದೊಬ್ಬಸ ಬಳಿಗ ಮಲ್ಲನನಿರಿಯಾ
ಎದೆಯಲಿ ತಾಕಿ ಬೆನ್ನಿಲಿ . . . .ಂದುದವನರಿಯಾ
ಇದಿರಾಂತ ಕರಿಶಿರಕೆರಗುವ ಸಿಂಹ
ಹೆದರದೆ ನಿಂದ ಹೆಮ್ಮರೆಯ ಶಿವ ॥೧೭॥

ಬಿಟ್ಟ ಕಣ್ಣಿನ ಬಿಂಕ ಬಿಗುಹುಗುಂದದ . . . .
ನೆಟ್ಟಲೆ ಹಳಚದೆ ನೋಡುವ ನೋಟ ಮೋಸವೆಂದು
ಅಟ್ಟಿ ತುಡುಕಿ ಬಂದು ಹಿಡಿದು ಹೊಯ್ಯುವನಿವನೆಂದು . . . .ದೆ
ನರಸಿಂಹನವರೆಲ್ಲ ॥೧೮॥

ಕಟ್ಟ ಕಡೆಗೆ ಬಂದು ನಿಂದು
ಕಾದಿದ ಗಾಯದ . . . .ಲಿ ಸೊರಗದೆ ಕೂಗಿ
ಆದಿ ರುದ್ರನವತಾರವು ನೋಡಲಿದಿರಾಗಿ
ಮೇದಿನಿಗೊರಗದೆ ಕಾಯವಲತು ಜೀವವಾಗಿ. . . .
ಮುದೇವರ ಪಾದಗಳನು ನೆನೆಯುತ
ಆಗಮವಿಡಿದೆದ್ದ ತ್ಯಾಗಿ ಶಿವ ॥೧೯॥

ಅದೆ ಬಂದ ಬಂದನೆನುತ ತಮತಮಗೆಲ್ಲ
ಕುದುರೆ ರಾಹುತ . . . .ಜೋಡು ಹರಿಗೆ ಸಬಳ ಕೈಯ್ಯವಿಲ್ಲ
ಉದುರಿಸಿ ಬಾಡುತ ಹಮ್ಮೈಸುತ ಬೀಳುತೆಲ್ಲ
ಅದ ಕಂಡು ನಗೆಮುಖ ಕಳೆಗುಂದದೆ ರಣದೊಳಿರ್ದನು ಗೊಲ್ಲಮಲ್ಲ ಶಿವ ॥೨೦॥

ಉರುವಿನ ಗಾಯ ತಾಗಲು ಮನದಲಿ ತಾ ಕಂಡು
ಉರಿ . . . ದು ಆ ಕ್ಷಣ ತನ್ನ ವಂಶದ ಹಿಂಡು

ಭರದಿಂದ ಬಿದಿರ್ದ ಮಂತ್ರಿಗಳನೆ ಎತ್ತಿಕೊಂಡು
ಎರಗಿಬಿದ್ನು . . . ಮಲ್ಲನು ನೆರೆಗಲಿ ವಜ್ರದ ಗುಂಡು ॥೨೧॥[೩]

. . . .
. . . .
. . . .[೪][ಶೂ]ದ್ರಕ ವೀರಗೆ
ಮಿಗಿಲಾಗಬಹುದೆಂದು ನುಡಿದ ॥೨೨॥

ಕಡಿ ಎಂದು ನರಸಿಂಗರಾಯನ ದಂಡನು
ಕಡುಗಲಿ ಮನ್ಯೆ ಮನ್ಯೆಯರು
ಬಿಡ . . . .ರಾಸಿಯನೊಟ್ಟಿ ಮಲ್ಲೇಂದ್ರ
ನುಡಿದು ಪಚಾರಿಸಿ ಕೂಗಿದನು ॥೨೩॥

ಬೊಬ್ಬಿರಿವುತ ಕೂಗಿ ಹೇಳಿದ ಮಲ್ಲಣ್ಣ
ನೊಬ್ಬನಿವನೆ ಜಗದಲ್ಲಿ
ಕೊಬ್ಬಿದ ನರಸಿಂಹನ ಬರಹೇಳೆಂದು
ಸರ್ಬದಳದೊಳು ಮೂದಲಿಸೆ ॥೨೪॥

ಕ[ವಿ]ದರು ಆನೆ ಕುದುರೆ ಕಾಲಾಳೆಲ್ಲ
ಇವ ಸಿಕ್ಕಿದ ಹಿಡಿ ಎನುತ
ಕಿವಿಯಲಿ ಕೇಳಿ ಈ ಮಾತನು ಮಲ್ಲಣ್ಣ
ಅವರ ನೋಡಿದ ಕೋಪದಲಿ ॥೨೫॥

---

೩. ಕಥೆಯ ಏಕಮುಖತೆಗೆ ಅಡ್ಡಿಯಾಗುವುದರಿಂದ 'ಹ' ಪ್ರತಿಯಲ್ಲಿಯ ಈ ಪದ್ಯಗಳನ್ನು ಅಡಿಯಲ್ಲಿ ಕೊಟ್ಟಿದ್ದೇವೆ (ಸಂ).
ಆ ವೇಳೆಯಲಿ ಈಶ್ವರ ಪಾರ್ವತಿಯನು ಕರೆಸಿ
ಯೋಚಿಸಿದನು ತಾನು ಪ್ರಮಥಗಣಂಗಳನು ವೆರಸಿ
ಭಾಸುರತೇಜ ಪ್ರಕಾಶ ಪುಹ್ಯೆಕ . . . . ನೆತ್ತರಸಿ
ದೇಶಕಗ್ಗಳೆಯನಾಗಬೇಕೆಂದು ಗೊಲ್ಲ . . . . ಸಿ ಹೂವಿನ ಮಳೆಗರಸಿ ॥೨೨॥

ಆ ವೇಳೆಯೊಳಜ ಹರಿ ಇಂದ್ರರುದ್ರರು ಸಹಿತ
ಪಾವಕಾಕ್ಷ ಪಾರ್ವತಿ ಗಂಗೆ . . . .

೪. ೬ನೆಯ ಸಂಧಿಗೆ ಸಂಬಂಧಿಸಿದ ಇಲ್ಲಿಯ ವರೆಗಿನ ಪದ್ಯಗಳನ್ನೊಳಗೊಂಡ ಗರಿಗಳು 'ಶಿ' ಪ್ರತಿಯಲ್ಲಿ ಇಲ್ಲ. ಅಲ್ಲಿ ಈ ಪದ್ಯಕ್ಕೆ ೨೧ ಅಂಕಿ ಕೊಡಲಾಗಿದೆ. ಆಮೇಲೆ ೨೨, ೨೩ ಹೀಗೆ ಮುಂದುವರಿಯುತ್ತದೆ (ಸಂ).

ಕಡೆಗಣ್ಣ ಕೆಂಪೇರಿ ಮನದಲ್ಲಿ ರೋಷದಿ
ನಿಡುಹುಬ್ಬು ಕುಡಿಮೀಸೆ ಕುಣಿಯೆ
ಕಡಿದನು ನರಸಿಂಗರಾಯನ ಪರಿವಾರವ
ಪೊಡವಿಪ ಮಲ್ಲನೃಪಾಲ ॥೨೬॥

ಕಡಿದನು ತಲೆಗಳ ಇಡಿದನು ಮತ್ತೆ
ಓಡಿಬಂದನು ಮಂತ್ರಿಗಳ
ನೋಡಿದ ಸುತ್ತ ಬಳಸಿ ಸಂಗ್ರಾಮಕೆ
ಪಾಡು . . . . ತಿರುಗಿದನು ॥೨೭॥

ಕಾಣುತ ನರಸಿಂಹರಾಯನ ದಂಡೆಲ್ಲ
ಕೇಣವಿಲ್ಲದೆ ನಡೆತಂದು
ಹೂಣಲಿರಿದು ಸಿಕ್ಕಿದನಿರನಿರಿ ಎಂದು
ಮಾಣದೆ ಆರ್ಭಟಿಸುತಲಿ ॥೨೮॥

ಏಳು ಸಮುದ್ರವ ಜಗ ನುಂಗವಂದದಿ
ಕಾಳಗತ್ತಲೆ ಕವಿದಂತೆ
ಸಾಳುವ ನರಸಿಂಹರವರೇರಿದಡೆ ಕೆಂ
ಧೂಳ ಮುಸುಕಿತಂಬರದಿ ॥೨೯॥

ಬಿಲ್ಲವರ ಕರ [ಸೀಳೋ] ಹರಿಗೆಯವರ ಹೊಯ್
ಬಲ್ಲೆದಲಿ ಕಡಿ ಎನುತ
ನಿಲ್ಲದೆ ಕಡಿಯಲಿ ತಿವಿ ಸುಡು ಪೆಟಲಲಿ
ಗೊಲ್ಲನ ಮಗನನೆಂದೆನುತ ॥೩೦॥

ಮುತ್ತಿದ ನರಸಿಂಹ[ರಾ}ಯನ ದಂಡನು
ಅರ್ತಿಲಿ ನೋಡಿ ಮಲ್ಲಣ್ಣ
ಮತ್ತೆ ಮಂತ್ರಿಗಳು ಬಿಡದೆ ಸವರಿ
ಒತ್ತಿ ಕಡಿದ ರಣದೊಳಗೆ ॥೩೧॥

ಎಡೆಮಾಡಿ ಮರುಳವಿಂಡುವ ತಣಿಸಿದ
ಪೊಡವಿಪ ಮಲ್ಲನೃಪಾಲ

ಕಡಿವೆಡೆವಿಡದೆ ನೆತ್ತರೊಗಲು ವೆಗ್ಗಳ
ಬಿಡದೆ ಆಹುತಿ ಭೂತಗಳಿಗೆ ॥೩೨॥

ಬರವೇಳೊ ಸಾಳುವ ನರಸಿಂಹರಾಯನ
ಹಿರಿಯರ ಕಾಲದ ಕೊಲೆಯ
ಪರಿಹರಿಸುವೆ ಕಾದಿ ತನ್ನ ಹೊಟ್ಟೆಯ ಸೀಳಿ
ಕರುಳ ಕಾಲಿಗೆ ಕಟ್ಟಿ ಮೆರೆವೆ ॥೩೩॥

ಎಂದ ಮಾತಿಗೆ ನರಸಿಂಹ ಕೋಪವ ತಾ[ಳೆ] ದೂರ
ದಿಂದಲೀಶ್ವರನಾಯ್ಕ ಭರ
ದಿಂದ ಸಬಳವ ಪಿಡಿದುಕೊಂಡು ಮಲ್ಲನ
ಉರವ ತಿವಿದನಾಕ್ಷಣದಿ ॥೩೪॥

ಇರಿದ ಘಾಯಕೆ ಕರುಳ್ಸುರಿಯೆ ಮಲ್ಲೇಂದ್ರನು
ಕರದ ಬಲ್ಲೆಹವನು ನೆಗಹಿ
ನರಸಿಂಹಗೆ ಹೇಳೆಂದು ಹೊಯ್ದನು
ಧುರದಿ ಈಶ್ವರನಾಯಕನ ॥೩೫॥

ಅತ್ತ ಗಾಯದಿ ಈಶ್ವರಿನಾಯ್ಕ ತಿರುಗಲು
ಇತ್ತ ಘಾಯದಿ ಮಲ್ಲೇಂದ್ರ
ಒತ್ತರಿಸುತ ರಕ್ತವು ತೊಟ್ಟಿಡುತ
ಮತ್ತೆ ಬಂದನು ಮಂತ್ರಿ ಎಡೆಗೆ ॥೩೬॥

ತಾಕಿದ ಘಾಯದಿ ಸೊಕ್ಕದೆ ಸೊರಗದೆ
ಕೂಗುತ ಕುಮಾರ ಮಲ್ಲ
ಕೂಗುತ ಕಂಡೆವ ಹೊರಜಾಳಿಗೆ
ಬೇಗದಿ ಮಂತ್ರಿಗಳೆಡೆಗೆ ॥೩೭॥

ಗಾಯ ಸೊಕ್ಕಿಲಿ ಕುಮಾರ ಮಲ್ಲಣ್ಣನು
ಖೋ ಎಂದು ಕೂಗಿ ಬೊಬ್ಬಿರಿದ
ಸಾಳುವ ನರಸಿಂಗರಾಯನ ಬರಹೇಳೊ
ಕಾಳಗಕೆನ್ನೊಡನೆನುತ ॥೩೮॥

ದಂಡಿನ ಮರೆಹೊಕ್ಕು ಬದುಕಿದನಲ್ಲದೆ
ಕಂಡರೆ ನಿಮ್ಮ ನರಸಿಂಹನ
ಗುಂಡಿಗೆ ಸೀಳಿ ರಕ್ತವ ಕುಡಿವೆ ಮರುಳ್ಗಳಿಗೆ
ರುಂಡಮಾಲೆಯ ಹಾಕುವೆನು ॥೩೯॥

ಗಂಡನು ನಿಮ್ಮ ನರಸಿಂಹನ ಪೆತ್ತವನ
ಗುಂಡರಾಜನ ಗಂಡನೆಂದು
ಕೊಂಡಾಡಿಸಿಕೊಂಡವ ನಾನೀಗ ಎಂದು ಪ್ರ
ಚಂಡ ಸಿರುಮನ ಕುಮಾರ ॥೪೦॥

ಹೀಗಾಡಿಕೊಳ್ವನೆನುತ ಮಲ್ಲಣ್ಣನು
ಬೇಗದಿ ನಿಮ್ಮ ನರಸಿಂಹಗೆ
ಹೋಗಿ ಹೇಳಿರೊ ನನ್ನೊಳು ಕಾದಲೆನುತಲಿ
ಕೂಗಿದ ಕೊಮಾರ ಮಲ್ಲ ॥೪೧॥

ಸಲುವದು ನಿನಗೀ ಬಿರಿದು ಮಾರ್ಬಲವಂತ
ಛಲದಂಕ ಮನ್ನೇರ ಗಂಡ
ಕುಲದೀಪ ಕೊಮಾರ ಮಲ್ಲ ನೀನಹುದೆಂದು
ಬಲವೆಲ್ಲ ಕೊಂಡಾಡಿದರು ॥೪೨॥

ಭೀಮನೊ ಅರ್ಜುನನೊ ಕರ್ಣನೊ ಇವ ರಘು
ರಾಮನೊ ರಾವಳನೊ
ಭೂಮಿಯೊಳಗೆ ಸರಿಗಾಣೆವೆಂದೆನುತಲಿ
ಆ ಮಹಾಬಲವೆಲ್ಲ ಹೊಗಳೆ ॥೪೩॥

ಹೋ ಎಂದು ಸೊಕ್ಕಿಲಿ ಕುಮಾರ ಮಲ್ಲಣ್ಣ
ಕಾಯವ ಮರೆದನಾಕ್ಷಣದಿ
ಆಯದಿ ಎಚ್ಚತ್ತು ಕಣ್ದೆರೆದನು
ಹಾಯೆನುತೆದ್ದು ನಡೆದನು ॥೪೪॥

ಅದೆ ಬಂದ ಕುಮಾರ ಮಲ್ಲ ಎನುತ ದಂಡು
ಬೆದರಿ ತಮ್ಮೊಳು ಕಡಿದಾಡಿ

ಮದದಾನೆ ಕುದುರೆ ಕಾಲೊಳು ತುಳಿದು ಮಂದಿ
ಮಡಿದವು ತೊಂಭತ್ತು ಸಾಸಿರವು ॥೪೫॥

ಬೆರಗಾದನು ನರಸಿಂಹ ಸಾಹಸಕೆಲ್ಲ
ಗರುವ ಈ ಕುಮಾರ ಮಲ್ಲ
ಕುರುಹನು ನಾನರಿಯೆ ಅವನ ತೋರೆನುತಲಿ
ನರಸಿಂಹ ಬಂದು ನೋಡಿದರೆ ॥೪೬॥

[ದ]ಕ್ಕಿಸಿಕೊಂಡ ನನ್ನ ಗಂಡನೆಂಬುವದನು
ದಿಕ್ಕಿನೊಳಗೆ ಗೊಲ್ಲ ಸಿರುಮ
ಸಿಕ್ಕಿದುದಿನ್ನೆಳ್ಳನಿತಿಲ್ಲ ಬಿರಿದೆಂದು ರಾಯ
ಅಕ್ಕರಿಂದಲಿ [ನುಡಿದನು] ॥೪೭॥

ಆನೆ ಕುದುರೆ ಮಂದಿ ಆಶ್ಚರ್ಯವನೆ ಕಂಡು
ಏನು ಗಳಿಸಿ ಫಲವೇನು?
ಭಾನುಚಂದ್ರರುಳ್ಳನಕ ಕೀರ್ತಿಯ
ತಾನು ರಾಜ್ಯದಲ್ಲಿ ಪಡೆದ ॥೪೮॥

. . . . . .ಮಲ್ಲಭೂಪ ಗಾಯ ಸೊಕ್ಕಿನಲ್ಲಿ
ಋೋ ಎಂದು ಕೂಗಿ ಬೊಬ್ಬಿರಿದು
ಆ ವೇಳ್ಯೆಯದಿ ಪ್ರಧಾನನು ಹಿಡಿ
ದಾಯುಧಗಳು ಬಿದ್ದಿರಲು ॥೪೯॥

ಕತ್ತಿ ಕ . . . .ಕಿ ಜಮದಾಡೆಯು
ಅತ್ತಿತ್ತ ಬಂದು ಬಿದ್ದಿರಲು
ಮೊತ್ತದಿ ಬೇಗ ತೆಕ್ಕೊಂಡು ಮಲ್ಲಣ್ಣ
ಮತ್ತೆ ಪ್ರಧಾನರೊಡಗೂಡಿ ॥೫೦॥

ಸಾವಿಗೆ ಸಂಗಡವಾದಿರಿ ನೀವಿಬ್ಬರು
ಆಹ ಕಲ್ಲರಸ ಲಿಂಗರಸ
ನಾವು ಹೋಗುವೇಳೆ ಸಿರುಮ ದಾರಿಯ ನೋಳ್ಪ
ಆವಾಗ ಬಹರೆಂದೆನುತ ॥೫೧॥

ಒತ್ತರದ ಗಾಯವ ಕಂಡು ಮಲ್ಲಣ್ಣ
ಎತ್ತಿಕೊಂಡನು ಮಂತ್ರಿಗಳ
ಮತ್ತೆ ಕೊಂಡಕೆ ಹೊಂದಿ ಖೋ ಎಂದು ಕೂಗುತ
ಮೃತ್ಯುಂಜಯ ಜಯ ಎನುತ ॥೫೨॥

ತಂದೆ ತಾಯಿ ಅಣ್ಣ ತಮ್ಮ ಬಂಧುಗಳಿರ
ಅಂದು ನಿಮಗೆ ಕೊಟ್ಟಪ್ಪಣೆಗೆ
ಇಂದು ಕಲ್ಲರಸ ಲಿಂಗರಸ ನಾನು ಸಹವಾಗಿ
ಬಂದೆವೆನುತ ಧುಮುಕಿದನು ॥೫೩॥

ಕೊಂಡಕೆ ಬೀಳುವ ಕೊಮಾರ ಮಲ್ಲಣ್ಣನ
ಕೆಂಡಗಣ್ಣ ಪಿಡಿದೆತ್ತಿ
ಗಂಡುಗಳರಸನೆ ಬಾಳು ಬಾಳೆಂದು
ಮಂಡೆಯ ಪಿಡಿದಲುಗಿದನು ॥೫೪॥

ನೆರದು [೫][ಬಾನೊಳು][೫] ನಾರದ ಬ್ರಹ್ಮರುಷಿಗಳು
ಗರುಡ ತುಂಬುರ ಗಣಕುಲವು
ಸಿರುಮನ ಮಗ ಮಲ್ಲನ ಸಾಹಸಕೆ ಮೆಚ್ಚಿ
ಸುರಿದರು ಹೂವಿನ ಮಳೆಯ ॥೫೫॥

ಆ ವೇಳೆಯದಿ ಈಶ್ವರ ಪಾರ್ವತಿಯ ಕರೆಸಿ
ಯೋಚಿಸಿದನು ಪ್ರಮಥಗಣರೊಡನೆ
ದೇಶಕಗ್ಗಳೆಯಾಗಬೇಕಂದು ಗೊಲ್ಲಗೆ
ಸೂಸಿ ಹೂವಿನ ಮಳೆಗರೆಸಿ ॥೫೬॥

ನಿಮ್ಮ ವೀರಶೈವಕೆ ನಾ ಮೆಚ್ಚಿದೆ
ಗಮ್ಮನೆ ವರವ ಬೇಡೆನಲು
ತಮ್ಮ ತಾಯಿ ಸತಿ ಸುತರುಗಳನು
ನಿಮ್ಮ ಪಾದಕೆ ಕೊಂಡೊಯ್ಯೋದೆ ॥೫೭॥

೫–೫ ಬಾರಜ (ಶಿ).

ಹಿರಿಯ ಸೋಮಣ್ಣು ಹಾರುವ ಕಲ್ಲರಸ
ಕಿರಿಯ ವೀರಣ್ಣ ಲಿಂಗರಸ
ಧುರಧೀರ ಕಾಚನು ಹೆಮ್ಮಕ್ಕಳು ಸಹ
ಹರಗಿರಿಗೊಯ್ಯಬೇಕೆಂದ ॥೫೮॥

[ವ]ಂದಿಸಿ ಬಿನ್ನಹ ಮಾಡೆ ಮಲ್ಲೇಂದ್ರನು
ಕೆಂಡಗಣ್ಣನ ಪಾದಕೆರಗಿ
ಪುಂಡರೀಕಾಕ್ಷನಮಿತ ಜಯ ಜಯ ಎಂದು
ದಿಂಡುಗೆಡದು ಹೊರಳಿದರು ॥೫೯॥

ಮಂಡೆಯ ಪಿಡಿದೆತ್ತಿ ಮಲ್ಲಭೂಪನ ತನ್ನ
ಮಂಡೆಯೊಳಿಹ ಗಂಗೆಯನು
ಕೊಂಡದೊಳಗೆ ತಳಿಯದ ಮುನ್ನ ಸಿರುಮಣ್ಣ
ದಿಂಡುಗೆಡದು ಹೊರಳಿದನು ॥೬೦॥

ಅಂದು ರಕ್ಕಸಿ ಸೌಂದರ್ಯನ ಮಾರ್ಬಲವ
ತಿಂದವರುಳಿದು ಬಂದಂತೆ
ಇಂದು ಕೊಂಡಕೆ ಬಿದ್ದವರೊಬ್ಬ[ರು]ಳಿಯದೆ
ಬಂದು ಪಾದಕೆರಗಿದರು ॥೬೧॥

ಸಿರುಮಣ್ಣನಾಯ್ಕನವರ ಸತಿಸುತೆಲ್ಲರ
ಪುರಕೊಯ್ವೆನೆಂದ ಈಶ್ವರನು
ಭರದಿಂದ ಪುಷ್ಪಕ ತರಿಸಿ ಸಿರುಮ ನಿನ್ನ
ವರ ಕುವರರು ಸಹಿತ ತೆರಳೆಂದ ॥೬೨॥

ಎಂದ ಮಾತನು ಕೇಳುತ ಸಿರುಮ ತನ್ನ
ಬಂಧು ಬಳಗ ಸಹವಾಗಿ
ಕಂದ ಮಲ್ಲ ಕಾಚ ಸೋಮಣ್ಣ ವೀರಣ್ಣ ಸಹ
ಬಂದು ಪುಷ್ಪಕವನೇರಿದರು ॥೬೩॥

ಉಘೆ ಉಘೆ ಎನುತ ಪುಷ್ಪ[ಕ] ಆಕಾಶಕೆ ನೆಗೆದು
ಧೂಪದ ಹೊಗೆಯಿಂದ

ಗಗನಕೆ ಜಿಗಿದು ಕೈಲಾಸವ ಹೊಕ್ಕರು
ಅಘಹರನ ಮನೆಗಾಗಿ ||೬೪||

ಬೂದಿಹಾಳ ಸಿರುಮಣ್ಣ ಬರುತಹನೆಂದು
ಇದಿರ ಬಂದರು ರಾಯರುಗಳು
ಮೇದಿನಿಪತಿ ಚೋಳ [ಚೇ]ರುಮ ಗುಂಡಬ್ರಹ್ಮ
ಕ್ರೋಧಿ ಚಿಕ್ಕಯ್ಯ ರಾಮಯ್ಯ ||೬೫||

ವೀರಶೈವದಿ ಮಡಿದ ರಾಯರುಗಳು
ಭೋರನೆ ಬಂದು ಸಿರುಮನ
ಹಾಯ್ದು ತಕ್ಕೈಸಿ ಕೈಲಾಗುಗಳಿಗೆಗೊಟ್ಟು
ಮಾದೇವನೆಡೆಗೈದಿದರು ||೬೬||

ಬಂದ ಸಿರುಮನಿಗೆ ಗಂಧವೀಳ್ಯವನಿತ್ತು
ಇಂದು ನಿನ್ನಯ ಭಕ್ತಿದೃಢಕೆ
ಒಂದಾರು ಭುಜವಾಗಿ ಮೆಚ್ಚಿದೆನೆಂದು ಶಿವ
ನಂದು ಶರಣರಿಗೆ ತೋರಿದರು ||೬೭||

ನೋಡಯ್ಯ ವೀರೇಶ ನೋಡಯ್ಯ ಭೃಂಗೀಶ
ನೋಡು ಷಣ್ಮುಖ ಗಜಮುಖನೆ
ನೋಡಯ್ಯ ನಂದೀಶ ನೋಡಯ್ಯ ಗುಹಗಣ
ನೋಡಿ ಸಿರುಮನ ಸಾಹಸವ ||೬೮||

ಎಂದು ಕೊಂಡಾಡಿ ಸಿರುಮನ ಸುತರು ಸಹ
ಚೆಂದದಿ ನಮ್ಮ ಬಾಗಿಲಲಿ
ಕುಂದದೆ ಸಾಯುಜ್ಯ ಪದವಿಯಾಗಿರಲೆಂದು
ನಿಂದಭಯವನಿತ್ತನಾಗ ||೬೯||

ಇತ್ತ ನರಸಿಂಹರಾಯ ಈಶ್ವರಿನಾಯಕ
ಹತ್ತಿ ನೋಡಲು ಅರಮನೆಯ
ಚಿತ್ರದ ಗೋಡೆಲ್ಲ ಕೆತ್ತಿ ಸುಟ್ಟಿರಲಾಗಿ
ಪೃಥ್ವಿಪತಿಯು ಬೆರಗಾದ ||೭೦||

ಮುತ್ತು ಮಾಣಿಕ ವಜ್ರ ವೈಢೂರ್ಯವ
ಅರ್ತಿಯ ಲಾಯದ ಕುದುರೆ
ಮೊತ್ತದ ಭಂಡಾರ ಬೊಕ್ಕಸಗಳನೆಲ್ಲ
ಹೊತ್ತಿ ಹೋದುದ ಕಂಡನಾಗ ॥೭೧॥

ಬೇಗದಿ ನರಸಿಂಹರಾಯ ಸಿರುಮೇಂದ್ರನ
ಅರಮನೆಯನು ಹೊಕ್ಕು ನೋಡಿ
ಇರುವೆ ಕಾಲಷ್ಟು ವಚ್ಚೆವಿಲ್ಲವು ಎಂದು
ಬೆರಗಾಗಿ ನರಸಿಂಹ ನುಡಿದ ॥೭೨॥

ಇವನೀಗ ವಿಕ್ರಮನೃಪ ಸಿರುಮೇಂದ್ರನು
ಇವನಿಗೆ ಸಲುವದು ಬಿರಿದು
ಇವನು ಹೆಣಗಿ ಕಪ್ಪವ ಕೊಡದಿಹುದೆಂದು
ವಿವರಿಸಿದನು ದೊರೆಗಳಿಗೆ ॥೭೩॥

ಇವನು ಪೂರ್ವದಲಿ ಈಶ್ವರ ನಿಜಭಕ್ತನು
ಇವಗೆ ಸಲುವುದು ಸಾಯುಜ್ಯ
[ಭು]ವನವರಿಯೆ ಕೈವಲ್ಯವಾಯ್ತೆಂದು
ಅವನೀಶ ನಮೋ ನಮೋ ಎಂದ ॥೭೪॥

ಎಂದಿಗೆ ಮುಂದರಿಯದೆ ಈಶಭಕ್ತನ ನೋಯಿಸದೆ
ಎಂದೆಗೆ ಕಳೆವೆನೀ ಭವವ [ಎ]ಂದು
ಈಶ್ವರಿನಾಯ್ಕಗೆ ನರಸಿಂಹನು
ನೊಂದು ಮನದಿ ಮರುಗಿದನು ॥೭೫॥

ಈಶಭಕ್ತನ ವೀರಶೈವದಿ ಮಡುಹಿದೆ
ಇನ್ನೇನು ಸುಖದ ಪಾತಕನೊ
ಕಾಶಿ ಕೇತಾರ ಕು[ರು]ಕ್ಷೇತ್ರದಲಿ ನಮ್ಮ
ದೋಷವ ಪರಿಹರಿಸುವೆನು ॥೭೬॥

ಇವನೀಗ ಈಶ್ವರನ ಪೂಜೆ ಮಾಡಿದ ಭಕ್ತ
ಇವನೀಗ ವೀರಶೈದವನು

ಇವನಿಗೆ ಸಲುವುದು ಕೈವಲ್ಯಪದವಿಯು
ಭುವ[ನೇ]ಶ ತಾ ಮರುಗಿದನು ॥೭೭॥

ಮೇದಿನಿಪತಿಗಾಗ ಈಶ್ವರನಾಯಕನೆಂದ
ಆದಿಲಿಂಗವ ನಿರ್ಮಿಸಿಯೆ
ಗೋದಾನ ಕನ್ಯಾದಾನ ಭೂದಾನಗಳಿಂದಲಿ
ಸಾಧಿಸಿಕೊಂಬ ಮುಕ್ತಿಯನು ॥೭೮॥

ಹರುಷದಲಾ ಮಾತ ಕೇಳುತ ನರಸಿಂಹ
ಕರೆಸಿದ ಕಾಮಾಟದವರ
ಭರದಿಂದ ಕೊಂಡವ ಹೂಣಿಸದರ ಮೇಲೆ
ಗಿರಿ ಗೋಪುರ ಕಟ್ಟಿಸಿದನು ॥೭೯॥

ಆ ಗೋಪುರದೊಳು ಆದಿಲಿಂಗವನಿಟ್ಟು
ನಾಗಭೂಷಣ ಜಯ ಎನುತ
ಬೇಗ ಠಾಣ್ಯಕೆ ರುದ್ರರಾಜನೆಂಬನನಿಟ್ಟು
ಸಾಗಿದ ವಿಜಯನಗರಕೆ ॥೮೦॥

ಕಾಳೆ ಹೆಗ್ಗಾಳೆ ಡೊಳ್ಳು ಮೃತಾಪವು
ಸೂಳೈಸಲು ಭೇರಿಗಳು
ಪಾಳೆಯವನು ಬಿಟ್ಟಲ್ಲಿ ಬಿಡದೆ ಬಂದ
ಸಾಳುವ ನರಸಿಂಗರಾಯ ॥೮೧॥

ಬಂದು ಪಂಪಾಲಿಂಗಗೊಂದನೆಯನು ಮಾಡಿ
ಚಂದ್ರಶೇಖರ ಗತಿ ಎನುತ
ಕುಂದದೆ ನರಸಿಂಹ ವಿಜಯನಗರದೊಳು
ನಿಂದಲ್ಲಿ ಸಂಧಿ ಪೂರಾಯ ॥೮೨॥

ಈ ಸಿರುಮನ ಸಾಂಗತ್ಯವ ಕೇಳಲು ವಿಧಿ
ನಾಶವಹುದು ಭವ ಹಿಂಗುವದು
ಬೇಸರದೆ ಓದಿ ಪಠಿಸಿದರೆ ಪಾಪ
ನಾಶವಹುದು ನಿಮುಷದಲಿ ॥೮೩॥

ವೃತ್ತ॥ ಕ್ಷಿತಿಯೊಳು ಕೇಳುವ ಶರಣಜನರ ಸಂತೋಷ
ಕೃತಿಯಿದು ಬೂದಿಹಾಳ ಸಿರುಮ ಕಾದಿದ ದಿವ್ಯಪ್ರಕಾಶ
ಸ್ತುತಿಸಿದ ಶಿವಲೀಲೆ ವೀರನ ಮಗ ಮಲ್ಲೇಶ ಅತಿ
ಹಿತದಿ ಜಗಜೀವಿತರ ಸಲಹುವ ಅಸಗೋಡ ಶಂಭು ಮಲ್ಲೇಶ[೬] ॥೮೪॥

❖❖


---

೬. ಅಂತು ಸಂಧಿ ೬ಕ್ಕೆ ೧೦೫೩ಕ್ಕಂ ಮಂಗಳಮಹಾ ಶ್ರೀ ಶ್ರೀ ಶ್ರೀ ಗೊಲ್ಲ ಸಿರುಮನ ಸಾಂಗತ್ಯ ಸಮಾಪ್ತ ಶ್ರೀ ಶ್ರೀ ಶ್ರೀ.

*

ನಾಮ ಸೂಚಿ

❖❖



ಡಾ. ಎಂ. ಎಂ. ಕಲಬುರ್ಗಿ ಅವರು ಸುಪ್ರಸಿದ್ಧ ಸಂಶೋಧಕರು. ವ್ಯಕ್ತಿ ನೆಲೆಯಲ್ಲಿ ಅವರು ಬರೆದದ್ದು ಅಪಾರ; ಸಾಂಸ್ಥಿಕ ನೆಲೆಯಲ್ಲಿ ಅವರು ಮಾಡಿದ ಸಾಧನೆಗಳು ಶಿಖರಪ್ರಾಯವಾದವುಗಳು. ಗ್ರಾಮೀಣ ಶ್ರಮಸಂಸ್ಕೃತಿ ಹಾಗೂ ವಿಜಯಪುರ ಜಿಲ್ಲೆಯ, ಸಿಂದಗಿ ತಾಲ್ಲೂಕಿನ ಯರಗಲ್ಲ ಗ್ರಾಮದ ಅವಿಭಕ್ತ ಕುಟುಂಬ ಪರಿಸರ ಪ್ರಭಾವದಲ್ಲಿ ಬೆಳೆದು ಬಂದ ಡಾ. ಕಲಬುರ್ಗಿ ಅವರು ಇಡೀ ನಾಡನ್ನೇ ಅವಿಭಕ್ತವಾಗಿ ಕಂಡವರು.

ಹೀಗಾಗಿ ಅವರು ನಾಡಿನ ತುಂಬೆಲ್ಲ ಹರಡಿಕೊಂಡಿರುವ ಸಂಘ-ಸಂಸ್ಥೆಗಳೊಂದಿಗೆ ಮಠ-ಮಾನ್ಯಗಳೊಂದಿಗೆ ಸರಕಾರಿ ಇಲಾಖೆಗಳೊಂದಿಗೆ ಒಡನಾಟವಿಟ್ಟುಕೊಂಡು ಅನೇಕ ಯೋಜನೆಗಳನ್ನು ಹುಟ್ಟು ಹಾಕಿದರು. ಹಲವಾರು ಪ್ರತಿಷ್ಠಾನಗಳನ್ನು ಸ್ಥಾಪಿಸುತ್ತ ಅವುಗಳನ್ನು ಕನ್ನಡದ ಪ್ರಾತಿನಿಧಿಕ ಸಂಸ್ಥೆಗಳನ್ನಾಗಿ ರೂಪಿಸಿದರು.

ಇಂಥ ಅಪರೂಪದ ವ್ಯಕ್ತಿಯ ಬಹುಮುಖ ಸಾಧನೆಯನ್ನು ಅಕ್ಷರ, ದೃಶ್ಯ, ಧ್ವನಿ, ಚಿತ್ರ ಮಾಧ್ಯಮಗಳ ಮೂಲಕ ಪರಿಚಯಿಸುವುದು, ಅವರ ಸಮಗ್ರ ಸಾಹಿತ್ಯವನ್ನು ವಿಷಯಾನುಗುಣವಾಗಿ ವರ್ಗೀಕರಿಸಿ ಸಂಪುಟಗಳಲ್ಲಿ ಪ್ರಕಟಿಸುವುದು, 'ಡಾ.ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ'ಯ ಮುಖ್ಯ ಉದ್ದೇಶವಾಗಿದೆ.

ಈಗಾಗಲೇ ಇಂಥ ಹಲವು ಯೋಜನೆಗಳನ್ನು ಯಶಸ್ವಿಯಾಗಿ ಪೂರೈಸುತ್ತ ಬಂದ ನಮ್ಮ ವಚನ ಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದ ಮೂಲಕ ಈ ಕಾರ್ಯವನ್ನು ಈಡೇರಿಸಲು ಅವಕಾಶ ದೊರೆತುದು ಸಂತೋಷದ ಸಂಗತಿ. ಈ ಕಾರ್ಯ ನಾವು ಭಾವಿಸಿದಷ್ಟು ಸುಲಭವಾದುದಲ್ಲ. ಅಲ್ಲಲ್ಲಿ ಚದುರಿ ಹೋಗಿರುವ ಪ್ರಕಟಿತ ಹಾಗೂ ಅಪ್ರಕಟಿತ ಕೃತಿಗಳು, ಚಿತ್ರಗಳು, ಧ್ವನಿ ಮುದ್ರಿಕೆಗಳು, ದೃಶ್ಯಮಾಧ್ಯಮಗಳು ಮತ್ತು ಪತ್ರಿಕೆಗಳಲ್ಲಿ ಪ್ರಕಟವಾದ ವಿಷಯಗಳನ್ನು ಸಂಗ್ರಹಿಸುವ ಹಂತಗಳಲ್ಲಿ ವಿದ್ವಾಂಸರು ವಿಶೇಷವಾಗಿ ಶ್ರಮಿಸಬೇಕಾಗುತ್ತದೆ. ನಮ್ಮ ಸುದೈವಕ್ಕೆ ಸಮರ್ಥ ಸಂಪಾದಕರಾದ ಡಾ. ವೀರಣ್ಣ ರಾಜೂರ ಹಾಗೂ ಎಲ್ಲ ಕಾರ್ಯಗಳನ್ನು ಸಂಯೋಜಿಸಲು ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ದೊರಕಿದ್ದಾರೆ. ಈ ಯೋಜನೆಯ ಕಾರ್ಯದರ್ಶಿಗಳು, ಸಲಹಾ ಸಮಿತಿ ಸದಸ್ಯರು ಮತ್ತು ನಾಡಿನ ಹಲವಾರು ವಿದ್ವಾಂಸರು ಈ ಕಾರ್ಯದಲ್ಲಿ ಆಸಕ್ತಿವಹಿಸಿ ಕೈಜೋಡಿಸಿದ್ದಾರೆ. ಇವರೆಲ್ಲರ ಸಹಯೋಗದಲ್ಲಿ ಕನ್ನಡಕ್ಕೆ ಹೊಸದೊಂದು ಅಮೂಲ್ಯವಾದ ಆಕರ ಸಂಪತ್ತು ದೊರಕುವಂತಾದುದು ಹೆಮ್ಮೆಯ ಸಂಗತಿಯಾಗಿದೆ.

ಡಾ. ಎಂ.ಬಿ.ಪಾಟೀಲ

ಅಧ್ಯಕ್ಷರು, ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ
ಗೃಹಸಚಿವರು, ಕರ್ನಾಟಕ ಸರ್ಕಾರ

ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ

ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ - ೫೮೬೧೦೩

ದಿ ಪ್ರಿಂಟ್ ಪಾಯಿಂಟ್, ಬೆಂ. ಮೊ:97390 67359